**ಸಾ.ಶಿ.ಮ**

**ನೃತ್ಯರೂಪಕಗಳು**

**(ಇಪ್ಪತ್ತೈದು)**

**ಡಾ.ಸಾ.ಶಿ.ಮರುಳಯ್ಯ**

**ಅಂಬೆ**

ಪ್ರವೇಶ

ಸತ್ಯಂ ಬನ್ನಿ ಓ ಗೆಳತಿಯರೆ
ಶಿವಂ ಆಡೋಣ ಬನ್ನಿ
ಸುಂದರಂ ನಿತ್ಯ ಬಾಳಿನ ರಾಗ
ಹಾಡೋಣ ಬನ್ನಿ ॥

ವೀಣೆ ಇಂಚರದಂತೆ ಖಣಿಯಾಗಿ ಬನ್ನಿ
ಕಿಂಕಿಣಿಯ ಝಣ ಝಣಕೆ ಕಣವಾಗಿ ಬನ್ನಿ
ಬೆಳಗಿನೊಲು ಬೆಳಬೆಳಗಿ ಹೊಳೆ ಹರಿದು ಬನ್ನಿ ॥
॥ ಬನ್ನಿ ಓ ಗೆಳತಿಯರೆ ॥೧॥

ಇದುವೆ ಮಹಾಭಾರತವು
ಸುಪ್ರಸಿದ್ಧ ಚರಿತವು
ಅಂಬೆ ಭೀಷ್ಮನನು ಕೋದ
ಘೋರ ಘೋರ ದೃಶ್ಯವು ॥೨॥

ತುಂಬಿದ ಸಭೆಗಾಹ್ವಾನ
ತೆರೆದ ಮನದಲಿ
'ಅಂಬೆ' ಎಂಬುದಿಹುದು
ನಮ್ಮ ನಾಟ್ಯಾಂಜಲಿ ॥೩॥

[ರಂಗದಿಂದ ಒಂದು ಬದಿಗೆ ಸರಿಯುತ್ತಿದ್ದಂತೆ, ಅವರನ್ನು ಹಿಂಬಾಲಿಸಿ ಮತ್ತೊಂದು ಬದಿಯಿಂದ ಅಂಬೆ, ಅಂಬಿಕೆ ಮತ್ತು ಅಂಬಾಲಿಕೆಯರು ನರ್ತಿಸುತ್ತಾ ಪ್ರವೇಶಿಸುತ್ತಾರೆ.]

ಅಂಬೆ: (ಗಂಭೀರ ಸ್ವರದಲ್ಲಿ ಶ್ಲೋಕ ಹಾಡಿದಂತೆ ಹಾಡುತ್ತಾ ಬರುವಳು. ಅವಳ ಹಿಂದೆ ಅಂಬಿಕೆ ಅಂಬಾಲಿಕೆಯರು ನರ್ತನದ ಭಂಗಿಯಲ್ಲಿ)

ಬನ್ನಿ ಸಹೋದರಿಯರೆ
ಬನ್ನಿ ಬನ್ನಿ ಬನ್ನಿ
ಅಂಬಿಕೆ ಅಂಬಾಲಿಕೆ ನಿವಿಬ್ಬರೂ ಬನ್ನಿ ॥
ಕಾಶಿ ದೇಶದ ರಾಜಕುವರಿಯರು ನಾವು
ಮುದ ತಂದ ರೂಪ ಜವ್ವನೆಯರಾವು ॥

ಬನ್ನಿ ಸೋದರಿಯರೆ
ಬನ್ನಿ ಬನ್ನಿ ಬನ್ನಿ !

ಅಂಬಿಕೆ : ಹಸುರೆಲೆಯಲಿ ಹೆಸರು ಬರೆವ
ಹೊಸ ವರುಷದ ಚೈತ್ರ
ಕಂಡಡೆ ಕಂಡರಿಸುತಿರುವ
ಹೊಸ ಬಾಳಿನ ಚಿತ್ರ ॥ ಬನ್ನಿ ಸೋದರಿಯರೆ ॥

ಮಕಮಲ್ಲಿನ ನೆಲದ ಮೇಲೆ
ಚಕಚಮಕಿನ ಚಿತ್ತಾರ
ಎಳನೇಸರ ಕಿರಣಕುಂಚ
ಬಳಿವ ಬಣ್ಣ ಬಂಗಾರ
ದಿಕ್ ಭಿತ್ತಿಯ ಎದೆಯ ಮೇಲೆ
ಹಸುರಚ್ಚೆಯ ಸಿಂಗಾರ
ಮುಗಿಲಲೆಯಲಿ ಸುಳಿದೋಡುವ
ಛಾಯಾ ಚಿತ್ರದಾಗಾರ ॥ ಬನ್ನಿ ಸೋದರಿಯರೆ ॥

ಚಿಗುರು ಚೆಲ್ಲಾಡವಾಡೆ
ಮಲ್ಲಿಗೆ ನಗೆ ನಗುವಳು
ಬಿಂದಿಗೆ ಹೂ ಬಿರಿದು ತೆಗೆವಳು
ನೀಲಾಂಜನ ತೆಗೆವಳು
ಸುಳಿ ಗಾಳಿಗೆ ಬಳ್ಳಿ ಬಳಿಯೆ
ನಿಂತು ಸೆರಗ ಸರಿಸುವಳು
ಸಂಭ್ರಮದೀ ಒಸಗೆಯಲ್ಲಿ
ವಾಸಂತಿಯು ಸುಸಿಲೆಸೆವಳು
॥ ಬನ್ನಿ ಸೋದರಿಯರೆ ॥

ಅಂಬಾಲಿಕೆ;
ಚೈತ್ರನಂದನದಲ್ಲಿ ಚಿತ್ರ ಕೂಟ
ಏನೇನೊ ಹುಡುಕಾಟ ॥
ಎಲೆಡೆಯು ಹೊಸಬೇಟ
ತೊರೆಯ ತಡಿ ತೊಡೆಯಲ್ಲಿ ಮಿಡುಕುವಾಟ ॥
ಪೊದೆ ಪೊದೆಯು ಬೆದೆಯ ಮೆದೆ
ಮೋದ ತುಂಬಿದ ಮಜಲು
ಕೋಗಿಲೆಯ ಕಂಠದಲಿ ಗೀತ ಪ್ರಣಯ
ಮಲ್ಲಿಗೆಯ ಬಳ್ಳಿಯಲಿ
ಮೊಳೆಹುಲ್ಲು ಮೂಡಿದರೆ
ಚಿಗುರು ಗಲ್ಲದ ಮೇಲೆ ಉಗುರುಗಾಯ ॥
ಎಲ್ಲೆಲ್ಲೂ ಹೊಸ ಹರಯ
ಹೊಸ ಪ್ರಣಯ ಹೊಸ ಹುರುಪು
ಸೂರೆಯಾಗಿದೆ ಸೊಬಗು ಧಾತ್ರಿಯಲ್ಲಿ
ಓ ಹೊ ಹೋ ! ಸಾಕಿನ್ನು
ಮಾತು ಸೋತಿದೆ ನುಡಿಸೆ
ಅಪ್ಪುಗೆಯ ಹೆಪ್ಪಿರಲಿ ಬಾರೆ ಮಳ್ಳಿ ॥

ಅಂಬೆ: ಏನು ಚೆಲುವು ಅಂಬಿಕೆ !

ಈ ವಸಂತ ಮಧುಮಾಸ
ಗಿಡ ಬಳ್ಳಿಗು ಹೊಸ ವೇಷ !

ಅಂಬಿಕೆ : ಪ್ರಕೃತಿಗೆಲ್ಲ ಹೊಸ ಹರಯ
ಮನುಜರೆಮಗೆ ಪ್ರಣಯ

ಅಂಬೆ : ಯಾರ ನೀನು ಒಲಿದಿಹೆಯೇ !
ಹೇಳೆ ಅಂಬಾಲಿಕೆ ;

ಅಂಬಾ : ಗೊಡವೆ ಬೇಡ ತಾಯಿ !
ನಿನ್ನ ಧೈರ್ಯ ನನಗೆ ಇಲ್ಲ !
ಅಂಬೆ : ಅಂಬಿಕೆ ನಿನು ಯಾರ ......?

ಅಂಬಿಕೆ : ಇಲ್ಲವಮ್ಮಾ ಇಲ್ಲ
ನಿನ್ನ ಸ್ಥೈರ್ಯ ಎನ್ನಲಿಲ್ಲ !
ಅಂಬೆ : ಅಂದರೇನೆ ; ಹೇಳೆ ಅಂಬಾಲಿಕೆ !

ಅಂಬಾ: ನೀನು ಸಾಲ್ವ ರಾಜನನ್ನು ಒಲಿದಿರುವೆ ಅಲ್ಲವೆ ?

ಅಂಬೆ : (ನಗು) ಹು ಹ್ಹು ಹ್ಹು ಹ್ಹು !

ಅಂಬಿಕೆ : ಅಕ್ಕ ನೀನು ಬಲುಪಕ್ಕ
ತುಂಬಿದೆದೆ ! ಮೈ ಯ ಕಾವು
ಸಾಲ್ವನೆದೆಯು ಶಮನ ಠಾವು
ಅಲ್ಲವೇನೆ ನಿನಗೆ ?
ಅಂಬೆ : ಅಲ್ಲಿ ನೋಡು ಅಂಬಿಕೆ!
ಹೂವಿನ ಹೊಂಬಟ್ಟಲಲ್ಲಿ
ದುಂಬಿ ಹೇಗೆ ಮಧುಪಾನವಗೈಯುತಿದೆ
ದಳದಳಗಳ ಚುಂಬಿಸಿ !
ಅಂಬಿಕೆ : ಅಹುದು ಸಾಲ್ವರಾಜನಂತೆ !
ಅಂಬಾ : ಅಂಬೆಯೆದೆಯ ದುಂಬಿಯಂತೆ !

ಅಂಬೆ : ಸಾಲ್ವನಂಥ ಚೆಲುವನಿಲ್ಲ ಕೇಳಿ ಅಂಬಿಕೆ
ಸಿಂಗಾರಗೊಂಡ ಕಾಮದೇವ ಅಂಬಾಲಿಕೆ

ಕೋಮಲ ತನು ಕುಸುಮಬಾಣ ಮೇಘಶ್ಯಾಮನು
ಷೋಡಶ ಕಳೆ ಕೂಡಿದಂಥ ಪೂರ್ಣಚಂದ್ರನು
ಮಿನು ಮಿನುಗುವ ತಾರೆಗಳನು ಮುಡಿದ ವ್ಯೋಮನು
ತನು ಮನದಲಿ ತೀವಿನಿಂದ ಭಾವನಾತ್ಮನು ॥೧॥

ನನ್ನ ಹೃದಯ ನಂದನದಲ್ಲಿ ಮಂದಾರೆದ ಕುಸುಮವು
ಅವನ ಹೃದಯ ಬಾಂದಳದಲಿ ಮಿನುಗು ತಾರೆ ಶುಕ್ರನು
ಮಲಯ ಮಂದ ಮಾರುತನೊಲು ನಿಂದಾಡುವ ನಲ್ಮೆಯು

ಅವನೆ  ಭಾವ ನಾನೆ ಭಾಷೆ ಭಾವಗೀತೆಯಾಗುವೆವು  ॥೨॥

ಅಪ್ಪುಗೆಯಲ್ಲಿ ಹೆಪ್ಪು  ಇಹುದು ತುಪ್ಪದ ಸವಿ ತುಟಿಜೇನು
ಮಿದುಗಲ್ಲದ ಬದಿಯಲ್ಲಿಯೆ ಮೂಡವ ಗುರುತೇನು ?
ಸುಳಿದಾಡುವ ಮಂದರದೂಲು ಬಹನು ನನ್ನ ಸಾಲ್ವ
ನಳಿದೋಳಿನ ಹಾರ ಹಾಕಿ ಸ್ವಾಗತಿಸುವೆ ಚೆಲುವೆ   ॥೩॥

ಸಾಲ್ವ   ಸಾಲ್ವ   ಸಾಲ್ವ
ಸಾಲ್ವ   ಸಾಲ್ವ   ಸಾಲ್ವ

**ದೃಶ್ಯ : ೩**

ಸಾಲ್ವ :    ನಾಚಿಕೆ, ಏಕೆ  ನಯನ ಮನೋಹರಿ
ಮನ ತೆರೆದಾಡೆ ನಾಟ್ಯ ಮಯೂರಿ ॥
ಮಳೆ ಬಿಟ್ಟ ಸಂಜೆಯಲಿ ಹಸಿರು ಹಾಸಿನ ಮೇಲೆ
ಎಳೆ ಬಿಸಿಲು ಮೃದುವಾಗಿ ಮಲಗಿರುವ ವೇಳೆ
ಶತ ನೇತ್ರಗಳ ತೆರೆದು ನವಿಲು ಜಾಗರವಾಡೆ
ಕೇಕೆ ಹಾಕುವ ತೆರದಿ ಗ್ಬರಿಗೆದರಿ ಆಡೆ    ॥೧॥

ತನು ಬಿಚ್ಚಿ ಮನ ಬಿಚ್ಚಿ ಸಾಗರವ ಮೆಚ್ಚಿ
ಹುಚ್ಚೆದ್ದು ಹೊಳೆಹರಿವ ಜಲಪಾತದಂತೆ
ಉಷೆ ಹಸೆಯ ಮಣೆ ಏರಿ ನಸುನಗೆಯನೆಸೆವಚಿತೆ
ಪ್ರಣಯ ಪ್ರದೋಷದಾ ಪ್ರಥಮ ಕಿರಣವೆ ಬಾರೆ   ॥೨॥

ಅಂಬೆ :    ಸರ್ವಾಂಗ ಶೃಗಾರ ಮನ ಮೋಹನ
ಬೃದಾರಕ ವಂದ್ಯ ಅಭಿವಂದನಾ    ॥ಪ॥

ಸೌಂದರ್ಯ ಸಾಗರದ ಸೊಬಗಿನ ಅಲೆಯೆ
ಸಹ್ಯಾದ್ರಿ ಶ್ರೇಣಿಯ ಮಂದ ಮಾರುತವೆ
ಬಾಳ ಬಾಂದಳದಾ ಮಿನುಗುವ ತಾರೆಯೆ
ಸುಸ್ಮೃತಿ ಸುಂದರ ಬಂಧುರ ಸುಸ್ವಪ್ನವೇ    ॥೧॥
ನೀ ನಡೆವ ಎಡೆಯಲ್ಲಿ ಎದೆ ಹಾಸುವೆ
ನಡೆಮುಡಿಯ ಹಾಸಾಗಿ ನಾ ಮಲಗುವೆ
ನಿನ್ನಯ ನಡಿಗೆಗೆ ಮಿಡಿವುದೊ ನನ್ನದೆ
ಮೀಸಲ ಕುಸುಮವ ಮುಡಿ ಬಾರೋ    ॥೨॥

ಸಾಲ್ವ    ಮಲ್ಲಿಗೆಯ ಚೆಲ್ಲಿದೊಲು ನಿನ್ನ ನಗು ಚೆಲುವೆ
ಬೆಳದಿಂಗಳಿಳಿದಂತೆ ಓ ನನ್ನ ಒಲವೆ  ॥
ಗುಳಿ ಬಿದ್ದ ಕೆನೆಯಲಿ ಮನವು ಸುಳಿ ಸಿಕ್ಕಿ
ತುಟಿ ಜೇನ ಸವಿ ಸವಿದು ಆಮೋದ ಉಕ್ಕಿ
ಪ್ರೇಮ ರಾಗದ ಮಧುವ ಕುಡಿದು ಬಲು ಸೊಕ್ಕಿ
ಎದೆ ತುಂಬಿ ನಿಂತಿರುವ ಓ ಬರಳ್ಳಿ ಚುಕ್ಕಿ  ॥

ಅಂಬೆ :	ಅಂಬೆಯ ತುಂಬಿದ ಬಂಗಾರಗನಸೇ
ತುಂಬೆಚಿಮ ಹೂವಿನ ಸಪುರಾ ಸೊಗಸೇ ॥
ಝಣಣ ಝಣಣ ನಾಳೆಯೆ ಮದುವೆ
ಕಣ್‌ಮಣಿ ನಾ ನಿನ್ನ ಕಾಯುವೆ ॥

ಸಾಲ್ವ :	ಬಂದೇ ಬರುವೆನು ಅಂಬೆ
ಮುದುವನು ತರುವೆನು ತುಂಬೆ ॥

ಕನಸಿನ ಲೋಕಕೆ ಕೊಂಡೊಯ್ವೆ
ಸರಸದ ಸ್ವರ್ಗವನೇರಿಸುವೆ ॥
ಅಂಬೆ ಅಂಬೆ ಅಂಬೆ
ಅಂಬೆ ಅಂಬೆ ಅಂಬೆ ॥

ಅಂಬೆ :	ಅಗ್ನಿದೇವನಾ ಸಮ್ಮುಖದಲ್ಲಿ

ಸೂರ್ಯಚಂದ್ರರಾ ಸಾನಿಧ್ಯದಲಿ
ದಿಕ್ಪಾಲಕರಾ ದಿವಾವಾಸಿಗಳ
ಸಾಕ್ಷಿಯಾಗಿ ನಾ ಕೈ ಹಿಡಿವೆ ॥

ಇಬ್ಬರೂ :	ರತಿಸತಿ ಮನ್ಮಥರಂತೆ
ಯತಿಪತಿ ಶಿವಶಿವೆಯರಂತೆ
ನಾವಿರ್ವರೊಂದಾಗಿ ನಲಿದಾಡುವಾ
ಬಾಳಿನ ಸಾರದ ಸವಿ ನೋಡುವಾ ॥
ಪ್ರೇಮ ಸಾಕ್ಷಾತ್ಕಾರ ಸಾಕಾರಗೊಳಿಸಿ
ಕಾಮವ ಕರಗಿಸಿ ಪರಿಶುದ್ದನೆನಿಸಿ
ಅನುದಿನದ ಆಂನದ ಅಗಣಿತವ ಆಗಿಸಿ
ಒಲಿದೊಲಿದು ನಲವೆರೆದು ಸವಿಯಾಗುವಾ ॥

**ದೃಶ್ಯ : ೨ ಅರಮನೆ**

ಸತ್ಯಂ	ಮದುವೆ ಮದುವೆ ಮದುವೆ
ಶಿವಂ	ಮನಸಿಗೆ ಮದುವನು ತರುವೆ
ಸುಂದರಂ	ಅದ್ದೂರಿಂದ ಆನಂದ ತಂದ
ಅಂದದ ಚೆಂದದ ಮದುವೆ ॥
ಕಾಶಿಯ ನಗರದ ಸಿಂಗಾರ
ಅರಮನೆಯೆಲ್ಲಾ ಬಂಗಾರ
ಅಂಬೇ ಅಂಬಿಕೆ ಅಂಬಾಲಿಕೆಯರು
ಬಂದರು ತುಂಬಿದ ಸಭೆಗೆ ॥
ಇದೊ ಶೂರರು ಸೇರಿಹರಿಲ್ಲಿ
ಮೆರೆವರು ಚೆಲುವನು ಚೆಲ್ಲಿ !

ಗದ್ಯ : ಅಂಗ ವಂಗ ತುಂಗ ಕಳಿಂಗ
ಕಾಶ್ಮೀರ ಕಾಂಭೋಜ ಕರ್ನಾಟಕ
ಗಾಂಧಾರ ಗೌಡ ಆ ಹಸ್ತಿನಾವತಿ
ನೇಪಾಲ ಭೂತಾನ ಇಂದ್ರಪ್ರಸ್ಥ

ಹಾಡು : ಎಲ್ಲರು ಎಲ್ಲರು
ತೇಜಸ್ವಿ ತರುಣರು
ಹೆಂಗಳ ಒಲಿಯಲು ಬಂದಿಹರು ॥

ಇದುವೆ ಸ್ವಯಂವರ ಮಂಟಪ

ಅಲ್ಲಿಗೆ ಎಲ್ಲರಿಗಾಹ್ವಾನ !
ದೇಶ ವಿದೇಶದ ತೇಜೋರೂಪರು
ನೆರೆದಿಹರಿದೊ ಕೇಳ್ ಸುರಗಾನ ॥

ಶ್ಲೋಕ : ವಿವಾಹಂ ಅನುರಾಗ ಬಂಧಂ
ಪ್ರಣಯ ಪ್ರದೀಪಂ ಪ್ರೇಮ ಪುಷ್ಕರಾವರ್ಷಂ
ಸ್ತ್ರೀಪುರುಷ ಸಹಯೋಗ ಸಹಕಾರ ರೂಪಂ
ಗ್ರಾಹಸ್ಥ್ಯ ದೀಕ್ಷಾಂ ಸ್ಥಿತಂ ಸಂಸಾರ ಸಾರೋದಯಂ

ಹಾಡು : ಕಾಶೀರಾಜನ ಕುವರಿಯರೆ ಘಾಸಿಯ ತೊರೆದಹ ಕನ್ನೆಯರೆ
ಬನ್ನಿರಿ ಮಕ್ಕಳೆ ಮಂಟಪಕೆ
ಮಂಗಳಮಯದಾ ಅಂಗಳಕೆ ॥
ಹೆಜ್ಜೆಯ ಮೇಲೆ ಹೆಜ್ಜೆಯ ಹಾಕಿ
ಲಜ್ಜೆಯ ಅವಗುಂಠನ ಧರಿಸಿ
ಇಚ್ಚೆಯ ಮೇರಿಗೆ ಎಚ್ಚರದಿಂದಲಿ
ಆಚ್ಛಾದಿಸಿರೌ ಗುಚ್ಚದ ಹಾರವ ॥

ಅಂಬೆ : ಸಾಳ್ವ ಸಾಳ್ವ ಸಾಳ್ವ
ನನ್ನದೆಯ ಬಾಂದಳದ ಧ್ರುವತಾರೆ ಸಾಳ್ವ
ನನ್ನೊಲವೆ, ನನ್ನರಸೆ, ನನ್ನಿನಿಯ ಬಾಳ್ವ
ನಾವೆಂದೂ ಒಂದಾಗಿ ಚೆಂದಾಗಿ ಬಾಳ್ವ
ಬಾ ಇನಿಯ ಬಾ ಇನಿಯ ಬಾರೆನ್ನ ಸಾಳ್ವ
ನನ್ನ ಕಣ್ಣಿನ ಕಣ್ಣೆ ಮುದವಾಂತ ಚೆಲುವ ॥

ಸತ್ಯ ಆ ದ್ಯಾವಾ ಈ ಪೃಥವಿ ತುಂಬಿದವ ಭೀಷ್ಮ
ಶಿವಂ ಭೂಮ ವ್ಯಕ್ತಿತ್ವದಲ್ಲಿ ಅಪ್ರಮೇಯನು ಭೀಷ್ಮ ।
ಸುಂದರಂ ದೇವ ಗಂಗೆಯ ಕುವರ ದೇವ – ಮಾನವ ಭೀಷ್ಮ ।
ಬಂದನದೊ ಬಂದನದೊ ಭಾಮೆಯರ ಬಳಿಗೆ
ಕೆರಳಿ ಕೇಸುರಿಗೊಂಡು ಕ್ಷತ್ರಯರ ಪರಿಗೆ ।

ನೆಚ್ಚಿನ ಮೆಚ್ಚಿನ ಸಾಲ್ವನನ್ನು
ಅಂಬೆಯು ಹಿಂಬಾಲಿಸುತಿರಲು

ತಡೆದನು ಭೀಷ್ಮನು ತ್ವರೆಯಿಂದ
ಬರಸಿಡಿಲೆರಗುವ ತರದಿಂದ ॥

ಸಿಡಿಲು ಗುಡುಗುಗಳ ಆರ್ಭಟ –

ಭೀಷ್ಮ ; ತಡೆಯಿರಿ ತೊಲಗರಿ ಹೆಂಬೇಡಿಗಳೇ
ಪುಡಿ ಪುಡಿಗೈಯುವೆ ಒಡಲನ್ನು ।
ಫಡ ಫಡ ನೋಡಿರೆ ತುಂಡರಿಸುವೆನೋ
ಕನ್ಯಯ ಹಿಡಿದಾ ಕೈಗಳನ್ನು ।
ಬಗ್ಗದ ಕುಗ್ಗದೆ ಪ್ರತಿಭಟಿಸಿದರೆ
ನೆಗ್ಗೊತ್ತುವೆ ಮೈ ಧಾಳಿಯನಿಟ್ಟು
ಜಗ್ಗದೆ ಹೊರುವೆ ಸಟ ಸಲ್ಲ !

(ಚಣಕಾಲ ಚಂಡೆ ಸಮ್ಮೇಳಗಳ ನಿರ್ಘೊಷ
ಮತ್ತು
(ರುದ್ರ ತಾಂಡವ ನೃತ್ಯ ಭೀಷ್ಮ – ನಿರ್ಘೊಷ)

ಸಾಳ್ವ : ಭೀಷ್ಮ ಬಿಟ್ಟುಕಳೆ ಅಂಬೆಯನು
ನನ್ನ ಪ್ರೇಮದ ಪಕ್ಷಿ–ಕೊಂಡೊಯ್ವೆ ಅವಳನ್ನು !
ಯುದ್ದರಂಗವಿಲ್ಲ ! ಗೆದ್ದವನು ನೀನಲ್ಲ !
ಭೀಷ್ಮ . ಆಹ್ವಾನವಿಲ್ಲದಲೆ ಆಗಮಿಸಿದವ ನೀನು !
ವೈವಾಹ ಮಂಟಪಕೆ ಅಡಿಯಿಡಲು ಹಕ್ಕಿಲ್ಲ !

ಭೀಷ್ಮ : ಸಾಳ್ವ,
ಹೆಣ್ಣು ಮಣ್ಣು ಹೊನ್ನಗಳು ಹೇಡಿಗಳ ಸ್ವತ್ತಲ್ಲ !
ಪೌರುಷವಿದ್ದವನಿಗೆ ಪೃಥ್ವಿ,
ಬಾಹುವಿಕ್ರಮನಿಗೆ ರಾಜಪುತ್ರಿ !

ಕದ್ದು ಒಯ್ಯಲು, ಹೆಣ್ಣು ಬಿದ್ದೊಡವೆಯಲ್ಲ
ಅಂಬೆ, ಅಂಬಿಕೆ, ಅಂಬಾಲಿಕೆಯರನ್ನ

ಗೆಲವಿನ ಪ್ರಾಪ್ತಿ !
ಅದ ಪಡೆದು ಕೊಂಡೊಯ್ವೆ
ಅಡ್ಡ ಬಂದರೆ ಗೆಯ್ವೆ ತಕ್ಕ ಶಾಸ್ತಿ !

ಸತ್ಯಂ
ಶಿವಂ ಬಿರುಸಿನ ಕಾಳಗ ಭೀಷ್ಮಗು ಸಾಳ್ವಗು
ಸುಂದರಂ ಆಹಾ ! ಘೋರವು ಘನ ಘೋರ
ನೆಲ ನೆಗ್ಗೊತ್ತಿತು, ಆಗಸ ಬಿರಿಯಿತು
ಸಮುದ್ರ ಸರಿಯಿತು ಬಹುದೂರ !

(ಭೀಷ್ಮನು ತನ್ನ ಎಡಗೈಯಲ್ಲಿ ಮೂವರು ಸೋದರಿಯರನ್ನೂ ಒತ್ತಿ ಹಿಡಿದು, ಬಲಗೈ ಖಡ್ಗದಿಂದ ಹೋರಾಡಿ ಗೆಲ್ಲುವನು. ಕತ್ತಿ ಬೀಸುತ್ತಲೆ ಅವರು ಮೂವರನ್ನೂ ನೇಪಥ್ಯದೆಡೆಗೆ ಸೆಳೆದೊಯ್ಯುವನು. ಸಾಳ್ವನು ಸಿಗ್ಗಾಗಿ ಕುಸಿಯುವನು–)

**ದೃಶ್ಯ :೪** **ಹಸ್ತಿನಾವತಿಯ ಅರಮನೆ**

ಭೀಷ್ಮ : ಏನ ನಿರ್ಧರಿಸುದೌ ಹೇಳು ಅಂಬೆ
ಕೆಟ್ಟ ಹಟ ಯಾರಿಗೂ ಒಳಿತಲ್ಲ ಎಂಬೆ.

ಅಂಬೆ : ಒಪಿದೆನೊ ದೇವವ್ರತ ಒಪ್ಪಿದೆನೊ ತಂದೆ
ನಿನ್ನ ಹೇಳಿಕೆ ನಿನಗೂ ಅನ್ವಯವು ತಾನೆ ?

ಭೀಷ್ಮ : ನಾನೆಲ್ಲಿ ಹಟಗೈದೆ ಹೇಳು ಅಂಬೆ
ನನ್ನ ತಮ್ಮನ ಕೈ ಹಿಡಿ ಒಳಿತು ಎಂಬೆ !

ಅಂಬೆ : ಸಾಳ್ವನನು ಮನಸಾರೆ ಮೆಚ್ಚಿಹೆನು ಭೀಷ್ಮ
ಅವನೆನ್ನನೊಲಿದಿಹನು ನಾನವಳ ಸುಷ್ಮ !

ಭೀಷ್ಮ : ಶ್ತರುವಿಗೆ ಸೋತವನು ಸತ್ತಹೆಣ ಅಂಬೆ
ವ್ಯರ್ಥ ಸಾಹಸ ಬೇಡ ತೆಪ್ಪಗಿರು ಎಂಬೆ !

ಅಂಬೆ : ಪ್ರೇಮವೆಂಬುದು ಕೇಳು ಸಂತೆ ಸರಕಲ್ಲ !
ಅದರ ಪಾವಿತ್ರ್ಯಕ್ಕೆ ಭಂಗ ತರ ಸಲ್ಲ
ಮನವನೊಬ್ಬನಿಗಿತ್ತು
ಮೈಯೊಬ್ಬಗೊಪ್ಪಿಸಲು ಧರ್ಮವಹುದೆ ?
ಋತವು ತಾ ಒಪ್ಪುವದೆ ಹೇಳು ಭೀಷ್ಮ !

ಭೀಷ್ಮ : ಇಲ್ಲ.
ನಿಜಕು ನೀ ಮತಿವಂತೆ; ಮಡಿವಂತೆ !
ಪ್ರೇಮ ಪಾವಿತ್ರ್ಯಕ್ಕೆ ನಂಜು ನಾನಾಗೆ
ಸಾಳ್ವನನು ಸೇರು
ಪೋಗು ನಡೆ ಕೂಡು,

ಶುಭಮಕ್ಕೆ ನಿನಗೆ
ನಿನಗೆ ಮಂಗಳಮಕ್ಕೆ
ಸೌಭಾಗ್ಯವತೀ ಭವ
ಸೌಭಾಗ್ಯವತೀ ಭವ

– ನಿರ್ಗಮನ –

(ಅಂಬೆ ಆನಂದನರ್ತನಗೈಯುವಳು ಸತ್ಯಂ ಶಿವಂ ಸುದರಂ ಜೊತೆಗೂಡಿ)

ಹಾಡು : ಆನಂದ ಆನಂದ ಆನಂದ
ಸಾಳ್ವನ ಸೇರುವ ಮಹದಾನಂದ ॥
ಪ್ರೀತಿಯ ದೇವರು, ಪ್ರಣಯಾರಾಧನೆ
ಒಲವೇ ಬಾಳಿನ ಗಾಯತ್ರಿ !
ಭಾವ ಕುಸುಮಗಳ ಮಾಲೆಯ ಹಾಕಿ
ಪ್ರೇಮ ಪಾಡುವೆವು ಹಗಲೂ ರಾತ್ರಿ !

**ದೃಶ್ಯ : ೫ ಅರಮನೆ**

ಸಾಳ್ವ : ಸತ್ತ ದಿನಗಳ ಜಪಿಸಿ ಜಡವಾಗದಿರು ಮನವೆ
ಮತ್ತೆ ಹೊಸ ಚೇತನವ ತುಂಬಿಕೋ ಘನವೇ ॥
ರಣಕಾಟಿಯಂದದಲಿ ಚಿಂತೆಸಂತೆಯು ನೆರೆಯೆ
ನೀನತ್ತ ಸುಳಿಯದಿರು ಮರುಳು ಮನವೆ
ಬಿಸಿಲು ಕುದರೆಯ ತೆರದಿ ಮೋಹ ಮದಿರೆಯು ಕುಣಿಯೆ
ನೆಕ್ಕದಿರಲದ ನಿನ್ನ ನೆನಪಿನಾ ರಸನೆ ॥ ೧॥

ಮುಗಿಲ ಮಲ್ಲಿಗೆಯಿಂದ ಸೌಗಂಧ ಸೂಸಿ ಬರೆ
ವಾಸಿಸಲು ನಾಸಿಕವು ಹಲುಬದಿರಲಿ

ಕಣ್ಣ ತಣಿಸಿದ ಮಾಟ, ಮೈಯ ಮರೆಸಿದ ಬೇಟ
ಕಿವಿಯ ತುಂಬಿದ ಗಾನ ಮತ್ತೆ ಬರದಿರಲಿ ॥೨॥

ಅಂಬೆ : ಬಂದೆ ಬಂದೆ ಬಳಿಗೆ ಬಂದೆ
ಆನಂದವನ್ನು ಅರಸಿ ತಂದೆ
ಸೆರೆಯ ಹರಿದು ಹೊರಗೆ ಬಂದೆ
ಸಿರಿಯ ಬಾಳ ಬದುಕೆ ಬಂದೆ
ಸಗ್ಗ ಸೊಗವ ಸೂರೆಗೆಯ್ಯೆ
ಹಿಗ್ಗಿ ಹಿಗ್ಗಿ ಬಂದೆ ॥
ಜಿಂಕೆಯಂತೆ ಕುಣಿದು ಕುಣಿದು
ಚಿಟ್ಟೆಯಂತೆ ಸುಳಿದು ಸುಳಿದು
ಚಕೋರನಂತೆ ಚಂದ್ರನೆಡೆಗೆ ಓಡಿ ಬಂದೆ ॥

ಸಾಳ್ವ : ಕನಸಿನಲಿ ಗೋಪುರವ ಕಟ್ಟದಿರು ಅಂಬೆ
ಕೊಟ್ಟೀತು ನೋವುಗಳ ಸಹಿಸೆ ನೀ ಮುಂದೆ
ಯದ್ಧದಲಿ ಗೆದ್ದವನು ಗಂಡು, ಸೋತವನು ಹೆಣ್ಣು
ನಾನೀಗ ಸೋತವನು !

ಅಂಬೆ : ಆದರೂ ನನ್ನೆದೆಯ ಗೆದ್ದವನು ನೀನು
ನನ್ನೊಲವನೆಲ್ಲವನು ಸೂರೆಗೊಂಡವನು.
ಎನ್ನರಸ, ಚೆನ್ನರಸ ಒಲವರಸ ಸಾಳ್ವ
ಸರಸ ಸಾಗರದಲ್ಲಿ ವಿರಸದಲೆಗಳದೇಕೆ ?
ನೋಡು, ನಡಿ, ನನ್ನೊಡನೆ ಮಾತಾಡು
ಸ್ವರ್ಗವನು ನಾಚಿಸುವ ಸುಖವನೊಡಗೂಡು.

ಸಾಳ್ವ : ಸುಖದ ಸೊಲೆತ್ತದಿರು ಸಾಲ್ವನೀ ಎಡೆಯಲ್ಲಿ
ನೀ ಅಪಹೃತ ಹೆಣ್ಣು ಪರಪುರುಷಗಿತ್ತು ಎಡೆ
ಮಲಿನಗೈವುದು ಪಾಪ ದಯಮಾಡಿ ಬಿಟ್ಟು ನಡೆ.

ಅಂಬೆ : ಭೀಷ್ಮನಪಹರಣದಿ ನನ್ನದೇನಿದೆ ಪಾಲು ?
ಅಪರಾಧಿ ನಾನಲ್ಲ, ದಂಡನೆಯು ನನಗಿಲ್ಲ
ನೀನೇಕೆ ನಿರ್ದಯಿಯೊ ಸಾಳ್ವ ತರವಲ್ಲ !
ಶೀಲದಲಿ ನಾನಿಹೆನು ಪ್ರಾಂಜಲದ ಹಾಲು
ರೂಪದಲಿ ಚರಿತೆಯಲಿ ಎಂದಿನಂಬೆಯು ನಾನು
ಅಗ್ನಿ ಪರಿಶುದ್ಧೆ, ಗಂಗೆಯಂತಮಲೆ
ನಾ ನಿನ್ನ ಪ್ರಣಯಾರ್ಥಿ ನಾ ಹೆಣ್ಣು ನಾ ಅಬಲೆ
ದಮ್ಮಯ್ಯ ದತ್ತಯ್ಯ ಕೈ ಹಿಡಿಯೊ ಸ್ವಾಮಿ ।

ಸಾಳ್ವ : ಎನ್ನ ಮೈ ಮುಟ್ಟಿದರೆ ಸುಟ್ಟು ಹೋಗುವೆ ನೀನು
ಅಂಬೆ, ನೀ ಪತಿತೆ, ಪಾತಕಿಯು
ಶುದ್ಧ ಶೀಲೆಯೆ ಅಲ್ಲ !
ಪರಪುರುಷನಾಶ್ರಯದಿ ಕೆಲದಿನಗಳಿದ್ದವಳು !
ಬೆಂಕಿ ಇದ್ದೆಡೆಯಲ್ಲಿ ಬೆಣ್ಣೆ ಕರಗದೆ ಹೇಳು ?

ಅಂಬೆ : ಸಾಳ್ವಾ ಮುಚ್ಚು ಬಾಯ್ ಹೆಂಬೇಡಿ
ಗಂಡು ವೇಷದಿ ಮೆರೆವ ಹೇ ಶಿಖಂಡಿ !
ಸಾಧ್ವಿಯನು ಶಂಕಿಸಿದ ಪರಮ ಪಾತಕಿಯೆ !
ಮತ್ತೊಮ್ಮೆ ಉಸುರಿದರೆ ನಾಲಗೆಯ ಇರಿದೇನು;
ಪರಿಶುದ್ಧೆ, ಪರಿಶುದ್ಧೆ ಪರಮ ಪಾವನೆ ನಾನು
ಪರಿಶುದ್ಧೆ ಪರಿಶುದ್ಧೆ ಪರಮ ಪಾವನೆ ನಾನು
ನಾನು ಪರಿಶುದ್ಧೆ ನಾನು ಪರಿಶುದ್ಧೆ

ಪಾವನೆಯು ನಾನು
ಪಾವನೆಯು ನಾನು ।

**ದೃಶ್ಯ ೬** **ಅರಮನೆ**

ಅಂಬೆ : ಕುರುಕುಲದ ಕಣ್ಮಣಿಯೆ ಕಾರುಣ್ಯದಾ ಕಡಲೆ
ಓ ಭೀಷ್ಮ, ಪರಿಶುದ್ಧೆ, ಪರಿಶುದ್ಧೆ, ನಾನು ಪರಿಶುದ್ಧೆ
ದೇವಗಂಗೆಗು ಮಿಗಿಲು ಪ್ರಾಂಜಲದ ತೀರ್ಥ
ನಿನ್ನ ಅಭಿಮತ ಸಾಕು ಉಳಿದೆಲ್ಲವದು ವ್ಯರ್ಥ !

ಭೀಷ್ಮ : ತಾಯಿ ಗಂಗೆಯ ಆಣೆ ನೀನಗ್ನಿ ಪರಿಶುದ್ಧೆ
ಸಂದೇಹಕೆಡೆಯಿಲ್ಲ ಸಾಕ್ಷಿಯದು ಬೇಕಿಲ್ಲ
ಉದ್ವಿಗ್ನಳಾಗದಿರು ಉದ್ಗಾರ ತೆಗೆಯದಿರು
ಮತ್ತೆ ಬಂದೆಯದೇಕೆ ಇತ್ತ ಮರಳಿ ?

ಅಂಬೆ : ಮದುವೆ ನಿಲ್ಲಲು ಬಂದೆ ಮಡದಿಯಾಗಲು ಬಂದೆ
ನೀನೆ ಗತಿ ನೀನೆ ಮತಿ ನೀನೆ ಗಂಡನು ನನಗೆ !
ಸೆರೆಗೊಡ್ಡಿ ಬೇಡುವೆನು ಪ್ರೇಮ ಭಿಕ್ಷುಕಿ ನಾನು !
ದೊರೆತನದ ಹಿರಿಯಾಸೆ ನನಗಿಲ್ಲ ಬೀಷ್ಮ !
ಬಿತ್ತರದ ಬಾನಿನಲಿ ಬತ್ತಲೆಯ ಬಯಲಿನಲಿ

ನಂದನೋದ್ಯಾನವನೆ ಬೆಳೆವವಳು ನಾನಲ್ಲ
ಪೂರ್ಣಿಮೆಯ ಚಂದಿರನ ಕನ್ನಡಿಯ ಭಿತ್ತಿಯಲ್ಲಿ
ಹೆಸರ ಕೆತ್ತುವ ಬಯಕೆ ಎನಗಿಲ್ಲ ಭೀಷ್ಮ !
ಬರಿಯ ಗರತಿಯ ಬಾಳ ಬಯಸುತಿಹೆನಷ್ಟೆ
ಉಡಿತುಂಬು, ಮುಡಿತುಂಬು, ಮನತುಂಬು ಬಾರ !

ಭೀಷ್ಮ : ಪುಸಿಯ ನಚ್ಚುಗೆಯಲ್ಲಿ ಹುಚ್ಚಳಾಗಿಹೆ ನೀನು
ನಿನಗಾಗಿ ಮರುಗುವೆನು, ನಿನಗಾಗಿ ಕರಗುವೆನು
ಮದುವೆಗೂ ಭೀಷ್ಮನಿಗು ಶುದ್ಧ ಸಲುವಳಿ ಇಲ್ಲ !
ಯಾರನಾದರು ಬೇಡು, ಒಲಿ, ಲಗ್ನವಾಗು
ತಮ್ಮನನು ನೀ ಒಲಿಯೆ ಸಂತಸವು ಅಂಬೆ !

ಅಂಬೆ : ತಮ್ಮನನು ಒಲಿಯುವುದೆ ! ಹುಂ !
ಆ ನಿನ್ನ ಮುಖಗೇಡಿ ತಮ್ಮನನು ಒಲಿಯುವುದೆ ?
ನಿನ್ನ ನೆರಳಲಿ ಬೆಳೆದ ಪರತಂತ್ರ ಜೀವಿಯವ
ಆ ವಿಚಿತ್ರನು ನನಗೆ ಯೋಗ್ಯ ವರನಲ್ಲ
ಕೆಚ್ಚದೆಯ ಕಟ್ಟಾಳು ಮೆಟ್ಟಿ ತಂದವ ನಿನು
ನೀನಲ್ಲದನ್ಯನನು ನಾನೊಲಿವಳಲ್ಲ !
ಅರಳುತಿಹ ಕುಸುಮವನು ಹಿಸುಕದಿರು ಭೀಷ್ಮ
ಬೆಡಗಿಯೊರ್ವಳ ಬಾಳ ಹುಡಿಗೆಯ್ಯೆ ಹಿತವಲ್ಲ !

ಭೀಷ್ಮ : ಹಿತವಲ್ಲ ಹಿತವಲ್ಲ ಕೆಟ್ಟ ಹಟ ಹಿತವಲ್ಲ !
ಬಿಟ್ಟು ಕಳೆ ಅಂಬೆ ಭೀಷ್ಮನಾರಿಗು ಅಲ್ಲ !
ಮದುವೆ ಮಂಟಪದಲ್ಲಿ ಕೈ ಮುಟ್ಟಿತ ತಂದೆ ನಿಜ
ಅದುವೆ ಆಕಸ್ಮಿಕವು ಉದ್ದೇಶವಿರಲಿಲ್ಲ
ಭೀಷ್ಮನೋ ಸಾಲ್ವನೋ ಅಂಬೆ ಅಂಬಿಕೆಯರೊ
ಯಾರಾದರೇನಂತೆ ವಿಧಿಯ ಕೈ ಬೊಂಬೆಗಳು
ಅವನು ಆಡಿಸುತರುವ ಹಾಹೆಗಳು ನಾವು !

ಅಂಬೆ : ವೇದಾಂತ ಕೇಳಲಿಕೆ ಬರಲಿಲ್ಲ ಭೀಷ್ಮ
ನ್ಯಾಯವನು ಬೇಡುವೆನು, ಧರ್ಮವನು ಬೇಡುವೆನು
ಕದ್ದು ತಂದವನವನು ಹಣ್ಣ ಮೆಲ್ಲಲು ಬೇಕು

ಭೀಷ್ಮ : ನನ್ನ ತಾಯಿಗೆ ನಾನು ಭಾಷೆ ಕೊಟ್ಟಿಹೆನು
ಅಂಬೆ : ಭಾಷೆ ಭರವಸೆ ಎಲ್ಲ ಅನುಕೂಲಸಿಂಧು !
ಭೀಷ್ಮ : ಇರಬಹುದು ಅನ್ಯರಿಗೆ ಈ ಭೀಷ್ಮನಲಿ ಸಲ್ಲ !
ಅಂಬೆ : ಸಲ್ಲುವಂತೆಸಗುವುದೆ ಮಾನವ ಧರ್ಮ
ಭೀಷ್ಮ : ಧರ್ಮಪಾಠವ ಕಲೆಯೆ ಕಾಲ ಮೀರಿಹುದಂಬೆ !
ಪ್ರೇಮಯಾಚನೆಗೈವ ನಿನಗಿಲ್ಲಿ ಎಡೆಯಿಲ್ಲ.
ನನ್ನ ನಿನ್ನಯೆ ಹಾದಿ ಒಡೆದು ದೂರಾಗಿಹುದು
ನೀನು ನೆಲದಲ್ಲಿ ! ನಾನು ಅಂಬರದಲಿ !
ತಾಳ ಮೇಳವೆ ಇಲ್ಲ ಜತಿಯ ಜೋಡಣೆ ಇಲ್ಲ
ರಾಗ ಸಂಯೋಜನೆಗೆ ಶ್ರುತಿ ಕೂಡುತಿಲ್ಲ !

ಕೇಳಂಬೆ.
ಆಕಾಶ ನಕ್ಷತ್ರ ನೀಹಾರಿಕಾವಲಯ
ಜ್ಯೋತಿವಲಯವೆ ಕಳಚಿ ನೆಲಕುರುಳಿ ಬಿದ್ದರೂ
ನೆಲದ ನದಿ ನದ ಮೇರು ಆಕಾಶವೈದಿಂದರು
ಭೀಷ್ಮ ಪ್ರತಿಜ್ಞೆಯದು ಪಲ್ಲಟಿಸದೆಂದು ತಿಳಿ !

ಅಂಬೆ : ಒಂದು ಕೈ ನೋಡುವೆನು, ನಾನದನು ಮುರಿಯುವೆನು
ಪರಶುರಾಮರ ಕಂಡು ಪ್ರೇರಣೆಯ ನೀಡುವೆನು
ನಿನ್ನ ವಶಗೈಯುವುದು ನನ್ನಿಂದಲಾದಿರೆ
ಶುದ್ಧಾಗ್ನಿಯೊಳು ಬಿದ್ದು ದಗ್ದಳಾಗುವೆನು !
ರಾಮ.

ಗಂಡುಗೊಡಲಿಯ ಗಂಡ ಓ ಪರಶುರಾಮ !
ಮುಯ್ಯೇಳು ಸೂಳ್ ಭೂಚಕ್ರಮಂ ತಿರುಪಿ
ಕ್ಷಾತ್ರಕ್ಕೆ ಪಿಳ್ಳೆ ಪೆಸರಿಲ್ಲದಂತೆಸಗಿದಾ ಧೀರ,
ಸೆಳೆಗೊಂಬೆಯಲ್ಲಿರುವ ಕುಡಿಗಳನು ಸವ್ಮರ್ವಂತೆ
ಏಡಿಗೆಚ್ಚಾಸಿರಂ ! ಓ ಭಾರ್ಗವ, ನಿನ್ನ ಶಿಷ್ಯನು ಭೀಷ್ಮ
ನಿನ್ನಣುಗ ಭೀಷ್ಮ, ಅವಗಿಂದೆ ತಿಳಿಹೇಳು
ನನೊಲಿಯುವಂತೆಸಗು, ನನೊಲಿಯುವಂತೆಸಗು !

**ದೃಶ್ಯ : ೭**

ಸತ್ಯಂ : ಚಳಿಯ ಕೊಟ್ಟೆ ಕಳೆಚು ಕೊಟ್ಟೆ
ಶಿವಂ : ಉರಿವ ಬಿಸಿಲ ಬಣ್ಣ ಕೊಟ್ಟೆ
ಹಸುರ ಹೆಸರ ಅಳಿಸಿಬಿಟ್ಟೆ
ಹದವ ಮಾಡಿದೆ_ಎದೆಗೆ
ಬೆದೆಯ ತುಂಬಿದೆ
ಎಂದು ಹಾಡ ಹಾಡಿಕೊಂಡು ಮಾಗಿಬಂದಿದೆ
ಸುಧಾರಕನ ಸೋಗು ಹಾಕಿ ಡೊಳ್ಳು ಮೆರೆದಿದೆ

ಸೂರ್ಯ ನೀರ ಕದಿಯುತಿದ್ದ
ಚಂದ್ರ ಹಾಲ ಕುಡಿಯುತ್ತಿದ್ದ
ತಾರೆ ಹಲ್ಲು ಕಿರಿಯುತ್ತಿತ್ತು

ನಾಣೆ ಇಲ್ಲದೆ ತನಗೆ
ಹೇಸಿಕೊಳ್ಳದೆ

ಎಂದು ಹಾಡ ಹಾಡಿಕೊಂಡು ಮಾಗಿ ಬಂದಿದೆ
ಸುಧಾರಕನ ಸೋಗು ಹಾಕಿ ಡೊಳ್ಳು ಮೆರೆದದೆ

ಸುಂದರಂ ಕಾಳುಗೆಡೆಯದಿರಿ ಹೇಳಿ ಸಖಿಯರೇ
ಏನಗೈದ ಪರಶು ?? ಚಂಡ ಭೀಷ್ಮನನು
ದಂಡಿಸಿದರೆ ಮೇಣೊಲಿಸಲೆತ್ನಿಸಿದರೆ ?

ಭೀಷ್ಮನೊಪ್ಪಿದನೆ ಕೈಯ ಹಿಡಿದನೆ
ಅಂಬೆ ಮನವ ತುಂಬಿ ?
ಬಾಳುವಳೆ ಅವಳು ಸತಿ ಗರತಿಯಾಗಿ
ಸಂಸಾರದಿರವ ನಂಬಿ !

ಶಿವಂ : ಇಲ್ಲ ಸಖಿಯೆ ಇಲ್ಲಿಲ್ಲ ಕೇಳು ಶ್ರಮವೆಲ್ಲ ವ್ಯರ್ಥವಾಯ್ತು
ಸತ್ಯಂ :  ಹೆಣ್ಣ ತಾನು ಕಣ್ಣೆತ್ತಿ ನೋಡೆನೆಂದಾಡಿ ದೇವವ್ರತನು
ಕೋಪಗೊಮಡ ಭಾರ್ಗವನ ಕೂಡೆ ಹೋರಾಡಿ ಗೆದ್ದನವರನು !

ಅಂಬೆ (ಪ್ರವೇಶಿಸಿ):
ಭಾರ್ಗವನ ಗೆಲಿದನೇ ಆ ದ್ರೋಹಿ ಭೀಷ್ಮ !
ಗೆದ್ದೇನೆ ಗಳಿಸಿದನು ಪೃಥ್ವಿಯನೆ? ಪದವಿಯನೆ ?
ಸತ್ಕೀರ್ತಿ ಸನ್ಮಾನ ಸಾಮ್ರಾಜ್ಯವನ್ನೆ?
ಏನ ಗಲಿಸಿದವನು ಒಂಟಿ ಮರ ಗಂಟು ಮರ !
ನರಕ ಕಾದಿದೆ ಅವಗೆ ಆ ಗುರುದ್ರೋಹಿಗೆ !

ಮರುಳು ನಾನಾಗಿಪೆ, ವಿಧಿ ಪರಮ ಪಾತಕೀ !
ಸಾಲ್ವ ಮೂರ್ಖನು, ಸುರನದೀಸುತ ಬುದ್ಧಿಹೀನನು !
ಎನ್ನ ಸೃಷ್ಟಿಸಿದಾತ ಸರಸಿಜಾಸನು ದುಷ್ಟ !
ಇದಕೆಲ್ಲ ಮೂಲಕಾರಣನವನು
ಭೀಷ್ಮ ! ಆ ಭೀಷ್ಮ ೧

ಕಲ್ಲಾಗ ಎದೆಯೇ ಕಲ್ಲಾಗು !
ವಜ್ರಕಿಂ ಮಿಗಿಲಾದ ಕಾಠಿಣ್ಯ ನಿನ್ನನಾವರಿಸಿರಲಿ
ಇಂದಿನೊಂದರಗಳಿಗೆ ಮಾತ್ರ !

'ಹಣ್ಣು ಕರುಣೆಯ ಕಣ್ಣು'
ಎಂಬ ಜಾಣ್ನುಡಿಯೆಲ್ಲ ಹುಡಿಯಾಗಲಿ
ಮಮತೆ ಮೋಹದ ಬಳ್ಳಿ ಸುರುಟಿ ಸೀಕರಿಗೊಂಡು
ಹಾಳಾಗಲಿ !

ಓ ಪಾಪೀ, ಓ ಪಾಪಿ ಗಾಂಗೇಯ,
ಭೀಷ್ಮ ಪ್ರತಿಜ್ಞೆಯೊಲು ಅಂಬೆ ಪ್ರತಿಜ್ಞೆಯ ಕೇಳು:
ಘೋರವನ್ನೆಸಗುವೆನು ನಿನ್ನ ನಾ ಕೊಲ್ಲುವೆನು
ನಕ್ಷತ್ರ ಮಂಡಲಕೆ ಅಕ್ಷತೆಯನಿಕ್ಕುವೆನು
ಚುಕ್ಕೆಗಳ ತರಿತರಿದು ಪರಿದೆಲ್ಲ ಚೆಲ್ಲುವೆನು
ಸೂರ್ಯಚಂದ್ರರ ಹಿಡಿದು ಅಪ್ಪಳಿಸಿ ಬಿಸುಡುವೆನು
ಸಪ್ತಸಾಗರವೀಂಟೆ, ಸೀಂಟಿ ಬಿಸಾಡುವೆ ನೆಲವ
ಓ ಭೀಷ್ಮ.

ಭೀಮ ರಣರಂಗದಲಿ ಹೆಣದ ಹೆಬ್ಬಣಬೆಯಲಿ
ಮಜ್ಜೆ ಮಾಂಸದ ಸಜ್ಜೆ ಎಲುವಿನೊಟ್ಟಿಲ ಬಎಟ್ಟ
ನೆತ್ತರಿನ ಕಡಲಿನಲಿ ಜೀವಹೆಣವಾಗಿಸುವೆ !

ರಣಹದ್ದು ಹಾರಾಟ ಪೆಣದಿನಿಯ ಚೀರಾಟ
ಅಂಥೆಡೆಯ ನೀನಿದ್ದು ನರಳುವಂತೆಸಗುವೆನು !
ಶರಜಾಲ ಜರ್ಜರಿತ ಘೋರ ಯಾತನೆಯಿಂದ
ಕಣ್ಣೀರಿನಲ್ಲಿಯೇ ಕೈ ತೊಳೆಸಿ ತೀರುವೆನು !
ಅಯ್ಯಯೋ ನಾನೊಂದು ಹೆಣ್ಣಿಗನ್ಯಾಯವನು ಮಾಡಿದೆನು !

ಅಯ್ಯಯೋ ನಾನೊಂದು ಹೆಣ್ಣಿಗನ್ಯಾಯವನು ಮಾಡಿದೆನು !
ಅವಳ ಬಾಳಿಗೆ ಬೆಂಕಿಕೊಟ್ಟ ಪಾತಿಕಿಯಾನು
ಎಂದೆಲ್ಲ ಒರಲುತ್ತ, ಕೊರಗುತ್ತ ನರಳುತ್ತ
ಕೊನೆ ಉಸಿರ ಸೆಳೆವತೆಶಾಪವಿತ್ತಿಹೆನಾನು !
ನಾನು ಅಮಾಯಕ ಹೆಣ್ಣು ಭಗ್ನ ಪ್ರಣಯಿ !!

ಗಗನ ಮಂಡಲದಲ್ಲಿ ವಿಹರಿಸುವೆ ಓ ಸೂರ್ಯ
ಜದ ಅನ್ಯಾಯಗಳ ವೀಕ್ಷಿಸುವ ಸಾಕ್ಷಿಯೇ
ಅಂಬೆಯಳಲಿಗೆ ನೀನೆ ಸತ್ಯ ಸಾಕ್ಷಿ !
ಭೀಷ್ಮ ನನ್ಯಾಯಕ್ಕೆ  ನಿತ್ಯ ಸಾಕ್ಷಿ !
ನಡೆಯುವೆನು ಅಗ್ನಿದೇವನ ಬದಿಗ
ಅವನ ಕೆನ್ನಾಲಿಗೆಯ ಉಣಿಸು ನಾನಾಗುವೆನು
ಇದೋ ಬಂದೆ ಓ ಅಗ್ನಿ ಇದೋ ಬಂದೆ !
ನಿನ್ನ ಮಡಿಸಲು ಸೇರಿ ನಾನಿಲ್ಲವಾಗುವೆನು
ನಾನೆಲ್ಲವಾಗುವೆನು ನಾನೆಲ್ಲವಾ..!
(ಅಗನಿಯಲ್ಲಿ ಬೀಳುವಳು)

ಸತ್ಯಂ : ಹೆಣ್ಣು ಹೆಣವಾದಳು !
ಶಿವಂ : ಹೆಣ ಬೂದಿಯಾಯಿತು !

(ಲಯಗತಿಯಲ್ಲಿ ನರ್ತಿಸುತ್ತಾ)

ಏಳು ನನ್ನೆದೆಯರುಣ ತರುಣ ತೇಜಸ್ವಿಯೆ
ಏಳು ಯವನ ಕುಠಾರ ಯುವಕ ರಾಷ್ಟ್ರಕನೆ
ವಜ್ರ ಚೇತಸ ಏಳೊ ಭದ್ರ ಮಾನಸ ಎಳೊ
ಏಳು ಭಾರತಿಯಮಲ ಸುಮಧುರ ಸ್ವಪ್ನವೇ ॥

ಉಷೆಯ ನಿಶೆಯರಾಸ್ಯದಲಿ ಶಶಿಸೂರ್ಯರೆದೆಯಲ್ಲಿ
ದಿಸೆ ದಿಸೆಯ ಹಸೆಯಲ್ಲಿಹೊಸ ಹೆಸರ ಬರೆ ಏಳೊ
ಏಳು ನನ್ನೆದೆ ತೋಷ, ಆಶೇ ಕಿರಣವೆ ಏಳೊ
ಆಶನಿ ಘೋಷವಗೈದು ಹೋರಾಡಲೇಳೊ ॥

ಪುಂಡ ಯವನರ ರಣದಿ ತುಂಡು ತುಂಡರಿಸಿ
ಖಂಡ ಖಂಡವ ಕಡಿದು ಷಟ್ಖಂಡಕೆರಚಿ
ತಾಂಡವವ ನಡೆಸೇಳೊ ಅಖಂನದ್ವಯನೆ
ಬ್ರಹ್ಮಾಂಡ ಒಡೆದಂತೆ ಅಬ್ಬರಿಸಿ ಏಳೊ ॥

(ಭವಾನಿ ಎಂಬ ಹೆಸರಿ ಖಡ್ಗವನ್ನು ದೇವಿ ದಯಪಾಲಿಸುವಳು ಶಿವಾಜಿ ಎರಡೂ ತೋಳುಗಳನ್ನು ಚಾಚಿಪಡೆಯುವನು; ನಮಿಸುವನು)

ಇದುವೆ ರಣಖಡ್ಗ ನಿನ್ನೊಡಲ ಶ್ರೀರಕ್ಷೆ
ಈ ಭವಾನಿಯೆ ನಿನ್ನ ಜಯ ತಿತಿಕ್ಷೆ
ಧಮನಿ ಧಮನಿಯ ತುಂಬಿ ಧುಮು ಧುಮಿಸಿ ಹರಿಯಲೊ
ವೀರ ಕ್ಷತ್ರಿಯ ರಕ್ತ ಆಗು ಅನುರಕ್ತ !
ಉದ್ಘೋಷಿಸೊಮ್ಮೆಲೇ 'ಜೈ ಭವಾನಿ'
ಉದ್ಘೋಷಿಸೊಮ್ಮೆಲೇ 'ಜೈ ಭವಾನಿ'
ಉದ್ಘೋಷಿಸೊಮ್ಮೆಲೇ 'ಜೈ ಭವಾನಿ' !!

**ಶಿವಛತ್ರಪತಿ**

**ನಿರ್ದೇಶಕರು ಶ್ರೀಮತಿ ರಾಧಾ ಶ್ರೀಧರ್**

ದೃಶ್ಯ : ೧ ಅರಮನೆ

ಅಟ್ಟಣೆಯ ಮೇಲೆ ತುಳಜಾ ಭವಾನಿ. ಅವಳ ಪಾದದಡಿಯಲ್ಲಿ ಶಿವಾಜಿ ಶಿರಬಾಗಿ ನಮಿಸುತ್ತಾ ಮೊಣಕಾಲೂರಿ ಕುಳಿತಿದ್ದಾನೆ. ಇಕ್ಕೆಲಗಳಲ್ಲಿ ಒಂದೆಡೆ ತಾಯಿ ಜೀಜಾಬಾಯಿ ಮತ್ತೊಂದೆಡೆ ಗುರು ದಾದಾಜಿ ಕೊಂಡದೇವ ನಿಂತಿದ್ದಾರೆ. ಕೆಲವರು ಸ್ವಾತಂತ್ರ್ಯಯೋಧರು ಅಟ್ಟಣೆಯ ಕೆಳಭಾಗದಲ್ಲಿ ನೆಲಕ್ಕೆ ಹಣೆಹಚ್ಚಿ ಮಲಗಿದ್ದಾರೆ.

ದೃಶ್ಯ ಆರಂಭದಲ್ಲಿ ದೀಪ (Spot light) ಕೇವಲ ದೇವಿ ಮತ್ತು ಶಿವಾಜಿಯರ ಮೇಲೆ ಬೆಳಕು ಚೆಲ್ಲುವುದು, ಉಳಿದೆಲ್ಲ ಭಾಗ ಕತ್ತಲು)

ದೇವಿ (ಆಲಾಪನೆ)

ಏಳು ಭಾರತವೀರ ಏಳು ರಾಷ್ಟ್ರ ಸಮೀರ
ಏಳು ಜನಮನದೆದೆಯ ದಿವ್ಯಬಂಗಾರ ॥

ಶಿವಛತ್ರಪತಿ ಏಳೋ ದಿವ ರುದ್ರಗಜ ಏಳೊ
ರಾಷ್ಟ್ರನಾಕ ಸಾಹಸಿಯೆ ಉದ್ಘೋಷಿಸುದ್ಭುತವೆ
ಭರತ ಖಂಡಕೆ ಎಂದೂ ಜಯವಾಗಲೆಂದು
ಮಂತ್ರ ವಿಡಿಯಲೊ ನಿನ್ನ ನರ ನಾಡಿಗಳಲಿ ॥

ದಗ್ಧಳಾದಳು ಅಂಬೆ ಯಜ್ಞ ಕುಂಡದಲಿ
ನೆರಳಷ್ಟೆ ಉಳಿದಿಹುದು ಈ ಧಾತ್ರಿಯಲ್ಲಿ !

ಸುಂದರಂ : ಮುಂದೆ ಭಾರತ ಯುದ್ಧ ಸಂಘಟಿಸಿದಾಗ
ತಾ ಶಿಖಂಡಿಯು ಆಗಿ ಜನಿಸಿ ಬಂದಳು ಅಂಬೆ !
ಭೀಷ್ಮರನು ಬಲಿಗೊಳಲು ಮುಂಚೂಣಿಗೈದಿಂದಳು
ಬಿಲ್ಲು ಬಾಣವ ಹಿಡಿದು ಠೇಂಕಾರಗೈದು!
ಕುರುಪಿತಾಮಹ ಭೀಷ್ಮರೇನನೊ ನೆನೆನೆನೆದು
ಶರಶಯ್ಯೆಯಲ್ಲಿ ! ಅ ಕುರುಕ್ಷೇತ್ರ ರಣರಂಗದಲ್ಲಿ !

ಸತ್ಯಂ : ಅಸತೋಮಾ ಸದ್ಗಮಯ
ಶಿವಂ : ತಮಸೋಮಾ ಜ್ಯೋತಿರ್ಗಮಯ
ಸುಂದರಂ : ಮೃತ್ಯೋರ್ಮಾಽತಂಗಮಯ
॥ ಓಂ ಶಾಂತಿಃ ಶಾಂತಿಃ ಶಾಂತಿಃ ॥

ಎಲ್ಲರೂ : ಜೈ ಭವಾನಿ ಜೈ ಜೈ ಭವಾನಿ
ಜೈ ಭವಾನಿ ಜೈ ಜೈ ಭವಾನಿ..ಜೈ..ಜೈ..ಜೈ..ಜೈ..

ಶಿವಾಜಿ :

(ಬೇರೆ ಧಾಟಿಯಲ್ಲಿ) ನಿತ್ಯ ನಿರಂಜಿನಿ ನೃತ್ಯ ಸುಶೋಭಿನಿ
ನೃತ್ಯ ವಿಲಾಸಿನಿ ಜಯಲಲಿತೇ
ಭೃಥ್ಯರ ಪೊರೆವಾ ನಿತ್ಯಾನಿತ್ಯಳೆ
ಜಯ ಜಯ ಜಯ ಜಗಧೀಶ ಶಿವೆ ॥

ಊತ್ರ ಪ್ರಾಯಳೆ ಮಾತ ರೂಪಳೆ
ಮಂತ್ರಿ ಮಹೋದಯೆ ಮಹಮಾತೇ
ಸೃಷ್ಟಿ ಸ್ಥಿತಿ ಲಯ ಕಾರಣ ಕರ್ತಳೆ
ಜಯ ಜಯ ಜಯ ಜಗಧೀಶ ಶಿವೆ ॥

ಈಶ್ವರಿ ಶಾಂಕರಿ ಶಾಂಭವಿ ಶುಭಕರಿ
ವಿಶ್ವವಿಮೋಹಿನಿ ಶೈಲಸುತೇ
ಶಾಶ್ವತಿ ಸುಶ್ರುತೆ ಸತ್ಯವಿವರ್ಧಿತೆ
ಜಯ ಜಯ ಜಯ ಜಗಧೀಶ ಶಿವೆ ॥

ಜೈ ಜೈ ಜೈ ಜೈ ಜೈ ಜೈ
ಜೈ ಜೈ ಜೈ ಜೈ ಜೈ ಜೈ

– ತೆರೆ –

ದೃಶ್ಯ : ೨ ರಾಜಬೀದಿ
ಮಲ್ಲ : ಕೇಳ್ರಪ್ಪೋ ಕೇಳ್ರಿ ಕೇಳ್ರಿ
ಸಾರುವೆ ಡಂಗೂರವ
ದಾದಾಜಿ : ಶಿವಾಜೀ... ನಮ್ಮ ನಾಡ ಗಂಡುಗಲಿ
ಪ್ರತಿಜ್ಞೆಗೊಂಡು ರಣಕೆ ಸಾಗು ರಕ್ಷಾಮಣಿ ॥
ಮಿಡಿಯಲೆಂದೂ ನಾಡಿಯಲ್ಲಿ ನಾಡಿನಿಂಗಿತ
ಸ್ವರಾಜ್ಯವಾಗಿ ಮೂಡಿ ಬಾರೋ ಗುಡಿಯ ಕಟ್ಟುತ ॥

ಪುಣ್ಯಭೂಮಿ ಭಾರತದಲ್ಲಿ ಧರ್ಮದುದ್ಧಾರದಲ್ಲಿ
ರಣವೀರರದ್ದೇ ಹಿರಿಯ ಸಿಂಹಪಾಲಿದೆ ॥
ಕರ್ಮವೀರಗಲ್ಲ ಧರ್ಮವೀರಗಲ್ಲ ಖಡ್ಗಧಾರಿ
ಧೀರರಿಗೆ ಸ್ವರಾಜ್ಯ ಪಡೆದ ಹಕ್ಕಿದೇ ॥

ಜೀಜಾಬಾಯಿ: ಆ ರಣಭೂಮಿ ನಿನಗಾಡುಂಬೊಲ
ನಾಡದೇವಿ ತೊಡೆ ತೊಟ್ಟಿಲು
ಎಂದೆಂದಿಗು ಅದು ಗೋರಿಯಾಗದೆ
ಪವಿತ್ರವಾಗಲಿ ಮಡಲಿನೊಲು

ಶಿವಬs ಕೇಳೊ ಹೇಡಿ ನೀನಾಗದೆ
ರಣರಂಗದ ಕಲಿಯಾಗೋ
ಜೀಜಾಬಾಯಿಯ ಗರ್ಭದರ್ಭಕನೆ
ಸೋತು ಮೊರೆಯನು ತೋರದಿರೊ ॥೨॥

ರಾಷ್ಟ್ರಕೆ ಕಳಂಕ ತರಬೇಡ
ಮಹಾರಾಷ್ಟ್ರಕೆ ಹೇಡಿಯ ಪಡಬೇಡ
ಹೆಸರಿಗೆ ಕೆಸರನು ಬಳಿಯಲುಬೇಡ
ಭವಾನಿಯ ಪ್ರಾರ್ಥನೆ ಬಿಡಬೇಡ ॥೩॥

ಜೈ ಭವಾನಿ ಜಯ ಜಯ ಮಾತಾ
ಜೈ ಭವಾನಿ ಜಯ ಜಯ ಮಾತಾ
ಜೈ ಭವಾನಿ ಜೈ ಜೈ ಜೈ

ಶಿವಾಜಿ : ಧನ್ಯನಾನದೆನು ತಾಯೆ ಧನ್ಯ ಗುರುದೇವ !
ಹುಟ್ಟು ವ್ಯರ್ಥವದಲ್ಲ ಬಾಳು ಸಾರ್ಥಕವು ॥

ನಿಮ್ಮಗಳ ಹರಕೆಯೆ ವಜ್ರರಕ್ಷೆಯು ನನಗೆ
ಪುಂಡುಕುಲ ಕುಡಿಗಿಂದೆ ಕೆಂಡಮಳೆಗರೆವೆ
ಬನ್ನಿ ಪಾಷಂಡಿಗಳೆ ರಣಭೂಮಿಗೈತನ್ನಿ
ಈ 'ಭವಾನಿ' ದಣಿವ ತಣಿಸ ಬನ್ನಿ

ಬೆಟ್ಟದಾ ಹುಲಿಗಿನ್ನೂ ಮರಣ ಬಂದಿಲ್ಲ
ಅವನ ಕೈ ಚಳಕಕ್ಕೆ ಮುಪ್ಪು ಬಂದಿಲ್ಲ ॥

(ಬೇರೆ ಧಾಟಿಯಲ್ಲಿ)

ಅಖಂಡ ಭಾರತದ ಹರಿದ್ರ ವೇದಿಕೆ
ಕೆನ್ನೀರಿ ಮಡುವಾಗಲಿ
ನೀಲಿಯ ಆಗಲ ಕುಂಕುಮದೋಕುಳಿ
ಮಾವಳಿ ಮಿತ್ರರೆ ಮೊರೆದೇಳಿ
ಘೋಷಿಸಿ ಇಂದೇ ಒಕ್ಕೊರಲಲ್ಲಿ ॥

ಎಲ್ಲರೂ : ಜೈ ಭವಾನಿ ಜಯ ಜಯ ಭವಾನಿ
ಹರ ಹರ ಮಹದೇವ ॥

ಶಿವಾಜಿ : ರಕ್ತದ ಕಾಣಿಕೆ ಅರ್ಪಿಸುತೆ

ಪ್ರತಿಜ್ಞೆಗೈಯಿರಿ ಮಕ್ಕಳೇ

[ಎಲ್ಲರೂ ತಮ್ಮ ತಮ್ಮ ಖಡ್ಗಗಳಿಂದ ಎಡಗೈ ಹೆಬ್ಬರಳ ರಕ್ತವನ್ನು ದೇವಿಯ ಪದತಲದಲ್ಲಿ ಬಸಿದು, ಅನಂತರ ಒಬ್ಬರು ಮತ್ತೊಬ್ಬರಿಗೆ ರಕ್ತ ತಿಲಕ ಇಡುತ್ತಾರೆ]

ನಾಡಿನ ಬಿಡುಗಡೆಗಾಗಿ
ಹೋರಾಟ ಮಾಡುವೆವು
ಸ್ವರಾಜ್ಯ ಕನಸನು ನನಸಾಗಿಸುವೆವು
ಕಟ್ಟುವೆವು ಹೊಸ ನಾಡನು ॥

( ದೃಶ್ಯ ಪರಿವರ್ತನ )
(ದೇವಿ ನರ್ತಿಸಿ ನಿಲ್ಲುತ್ತಾಳೆ. ರಂಗ ಬೆಳಕಾಗುತ್ತದೆ; ಎಲ್ಲರೂ ದೃಗ್ಗೋಚರವಾಗುತ್ತಾರೆ. ನಡೆದದ್ದು ಕನಸೆಂಬಂತೆ ಭಾಸವಾಗುತ್ತದೆ. ದೇವಿಯು ಕೊಟ್ಟ ಖಡ್ಗ ಹಿಡಿದು ಶಿವಾಜಿ ಮುಂದೆ ಬಂದಾಗ ಯುದ್ಧ ದುಡುಗೆಯ ವೀರ ಯೋಧರು ತಲೆ ಬಾಗುತ್ತಾರೆ)

ಎಲ್ಲರೂ : ಜೈ ಭವಾನಿ ಜೈ ಭವಾನಿ ಜೈ ಭವಾನಿಯೆ
ಜೈ ಭವಾನಿ ಜೈ ಭವಾನಿ ಜೈ ಭವಾನಿಯೆ ॥

ಶಿವಾಜಿ: ಚಂಡ ಮುಂಡರನ್ನು ರಣದಿ ಕಡಿದು ಖಂಡಿಸಿ
ರುಂಡಗಳನು ಚೆಂಡನಾಡಿ ಛಲವ ಸಾಧಿಸಿ
ಚಂಡಿ ಚಾಮುಂಡಿಯಾದೆ ನೆತ್ತರು ಹರಿಸೆ
ಷಂಡ ತಂಡವನ್ನು ತರಿದು ತುಂಡನಾಗಿಸಿ ॥೧॥

ಆದಿಶಕ್ತಿ ಪರಾಶಕ್ತಿ ಜಗದ್ಧಾತ್ರಿಯೆ
ರಾಷ್ಟ್ರ ಕುಂಡಲಿನಿ ಶಕ್ತಿ ಜಗನ್ಮಾತೆಯ
ಬನಶಂಖರಿ ಮಾಹೇಶ್ವರಿ ಕ್ರಿಯಾಶಕ್ತಿಯೆ
ರಣ ಭಯಂಕರಿ ಸರ್ವೇಶ್ವರಿ ಗಔರಿ ಕಾಯೆ ॥೨॥

ಬಟ್ಟ ಬಯಲಿನಲ್ಲಿ ದಿಟ್ಟ ಬಟ್ಟೆದೋರದೆ
ಹೊಟ್ಟೆಗಾಗಿ ಹುಟ್ಟಿದೂರ ಬಿಟ್ಟ ತಿರುಕರು
ಕೆಟ್ಟತನದಿ ಕೊಲುತಲಿಹರು ಶಿಷ್ಟ ಜನರನು
ಪೀಠ ಇಟ್ಟು ರಣಕೆ ಬಾರೆ ಸರ್ವಾಣಿಯೆ ॥೩॥

ಎಲ್ಲರು
ಜೈ ಮಾತಾ ಜೈ ಭವಾನಿ
ಜೈ ಮಾತಾ ಜೈ ಭವಾನಿ

ಜೈ ಜೈ ಮಾತಾ ಜಯಮಾತಾ
ಜೈ ಜೈ ಮಾತಾ ಜಯಮಾತಾ

ಜೈ ಜೈ ಮಾತಾ

ಊರೆಲ್ಲ ಕೇಳಿರಿ

ಸಾರುವೆ ಡಂಗೂರವ ॥

ಕೇಳ್ರಪ್ಪೋ ಕೇಳ್ರಿ ಕೇಳ್ರಿ
ಕೇಳಿದ್ರೂ ಕೇಳ್ಲಿಲ್ಲ ಅನ್‌ಬ್ಯಾಡ್ರಿ
ಸಾರಿದ್ದರೂ ಸಾರ್ಲಿಲ್ಲ ಅನ್‌ಬ್ಯಾಡ್ರಿ
ಕೇಳ್ರಪ್ಪೋ ಕೇಳ್ರಿ ಕೇಳ್ರಿ ॥

ದಿಲ್ಲಿಯಲ್ಲಿ ಮೊಗಲ್‌ಶಾಹಿ ಉತ್ತರದಲ್ಲಿ
ಬಿಜಾಪುರದ ಆದಿಲ್‌ಶಾಹಿ ದಕ್ಷಿಣದಲ್ಲಿ
ಭಾಗಾ ನಗರದ ಕುತಬ್‌ಶಾಹಿ ಪೂರ್ವದಲ್ಲಿ
ಇಂಗ್ಲಿಷ್ ಫ್ರೆಂಚ್ ಪೋರ್ಚುಗೀಸ ಪಶ್ಚಿಮದಲ್ಲಿ

ಇವ್ರಿಗೆಲ್ಲಾ ಕಾಟ ಕೊಡೊ ಬೆಟ್ಟದಾ ಇಲಿ ಶಿವಾಜಿ ಎಂಬ ಪೋರನಂತೆ ಪುಣೆಯಲ್ಲಿ ॥

(ದೃಶ್ಯ ಪರಿವರ್ತನೆ)
(ದೇವಿ ನರ್ತಿಸಿ ನಿಲ್ಲುತ್ತಾಳೆ ರಂಗ ಬೆಳಕಾಗುತ್ತದೆ; ಎಲ್ಲರೂ ದೃಗ್ಗೋಚರವಾಗುತ್ತಾರೆ. ನಡೆದದ್ದು ಕನಸೆಂಬಂತೆ ಭಾಸವಾಗುತ್ತದೆ. ದೇವಿಯು ಕೊಟ್ಟ ಖಡ್ಗ ಹಿಡಿದು ಶಿವಾಜಿ ಮುಂದೆ ಬಂದಾಗ ಯುದ್ಧ ದಂಡುಗೆಯ ವೀರ ಯೋಧರು ತಲೆ ಬಾಗುತ್ತಾರೆ)

ಎಲ್ಲರೂ : ಜೈ ಭವಾನಿ ಜೈ ಭವಾನಿ ಜೈ ಭವಾನಿಯೆ
ಜೈ ಭವಾನಿ ಜೈ ಭವಾನಿ ಜೈ ಭವಾನಿಯೆ ॥

ಶಿವಾಜಿ : ಚಂಡಮುಂಡರನ್ನು ರಣದಿ ಕಡಿದು ಖಂಡಿಸಿ
ರುಂಡಗಳನು ಚೆಂಡನಾಡಿ ಛಲವ ಸಾಧಿಸಿ
ಚಂಡಿ ಚಾಮುಂಡಿಯಾದೆ ನೆತ್ತರು ಹರಿಸದೆ
ಪುಂಡ ತಂಡವನ್ನು ತರಿದು ತುಂಡನಾಗಿಸಿ ॥೧॥

ಆದಿಶಕ್ತಿ ಪರಾಶಕ್ತಿ ಜಗದ್ಧಾತ್ರಿಯೆ
ರಾಷ್ಟ್ರ ಕುಂಡಲಿನಿ ಶಕ್ತಿ ಜಗನ್ಮಾತೆಯೆ
ಬನಶಂಕರಿ ಮಾಹೇಶ್ವರಿ ಕ್ರಿಯಾಶಕ್ತಿಯೆ
ರಣಭಯಂಕರಿ ಸರ್ವೇಶ್ವರಿ ಗೌರಿ ಕಾಯೆ ॥೨॥

ಬಟ್ಟ ಬಯಲಿನಲ್ಲಿ ದಿಟ್ಟ ಬಟ್ಟೆದೋರದೆ
ಹೊಟ್ಟೆಗಾಗಿ ಹುಟ್ಟಿ ದೂರ ಬಿಟ್ಟ ತಿರುಕರು
ಕೆಟ್ಟತನದಿ ಕೊಲುತಲಿಹರು ಶಿಷ್ಟ ಜನರನು
ಪೀಠ ಬಿಟ್ಟು ರಣಕೆ ಬಾರೆ ಸರ್ವಾಣಿಯೆ ॥೩॥

ಎಲ್ಲರು
ಜೈ ಮಾತಾ ಜೈ ಭವಾನಿ
ಜೈ ಮಾತಾ ಜೈ ಭವಾನಿ
ಜೈ ಜೈ ಮಾತಾ ಜಯಮಾತಾ
ಜೈ ಜೈ ಮಾತಾ ಜಯಮಾತಾ

ಜೈ ಮಾತಾ ಜಯಮಾತಾ

ಶಿವಛತ್ರಪತಿ

ಊರೆಲ್ಲ ಕೇಳಿರಿ
ಸಾರುವೆ ಡಂಗೂರವ ॥

ಕೇಳ್ರಪೋ ಕೇಳ್ರಿ ಕೇಳ್ರಿ
ಕೇಳಿದ್ರೂ ಕೇಳ್ಲಿಲ್ಲ ಅನ್‌ಬ್ಯಾಡ್ರಿ
ಸಾರಿದ್ರೂ ಸಾರ್ಲಿಲ್ಲ ಅನ್‌ಬ್ಯಾಡ್ರಿ
ಕೇಳ್ರಪೋ ಕೇಳ್ರಿ ಕೇಳ್ರಿ ॥

ದಿಲ್ಲಿಯಲ್ಲಿ ಮೊಗಲ್‌ಶಾಹಿ ಉತ್ತರದಲ್ಲಿ
ಬಿಜಾಪುರದ ಆದಿಲ್‌ಶಾಹಿ ದಕ್ಷಿಣದಲ್ಲಿ
ಭಾಘಾ ನಗರದ ಕುತುಬ್‌ಶಾಹಿ ಪೂರ್ವದಲ್ಲಿ
ಇಂಗ್ಲಿಷ್ ಫ್ರೆಂಚ್ ಪೋರ್ಚುಗೀಸ ಪಶ್ಚಿಮದಲ್ಲಿ
ಇವ್ರಿಗೆಲ್ಲಾ ಕಾಟ ಕೊಡೊ ಬೆಟ್ಟದಾ ಇಲಿ
ಶಿವಾಜಿ ಎಂಬ ಪೋರನಂತೆ ಪುಣೆಯಲ್ಲಿ ॥

ಪಿಲ್ಲಿ (ಪ್ರವೇಶಿಸಿ) ಹಾ ! ಏನಂದೇ ?
ಬೆಟ್ಟದ ಹಲಿಯಾ ಇಲೀ ಅಂತೀಯಾ ?
ಹುಲಿ ಕಣೊ ಹುಲಿ ಕಣೊ ಹುಲಿ ಕಣೋ
ಗುಳ್ಳೆ ನರಿ ನೀರು ಕಂಕನರಿ ನೀನು
ಪುಲುಪುಲು ಓಡಾಡೋ ಸುಂಡಲಿ ನೀನು
ಹೆಂಡ ಕುಡ್ದು ಬುಂಡೆ ಎಸ್ಯೋ ಭಂಡ ಕಾಣೊ
ಶುದ್ದ ಭಂಡ ಕಾಣೊ !

ಮಲ್ಲ ಅಯ್ಯಯ್ಯೊ ಲೇ ಲೇ ಲೇ .. ಪಿಲ್ಲಿ..
ಮೂತಿ ತಿವುದು ಕೋತಿ ಹಾಂಗೆ ಮಾಡ ಬ್ಯಾಡ್ವವೇ
ನನ್ನ ರತಿ ಓತಿಕ್ಯಾತ ಆಗಬ್ಯಾಡ್ವೆ !

ಮಲ್ಲಿ (ಆಗಮಿಸಿ) ಮಲ್ಲ ! ಏಯ್ ಈರಮಲ್ಲಾ !!

ಮಲ್ಲ : ಬಂದಲ್ಲಪ್ಪೋ ಈ ಬಜಾರಿ ಬಸ್ವಿ !

ಮಲ್ಲಿ ಯಾಯಕಾ ಈರಮಲ್ಲ ! ಊರೆಲಲ್ ಸಾರ್ವಂತೆ
ಯಾಕಲಾ ಈರಮಲ್ಲ !

ಶಿವಾಜಿ ಮರಾಜರ್ನ
ಬೆಟ್ಟದಿಲಿ ಅಂದ್ಯಮತೆ

ಯಾಕಲಾ ಈರಮಲ್ಲ ! ಊರೆಲ್ಲ ಸಾರ್ವಂತೆ
ಯಾಕಲಾ ಈರಮಲ್ಲ ॥

ಕಳ್ಳ ಸುಳ್ಳ ಪೋಳಿ ಕಪಟಿ ಕೊಳ್ಳೆಗಾರ
ಪುಂಟು ಪೋಕ್ರಿ ಮಾವಳೀಗಳ ಸರದಾರ
ಲೂಟಿ ಪಾಟಿ ಆಟ ಆಡೋ ಕೆಟ್ಟ ಚೋರ

ಎಂದೆಲ್ಲ ಬಯ್ದಂತೆ ನಮ್ಮ ಶಿವರಾಜರ್ನ
ಹೌದೇಂನ್ಲ ಭಂಡ ! ಮೂದೇವಿ ಷಂಡ

ಮಲ್ಲ : ತಪ್ಪಾತ ತೆಪ್ಪಾತು
ಮಲ್ಲಿ ಪಿಲ್ಲಿ ಯೋಳ್ರೇ ಅವರ ಇಷ್ಯಾ

ಮಲ್ಲಿ ಪಿಲ್ಲ : ಕಥೆಯ ಹೇಳುವ ಕೇಳೋ ಕಾಲಪುರುಷ
ವ್ಯಥೆಯಲ್ಲ ಸತ್ಕಥೆಯು ಕೇಳು ಹರುಷ ॥
ಆ ಮರಾಠರ ವೀರ ಆ ಶಿವಾಜಿ
ಭಾರತಾಂಬೆಯ ಕುವರ ಅಮಿತ ತೇಜಿ

ಹುಟ್ಟಿದ್ದು ಶಿವನೇರು ದುರ್ಗದಲ್ಲಿ
ಬೆಳೆದು ಬೆಳಕಾದದ್ದು ಬೆಂಗಳೂರಲ್ಲಿ
ಕನ್ನಡದ ನಾಡಿನಲಿ ಕಲಿತನದ ಬೀಡಿನಲಿ
ಬಾಲ್ಯ ದಿನಗ ಕಳೆದನಾ ಶಿವಾಜಿ
ಕನ್ನಡಿಗರೊಡನಾಡಿ ದಿನಗಳೆದನು
ಕನ್ನಡಿಗರೊಡನಾಡಿ ದಿನಗಳೆದನು ॥

ಕಿಸ್ತಶಕ ಸಾವಿರದ ಆರ್ನೂರ ಮೂವತ್ತು
ಫೆಬ್ರವರಿ ಇಪ್ಪತ್ತು ಶಿವಜನನವಾಯ್ತು
ಹೆತ್ತವ್ವೆ ದೇವತೆ ಧೀರೆ ಜೀಜಾಬಾಯಿ
ಹಡೆದಾತ ಶಾಹಜಿಯು ವೀರ ಸರದಾರ ॥

ತೊಟ್ಟಿಲಲಿ ಪಟ್ಟಿರಿಸಿ ಶಿವಬಾಲನನ್ನು
ಜೋಗುಳವ ಹಾಡಿದರು ಜೋ ಮಲಗು ರನ್ನ
ಜೋ ಜೋ ಜೋ ಜೋ ಜೋ ಜೋ ಜೋ ॥

(ಈ ಭಾಗ ಮುಂದಿನ ಭಾಗ ಎಲ್ಲದೂ ಅಭಿನಯದ ಮೂಲಕ ಪ್ರದರ್ಶಿತವಾಗಬೇಕು)

ತೊಡೆ ಮಡಿಲು ತೊಟ್ಟಲಿಂದಿಳಿದ ಆ ಮಗುವು
ಶಿಕ್ಷಣಕೆ ತೊಡಗಿತ್ತು ತಾಯಿಯೇ ಗುರುವು
ತಾಯಿ ಜೀಜಾಬಾಯಿ ಹೇಳಿದಳು ಬಹಳ
ವೀರಾಭಿಮನ್ಯುವಿನ ವೀರ ಗಾಥೆಗಳ ॥

ಕಲಿಸಿದಳು ಕಲಿಸಿದಳು ಮೊದಲ ಗುರುವಾಗಿ
ಸ್ವಾಭಿಮಾನದ ಪಾಠ ಮೊದಲು ಕಲಿಸಿದಳು ॥

ಪುಣೆಯ ಸುತ್ತಲಲಿದ್ದ ಮಾವಳಿಗಳೊಡನೆ

ಶಿವಬ ಅಲೆದಾಡಿದನು ಕಾಡುಮೇಡೊಳಗೆ
ಕಟ್ಟಿದನು ಕಟ್ಟಿದನು ತೋರಣಾಗಡ ಕೋಟೆ
ಮತ್ತೆ ಪ್ರತಾಪದಾ ಗಡವೆಂಬ ಕೋಟೆ ॥

ದಿಕ್ಕು ಕೆಟ್ಟಿತು ಬಂದಶಹಗೆ ಬಿಜಾಪುರದಲಿ
ಅಟ್ಟಿದನು ಅಫಜಲದ ಸೆರೆಹಿಡಿಯಲೆಂದು
ಪಾಪಿ ಅಫಜಖಾನ ಬಲಿಯಾದ ಕಲಿಗೆ
ವ್ಯಾಘ್ರನಖವೆಂದೆಂಬ ಆಯುಧದ ಮೊನೆಗೆ

(ಇದನ್ನು ಛಾಯಾದೃಶ್ಯದಲ್ಲಿ ಅಭಿನಯಿಸಿ ತೋರಬೇಕು. ಹಾಡು ಹರಿವಾಗ ಅಭಿನಯ ದೃಗ್ಗೋಚರವಾಗುತ್ತಿರಬೇಕು)

ಬಿಜಾಪುರದ ಬಾದಶಹ ಮಣ್ಣು ಮುಕ್ಕಿದ ಸುದ್ದಿ
ದಿಲ್ಲಿ ಸುಲ್ತಾನನನು ಎಬ್ಬಿಸಿತು ಗುದ್ದಿ
ಶ್ರೀ ಶಿವಾಜಿಯ ಸೆರೆಯ ಹಿಡಿಯಲೆಳಸಿ
ಕಳುಹಿಸಿದನು ಸರದಾರ ಶಯಸ್ತಖಾನನನು ॥

ಸೇನೆಯನು ಅಣಿಗೊಳಿಸಿ ನಟನೆಯಲಿ ತಂತು
ಸಹ್ಯಾದ್ರಿ ಸಿಂಹದೆಡೆ ದಿಲ್ಲಿ ನರಿ ಬಂತು
ಹೂಂ ಕೃತಿಗೆ ತರಗಾಗಿ ಧೂಳಿಪಟವಾಯ್ತು
ನರಿಬಾಲ ನೀಗಿದೊಲು ತೋಳು ತುಂಡಾಯ್ತು

(ಛಾಯಾ ದೃಶ್ಯ ಅಭಿನಯ)

ಸೂರತಿನ ಕೋಟೆಯಲಿ ಘೋರ ಸಂಗ್ರಾಮ
ಸೆರೆಯಾದಳಾ ಮೊಗೆಲ ಜಹ್ನಾರ ಬೇಗಮ
ಇನ್ನು ನೋಡೋ ಜಾಣ ಮುಂದಿನ ಕಥೆಯ
ಶಿವರುದ್ದರವತಾರಿ ಶಿವನ ಸಂಹಿತೆಯ ॥

(ಯುದ್ಧದ ಛಾಯಾದೃಶ್ಯ : ಹರ ಹರ ಮಹದೇವ್, ಅಲ್ಲಾ – ಉ–ಅಕ್ಬರ್ ಎಂದು ಘೋಷಣೆಗಳ ನಡುವೆ ಖಡ್ಗಗಳ ಕಣಿಕಟಲು ಶಬ್ದ ಭೀಕರ ಹೋರಾಟ)
ಮಲ್ಲ–ಮಲ್ಲಿ–ಪಿಲ್ಲಿ : (ನರ್ತಿಸುತ್ತ ನಿರ್ಗಮಿಸುವರು)

ದೃಶ್ಯ : ೩ ಅರಣ್ಯ : ಶಿವಾಜಿಯ ಬಿಡಾರ
(ರಾಜಭಟರು ದಿಲ್ಲಿಯ ಸುಲ್ತನ ಔರಂಗಜೇಬನ ತಂಗಿ ಜಹವಾ ಬೇಗಮಳನ್ನು ಸೆರೆಹಿಡಿದು ತರುತ್ತಾರೆ; ಶಿಬಿರದಲ್ಲಿದ್ದ ಶಿವಾಜಿಯ ಮುಂದೆ ತಂದು ನಿಲ್ಲಿಸುತ್ತಾರೆ. ಜಹನಾರಾ ಹಿಂದಿನ ಸೂರತ್ ಯುದ್ಧದಲ್ಲಿ ಪಾಲ್ಗೊಂಡಿರುತ್ತಾಳೆ. ವೇಷ ಮರೆಸಿಕೊಂಡು ಅಂದರೆ ಗಂಡುಡುಗೆ ಧರಿಸಿರುತ್ತಾಳೆ. ಭಟರು ಪುರುಷನೆಂದೇ ಭ್ರಮಿಸಿ ಸೆಳೆದು ತಂದಿರುತ್ತಾರೆ)

ಭಟರು : ಶಿವಾಜಿ ಮಹಾರಾಜ್ ಕಿ ಜೈ
ಭವಾನಿ ಹರ್ಷ ಕಿ ಜೈ ॥
ಸೂರಜ್ ಸಂಗಾಮದಲ್ಲಿ ವಿದ್ಯುತ್ ಹೋರಾಟದಲ್ಲಿ
ಬದ್ಧತ್ ಭರಾಟೆಯಲ್ಲಿ ಬಲೆಯಲ್ಲಿ
ಮದ್ದತ್ತಿಲ್ದೆ ಬಿದ್ದು ಬಿತ್ತು ಈ ಬೇಟೆ
ಮದ್ದತ್ತಿಲ್ದೆ ಬಿದ್ದು ಬಿಡ್ತು ಈ ಬೇಟೆ ॥

ಶಿವಾಜಿ: ತೆಗೆಯಿರಿ ತೆಗೆಯಿರಿ ತೆರೆಯನ್ನು ಸರಿಸಿರಿ
ಕೈ ಕಟ್ಟುಗಳನ್ನು ಸಡಿಲಿಸಿರಿ
ಹುಲಿಯನು ರೇಗಿಸಿ ಕಣದೊಳು ಬಿಡಿರೇ
ಹೂಂಕೃತಿಗೈಯಲಿ ರೋಷದಲಿ

ಜಹಾನಾರಾ : ಶರಣಾದೆ ಛತ್ರಪತಿ ಶರಣಾದ ನಿನಗೆ
ಸಂಕರನ ಕಿಂಕರನೆ ನಿನಗೆ ಶರಣಾದೆ !
ನಾನಬಲೆ ಜಹನಾರ ಬೇಗಮಳು ನಾನು
ಶಯಿಸ್ತಖಾನನ ಮಡದಿ ಮೀಹಿನಿಯು ನಾನು
ದಿಲ್ಲಿ ಸುಲ್ತಾನನಿಗೆ ಅವುರಂಜೇಬನಿಗೆ
ಒಡೆಹುಟ್ಟಿದವಳಾರು ಮೀರಿರಂಣಿಯಾನು !

ಶಿವಾಜಿ: (ಕಿವಿ ಮುಟ್ಟಿ)
ಶಿವ ಶಿವಾ ! ಅಪರಾಧ ! ಅಕ್ಷಮ್ಯ ಅಪರಾಧ !
ಸುಲ್ತಾನ ಸೋದರಿಯು ನಮಗೂ ಸೋದರಿಯು
ಗಂಡುಡೆಯ ದಿಂಡೆಯನು ಗಂಡೆಂದು ಭಾವಿಸುತೆ
ದಿಂಡುಗಡೆ ತಂದರೌ ನಮ್ಮವರು ಬರಿದೆ
ಅಪಚಾರವೆಸಗಿದರು ಅರಿಯಾದಾಚರೀಸಿದರು
ಮನ್ನಿಸೌ ಸೋದರಿಯೆ ಮನ್ನಿಸೆಲೆ ತಾಯೆ ॥

ಜಹನಾರಾ : ನನ್ನಣ್ಣ ಹಿರಿಯಣ್ಣ, ಕ್ಷತ್ರಿಯ ಸಹೋದರನೆ
ಹಿಮದೆ ಬದ್ಧ ದ್ವೇಷಿ ಇಂದು ನಾ ಪರಿತೋಷಿ
ಚಿತ್ತಕ್ಕೆ ಬಂದಂತೆ ನಡೆಸಿಕೋ ತಂದ !

ಶಿವಾಜಿ : ಬಂಧುಗಳೆ,
ನನ್ನ ಧಮನಿಯಲಿರುವ ರಕ್ತಧುನಿ ಧೇನಂಗಳೆ,
ಪರ ಹೆಣ್ಣು ಸೋದರಿಯು ಪಾವನಾತ್ಮಳು ನಮಗೆ
ಮಾತೃತ್ವ ಈ ನೆಲದ ಮಾನಬಿಂದು !
ಜಹವಾರ ಬೇಗಮಳು ನಮಗೆಲ್ಲ ಸೋದರಿಯು
ಈಕೆಯನು ಮರಿಯಾದೆಯಿಂದ ಕೊಂಡೊಯ್ದು
ಕೊಟ್ಟಮನೆ ಸೇರಿಸುತ ಕ್ಷಮೆ ಕೋರಿ ಬನ್ನಿ !

ಭಟರು : ಆಜ್ಞೆ ! ಮಹದಾಜ್ಞೆ ! !

ಜಹನಾರ : ಅಣ್ಣ, ಹಿಂದೂ ಬಂಧು,
ನಿನ್ನೆದೆಯು ಸುಧೆ ಸಿಂಧು !
ಔದಾರ್ಯಕಿಂ ಮಿಗಿಲು ನಿನ್ನ ಸಜ್ಜನಿಕೆ
ತಲೆಬಾಗಿ ನಮಿಸುವೆನು ನಿನ್ನ ಹಿರಿ ಸಂಸ್ಕೃತಿಗೆ !
ಭಾರತೀಯರು ವಿಶ್ವ ಮೈತ್ರಿಪರರೆಂದು
ಭಜಿಸುವೆನು ಪೂಜಿಪೆನು ನಾನು ಎಂದೆಂದು !

ಶಿವಾಜಿ : ಹೋಗಿ ಬಾ ಸೋದರಿಯೆ ಹೋಗಿ ಬಾ ತಾಯೆ !

ತೌರ ಕುಂಕುಮ ಕೊಂಡು ಬಾಗಿನವ ಕೊಂಡು
ಐದೆ ಆಬರಣಗಳ ಹರಸುತ್ತೆ ನಡೆ ತಂಗೆ
ಹರುಷದಿಂದ ಹರಸುತ್ತ ನಡೆ ತಂಗೆ ಮುಂದೆ
ಇಂದಿನೀ ರಸನಿಮಿಷ ಹಸುರಾಗಲೆಂದೆ !
(ಗೌರವದಿಂದ ಬೀಳ್ಕೊಡುವನು)

(ಭಟರು ಮೇನೆ ಹೊತ್ತು ನಡೆಯುತ್ತಾ)
ಹೈ ಹೈ ಡುಂ ಡುಂ ಹೈ ಹಯಿ ಹೋ
ಹೈ ಹೈ ಡುಂ ಡುಂ ಹೈ ಹಯಿ ಹೊ ॥

ಯುದ್ದ ಭೂಮಿಯು ನಮಗೆ ರುದ್ರಭೂಮಿ
ಸಿದ್ಧಿಯಾ ಪಡೆವುದಕೆ ಶುದ್ಧ ಭೂಮಿ ॥೧॥

ಹೈ ಹೈ . . .
ಅದುವೆ ತಾಯಿಯ ಮಡಿಲು, ತಂದೆ ತೊಡೆ ತಲ್ಪ
ಪವಡಿಸುವ ಸಜ್ಜಿವನೆ ಸಗ್ಗ ಸಿರಿ ಕಲ್ಪ ॥೨॥

ಹೈ ಹೈ . . .
ಎದ್ದೇವು ಬಿದ್ದೇವು ಎಲ್ಲ ದೈವಾಯತ್ತ
ಹೋರಾಟವೇ ಬದುಕು ನಮ್ಮದೀ ಚಿತ್ರ ॥೩॥

**ದೃಶ್ಯ : ೫ ದಿಲ್ಲಿಯ ದರ್ಬಾರು**

ನರ್ತಕಿ : ವಿಜನಽ ಶೂನ್ಯ ಸದನ
ಈ ಮನುಜ ಮಾನಿನಿಯ ಹೃದಯದಾಸ್ಥಾನ
ವಿಜನಽ ಶೂನ್ಯ ಸದನ ॥

ಮೋಹದ ಮದಿರೆ ಕಣ್ಣನು ಕೆದರೆ
ಸ್ಪರ್ಶ ಸುಖೋಷ್ಣತೆ ತುಟಿಗಳು ಅದುರೆ !
ಸ್ತನಭರ ಭಾರೆ ಮೇಲುದು ಜಾರೆ
ಮಧುರ ಮನೋಹರೆ ಬಯಕೆಯ ಧಾರೆ ॥೧॥

ಹೂದಂಡೆಯೊಲು ತೋಳುಗಳೆಡರು
ಕೊರಳನು ಏರಲು ಕಾತರಿಸಿರಲು
ಅಪ್ಪುಗೆ ಹೆಪ್ಪು ಚಿಪ್ಪೊಡೆದಿರಲು
ಒಡಲಿ ಮಡುವೇ ಕದಡಿದೊಡಿರಲು ॥೨॥

[ಅಷ್ಟರಲ್ಲಿ ನರ್ತನ ಇನ್ನೂ ಮುಂದುವರಿಯುತ್ತಿದ್ದಾಗ ಮೊಗಲ್ ಸರದಾರನೊಬ್ಬನು ಶಿವಾಜಿ ಬಂದ ಸುದ್ದಿಯನ್ನು ಕಿವಿಯಲ್ಲಿ ಉಸುರುತ್ತಾನೆ. ಕೂಡಲೇ ಔರಂಗಜೇಬ್ 'ಅಚ್ಛಾ' ಎಂದವನೇ ಸಿಂಹಾಸನದ ಪಕ್ಕದಲ್ಲಿದ್ದ ಜಾಗಟೆ ಬಾರಿಸುತ್ತಾನೆ. ಶಬ್ದ ಸ್ಫೋಟಗೊಂಡ ಕೂಡಲೆ ನರ್ತನ, ವಾದ್ಯ, ಹಾಡು ಎಲ್ಲವೂ ಥಟ್ಟನೆ ನಿಲ್ಲುತ್ತವೆ. ಸಂದರ್ಭದ ಸೂಕ್ಷ್ಮತೆಯನ್ನರಿತ ನರ್ತಕಿ ಮಂಜರೆ ಮಾಡಿ ಹಿಂದು ಹಿಂದಾಗಿ ನೇಪಥ್ಯಕ್ಕೆ ಸರಿಯುತ್ತಾಳೆ. ಆಸ್ಥಾನ ಗಾಂಭೀರ್ಯ ತಳೆಯುತ್ತದೆ]

ಸುಲ್ತಾನ : ಬುಲಾವ್ ಓ ಕಾಫಿರ್ ತೋ ೧

[ಕಿವಿಯಲ್ಲಿ ಉಸುರಿದವ ಸಲಾಂ ಮಾಡಿ ಹೋಗುತ್ತಾನೆ. ತುಸು ಹೊತ್ತಿನ ನಂತರ ಇಬ್ಬರು ಸರದಾರರ ಪಹರೆಯಲ್ಲಿ ಶಿವಾಜಿಯ ಆಗಮನ, ಸಭೆ ಸಂದೇಹ ದೃಷ್ಟಿ ಚೆಲ್ಲುತ್ತದೆ. ಆಗಂತುಕನ ಮೇಲೆ ಸನಿಹದಲ್ಲಿದ್ದ ಜಸವಂತಸಿಂಹ ಮುಸುಮುಸು ನಗುತ್ತಿರುತ್ತಾನೆ]

ಸರದಾರ ೧ : ಏಯ್ ಶಿವಾಜೀ ಕುರ್ನಿಸ್ ಕರೋ ಕುರ್ನಿಸ್
(ಶಿವಾಜಿ ಧೀರ ಮಂದರರದಂತೆ ನಿಂತಿರುತ್ತಾನೆ)

ಸರದಾರ ೧ : ಏಯ್ ಮಂಜರೆ .. ಮಾಡು ಮಂಜರೆ.. ಹೀಂಗೆ ಎಂದು ತಲೆಬಾಗಿ ತಾನು ಮಾಡಿ ತೋರಿಸುತ್ತಾನೆ. ಶಿವಾಜಿ ಅಲುಗಾಡದ ಭಂಗಿಯಲ್ಲಿ ನಿಂತಿರುತ್ತಾನೆ)

ಸರದಾರ ೨ : ಏಯ್ ಮಂಜರೆ.. ಮಾಡು ಮಂಜರೆ.. ಹೀಂಗೆ ಎಂದು ತಲೆಬಾಗಿ ಮಾಡಿ ತೋರಿಸುತ್ತಾನೆ. (ಶಿವಾಜಿ ಅಲುಗಾಡದ ಭಂಗಿಯಲ್ಲಿ ನಿಂತಿರುತ್ತಾನೆ)

ಸರದಾರ ೩ : (ನೇಪಥ್ಯದಿಂದ ಒಂದು ಜೊತೆ ಗುಲಾಮ ಸಮವಸ್ತ್ರ ತಂದು )

ಲೇವ್ ಏ ಲೇವ್ ಗುಲಾಮ್ ಕಿ ಕುರ್ತಾ !
(ಉಡುಗೆ ಕೊಡ ಹೋಗುವನು. ಶಿವಾಜಿ ಕೆಂಡವಾಗಿ ಹರಿದು ಚಿಂದಿ ಮಾಡಿ ಅದನ್ನು ತಂದ ಸರದಾರನ ಮುಖದ ಮೇಲೆ ಬಿಸಾಡುವನು. ಅವನ ಆರ್ಭಟ ಹಾರಾಟ ಕಂಡು ಹತ್ತಾರು ಕತ್ತಿಗಳು ಅವನ ಸುತ್ತ ನೆರೆಯುವುವು)

ಶಿವಾಜಿ : ಸುಲ್ತಾನ ಓ ಜೇಬ ಇದು ನಿನ್ನ ಸಂಸ್ಕೃತಿಯೆ ?
ಯುದ್ಧದ ವಿರಾಮದಲಿ ಸಂಧಿಗೆಂದೇ ಕರೆದು
ಸನ್ನಾಹ ನಡೆಸುವುದೆ !

ದ್ರೋಹ ದ್ರೋಹ ದ್ರೋಹ !

ಜಸವಂತ ಸಿಂಹ, ನೀನು ಹಿಂದುವೇನೊ ?
ಭಾರತ ಮಾತೆಗೆ ನೀನು ಮಗನೇನೋ ಪಾಪಿ !

(ಜಸವಂತ ನಗು ನಿಲ್ಲಿಸಿ ನಡುಗುವು)
ಅಯ್ಯೋ ಕುನ್ನಿ ಕಡೆಗೂ ನೀನೆನ್ನ ವಂಚಿಸಿದೆಯಾ !
ಭ್ರಾತೃದ್ರೋಹಿ, ಮಾತೃದ್ರೋಹಿ, ನಯವಂಚಕ
ವಂಚನೆಯ ಮಂಚದಲಿ ನನ್ನ ಪಟ್ಟಿರಿಸಿದೆಯಾ ?
ಎಂಜಲುಣ್ಣುವ ನಾಯಿ ಭಾರತಾಂಬೆಯ ಕನಸ
ನುಚ್ಚು ನೂರಾಗಿಸುವ ಪಾತಕಿಯೆ
ನೀನಿನ್ನು ಬದುಕಿರಲು ಬಾರದು !
ದ್ರೋಹಿಗಾಗಲೆ ಬೇಕು ತಕ್ಕ ಶಾಸ್ತಿ !
ದ್ರೋಹಿಗಾಗಲೆ ಬೇಕು ತಕ್ಕ ಶಾಸ್ತಿ !

('ಜೈ ಭವಾನಿ' ಖಡ್ಗವಿರಿದು ಮುಂದೆ ನುಗ್ಗಿದಾಗ ಕತ್ತಿಗಳು ಮಿಂಚುವುವು. ಆರ್ಭಟಿಸಿ ಕುಣಿಯುವುವು. ಇದ್ದಕ್ಕಿಂತೆಯೇ ಬಲೆಯೊಂದು ಮೇಲಿಂದ ಬೀಳುವುದು. ಶಿವಾಜಿ ಸೆರೆಸಿಕ್ಕುವನು)

ಆಗ, ರಂಗಭೂಮಿ ಕತ್ತಲಾಗಿ ಸುಲ್ತಾನನ ಹೊರತು ಯಾರೂ ಇಲ್ಲವಾಗುವರು. ಕತ್ತಿಗಳು ಕುಣಿಯುತ್ತಿದ್ದ ಎಡೆಗಳಲ್ಲಿ ಪ್ರೇತಗಳು ಕಾಣಿಸಿಕೊಳ್ಳುವುವು. ಕತ್ತಲು ಬೆಳಕಿನ ವಿನ್ಯಾಸ, ಗುಡುಗು ಮಿಂಚುಗಳ ಭಯಂಕರ ಆಸ್ಫೋಟ)

ದೃಶ್ಯ ೬ :
ಮಲ್ಲ : ಇಲಿಯೊಂದು ಬಿತ್ತು ಬಲೆಯಲ್ಲಿ
ಅಲ್ಲ – ಬೋನಿನಲಿ !
ಬೆಟ್ಟದ ಇಲಿಯೂsss

ಮಲ್ಲಿ (ಪ್ರವೇಶಿಸಿ)

ಲೇಯ್ ಮಲ್ಲಾ,
ನಿನ್ನಾಗಸ್ತೀನಿ ಇಲ್ಲಾ !

ಮಲ್ಲ: ಅರೇ ಅಲ್ಲಾ !!
ಪಿಲ್ಲಿ: (ಮತ್ತೊಂದು ಕಡೆಯಿಂದ ಪ್ರವೇಶಿಸಿ)
ಕೋಳಿಬಾಯ್ಲಿ ಹಲ್ಲಿಲ್ಲಾ !

ಮಲ್ಲಿ–ಪಿಲ್ಲಿ : ಅಯ್ಯೋ ನಿನ್ ಸೊಲ್ಲಡಗ, ನಿನ್ ಗುಂಡಿಗಿಕ್ಕ !
ಕಣ್ಣಿಂಗಿ ಕಪಾಳ ಸಿಡಿಯಾ !
ಮತ್ತೆ ಇಲಿ ಅಂತೀಯಾ ನಮ್ಮ ಶಿವರಾಜರ್ನ ?

ಮಲ್ಲ : ತೆಪ್ಪಾತು ! ತೆಪ್ಪಾತು ! ತೆಪ್ಪಾತು !
(ಕೆನ್ನೆಗಳನ್ನು ಬಡಿದುಕೊಳ್ಳುವನು)

ಹರ್ಷ ಅಪ್ಪಾ !
ಇಲ್ಲ ಕೇಳ್ರೇ ಕೇಳ್ರೇ

ಇಬ್ಬರೂ : ಹೇಳು ಹೇಳೂ

ಮಲ್ಲ: ಶಿವಾಜಿ ಮಾರಾಜ್ರು ಸೆರೆಯಾದ್ರು
ಆಗ್ರಾಪಟ್ಟಣದ ಕಾರಾಗೃಹದಲ್ಲಿ
ಸೆರೆಯಾಳಾಗಿ ಮರೆಯಾದ್ರು !
ತದಿಗಿಣ ತೋಂ ತದಿಗಿಣ ಥೈ

(ಬಯಲಾಟದ ವೇಷದಾರಿಯಂತೆ ಕುಣಿಯುವನು)

ಮಲ್ಲಿ : ಅಷ್ಟೇ ತಾನೆ . . . !
ಮಲ್ಲ : ಇನ್ನೆಷ್ಟು ಆಗ್ಬೇಕು ?
ಪಿಲ್ಲಿ : ಅಯ್ಯೋ ಮೂದೇವಿ. ನಮ್ಮ ಶಿವರಾಯ್ತು ಜಾಣರು ಜಾಣರು ಜಾಣರು !
ಮಲ್ಲಿ: ನಿಮ್ಮ ಸುಲ್ತಾನ ನುಸುಳಿದ ಚಾಪೆ ಕೆಳ್ಗೆ
ದೇಶ ದ್ರೋಹಿ ಜಸವಂತ ರಂಗೋಲಿ ಕೆಳ್ಗೆ
ನಮ್ಮ ಶಿವರಾಜ್ರು ನುಸಿತಾರೆ ಚದುರ ಬಿಲ್ಲೆ ಕೆಳ್ಗೆ
ನೋಡೋ ನೋಡೋ ರಾಜ... ಹೊಯ್ ಮಲ್ಲರಾಜ !

ಮಲ್ಲ: ಮಲ್ಲಿ ನೀನು ಕರ್ನಾಟಕದೋಳು
ಕನ್ನಡ ನಾಡಿನೋಳು ಮಲಿಗೆ ಬೀಡಿನೋಳು
ಅದ್ಕೆ ನೀನು ಮಲ್ಲಿ, ನನ್ನ ಮನದ ಮಲ್ಲಿಗೆ !
ಏ ಪಿಲ್ಲಿ
ಚಿಲಿಮಿಲಿ ಚಿಲಿಮಿಲಿ ಚಿಲ್ಲಿ ಪಿಲ್ಲಿ
ನೀನು ಮಾರಾಟ ದೇಶದೊಳು ರಾಣಿಗಲ್ಲಿ
ಪಿಳಿ ಪಿಳಿ ಪಿಳಿ ಕಣ್ಣು ಬಿಡೋ ಕಳ್ಳಿ !

ಇಬ್ಬರು & ಅದಿರ್ಲಿ ಮುಂದೇನಾತು ನಿಮ ಆಸ್ಥಾನದಾಗೆ : ಬಗೂಳ
ಮಲ್ಲ : ಬಗುಳ್ತೀನಿ. ಬಗುಳ್ತೀನಿ ಬೌ ! ಬೌ ! ಬೌ !
ನಮ್ಮ ಸುಲ್ತಾನ್‌ರನ್ನ ಏನಂತ ತಿಳಿದ್ರೇ
ಸೂಜಿ ದಾರ ಮುರ್ದು
ಔರಂಗಜೇಬಿನಾಗ ಹಾಕು !
ಅಂದ ಹಾಗೆ, ಒಗಟೆ ನೀವು ಬಿಡಿಸಬೇಕು !

ಇಬ್ಬರೂ (ಬೆರಗಾಗಿ) ಒಗಟೆ ! ಸೂಜಿ ! ದಾರ ! ಮುರ್ದು !
ಔರಂಗಜೇಬು !
ಏನೇನೋ ಹೇಳ್ತಿಯಲ್ಲೋ ಅರ್ಥವಾಗದ್ದು !

ಮಲ್ಲ: ಕೇಳ್ರೆ. ಇಲ್ಲಿ..
ತಾಜಮಹಲು ಕಟ್ಟಿಸಿದಂಥ ಷಹಜಹಾನ
ಮುಮ್ತಾಜಳಲ್ಲಿ ಪಡೆದಿದ್ದ ಹಾಲ್ಕು ಮಕ್ಕಳ್ನ
ಸೂಜಿ, ದಾರ, ಮೂರಾದ ಮೂವರಾಯ್ತು
ನಾಲ್ಕನೆಯನವನೆ ಈ ನಮ್ಮ ಔರಂಗಜೇಬ !
ಈಗ ನಾಲ್ಕೂ ಹೆಸರು ಕೂಡ್ಲಿ ....

ಪಿಲ್ಲ : ಸೂಜಿ ಅಂದರೆ ಸೂಜಿ. ದಾರ ಅಂದರೆ ದಾರ.
ಮುರಾದ್ ಅಂದ್ರ ಮುರ್ದು ಔರಂಗಜೇಬಗೆ ಅಂದರೆ
ಔರಂಗಿ ಜೇಬಿಗೆ

ಹ ಹ್ಹ ಹ್ಹ ಹ್ಹ ಹ್ಹಾ ! ಹಾಕು !

ಮಲ್ಲಿ : ಚೆನ್ನಾಗಿದೆ ! ಚೆನ್ನಾಗಿ ನಿನ್ನ ಜೋಡಣೆ ಶುದ್ದ ಪೆದ್ದು ಅಂತಿದ್ವು, ಸ್ವಲ್ಪ ತಿರುಳು ಇರೋ ಹಂಗೈತೆ !

ಮಲ್ಲ : ಅಷ್ಟೇ ಅಲ್ಲ ಕಣ್ರೇ
ನ್ನನ ಜೋಡಣೆಗಿಂತ
ಔರಂಗಜೇಬನ ಸಾರಣೆ ಕಾರಣೆ ಕೇಳ್ರೀ ....

ಮೂವರನ್ನೂ ಮುಗಿಸ್ದಾ
ಅಪ್ಪನ್ ಸೆರೆ ಹಾಕ್ದಾ
ಪಟ್ಟಿಕ್ ಬಂದು ಆಳೇ ಬಿಟ್ಟಿ
ಸುಲ್ತಾನ್ ದವಲತ್ ತೋರ್ದಾ
ಏನಂತಾ ತಿಳಿದ್ರೀ ನಮ್ ಸುಲ್ತಾರನ್ನಾ !

ಕತ್ತೇಂತಾ ತಿಳಿದ್ವು
ಹೆತ್ತ ತಂದೆ ತಿಂದ ಕತ್ತೆ ಮಗನ್ನ
ಜಾಣಾ ಅಂತಾ ಬೊಗಳ್ತೀಯಾ ಪೆದ್ದರಮನ್ನ !

ಮಲ್ಲಿ : ಆ ಹಲ್ಕಾ ಕೆಲಸ ಮಾಡೋರೆಲ್ಲ ! ನಮ್ಮ ಶಿವರಾಜರು
ಧೈರ್ಯದಿಂದ ಎದುರರಸತಾರೆ ಯಾರನ್ನಾದ್ರು
ಸಮಯ ಬಂದ್ರೆ ಪಯದಾಗೆ ಜಾರಿಕೊಳ್ತಾರೆ
ಏಟಿಗೆ ಪೇಟಿಗೆ ಸಿಕ್ಕೋರಲ್ಲ ಥೇಟ್ ಆಗ್ತಾರೆ !

ಮಲ್ಲ : ನಿಜ್ವಾ ?

ಇಬ್ಬರೂ : ಕಣೀ ಕೇಳೂ

ಕಣಿಯ ಹೇಳುವೆ ಕೇಳೊ ಮಲ್ಲ ! ನಾನೊಂದು ಕಣಿಯ ಹೇಳುವ ಕೇಳೊ ಮಲ್ಲ ॥
ಕಣಿಯ ಹೇಳುವ ಕೇಳೊ ಮಲ್ಲ ॥
ಕೇಳ್ರವ್ವೋ ಕೇಳ್ರಿ ಕೇಳ್ರಿ ಕಣೀ ಕೇಳ್ರೀ
ಕಣಿ ಕಣಿ ಕಣೀ !
ಅಂದದ ಕಣಿ ಚಂದದ ಕಣಿ
ಅಂದಿನ ಕಣಿ ಇಂದಿನ ಕಣಿ
ಕಣಿ ಕಣಿ ಕಣಿ ಕಣೀ ಕಣೀ
ಎಂದೆಂದೂ ಮರೆಯದಂಥ ಸರಿ ತುಂಬಿದಾ ಕಣಿ

ಕಣಿಯ ಹೇಳುವೆ ಕೇಳೋ ಮಲ್ಲಾ ! ನಾನೊಂದು
ಕಣಿಯಾ ಹೇಳುವೆ ಕೇಳೊ ಮಲ್ಲ ॥

ಗಿಡದೆ ಗುಲಾಬಿಯು ಅರಳೂವಾಗ ! ಅದ್ಕೆ
ಕೋಗಿಲೆ ರಕ್ತವ ಬಸಿಯುತ್ತಂತೆ !
ನರದ ನೆತ್ತರನೆಲ್ಲ ಬಸಿದಾ ಮ್ಯಾಲೆ
ಬೆಳಗಾಗ ಅರಳುತ್ತೆ ಕೆಂಪು ಗುಲಾಬಿ
ಅರಳುತ್ತೆ ಗಿಡದಾಗೆ ಕೆಂಪು ಗುಲಾಬಿ !
ರಕ್ತsವ ಕೊಟ್ಟ ಅನುರಕ್ತಾ ಕೋಗಿಲೆ
ಸತ್ತು ಹೋಗಿರುತೆ ಬೆಳಗಾದಾಗ ॥
ಇದು ನಮ್ಮ ದೇಶದ ಹಿರಿಯ ಆದರ್ಶ !
ಒಂದು ಬಲಿಯಾಗಿ ಮತ್ತೊಂದು ಬೆಳಸುವ
ತ್ಯಾಗದ ಜೀವನ ಭರತದ ಬದುಕು

ಮಲ್ಲ : ಅದಿರ್ಲಿ ಶಿವಮಹಾರಾಜನ ಗತಿ ಏನಾತು ಹೇಳ್ರೀ
ಮಲ್ಲ–ಪಿಲ್ಲಿ : ಕಣಿಯ ಹೇಳುವೆ ಕೇಳೊ ಜಾಣ ! ನಾನೊಂದು
ಕಣಿಯ ಹೇಳುವೆ ಕೇಳೊ ಜಾಣ ॥

ಜಾಣ ಶಿವರಾಯ್ರು ಬಹು ಜಾಣ್ರು
ಹಣ್ಣು ಬಾಗಿನ ವ್ರತವ ಕೈಕೊಡ್ರು

ನಿತ್ಯವೂ ಹಣ್ಣು ದಾನ ಮಾಡಿದರು
ನೂರಾರುಬುಟ್ಟಿಗಳು ದೊಡ್ಡ ದೊಡ್ಡ ಹೆಡಿಗೆಗಳು

(ಹಾಡು ಹರಿಯುವಾಗ ಹಣ್ಣಿನ ಗೂಡೆಗಳ ಓಡಾಟ ನಡೆಯುತ್ತಿರಬೇಕು)
ಸೆರೆಮೆಯಿಂದ ಅರಮನೆಗೆ ಅಲ್ಲಲ್ಲಾ
ಸೆರೆಮನೆಯಿಂದ ಗುರುಮನೆಗೆ, ನೆರೆಮನೆಗೆ
ಗಿರಿಮನೆಗೆ ಸಿರಿಮನೆಗೆ ಎಲ್ಲರ ಮನೆಗಳಿಗೆ
ನಡೆದಾಡಿ ನುಡಿದಾಡಿ ಗುಡುಗಾಡಿದವು ॥

ಕಣಿಯ ಹೇಳುವೆ ಕೇಳೊ ಮಲ್ಲ ! ನಾನೊಂದು
ಕಣಿಯ ಹೇಳುವೆ ಕೇಳೊ ಮಲ್ಲ ॥
ಕಣಿ ಕಣಿ ಕಣಿ ಸಗ್ಗದ ಕಣಿಯಾ
ಮುಗ್ಗಿದ್ ಜೋಳ ಅಲ್ಲ ಸುಗ್ಗಿಯ ಕಣಿಯಾ ॥

ವಚನ: ದಿನಾ ಸಾಯೋರ್ಗೆ ಅಳೋರ್ಯಾರು ಅಂದಂಗೆ ಆಯಿತು
ಆಗ್ರಾದಲ್ಲಿ, ದಿನಬೆಳಗೂ ತಪಾಸಣೆ ಮಾಡ್ತಿದ್ದ
ಕಾರಾಗೃಹದ ರಕ್ಷಕರು ಎರಡು ದಿನ ಮಾಡಿದ್ರು
ಮೂರನೇ ದಿನಕ್ಕೆ ಬಿಟ್ಟು ಬಿಟ್ರು
ಅದೇ ಸಮಯ ಕಾಯ್ತಿದ್ದ ನಮ್ಮ ಶಿವರಾಜನು

ಹಾಡು : ಪಂಜರದ ಗಿಣಿಯಂದು ಮಂಗಮಾಯ
ಅಂಜನಾಸುತನಂತೆ ಮರೆಸಿ ಕಾಯ
ಬಾವಾಡಿ ಗರಿಗೆದರಿ ಗಗನದಲ್ಲಿ
ಹಾಆಡಿ ಬಂದಿತ್ತು ಉನೆಯ ಬಳಿಯಲ್ಲಿ

ಮಲ್ಲ : ಹೌದಾ .. . . . !!

ಮಲ್ಲಿ–ಪಿಲ್ಲಿ : ಕಣಿ ಕೇಳು ಇನ್ನೂ ಒಂದ್ ಕಣೀಯ !

ಹಾಡು : ಸತ್ಯಕ್ಕೆ ಜಯವು ನಿತ್ಯ ! ಭಾರತದ
ಸತ್ಯಕ್ಕೆ ಜಯವು ನಿತ್ಯ ॥ಪ॥
ಮಿಥ್ಯವಾದಿಗಳೆಲ್ಲ ಕತ್ತೆತ್ತಿ ಮೆರೆದಿಲ್ಲ
ಗೊತ್ತು ಗುರಿ ಇಲ್ಲದೆ ಓಡಿದವರೆಲ್ಲ
ಸತ್ಯ ಶರಣರ ದೇಶ ಭಕ್ತಿ ಭಾವುಕ ಕೋಶ
ಬಿತ್ತಿ ಬೆಳೆವರು ಧರ್ಮವೀ ದೇಶದಲ್ಲಿ ॥೧॥

ಪುಂಡರು ಬಂದರು ಭಂಡರು ಬಂದರು
ಪ್ರಚಂಡ ಪಾಷಂಡಿ ಪರಕೀಯರು ಬಂದರು
ಉಂಡುಟ್ಟು ನಮ್ಮನ್ನೇ ಬಂಡುಗೆಡೆದರು ಕೂಡ
ಗೂಡಾಗದಿಪ ನಮ್ಮ ಭರತ ಭೂಮಿಯಲ್ಲಿ ॥೨॥

**ದೃಶ್ಯ ೭ ರಾಜಗಡದ ಕೋಟೆ**

(ತೆರೆ ಸರಿದಾಗ ಒಂದೇ ಒಂದು ಹಣತೆ ಮಿನುಗುತ್ತಿರುತ್ತದೆ ಕೋಟೆಯಲ್ಲಿ)
–ಹಿನ್ನೆಲೆಯಲ್ಲಿ–

ಇದು ರಾಜಗಡದ ಕೋಟೆ, ಬತೇರಿಯನ್ನೇರಿ ನಿತ್ಯವೂ ರಾಜಮಾತೆ ಜೀಜಾಬಾಯಿತ ಉತ್ತರ ದಿಕ್ಕಿಗೆ ಮುಖ ಮಾಡಿ ನಿಲ್ಲುತ್ತಾಳೆ. ಮನದಲ್ಲೇ ತುಳಜಾಭವಾನಿಯನ್ನು ಕುರಿತು ಧ್ಯಾನಗೈಯುತ್ತಾಳೆ ಎಂದು ಹರಸಿ ಹಂಬಲಿಸಿ ಬೇಡುತ್ತಾಳೆ. ಆದರೆ ಅವಳ ಪ್ರಾರ್ಥನೆಗೆ ಫಲ ದೊರಕಿರಲಿಲ್ಲ. ಬಹುದಿನಗಳವರೆಗೆ ಅದೊಂದು ಮೊಲದ ಕೊಂಬಾಗಿತ್ತು ಅವಳ ಪಾಲಿಗೆ. ಅಂತಹ ನಿರಾಶೆಯ ನೆರಳಲ್ಲಿ ಆಶಾಜ್ಯೋತಿಯೊಂದು ಮೂಡಿದಂತೆ ಉತ್ತರದ ಕಡೆಯಿಂದ ಒಂದು ಬೈರಾಗಿಗಳ ತಂಡ ಬಂತು. ರಾಜಮಾತೆ ಜೀಜಾಬಾಯಿಯವರ ಸುದರ್ಶನವನ್ನಪೇಕ್ಷಿಸಿ ಕೋರಿಕೆ ಪತ್ರ ಸಲ್ಲಿಸಿತು. ಜೀಜಾಬಾಯಿಗೆ ಅದು ಹರ್ಷ! ಮಹಾತ್ಮರ ದರ್ಶನದಿಂದ ಮಗನಿಗೆ ಒಳಿತಾದೀತೆಂದು ಬಗೆದು ರಾಜಗಡದ ದಿಬ್ಬದ ಮೇಲೆ ಕ್ರಿ.ಶ.೧೬೬೬ ನವೆಂಬರ್ ೨೦ ರಂದು ಆ ಗೋಸಾಯಿಗಳ ಸಂದರ್ಶನಕ್ಕೆ ಅನುಮತಿ ದೊರೆಯಿತು. ಅಂದು...

ಸಿವಜಿ: (ಬೈರಾಗಿ ವೇಷಧಾರಿಯಾಗಿ ತಾಳ ತಂಬೂರಿ ಹಿಡಿದು ಹಾಡಿ ನರ್ತಿಸುತ್ತಾ)

ಎಲ್ಲಿಂದ ನೀ ಬಂದೆ
ಅಲ್ಲಿಂದ ಏನ್ ತಂದೆ
ಇಲ್ಲಿಂದ ಏನೊಯ್ವೆ ಮುಂದೇ
ನೀನಾರು ನಾನಾರು
ನಿನ್ನವರು ಇಲ್ಲಾರು
ಇದಕೇಕೆ ಈ ಮೋಹವಣ್ಣಾ !

ಅಡವಿಯಲಿ ಮನೆ ಮಾಡಿ
ಮಡದಿಯನು ಒಡಗೂಡಿ
ನೀನಕ್ಕು ನಗುವೆಲ್ಲೊ ಅಣ್ಣಾ ॥
ಮನೆಯೆಲ್ಲ ಬಯಲಾಗಿ
ಮಡದಿ ತಾ ಹೋಹಾಗ
ನಿನಗೆಲ್ಲಿ ಆ ನಗುವೊ ಅಣ್ಣ ॥

ನೇಪಥ್ಯದಲ್ಲಿ: ರಾಷ್ಟ್ರವೀರ ಶ್ರೀ ಶಿವಪ್ರಭುಗಳ ಮಹಾಮಾತೆ
ಜೀಜಾಬಾಯಿಯವರು ದಯಮಾಡಿಸುತ್ತಿದ್ದಾರೆ.. ..

(ವಾದ್ಯಗೋಷ್ಠಿಗಳ ಮೊಳಗು ಇಬ್ಬರು ನರ್ತಕಿಯರು ಸ್ವಾಗತ ಕೋರುವ ಭಂಗಿಯಲ್ಲಿ ನರ್ತಿಸುತ್ತಾ ಬರುವರು ಹಿಂದೆ ರಾಜಮಾತೆಯವರು. ರಂಗವನ್ನು ಪ್ರವೇಶಿಸುತ್ತಾಳೆ)

ಜೀಜಾ : ಸ್ವಾಗತ .. ಸದಾ ಲೋಕ ಸಂಗ್ರಹ ಕಾರ್ಯದಲ್ಲಿ ನಿರತರಾಗಿರುವ
ಅಪರೋಕ್ಷ ಜ್ಞಾನಿಗಳಿಗೆ ಹಾರ್ದಿಕ ಸ್ವಾಗತ
ಅಂತೆಯೇ ತಮ್ಮ ಶ್ರೀ ಚರಣಗಳಿಗೆ

ಪುಂಡರು ಬಂದರು ಭಂರು ಬಂದರು
ಪ್ರಚಂಡ ಪಾಷಂಡಿ ಪರಕೀಯರು ಬಂದರು
ಉಂಡುಟ್ಟು ನಮ್ಮನ್ನೇ ಬಂಡುಗಡೆದಿರು ಕೂಡ
ಗೂಡಾಗದಿಹ ನಮ್ಮ ಭರತ ಭೂಮಿಯಲ್ಲಿ ॥೨॥

.. ನರ್ತಿಸುತ್ತಾ ನಿರ್ಗಮನ ..

ದೃಶ್ಯ ೭ : ರಾಜಗಡದಕೋಟೆ
(ತೆರೆ ಸರಿದಾಗ ಒಂದೇ ಒಂದು ಹಣತೆ ಮಿನುಗುತ್ತಿರುತ್ತದೆ ಕೋಟೆಯಲ್ಲಿ)

– ಹಿನ್ನೆಲೆಯಲ್ಲಿ –

ಇದು ರಾಜಗಡದ ಕೋಟೆ. ಬತೇರಿಯನ್ನೇರಿ ನಿತ್ಯವೂ ರಾಜಮಾತೆ ಜೀಜಾಬಾಯಿ ಉತ್ತರದಿಕ್ಕಿಗೆ ಮುಖ ಮಾಡಿ ನಿಲ್ಲುತ್ತಾಳೆ; ಮನದಲ್ಲೇ ತುಳಜಾಭವಾನಿಯನ್ನು ಕುರಿತು ಧ್ಯಾನಗೈಯುತ್ತಾಳೆ. ದೆಹಲಿಯ ದರ್ಬಾರಿಗೆ ಯೋಧ ತನ್ನ ಮಗ ಸುರಕ್ಷಿತವಾಗಿ ಮನೆಗೆ ಹಿಂತಿರುಗಲಿ ಎಂದು ಹರಸಿ ಬಹುದಿನಗಳವರೆಗೆ ಅದೊಂದು ಮೊದಲ ಕೊಂಬಾಗಿತ್ತು. ಅವಳ ಪಾಲಿಗೆ, ಅಂತಹ ನಿರಾಶೆಯ ನೆರಳಲ್ಲಿ ಆಶಾಜ್ಯೋತಿಯೊಂದು ಮೂಡಿದಂತೆ ಉತ್ತರ ಕಡೆಯಿಮದ ಒಂದು ಬೈರಾಗಿಗಳ ತಂಡ ಬಂತು. ರಾಜಮಾತೆ ಜೀಜಾಬಾಯಿಯವರ ಸಂದರ್ಶನ್ನಪೇಕ್ಷಿಸಿ ಕೋರಿಕೆ ಪತ್ರ ಸಲ್ಲಿಸಿತು. ಜೀಜಾಬಾಯಿಗೆ ಅದು ಹರ್ಷ ! ಮಹಾತ್ಮರ ದರ್ಶನದಿಂದ ಮಗನಿಗೆ ಒಳಿತಾದೀತೆಂದು ಬಗೆದು ರಾಜಗಡದ ದಿಬ್ಬದ ಮೇಲೆ ಕ್ರಿ.ಶ. ೧೬೬೬ ನವೆಬರ್ ೨೦ ರಂದು ಆ ಗೋಸಾಯಿಗಳ ಸಂದರ್ಶನಕ್ಕೆ ಅನುಮತಿ ದೊರೆಯಿತು. ಅಂದು...

ಶಿವಾಝಿ: (ಬೈರಾಗಿ ವೇಷಧಾರಿಯಾಗಿ ತಾಳ ತಂಬೂರಿ ಹಿಡಿದುಹಾಡಿ ನರ್ತಿಸುತ್ತಾ)
ಎಲ್ಲಿಂದ ನೀ ಬಂದೆ
ಅಲ್ಲಿಂದ ಏನ್ ತಂದೆ
ಇಲ್ಲಿಂದ ಏನೋಯ್ವೆ ಮುಂದೇ
ನೀನಾರು ನಾನಾರು
ನಿನ್ನವರು ಇಲ್ಲಾರು
ಇದಕೇಕೆ ಈ ಮೋಹವಣ್ಣಾ ॥

ಅಡವಿಯಲಿ ಮನೆಮಾಡಿ
ಮಡದಿಯನು ಒಡಗೂಡಿ
ನೀನಕ್ಕು ನಗುವೆಲ್ಲೊ ಅಣ್ಣಾ ॥
ಮನೆಯಲ್ಲ ಬಯಲಾಗಿ
ಮಡದಿ ತಾ ಹೋಹಾಗ
ನಿನಗೆಲ್ಲಿ ಆ ನಗುವೊ ಅಣ್ಣ ॥

ನೇಪಥ್ಯದಲ್ಲಿ : ರಾಷ್ಟ್ರವೀರ ಶ್ರೀ ಶಿವಪ್ರಭುಗಳ ಮಹಾಮಾತೆ
ಜೀಜಾಬಾಯಿಯವರು ದಯ ಮಾಡಿಸುತ್ತಿದ್ದಾರೇeeee...

(ವಾದ್ಯಗೋಷ್ಠಿಗಳ ಮೊಳಗು ಇಬ್ಬರು ನರ್ತಕಿಯರು ಸ್ವಾಗತ ಕೋರುವ ಭಂಗಿಯಲ್ಲಿ ನರ್ತಿಸುತ್ತಾ ಬರುವರು ಇಂದೆ ರಾಜಮಾತೆಯವರು. ರಂಗವನ್ನು ಪ್ರವೇಸಿಸುತ್ತಾಳೆ)

ಜೀಜಾ : ಸ್ವಾಗತ ಸದಾಲೋಕ ಸಂಗ್ರಹ ಕಾರ್ಯದಲ್ಲಿ ನಿರತರಾಗಿರುವ
ಅಪರೋಕ್ಷ ಜ್ಞಾನಿಗಳಿಗೆ ಹಾರ್ದಿಕ ಸ್ವಾಗತ
ಅಂತೆಯೇ ತಮ್ಮ ಶ್ರೀ ಚರಣಗಳಿಗೆ –
(ನಮಿಸಲು ಉದ್ಯುಕ್ತಳಾದುದನ್ನು ಕಂಡು ಶಿವಾಜಿ)

ಶಿವಾಜಿ: ಅಮ್ಮಾ !! (ಜೋರಾಗಿ ಕೂಗಿಕೊಳ್ಳುವನು)
(ಜೀಜಾಬಾಯಿ ಸ್ತಂಭೀಭೂತಳಾಗಿ ಒಮ್ಮೆಲೆ)

ಜೀಜಾ : ಶಿವೂ

ಶಿವಾ : ಅಮ್ಮಾ
ಜೀಜಾ : ಶಿವೂ
ಜೀಜಾ : ಶಿವೂ ನನ್ನ ಶಿವಾಜೀ
(ಇಬ್ಬರೂ ಓಡಿ ಬಂದು ಆಲಿಂಗಿಸಿಕೊಳ್ಳುವರು. ಬಾಯಿಗಳು ಅಮ್ಮ ಅಮ್ಮ ಶಿವು ಶಿವು ಎನ್ನುತ್ತಿರುತ್ತವೆ)
ಬೈರಾಗಿ : ದೇವ ಬಂದs ಮನೆಗೆ ಸ್ವಾಮಿ ಬಂದs
ತಂಡ : ದೀನ ಪಾಲಕ ಶಿವರಾಜ ಬಂದ ॥ದೇವ ಬಂದ॥

ಮಹಾಶೂರ ರಾಷ್ಟ್ರವೀರ
ದೇವ ತನಯ ಬಂದನೋ
ಶಹಜಿ ಸುಪುತ್ರ ಬಂದ
ನಮ್ಮ ಶ್ರೀ ಶಿವಾಜಿ ಬಂದ ॥ದೇವ ಬಂದ॥

ದೇವ ಬಂದನೊ ನಮ್ಮ
ಜೀವ ಬಂದನೋ
ಜೀಝುಯಾನಂದದ
ಚಿಲುಮೆ ಬಂದsನೋ ॥ದೇವ ಬಂದ॥
(ನರ್ತಿಸುತ್ತಾ ನಿರ್ಗಮನ)

ದೃಶ್ಯೆ : ೮ ರಾಜಬೀದಿ
ಮಲ್ಲಿ : ಕೇಳ್ರಪೋ ಕೇಳ್ರಿ ಕೇಳ್ರಿ !

ಶಿವ್ರಾಜಪ್ನೋರು
ಭವಾನಿ ಮಕ್ಕಳ್ರು
ಸಹ್ಯಾದ್ರಿ ಸಿಂಹ ಅಂಬೋರು
ರಾಯ್‌ಗಡದ ಕೋಟೆಗೆ ಬಂದೇಬಿಟ್ರು ॥

ಔರಂಗ ಜೇಬನಿಗೆ ಚಳ್ಳೇಹಣ್ಣು
ಬಿಜಾಪುರದೋವ ಮುಕ್ಕಿದ ಮಣ್ಣು
ಮತ್ತೇ ಗೋವೆಯು ವಶವಾಯ್ತು
ಪೋರ್ಚುಗೀಸರೆಲ್ಲಾ ಚೂರಾದ್ರು ॥೧॥

ಜಂಜೀರ ಕೋಟ ಜಲದುರ್ಗ
ಸಿಂಹಾಗಡದ ದುರ್ಗಮ ದುರ್ಗಾ
ನಡೆದೇ ಹೋಯಿತು ದೊಡ್ಡ ದಗಾ !
ಆದರು ಶಿವಾಜಿ ಪಾಪಿಗೆ ಭರ್ಗ ! ॥೨॥

ಕಲ್ಯಾಣದಲ್ಲಿ ಒಡ್ಯಾಣ
ಪುರಂದರದಲ್ಲಿ ಐರಾಣ
ಲೋಹಗಡ ಎಲ್ಲ ಗಡಾಗಡ
ನಡುಗಿತ್ತು ಸಾಲೇರು ನಡುಗಡ್ಡ ॥೩॥

ಮಲ್ಲಿ–ಪಿಲ್ಲಿ : (ಪ್ರವೇಶಿಸಿ)
ಲೆ ಲೆ ಲೇ ಮಲ್ಲ

ನಿನ್ ಬಾಯಿಗೆ ಬೆಲ್ಲ ॥
ಹಾಲು ಜೇನು ಬೆಲ್ಲ
ನಾಡಿನ ಜನರಿಗೆ ಎಲ್ಲ ॥

ಮಲ್ಲ: ಏನ್ರೇ ಏನೋ ತಂದುಗ್ಯೆತೇ ಒಸಗೆ !

ಮಲ್ಲಿ–ಪಿಲ್ಲಿ : ಒಸಗೆ ಒಸಗೆ ಒಸಗೆ !
ರಾಜಗಡದಾಗೆ ಒಸಗೆ ॥

ಹಬ್ಬದ ಒಸಗೆ
ದಿಬ್ಬಣದೊಣಗೆ
ಒಸಗೆ ಒಸಗೆ ಒಸಗೆ !
ರಾಜಗಡದಾಗೆ ಒಸಗೆ ॥

ಮಲ್ಲ: ಏನೇನು ಹಬ್ಬವಾ..? ಒಬ್ಬಟ್ಟಾ...??
ಮದ್ವೇನಾ..? ದಿಬ್ಬಣವಾ..?? ..??

ಮಲ್ಲಿ–ಪಿಲ್ಲಿ: ಅಭಿಷೇಕ ಆನಂದದ ! ಅಭಿಷೇಕ
ಪಟ್ಟಾಭಿಷೇಕ ! ಶಿವರಾಜರಿಗೆ ।

ಶ್ರೀ ಶಿವಾಜಿಗೆ ಅಭಿಷೇಕ
ಸಹ್ಯಾದ್ರಿ ಸಿಂಹಕೆ ಅಭಿಷೇಕ
ರಾಜ್ಯಗಡದಲಿ ರಾಜ್ಯಾಭಿಷೇಕ
ಶತ್ರುಗಡಣಕೆ ನಿಶ್ಯೇಕ
ಸಪ್ತನದಿಗಳ ಶುದ್ಧೋದಕ
ಬಂದಿತು ಪವಿತ್ರ ಪುಣ್ಯೋದಕ ॥೧॥

(ಹಿನ್ನೆಲೆಯಲ್ಲಿ ಗಂಗೇ ಚ ಯಮುನೇ ಚೈವ
ಗೋದಾವರೀ ಸರಸ್ವತಿ – ಎಂಬ ಘೋಷ)
ಪಾವನ ಪಂಚಾಮೃತ ಸ್ನಾನ
ಸಾಗ ಸಲಿಲದ ಸಿಂಚನ

ಕುಶಾಲ ತೋಪಿನ ಘೋಷಣ
ಋತ್ವಿಜ ಮಂತ್ರದ ಆಪೋಷಣ ॥೨॥

ಮಂಗಳೆಯರು ಚೆಲು ಚೆನ್ನೆಯರು
ಮಂಗಳ ತಿಲಕವನಿಟ್ಟರು
ದೀಪಾರತಿಗಳ ಬೆಳಗಿದರು
ಶಿವಮಹರಾಜರ ಹರಸಿದರು ॥೩॥

ಆಹ್ವಾನ ಶುಭದಾಹ್ವಾನ
ಪಟ್ಟಾಭಿಷೇಕದ ಆಹ್ವಾನ॥
ಹೋಯಿತು ಜನತೆಗೆ ಆಹ್ವಾನ

ದಶ ದಿಕ್ಕುಗಳಿಗೂ ಆಹ್ವಾನ ॥೪॥

ಭಗಾನಗರದ ಬಾದಶಹಂಗೇ
ಈಸ್ಟ್ ಇಂಡಿಯಾ ಕಂಪನಿಯ ಆಕ್ಸಿಂಡೇನ್‌ಗೆ
ದೇಶ ವಿದೇಶಧ ರಾಜರುಗಳಿಗೆ
ರಾಯಭಾರಿ ಬಿರುದಾಂತರಿಗೆ ॥೫॥

ಕಲಾಕೋವಿದರು ಕವಿವರ್ಯರಿಗೆ
ನಾದಯೋಗಿ ನವಜಾತರಿಗೆ
ಜನಪದದವರಿಗೆ ಚಾರಣರಿಂಗೇ
ಧರ್ಮ ಗುರುಗಳಿಗೆ ಧಾಮಿಕರಿಂಗೇ ॥೬॥

ಆಹ್ವಾನ ಶುಭದಾಹ್ವಾನ
ಹೋಯಿತು ಜನತೆಗೆ ಆಹ್ವಾನ
ನೆರೆದಿಹ ಸಭಿಕರೆ ನಿಮಗಾಹ್ವಾನ
ದಯಮಾಡಿಸಿರಿ ಇದೋ ನಮನ ॥೭॥

ದೃಶ್ಯ : ೮ ರಾಜಗಡದಾಸ್ಥಾನ
(ತೆರ ಸರಿದಾಗ ಶಿವಾಜಿ ಸಿಂಹಪೀಠದ ಮೇಲೆ ಮಂಡಿಸಿರುತ್ತಾನೆ. ಪೀಠದ ಒಂದು ಕಡೆ ಗುರು ದಾದಾಜಿ ಕೊಂಡ ದೇವ ಕಿರೀಟ ಇಡುತ್ತಿರುತ್ತಾರೆ. ಮತ್ತೊಂದೆಡೆ ತಾಯಿ ಜೀಜಾಬಾಯಿ ಆಶೀರ್ವಾದಗೈಯುತ್ತಿರುತ್ತಾಳೆ. ಚಾಮರ ಬೀಸುವವರು, ದಂಡಧಾರಿಗಳು ಅಲ್ಲಲ್ಲಿ. ನರ್ತಕಿಯರ ಆನಂದದ ದರ್ಶನ. ಆ ಮುನ್ನ ರಾಜಪುರೋತಹಿತರಿಂದ ಸ್ವಸ್ತಿ ಮಂತ್ರ ಪಠಣ, ಅದು ಮುಗಿದೊಡನೆಯೆ ಸಕಲರಿಂದ ಪುಷ್ಪಾಂಜಲಿ ಸಮರ್ಪಣ ಅಂದರೆ ಎಲ್ಲರೂ ಸೇಸೆ ಇಡುವುದು)

ನರ್ತಕಿ: ಭಾರತದ ಭಾಗ್ಯನಿಧಿ ಶಿವರಾಜನೆ
ರಾಜಗಡದದಿಪತಿಯೆ ನವ ತೇಜನೇ ॥ಪ॥

ಜೀಜ ಮಾತೆಯ ಕೈಯ ಜಾಜಿ ಃಊವಾದವನೆ
ರಾಜೀವ ಸುಖವಂಶ ವಂಶ ಭಾಸುರನೆ ।
ಸಹೃದಯ ಶ್ರೀಮಂತ ಧೀಮಂತ ಕಲಿಯೇ
ಸದಮಲದ ಮನದವನೆ ರಾಜರ್ಷಿಯೆ ॥೧॥

ದೇಶದ್ರೋಹಿಗಳನ್ನು ತ್ರಾಹಿ ಎನಿಸಿದನೆ
ಕ್ಲೇಶವ ಪರಿಹರಿಸಿ ರಕ್ಷಣೆ ಇತ್ತವನೆ
ಅಭಿನವ ನರಸಿಂಹ ದಂಷ್ಟ್ರಾಯುಧನೇ
ಶ್ರೇಷ್ ರಾಷ್ಟ್ರಕ ಸ್ವಾಮಿ ಸ್ವಾತಂತ್ರ್ಯ ಶಿಲ್ಪಿಯೆ ॥೨॥
(ಆನಂದ ನರ್ತನದ ಹಿನ್ನೆಲೆಯಲ್ಲಿ ಮಂಗಲ ಪಟಿದೇಳುತ್ತದೆ)

ಮಂಗಲಂ : ಜಯ ಜಯ ಜಯ ಜಯ ನಾಟ್ಯಾಂಜಲಿ
ಜಯ ಜಯ ಜಯ ಹೇ ಜಯ ಗೀತಾಂಜಲಿ
ದೇವ ಮಾನವನು ಶ್ರೀ ಶಿವಾಜಿಯು
ಮಾನವ ಲೋಕದ ಅವತಾರ ಪುರುಷನು
ಆತನ ಚರಿತೆಯು ಪುಣ್ಯಪ್ರದವು
ಸಕಲರಿಗೂ ಸನ್‌ಮಂಗಳವೀಯಲಿ ॥ ಜಯ ಜಯ ॥

ಹಿನ್ನುಡಿ

ಸನಾತನ ಸಂಸ್ಕೃತಿಯ ಸಂರಕ್ಷಣೆಯ ಶಿವಾಜಿ ಪಾತ್ರ ಅತ್ಯಮತ ಮಹತ್ವಪೂರ್ಣವಾದದ್ದು. ವಿಜಯನಗರದ ಪತನಾನಂತರ ಶಿಕ್ಷ ಭಾರತದಲ್ಲಿ ಅನಾಥಪ್ರಜ್ಞೆ ತಲೆದೋರಿದಾಗ ಭರವಸೆ ಮತ್ತು ಆತ್ಮವಿಶ್ವಾಸಗಳ ನೇಸರಾಗಿ ಮೂಡಿದವನು ಛತ್ರಪತಿ ಶಿವಾಜಿ. ಅವನ ಜಾಣ್ಮೆ ಸಾಹಸಗಳಿಲ್ಲದೆ, ಹೋಗಿದ್ದರೆ ನಮ್ಮ ಸಂಸ್ಕೃತಿಯ ಸೆಲೆಯೇ ಸಂಪೂರ್ಣವಾಗಿ ಬತ್ತಿಹೋಗುತ್ತಿತ್ತು. ಅಂತಹ ಸಂದಿಗ್ಧ ಸಂದರ್ಭದಲ್ಲಿ ರಕ್ಷಕನಾಗಿ ಕಾಪಾಡಿದ ಶಿವಾಜಿಯ ಬದುಕಿನ ಮಹತ್ವದ ಘಟನೆಗಳ ಸರಣಿಯೇ 'ಶಿವಛತ್ರಪತಿ' ನೃತ್ಯ ರೂಪಕ.

ಇದನ್ನು ರಂಗದ ಮೇಲೆ ಯಶಸ್ವೀ ಪ್ರಯೋಗ ಮಾಡಿದ ಖ್ಯಾತ ನೃತ್ಯ ಕಲಾವಿದೆ ಶ್ರೀಮತಿ ರಾಧಾ ಶ್ರೀಧರ್‌ರವರಿಗೆ ನಾನು ಕೃತಜ್ಞ.

'ರಾಗಿಣಿ' ಸಾ.ಶಿ.ಮರುಳಯ್ಯ
ಬೆಂಗಳೂರು–೪೦

**ಏನು ಚೆಲುವಿನ ನಾಡು ನೃತ್ಯಸರಣಿ**

ಪೂರ್ವಪೀಠಿಕಾ ದೃಶ್ಯ
ಪ್ರಿಯ ಪ್ರೇಯಸಿಯರಿಬ್ಬರು:
[ಮೊದಲು ಆಲಾಪನಾ ರೂಪದಲ್ಲಿ ನಾಲ್ಕು ಸಾಲುಗಲನ್ನು ನುಡಿಸಿ, ಅನಂತರ ತಾಳಲಯಗತಿಯಲ್ಲಿ ಹಾಡುವುದು]

ಏನು ಚೆಲುವಿನ ನಾಡು ಚೆಲುವು ಚಿಮ್ಮುವ ನಾಡು
ನನ್ನೊಲುಮೆ ಈ ನಾಡು ಕರ್ನಾಟಕ ॥
ಹಾಲು ಹೊಳೆ ಜೇನು ಮಳೆ ನನ್ನ ತಾಯ್ ಮಡಿಲಲ್ಲಿ
ಹೊನ್ನ ಹೂಗಳ ಸೂರೆ ಸ್ವರ್ಣ ಕಟಕ ॥

ಪಡುಗಡಲ ತೀರದಲಿ ಮೂಡುಮಲೆ ನೆತ್ತಿಲಯ
ಬೆಡಗಿ ಭಿನ್ನಾಣವತಿ ನಲಿವ ನಾಡಿನಲಿ
ಕೊಡೆ ಹಿಡಿವ ಅಡಕೆಗಳ ಎಂಗಳು ಶ್ರೀಗಂಧಗಳ
ಮಾಮರದ ಮಲ್ಲಿಗೆಯ ಕಂಪಿಹುದು ಇಲ್ಲಿ ॥

ಸಾಹಿಯ ಸಂಗೀತ ನೃತ್ಯಕಲೆಗಳ ಬೀಡು
ಲಲಿತ ಕಲೆ ಮೆರೆವ ನೆಲೆ ಕರ್ನಾಟಕ
ಶಿಲ್ಪ ಸೌಂದರ್ಯದಲಿ ಕಲ್ಪನೆಯ ಬಲೆ ಬೀಸಿ
ಕುಂಚ ಕುಸುರಿಯ ತೆರೆವ ಕರ್ನಾಟಕ ॥

ಒಂದು ಮಾತು

ಇಲ್ಲಿರುವ ರೂಪಕಗಳನ್ನು ಬರೆಸಿದವರು ಶ್ರೀಮತಿ ವೈಜಯಂತಿ ಕಾಶಿ ಮತ್ತು ಶ್ರೀಮತಿ ಉಷಾ ದಾತಾರ್‌ರವರು. ಇವರು ವಿನಾ ಬೇರೆ ಯಾರೂ ಇಲ್ಲಿನ ರೂಪಕಗಳನ್ನು ಶ್ರೀಮತಿ ವೀಣಾ ಮರುಳಯ್ಯನವರ ಲಿಖಿತ ಅಪ್ಪಣೆ ಇಲ್ಲದೆ ಪ್ರದರ್ಶಿಸಕೂಡದು.

ಪ್ರಕಾಶಕರು
ನೃತ್ಯ ರೂಪಕಗಳು

1. ಬನವಾಸಿ
2. ತಲಕಾಡು
3. ಶ್ರವಣ ಬೆಳಗೊಳ
4. ಬಾದಾಮಿ
5. ಉಡುಪಿ

## ಬನವಾಸಿ

**(ನೃತ್ಯ ರೂಪಕ)**

ನರ್ತಕಿ 1 : ಬಾರಯ್ಯ ಮಿತ್ರನೆ  ಬಾರೋ ಪವಿತ್ರನೆ
ಬಾ ತಂಗಿ ನಮ್ಮೂರ ನೋಡ ಬನ್ನಿ ॥ಪ॥

ನಮ್ಮ ನಾಡ ಸಿರಿಯ ಸೊಬಗ ನೋಡ ಬನ್ನಿ
ಕನ್ನಡಿಗರೈಸಿರಿಯ ನೋಡ ಬನ್ನಿ
ಕರ್ನಾಟಕ ದರ್ಶನವ ಪಡೆಯ ಬನ್ನಿ
ಏನು ಚೆಲುವಿನ ನಾಡು 1 ನೋಡ ಬನ್ನಿ ॥ಅನು.ಪ॥

ಇಲ್ಲಿ
ತೆಂಗುಗಳು ತಲೆಯೆತ್ತಿ ಅಡಕೆಗಳು ಕೊಡೆಹಿಡಿದು
ಬಾಳೆಗಳು ಕರೆಯುತಿವೆ ತೋಳ ಬೀಸಿ
ಶ್ರೀಗಂಧ ಮಲ್ಲಿಗೆ ಮಾಕಂದ ಸಂಪಗೆ
ಕಾಫಿ ತೇಗ ಏಲಕ್ಕಿ ಕಂಪ ಸೂಸಿ ॥1॥

ಕೃಷ್ಣೆ ಕಾವೇರಿಯರು ಹೇಮಾವತಿ ಕುಮುದವತಿ
ಶರಾವತಿ ತುಂಗಭದ್ರೆ ಕಣ್ವ ವರದೆ
ಅಮಲಪ್ರಭೆ ಘಟಪ್ರಭೆ ಎಲ್ಲ ಪ್ರಭೆಯರು ಸೇರಿ
ಕರೆಯುತಿಹರು ತೀರ್ಥ ತುಂಬಿ ತಮ್ಮ ಮಡಿಲೊಳು ॥2॥

ಸಹ್ಯಾದ್ರಿ ಕೊಡಚಾದ್ರಿ ಚಾಮುಂಡಿ ನದಿಗಳು
ಬಾಬಾ ಬುಡನ್‌ಗಿರಿ ಮುಳ್ಳೈಗಿರಿ
ಕೆಮ್ಮಣ್ಣಗುಂಡಿ ಚಾಮುಂಡಿ ನೆತ್ತಿಯಲಿ
ಮುಗಿಲು ಮಾತಾಡುತಾವೆ ॥3॥

ನರ್ತಕಿ2 : ಕನ್ನಡ ನಾಡು ಕಲೆಗಳ ಬೀಡು
ಕವಿಕೋಗಿಲೆಗಳ ನೆಲೆವೀಡು
ಶಿಲ್ಪದ ಕಲ್ಪದ ನಾದದ ಜಲ್ಪದ
ಸಂಗೀತದ ಶೌರೀ ನಾಡು ॥1॥

ಅಲರಿಪು ತಿಲ್ಲಾನ ರಂಗ ವಿಧಾನ
ನಾಟ್ಯಾಗಮಾದ ಉದ್ಯಾನ
ಚಂಡೆ ಮೃದಂಗ ತೋಂ ತೋಂ ತೋಂ
ತಾಳ ಮೇಳ ಗತಿ ಧೀಂ ಧೀಂ ಧೀಂ ॥2॥

ನರ್ತಕಿ 3 : ಅತ್ತ ಇತ್ತ ಸುತ್ತ ಮುತ್ತ
ಕತ್ತನೆತ್ತಿ ನೋಡಲೆತ್ತ
ಕಡಲಿನತ್ತ ಕೊಡಗಿನತ್ತ
ಕರ್ನಾಟ ದೇಶ ಬಯಲು ಧಾರೆ
ಜೋಗ ಗುಂಡಿ ನೀರು ಬಾರೆ
ಶಿವಸಮುದ್ರದರೆಯ ಓರೆ
ಬೆಡಗೆ ಬೆಡಗು ಸುಗ್ಗಿ ಸೂರೆ !
ಬಾ ಪ್ರವಾಸಿಯೇ ರಸಿಕ ದೇಸ ವಾಸಿಯೇ ॥1॥

ಏನು ಏನು ಜೇನು ಜೇನು !
ಕನ್ನಡಮ್ಮ ಕಾಮಧಾನು !
ಅವಳ ಮಡಿಲು ಮುಡಿಯ ತುಂಬ
ಅವಳ ಬೆಡಗಿನೊಡಲ ತುಂಬ
ಹೂವೆ ಹೂವು ಹೂವೇ ಹೂವು
ಚೆಲ್ಲಿ ಚೆಲ್ಲಿ ಸೂಸುತಿಹವು
ಬಾ ಪ್ರವಾಸಿಯೇ ರಸಿದೇಶವಾಸಿಯೇ ॥2॥

ಕೈಯ ಚಾಚು ಗಿರಿಯ ಧಾಮ
ಕಾಲು ಚಾಚರಣ್ಯಧಾಮ
ಮೈಯನೊದರು ಪಕ್ಷಿಧಾಮ
ನಮ್ಮ ನಾಡು ಶಾಂತಿಧಾಮ
ಹಚ್ಚ ಹಸಿರ ಪಚ್ಚೆ ಕುಸುಮ
ಓ, ವಿಹಾರಿ, ದೇಶಚಾರಿ ಓ ಪ್ರವಾಸಿಗ
ನೋಡು ನಮ್ಮ ನಾಡನೊಮ್ಮೆ ನೆಲದ ಬಾಸಗಿ ॥3॥

ನರ್ತಕಿ 4 : ಕರುನಾಡಿನ ಸಿರಿ ಕಣ್ಣೆವೆ ತೆರೆಯಿತು
ಅಲೆ ಅಲೆ ಮಲೆಗಳ ಮೇಲೆ
ಚೆಂಬೆಳಗೆಳೆಯೆಳೆ ಚಿಗುರೊಡೆಯಿತು ಅದೊ
ಹೂವಿನ ಎಸಳಿನ ಮೇಲೆ
ಗತ ಇತಿಹಾಸವು ಮಣ್ಣಿನ ಕಣದಲಿ
ಕಲ್ಲಿನ ಬಂಡೆಯ ಮೇಲೆ
ಶಾಸನವಾಗಿದೆ ಘೋಷಣೆ ಕೊಡುತಿವೆ
ಕನ್ನಡ ನಾಡಿನ ಲೀಲೆ !
ಗಂಗ ಕದಂಬ ಚಾಲುಕ್ಯರರಸರು
ರಾಷ್ಟ್ರಕೂಟರಾಳಿದರಿಲ್ಲಿ
ಹೊಯ್ಸಳ ದೊರೆಗಳು ಕೆಳದಿಯ ಪ್ರಭುಗಳು
ವಿಜಯನಗರ ಮೆರೆದದ್ದಿಲ್ಲಿ !
ಮೈಸೂರಿನ ಮಹಾರಾಜರ ನಾಡು
ಕಿತ್ತೂರರಸಿಯ ಕರುಗೂಡು
ಮಾಗಡಿ ಕೆಂಪೇಗೌಡರ ಬೀಡು
ಕೊಡಗಿನ ವೀರರ ನೆಲೆವೀಡು

ನಾಲ್ವರೂ:

ವಚನ: ದೇಶ ವಿದೇಶದ ಓ ಪ್ರವಾಸಿಗರೇ,
ಸಂಸ್ಕೃತಿ ಸೌಂದರ್ಯಗಳ ಸವಿದ ಓ ರಸಿಕರೇ,
ಬನ್ನಿ ಬನ್ನಿ ಬನ್ನಿ
ಇದುವೆ ಕನ್ನಡ ನಾಡು ಭೂದೇವಿಯ ಕುಂತಳಾ
ಈ ನೆಲದೊಡನಾಡಲು ನಿಮ್ಮ ಮೈಮನ ಪ್ರಾಂಜಲಾ !
ಓ ಪ್ರವಾಸೀ..
ನಮ್ಮ ಸಹೃದಯ ಸದನವಾಸೀ
ಈ ಕರ್ನಾಟಕ ಪ್ರವಾಸಿಗರ ಸ್ವರ್ಗ
ಪಡೆದು ಧನ್ಯನೆ ಆಗು ಅದರ ಸಂಸರ್ಗ !

ಹಾಡು : ಬಾರಯ್ಯ ಮಿತ್ರನೇ ಬಾರೋ ಪವಿತ್ರನೆ
ಬಾ ತಂಗಿ ನಮ್ಮೂರ ನೋಡ ಬನ್ನಿ ॥ಪ॥

ಕನ್ನಡಿಗರೈಸರಿಯ ನೋಡಬನ್ನಿ
ಕರ್ನಾಟಕ ದರ್ಶನದ ಪಡೆಯ ಬನ್ನಿ ।\ಅನು.ಪ॥

ದೃಶ್ಯ : ಬನವಾಸಿ

1. ಓ ಪ್ರವಾಸಿ
2. ಇದು ಬನವಾಸಿ
3. ಇದು ಬರಿಯ ಹೆಸರಲ್ಲವೊ
4. ಮಂತ್ರವು ಮೋಹಕ ಗಾರುಡಿ !

ಹಾಡು : ಚೆಲ್ವಿ ನೆಲೆ ಕಣ್ಗಳ ಬಲೆ ಸುಖದೊರತೆಯ ಬನವಾಸೀ
ಕಾನ್ ಮಲೆಗಳ ಕಣ್ ತಣಿಸುವ ಪಂಪನದೀ ಬನವಾಸೀ ॥

ವಚನ : ತ್ಯಾಗ ಭೋಗ ಗೇಯ ಗೋಷ್ಠಿ
ನೃತ್ಯ ಲೀಲಾ ವಿನೋದಕ್ಕೆ ಹಸರಾದುದು ಬನವಾಸಿ ।

ಹಾಡು : ಅಮೋದಕೆ ಪ್ರೇಮೋದಕೆ ನೆಲೆವೀಡುದ ಬನವಾಸಿ
ಖಗ ಗಾನದ ಮೃಗಮೋದದ ಪೆಂಪಿನ ಸೆಲೆ ಬನವಾಸೀ ॥

ವಚನ : 1 ಮಹಾಕವಿ ಪಂಪ ಹೇಳುವುದಾದರು ಏನು?
ಈ ಭವ್ಯ ಬನವಾಸಿಯ ವನ್ಯಪ್ರದೇಶದಲ್ಲಿ
ಮಾನವನಾಗಿ ಹುಟ್ಟುವುದೇ ಪುಣ್ಯ 1
ಆ ಭಾಗ್ಯವಿಲ್ಲದೇ ಹೋದಲ್ಲಿ, ಓ ಬ್ರಹ್ಮದೇವ,
ಬನವಾಸಿಯ ವನ್ಯ ಪ್ರದೇಶದಲ್ಲಿ ಮರಿದುಂಬಿಯಾಗಿ ಹುಟ್ಟಿಸು;
ವಸಂತ ವನದ ಹೂವಿನ ಹೊಂಬಟ್ಟಲಲ್ಲಿ ಕುಳಿತು
ಮಧುವನ್ನೊಮ್ಮೆ ಹೀರಿ ಓಂಕಾರದ ಝೇಂಕಾರಗೈಯುತ್ತೇನೆ

2 ಅಂತಾದರೆ ನನ್ನ ಜನ್ಮ ಸಾರ್ಥಕ ! ಎಂದು
3 ಇಲ್ಲವೇ,
ಇದೇ ಬನವಾಸಿಯಲ್ಲಿ ನನ್ನನ್ನೊಂದು ಕೋಗಿಲೆಯಾಗಿ
ಹುಟ್ಟಿಸು. ಅಲ್ಲಿನ ವಸಂತ ಪಲ್ಲವವನ್ನು ಮೆದ್ದು

ಕಂಠವನ್ನು ಕಂಚಾಗಿಸಿಕೊಂಡು,
'ಕುಹೂ ಕುಹೂ' ಎಂದು ಕೂಜನ ಹಾಯಿಸುತ್ತೆನೆ.
4 ಅಂತಾದರೆ ನನ್ನ ಬದುಕು ಬಂಗಾರ ! ಎನ್ನುತ್ತಾನೆ
1 ಸುಮಾರು ಎರಡು ಸಹಸ್ರ ವರ್ಷಗಳಿಂದಲೂ ಪ್ರಸಿದ್ಧಿ ಪಡೆದ ಬನವಸೆಯನ್ನು ವಿಶ್ವವಿಖ್ಯಾತ ಇತಿಹಾಸಜ್ಞ ಟಾಲೆಮಿ ಹೆಸರಿಸಿದ್ದಾನೆ.
2 ಅಂತಹ ಬನವಾಸಿಯ ಬನಸಿರಿಯ ಮಡಿಲಿಂಗೆ
ನಿನಗಿದೋ ಸ್ವಾಗತ–ಸುಸ್ವಾಗತ !

ಹಾಡು : ಇತಿಹಾಸದ ಹೊತ್ತಗೆಯಲಿ ಬನವಾಸಿಯ ಅದ್ಭುತ
ಸ್ವರ್ಣಾಕ್ಷರಗಳಲಿ ಬರೆದ ದಿವ್ಯಾಮೃತ ಸಂಪುಟ !
ಕದಂಬರಾಜರಾಳಿದಾ ಮೃಗೇಶವರ್ಮ ಬೆಳೆಸಿದಾ
ಕನ್ನಡ ಕುಲ ಕುಡಿಗಳು ಮೆರೆದ ವೀರ ಧ್ವಜಪಟ ॥1॥

ಪಲ್ಲವರು ಇಲ್ಲಗೈಯೆ ಸೇನೆ ಸಜ್ಜುಗೊಳಿಸಿದಾ
(ಕಹಳೆ ಕೊಂಬು ಭೇರಿಗಳ ನಾದ)
ರತ್ನಸಿಂಹಾಸನವನು ಮೊತ್ತ ಮೊದಲು ಸ್ಥಾಪಿಸಿದಾ
(ತುತ್ತೂರಿ ಮೊಳಗು)

ಕನ್ನಡ ರಾಜೇಶ್ವರಿಯಾ ತಂದು ಮೇಲೆ ಕೂರಿಸಿದಾ
[ಮಂಗಳ ವಾದ್ಯಗಳು ಮೊಳಗುವುವು
ಕನ್ನಡ ರಾಜರಾಜೇಶ್ವರಿಗೆ "ಜಯವಾಗಲಿ ಜಯವಾಗಲಿ
ಎಂಬ ಮುಗಿಲು ಮುಟ್ಟುವ ಜಯಘೋಷ
ಹಿನ್ನೆಲೆಯಲ್ಲಿ]

ಕನ್ನಡ ರಾಜೇಸ್ವರಿಯಾ ತಂದು ಮೇಲೆ ಕೂರಿಸಿದಾ
ಜಗದ್ವಿಖ್ಯಾತನವನು ನಮ್ಮ ಆ ಮಯೂರು ~
ಮಯೂರು ! ಮಯೂರ !! ಮಯೂರ !!!

–ದೃಶ್ಯ ಬದಲಾವಣೆ–

(ರಾಜಾ ಮಯೂರ ಮತ್ತು ರಾಣಿ ಪಲ್ಲವಿಯರ ನೃತ್ಯ)
ಮಯೂರ :
ಪಲ್ಲವ ಕನ್ಯೆ ಓ ಪಲ್ಲವಿಯೇ
ಬೆಲ್ಲದ ಗಲ್ಲದ ಭಾಮಿನಿಯೆ ॥

ಹೂಗೆನ್ನೆಗಳಾ ಕಂಡುಹುಬ್ಬುಗಳಾ
ಕವಳಿಯ ಹಣ್ಣಿನ ಕಣ್ಣವಳೇ ॥1॥

ಚೆಂದುಟಿ ಚೆಲುವೆ ಮಾಟ ಮೈಯವಳೆ
ಉಂಗುರ ಕುದಲ ದುಂಬಿಯಾಡುವಳೇ ॥
ಪ್ರಣಯ ಪ್ರಚೋದಿನಿ ಪ್ರೇಮೋನ್ಮಾದಿನಿ
ನೂಪುರ ನಾದದ ನರ್ತಕಿಯೇ ॥2॥

ಕಟ ತಟ ವಿನ್ಯಸ್ತ ನವನಟಿ ಚತುರೆ
ಚಟುಲ ಚಾರುತರ ತುಟಿಪುಟದವಳೆ
ಧಿಕಿಟ ದಿಕಿಟ ಥಕ ಧೀಂ ದೀಂ ಎನುತಂ
ನರ್ತನ ಗೈಯುವ ನಾಟ್ಯ ಮಯೂರಿಯೆ ॥3॥

(ಭರತ ನಾಟ್ಯದ ವಿವಿಧ ಭಂಗಿಗಳಲ್ಲಿ ಇಬ್ಬರ ನರ್ತನ. ಕೇವಲ ತಾಳಮೇಳ)
ವಚನ : ಕನ್ನಡಿಗರ ಕಣ್ಮಣಿ ಮಯೂರನ ತಾಯ್ಮಡಿಲಾದ ಬನವಾಸಿ.
ವ್ಯೋಮ ಮಾರುತಿ ಅಲ್ಲಮನ ಆಡುಂಬೊಲವೂ ಆಗಿದೆ!
ಅಲ್ಲಮಾ !
ಆಧ್ಯಾತ್ಮ ಲೋಕದ ಏಕೈಕ ಧ್ರುವತಾರೆ ಅಲ್ಲಮಾ !
ಇಹದಲ್ಲಿದ್ದೆ ಪರವನ್ನು ಸಾಧಿಸಿದ ನಾಮ ರೂಪ ಕ್ರೀ
ಕಳಾಪ ವಿರಾಮ ಆ ಅಲ್ಲಮ 1
ಹನ್ನೆರಡನೆಯ ಶತಮಾನದ ಐತಿಹಾಸಿಕ ವ್ಯಕ್ತಿ ಕೂಡ !
ಬಸವ, ಚೆನ್ನಬಸವ, ಸಿದ್ಧರಾಮ, ಅಕ್ಕಮಹಾದೇವಿ
ಮೊದಲಾದವರೆ ಕನ್ನಡ ದೀಕ್ಷಾಗುರು
ಕನ್ನಡ ಶಿಕ್ಷಾಗುರು! ಕನ್ನಡ ಮೋಕ್ಷಗುರು ಅಲ್ಲಮ !
ಅಣ್ಣನ ಕಲ್ಯಾಣದಲ್ಲಿ ಶೂನ್ಯಪೀಠದಧಿಪತಿಯಾಗಿ,
ಅನುಭವ ಮಂಟಪದ ಅಧ್ಯಕ್ಷನಾಗಿ ಮೆರೆದ ಪ್ರಭು ಅವನೆ
ಪ್ರಭುದೇವನೂ ಅವನೆ !
ಅಧ್ಯಾತ್ಮ ಪ್ರಪಂಚದಲ್ಲಿ ನವ ಮನ್ವಂತರವನ್ನು ತೆರೆದ
ಮಹಾನುಭಾವ ಅಲ್ಲಮ !
ಚೆಲುವ ಮದ್ದಲಿಗ

ಅಂದೊಂದು ದಿನ –
ಬನವಾಸಿಯ ಮಧುಕೇಶ್ವರ ದೇಗುಲದ ಹೊರವಲಯದಲ್ಲಿ
ನಿಂತು ಆ ಚೆಲುವ ಮದ್ದಲಿಗ ಮದ್ದಲೆ ಬಾಜಿಸ
ತೊಡಗಿದ...
(ಹಿನ್ನೆಲೆಯಲ್ಲಿ ಮದ್ದಲೆಯ ಅಸ್ಪಷ್ಟ ಶಬ್ದ ಕೇಳಿಬರುವುದು)
ಮದ್ದಲೆಯ ದನಿಕೇಳಿ ಮಂತ್ರ ಮುಗ್ಧಳಾದಳು ಚೆಲುವಿನ ಚಿಲುಮೆ ಆ ಮಾಯೆ
ಮುಂಗಾರಿನ ಗುಡುಗು ಕೇಳಿದ ನವಿಲಿನಂತಾಯಿತು ಅವಳ ಮನ ಮಯೂರ
ಕೂಡಲೆ ಓಡಿದಳು, ಮದ್ದಲಿನ ಅಲ್ಲಮಪ್ರಭುವನ್ನು ಕರೆತಂದಳು.

(ಮದ್ದಲೆಯ ಧ್ವನಿ ಜೋರಾಗುವುದು. ಆ ಮೋಹನಾಂಗಿ, ನಾಟ್ಯ ಪ್ರವೀಣೆ ಮಾಯೆ.. ಅದರ ಲಯಗತಿಗನುಗುಣವಾಗಿ ನರ್ತಿಸುವಳು. ಶೃಂಗಾರ, ಹಾಸ್ಯ, ಕರುಣ, ರೌದ್ರ, ವೀರ, ಭಯಾನಕ, ಭೀಭಿತ್ಸ, ವಿಸ್ಮಯ, ಶಾಂತ.. ಈ ಬಗೆಯ ನವರಸಗಳ ಅಭಿನಯ)

[ನರ್ತನದ ಗತಿ ಗಗನಕ್ಕೇರಿದಾಗ ಮಾಯೆ ತಾಳ ತಪ್ಪುತ್ತಾಳೆ. ಕೂಡಲೇ ಪ್ರಭು ಮುದ್ದಲೆ ನುಡಿಸುವುದನ್ನು ಬಿಟ್ಟು 'ಮಾಯೆ' ಎಂದು ಜೋರಾಗಿ ಗರ್ಜಿಸುತ್ತಾನೆ. ಮಾಯೆ ತಟ್ಟನೆ ನಾಟ್ಯ ನಿಲ್ಲಿಸುತ್ತಾಳೆ. ಸ್ತಂಭೀನಭೂತಳಾಗಿ ಚಣಕಾಲ ರಂಗದಲ್ಲಿ ರುದ್ರಮೌನ !]

ಪ್ರಭು : ಇದು ಶುದ್ಧ ಮಾಯೆ !
ಮಾಯೆ : ಸ್ವಾಮೀ, ನನ್ನ ಹೆಸರು ಗೊತ್ತಾಯಿತು ಹೇಗೆ ?
ಪ್ರಭು : ಅದ ಕೇಳಿ ತಿಳಿಯಬೇಕೇನು ? ನತ್ನದ ವರ್ತನೆ ತಾನೆ ಹೇಳದೆ ? ತಾನೇ ತೋರದೆ?

ಮಾಯೆ : ತಾಳ ತಪ್ಪಿದೆನೆ ಪ್ರಭು ?
ಪ್ರಭು : (ಜೋರಾಗಿ) ಮಾಯೆ !
ಮಾಯೆ : ಅಹುದು ಸ್ವಾಮಿ, ನಾನು ಈ ಬನವಾಸಿಯ ಅರಸು ಮಮಕಾರ. ಅರಸಿ ಮೋಹಿನಿ ಇವರ ಸುಪುತ್ರಿ– ಮಾಯೆ.
ಪ್ರಭು : ಆ ವಿವರವೆಲ್ಲಾ ಬೇಕಿಲ್ಲ ನನಗೆ :
ಮಾಯೆ, ಲಯದಲ್ಲಿ ನಯವಿಲ್ಲ, ಗತಿಯಲ್ಲಿ ಗತ್ತಿಲ್ಲ, ಗುರಿಯೂ ಇಲ್ಲ !
ತಪ್ಪಾಯ್ತು, ಕ್ಷಮಿಸೋಣವಾಗಲಿ !
ಅರಿಯದೆ ಮಾಡಿದ ಅಪರಾಧವನ್ನು ಗುರುಗಳೇ ಕೃಪೆ ಮಾಡಿ ತಿದ್ದಬಹುದಲ್ಲ.
ಪ್ರಭು: ನಾ ನಿನ್ನ ಗುರುವಲ್ಲ ! ಆದರೆ ಕಲೆಗಾಗುತ್ತಿರುವ ಅಪಚಾರ ಸಹಿಸೆ. ಅದಕ್ಕಾಗಿ.. ಹೂಂ.
[ಪ್ರಭುವೂ ಅಭಿನಯಿಸಿ ಅವಳನ್ನು ಅನುಕರಿಸುವಂತೆ ಮಾಡುವನು. ಅತ್ಯದ್ಭುತವಾದ ಸಪ್ತತಾಳಗಳ ಜತಿಯ ನರ್ತನ. ಅವಳು ಅವನ ಮೈ ಮುಟ್ಟಿ ಭಾವ ಬೆಡಗು ಬಿನ್ನಾಣ ವೈಯ್ಯಾರ ತೋರಿ ಮತ್ತೆ ತಾಳ ತಪ್ಪುವಳು. ಬೇಸರಗೊಂಡ ಅಲ್ಲಮ ದೂರ ಸರಿದು ತಾಳಗಳನ್ನು ಹಿಡಿದು ನುಡಿಸುತ್ತಾ ನಟುವಾಂಗ ನಡೆಸುವನು. ಮಾಯೆ ಆಯ ತಪ್ಪುವಳು. ಪ್ರಭು ತಾಳಗಳನ್ನು ಭರ್ರನೆ ಬಿಸಾಡುವನು. ಮತ್ತೆ ರಂಗವಲ್ಲಿ ಮೌನ!]
ಪ್ರಭು: ಮಾಯೆ !
[ಮಾಯೆ ಬೆದರಿದವಳಂತೆ ನಡುಗುತ್ತಾ ನಿಲ್ಲುವಳು]
ಭಾವದಲ್ಲೂ ಬದಲಾವಣೆ ! ಛೇ
ಏಕಾಗ್ರತೆಯ ಸುಳಿವಿಲ್ಲ !
ನಿನ್ನ ಮುಖದಲ್ಲಿ ನಿನ್ನ ಮನಸ್ಸನ್ನು ಓದಬಲ್ಲ !
ಮಾಯೆ : (ಕೃತಕವಾಗಿ ನಟಿಸಿ) ಅಯ್ಯಯ್ಯೋ ! ತಪ್ಪಾಯ್ತು.. ತಪ್ಪಾಯ್ತು
ಪ್ರಭು : ನಿನ್ನ ಕಣ್ಣುಗಳಲ್ಲಿ ಚಿತ್ತ ಚಾಂಚಲ್ಯದ ನೆರಳಾಡುತ್ತಿದೆ !
ಆಂಗಿಕಾಭಿನಯ ಆಹಾರ್ಯಗಳಲ್ಲಿ ಗಾಂಭೀರ್ಯವಿಲ್ಲ.
ನೃತ್ಯ ಛಂದಸ್ಸು ಹದಗೆಡುತ್ತಿದೆ !
ಮಾಯೆ : ಅದಷ್ಟೇ ತಾನೆ.. ?
ಪ್ರಭು : ಅಷ್ಟೇ ಅಲ್ಲ, ನಿನ್ನ
ಚರಣ ಚಾರಿಗಳು ಜಾರುತ್ತಿವೆ!
ಮಾಯೆ : ಅದು ಗೆಜ್ಜೆದೋಷ ಪ್ರಭು !
ಪ್ರಭು : ಅಲ್ಲ  ಗೆಜ್ಜೆ ಧರಿಸಿದ ಹೆಜ್ಜೆ ದೋಷ!
ಸಕಳೆ ಮತ್ತು ವಿಮಲೆಯರು : 1. ಇದ್ದರೂ ಇರಬಹುದು!.. ಮಾಡುವುದಾದರೂ ಏನು?
2. ಪರಿಸ್ಥಿತಿಯ ಪ್ರಭಾದಡಿ ! ಹೆಣ್ಣೇನು ಮಾತು ಪಾಪ !
3. ನಮ್ಮೊಡತಿ ಆಯಾಸಗೊಂಡಿಹಳು !
4. ಅರಮನೆಗೆ ಹೋಗೋಣ ?
[ಪ್ರಭು ಮತ್ತು ಮಾಯೆಯರು ನಡುವೆ, ಅವರ ಸುತ್ತ ನಾಲ್ವರು ಸಖಿಯರು]

**ಆನಂದ ನರ್ತನ**

ಕರ್ನಾಟಕ ಸಂಗೀತ ಸಾಮ್ರಾಟನೇ
ದಿಕ್ಪಟದ ಆಡಮಟಪ ನಟರಾಜನೇ
ಶೃಂಗಾರಿ ಕುಲರಸಿಕ ಚಕ್ರೇಶನೇ
ಮುದ ಬೀರೋ.. ಸುಧೆ ತಾರೊ.  ಹೃದಯೇಶನೇ ॥1॥

ಮೃದುಲ ಮೃದಂಗದ ಹೃದಯಂಗಮ ದನಿ
ಸದಮಲ ಭಾವದ ಸದ್ಗುರುವೇ..
ಮದ್ದಲೆ ಸದ್ದನು ಬೆರೆಸಿದನೇ

ಮಾಯೆಯ ಎದೆಯಲಿ ನೆಲೆನಿಂತವನೇ ॥2॥

–ದೃಶ್ಯ ಬದಲಾವಣೆ–

(ರಾಜಾ ಮಯೂರ ಮತ್ತು ರಾಣಿ ಪಲ್ಲವಿಯರ ನೃತ್ಯ)
ಮಯೂರ :
ಪಲ್ಲವ ಕನ್ಯೆ ಓ ಪಲ್ಲವಿಯೇ
ಬೆಲ್ಲದ ಗಲ್ಲದ ಭಾಮಿನಿಯೆ ॥

ಹೂಗೆನ್ನೆಗಳಾ ಕಂಡುಹುಬ್ಬುಗಳಾ
ಕವಳಿಯ ಹಣ್ಣಿನ ಕಣ್ಣವಳೇ ॥1॥

ಚೆಂದುಟಿ ಚೆಲುವೆ ಮಾಟ ಮೈಯವಳೆ
ಉಂಗುರ ಕುದಲ ದುಂಬಿಯಾಡುವಳೇ ॥
ಪ್ರಣಯ ಪ್ರಚೋದಿನಿ ಪ್ರೇಮೋನ್ಮಾದಿನಿ
ನೂಪುರ ನಾದದ ನರ್ತಕಿಯೇ ॥2॥

ಕಟ ತಟ ವಿನ್ಯಸ್ತ ನವನಟಿ ಚತುರೆ
ಚಟುಲ ಚಾರುತರ ತುಟಿಪುಟದವಳೆ
ಧಿಕಿಟ ದಿಕಿಟ ಥಕ ಧೀಂ ಧೀಂ ಎನುತಂ
ನರ್ತನ ಗೈಯುವ ನಾಟ್ಯ ಮಯೂರಿಯೆ ॥3॥

(ಭರತ ನಾಟ್ಯದ ವಿವಿಧ ಭಂಗಿಗಳಲ್ಲಿ ಇಬ್ಬರ ನರ್ತನ. ಕೇವಲ ತಾಳಮೇಳ)
ವಚನ : ಕನ್ನಡಿಗರ ಕಣ್ಮಣಿ ಮಯೂರನ ತಾಯ್ಮಡಿಲಾದ ಬನವಾಸಿ.
ವ್ಯೋಮ ಮಾರುತಿ ಅಲ್ಲಮನ ಆಡುಂಬೊಲವೂ ಆಗಿದೆ!
ಅಲ್ಲಮಾ !
ಆಧ್ಯಾತ್ಮ ಲೋಕದ ಏಕೈಕ ಧ್ರುವತಾರೆ ಅಲ್ಲಮಾ !
ಇಹದಲ್ಲಿದ್ದೆ ಪರವನ್ನು ಸಾಧಿಸಿದ ನಾಮ ರೂಪ ಕ್ರೀ
ಕಳಾಪ ವಿರಾಮ ಆ ಅಲ್ಲಮ 1
ಹನ್ನೆರಡನೆಯ ಶತಮಾನದ ಐತಿಹಾಸಿಕ ವ್ಯಕ್ತಿ ಕುಡ !
ಬಸವ, ಚೆನ್ನಬಸವ, ಸಿಧ್ದರಾಮ, ಅಕ್ಕಮಹಾದೇವಿ
ಮೊದಲಾದವರೆ ಕನ್ನಡ ದೀಕ್ಷಾಗುರು
ಕನ್ನಡ ಶಿಕ್ಷಾಗುರು! ಕನ್ನಡ ಮೋಕ್ಷಗುರು ಅಲ್ಲಮ !
ಅಣ್ಣನ ಕಲ್ಯಾಣದಲ್ಲಿ ಶೂನ್ಯಪೀಠದಧಿಪತಿಯಾಗಿ,
ಅನುಭವ ಮಂಟಪದ ಅಧ್ಯಕ್ಷನಾಗಿ ಮೆರೆದ ಪ್ರಭು ಅವನೆ
ಪ್ರಭುದೇವನೂ ಅವನೆ !
ಅಧ್ಯಾತ್ಮ ಪ್ರಪಂಚದಲ್ಲಿ ನವ ಮನ್ವಂತರವನ್ನು ತೆರೆದ
ಮಹಾನುಭಾವ ಅಲ್ಲಮ !
ಚೆಲುವ ಮದ್ದಲಿಗ

ಅಂದೊಂದು ದಿನ –
ಬನವಾಸಿಯ ಮಧುಕೇಶ್ವರ ದೇಗುಲದ ಹೊರವಲಯದಲ್ಲಿ
ನಿಂತು ಆ ಚೆಲುವ ಮದ್ದಲಿಗ ಮದ್ದಲೆ ಬಾಜಿಸ

ತೊಡಗಿದ...
(ಹಿನ್ನೆಲೆಯಲ್ಲಿ ಮದ್ದಲೆಯ ಅಸ್ಪಷ್ಟ ಶಬ್ದ ಕೇಳಿಬರುವುದು)
ಮದ್ದಲೆಯ ದನಿಕೇಳಿ ಮಂತ್ರ ಮುಗ್ಧಳಾದಳು ಚೆಲುವಿನ ಚಿಲುಮೆ ಆ ಮಾಯೆ
ಮುಂಗಾರಿನ ಗುಡುಗು ಕೇಳಿದ ನವಿಲಿನಂತಾಯಿತು ಅವಳ ಮನ ಮಯೂರ
ಕೂಡಲೆ ಓಡಿದಳು, ಮದ್ದಲಿನ ಅಲ್ಲಮಪ್ರಭುವನ್ನು ಕರೆತಂದಳು.

(ಮದ್ದಲೆಯ ಧ್ವನಿ ಜೋರಾಗುವುದು. ಆ ಮೋಹನಾಂಗಿ, ನಾಟ್ಯ ಪ್ರವೀಣೆ ಮಾಯೆ.. ಅದರ ಲಯಗತಿಗನುಗುಣವಾಗಿ ನರ್ತಿಸುವಳು. ಶೃಂಗಾರ, ಹಾಸ್ಯ, ಕರುಣ, ರೌದ್ರ, ವೀರ, ಭಯಾನಕ, ಭೀಭಿತ್ಸ, ವಿಸ್ಮಯ, ಶಾಂತ.. ಈ ಬಗೆಯ ನವರಸಗಳ ಅಭಿನಯ)

[ನರ್ತನದ ಗತಿ ಗಗನಕ್ಕೇರಿದಾಗ ಮಾಯೆ ತಾಳ ತಪ್ಪುತ್ತಾಳೆ. ಕೂಡಲೇ ಪ್ರಭು ಮದ್ದಲೆ ನುಡಿಸುವುದನ್ನು ಬಿಟ್ಟು 'ಮಾಯೆ' ಎಂದು ಜೋರಾಗಿ ಗರ್ಜಿಸುತ್ತಾನೆ. ಮಾಯೆ ತಟ್ಟನೆ ನಾಟ್ಯ ನಿಲ್ಲಿಸುತ್ತಾಳೆ. ಸ್ತಂಭೀನಭೂತಳಾಗಿ ಚಣಕಾಲ ರಂಗದಲ್ಲಿ ರುದ್ರಮೌನ ! ]

ಪ್ರಭು : ಇದು ಶುದ್ದ ಮಾಯೆ !
ಮಾಯೆ : ಸ್ವಾಮೀ, ನನ್ನ ಹೆಸರು ಗೊತ್ತಾಯಿತು ಹೇಗೆ ?
ಪ್ರಭು : ಅದ ಕೇಳಿ ತಿಳಿಯಬೇಕೇನು ? ನತ್ನದ ವರ್ತನೆ ತಾನೆ ಹೇಳದೆ ? ತಾನೇ ತೋರದೆ?
ಮಾಯೆ : ತಾಳ ತಪ್ಪಿದೆನೆ ಪ್ರಭು ?
ಪ್ರಭು : (ಜೋರಾಗಿ) ಮಾಯೆ !
ಮಾಯೆ : ಅಹುದು ಸ್ವಾಮಿ, ನಾನು ಈ ಬನವಾಸಿಯ ಅರಸು ಮಮಕಾರ. ಅರಸಿ ಮೋಹಿನಿ ಇವರ ಸುಪುತ್ರಿ– ಮಾಯೆ.
ಪ್ರಭು : ಆ ವಿವರವೆಲ್ಲಾ ಬೇಕಿಲ್ಲ ನನಗೆ :
ಮಾಯೆ, ಲಯದಲ್ಲಿ ನಯವಿಲ್ಲ, ಗತಿಯಲ್ಲಿ ಗತ್ತಿಲ್ಲ, ಗುರಿಯೂ ಇಲ್ಲ !
ತಪ್ಪಾಯ್ತು, ಕ್ಷಮಿಸೋಣವಾಗಲಿ !
ಅರಿಯದೆ ಮಾಡಿದ ಅಪರಾಧವನ್ನು ಗುರುಗಳೇ ಕೃಪೆ ಮಾಡಿ ತಿದ್ದಬಹುದಲ್ಲ.
ಪ್ರಭು: ನಾ ನಿನ್ನ ಗುರುವಲ್ಲ ! ಆದರೆ ಕಲೆಗಾಗುತ್ತಿರುವ ಅಪಚಾರ ಸಹಿಸೆ. ಅದಕ್ಕಾಗಿ.. ಹೂಂ.
[ಪ್ರಭುವೂ ಅಭಿನಯಿಸಿ ಅವಳನ್ನು ಅನುಕರಿಸುವಂತೆ ಮಾಡುವನು. ಅತ್ಯದ್ಭುತವಾದ ಸಪ್ತತಾಳಗಳ ಜತಿಯ ನರ್ತನ. ಅವಳು ಅವನ ಮೈ ಮುಟ್ಟಿ ಭಾವ ಬೆಡಗು ಬಿನ್ನಾಣ ವೈಯ್ಯಾರ ತೋರಿ ಮತ್ತೆ ತಾಳ ತಪ್ಪುವಳು. ಬೇಸರಗೊಂಡ ಅಲ್ಲಮ ದೂರ ಸರಿದು ತಾಳಗಳನ್ನು ಹಿಡಿದು ನುಡಿಸುತ್ತಾ ನಟುವಾಂಗ ನಡೆಸುವನು. ಮಾಯೆ ಆಯ ತಪ್ಪುವಳು. ಪ್ರಭು ತಾಳಗಳನ್ನು ಭರ್ರನೆ ಬಿಸಾಡುವನು. ಮತ್ತೆ ರಂಗವಲ್ಲಿ ಮೌನ!]
ಪ್ರಭು: ಮಾಯೆ !
[ಮಾಯೆ ಬೆದರಿದವಳಂತೆ ನಡುಗುತ್ತಾ ನಿಲ್ಲುವಳು]
ಭಾವದಲ್ಲೂ ಬದಲಾವಣೆ ! ಛೇ
ಏಕಾಗ್ರತೆಯ ಸುಳಿವಿಲ್ಲ !
ನಿನ್ನ ಮುಖದಲ್ಲಿ ನಿನ್ನ ಮನಸ್ಸನ್ನು ಓದಬಲ್ಲ !
ಮಾಯೆ : (ಕೃತಕವಾಗಿ ನಟಿಸಿ) ಅಯ್ಯಯ್ಯೋ ! ತಪ್ಪಾಯ್ತು.. ತಪ್ಪಾಯ್ತು
ಪ್ರಭು : ನಿನ್ನ ಕಣ್ಣುಗಳಲ್ಲಿ ಚಿತ್ತ ಚಾಂಚಲ್ಯದ ನೆರಳಾಡುತ್ತಿದೆ !
ಆಂಗಿಕಾಭಿನಯ ಆಹಾರ್ಯಗಳಲ್ಲಿ ಗಾಂಭೀರ್ಯವಿಲ್ಲ.
ನೃತ್ಯ ಛಂದಸ್ಸು ಹಸಗೆಡುತ್ತಿದೆ !
ಮಾಯೆ : ಅದಷ್ಟೇ ತಾನೆ.. ?
ಪ್ರಭು : ಅಷ್ಟೇ ಅಲ್ಲ, ನಿನ್ನ
ಚರಣ ಚಾರಿಗಳು ಜಾರುತ್ತಿವೆ!
ಮಾಯೆ : ಅದು ಗೆಜ್ಜೆದೋಷ ಪ್ರಭು !

ಪ್ರಭು : ಅಲ್ಲ ಗೆಜ್ಜೆ ಧರಿಸಿದ ಹೆಜ್ಜೆ ದೋಷ!
ಸಕಳೆ ತ್ತು ವಿಮಲೆಯರು : 1. ಇದ್ದರೂ ಇರಬಹುದು!.. ಮಾಡುವುದಾದರೂ ಏನು?
2. ಪರಿಸ್ಥಿತಿಯ ಪ್ರಭಾದಡಿ ! ಹೆಣ್ಣೇನು ಮಾತು ಪಾಪ !
3. ನಮ್ಮೊಡತಿ ಆಯಾಸಗೊಂಡಿಹಳು !
4. ಅರಮನೆಗೆ ಹೋಗೋಣ ?
[ಪ್ರಭು ಮತ್ತು ಮಾಯೆಯರು ನಡುವೆ, ಅವರ ಸುತ್ತ ನಾಲ್ವರು ಸಖಿಯರು]

**ಆನಂದ ನರ್ತನ**
ಕರ್ನಾಟಕ ಸಂಗೀತ ಸಾಮ್ರಾಟನೇ
ದಿಕ್ಪಟದ ಆಡಮಟಪ ನಟರಾಜನೇ
ಶೃಂಗಾರಿ ಕುಲರಸಿಕ ಚಕ್ರೇಶನೇ
ಮುದ ಬೀರೋ.. ಸುಧೆ ತಾರೊ. ಹೃದಯೇಶನೇ ॥1॥

ಮೃದುಲ ಮೃದಂಗದ ಹೃದಯಂಗಮ ದನಿ
ಸದಮಲ ಭಾವದ ಸದ್ಗುರುವೇ..
ಮದ್ದಲೆ ಸದ್ದನು ಬೆರೆಸಿದನೇ
ಮಾಯೆಯ ಎದೆಯಲಿ ನೆಲೆನಿಂತವನೇ ॥2॥

ದೃಶ್ಯ – ಅರಮನೆ

[ಪ್ರಭು ಮಾಯೆಯರ ಪ್ರವೇಶ. ಅವರ ಮುಂದೆ ಆರತಿ ಹಿಡಿದ ಇಬ್ಬರು ಸುವಾಸಿನಿಯರು; ಪಕ್ಕದಲ್ಲಿ ಪೂವಲಿಯ ಸೂಸುವ ಇಬ್ಬರು. ಎಲ್ಲರೂ ನರ್ತಿಸುತ್ತಾ ಸ್ವಾಗತಿಸುವರು}
ಸ್ವಾಗತವು ಸ್ವಾಗತವು ಸ್ವಾಗತವು ನಿಮಗೆ
ಸ್ವಾಗತವು ಮುದ್ದಲೆಯ ಮುದ್ದು ಮೋಹನಗೆ ॥ಪ॥

ಮಾಯೆಯೊಲವಿನ ಚೆಲುವ ಚದುರ ಚೆನ್ನಿಗಗೆ
ಕಲೆಯ ಕಾಯಕವಿಡಿದ ಕವಿವರ್ಯಗೆ
ನಟುವಾಂಗ ಪಟುವಿಂಗೆ ನಾಟ್ಯವೇದದ ಗುರುಗೆ
ದಿಟದ ಮನ್ಮಥ ರೂಪಿ ಮಹನೀಯಗೆ ॥1॥

[ಸಖಿಯರು ನರ್ತಿಸುತ್ತಲೇ ನಿರ್ಗಮಿಸುವರು]
ಬಿಂಕವೇನೋ ಬಿಂಕವೇಕೋ ! ಈ ಮಾಯೆಯ
ಕಿಂಕರನೆ ಬಿಂಕವೇಕೊ
ಮಾಯೆಯೊಂದು ಚೆಲುವ ಚಿಲುಮೆ ! ಚೆನ್ನಿಗನೆ
ಕಾಯ ಕರ್ಪೂರ ಪ್ರತಿಮೆ !
ಮಿದು ಗಲ್ಲಕೆ ಮುದವ ನೀಯೊ ! ಮೋಹನಾ
ಎದೆಯದುಮ್ಮಳದ ಕಳೆಯೊ

ತುಟಿಗೆ ತುಟಿಯ ಒತ್ತಿ
ಕಟಿಗೆ ಕೈಯ ಸುತ್ತಿ
ಕುಟಿಲ ಕುಂತಲಗಳಿಗೆ
ಚಿಗುರ ಬೆರಳ ಸೇರಿಸಿ

ಬೆರೆಯೆ ಬಾರೊ ! ಮೈಯ
ಮರೆಸು ಬಾರೊ ॥

ವಿಟಪುರುಷನೆ ನಟ ನಿತ್ಯನೆ ! ನಿನಗಾಗಿ
ಬೇಟಕಾದಿದೆ ಇಲ್ಲಿ ಊಟ ಹಸಿದಿದೆ

ಒಲಿದು ಬಂದ ಚೆಲುವೆ ನಾ
ಒಲವ ತಾರೊ ಮೋಹನ
ಇರವನ್ನೆಲ್ಲ ಕಳೆದು ನಾನು ! ಇಲ್ಲವಾಗುವೆ
ನಿನ್ನೊಳೈಕ್ಯಗೊಳ್ಳುವೆ

ಪ್ರಭು : ಧಿಕ್ಕಾರ ಧಿಕ್ಕಾರ ಮೋಹಕದ ಕಣ್ಣೇ
ಧಿಕ್ಕಾರ ಧಿಕ್ಕಾರ ಮತಿಗೆಟ್ಟ ಹೆಣ್ಣೇ ॥
ಕಾಮಸೂತ್ರವ ಹಿಡಿದ ಓ ಜಗದ ಮಾಯೆ
ಹೇಯ ಕಾರ್ಯಕೆ ಕೈಯ ಹಾಕದಿರು ತಾಯೆ ॥

ಮಾಯೆ : (ವಚನ) ಹ್ಞಂ ! ಅಲ್ಲಮಾ !! ನಾನಾರು ಗೊತ್ತೆ ? ಮಾಯೆ !!!

ಹಾಡು : ಹರಿಯೆದೆಯ ಮೆಟ್ಟಿದೆನು
ಹರನ ಜಟೆ ಏರಿದೆನು
ಬ್ರಹ್ಮದೇವನ ಬಾಯ ಮುದ್ರಿಸಿದೆನು
ಸುರನರೋರಗರೆಲ್ಲ
ಮರುಳ ಮುಗ್ಧರೋ ನನಗೆ
ಶರಣು ಹೋಗು ಹಠಬೇಡ ಹುಲುಮಾನವಾ !

ಪ್ರಬು : ಹರಿಹರ ಬ್ರಹ್ಮಾದಿ ದೇವ ಮಾನವರೆಲ್ಲ
ನಿನ್ನಧೀನವು ಮಾಯೆ ಇರಬಹುದು ಕೇಳು !
ನಿನ್ನನಾಡಿಸುವಂಥ ಸೂತ್ರಧಾರನದಾರು
ಗೊತ್ತಿದೆಯೆ ಹೇಳು ಹೇಳು !!

ಮಾಯೆ : ಶರಣ ರಕ್ಷಾಮಣಿಯೆ ಕಿಂಕರ ಸುಧಾಕರನೆ
ಅರಿಯದಜ್ಞೆಯು ನಾನು ಕಾಮಮೋಹಿತಳು ॥

ಪ್ರಭು : ಅಯ್ಯೋ ಹುಚ್ಚೀ ಹುಚ್ಚೀ..
ಹಾಲಿಂಗೆ ಹೆಪ್ಪಿಡಲು ಬೆಣ್ಣ ಬಹುದಲ್ಲದೆ
ನೀರಿಗೆ ಹೆಪ್ಪಿಡಲು ಬೆಣ್ಣೆ ಬಹುದೇ ?

ಮಾಯೆ : ಚುಂಬಿಸು ಭೋಗಿಸು ತೃಪ್ತಿಕೊಡು ಮನದನ್ನ
ನನ್ನ ಬಾಳಿನ ಬೆಳಕೆ ಹೊಳೆಹೊಳೆವ ರನ್ನ ॥

ಪ್ರಭು : ಮಾಯೆ,
ಬೇವು ಬೀಜವ ಬಿತ್ತಿ ಮಾವನೆಳಸುವ ತೆರದಿ

ಕಾಳುಗೆಡೆವರೆ ? ಹೋಗು ತೊಲಗಾಚೆ ದೂರ

ಮಾಯೆ : ಪ್ರಭು.. ಪ್ರಭೂ.. ಅಲ್ಲಮ.. ಅಲ್ಲಮಾ..
(ಕೂಗುತ್ತಿರುತ್ತಾಳೆ, ಅಲ್ಲಮ ತಿರಸ್ಕರಿಸಿ)

ಪ್ರಭು : ತೊಲಗಾಚೆ ದೂರ
ತೊಲಗಾಚೆ ದೂರ..
[ಅಲ್ಲಮ ತಾಂಡವದ ನಡೆಸಿ ನಿರ್ಗಮಿಸುವನು. ಮಾಯೆ ಚೀರಿ ಬೀಳುವಳು. ಸಖಿಯರು ಬಂದು ಸಂತೈಸುವರು]

**ದೃಶ್ಯ – ಅರಮನೆ**

[ಪ್ರಭು ಮಾಯೆಯರ ಪ್ರವೇಶ. ಅವರ ಮುಂದೆ ಆರತಿ ಹಿಡಿದ ಇಬ್ಬರು ಸುವಾಸಿನಿಯರು; ಪಕ್ಕದಲ್ಲಿ ಪೂವಲಿಯ ಸೂಸುವ ಇಬ್ಬರು. ಎಲ್ಲರೂ ನರ್ತಿಸುತ್ತಾ ಸ್ವಾಗತಿಸುವರು}
ಸ್ವಾಗತವು ಸ್ವಾಗತವು ಸ್ವಾಗತವು ನಿಮಗೆ
ಸ್ವಾಗತವು ಮುದ್ದಲೆಯ ಮುದ್ದು ಮೋಹನಗೆ ॥ಪ॥

ಮಾಯೆಯೊಲವಿನ ಚೆಲುವ ಚದುರ ಚೆನ್ನಿಗಗೆ
ಕಲೆಯ ಕಾಯಕವಿಡಿದ ಕವಿವರ್ಯಗೆ
ನಟುವಾಂಗ ಪಟುವಿಂಗೆ ನಾಟ್ಯವೇದದ ಗುರುಗೆ
ದಿಟದ ಮನ್ಮಥ ರೂಪಿ ಮಹನೀಯಗೆ ॥1॥

[ಸಖಿಯರು ನರ್ತಿಸುತ್ತಲೇ ನಿರ್ಗಮಿಸುವರು]
ಬಿಂಕವೇನೋ ಬಿಂಕವೇಕೋ ! ಈ ಮಾಯೆಯ
ಕಿಂಕರನೆ ಬಿಂಕವೇಕೊ
ಮಾಯೆಯೊಂದು ಚೆಲುವ ಚಿಲುಮೆ ! ಚೆನ್ನಿಗನೆ
ಕಾಯ ಕರ್ಪೂರ ಪ್ರತಿಮೆ !
ಮಿದು ಗಲ್ಲಕೆ ಮುದವ ನೀಯೊ ! ಮೋಹನಾ
ಎದೆಯದುಮ್ಮಳದ ಕಳೆಯೊ

ತುಟಿಗೆ ತುಟಿಯ ಒತ್ತಿ
ಕಟಿಗೆ ಕೈಯ ಸುತ್ತಿ
ಕುಟಿಲ ಕುಂತಲಗಳಿಗೆ
ಚಿಗುರ ಬೆರಳ ಸೇರಿಸಿ

ಬೆರೆಯೆ ಬಾರೊ ! ಮೈಯ
ಮರೆಸು ಬಾರೊ ॥

ವಿಟಪುರುಷನೆ ನಟ ನಿತ್ಯನೆ ! ನಿನಗಾಗಿ
ಬೇಟಕಾದಿದೆ ಇಲ್ಲಿ ಊಟ ಹಸಿದಿದೆ

ಒಲಿದು ಬಂದ ಚೆಲುವೆ ನಾ
ಒಲವ ತಾರೊ ಮೋಹನ

ಇರವನ್ನೆಲ್ಲ ಕಳೆದು ನಾನು ! ಇಲ್ಲವಾಗುವೆ
ನಿನ್ನೊಳೈಕ್ಯಗೊಳ್ಳುವೆ

ಪ್ರಭು : ಧಿಕ್ಕಾರ ಧಿಕ್ಕಾರ ಮೋಹಕದ ಕಣ್ಣೇ
ಧಿಕ್ಕಾರ ಧಿಕ್ಕಾರ ಮತಿಗೆಟ್ಟ ಹೆಣ್ಣೇ ॥
ಕಾಮಸೂತ್ರವ ಹಿಡಿದ ಓ ಜಗದ ಮಾಯೆ
ಹೇಯ ಕಾರ್ಯಕೆ ಕೈಯ ಹಾಕದಿರು ತಾಯೆ ॥

ಮಾಯೆ : (ವಚನ) ಹ್ಞೂಂ ! ಅಲ್ಲಮಾ !! ನಾನಾರು ಗೊತ್ತೆ ? ಮಾಯೆ !!!

ಹಾಡು : ಹರಿಯೆದೆಯ ಮೆಟ್ಟಿದೆನು
ಹರನ ಜಟಿ ಏರಿದೆನು
ಬ್ರಹ್ಮದೇವನ ಬಾಯ ಮುದ್ರಿಸಿದೆನು
ಸುರನರೋರಗರೆಲ್ಲ
ಮರುಳ ಮುಗ್ಧರೋ ನನಗೆ
ಶರಣು ಹೋಗು ಹಠಬೇಡ ಹುಲುಮಾನವಾ !

ಪ್ರಬು : ಹರಿಹರ ಬ್ರಹ್ಮಾದಿ ದೇವ ಮಾನವರೆಲ್ಲ
ನಿನ್ನಧೀನವು ಮಾಯೆ ಇರಬಹುದು ಕೇಳು !
ನಿನ್ನನಾಡಿಸುವಂಥ ಸೂತ್ರಧಾರನದಾರು
ಗೊತ್ತಿದೆಯೆ ಹೇಳು ಹೇಳು !!

ಮಾಯೆ : ಶರಣ ರಕ್ಷಾಮಣಿಯೆ ಕಿಂಕರ ಸುಧಾಕರನೆ
ಅರಿಯದಜ್ಞೆಯು ನಾನು ಕಾಮಮೋಹಿತಳು ॥

ಪ್ರಭು : ಅಯ್ಯೋ ಹುಚ್ಚೀ ಹುಚ್ಚೀ..
ಹಾಲಿಂಗೆ ಹೆಪ್ಪಿಡಲು ಬೆಣ್ಣ ಬಹುದಲ್ಲದೆ
ನೀರಿಗೆ ಹೆಪ್ಪಿಡಲು ಬೆಣ್ಣೆ ಬಹುದೇ ?

ಮಾಯೆ : ಚುಂಬಿಸು ಭೋಗಿಸು ತೃಪ್ತಿಕೊಡು ಮನದನ್ನ
ನನ್ನ ಬಾಳಿನ ಬೆಳಕೆ ಹೊಳೆಹೊಳೆವ ರನ್ನ ॥

ಪ್ರಭು : ಮಾಯೆ,
ಬೇವು ಬೀಜವ ಬಿತ್ತಿ ಮಾವನೆಳಸುವ ತೆರದಿ
ಕಾಳುಗೆಡೆವರೆ ? ಹೋಗು ತೊಲಗಾಚೆ ದೂರ

ಮಾಯೆ : ಪ್ರಭು.. ಪ್ರಭೂ.. ಅಲ್ಲಮ.. ಅಲ್ಲಮಾ..
(ಕೂಗುತ್ತಿರುತ್ತಾಳೆ, ಅಲ್ಲಮ ತಿರಸ್ಕರಿಸಿ)

ಪ್ರಭು : ತೊಲಗಾಚೆ ದೂರ
ತೊಲಗಾಚೆ ದೂರ..
[ಅಲ್ಲಮ ತಾಂಡವದ ನಡೆಸಿ ನಿರ್ಗಮಿಸುವನು. ಮಾಯೆ ಚೀರಿ ಬೀಳುವಳು. ಸಖಿಯರು ಬಂದು ಸಂತೈಸುವರು]

**ದೃಶ್ಯ – ಅರಣ್ಯ**

(ಪ್ರಭು ಪ್ರವೇಶ)

ಪ್ರಭು : ಕರುಬರಿದ್ದೂರಿಂದೆ ಕಾಡೊಳ್ಳಿತೆಂಬಂತೆ
ಕಾಮಕೀಟಗಳಿರುವ ಮಾಯೆಯರಮನೆಗಿಂತ
ಸುಪ್ರಸನ್ನತೆ ಇರುವ ಅಡವಿಯೇ ಲೇಸು
ಎಂತಹ ಪ್ರಶಾಂತ ಪಾವಿತ್ರ್ಯವೀ ತಾಣ
ಶಾಂತಿ ಮಡುಗಟ್ಟಿದೆ ಇಲಿ
ಈ ಬನವಾಸಿ ಮಡಿಲಲ್ಲಿ !

ಮಾಯೆ: ಪ್ರಭೂ.. ಅಲ್ಲಮಾ.. ಪ್ರಭೂ..

ಪ್ರಭು : ಅಯ್ಯೋ –
ಬಂದಳೀಕೆ ಮಾಯೆ ಬಂದಳಿಕೆ
ಹಿಂದುಮುಂದು ಯಾವುದೊಂದು
ತಿಳಿಯದೀಕೆ ಅಯ್ಯೋ ಬಂದಳೀಕೆ ॥

ಮಾಯೆ : ಅಲ್ಲಮಾ.. ಪ್ರಭೂ.. ಅಲ್ಲಮಾ..
ಮೋಸಗಾರ ಅಲ್ಲಮಾ! ನೀ
ಭಾಷೆಯಿತ್ತೆ ಅಲ್ಲಮಾ

ಆಸೆ ಪಟ್ಟ ಹೆಣ್ಣ ಮನವ
ಘಾಸಿಗೊಳಿಪೆ ಅಲ್ಲಮಾ ॥ ॥1॥

ಓತು ಬಂದೆ ಅಲ್ಲಮಾ ! ನಾ
ಸೋತು ಬಂದೆ ಅಲ್ಲಮಾ
ಭೀತಿಯಳಿದು ಪ್ರೀತಿಯಿಂದ
ಮಾತನಾಡೊ ಅಲ್ಲಮಾ ॥2॥

ಹಸಿರು ಹಾಸು ಹಾಸಿದೆ । ಬನ
ವಾಸಿ ಇದುವ ಲೇಸಿದೆ
ಸೂಸು ಬಾರೊ ಸುಸಿಲ ಹೂವ
ಭೂಸುರಾಂಗನೇ । ಎದೆಯ ನೇಸರಂಶನೇ ॥3॥

ಪ್ರಭು : ಇರುಳು ಹಗಲನು ಬಯಸಿ ಪಸೆ ನಿಲಲು ಬಂತಂತೆ ।
ಅಂತಾಯ್ತು ನಿನ್ನ ಗತಿ ದೂರ ಸರಿ ಮಾಯೆ !
ಕೈಗೆ ಸಿಲುಕದುದಕ್ಕೆ ಕೈ ಚಾಚ ಬರಬೇಡ
ದ್ಯುಮಣಿ ಅಲ್ಲಮ ಸಿಕ್ಕನೆಂದೆಂದೂ
ಈ ತಮದ ಮಾಯೆಗೆ !

ಮಾಯೆ : ಅಲ್ಲಮಾ ಅವಿವೇಕಿ ಅತಿಮೂರ್ಖ ಧೂರ್ತ
ಪಾಷಂಡ ಹೃದಯಿಯೇ ಪರಮ ವಂಚಕನೇ

ನಿರ್ಗುಣನೆ ನಿಷ್ಠುರನೆ ನಿಜದಿ ನಿಷ್ಕರುಣೀ
ಪ್ರೇಮದಾವಿಷ್ಕಾರಗೈಸಿ ನಾ ನಿನ್ನೊಲಿವೆ !
ಎಂದೆಂದಿಗೂ ಬಿಡದೆ ತೋಳ್ಗಳಲಿ ಬಂಧಿಸುವೆ

ಬಂಧಿಸುವೆ ಬಂಧಿಸುವೆ ಬಿಗಿದು ಬಂಧಿಸುವೆ
ಬಂಧಿಸುವೆ ಬಂಧಿಸುವೆ ಬಿಗಿಬಿಗಿದು ಬಂಧಿಸುವೆ ॥

ಪ್ರಭು : ಸಿಂಧು ಬಂಧನಕೆಂತು ಸಿಲುಕುವುದು ಮರುಳೆ
ಚೆಂದದಲಿ ಹಿಂತಿರುಗು ನೀ ಬಂದ ಒಳಗೇ
ದಗ್ಧವಾಗಲಿ ಕ್ಷುದ್ರ ಪಾತಕವು ಕಾಮ
ರೌದ್ರವತಾರದಲಿ ಅಗ್ನಿ ರಣಭೀಮ ॥
(ಕಾಳ್ಗಿಚ್ಚು ಹತ್ತುವುದು ಮಾಯೆ ಅದರಲ್ಲಿ ಬಿದ್ದು ದಗ್ಧಳಾಗುವಳು)
[ಈಗ ಕತ್ತಲಾಗುವುದು. ಹಿನ್ನೆಲೆಯಲ್ಲಿ ಶಿವ–ಪಾರ್ವತಿಯರ ತಾಂಡವ ನೃತ್ಯ]

ಹಿನ್ನೆಲೆ : 1 ಭುಗಿ ಭುಗಿಲ್ ಭುಗಲೆಂದು ಮುಗಿಲುರಿದು ಬೀಳೆ
ಝುಗ ಝುಗಾ ಝುಗಿಲೆಂದು ದಿಕ್ತಟವು ಸೀಳೆ
ಒಡೆಯೆ ಬ್ರಹ್ಮಾಂಡಾ, ನಡುಗೆ ಪಿಂಡಾಂಡ
ನಕ್ಷತ್ರ ಮಂಡಲವು ಅಕ್ಷತೆಯ ಕಾಳು
ಪ್ರಳಯ ತಾಂಡವಕಾಯ್ತು ಜಗ ಹಾಳುಬೀಳು ॥

ಹಿನ್ನೆಲೆ : 2 ಶಾಂತನಾಗೊ ಶಿವ ಶಾಂತಮೂರುತಿಯೆ
ಮಾಯೆ ಮುಗಿದಳು ಮತ್ತೆ ಮಹದೇವಿ ಮುಡಿದಳು ॥
ತಾಮಸದ ಕಳೆ ಹರಿದು ಸಾತ್ವಿಕದ ಬೆಳೆ ಬಲಿದು
ವಿಶ್ವಶಾಂತಿಯ ಕಾಯೊ ವಿಶ್ವಾತ್ಮನೇ ॥

ಶಿವ–ಶಿವೆಯರ ಸಂವಾದದ ಫಲವಾಗಿ ಪಾರ್ವತಿ ತನ್ನ ತಾಮಸ ಕಳೆಯನ್ನು ಭೂಮಿಗೆ ಕಳುಹಿಸಿದಳು. ಅದು ಮಾಯೆಯಾಗಿ ಹುಟ್ಟಿ ಅಲ್ಲಮನನ್ನು ಕಾಮದಿಂದ ಒಲಿಸಿಕೊಳ್ಳಲೆತ್ನಿಸಿ ವಿಫಲವಾಯಿತು. ಕಾಳ್ಗಿಚ್ಚಿನಲ್ಲಿ ಬಿದು ದಗ್ಧವಾಗಿ ಆ ತಾಮಸ ಕಳೆ ಕೈಲಾಸಕ್ಕೆ ಹೋಗಿ ಶಿವೆಯನ್ನು ಸೇರಿಕೊಂಡಿತು. ಅನಂತರ ಶಿವನಾಜ್ಞೆಯ ಮೇರೆಗೆ ಪಾರ್ವತಿ ತನ್ನ ಸಾತ್ವಿಕ ಕಳೆಯನ್ನು ಭೂಮಿಗೆ ಕಳುಹಿಸಿದಳು. ಆ ಸಾತ್ವಿಕ ಕಳೆಯೇ ಅಕ್ಕಮಹಾದೇವಿಯಾಗಿ ಹುಟ್ಟಿ ಅಲ್ಲಮ ಬಸವಾದಿಗಳ ಪ್ರೀತ್ಯಾಧರಗಳ ಪಾತ್ರವಾಗಿ ಕದಳಿಯಲ್ಲಿ ಐಕ್ಯವಾಯಿತು.
(ಎಲ್ಲರೂ ಮಂಗಳ ಹಾಡುವರು)

ಸಮೂಹ ನರ್ತನದಲ್ಲಿ :
ಜಯ ಜಯ ಜಯ ಜಯ ನಾಟ್ಯಾಂಜಲಿ
ಜಯ ಜಯ ಜಯಹೇ ಜಯ ಪುಷ್ಪಾಂಜಲಿ ॥
ಬನವಸೆ ನಾಡಿನ ಭಾಗ್ಯೋದಯನೆ
ಅನಿಮಿಷ ಪೂಜ್ಯನೆ ಅಲ್ಲಮನೇ
ರಸಿಕರ ಕಾಯೋ ಪಶುಪತಿ ರೂಪನೆ
ನಿಮಿಷ ನಿಮಿಷವೂ ನೆನೆವೆವೊ ನಿನ್ನನು ॥ಜಯ॥

**ತಲಕಾಡು**

ದೃಶ್ಯ 1:

[ನರ್ತಕ–ನರ್ತಕಿಯರು]

ಬಾರಯ್ಯ ಮಿತ್ರನೆ ಬಾರೋ ಪವಿತ್ರನೆ
ಬಾ ತಂಗಿ ನಮ್ಮೂರ ನೋಡಬನ್ನಿ ॥ಪ॥

ಕನ್ನಡಿಗರೈಸಿರಿಯ ನೋಡಬನ್ನಿ
ಕರ್ನಾಟ ದರ್ಶನದ ಪಡೆಯ ಬನ್ನಿ ॥ಅನು.ಪ॥

ಕೃಷ್ಣೆ ಕಾವೇರಿಯರು ಹೇಮವತಿ ಕುಮುದವತಿ
ಶರಾವತಿ ತುಂಗಭದ್ರೆ ಕಣ್ವ ವರದೆ
ಅಮಲ ಪ್ರಭೆ ಘಟಪ್ರಭೆ ಎಲ್ಲ ಪ್ರಭೆಯರು ಸೇರಿ
ಕರೆಯುತಿಹರು ತೀರ್ಥತುಂಬಿ ತಮ್ಮ ಮಡಿಲೊಳು ॥

(ಬೇರೆ ಧಾಟಿಯಲ್ಲಿ)
ಗಂಗ ಕದಂಬ ಚಾಲುಕ್ಯರರಸರು
ರಾಷ್ಟ್ರಕೂಟರಾಳಿದರಿಲ್ಲಿ
ಹೊಯ್ಸಳ ದೊರೆಗಳು ಕೆಳದಿಯ ಅರಸರು
ವಿಜಯನಗರ ಮೆರೆದದ್ದಿಲ್ಲಿ
ಮೈಸೂರಿನ ಮಹಾರಾಜರ ನಾಡು
ಕಿತ್ತೂರರಸಿಯ ಕರುಗೂಡು
ಮಾಗಡಿ ಕೆಂಪೇಗೌಡರ ಬೀಡು

(ಮೊದಲಿನಂತೆ)
ಬಾರಯ್ಯ ಮಿತ್ರನೆ ಬಾರೋ ಮಿತ್ರನೆ
ಬಾ ತಂಗಿ ನಮ್ಮೂರ ನೋಡ ಬನ್ನಿ ॥ಪ॥

ಕಾಡ ಮತ್ತು ತಲರಿದ್ದ । ಈ ಅಡವಿಯು
'ತಲಕಾಡು' ಎಂದಾಯಿತು ॥ಕುಂಜರದ॥

ಔಷಧ ಸೂಚಿಸಿದ । ಶಿವ ತಾನು
ವೈದ್ಯೇಶ್ವರನೆಂದಾದ ॥

ಸೋಮದತ್ತಾನೆಂಬ ಆನೆ ಇದ್ದೀ ಜಾಗ
ಗಜಾರಣ್ಯ ಕ್ಷೇತ್ರವಾಯ್ತು ॥ಕುಂಜರದ॥

ನಿವೇದಕ :
(ಹಿನ್ನೆಲೆಯಲ್ಲಿ) ಹೀಗೆ ವೈದ್ಯೇಶ್ವರ ಲಿಂಗವಾಗಿ ಗಜಾರಣ್ಯ ಅಥವಾ ತಲಕಾಡ ಮಡಿಲಲ್ಲಿ ಮೂಡಿದ ಶಿವನು ಕಾವೇರೀ ಉತ್ತರವಾಹಿನಿಯ ತೀರದಲ್ಲಿ ಅರ್ಕೇಶ್ವರನಾಗಿ ಸೂರ್ಯದೇವನಿಂದಲೂ ಪೂರ್ವವಾಹಿನಿ ತೀರದಲ್ಲಿ ವಾಸುಕೇಶ್ವರ ಅಥವ ಪಾತಾಳೇಶ್ವರನಾಗಿ ಆದಿಶೇಷನಿಂದಲೂ, ದಕ್ಷಿಣವಾಹಿನಿ ತೀರದಲ್ಲಿ ಸೈಕತೇಶ್ವರ ಅಥವ ಮರುಳೇಶ್ವರನಾಗಿ ಬ್ರಹ್ಮ ದೇವನಿಂದಲೂ

***

ಚೆಂದೊಳ್ಳೆ ಚೆಲುವೇರೆ ಹೇಳ್ರೇ
ಮಾಲಿಂಗಿ ಮಡುವಾಯ್ತೇಕೆ ಹೇಳ್ರೇ?

ಸ್ತ್ರೀಯರು: ಉಗ್ರ ರುದ್ರ ಚೆನ್ನ ಹೊನ್ನ ಕೇಳ್ರೋ
ಪಸಂದಾದ ಕತೆಯೊಂದೈತೆ ಕೇಳ್ರೋ !
ಪುಟ್ಟ ದೋಣಿ ಹುಟ್ಟು ಹಾಕಿ ಆಚೆ ದಡೆ ಸೇರಿಸ್ರೋ
ಮಾಲಿಂಗಿ ದಂಡೆ ಮುಟ್ಟೀದ ಮ್ಯಾಲೆ ಹೇಳ್ತೀವ್ ಕೇಳ್ರೋ ॥

(ದೋಣಿ ಹಾಡು)
ಮೂಡು ಮಲೆಯಾ ಮ್ಯಾಲೆ ಬಡಗ ಬಯಲಾ ಮ್ಯಾಲೆ
ನಡದೈತೆ ಹಾಡ ಹೊಸ ಹಾದಿ
॥ಹುಯ್ಯಾಲೆ ಹುಯ್ಯೋ ಹಾಯ್ ಹಾಯ್ ಹುಯ್ಯಾಲೆ ಹುಯ್ಯೋ॥

ಮುತ್ತೈದೆ ಮೂಗುತೀ ಅತ್ತ್‌ತು ಸಾರೈತೇ
ಹಿಡಿಶಾಪ ಹಾಕಿ ಕಿಡಿಕಾರಿ!
॥ಹುಯ್ಯಾಲೆ ಹುಯ್ಯೋ ಹಾಯ್ ಹಾಯ್ ಹುಯ್ಯಾಲೆ ಹುಯ್ಯೋ॥

ಹಾಯೀಯ ಹರಿಬಿಟ್ಟು ನೀರಿನ ಎದೆ ಉತ್ತು
ಏರಿಳಿವ ತೆರೆಯೊಡನೆ ಆಟವಾಡಿ
॥ಹುಯ್ಯಾಲೆ ಹುಯ್ಯೋ ಹಾಯ್ ಹಾಯ್ ಹುಯ್ಯಾಲೆ ಹುಯ್ಯೋ॥

ಗಾಳೀಯ ಕಚಗುಳಿ ತೇಲುವ ಮುಗಿಲೋಳಿ
ಲಾಳಿ ಹಾಕುವ ಮೀಂಚುಳ್ಳಿ ॥
॥ಹುಯ್ಯಾಲೆ ಹುಯ್ಯೋ ಹಾಯ್ ಹಾಯ್ ಹುಯ್ಯಾಲೆ ಹುಯ್ಯೋ॥

ಮಾಲಿಂಗಿ ಮಡುವಾಗಿ ತಲಕಾಡು ಮರಳಾಗಿ
ಮೈಸೂರರಸಾರ ಕುಡಿ ಹುಡಿಯಾಗಿ
ಮೈಸೂರರಸರ ಕುಡಿ ಹುಡಿಯಾದ ಮುತ್ತೈದೇಯ
ಕಣ್ಣೀರ ಕತೆ ಹೇಳೇ ಕಾವೇರಿ ॥
॥ಹುಯ್ಯಾಲೆ ಹುಯ್ಯೋ ಹಾಯ್ ಹಾಯ್ ಹುಯ್ಯಾಲೆ ಹುಯ್ಯೋ॥

[–ಶಿವ–ಪಾರ್ವತಿಯರ ಲಾಸ್ಯ–]
ಕುಂಜರದ ಬೊಂಬೆ ಕೇಳೆ । ಎಲ್ಲರ ಜಾಣೆ
ಕುಶಲದ ಬೊಂಬೆ ಕೇಳೇ ॥
ಶಿವೆಯು ಕೇಳಿದಳವನ । ಓ ಸ್ವಾಮಿಯೆ
ಬಾವಿ ಬದುಕದು ಎಂಥದೊ ॥ಕುಂಜರದ॥

ಬಕುತೀಯ ಬಿತ್ತಬೇಕ । ಆ ನೆಲದಲ್ಲಿ
ಮುಕುತಿಯ ಬೆಳೆಯಬೇಕು ॥

ಅದಕಾಗಿ ನಡೆಯ ಬೇಕು । ನಾವಿಬ್ಬರು
ಕಾವೇರಿ ಜತೆಗೂಡಲು ॥ಕುಂಜರದ॥

ನಾಡುಗಳೊಳಗೆ ನಾಡು । ಕನ್ನಡ ನಾಡು
ಸತ್ಯಾವಂತರ ಬೀಡದು ॥

ನಡೆ ಗೌರಿ ಬಾ ಹೋಗಾನ । ನಾವಲ್ಲಿಯೆ
ಶಿಲೆಯಲ್ಲಿ ನೆಲೆನಿಲ್ಲನ ॥ ಕುಂಜರದ ॥

ಮೊದಲು ಹೋಗಲಿ ಶಿಷ್ಯನು । ಈ ಸೋಮನು
ಮದದಾನೆಯಾಗಿ ಹುಟ್ಟಿ ॥

ಎಂದಳು ಪಾರ್ವತಿಯು ಶಿಷ್ಯನ ಕಳುಹೆ
ಬಂದಾರು ತಲಕಾಡಿಗೆ ॥ ಕುಂಜರದ ॥

ಶಿವನು ಶಾಲ್ಮಲಿ ವೃಕ್ಷದ । ಬುಡದಡಿಯಲ್ಲಿ
ಕುರುಹಾಗಿ ನೆಲೆನಿಂತನು ॥

ಮಣಿಕರ್ಣಿಕಾ ದೇವಿಯು । ಗೋಕರ್ಣೇಂಬ
ತೀರ್ಥವದಳು ಬಳಿಕೆ ॥ ಕುಂಜರದ ॥

ಶಿವನ ಶಿಷ್ಯನು ಸೋಂನು । ಅಲ್ಲಿಗೆ ಬಂದು
ಆನೆಯ ರೂಪಾದನು ॥

ಗಣಧರ ಸೋಮದತ್ತಾ । ಆ ರೀತಿಯಲಿ
ಗುಣಮಣಿ ಅನೆಯಾದ ॥ಕುಂಜರದ॥

ಆನೆಯು ಪ್ರತಿದಿನವು । ಮಣಿಕರ್ಣಿಕ
ಗೋಕರ್ಣ ತೀರ್ಥದಲ್ಲಿ ॥

ಮಿಂದು ತಾವರೆ ತೆಗೆದು । ಭಕ್ತಿಯಲ್ಲಿ
ಮರದಡಿಗೆ ಮುಡಿಸುತ್ತಿತ್ತು ॥ಕುಂಜರದ॥

ನೋಡಿದರು ಇದನಿಬ್ಬರು । ಬೇಡರುಗಳು
ತಲ ಕಾಡ ಎಂಬಿಬ್ಬರು ॥

ಆನೆಯು ಮರೆಯಾಗಲು ಕೊಡಲಿಯನೆತ್ತಿ
ಬುಡದ ಲಿಂಗಕೆ ಹೊಡೆಯೆ ॥ಕುಂಜರದ॥

ಕೋಡಿ ಹರಿಯಿತು ರಕುತ ! ಬೇಡರ ಕಣ್ಣು
ಕೋಡಿ ಹರಿಸಿತು ಕಣ್ಣೀರ ॥

ಶಿವನು ಅಶರೀರಿಯಾಗಿ । ಹೇಳಿದನಾಗ
ಮರದೆಲೆಯ ಪಟ್ಟಿಕಟ್ರೋ ॥ಕುಂಜರದ॥

ಕೂಡಾಲೆ ಶಾಲ್ಮಲಿಯ । ಎಲೆಯನು ಕಿತ್ತು
ಪಟ್ಟಿ ಕಟ್ಟಲು ಗಾಯಕೆ ॥

ಶಿವನು ಅಶರೀರಿಯಾಗಿ । ಹೇಳಿದನಾಗ
ಮರದೆಲೆಯ ಪಟ್ಟಿ ಕಟ್ರೋ ॥ಕುಂಜರದ॥

ಕೂಡಾಲೆ ಶಾಲ್ಮಲಿಯ । ಎಲೆಯನು ಕಿತ್ತು
ಪಟ್ಟಿ ಕಟ್ಟಲು ಗಾಯಕೆ ॥

ನೆತ್ತಾರು ನಿಂತಿತು । ಮತ್ತೆ ಹರಿಯಿತು ಧಾರೆ
ಹಾಲಾಗಿ ಆ ಎಡೆಯೇ ॥ಕುಂಜರದ॥

ಬೇಡಿರಬ್ಬರು ಕುಡಿದು । ಆ ಹಾಲನ್ನು
ಮೃಡನ ಓಲಗ ಸೇರ್ದರು ॥

ಕನ್ನಡಿಗರೈಸಿರಿಯ ನೋಡಬನ್ನಿ
ಕರ್ನಾಟಕ ದರ್ಶನವ ಪಡೆಯ ಬನ್ನಿ ॥ಅನು.ಪ॥

(ಧಾಟಿ) ಯಾತ್ರೆ ಹೋಗೋಣ ಬನ್ನಿರೆ । ತಲಕಾಡಿಗೆ
ಜಾತ್ರೆ ಹೋಗೋಣ ಬನ್ನಿರೇ ॥ ॥ಪ॥

ಜಾತ್ರೆಗೆ ಹೊಗಿ ಸ್ತೋತ್ರಾವ ಮಾಡುತ
ಪಂಚಲಿಂಗ ದರ್ಶನವ ಮಾಡೋನ ಬನ್ನಿರೆ ॥ಅನು.ಪ॥

ಮುಡುಕುತೊರೆ ಮಲ್ಲೇಶ ಕಡೆಲಿರೋ ಅರ್ಕೇಶ
ನಡುವೆ ನಡುವೆ ಪಾತಾಳೇಶ ವೈದ್ಯೇಶ
ಮರಳಿನಲ್ಲಿ ಮಡಗಿರೋನು ಮರಳೇಶರೈವರನ್ನು
ದರ್ಶನವ ಮಾಡಬೇಕು ಹಾಡಬೇಕು ॥5॥

(ಆಧಾಟಿ ತಲಕಾಡು ತವರೂರು
ತಾಯವ್ವ ಮಡಿಲೂರು
ಹೊಂಗೇಯ ಮರದ ನೆರಳಂತೆ
ಹೊಂಗೇಯ ಮರದ ನೆರಳಂತೆ । ಹಡೆದವಳ
ತಂಪೀನ ತಾಣ ಮಡಿಲಂತೆ

(ಧಾಟಿ) ನಮ್ಮೂರ ದಾರೀಲಿ ರಂಗೋಲೆ ಬರೆದವ್ಳೆ
ಹೊನ್ನ ಹೊಂಬಾಳೆ ಹುಡಿ ಚೆಲ್ಲಿ
ಹೊನ್ನ ಹೊಂಬಾಳೆ ಹುಡಿ ಚೆಲ್ಲಿ ಮುಡಿದವ್ಳೆ
ಮುಳ್ಳೀನ ಬೇಲಿ ಕುಡಿ ಬಾಳೆ

ತಡಕಾಡ ದಾರಿಯಲಿ ಕಲ್ಲಿಲ್ಲ ಮುಳ್ಳಿಲ್ಲ
ಮಣ್ಣನೆಯ ಸಣ್ ಮಣಲು ಹಾಸೈತೆ ।
ನುಣ್ಣನೆಯ ಸಣ್ ಮಣಲ ಮೇಲಲ್ಲಿ ಮಲಗವ್ವೆ

ಬೆಳ್ಳನೆಯ ಬೆಳ್ಳೀ ಮಲ್ಲೀಗೆ ॥

ಮರಳು ಮರಳೇ ಎಲ್ಲ ಸಿರಿ ಮರಳು ಗಿರಿಯಂತೆ
ಗೆರೆ ಬರೆದ ಗೇರು ಮರಸಾಲು
ಗೆರೆ ಬರೆದ ಗೇರು ಮರಸಾಲು । ಮುಗಿಲಲ್ಲಿ
ಬೆಳ್ಳಕ್ಕಿ ಮಾಲೆ ಗುಡಿಸಾಲು ॥3॥

ತಾಯಿ ಕಾವೇರಿ ಕಿಲ ಕಿಲ ನಗುತಾಳೆ
ಬಾಳೆಯ ಮೀನ ಕೆಣ ಕೆಣಕಿ ।
ಬಳೆಯ ಮೀನ ಕೆಣ ಕೆಣಕಿ ನಗುತಾಳೆ
ನೀರ ನೆರಿಗೇಯ ಗರಿ ಚಿಮ್ಮಿ ॥4॥

ಮುಡುಕು ತೊರೆಯಾ ಬಳಿ ಕಾವೇರಿ ಮುಡಿದಾಳು
ಭ್ರಮರಾಂಬ ಮಲ್ಲಿಕಾರ್ಜುನರಡಿಯ
ಭ್ರಮರಾಬ ಮಲ್ಲಿಕಾರ್ಜುನರಡಿಯ ಮುಡಿಯಾಲಿಟ್ಟು
ಬೆಡಗಿ ನಡುಬಾಗಿ ನಡೆದಾಳು ॥5॥

ಗಂಡು : (ಬೇರೆ ಧಾಟಿಯಲ್ಲಿ)
ಕತೆಯಾ ಕೇಳುವೆ ಹೇಳೆ ಜಾಣೆ । ತಲಕಾಡಿನ
ಕತೆಯಾ ಕೇಳುವೆ ಹೇಳೆ ಜಾಣೆ ॥
ತಲಕಾಡು ಹೆಂಗಾಯ್ತು । ಮರುಭೂಮಿ ಎಂತಾಯ್ತು
ಗರಿಗೆದರಿ ಕುಣಿಯುವ ಗಿರನವಿಲೆ ಹೇಳೆ ॥

ಹೆಣ್ಣು : (ಬೆರೆ ಧಾಟಿಯಲ್ಲಿ)
(ಇಬ್ಬರು ಮುಮ್ಮೇಳ ಹಾಕಿದರೆ ಉಳಿದವರು ಹಿಮ್ಮೇಳದಲ್ಲಿ ಪಲ್ಲವಿ ಹಾಡಬೇಕು)

ಕುಂಜರದ ಬೊಂಬೆ ಕೇಳ । ಎಲ್ಲರ ಜಾಣೆ
ಕುಶಲದ ಬೊಂಬೆ ಕೇಳೆ ॥

ಶಿವನೊಮ್ಮೆ ಕೈಲಾಸದಿ । ಗಿರಿಜೆಯ ಕೂಡಿ
ಜವದಿಂದ ನಾಂಟ್ಯವಾಡೆ ॥

ಗೀಗೀಪದ:
ನುಡಿ : ರಕ್ಕಸ ತಂಗಡಿ ಯುದ್ಧಹಾಗೆ ವಿಜಯನಗರವು ಹಾಳಾಯ್ತು ವಿಜಯನಗರವು ಹಾಳಾಯ್ತೋ
ಹಿಮ್ಮೇಳ : ॥ಅರೆ ಗೀಯ ಗೀಯ ಗಾಗಿಯ ಗೀಯ ಗೀಯ॥

1. ಕುಟುಕು ಜೀವ ಹಿಡ್ಕೊಂಡಲ್ಲೆ ಕೊರಕ್ಕೊಳ್ತಾನೆ ಕುಂತಿತ್ತು
2. ಕೊರಕ್ಕೊಳ್ತಾನೆ ಕುಂತಿತ್ತು ॥ಅರೆ ಗೀಯ ಗೀಯ ॥

1. ವೆಂಕಟಪತಿ ಚಕ್ರವರ್ತಿ ಪೆನುಗೊಂಡೆಯಿಂದಾಳ್ತಿದ್ದಾ
2. ಪೆನುಗೊಂಡೆಯಿಂದಾಳ್ತಿದ್ದಾ ॥ಅರೆ ಗೀಯ ಗೀಯ ॥

1. ಅವನಣ್ಣನ ಮಗ ತಿರುಮಲರಾಯ ಶ್ರೀರಂಗಪಟ್ಟಣದಾಗಿದ್ದಾ

2. ಶ್ರೀರಂಗಪಟ್ಣದಾಗಿದ್ದಾ ॥ಅರೆ ಗೀಯ ಗೀಯ ॥

1. ವೆಂಕಟಪತಿಗೂ ತಿರುಮಲರಾಯಗೂ ಇರಸ ಉಂಟಾಯ್ತೋ
2. ಇರಸ ಉಂಟಾಯ್ತೋ ॥ಅರೆ ಗೀಯ ಗೀಯ ॥

1. ಮೈಸೂರ ಸೀಮೆ ರಾಜ ಒಡಯನ್ನೆತ್ತಿ ಕಟ್ಟಿದ್ನೋ
2. ರಾಜ ಒಡಯನ್ನೆತ್ತಿ ಕಟ್ಟಿದ್ನೋ ॥ಅರೆ ಗೀಯ ಗೀಯ ॥

1. ರಾಜ ಒಡೆಯ ಶ್ರೀರಂಗಪಟ್ನಾ ಮುತ್ತಿಗೆ ಹಾಕ್ಬುಟ್ಟಾ
2. ಮುತ್ತಿಗೆ ಹಾಕ್ಬುಟ್ಟಾ ॥ಅರೆ ಗೀಯ ಗೀಯ ॥

3. ಕಾಳ್ಗಾ ಆಯುತು ಮಾರಾಮಾರಿ ಕಾವೇರಿ ಉದ್ದಾ
4. ಕಾವೇರಿ ಉದ್ದಾ ॥ಅರೆ ಗೀಯ ಗೀಯ ॥

ಗಂಡು : ಆಗ ಏನಾಯ್ತಪ್ಪಾ ಅಂದ್ರೇ
ಶ್ರೀರಂಗಪಟ್ಟಣದಾಗೇ ರಾಜ ಇರ್ನಿಲ್ಲಾ !
ಅವನ ರಾಣಿ ಇದ್ಳು, ರಾಣಿ ರಂಗನಾಯಕಮ್ಮ ಇದ್ಳು !
ಅವಳ ಒಬ್ನೇ ಒಬ್ಬ ಮಗ ಶ್ರೀರಂಗರಾಯನೂ ಇದ್ದ

ಹೆಣ್ಣು : ಯವ್ವೇ ! ಹೆಡ್ತಿ ಮಗಾ ಇಬ್ಬರ್ನೇ ಬಿಟ್ಟು
ರಜಾ ಎಲ್ಹೋಗಿದ್ದಾ? ॥

ಗಂಡು : ತಿರುಮಲ ರಾಯಂಗ್ಬು ಸರಿಲ್ದೆ ತಲಕಾಡ್ನಲ್ಲಿದ್ದ
ತಲಕಾಡ್ನಲ್ಲಿದ್ದ ॥ಅರೆ ಗೀಯ ಗೀಯ॥

ವೈದ್ಯೇಶ್ವರ ಲಿಂಗದ ಮುಂದೆ ಔಸ್ತೀ ಕುಡೀತಿದ್ದ
ಔಸ್ತೀ ಕುಡೀತಿದ್ದ ॥ಅರೆ ಗೀಯ ಗೀಯ॥

ವಚನ : ಪಾಪ ! ಹೆಣ್ಣೆಂಗ್ಸು ರಂಗನಾಯಕಮ್ಮ ಸುಮ್ಮೇ ಇದ್ಲಾ ?
ಎಲ್ಲರೂ : ಇಲ್ಲಾ, ಇಲ್ಲಾ !

ಗಂಡು : ಏನ್ಮಾಡಿದ್ಲು ಗೊತ್ತಾ?
ಇದ್ದ ಒಬ್ನೇ ಒಬ್ಬ ಮಗನ್ನ
ಶ್ರೀರಂಗರಾಯ ಎಂಬೋನ್ನ
ಜೊತೇಲೆ ಕರ್ಕೊಂಡ್ ಹೊಂಟೇ ಬುಟ್ಳು

ಮೈಯಿಗೆ ಕವಚ ತಲೆಗೆ ಮೊಟ್ಟೆ
ಬೆನ್ನಾಗ ಬಾಣ ತೋಳಾಗ್ ಬಿಲ್ಲು–ಮಗನಿಗೆ
ತನಗೆ –

ಹಾಡು : ಗಂಡ ಉಡುಗ ಕಚ್ಚೆ ಕಟ್ಟಿ
ತಂಡುಗಾಸೆ ಸೊಂಟಕ್ಕಟ್ಟಿ
ಗಂಡ್ಲಿನಂಗೆ ಯಾಸ ಹಾಕಿ
ದಿಂಡುಗೆಡವಲು ಹೊರಟಾಳೋ ॥ರಣಕೆ ಹೊರಟಾಳೋ॥

ಕತ್ತಿ ಕಠಾರಿ ಸಿಕ್ಕಿಸ್ಕೊಂಡು
ನೆತ್ತಿ ಬಾವುಟ ಹಾರಿಸ್ಕೊಂಡು
ಜೈ ರಂಗನಾಥ
ಜೈ ನಿಮಿಷಾಂಬಾ

–ನರ್ತನ–
ಶಪಿಸುತ್ತ ಶಪಿಸುತ್ತಾ
ಶಿವನಾಮ ಜಪಿಸುತ್ತಾ
ಹಾರಿದಳು ಕಾವೇರಿ ಮಡಿಲೀಗೇ
ತೇಲಿದಳು ಹೆಣವಾಗಿ ಅಲೆ ಮೇಗೇ ॥

ವಚನ : ಶ್ರೀರಂಗಮ್ಮನ ಶಾಪ ಸತ್ಯವಾಯ್ತು !
ಹರಿವ ಕಾವೇರಮ್ಮನ ಸಾಕ್ಷಿ ನಿತ್ಯವಾಯ್ತು !

ಜೈ ನಮಃ ಪಾರ್ವತೀ ಪತೇ.. ಹರ ಹರ ಮಹಾದೇವ !
ಲಕ್ಷ್ಮೀ ನಾರಾಯಣ ಗೋವಿಂದಾ.. ಗೋವಿಂದ !!
(–ಚಣಕಾಲ ಮೌನ –)

(ಅನಂತರ) – ಮಂಗಳ :
ಮಂಗಳವಾಗಲಿ ವೈದ್ಯೇಶ್ವರನಿಗೆ ತಲಕಾಡ ಪಂಚಲಿಂಗೋದ್ಭವರಿಗೆ
ಮಂಗಳವಾಗಲಿ ಅರ್ಕೇಶ ಮರಳೇಶ ಪಾತಾಳೇಶರಿಗೆ
ಮಂಗಳವಾಗಲಿ ಮಲ್ಲಿಕಾರ್ಜುನಗೆ ಶ್ರೀ ಮಹಾಲಿಂಗಸ್ವಾಮಿ ಭ್ರಮರಾಂಬಾದೇವಿಗೆ

ಜಯಮಂಗಲ ಎನ್ನಿ, ನಿತ್ಯ ಮಂಗಳ ಎನಿ
ಜಯವು ನಿಮಗೆಲ್ಲರಿಗೂ ಶುಭವಾಗಲಿ

## ಶ್ರವಣ ಬೆಳಗೊಳ

ದೃಶ್ಯ : 1
ಶ್ರವಣ ಬೆಳಗೊಳದ ಚಂದ್ರಗಿರಿಯ ಸವತಿಗಂಧವಾರಣ ಬಸದಿಯ ಮುಂಭಾಗ
ನರ್ತಕರು–ನರ್ತಕಿಯರು [ಮೊಣಕಾಲೂರಿ ಪ್ರಾರ್ಥನಾ ಭಂಗಿಯಲ್ಲಿ]

ಖಿಮೋ ಅರಿಯಂತಾಣಂ
ಖಿಮೋ ಸಿದ್ಧಾಣಂ
ಣಮೋ ಆ ಇರಿಯಾಣಂ
ಣಮೋ ಉವಜ್ಝಾಯಾಣಂ
ಣಮೋ ಲೋಯಿ ಸವ್ವ ಸಾವೂಣಂ ॥

ತಾಳ–ಲಯದಲ್ಲಿ : ಪಂಚಪರಮೇಷ್ಠಿಗಳ ಪಾದ ವಂದನೆಗೈದು
ಸಕಲ ತೀರ್ಥಂಕರರ ನಮಿಪಿವು ನಿಂದು ॥ಒ॥
ಪ್ರಾಂಜಲ ಮನದಲಿ ಪ್ರಾರ್ಥನೆಗೈಯುವೆವು

ಪುರುಪರಮೇಶನ ಪುತ್ರ ಪವಿತ್ರರ ॥ಅನು.ಪ॥

ಸ್ಯಾದ್ವಾದ ಸದ್ಬೋಧ ಪುದ್ಗಲವನರಿದು
ಜೀವದಯೆ ಜೈನಧರ್ಮ ಎಂಬುದನೊರೆದು
ಕರ್ಮ ಕ್ಷಯದಲಿ ಕೇವಲಿಯಾದ
ಮಹಾಮಹಿಮ ಶ್ರೀ ಗೊಮ್ಮಟನಾಥನ ॥1॥

ಸಮ್ಯಕ್ ದರ್ಶನ ಸಮ್ಯಕ್ ದರ್ಶನ
ಸಮ್ಯಕ್ ಚಾರಿತ್ರ ರತ್ನತ್ರಯಗಳ
ಕಾವೇರಮ್ಮಾ ನದಿ ದಾಟಿ ಮಾಲಿಂಗಿ ಮುಟ್ಟಿ
ದಿಣ್ಣೇಮ್ಯಾಲೆ ನಿಂತೆ ಬುಟ್ಟು ಮುಗಿಲಿಗೆ ದಿಟ್ಟೆ ಅಟ್ಟಿ !
ಆಗ, ರಾಜ ಒಡೆಯ ಏನ್ಮಾಡಿದ್ನಪ್ಪಾ ಅಂದ್ರೇ
ಎಲ್ಲರೂ : ಏನ್ಮಾಡ್ದಾ..?
ಗಂಡು : (ಯಕ್ಷಗಾನ ಬಯಲಾಟದ ಧಾಟಿಯಲ್ಲಿ)
ಶ್ರೀರಂಗಪಟ್ಟಣದ ಪಟ್ಟದ ರಾಣೀ ಕೇಳೇ ॥
ತಿರುಮಲ ರಾಯನ ಕಟ್ಟಾಣಿ ಸರವೆ ಕೇಳೇ ॥
ನಿನ್ನ ಮೂಗ್ನಾಗಿರೋ ಮೂಗ್ತೀನಾ ತೆಗೆದುಕೊಂಡೆ

(ಎಲ್ಲರೂ ತಾಳ ಚಳ ಚಳ ಹಾಕುತ್ತಾ ಪುನರುಚ್ಚರಿಸುವರು ನರ್ತಿಸುತ್ತಾ)
ಮುತ್ತೈದೆ ಮೂಗುತೀ
ಬೆಲೆ ಬಾಳೊ ಮೂಗುತೀ
ರಂಡೆ ನಿನಗ್ಯಾಕೆ ತೆಗೆದುಕೊಡೇ ॥

– ಕುಣಿಯುವರು -

ಗಂಡು : ಅದಕ್ಕೆ ಅಮ್ಮಣ್ಣಿ ಏನಂದ್ಲು ಗೊತ್ತಾ?
ಎಲ್ಲರೂ : ಏನಂದ್ಲೂ ?
ಗಂಡು : (ಹಾಡು) ಮುತ್ತೀ ಮೂಗುತಿ ಕೊಡುತೀನಿ ಮಾಯಾವಿ
ನನ್ನ ಮಗನ್ನ ಮಡಿಲಾಗೆ ಹಾಕ್ತೀಯೇನೊ? ಚಾಂಡಲ
ನನ್ನ ಗಂಡನ್ನ ತೊಡೆ ಮೇಲೆ ಇರುಸ್ತೀಯೇನೋ !

ನನ್ನ ಮಗ ಶ್ರೀರಂಗ ನನ್ ಕಣ್ಣು ನನ್ ಜೀವ
ನನ್ ಉಸಿರೀನುಸಿರಾಗಿದ್ದ ! ಒಬ್ಬಾನೆ ಮಗನೆಲ್ಲೋ
ಹಾಲುಗಲ್ಲದ ಹಸುಳೆ ದೀಪದಂಥಾ ಕಣ್ಣು
ಜೇನು ಸುರಿಯೋ ತುಟಿ ಬಾಳೆಯಂಥಾ ಸುಮಧುರ ಸುಕುಮಾರ
ಬಿಸಿಲು ಕಂಡವನಲ್ಲ ಬೆಂದು ಬೆಳಲ್ದೋನಲ್ಲ
ಹೊಸಲು ದಾಟಿದ ಕೂಡ್ಲೇ ಒಸಗೇ ಅಂತಿದ್ದ
'ಹಸಿದಾ ಮಗನೇ' ಅಂದ್ರ ಹಾರಿ ಅಪ್ಕೋತಿದ್ದ
ತೆರೆದಾ ತೋಳುಗಳಾ ಹೂಮಾಲೆ ಹಾಕ್ತಿದ್ದ
ಹಾಡಿ ಹಾಡಿ ಕುಣ್ದು ಅವ್ವಾ ಅವ್ವಾ ಹಾಡೆ
ನಿನ್ನ ತೊಡೆಯಾ ತೊಟ್ಟಿಲಲ್ಲಿ ಮಲಗ್ತೀನಿ ಹಾಡೆ
ಜೋಗುಳು ಹಾಡಿ ಜೋಪಾನ ಮಾಡೆ
ಅಂತಿದ್ದ ಕಂದನ್ನ ನನ್ ಬಾಳಿನ ರತ್ನಾನ
ಚೂರು ಮಾಡಿದೆಯಲ್ಲೊ ಮೈಸೂರ ಮಾಯಾವಿ !
ಹರಿದು ತಿಂದೇಯಲ್ಲೋ ಚಿಂದಿ ಮಾಡಿದೆಯಲ್ಲೋ

ಅವನ ಹೆಣವೂ ಕೈಗೆ ಸಿಗದಂಗೆ ಮಾಡಿದ್ಯಲ್ಲೋ !

ಓ ಕಂದನ್ನ ತಿಂದವನೆ ಕರುಳನ್ನೆ ಕೊರೆದವನೆ
ಪೆಣದಿನಿ ಪೈಶಾಚ ನೀಚರ ನೀಚ ಕೇಳೊ
ನಿನ್ನ ತಿನ್ನದೆ ಬಿಡದೊ ತಾಯ ಕರುಳಿನ ಶಾಪ!
ಪಾಪಿ ಕಟುಕಾ ಕೇಳೋ
ನನ್ ಹೊಟ್ಟೆ ಉರಿದಂಗೆ ನಿನ್ನ ವಂಶ ಉರಿದ್ಹೋಗ್ಲಿ !
ನಿರ್ವಂಶ ಆಗಿ ನೆಳಲಿಲ್‌ದಂಗಾಗ್ಲೀ !

(ಬೇರೆ ಧಾಟಿ) ಎಂದೇನೊ ಗುಡುಗುತ್ತ
ನೊಂದದೇ ತಡವುತ್ತ
(ರೌದ್ರರೂಪೀ ನರ್ತನ)
(ಬೇರೆ ಧಾಟಿಯಲ್ಲಿ) ಎಂದೇನೋ ಗುಡುಗುತ್ತ
ನೊಂದದೇ ತಡವುತ್ತ
ಹಾಕಿದಳು ಶಾಪ ಹಿಡಿಶಪ !

ಮಾಲಿಂಗಿ ಮಡುವಾಗಲಿ !
ತಲಕಾಡು ಮರಳಾಗಲಿ ! !
ಮೈಸೂರ ದೊರೆಗಳಿಗೆ ಮಕ್ಕಳಿಲ್ಲದೆ ಹೋಗಾಲಿ !
(ಹಿಮ್ಮೇಳದವರು ಮೂರೂ ನುಡಿಗಳನ್ನು ಜೋರಾಗಿ ಪುನರುಚ್ಚರಿಸಬೇಕು)
ವಚನ : ಅಂತಾ ಗೋಸಣೆ ಇಡ್ಲೀ –
ಹಾಡು : ಝಳಪಿಸಿ ಖಡ್ಗ ತಿರುಗಿಸಿ ಗುರಾಣಿ
ಚಂಡಿ ಚಾಮುಂಡಿಯಂತೆ
ನೆಗೆದೇ ಬಿಟ್ಟಳು ರಣರಂಗಕ್ಕೆ ॥

[ಯುದ್ದ ದೃಶ್ಯ ತೋರುವುದು]
ಆಗ –
(ಹಾಡು)– ಖಣಿ ಖಟಿಲೆಂದು ಖಡ್ಗಗಳು ತಾಕಿ
ಕಿಡಿಕೆಂಡ ಕಾರಿದವು ಭರ್ಜಿಗಳು ನುಗ್ಗಿ

[ಮಧ್ಯೆ ಮಧ್ಯೆ ಜೈ ಚಾಮುಂಡೇಶ್ವರಿ, ಜೈ ರಂಗನಾಥ ಎಂಬ ಜಯಘೋಷಗಳು, ತುಂಬು ಕೋಲಾಹಲ ಕತ್ತಲು–ಬೆಳಕು ದೀಪ ವಿನ್ಯಾಸ–ವಿಶೇಷ ವಾದ್ಯಗಳ ಗದ್ದಲ ತುಂಬಿ ಯುದ್ದ ದೃಶ್ಯ ಪರಿಣಾಕಾರಿಯಾಗುವಂತೆ ಮಾಡಬೇಕು]

ಸಿಡಿಲಾಗಿ ಸಿಡಿಸಿಡಿದು ಕರಮೋಡವುಡಿಯೇ
ದಿಕ್ಕುಗಳ ಗೋಡೆಗಳು ಬಿಚ್ಚಿ ಬಿರಿದರಿಯೇ
ಅಕ್ಷತೆಯ ಕಾಳಾಗಿ ನಕ್ಷತ್ರ ಉದುರಿದವು
ಉರಿವ ನಾಲಗೆಯಾಗಿ ನೆಲವು ನೆಕ್ಕಿತು ॥
(ಯುದ್ದ ಕೋಹಾಹಲ–ಜೈಕಾರ ಇತ್ಯಾದಿ)

ಕಾವೇರಿ ಒಡಲೆಲ್ಲ ರಕ್ತಮಯವಾಯ್ತು
ಸತ್ತ ಹೆಣಗಳ ರಾಶಿ ಸೇತುವೆಯದಾಯ್ತು
ಹಾಳಾಯ್ತು ಅಯ್ಯಯ್ಯೋ ರಾಜ್ಯ ಹಾಳಾಯ್ತು

ಶ್ರೀರಂಗಪಟ್ಟಣದ ಕೋಟೆ ಚೂರಾಯ್ತು !
ಹೆಣ್ಣು: ಹ್ಞಾ ಹೌದು ! ಆ ರಂಗನಾಯಕಮ್ಮ ಅವಳ ಮಗ ಶ್ರೀರಂಗರಾಯ ಏನಾದ್ರಣ್ಣಾ?
ಗಂಡು : ಹೇಳ್ತೀನೀ ಕೇಳ್ರಪ್ಪಾ.. ಹೇಳ್ತೀನಿ ಕೇಳಿ –
ತಾಯಿ ಮಗ ಇಬ್ಬರಿಗೂ ಕೈಯಿ ಮೈಯಿ ಸೋತು ಹೋದ್ವು
ಸೇನೆ ಎಲ್ಲ ಆ ಸತ್ತೋತು ! ತಂದೆ ಇದ್ದ ತಲಕಾಡಿನ ಕಡೆ ಓಡಿದ್ರು !

ಆದರೆ ದಾರಿಯಲ್ಲಿ..
ಹೆಣ್ಣು : ದಾರಿಯಲ್ಲಿ ಏನಾಯ್ತಣ್ಣಾ ?
ಗಂಡು : ರಾಜಕುಮಾರ ಇನ್ನೂ ಹುಡುಗ ತುಡುಗತನದ ಬುದ್ದಿ !
ಏನೋ ಬಯ್ದಾಂತ್ಹೇಳಿ ಅವನ್ನ ಹಿಡಿದು ರಾಜ ಒಡೆಯ
ತನ್ನ ರಥಕ್ಕೆ ಕಟ್ಟಿ ಎಳೆಯೂಟೆ ಮಾಡಿದ !
ಶ್ರೀರಂಗ ಪಟ್ಟಣದ ರಾಜಕುಮಾರ ಶ್ರೀರಂಗರಾಯ ಚೀರ್ಕೊಂಡ್ ಚೀರ್ಕೊಂಡ್
ಚಿಂ–ಚಿಂದಿಯಾದ ತಲಕಾಡ ದಾರೀಲಿ ಇದನ್ನೆಲ್ಲಾ ತಾಯಿ
ರಂಗನಾಯಕಮ್ಮ ನೋಡಿದಳು, ಕಠಾರಿ ಬೀಸಿ ಮೈಸೂರನ್ನ
ಬೆನ್ನತ್ತಿಕೊಂಡೇ ಓದ್ಳು. ಆದ್ರೂ ಮಗಾ ಕೈಗತ್ತಲಿಲ್ಲ
ಚಿಂದಿ ಚಿಂದಿ ಆಗ್ಬುಟ್ಟಾ !

ಎಲ್ಲರೂ : ಅಯ್ಯೋ ಶಿವನೇ ಅಯ್ಯಯ್ಯೋ...

ಗಂಡು : (ಹಾಡು) ತಲಕಾಡಲ್ಲಿ ಗುಡೀಲಿದ್ದಾ ತಿರುಮಲರಾಯನು
ಶಿವಶಿವಾಂತ ಸೇರ್ಕೊಂಡ್ ಬುಟ್ಟಾ ದೇವ ಲೋಕಾನ ॥

ಎಲ್ಲರೂ : ಅಯ್ಯೋ ದೇವರೇ !

ಗಂಡು : ಗಂಡ ಹೋದ, ಮಗನೂ ಹೋದ
ರಾಜ್ಯ ಹೋಯ್ತು, ಮರ್ವಾದೆ ಹೋಯ್ತು
ಇನ್ನು ಮ್ಯಾಗೆ ಬಾಳೇವು ಬ್ಯಾಡಾಂತ ಮನಸ ಗಟ್ಟೀ ಮಾಡ್ಕೊಂಡು ಗಂಡನ ಹೆಣ ಎತ್ತಿ ಹೆಗಲ ಮ್ಯಾಲಿಟ್ಕೊಂಡು
ಮೇಲಕ್ಕೆದ್ದು ಹೊರಗ ಬಂದ್ಳು ದಡದಡಾಂತ !

ಸಮ್ಯಕ್ತ್ವವನು ಸಾಧಿಸಿಕೊಂಡ
ಏಲಾಚರ್ಯ ಶ್ರರೀ ಕುಲಗುರುಗಳನು ॥2॥

ಸತ್ಯ ಅಹಿಂಸಾ ಆಸ್ತೇಯದೊಡನೆ
ಅಪರಿಗ್ರಹವೂ ಬ್ರಹ್ಮಚರ್ಯವು ಎಂಬ
ಪಂಚಾಣು ವ್ರತಗಳನು ಪಾಲಿಸುತಿರುವಂಥ
ಚಾರುಕೀರ್ತಿ ಶ್ರೀ ಭಟ್ಟಾರಕರ ॥3॥

(ಬೇರೆ ಧಾಟಿ) ಸ್ವಾಗತವು ಸ್ವಾಗತವು ಸ್ವಾಗತವು ನಿಮಗೆ
ಸರ್ವರಿಗು ಸ್ವಾಗತವು ಶ್ರವಣ ಬೆಳುಗೊಳಕೆ ॥
ಸ್ವಾಗತವು ಶ್ರಾವಕರೆ ಶ್ರಾವಕಿಯರೇ ನಿಮಗೆ
ಸ್ವಾಗತವು ಮುನಿಮುಖ್ಯರಾದ್ಯರೇ ಭವ್ಯರೆ
ಸ್ವಾಗತವು ಆರ್ಯಿಕರೆ ಸಕಲ ಯಾತ್ರಾರ್ಥಿಗಳೆ
ಸ್ವಾಗತವು ಇಂದ್ರಗಿರಿ ಚಂದ್ರಗಿರಿಗೇ ॥1॥

ಇಂದಿನೋತ್ಸವಕೆಂದು ಬಂದೆಲ್ಲ ಬಂಧುಗಳೇ,
ಭಗಿನಿಯರೆ, ಭವಬಂಧ ಮುಕ್ತಿ ಬಯಸುವರೆ
ಬನ್ನಿ ಬನ್ನಿರಿ ಇದುವೆ ಕಟುವಪ್ರದ
ಈನಮುನಿಗಳಾಗಾರ ಸಕಲ ಮೋಕ್ಷಪ್ರದ ॥2॥

(ಬೇರೆ ಧಾಟಿ)
ಇಂದಿನ ಉತ್ಸವ
ಎಂದಿಗು ವೈಭವ
ಅಂದದ ಚಂದದ
ವಾದ್ಯದ ಕಲರವ
ಚಂದ್ರ ಚಕೋರಿಯರೆಲ್ಲ
ಆತ್ಮಾನಂದದಿ ನರ್ತಿಪರು ॥1॥

ಕೈ ಕೈ ಕುಲುಕಿ
ಮೈ ಮೈ ಸೋಂಕಿ
ಮನದಂಗಳದಲಿ
ಒಲವೆರೆದು
ಕಣ್‌ಗಳ ಮಿಟುಕಿಸಿ
ಕಾಂತಿಯ ಮೆರೆದು
ನಿತ್ಯ ವಸಂತವ ಸೃಜಿಸುವರು
ಸತ್ಯ ಸೂರ್ಯನನು ಬೆಳಗುವರು ॥ ॥2।

ದೋರ ಸಮುದ್ರದ
ವೀರ ಶಿರೋಮಣಿ
ಬಿಟ್ಟಿದೇವನ
ಪಟ್ಟದ ರಾಣಿ
ಕಟ್ಟಕ್ಕರೆಯಾ
ಶಾಂತಲದೇವಿ
ಕಟ್ಟಿಸಿಕೊಟ್ಟಾ
ಜಿನಮಂದಿರದ
ಆರಂಭೋತ್ಸವ
ಒದಗಿಹುದು
ಬನ್ನಿ ಬನ್ನಿ ನೀವೆಲ್ಲರು ಬನ್ನಿ
ಈ ಉತ್ಸವದಲ್ಲಿ ಪಾಲ್ಗೊಳ್ಳಿ ॥3॥

ಸೊಕ್ಕಿನ ಸವತಿಯ –
ರಿಕ್ಕೆಲ ಮುರಿದ
ಸವತೀಗಂಧಾ
ವಾರಣ ಬಸದಿ
ಮೂರ್ತಿ ಸ್ಥಾಪನೆ
ಶಾಂತೀಶ್ವರರಾ
ಷೋಡಶ ಕಲೆಯಾ

ಪೂರ್ಣಚಂದ್ರನೊಲು
ಹದಿನಾರನೆಯ ತೀರ್ಥಂಕರರು
ಶ್ರೀ ಶಾಂತಿಜಿನ ತೀರ್ಥಂಕರರು
ಸ್ಥಾಪಿತರಾಗಿಹರಿಲ್ಲಿ
ಚಂದ್ರಗಿರಿಯ ಈ ಬೆಟ್ಟದಲಿ
ಬನ್ನಿ ಬನ್ನಿ ನೀವೆಲ್ಲರು ಬನ್ನಿ
ಈ ಉತ್ಸವದಲ್ಲಿ ಪಾಲ್ಗೊಳ್ಳಿ ॥4॥

[ನೇಪಥ್ಯದಲ್ಲಿ ಶಾಂತಲೆ ಮತ್ತು ವಿಷ್ಣುವರ್ಧನರ ಬಗ್ಗೆ ಜಯಕಾರ, ಉಗ್ಘಡಣೆ ಅನುಕ್ರಮವಾಗಿ ಒಂದು ಸಲು ವಿಷ್ಣು ಕುರಿತು, ಒಂದು ಸಾಲು ಶಾಂತಲೆ ಕುರಿತು ನಡೆಯುತ್ತದೆ. ವಿಷ್ಣು ಪರಾಕಿಗೆ ಪುರುಷರು, ಶಾಂತಲೆ ಪರಾಕಿಗೆ ಮಹಿಳೆಯರು ದನಿಗೂಡಿಸುವರು.

ಮೇಳದವರು ಹಾದಿಯುದ್ದಕ್ಕೂ ಹೂ ಚೆಲ್ಲಿ ಸ್ವಾಗತಿಸುವರು. ಮೇಲಿಮದ ಪುಷ್ಪವೃಷ್ಟಿ–ದಿಉ ರಾಜ ವೈಭವದ ದೃಶ್ಯ–ಪರಿಣಾಮಕಾರಿಯಾಗಿರಬೇಕು]

ಉದ್ಘೋಷ : ಪಟ್ಟಮಹಾದೇವಿ ಶಾಂತಲಾ ದೇವಿಯವರಿಗೆ
ಜಯವಾಗಲಿ
ಹೊಯ್ಸಳೇಶ್ವರ ಶ್ರೀ ವಿಷ್ಣುವರ್ಧನರಿಗೆ
ಜಯವಾಗಲಿ
ಸ್ವಸ್ತಿ,

ಪುರುಷರು : ಸಮಧಿಗತ ಪಂಚಮಹಾಶಬ್ದ !

ಸ್ತ್ರೀಯರು : ಪತಿಹಿತ ಸತ್ಯಭಾಮೆ ಲೋಕೈಕ ವಿಖ್ಯಾತೆ !

ಪು : ಮಹಾಮಂಡಳೇಶ್ವರಾ

ಸ್ತ್ರೀ : ಅಭಿನವ ರುಕ್ಮಿಣೀ ದೇವಿ, ಪ್ರತ್ಯುತ್ಪನ್ನ ವಾಚಸ್ಪತೀ

ಪು : ದ್ವಾರಾವತೀಪುರವರಾಧೀರ್ಶವರಾ

ಸ್ತ್ರೀ : ಚತುಸ್ಸಮಯ ಸಮುದ್ಧರಣೆ

ಬ್ರತಗುಣ ಶೀಳ ಚಾರಿತ್ರಂತಃಕರಣೆ !

ಪು : ಯಾದವ ಕುಲಾಂಬರ ದ್ಯುಮಣಿ

ಸ್ತ್ರೀ : ಸಕಳ ವಂದಿಜನ ಚಿಂತಾಮಣಿ
ಸಮ್ಯಕ್ತ್ವ ಚೂಡಾಮಣಿ !

ಪು : ಮಲಪರೊಳ್ಗಂಡಾ

ಸ್ತ್ರೀ : ಸವತಿಗಂಧಾವಾರಣೆ

ಪುಣ್ಯೋಪಾರ್ಜನ ಕರಣಕಾರಣೆ !

ಪು : ಶ್ರೀಮನ್ಮಹಾಮಂಡಳೇಶ್ವರಾ

ಸ್ತ್ರೀ : ಮನೋಜರಾಜ ವಿಜಯ ಪತಾಕೆ
ನಿಜಕಳಾಭ್ಯುದಯ ದೀಪಿಕೆ !

ಪು: ತ್ರಿಭುವನಮಲ್ಲ

ಸ್ತ್ರೀ : ಗೀತವಾದ್ಯ ಸೂತ್ರಧಾರೆ
ಜಿನಸಮಯ ಸಮುದಿತ ಪ್ರಕಾರೆ !

ಪು : ತಲಕಾಡುಗೊಂಡಾ

ಸ್ತ್ರೀ : ಜಿನಧರ್ಮ ಕಥಾಕಥನ ಪ್ರಮೋದೆ
ಜಿನಧರ್ಮ ನಿರ್ಮಳೆ, ಭವ್ಯಜನವಚ್ಛಳೆ !

ಪು: ಭುಜಬಳ ವೀರಗಂಗಾ !

ಸ್ತ್ರೀ : ಜಿನ ಗಂಧೋದಕ ಪವಿತ್ರೀ ಕೃತೋತ್ತಮಾಂಗೆ !

ಪು: ಶ್ರೀ ಶ್ರೀ ವಿಷ್ಣುವರ್ಧನ ಹೊಯ್ಸಳ ದೇವರಿಗೆ –
ವಿಜಯೀಭವ ವಿಜಯೀಭವ ವಿಜಯೀಭವ !

ಸ್ತ್ರೀ : ಸಿರಿಯರಸಿ ಪಟ್ಟ ಮಹಾದೇವಿ ಶಾಂತಲ ದೇವಿಯರಿಗೆ
ಪರಾಕ್ ಪರಾಕ್ ಬಹುಪರಾಕ್ !!

ಮೇಳ : ಕರುನಾಡ ಕುಲತಿಲಕ ಶಶಿಶೇಖರ
ವಿಷ್ಣುವರ್ಧನದೇವ ಮಹಿಮಾಕರ ॥

ವೀರ ಹೊಯ್ಸಳದೇವ ಧೀರೋದಾತ್ತನೆ
ದ್ವಾರಾವತಿಯಲಿ ನೆಲೆ ನಿಂತವನೆ
ತಲಕಾಡ ಕೊಂಡವನೆ ಮಲೆತವರ ಮೆಎಟ್ಟಿದನೆ
ಭುಜಬಲಿ ವೀರನೆ ಗಜವೇಂಟೆಕಾರನೆ ॥1॥

ಸಕಳ ಕಳಾ ಚತುರೆ ವಿಶದೆ ವೈಶಿಷ್ಟ್ಯೆ
ಅಕಳಂಕ ಚಾರಿತ್ರೆ ಪರಮ ಪವಿತ್ರೆ
ನಾಟ್ಯಮಯೂರಿ ವಿದುಷಿ ವಿದ್ಯಾಧರೆ
ಶಾಂತಲ ದೇವಿಯ ಮನದ ಮಂದಾರವೆ ॥2॥

ವಿಷ್ಣು : ಶಾಂತಿ

ಶಾಂತಲೆ : ಸ್ವಾಮೀ

ವಿಷ್ಣು : ಏನೀ ಮಹಾನಂದವೆ ಓಶಾಂತಲೆ
ಏನೀ ಸಂಭ್ರಮ ಸೌಖ್ಯವೆ ॥

ಉತ್ಸಾಹ ಉಕ್ಕುಕ್ಕಿ ಚುಕ್ಕೆ ಬಾನನು ಬೆರೆದು
ನಕ್ಷತ್ರಗಳ ನಗಿಸಿ ಹಾಲ್ದಿಂಗಳೆರಚಿ
ದಿಕ್ಕುದಿಕ್ಕಿನ ಕೊಂಕುಗಳಲ್ಲಿ ಕಚಗುಳಿಯಿಕ್ಕಿ
ಪಕಪಕನೆ ನಗಿಸುತಿದೆ ನಗೆಯ ಮಲ್ಲಿಗೆ ಸೂಸಿ ॥1॥

ಬೆಳುವಲದ ಬಯಲಲ್ಲಿ ಎಳೆಬಿಸಿಲ ಚೆಲುನೋಟ
ಹಕ್ಕಿ ಹಕ್ಕಲದಲ್ಲಿ ಮರಿಹಕ್ಕಿ ಕುಕಿಲಾಟ
ತುಂಬೆ ಹೂವಿನ ತುಟಿಗೆ ದುಂಬಿ ಬಂಬಲಿನೂಟ
ಈ ಮಾಟ ಈ ಕೂಟ ಎಲ್ಲೆಡೆಯ ಹೊಸಬೇಟ ॥2॥

ಶಾಂತಲೆ : ಓ ಎನ್ನ ಮನದನ್ನ
ಓ ವಿಷ್ಣುವರ್ಧನಾ

ಭೋಗಭೂಮಿಯಿದಲ್ಲ
ಇದು ಯೋಗಭೂಮಿ
ಇದುವೆ ಸವಣರ ನಾಡು
ವೈರಾಗ್ಯ ಬೀಡು ॥

ಸ್ವಾಮಿ,
ನೀನೆ ಭಾವ ನಾನೆ ಭಾಷೆ
ಭಾವಗೀತೆಯಾಗುವಾ
ನೀನು ಹೆಜ್ಜೆ ನಾನು ಗೆಜ್ಜೆ
ಮೇಳವಾಗಿ ಮೆರೆಯುವಾ ॥

ನಾನು ಹೂವು ನೀನು ತುಂಬಿ
ಮಾಧುರ್ಯವ ಸವಿಯುವಾ
ನೀನೆ ಒಲವು ನಾನು ಚೆಲುವು
ಆನಂದವೆ ಆಗುವಾ ॥

ನೀನು ಬಾನು ನಾನು ಬಯಲು
ಬೆರೆದ ಬೆಳಕ ನೀಡುವಾ
ನಾನು ಮೋಡ ನೀನು ಮಿಂಚು
ಜೇನುಮಳೆಯ ಕರೆಯುವಾ ॥

ಚಂದ್ರಗಿರಿಯ ಬಂಡೆಯಲ್ಲಿ
ಶಾಸನಗಳೆ ಆಗುವಾ
ಇಂದ್ರಗಿರಿಯ ಹಿರಿಯನಲ್ಲಿ
ಚಂದನವನೆ ಚೆಲ್ಲುವಾ ॥

ಶೃಂಗಾರ ಕೆಡೆಯಿಲ್ಲ
ಬಂಗಾಳ ಸುಳಿವಿಲ್ಲ
ಅಂಗಾರದಾಗಾರ
ಧವಳಗಿರಿ ನೊಡಾ
ಇದು ಶುದ್ದ ಚೈತ್ಯಾದ್ರಿ
ಇದು ಪ್ರಭುದ್ಧರ ಕದ್ರಿ
ಜಿನಮುನಿಗಳಾಡುಂಬೊಲ
ಭವ್ಯರಿಗೆ ಇದುವೆ ತಾ ತಪೋಬಲ
ಈ ಇದುವೆ ಇದುವೆ ಈ ಶ್ರವಣ ಬೆಳ್ಗೊಳಾ ॥

(ಬೇರೆ ಧಾಟಿ)
ಇಂದೊಂದು ಒಸಗೆ ಬುವಿ ಬಾನ ಬೆಸುಗೆ
ನಿಮ್ಮನುಜ್ಞೆಯ ಮೇರೆ ನಿರ್ಮಿಸಿದೆ ಬಸದಿ
ಉದ್ವೃತ್ತ ಸವತಿಯರ ಗಂಧವಾರಣ ಬಸದಿ
ಈ ಶಾಂತಲೆಯ ಮಂಗಲದ ಬಸದಿ
ಕರುನಾಡ ಕಣ್ಮಣಿಯು ಈ ಕಿರಿಯ ಬಸದಿ

ವೈಭವದ ಬಸದಿ ವೈರಾಗ್ಯ ಬಸದಿ
ಜಿನಧರ್ಮದಭ್ಯುದಯ ವೈಜಯಂತೀ ।

ಶಾಂತಮೂರ್ತಿಯು ಸ್ವಾಮಿ ಶಾಂತೀಶ್ವರಾ
ಹದಿನಾರನೆಯಾ ತೀರ್ಥಂಕರಾ
ಮೂರ್ತ ರೂಪದಿ ಮೂಡಿ ಬಂದಿಲ್ಲಿ ನೆಲೆಸಿಹನು
ಶಾಂತಾರ್ಕಕೋಟಿ ಪ್ರಭಾಪೂರ್ಣವಾಗಿಹನು
ಶಾಂತಿ ತೀರ್ಥಂಕರ ಧ್ಯಾನ ಮೌನಃ
ನೋಡಿ ದರ್ಶನ ಪಡೆದು ಧನ್ಯರಾಗೋಣ ! ॥

ಬಸದಿಯಭ್ಯುದಯಕ್ಕೆ ಜೀರ್ಣೋದ್ಧಾರಕ್ಕೆ
ಜಿನಮೂರ್ತಿಯರ್ಚನೆಗೆ ದಿನನಿತ್ಯ ಪೂಜೆಗೆ
ಸವಣರುಗಳಾದರಕೆ ಆಹಾರ ದಾನಕ್ಕೆ
ಬಿಟ್ಟೆ ದತ್ತಿಯ ಬಿಟ್ಟೆ ಗ್ರಾಮವನು ಬಿಟ್ಟೆ
ಅದನಿಂದು ಆ ಶುಭದ ಮಂಗಳ ಮುಹೂರ್ತದಲಿ
ಶ್ರೀ ಮೇಘಚಂದ್ರ ತ್ರೈವಿಧ್ಯದೇವರಾ
ಶಿಷ್ಯ ಸಿದ್ಧಾಂತರಿಗೆ ಶ್ರೀ ಪ್ರಭಾಚಂದ್ರರಿಗೆ
ಪಾದ ಪ್ರಕ್ಷಾಳನಂ ಮಾಡಿ ಸಕಲ ಮಂಗಲ ಕೂಡಿ
ಧಾರೆಯೆರೆದರ್ಪಿಸುವ ಬನ್ನಿ ಬನ್ನಿ
ಧನ್ಯರಾಗುವ ಬನ್ನಿ ಮಾನ್ಯರಾಗುವ ಬನ್ನಿ
ಬನ್ನಿ ಬನ್ನಿ ಬನ್ನಿ ॥

**ದೃಶ್ಯ ಬದಲಾವಣೆ**

[ರಂಗದ ಹಿಂಬದಿಯ ದೃಶ್ಯ ತೆರೆದುಕೊಳ್ಳುತ್ತದೆ. ಅದು ಸವತಿಗಂಧ ವಾರದ ಬಸದಿಯ ಗರ್ಭಗುಡಿ. ಸುಕನಾಸಿ ಹಾಗೂ ಪ್ರಾಂಗಣದ ಭಾಗ. ಅಲ್ಲಿ ಒಂದು ಬದಿಯಲ್ಲಿ ಪ್ರಭಾಚಂದ್ರಮುನಿಗಳು ಕಾಷಾಯಧಾರಿಗಳಾಗಿ ಮಂಡಿತರಾಗಿದ್ದಾರೆ. ಮತ್ತೊಂದು ಬದಿಯಲ್ಲಿ ನಿವೇದಕ ಶಾಸನ ಹಿಡಿದು ಓದತೊಡಗುತ್ತಾನೆ.

ವಿಷ್ಣು ಶಾಂತಲೆಯರು ಪ್ರಭಾಚಂದ್ರರ ಪಾದ ತೊಳೆಯುತ್ತಾರೆ. ಪುಷ್ಪಪಾದಕ್ಕೆ ಮಾತ್ರ ಅರ್ಪಿತ. ಗುರುಗಳು ಕೈಯೆತ್ತಿ ಆಶೀರ್ವದಿಸುವುದಿಲ್ಲ. ಜೈನ ಪದ್ಧತಿಯಂತೆ 'ಸಿದ್ಧೇಭ್ಯಃ.. ಸ್ವಸ್ತಿ ಸ್ವಸ್ತಿ' ಎಂದಷ್ಟೇ ನುಡಿಯುತ್ತಾರೆ. ಹಸ್ತದಲ್ಲಿ ನವಿಲುಗರಿ ಕುಂಚ. ಗರ್ಭಗುಡಿಯಲ್ಲಿ 'ಶಾಂತೀಶ್ವರ' ಜಿನಸ್ವಾಮಿಯ ಪ್ರತಿಮೆ ಉಜ್ವಲವಾದ ಬೆಳಕಿನಲ್ಲಿ ಮಿರುತ್ತಿರುತ್ತದೆ]

ನಿವೇದಕ (ಶಾಸನ ಪಠಣ)
ಸ್ವಸ್ತೀ,

ಅನವರತ ಪರಮ ಕಲ್ಯಾಣಾಭ್ಯುದಯ ಶತ ಸಹಸ್ರ ಫಲ ಭೋಗಭಾಗಿನಿ, ದ್ವಿತೀಯ ಲಕ್ಷ್ಮೀಸಮಾನೆಯು, ಸಕಳ ಕಳಾಗಮಾನುನೆಯುಂ ವಿವೇಕೈಕ ಬೃಹಸ್ಪತಿಯುಂ ಮುನಿಜನ ಕಳಾಗಮಾನುನೆಯುಂ, ವಿವೇಕೈಕ ಬೃಹಸ್ಪತಿಯುಂ, ಮುನಿಜನ ವಿನೇಯಜನ ವಿನೀಎಯುಂ, ಪತಿವ್ರತಾ ಪ್ರಭಾವ ಪ್ರಸಿದ್ಧ ಸೀತೆಯು, ಸಮಸ್ಯಕ್ತ ಚೂಡಾಮಣಿಯುಂ ಉದ್ವೃತ್ತ ಸವತಿ ಗಂಧದಾವರಣೆಯುಂ, ಆಹಾರಾಭಯ ಭೈಷಜ್ಯ ಶಾಸ್ತ್ರದಾನ ವಿನೋದೆಯಪ್ಪ ಶ್ರೀ ವಿಷ್ಣುವರ್ಧನ ಪೊಯ್ಸಳ ದೇವರ ಪಿರಿಯರಸಿ ಪಟ್ಟಮಹಾದೇವಿ ಶಾಂತಲದೇವಿಯರ್ ಶ್ರೀ ಬೆಳ್ಗೊಳ ತೀರ್ಥದೊಳ್ ಸದತಿಗಂಧವಾರಣ ಜಿನಾಲಯಮು ಮಾಡಿಸಿ, ಇದಕ್ಕೆ ದೇವತಾಪೂಜೆಂ ರಿಸಿಸಮುದಯಕ್ಕಾಹಾರ ದಾನಕ್ಕಂ ಜೀರ್ಣೋದ್ಧಾರಕ್ಕಂ ಕಲ್ಕಣೆ ನಾಡ ಮೊಟ್ಟೆ ನವಿಲೆ ಯುಮಂ ಗಂಗಸಮುದ್ರದ ನಡಯಬಯಲಲಯ್ವತ್ತು ಕೊಳಗ ಗದೆಯ ತೋಟಮುಮಂ ನಾಲ್ವತ್ತು ಗದ್ಯಾಣ ಪೊನ್ನನಿಕ್ಕಿ ಕಟ್ಟಿಸಿ ಚರುಗಿಂಗೆ ವಿಳಸನ ಕಟ್ಟಮುಮಂ ಶ್ರೀಮದ್ ವಿಷ್ಣುವರ್ಧನ ಪೊಯ್ಸಳ ದೇವರಂ ಬೇಡಿಕೊಂಡು ಸಕವರ್ಷ ಸಾಯಿರದ ನಾಲ್ವತ್ತೈದನೆಯ ಶೊಭಕೃತ್ ಸಂವತ್ಸರದ ಚೈತ್ರ ಶುದ್ದ ಪಾಡಿವ ಬೃಹಸ್ಪತಿ ವಾರದಂದು ತಮ್ಮ ಗುರುಗಳು ಶ್ರೀ ಮೂಲಸಂಘದ ದೇಸೀಯ ಗಣದ ಪೊಸ್ತಕಗಚ್ಛದ ಶ್ರೀಮನ್ಮೇಘಚಂದ್ರ ತ್ರೈವಿದ್ಯ ದೇವರ ಶಿಷ್ಯರಪ್ಪ ಪ್ರಭಾಚಂದ್ರ ಸಿದ್ಧಾಂತ ದೇವಗೆ ಪಾದಪ್ರಕ್ಷಾಳನಂ ಮಾಡಿ ಸರ್ಬಬಾಧಾಪರಿಹಾರವಾಗಿ ಬಿಟ್ಟ ದತ್ತಿ"

॥ಮಂಗಳ ಮಹಾ ಶ್ರೀ ಶ್ರೀ ಶ್ರೀ ॥

ವಿಷ್ಣು : ಧನ್ಯೆ ಶಾಂತಲೆ ನೀನು ನಿಜಕು ಧನ್ಯೆ
ನನಗು ಧನ್ಯತೆಯನ್ನು ದೊರಕಿಸಿದ ಮಾನ್ಯೆ !

(ವಚನಲ್ಲಿ) ಶಾಂತಿ, ನೀನು ವಿವೇಕೈಕ ಬೃಹಸ್ಪತಿ
ಪ್ರತ್ಯುತ್ಪನ್ನ ವಾಚಸ್ಪತಿ, ಲೋಕವಿಖ್ಯಾತೆ
ಜಿನಧರ್ಮ ಕಥಾಕಥನ ಪ್ರಮೋದೆ !

(ತಾಳ-ಲಯದಲ್ಲಿ) ಬಿತ್ತರಿಸ ಬಲ್ಲೆಯಾ ಬೆಳುಗೊಳದ ಬೆಳಗ
ಶ್ವೇತಸ್ಸರೋವರದ ಧವಳ ಕೀರ್ತಿಯ ಕಥೆಯ
ಹೇಳು ಶಾಂತಲೆ ಹೇಳು, ಹೇಳು ಕಥೆಯ
ನಿತ್ಯ ನಿರ್ಮಲವಾದ ಈ ನೆಲದ ಧವಳತೆಯ !

ಹೇಳು ಶಾಂತೀ ನೀ ಹೇಳು ಹೇಳೇ
ಹೇಳು ಶಾಂತೀ ನೀನು ಹಾಡಿ ಹೇಳೇ ॥

ಶಾಂತಲೆ : ಒಂದಾನೊಂದು ಕಾಲದಲ್ಲಿ
ಮೌರ್ಯರು ರಾಜ್ಯವನಾಳುವಾಗ
ಉತ್ತರ ಭಾರತವೆಲ್ಲಾ ಹಸಿದು
ಬರದ ಮಾರಿಗೆ ಬಲಿಯಾಯ್ತು !

'ಮೌರ್ಯ ಸಾಮ್ರಾಟ' ಚಂದ್ರಗುಪ್ತರು
ಭದ್ರಬಾಹು ರಿಸಿ ಮುನಿ ಶ್ರೇಷ್ಠರನು
ಅಂತೆಯೇ ಅವರ ಶಿಷ್ಯಕೋಟಿಯನು
ಕಟ್ಟಿಕೊಂಡು ಉಜ್ಜಯನಿಯ ಬಿಟ್ಟು
ತೆಂಕಣ ನಾಡಿಗೆ ಕಳ್‌ಬಪ್ಪುವಿಗೆ
ಬಂದರು ಇಲ್ಲಿಯೆ ನೆಲೆಸಿದರು ॥

ಆ ಭದ್ರಬಾಹು ಭಟ್ಟಾರಕರು
ವರ್ಧಮಾನ ಮಹಾವೀರ ತೀರ್ಥಂಕರ
ಪುಣ್ಯ ಪರಂಪರೆಯಲ್ಲಿ ಬಂದವರು
ಗೌತಮ ಗಣಧರರಂತೆ ಒಬ್ಬರು
ಶ್ರುತಕೇವಲಿಗಳು ದಾರ್ಶನೀಕರು
ಮುಡಿಪಿದರಲ್ಲಿಯೆ ಬೆಳ್ಗೊಳದಲ್ಲಿ
ಶ್ರವಣರ ಬೆಳುಗೊಳ ಎಂದಾಗಿಸಿದರು ॥

ಚಂದ್ರಗುಪ್ತರು ಚಂದ್ರಗಿರಿಯಲಿ
ಚಿಕ್ಕಬೆಟ್ಟದಾ ಈ ಗುಹೆಯಲ್ಲಿ
ದೇಹತ್ಯಾಗವ ಮಾಡಿದರು
ಮೋಕ್ಷದ ಕಕ್ಷೆಗೆ ಸೇರಿದರು ॥

ಚಂದ್ರಗುಪ್ತರೀ ಬಸದಿ
ಅದು ನಿರ್ಮಿತವಾಯಿತು ಈ ನೆಲದಿ ॥

ಅಂದಿನಿಂದ ಇದು ಸಮಾಧಿಗುಡ್ಡ
ನಿಶಿಧಿ ಶಾಸನಾ ನಿಕ್ಷೇಪ !

ಕೊಂಡಕುಂದಾರ್ಯ ಚರಿತ ಶ್ರೀ
ಪ್ರಭಾಚಂದ್ರ ಅಕ್ಷಯ ಕೀರ್ತಿ
ಚಂದ್ರದೇವಾರ್ಯ ಮಾಸೇನ ರಿಸಿ
ನಾಗಮತಿಗಂತಿ ಅರಿಷ್ಟನೇಮಿ
ಕನಕ ನಂದಿ ಶ್ರೀ ಚಾರುಕೀರುತಿ
ದಾಮನಂದಿ ಆ ದೇವಕೀರುತಿ
ಸಲ್ಲೇಖನ ಸನ್ಯಾಸನ ಸ್ವೀಕರಿಸಿ
ಮುಡಿಪಿದರೆಲ್ಲರು ಮೋಕ್ಷವೈದಿಂದರು ॥

ವಿಷ್ಣು: ಹೌದಾ ! ಆಮೇಲಾಮೇಲೆ !
ಶಾಂತಲೆ : ವಜ್ರನಂದಿ ಸುಮತಿದೇವ ಶ್ರೀವರ್ಧದೇವ
ಚಂದ್ರಕೀರ್ತಿ ಪೂಜ್ಯಪಾದ ಶ್ರೀ ಪಾಲದೇವಾ
ಪಂಡಿತೇಂದ್ರ ಯೋಗಿರಾಜ ಶ್ರುತಕೀರ್ತಿ ಯತಿಗಳು
ದಿವಾಕರನಂದಿ ಮಲಧಾರೀ ಮುನಿಗಳು
ಮಾಘಣಂದಿ ನಯಕೀರ್ತಿ ಕುಲಚಂದ್ರದೇವರು
ಅಜಿತ ಶಾಂತಿ ದೇವ ದೇವೇಂದ್ರ ಕೀರ್ತಿ ಮುನಿಗಳು

ಇನಿತೆನಿತೋ ಭವದಾಂಟಿದ ಭವ್ಯರಾ ನಾಡು
ಇದುವೆ ಶ್ರವಣಬೆಳಗೊಳವು ಜಿನರ ನೆಲೆಯ ಬೀಡು ॥

ವಿಷ್ಣು : ಜಿನಮಂದಿರಗಳು ಚೈತ್ಯಾಲಯಗಳು
ಎಲ್ಲೆಡೆಯಿಹವೀ ಬೆಳುಗೊಳದಲ್ಲಿ ॥

ಚಂದ್ರಗುಪ್ತ ಬಸದಿ ಚಾವುಂಡರಾಯ ಬಸದಿ
ಚಂದ್ರನಾಥ ಬಸದಿ ಅದೋ ಬಾಹುಬಲಿಯ ಬಸದಿ
ಮಜ್ಜಿಗಣ್ಣ ಬಸದಿ ಸಜ್ಜಹುದು ಸಿದ್ಧ ಬಸದಿ
ಪಾರ್ಶ್ವನಾಥ ಬಸದಿ ಗಂಧವಾರಣದ ಬಸದಿ
ಎರಡು ಕಟ್ಟೆ ಬಸದಿ ಚೌವ್ವಿಸ ತೀರ್ಥಂಕರ ಬಸದಿ
ಮಂಗಾಯಿ ಬಸದಿ ಮಾಚಿಯರ ಬಸದಿ ಅದೆ ತೇರ ಬಸದಿ
ಕತ್ತಲೆಯ ಬಸದಿ, ಒರೆಗಲ್ಲು ಬಸದಿ ಶಾಂತೀಶಸ್ವಾಮಿ ಬಸದಿ
ಬಹುದೊಡ್ಡದಾದ ಭಂಡಾರಿ ಬಸದಿ ಬಸದಿ

ಬಸದಿಗಳಿಗೆಲ್ಲ ಈ ಭೂಮಿ ವಸತಿ
ಬಸದಿಗಳಿಗೆಲ್ಲ ಈ ಭೂಮಿ ವಸತಿ

ಶಾಂತಲೆ: ವಿಶ್ವಮಾನವ ಧರ್ಮ ಇದು ಜೈನಧರ್ಮ
ಮಾನವತೆಯನು ಬಿತ್ತಿ ಬೆಳೆಯುವಾ ಧರ್ಮ ॥

ಕಳಬೇಡ ಕೊಲಬೇಡ ಹುಸಿಯನುಸುರಲು ಬೇಡ
ಅನ್ಯವನಿತೆಯ ಕೆಡಿಪ ಕಾಮದಳ್ಳುರಿ ಬೇಡ
ಅನಗತ್ಯ ವಸ್ತುವಿನ ಸಂಗ್ರಹವು ತಾ ಬೇಡ
ನಡೆನುಡಿಯ ಮಡಿಯಾಗಿ ಬದುಕು ಮಾಡುವ ಧರ್ಮ ॥1॥

ಮೈತ್ರಿಯಲಿ ಮಮತೆಯಲಿ ಪ್ರೀತಿ ಪ್ರೇಮಗಳಲ್ಲಿ
ವಿಶ್ವ ಬಾಂಧವ್ಯವನು ಬೆಸೆವ ಧರ್ಮ
ಮಾನವೀ ಮೌಲ್ಯಗಳ ಎತ್ತಿ ಹಿಡಿಯುವ ಧರ್ಮ
ದ್ವೀಪಗಳ ಕೂಪಗಳ ದೂರಮಾಡುವ ಧರ್ಮ ॥2॥

ದೇವ ಮನವ ನರಕಿ ತಿರಿಕ ಜಂತುಗಳಾಗಿ
ತೊಳಲಿ ಬಳಲುವ ಜೀವ ಭವ್ಯಾತವಾಗಿ
ಮೈತ್ರಿಯಲಿ ಮಮತೆಯಲಿ ಪ್ರೀತಿ ಪ್ರೇಮಗಳಲ್ಲಿ
ವಿಶ್ವ ಬಾಂಧವ್ಯವನು ಬೆಸೆವ ಧರ್ಮ
ಮಾನವೀ ಮೌಲ್ಯಗಳ ಎತ್ತಿ ಹಿಡಿಯುವ ಧರ್ಮ
ದ್ವೀಪಗಳ ಕೂಪಗಳ ದೂರಮಾಡುವ ಧರ್ಮ ॥2॥

ದೇವ ಮಾನವ ನರಕಿ ತಿರಿಕ ಜಂತುಗಳಾಗಿ
ತೊಳಲಿ ಬಳಲಸುವ ಜೀವ ಭವ್ಯಾತ್ಮವಾಗಿ
ಅರ್ಹಂತ ಪದವಿಯನು ಸರ್ವಾರ್ಥಸಿದ್ಧಿಯನು
ಪಡೆಯುವುದು ಆ ಪರಂಜ್ಯೋತಿಯಾಗಿ ॥3॥

ಪಾಪ ಪುಣ್ಯದ ಲೇಪವಿಲ್ಲದಿಹ ಭವ್ಯಾತ್ಮ
ವಿಕಸನವ ಪಡೆಯುವುದು ಹಂತಹಂತಾಗಿ
ಭವದ ಬೇರುನುಕಿತ್ತು ಪಂಚಕಲ್ಯಾಣಗಳ
ದುಡಿಸಿ ಸಾರುವುದತ್ತ ಸಮವಸರಣಕ್ಕೆ ॥4॥

ಶಾಂತಲೆ: ಇಂದ್ರಗಿರಿ ಚಂದ್ರಗಿರಿ ನಡುವೆ ಕೊಲದ ಬೆಳ್ಝುರಿ
ಅಡಕತೆ ತೆಂಗು ಮಾವು ಬೇವು ಸುತ್ತ ಪ್ರಕೃತಿ ಮೈಸಿರಿ
ಬಟ್ಟ ಬಯಲ ವ್ಯಾಪ್ತಿಯಲ್ಲಿ ಇಂದ್ರಗಿರಿಯ ತುದಿಯಲೀ
ಟ್ಟ ನಿಂತ ಮೂರ್ತಿ ಇವನು ಗೊಮ್ಮಟ ಯತಿ ಬಾಹುಬಲಿ ॥

ಕಾಯೋತ್ಸರ್ಗ ಭಂಗಿಯಲಿ
ನಿಂದಿಹನಾ ಗಿರಿಯಲ್ಲಿ ॥1॥

ಏಕಶಿಲಾ ಮೂರ್ತಿಯು ಪ್ರಶಾಂತ ಮುಖದ ಮುದ್ರೆಯು
ಅರೆದೆರೆದಾ ಕಣ್ಣಗಳು ಅಧ್ಯಾತ್ಮ ಕಿತ್ತ ಜ್ಯೋತಿಗಳು
ಹುಬ್ಬು ಕಬ್ಬಕಣೆಗಳು ಧ್ವಜಸ್ತಂಭ ಭುಜಗಳು

ತಲೆಗೂದಲು ಗುಂಗುರಾ
ಸುರುಳಿಗುರುಳಾ ಸಿಂಗಾರ ॥2॥

ಚಿಗುರಿತುಗುರುಮೊಗರು ಬೆರಳು ಬಂಗಾರದ ಹೂ
ಅಕ್ಷಯವದು ವಕ್ಷಸ್ಥಲ ದಕ್ಷತೆಯಾಡುಂಬೊಲ
ಆಕಾಶವೆ ಮೇಲ್ಪಾವಣಿ ಮೈ ಹೊದಿಕೆ ದಿಗಂಬರಾ ॥

ಆದನಿವನು ಸುಂದರ
ಜಗಕೆ ಶಾಂತಿ ಮಂದಿರ ॥

ನೋಡು ಬಾ ಗೊಮ್ಮಟನನು ಇಂದ್ರಗಿರಿಯಲ್ಲಿ
ಚಂದ್ರಗಿರಿಯು ಇರುವ ಶ್ರವಣ ಬೆಳಗೊಳದಲ್ಲಿ
ದೇವತೆಗಳು ದಿನವು ಬಂದು ಪೂಜೆಮಾಳ್ವರು
ಬಾಹುಬಲೀ ಸ್ವಾಮಿಯನ್ನು ಭಜಿಸಿ ಪೋಪರು ॥1॥

ಗಂಗ ದಂಡಾಧೀ ಆ ಚಾವುಂಡರಾಯ
ಸ್ಥಾಪಿಸಲು ಯೋಜಿಸಿದನು ಈ ಸ್ವಾಮಿಯ
ಪಂಪ ಪೊನ್ನ ಅತ್ತಿಮಬ್ಬೆ ರನ್ನರೆಲ್ಲ ಸೇರ್ದರು
ಅರಿಷ್ಠನೇಮಿ ಎಂಬ ಶಿಲ್ಪಿ ಶಿಲೆಗೆ ಜೀವವಿತ್ತರು ॥2॥

ಬಟ್ಟ ಬಯಲ ಬೆಟ್ಟದಲ್ಲಿ ನೆಟ್ಟನಿಟ್ಟು ದಿಟ್ಟಿ
ಮೆಟ್ಟಿ ಮುಗಿಲ ನುಡಿಸುವಂಥ ಮಾಟ ಸೃಷ್ಟಿ
ಸೌಂದರ್ಯ ಔನ್ನತ್ಯ ಸಂಗಮಿಸಿರುವಂಥ
ಸೌಮ್ಯ ಮುಖದ ದಿವ್ಯ ಮೂರ್ತಿ ಸ್ವಾಮಿ ಗೊಮ್ಮಟ ॥3॥
॥ಣಮೋ ಗೊಮ್ಮಟಾಣಾಂ ಣಮೋಗೊಮ್ಮಟಾಣಾಂ ॥

–ನಿಷ್ಕಮಣ–

ವಿಷ್ಣು : ಶಾಂತಿ ಶಾಂತಿ ಶಾಂತಲೆ
ನನ್ನ ಮನದ ಪ್ರಾಂಜಲೆ
ಇಂದ್ರಗಿರಿ ಚಂದ್ರಗಿರಿ
ಏನೆ ಇವರ ವೈಖರಿ ?

ಶಾಂತಲೆ : ಸ್ವಾಮಿ, ಕೇಳಿ :
ಆದಿದೇವನ ಬಾಳಿನಿತಿಹಾಸ ಸಂಪುಟದಿ
ಮೂರನೆಯ ಕಲ್ಯಾಣ ಪರಿನಿಷ್ಕಿತ್ ಕ್ರಮಣ
ದೇವನೊಡ್ಡೋಲಗದಿ ನರ್ತಕಿ ನೀಲಾಂಜನೆ
ಕಾಣ ಬಂದಳು ನಾಟ್ಯ ವೇದಿಕೆಯ ಮೇಲೆ ॥

(ಹಿನ್ನೆಲೆಯಲ್ಲಿ ವಾದ್ಯವಾದನ ಆರಂಭ)

ಸರಿಯಿತು ಜವನಿಕೆ ಸುರಿದಳು ಮಲ್ಲಿಗೆ
ಪುಷ್ಪಾಂಜಲಿಯನು ಸೂಸುತಲಿ
ಸುಸಿಲುಸಿರಾಡಿಸಿ ನಸೆ ಬಿಸಿಯೇರಿಸಿ
ಪಸ ಪಸನೆಸೆದಳು ಸುಳಿದಾಡಿ ॥

ಕುಡುಪುಂ ಕೈಯುಂ ಜತಿಯುಂ ಶ್ರುತಿಯಲಿ
ತಡ ತಡ ತಡವರೆ ವಾದಕಗೆ

ಎಡಬಿಡದಾಡಿಸಿ ನುಡಿ ಗುಟ್ಟಾಗಿಸಿ
ಧಿತ್ತೋಂ ಎಂದಳು ಆ ಲಯಕೆ ॥

ನರ್ತನ ನರ್ತನ ನರ್ತನ ಲಹರಿ
ನೀಲಾಂಜನೇಯ ಮಾಟದ ಮೈಸಿರಿ
ಬಳುಕುವ ದೇಹ ಹೊಳೆಯುವ ಕಣ್ಣು
ಪುಟಿಯುವ ತುಟಿಗಳ ಸಂಪುಟದಿ ॥

ನಾಟ್ಯವೇದಿಕೆಯ ಮೈ ಜುಮ್ಮೆನ್ನಲು
ತಾಳ ಮೃದಂಗವು ಚಂಚಳಗೊಳ್ಳಲು
ನಾಟ್ಯವನಾಡಿದಳಾ ನೀಲಾಂಜನೆ
ಇಂದ್ರನೋಲಗದ ಚೆಲುವಿನ ಚಿಲುಮೆ ॥

ಚಿಮ್ಮಿ ಜಿಗಿದಳೊ ಜಿಂಕೆಯೆ ಆಗಿ
ಜಾಗರಗೈದಳು ತಾ ನವಿಲಾಗಿ
ನಾಗರವಾದಳು ಸಾಗರವಾದಳು
ಗಗನದಿ ತೇಲುವ ಮುಗಿಲಾಗಿ ॥

ಏನದ ಹೇಳಲಿ ನಾಟ್ಯದ ವೈಖರಿ
ಕುಣಿದೇ ಕುಣಿದಳು ನಾಟ್ಯಮಯೂರಿ

ಧಿತ್ತೋಂ ಧಿತ್ತೋಮ ಧಿತ್ತೋಂ ಎನುತಲಿ
ತೋಂ ತಕ ಥೈ ಥೈ ತೈ ಥೈ ಎನುತಲಿ ॥

ಭವನಕೆ ಭವನಕೆ ಬೆಕ್ಕಸಗೊಂಡಿರೆ
ನೋಟಕರೆಲ್ಲರು ಓಹೋ ಎನುತಿರೆ
ಕರಗಿದಳಾಗಲೆ ಆ ನರ್ತಕಿಯು
ಒರಗಿದಳೊಮ್ಮಲೆ ಭಾವುಕಿಯು ॥

ಆಯು ಮುಗಿಯಲಾ ಪ್ರಾಯದ ಹುಡುಗಿ
ಸತ್ತೇ ಹೋದಳು ಉಸಿರುಡುಗಿ
ಆ ರಸಭಂಗಕೆ ಇಂದ್ರನು ನಡುಗಿ
ಬೇರೆ ನರ್ತಕಿಯ ಇರಿಸಿದನು ॥

ದೇವ ಮಾನವ ಪನ್ನಗರಾರಿಗು
ಆದರರಿವಾಗದೆ ಬರಿದೇ ಹೋಯಿತು
ಆದರೆ ಆ ಪುರುದೇವನು ಸ್ವಾಮಿಯು
ಮರ್ಮವನರಿತನು ಮನದಲ್ಲಿ ॥

ಆ ಮಧುರಾಕಾರೆಯು ಕೋಮಳೆ
ಆಯುವು ಮುಗಿಯಲು ಕಣ್ಮರೆಯಾದಳೆ
ಎನಿತು ನಶ್ವರವೊ ಈ ಬಾಳಿನ ಎಳೆ
ಶಾಶ್ವತತೆಯ ನಾ ಪಡೆಯುವೆನೀಗಳೆ ॥

ಎನ್ನುತ ಸ್ವಾಮಿಯು ದೀಕ್ಷೆಯನಾಂತು
ರಾಜ್ಯವನೆಲ್ಲವ ಹಂಚಿಕೆಗೈದು
ನಾಲ್ಕು ಐದು ಕಲ್ಯಾಣವು ನೆರೆದಿರೆ
ಸಮವ ಸರಣವನು ಸಾರಿದರು ॥

ಆ ಪುರುದೇವನ ಪುತ್ರರತ್ನರು
ಭರತ ಬಾಹುಬಲಿ ಜಗವಿಖ್ಯಾತರು
ಬ್ರಾಹ್ಮೀ ಸುಂದರಿಯರು ಪುತ್ರಿಯರು
ಶಾಶ್ವತ ಬಳುವಳಿತಾ ಪಡೆದವರು ॥

(ಬೇರೆ ಧಾಟಿ )

ಹೀಗಿರಲು ಇಚಿತಿರಲು ಕಾಲ ಉರುಳುತ್ತಿರಲು
ಭರತ ಚಕ್ರಿಯ ಆಯುಧಾಗಾರದಲ್ಲಿ
ಚಕ್ರರತ್ನವು ಹುಟ್ಟು ದಿಗ್ವಿಜಯಕೆಬ್ಬಿಸಿತು
ಭರತೇಶನಾಜ್ಞೆಯನು ಎಲ್ಲೆಡೆಯು ಚೆಲ್ಲಿ ॥

ವಿಷ್ಣು : ಆಮೇಲಾಮೇಲೆ !

ಶಾಚಿತಲೆ : ಭೇರಿ ಚೀರಿತು ಬಾನು ಬಿರಿಯಿತು

ಕಹಳೆ ಕೂಗಿದುವಾಗಳೇ
ಸೇನೆ ಹೊರಟಿತು ಖಡ್ಗ ಝಳುಪಿಸಿ
ಜಯದ ಘೋಷವಗೈಯುತೆ ॥

ಧರ್ಮ ಚಕ್ರವು ಮುಂದೆ ಮುಂದೆ
ಸೇನೆ ಅದರ ಹಿಂದೆ ಹಿಮದೆ
ಭರತ ಹೊರಟನು ಲೀಲೆಯಿಚಿದೆ
ರಾಣಿ ವಾಸವು ಮುಂದೆ ಮುಂದೆ ॥

(ವಚನ ) ಭರತೇಶನ ಚೈತ್ರಯಾತ್ರೆ ಸಫಲವಾಯಿತು,
ದಕ್ಷಿಣದ ವೃಷಭಾಚಲದ ಮೇಲೆ
ಅವರ ಪ್ರಶಸ್ತಿ ಶಾಸನ ಮೆರೆಯಿತು !
ಹಿಮಾಚಲದ ಉತ್ತುಂಗ ಶೃಂಗದಲ್ಲಿ
ಅವನ ವಿಜಯ ಪತಾಕೆ ಹಾರಾಡಿತು !

ಆದರೆ –

ಚಕ್ರರತ್ನ ಇದ್ದಕ್ಕಿಂತೆಯೇ ಅಯೋಧ್ಯೆಯ
ಮಹಾದ್ವಾರದಲ್ಲಿ ನಿಂತಿತು
ಮತ್ತೆ ತಿಳಿಯಿತು ತನ್ನ ಸೋದರರೆ ಕಾರಣರು
ತನ್ನ ಭಾಗಕ್ಕೆ ಆದರೆ ಶತ್ರುಗಳು ಎಂದು.
ಸುದ್ದಿ ಮುಟ್ಟಿದ ಕೂಡಲೆ ಭರತ ಕೆಂಡಾಮಂಡಲವಾದ
ಕಿಡಿಕಾರಿದ, ಆರ್ಭಟಿಸಿದ, ಕುಣಿದು ಕುಪ್ಪಳಿಸಿದ.
(ಚಂಡೆ ಇತ್ಯಾದಿ ಭಯಾನಕ ವಾದ್ಯಗಳ ಮೊರೆತ)

ಭರತ : (ಪ್ರವೇಶ)
ಷಟ್‌ಖಂಡ ಮಂಡಲಾಧಿಪಗೆ ಇದಿರಾರೊ?
ಭರತ ಚಕ್ರೇಶನನು ದ್ವೇಷಿಸುವರಾರೊ?
ಯಾರು ಯಾರೋ ಯಾರು ಸೊಕ್ಕಿನವನಾರೊ ?
ಅವರ ಹುಟ್ಟಡಗಿಸುವೆ ಕುಟ್ಟಿ ಪುಡಿಗೈವೆ !

(ಆರ್ಭಟ ಕುಣಿತ ಚಣಕಾಲ)

ಸೆರೆರಕ್ತ ಹಂಚಿಕೊಂಡಂಥ ಸೋದರರೆ,
ಮೊರೆ ಮೊರೆದು ಹಗೆಯನ್ನು ಸಾಧಿಸುತ್ತಿಹರೆ ?
ಶುದ್ದ ಸಟೆ ಇರಬಹುದು ಅಟ್ಟುವೆನು ಓಲೆ
ನೂರು ಜನ ತಮ್ಮರಿಗೆ ಭುಜಬಲಿಗೆ ಬೇರೆ ॥

(ದೃಶ್ಯ ಬದಲಾವಣೆ)
ಶಾಂತಲೆ : ಭರತ ಸ್ವಾಮಿಯ ಅನುಜರೆಲ್ಲರು
ಅಣ್ಣೋಲೆಯ ಓದಿ ಕರುಬದೆ
ವೀರ ವೈರಾಗ್ಯವನು ತಳೆದರೋ ಸವಣರುಗಳಾಗಿ ॥1॥

ಅಕ್ಕಿ ಕೊಟ್ಟು ಎಚಿಜಲುಂಬುದೆ ?
ರಾಜ್ಯವಿತ್ತು ಭೃತ್ಯರೆನಿಪುದೆ?
ಸಾಧ್ಯವಿಲ್ಲವು ಎಂದು ಬಗೆಯುತೆ
ಮನದಿ ಬೇಸರಿಸಿ ॥ ॥2॥

ರಾಜ್ಯ ಕೋಶಾದಿಗಳ ತೊರೆದು
ಜೈನದೀಕ್ಷೆಯ ಭರದಿ ತಳೆದು
ಸಮವ ಸರಣವ ಸೇರ್ದರೆಲ್ಲರು
ತಮ್ಮ ತಂದೆಯ ಬಳಿಯಲಿ ॥ ॥3॥

– (ದೃಶ್ಯದ ಬದಲಾವಣೆ)–
(ಕುಣಿಯುತ್ತಾ)

ಬಾಹುಬಲಿ : (ಪ್ರವೇಶ)
ಪೌದನ ಪುರಾದಿ ಮಹಾಭಾಗಕ್ಕೆ ನಾನು ರಾಜನಿಹೆನು
ತಂದೆ ಪುರುದೇವರಿತ್ತ ರಾಜ್ಯವಾಳುತಿಹೆನು
ಪ್ರಜರ ಸೌಖ್ಯವೇ ನನ್ನ ಹಸಿವು ಹಂಬಲ
ಅವಳ ಏಳ್ಗೆಯೇ ನನಗೆ ಸಕಲ ಬೆಂಬಲ ॥

– (ಕುಣಿತ)–
ವಾಹಕ ಬಾಹುಬಲಿ ಮಹಾಪ್ರಭುಗಳಿಗೆ
ಪಾಲಕ ಜಯವಾಲಿ ಜಯವಾಲಿ
ವಾಹಕ ಭರತ ಚಕ್ರವರ್ತಿಗಳ ಆಜ್ಞಾಪತ್ರ
ಪರಾಂಬರಿಸಬೇಕು ಪ್ರಭೋ !

(ಪತ್ರವನ್ನು ಕೊಡುವನು)

ಬಾಹು: ಅಹಾ! ಅಣ್ಣನವರ ಪತ್ರವೆ? ಅಣ್ಣನವರು ಕ್ಷೇಮವೆ?
ರಾಜ್ಯ ಕೋಶ ಸೇನೆ ಕೋಟೆ ಹದುಳವೇನೋ ವಾಹಕ ?

ಭರತಣ್ಣಗೆ ವಂದನೆ
ಅವನಾಜ್ಞೆಗೆ ಮನ್ನಣೆ !

–(ಓಲೆ ತೆರೆಯುವನು)–
(ಹಿನ್ನೆಲೆಯಲ್ಲಿ)

ಸ್ವಸ್ತಿ, ಸಮಸ್ತ ವಿಷ್ಟಪಾಧೀಶ್ವರ ಪುರು ಪರಮೇಶ್ವರ ಚರಣ ಸರಸಿಜ ರಜೋರಂಜಿತ ಮಣೀ ಕಿರೀಟಂ ಭರತೇಶ್ವರ ಚಕ್ರವರ್ತಿ ನಿಜ ಪ್ರಿಯಾನುಜಂ ಬಾಹುಬಲಿ ಕುಮಾರನಂ ಪರಮಾಶೀರ್ವಾದದಿಂ ಪರಸಿ, ಆಜ್ಞಾಪಿಸುವುದೇನೆಂದಡೆ–

ಷಟ್‌ಖಂಡ ಮಂಡಲಾಧಿತಪತಿ ದೋರ್ದಂಡಭೂಪತಿ ಶ್ರೀ ಶ್ರೀ ಭರತ ಚಕ್ರೇಶ್ವರನಿಗೆ ಮಣಿಯದ ಶಿರವಿಲ್ಲ, ಅವನನ್ನು ಕೀರ್ತಿಸದ ಬಾಯಿಲ್ಲ. ಆದೊಡೆ ನಮ್ಮನುಜನಾದ ನೀನು ಬಾಯ್ಕೇಳದೆ ಮಲೆತು ನಿಂದುದಂ ಕೇಳ್ದು ಖೇದವೆನಿಸಿ ಈ ನಿರೂಪವನ್ನಟ್ಟುತ್ತಿದ್ದೇವೆ. ಇದ ಕಂಡ ಕೂಡಲೆ ಬರುವುದು, ಬಂದು ತಪ್ಪೊಪ್ಪಿ, ಕಪ್ಪು ಒಪ್ಪಿಸಿ ಶರಣಾಗತನಾಗುವುದು.

ಇದು ನಮ್ಮ ಕಟ್ಟಾಜ್ಞೆ !
ಇಂತು ಚಕ್ರಿ ಬಿರುದಾಂಕಿತ ಸ್ವಹಸ್ತ,
ಮಹಾರಾಜಾಧಿರಾಜ ಭರತೇಶ ಚಕ್ರವರ್ತಿಗಳು.
ಬಾಹು: ಎಲ್ಲಾ ಸೊಕ್ಕೆ ! ಎಲಾ ಗರ್ವವೇ !1
ನಿನಗೆ ಧಿಕ್ಕಾರ !!!
ಲಲಲಲ ಲಲಲಲ ಲಲಲಲ ಲಲಲಲಾ !
(ಕುಣಿಯುತ್ತಾ)

ಹೇಳು ವಾಹನ ನಿನ್ನ ಸ್ವಾಮಿಗೆ
ಆಜ್ಞೆಗಿಲ್ಲಿ ಕವಡೆಯಷ್ಟು ಬೆಲೆಯ ಇಲ್ಲವೆಂದು !
ಭುಜಬಲಿಯು ಈ ಭುಜಬಲಿಯು ದೇವತನಯ
ಭರತನಂತೆ ವೃಷಭ ಪುತ್ರ ಸರ್ವತಂತ್ರ ಸ್ವತಂತ್ರನು ॥

ಸೊಕ್ಕಿನ ಶಾರ್ದೂಲಕೆಂದೂ
ಮಣಿವುದಿಲ್ಲ ಎಂದು ಹೇಳೊ
ಕೊಂಡು ಬರಲಿ ಯುದ್ಧವನ್ನೆ
ಕೊಂಡು ಬರಲಿ ಯುದ್ಧವನ್ನೆ
ಸಿದ್ಧನಿಹೆನು ಹೋರಲು ॥ಸಿದ್ಧನಿಹೆನು ಹೋರಲು॥

(ನಿರ್ಗಮನ)
ಮೇಳ : ಈ ರೀತಿಯಾಗಿ ಕರೆ ಕೊಟ್ಟದ್ದರಿಂದ ಭರತ ಬಾಹುಬಲಿಯರಿಬ್ಬರೂ ಯುದ್ಧಕ್ಕೆ ಸನ್ನದ್ಧರಾದರು. ಆದರೆ ಅಣ್ಣ ತಮ್ಮಂದಿರ ಹೋರಾಟದಲ್ಲಿ ಕೋಟಿ ಕೋಟಿ ಅಮಾಯಕರ ಹತ್ಯವಾಗಬಾರದೆಂದು ದೈವದವರು –

(ಕಂದ) ಜಯಮಂ ಕೈಕೊಳ್ವುದು
ದೃಷ್ಟಿಯುದ್ದ ಜಲಯುದ್ಧ ಮಲ್ಲಯುದ್ಧದೊಳ್ ॥

(ವಚನ) ಈ ಬಗೆಯ ಧರ್ಮಯುದ್ಧವೆಸಗಿಂ ಎಂದು ಪೇಳ್ದೊಡೆ ಯುದ್ಧ ಆರಂಭವಾಯಿತು, ದೃಷ್ಟಿಯುದ್ಧ –

(ಭರತ–ಬಾಹುಬಲಿಯರು, ಇದಿರು–ಬದಿರಾಗಿ ನಿಂತು ನೆಟ್ಟ ದೃಷ್ಟಿಯಿಂದ ರಂಗ ಪ್ರವೇಶಿಸಿ, ಕಣ್ಣರಳಿಸಿ ಒಬ್ಬರನ್ನೊಬ್ಬರು ವೀಕ್ಷಿಸುವರು. ಮದ್ದಲೆ ಇತ್ಯಾದಿ ನಾದಗಳು ಹಿನ್ನೆಲೆಯಲ್ಲಿರುವುವು. ನಿಮಿಷಗಳು ಉರುಳುವುವು. ಕಡೆಯಲ್ಲಿ ಭರತ ಸೋತು ಕಣ್ಣು ಮಿಟುಕಿಸಿ ಎರಡೂ ಕೈಗಳಿಂದ ಮುಖ ಮುಚ್ಚಿಕೊಳ್ಳುವನು)

ಸೋತನು ಭರತನು ದೃಷ್ಟಿ ಯುದ್ಧದಲಿ
ಮೊಳ್ಗಿಸಿರೊ ಅನಂದ ಭೇರಿಯನು
ಪೌದನ ಪುರಕೇ ಜಯ ಸಂಭವಿಸಿದೆ
ಜೈಕಾರವ ಭೋರ್ಗರೆಯಿಸಿರೊ ॥

–(ಕುಣಿಯವನು)–

ಭರತ : (ಭಂಗನೆ ಹಾರಿ ಬಾಹುಬಲಿಯನ್ನು ತಡೆಗಟ್ಟಿ)
ಸಾಕು ನಿಲ್ಲಿಸೊ ನಿನ್ನ ಒಣ ಪ್ರತಾಪವನು

ಛಲಕೆ ಸೋಲದೊ ಕಣ್ಣು
ಒಲವಿನ ಬಲುಮೆಗಾಗಿಯೆ ಸೋಲ್ತುದೋ
ಕಾಮದೇವನು ನೀನೆ ಅಲ್ಲವೆ ?
ಸೌಂದರ್ಯದ ರೂಪಿಯೇ
ನೋಡ ನೋಡುತ ಮೈಯ ಮರೆತೆನು
ಕಣ್ಣಿನಲಿ ನಗೆ ಸೂಸುತ ॥

– ( ಕುಣಿಯುವನು ಇಬ್ಬರೂ ನರ್ತಿಸುವರು) –
(ಭರತ ಬಾಹುಬಲಿಯರು ನೀರೆರಚುವಂತೆ ಅಭಿನಯಿಸುತ್ತಾ ಕುಣಿಯುವರು)

ಶಾಂತಲೆ : ಅಲೆಯ ಮೆಲೆ ಅಲೆಯನೆತ್ತಿ ಛಲದಿ ಛಲದಿ ಬೀಸಿ ಬೀಸಿ
ಮುಖಕೆ ಎರಚಿ ಉಸಿರ ಸಿಗಿಸಿ ನರಳುತಿಬ್ಬರು
ಆಡಿದರೊ ಆಡಿದರು ಜಲಯುದ್ಧವನಾಡಿದರೋ
ಬಹು ವಿಧದಲಿ ಭರದಲ್ಲಿ ಭೂಮರೂಪದಲ್ಲಿ !
[ತಾಳ–ಮೇಳಗಳ ಗದ್ದಲ. ಹಿಂದೆ ಮುಂದೆ ಎಡ–ಬಲ ತಳ್ಳಾಟ–ಭರತ ಸೋತು ಮುಖ ತಿರುಗಿಸುವನು. ಬಾಹುಬಲಿ ಬಲಗೈಯಲ್ಲಿ ನೀರೆರಚುವ ಭಂಗಿಯಲ್ಲೇ ನಿಲ್ಲುತ್ತಾನೆ]

ಬಾಹು: (ದೈನ್ಯದಿಂದ)
ಬೇಡವಣ್ಣಾ ಕೆಟ್ಟ ಹಟವು
ಪಾದ ಮುಟ್ಟಿ ಬೇಡಿಕೊಂಬೆ ॥
ಸೋಲು ಎಂಬುದು ನಿನಗದೆಂದೂ
ಕಟ್ಟಿಟ್ಟಾ ಬುತ್ತಿಯಹುದೊ ॥

ಭರತ : ಛೇ ದುರಾತ್ಮ ! ಹೇಡಿ, ರಣಹೇಡಿ !
ಎರಡರಲ್ಲಿ ಗೆದ್ದರೇನು ನೀನು ಸೋತ ಹಾಗೆಯೇ
ಮಲ್ಲಯುದ್ಧದಲ್ಲಿ ಗೆಲಲು ಆಗದೆಂದು ಅಂಜಿದೆ ॥
ಅಂಜುಬುರುಕ ಗುಳ್ಳೆ ನರಿಯು ನನಗೆ ತಮ್ಮನಲ್ಲವೊ
ಯುದ್ಧ ಮಾಡು, ಸೋತೆನೆಂದು ಸೆರಗ ಪಾರು ಬಾರೆಲೋ ॥

ಬಾಹು : ಅಹಹಹಹಾ ! ಲಲಲಲ.. (ಕೋಪದಿಂದ ಹಾರು ಆರ್ಭಟಿಸಿ)
ಸೋಲಿಗರ್ಥವೆ ನನಗೆ ತಿಳಿದಿಲ್ಲ ಭರತ !
ನಿನ್ನ ಸೊಮ್ಮಿಳಿಸುವೆನು ನೋಡು ಸತತ ॥

(ಮಲ್ಲಯುದ್ಧ–ತಾನನನಾ, ತಾನನಾನನಾ)
[ಭರತ ಸೋತು ಒಂದು ಮೂಲೆಯಲ್ಲಿ ನಿಲ್ಲುತ್ತಾನೆ. ಬಾಹುಬಲಿ ಅವನನ್ನು ಹಿಡಿದು ಮೇಲೆತ್ತಲು ಹೋಗಿ]
ಇವನನ್ನು ನೆಲಕಿಕ್ಕಿ ಕುಕ್ಕಿ ಬಿಡಲೇ
ಒಡೆದು ಪುಡಿ ಪುಡಿ ಗೈದು ನುಚ್ಚುನುರಿಗೈಯಲೆ !
ಛೇ ಬೇಡ

ಭರತಾವನೀಶ್ವರಂ ಗುರು, ಪಿರಿಯಣ್ಣಂ
ಚಕ್ರವರ್ತಿ ಮಹಿಮಾಕರಂ
ನನ್ನ ತಂದೆಯು ಕಂಡ ಮೊದಲ ಕುಡಿ ಈತಂ
ಕೊಲ್ಲಲಾಗದು; ಚೆಲ್ಲಲಾಗದು ನನ್ನ ಕುಲದ ರಕ್ತವ ನಾನೆ !

ಸೋತರೇನಂತೆ ನನ್ನಣ್ಣನಲ್ತೆ ಈ ಭರತ !
ಬದುಕಿ ಬಾಳಲಿ ಭರತ !!
ನನ್ನಣ್ಣ ಭರತ !!!
(ನಿಧಾನವಾಗಿ ಕೆಳಗಿಳಿಸುವನು)

[ನಾಚಿ ತಲೆತಗ್ಗಿಸಿಕೊಂಡು ನಿಲ್ಲುತ್ತಾನೆ ಭರತ. ರಂಗದ ಒಂದು ಕೊನೆಯಲ್ಲಿ ಶಿವನು ಮತ್ತೊಂದರಲ್ಲಿ ಇವನು. ಚಣಕಾ ರಂಗ ಮೌನ ತಳೆಯುತ್ತದೆ. ಆದರೆ ಇದ್ದಕ್ಕಿದ್ದಂತೆಯೇ ಏನನ್ನೋ ಚಿಂತಿಸುತ್ತಿದ್ದ ಭರತ]

ಭರತ : ಫಡಫಡಾ ಪಾಡಂಡಿ ಬಾಹುಬಲಿಯೇ
ಈ ಚಕ್ರ ರುಂಡವನು ತುಂಡರಿಪುದೀಗಲೇ
(ಕುಣಿದಾಡಿ ಚಕ್ರವನನು ಪ್ರಯೋಗಿಸುವನು)
(ನಿಶ್ಯಬ್ಧ ರಂಗ ಚಣಕಾಲ)
(ಹಾಡು) ಅದು ಧರ್ಮ ಚಕ್ರ
ನ್ಯಾಯವನ್ಯಾಯಗಳ ತುಲನೆ ಮಾಡುವ ಚಕ್ರ
ಅದು ಧರ್ಮ ಚಕ್ರ

ಬಾಹುಬಲಿ ಸ್ವಾಮಿಯನು ಮೂರು ಸೂಲ್ ಬಲವಂದು ಅವನ ಬಲಭುಜದಲ್ಲಿ ನೆಲೆ ನಿಂತಿತೋ
ಅದು ಧರ್ಮ ಚಕ್ರ
ಅದು ಪರಮ ಚಕ್ರ
ಅದುವೆ ಜಿನಧರ್ಮದಾ ಶ್ರೀ ವಿಜಯ ಚಕ್ರ !

ಬಾಹು : ಅಯ್ಯಯ್ಯೋ ಭರತಣ್ಣ ಏನಪಚಾರಗೈದಣ್ಣಾ !
ನಿನ್ನ ತಮ್ಮನ ತಿಂದು ಎನಿತು ದಿನ ಬದುಕುವೆಯೋ ?
ಶಶಿ ಸೂರ್ಯರಿರುವತನಕ ದೇಹವಿರಬಲ್ಲುದೇ?
ನಾಲ್ಕು ದಿನಗಳ ಆಟ, ಈ ಬಣ್ಣದಾಟ !
ಇದಕೇಕೆ ಹಾರಾಟ ಮಾಯೆ ಬೇಟ?
ಬರುವಾಗ ಬತ್ತಲೆ ಹೋಗುವಾಗ ಬತ್ತಲೆ
ನಶ್ವರದ ಬಣ್ಣದೀ ಬದುಕಿಗಾಗಿ
ಭೂಮಿ ಆಕಾಶವನು ಅಳೆಯ ಬೇಕೇಕೆ?
ಮುಷ್ಠಿ ಅನ್ನಕೆ ಇಷ್ಟು ಕಷ್ಟ ಪಡಬೇಕೆ ?
ಸ್ವಪ್ರತಿಷ್ಠೆಯ ಮೆರೆಯ ಸ್ವಾರ್ಥವನು ಮೆರೆಯಲ್ಕೆ
ಸೋದರನ ಬಲಿ ಬೇಕೆ? ರಕ್ತ ಚೆಲ್ಲಲು, ಬೇಕೆ?
ಆದಿದೇವನ ಪುತ್ರ ಅಮೃತ ಪುತ್ರನೊ ಭರತ
ಮನುಕುಲದ ಮೊದಲ ಕುಡಿ ಪ್ರಪ್ರಥಮ ಚಕ್ರಿ
ನಿನಗಿದುವೆ ಜಸವೆ? ಧರ್ಮವೆ? ಕೀತಿಯೆ? ಶ್ರೇಯಸೇ?
ಮಸಳಿಸಿದೆಯಲ್ಲಣ್ಣ ನಿನ್ನ ಮಲ ಚರಿತವನು.
ಇಲ್ಲ, ತಪ್ಪು ನಿನ್ನದು ಅಲ್ಲ !
ಆ ವಂಚಕಿ ರಾಜ್ಯಲಕ್ಷ್ಮಿಯದು !
ಅವಳು ಚಂಚಲೆ ಚಪಲೆ ಬಲು ಮೋಸಗಾತಿ !
ಸೋದರರು ಸೋದರರಲ್ಲಿ, ತಂದೆ ಮಕ್ಕಳುಗಳಲಿ
ತಂದಿಕ್ಕಿ ನೋಡುವಳು ಚೆಲ್ಲಾಟವಾಡುವಳು ಆ ರಾಜ್ಯಲಕ್ಷ್ಮಿ!
ಅವಳೊಡನೆ ಪುದುವಾಳ್ವ ಬಯಕೆ ಎನಗಿಲ್ಲ !
ಕ್ಷಣಿಕ ಭೋಗಕೆ ಮನವ ಮಾರುವವನಲ್ಲಾ

ಕಿಡುವೊಡ ಕಿಡುವ ರಾಜ್ಯದ ಗೊಡವೆ ಎನಗೆ ಬೇಡಾ
ಇಂದೆ ಈಗಲೆ ನಾನು ಜಿನ ದೀಕ್ಷೆ ಪಡೆವೆ !
ವೈರಾಗ್ಯ ಒಲಿವೆ
ತಪೋಧನನು ನಾನಾಗಿ ತಪಕೆ ನಡೆವೆ !

(ಹೊರಡಲನುವಾಗುವನು ಭರತ ಕೂಡಲೆ ಅವನನ್ನು ತಡೆದು)
ಭರತ : ಬೇಡ ತಮ್ಮಾ ಬೇಡ ಬಾಹುಬಲಿ ಸ್ವಾಮಿಯೆ
ನಾಗೈದ ಅಪರಧಾ ಕ್ಷಮಿಸಪ್ಪಾ ತಮ್ಮಾಜಿ ॥

ಬಾಹು : ಅಣ್ಣಾ, ನಿನ್ನ ಕ್ಷಮೆ ನನಗೆ ಶ್ರೇಯಸ್ಸಲ್ಲ !
ಒಳ್ಳಿತಾಗಲಿ ಎಲ್ಲ !!
ಅಣ್ಣಾ ಓ ಅಣ್ಣ ಭರತಣ್ಣ
ನೀನು ಒಲಿದಾ ಹೆಣ್ಣ ನಾನು ಕಾಮಿಸಬಹುದೆ ?

ನೆಸಲೀ ನಿನ್ನೆದೆಯ ಮೇಲೆ ಚಿರವಾಗಿ ಶಾಶ್ವತಳೆ ಆಗಿ
ವಿಭ್ರಮ ಭ್ರಮರಿ ಈ ರಾಜ್ಯಲಕ್ಷ್ಮಿ !
ತಂದೆ ಎನಗಿತ್ತುತದನು, ನಿನ್ನಿಂದ ಪಡೆದುದನು
ಸರ್ವವನು ನಿನಗಿತ್ತು ನಡೆದಪೆನು ಸ್ವೀಕರಿಸು,
ಉಪಭೋಗಿಸೆಲ್ಲವನು ನನ್ನಾಶೀರ್ವದಿಸಿ ಕಳುಹು ಭರತಣ್ಣಾ !

ಇದೋ ಎಲ್ಲರಿಗು ಕೈಮುಗಿದೆ
ಹೋಗಿ ಬರುವೆನು ಹರಸಿ ನೀವೆಲ್ಲರೊಮ್ಮನದಿ

ಸಕಲವೂ ಶುಭಮಕ್ಕೆ
ಸರ್ವ ಮಂಗಲಮಕ್ಕೆ
ಶಾಂತಮಕ್ಕೆ !

(ನಿಧಾನವಾಗಿ ಚಲಿಸುವನು ಎಲ್ಲರೂ ತಲೆ ಬಾಗಿ ನಿಂತಿರುವರು)
ಓಂ ನಮೋ ಗೊಮ್ಮಟಾನಾಂ
ಓಂ ನಮೋ ಬಾಹುಬಲೀಶ್ವರಾನಾಂ
ಓಂ ನಮೋ ಜಿನಮೂರ್ತಿ ಜಗದ್ವಂದ್ಯಾನಾಂ
ಓಂ ನಮೋ ಆತ್ಮರೂಪಾನಾಂ
ನಮೋ ನಮಃ ನಮೋ ನಮಃ ನಮೋ ನಮಃ

ಶಾಂತಲೆ : ಎಲ್ಲೆಲ್ಲು ನಿನ್ನ ಪಾದ । ಶ್ರೀ ಗೊಮ್ಮಟೇಶನೇ
ಎಲ್ಲಡೆಯು ನಿನ್ನ ಪಆದ ॥ಪ॥
ಕರುನಾಡ ಮಡಿಲಲ್ಲಿ ಕಟವಪ್ರ ಪುರದಲ್ಲಿ
ಭಾರತಾಂಬೆಯ ಎಲದೆಯ ಮಿದು ಬದುವಿನಲ್ಲಿ ॥ಅನು.ಪ॥

ಎಲ್ಲೆಲ್ಲು ನಿನ್ನ ಪಾದ । ಶ್ರೀ ಗೊಮ್ಮಟೇಶನೇ
ಎಲ್ಲೆಡೆಯು ನಿನ್ನ ಪಾದ ॥

ಹೂವರಳಿ ನಗುವಾಗ ಎಲೆ ಚಿಗುರು ನಲಿವಾಗ

ನವಿಲು ಜಾಗರವಾಡಿ ನರ್ತನಂಗೈವಾಗ
ಚಿಕ್ಕ ಚಿಕ್ಕಿಯು ನಲಿದು ಪಕಪಕನೆ ನಗುವಾಗ
ಆಕಾಶದೆಡೆಯಲ್ಲಿ ನಿನ್ನ ಪಾದ । ಶ್ರೀ ಗೊಮ್ಮಟೇಶನೇ
ಎಲ್ಲಡೆಯುದ ನಿನ್ನ ಪಾದ ॥1\1॥

ಹಕ್ಕಿ ರೆಕ್ಕೆಯ ತೆರೆದು ಹಾರುವೆಡೆಯಲ್ಲಿ
ಕೋಗಿಲೆಯು ಕೂಜನವ ಹರಿಸುವೆಡೆಯಲ್ಲಿ
ತುಂಬಿದೆದೆ ನದಿಯಲ್ಲಿ ದುಂಬಿ ಬಂಬಲಿನಲ್ಲಿ
ಸುಳಿವ ತೆಂಬೆಲರಲ್ಲಿ ತರಣಿ ಚಂದ್ರಮರಲ್ಲಿ
ಎಲ್ಲೆಲ್ಲು ನಿನ್ನ ಪಾದ । ಶ್ರೀ ಗೊಮ್ಮಟೇಶನೇ
ಎಲ್ಲೆಡೆಯು ನಿನ್ನ ಪಾದ ॥2॥

ಕುಂತಲ್ಲಿ ನಿಂತಲ್ಲಿ ನುಡಿವಲ್ಲಿ ನಡೆವಲ್ಲಿ
ಕಂಡೆನಯ್ಯಾ ತಂದೆ ನಿನ್ನ ಪಾದ
ಕಂಡು ಕಂಡಾನಂದದಿಂದ ಮೈಯ ಮರೆತೆನೊ ತಂದೆ
ಎಡೆಬಿಡದೆ ಕರುಣಿಸಿದೆ ನಿನ್ನ ಪಾದ । ಶ್ರೀ ಗೊಮ್ಮಟೇಶನೇ
ಎಲ್ಲೆಡೆಯು ನಿನ್ನ ಪಾದ ॥

(ನೇಪಥ್ಯವಾಣಿ) ಓಂ ನಮಃ ಸಿದ್ಧೇಭ್ಯಃ
ಚತುರ್ವಿಂಶತಿ ತೀರ್ಥಂಕರರ
ದಿವ್ಯದರ್ಶನ ಪಡೆದು ಧನ್ಯರಾಗೋಣ

[ಹಾಡು ಹರಿಯುವಾಗ ಸಪ್ತವರ್ಣ ಜ್ಯೋತಿರಂಗದ ಹಿಂಬದಿಯಲ್ಲಿ ಸುತ್ತುತ್ತಿರಬೇಕು]

ಆದಿದೇವ ಪುರುದೇವ ಆ ಋಷಭನಾಥ
ಅಜಿತ ಸಂಭವನಾಥ ಅಭಿನಂದನಾ
ಸುಮತಿ ಪದ್ಮಪ್ರಭಾ ಸುಪಾರ್ಶ್ವನಾಥಾ
ಶ್ರೀ ಚಂದ್ರಪ್ರಭ ಪುಷ್ಪದಂತ ಶೀತಲನಾಥಾ
ಶ್ರೇಯಾಂಶ ಶ್ರೀವಾಸು ವಿಪಲ ನಾಥಾ
ಅನಂತನಾ ಧರ್ಮನಾಥ ಶ್ರೀ ಶಾಂತಿನಾಥಾ
ಕುಂಥು ಅರ ಮಲ್ಲಿಮುನಿ ಸುವ್ರತಾ
ನಮಿ ನೇಮಿನಾಥರೌ ಶ್ರೀಪಾರ್ಶ್ವನಾಥಾ
ಕಡೆಯ ತೀರ್ಥಂಕರರೆ ಶ್ರೀ ವರ್ಧದೇವ

(ವಚನದಲ್ಲಿ ಗಂಭೀರವಾಣಿಯಲ್ಲಿ)

ಶ್ರೀ ವರ್ಧಮಾನ ಮಹಾವೀರ
ಶ್ರೀ ವರ್ಧಮಾನ ಮಹಾವೀರ ॥

[ತಿರುಗುತ್ತಿದ್ದ ಜ್ಯೋತಿ ನಿಂತು ತೆರೆ ಇಳಿದು ರಂಗ ಬೆಳಕಾಗುತ್ತದೆ]

ಎಲ್ಲರೂ : ನಮಸ್ಥೆ ನಿಮಗೆಲ್ಲ ದೇದೀಪ್ಯ ಜ್ಯೋತಿಗಳೇ
ನಮಸ್ತೇ ಉಪಸ್ಥಿತರಿರುವ ಶ್ರೀ ಪೂಝ್ಯ ಪಾದರೇ

ನಮಸ್ತೇ ವೀಕ್ಷಕರೆ ಪ್ರೇಕ್ಷಕಾತ್ಮೀಯರೇ
ನಮಸ್ತೇ ಬೆಳುಗೊಳದ ಭವ್ಯತಮದಾತ್ಮವೇ ॥

**ಬಾದಾಮಿ**

(ನರ್ತಕ – ನರ್ತಕಿಯರು)

ಬಾದಾಮಿಃ ಇದು ಬಾದಾಮಿ
ವಾತಪಿ ಗಣಪನ ಬಾದಾಮಿ
ಚಾಲುಕ್ಯರಾಳಿದಾ ಬಾದಾಮಿ
ಪರಮೇಶ್ವರ ಆ ಪುಲಿಕೇಶಿಯಾ
ಮಂಗಳೀಶನಾ ರಾಜಧಾನಿ ॥ಬಾದಾಮಿ॥

ಬಂಡೆ ಬೆಟ್ಟವನೆ ಕೊರೆ ಕೊರೆದು
ಉಳಿಯಲಿ ತಿರುಳನು ತೆಗೆತೆಗೆದು
ಗುಹಾಂತರ ದೇವಾಲಯಗಳ ನಾಲ್ಕನು
ನಿರ್ಮಿಸಿರುವರು ನೋಡವರಿಲ್ಲಿ ॥ಬಾದಾಮಿ॥

ಅವರಾಳಿದ ಐಹೊಳೆಯಲ್ಲಿ
ದೇಗುಲವಿವೆ ನೂರಾರಲ್ಲಿ
ಬಾದಾಮಿ ಆಕಾರ ದುರ್ಗಿಗುಡಿ
ಮೆರೆವಳು ಬದಿಯಲೆ ಹುಚ್ಚು ಮಲ್ಲಿ ॥ಬಾದಾಮಿ॥

ಲಾಡ್‌ಖಾನ್ ದೇಗುಲ ಮಾಲ್ಗತ್ತಿ
ಮಹಾಕೂಟ ನೋಡು ಕತ್ತೆತ್ತಿ
ಅಮಲ ಪ್ರಭೆಯಾ ತೋಳ್ ಭಿತ್ತಿ
ಪಟ್ಟದ ಕಲ್ಲಿನ ಪ್ರಭಾವತಿ ॥ಬಾದಾಮಿ॥

ಕಲ್ಲು ಕಲ್ಲು ಕಥೆ ಹೇಳುವವಿಲ್ಲಿ
ಮರ ಗಿಡಗಳು ಪಿಸುಮಾತಿನಲಿ
ಬನಶಂಕರಿ ಭವೆ ಶಿವ ಪರಮೇಶ್ವರಿ
ನೆಲೆ ನಿಂತಿಹಳದೊ ತೋಪಿನಲಿ ॥ಬಾದಾಮಿ॥

[ನೃತ್ಯ ಸಂಗೀತಗಳು ಕ್ರಮೇಣ ಕ್ಷೀನಿಸಿ, ರಂಗಭೂಮಿ ಮಸಕು ಮಸಕಾಗುತ್ತದೆ. ಅಂತಿರುವಾಗಲೆ ಹಿನ್ನೆಲೆಯಲ್ಲಿ ತುಂಬು ಗಂಭೀರವಾಣಿಯಲ್ಲಿ ಮುಂದಿನ ಗದ್ಯಭಾಗ ಪಠಿತವಾಗುತ್ತದೆ. ಅದು ಮುಗಿಯುವವರೆಗೂ ತಾಳಮೇಳಗಳ ನಾಟ್ಯ ಕ್ಷೀಣ ಪ್ರಮಾಣದಲ್ಲಿ ನಡೆಯುತ್ತಲೇ ಇರಬೇಕು]

ವಚನ : ಹಿನ್ನೆಲೆಯಲ್ಲಿ

ಬಾದಾಮಿಯ ಚಾಲುಕ್ಯ ಚಕ್ರೇಶ್ವರ ಇಮ್ಮಡಿ ಪುಲಿಕೇಶಿಯ ಖ್ಯಾತಿ ಅಂದು ದಿಗಂತ ವಿಶ್ರಾಂತವಾಗಿತ್ತು. ಪರ್ಷಿಯಾ ದೇಶದ ಖುಸ್ರು ಪುಲಿ ಕೇಶಿಯ ಸಹಾಯ ಹಸ್ತಬೇಡಿ ಫಲಕಾರಿಯಾಗಿದ್ದ ತನ್ನ ರಾಜ್ಯವನನು ದುಷ್ಟ ದಾಯಾದಿಗಳಿಂದ ಬಿಡಿಸಿಕೊಳ್ಳಲು ಹ್ಯೂಯಾನ್‌ತ್ಸಾಂಗ್ ಎಂಬ ಚೀನಾ ದೇಶದ ಯಾತ್ರಿಕನು ಪುಲಿಕೇಶಿಯ ಆಸ್ಥಾನದಲ್ಲಿ ಕೆಲ ದಿನಗಳಿದ್ದುದುಂಟು. ರವಿಕೀರ್ತಿ, ಚಂದ್ರೋಜ ಮೊದಲಾದ ವಿಖ್ಯಾತ ಮುತ್ಸದ್ಧಿಗಳಿಗೆ, ಕವಿ ಕಲಾವಿದರುಗಳಿಗೆ ಅವನ

ಆಸ್ಥಾನ ಆಡುಂಬೊಲವಾಗಿದ್ದಿತು. ಉತ್ತರಾಪಥೇಶ್ವರವೆಂದು ಪ್ರಸಿದ್ಧನಾಗಿದ್ದ ಕನ್ಯಕುಬ್ಜದ ಚಕ್ರವರ್ತಿ ಶ್ರೀ ಹರ್ಷವರ್ಧನ ದೇವನು ಬಾದಾಇ ಕೋಟೆಯ ಮೇಲೆ ದಂಡೆತ್ತಿ ಬಂದು, ನರ್ಮದಾ ನದಿಯ ತೀರದಲ್ಲಿ ಸೋತು ರಾಜೀ ಮಾಡಿಕೊಂಡುದುಂಟು. ಆ ವೇಳೆಯಲ್ಲಿ ಶ್ರೀ ಹರ್ಷನು ವಿಶ್ವವಿಖ್ಯಾತ ಪರಾಕ್ರಮಿ, ಧರ್ಮದೊರೆ, ಕನ್ನಡ ನಾಡಿನ ಪರಮೇಶ್ವರ ಪುಲಿಕೇಶಿಗಾಗಿ ತನ್ನ ಆಸ್ಥಾನ ನರ್ತಕಿ, ಯಾವ ದುಂಬಿಯೂ ಎಂಜಲಿಸದ ಪರಿಶುದ್ಧ ಪುಷ್ಪ, ನಾಟ್ಯ ಕಲಾ ಪ್ರವೀಣೆ ನಾಗಶ್ರೀ ಎಂಬುವಳನ್ನು ವಿಜಯ ವಧುವಾಗಿ, ಸ್ನೇಹ ಕಾಣಿಕೆಯಾಗಿ ಅರ್ಪಿಸಿದ್ದ. ಆ ವಿಜಯ ವಧು ನಾಗಶ್ರೀ ಪುಲಿಕೇಶಿಯ ಆಸ್ಥಾನದ ವಿಖ್ಯಾತ ವರ್ಣಶಿಲ್ಪಿ, ಶ್ರೇಷ್ಠ ಕಲಾವಿದ ಚಂದ್ರೋಜನನ್ನು ಒಲಿದಿದ್ದಳು. ಚಿನ್ನಕ್ಕೆ ಸುಗಂಧ ಬೆರೆತಂತೆ ಆಯಿತು ಎಂದು ಹರ್ಷಿಸಿದ ಪುಲಿಕೇಶಿ. ತನಗೆ ವಿಜಯವಧುವಾಗಿ ಬಂದ ತನ್ನ ಮಾನಸ ಪುತ್ರಿಯನ್ನು ಚಂದ್ರೋಜನಿಗೆ ಧಾರೆಯೆರೆದುಕೊಡಲೊಪ್ಪಿದ. ಆದರೆ ಅಜಂತದ ಗುಹಾಂತರ ದೇವಾಲಯಗಳ ಒಳ ಓವರಿಗಳಲ್ಲಿ, ಭಿತ್ತಿಗಳ ಮೇಲೆ ಪುಲಿಕೇಶಿ ಮತ್ತು ಖುಸ್ರು ಇವರ ಸಾಂಸ್ಕೃತಿಕ ರಾಯಭಾರ ಕುರಿತು ಹತ್ತಾರು ವರ್ಣಚಿತ್ರಗಳನ್ನು ಬಿಡಿಸಬೇಕಿತ್ತು. ಚಂದ್ರೋಜ ರಾಜನಿಂದ ಅಜ್ಞಪ್ತನಾಗಿ ಬಾದಾಮಿಯಿಂದ ಬಹುದೂರವಿರುವ ಅಜಂತಾಕ್ಕೆ ಹೋಗಿದ್ದ. ಚಿತ್ರಶಿಲ್ಪ ಪೂರ್ಣಗೊಂಡಿರಲಿಲ್ಲ. ಅಷ್ಟರಲ್ಲಿ ತನ್ನ ಮೋಹದ ಮಡದಿ ನಾಗಶ್ರೀ ನೆನಪಾದಳು. ಅಜಂತದಿಂದ ಓಡೋಡಿ ಬಂದ. ಅಂದು ರಾತ್ರಿ ಬಾದಾಮಿಯಲ್ಲಿ ;

ನಾಗಶ್ರೀ :
ಪ್ರಿಯತಮಾ, ಓ ಪ್ರಿಯತಮಾ
ನೀನೆ ಒಲವಿನ ಸರಿಗಮ ॥

ಶ್ರುತಿ ಇಲ್ಲದ ಈ ವೀಣೆಯು ಕಾದಿದೆ
ಮಿಡಿಯುವ ವೈಣಿಕ ನೀ ಬಾರ !
ರಾಗ ರಾಗಿಣಿಯರ ಮೈತ್ರಿಯೆ ಸಡಿಲಿದೆ
ಬೆಸುಗೆಯ ಒಸಗೆಯ ನೀ ತಾರ !

ದುಂಬಿಯ ಚುಂಬನಕಾಗಿಯೇ ಹಸಿದಿದೆ
ದಳದೆರೆದರಳಿದ ಈ ಹೂವು
ಎದೆ ಹೊಂಬಟ್ಟಲ ಮಧು ಸೊದೆ ತುಂಬಿದೆ
ಹೀರಲು ಬಾಬಾ ಬಂಡುಣಿ ಬಂದು.

ಅನ್ನಕೆ ಹಸಿವು ನೀರಿಗೆ ದಾಹ
ಕಣ್ಣಿಗೆ ಹತ್ತದೊ ಆ ನಿದ್ದೆ
ಕನಸಿನ ಲೋಕದ ಕಣ್ಮಣಿ ಬಾರಾ
ವಿರಹಕೆ ನೀನೇ ಮದ್ದಲ್ತೆ.

ಬಾ ಬ ಚಂದಿರ ಬಾ ಸುಮ ಸುಂದರ
ಬಾನಾಡಿಯೇ ಬಾ ಮಿಂಚಂತೆ !
ಬಾ ಬಾ ಬಾ ಬಾ ಬಾ ಮಂದಿರಕೆ
ಸುಳಿಸುಳಿದಾಡುವ ಮೀನಂತೆ

ಚಂದ್ರೋಜ : (ಪ್ರವೇಶಿಸಿ)

ಬಂದೆ ಬಂದೆ ಬಂದೆ ಬಂದೆ ಬಂದೇ ಬಂದೆನೇ
ಅಂದದವಳೆ ಚೆಂದದವಳೆ ಬಂದು ನಿಂದೆನೇ ॥
ನಲ್ಲೆ ನಲವೆ ಮೊಲ್ಲೆ ಹೂವೆ ಮಲ್ಲಿಗೆ ಹೂ ತುಟಿಯಳೆ
ಎಳೆಯ ಚಂದ್ರ ಹೊರಳಿದಂಥ ಹಾಲ್ದಿಂಗಳ ಹಣೆಯಳೆ

ಮಿನುಗು ತಾರೆ ಕಂಗಳಲ್ಲಿ ಬೆಳಕಿನ ಮಳೆಗರೆವಳೆ
ಹಾಲುಗೆನ್ನೆ ಕಬ್ಬಿನುಬ್ಬು ಕರಿಯ ಸೋರ್ಮುಡಿಯಳೆ ॥

ನಾಗಶ್ರೀ : ಸ್ವಾಮೀ

ಚಂದ್ರೋಜ : ನಾಗಶ್ರೀ

ನಾಗಶ್ರೀ : ಬಂದೇ ಬಿಟ್ಟಿರಾ ?

ಚಂದ್ರೋಜ : ನಿನ್ನ ಬಿಟ್ಟಿರಲು ಹೇಗೆ ಸಾಧ್ಯ ಹೇಳು ?

ನಾಗಶ್ರೀ : ಅಜಂತದಾ ಚಿತ್ರಕಾರ್ಯ ಮುಗಿದುದೇ ?

ಚಂದ್ರೋಜ :ಎಲ್ಲಿ ಮುಗಿಯಬೆಕು :
ಇನ್ನು ಎರಡು ಮಾಸಬೇಕು.

ನಾಗಶ್ರೀ : ಮತ್ತೆ?.. ಬಂದೇ ಬಿಟ್ಟಿರಿ..

ಚಂದ್ರೋಜ : ನಾನಾಗಿ ಬರಲಿಲ್ಲ, ನೀನೇ ನನ್ ಸೆಳೆದೆ !

ನಾಗಶ್ರೀ : ಹುಹ್ಹುಹ್ಹುಹ್ಹು ! ಸಂತೋಷ!!
ಮಧುರ ಮಿಲದ ಈ ರಸ ನಿಮಿಷವೇ
ನೈಜಾರ್ಥದ ಸ್ವರ್ಗ !
ಚಂದ್ರ, ಚಂದ್ರೋಜ, ನನ್ನ ಮಧುಚಂದ್ರವೆ !

(ಹಾಡು–ನರ್ತನ)
ನೀನೆ ಭಾವ ನಾನೆ ಭಾಷೆ
ಭಾವಗೀತೆಯಾಗುವಾ

ನೀನು ಹೆಜ್ಜೆ ನಾನು ಗೆಜ್ಜೆ
ನಾಟ್ಯವನು ನಟಿಸುವಾ ॥

ನಾನು ಹೂವು ನೀನು ದುಂಬಿ
ಮಾಧುರ್ಯವ ಸವಿಯುವಾ
ನೀನೆ ಒಲವು ನಾನೆ ಚೆಲುವು
ಆನಂದವೆ ಆಗುವಾ ॥

ನೀನು ಬಾನು ನಾನು ಬಯಲು
ಬೆರೆದು ಬೆಳಕ ನೀಡುವಾ
ನಾನು ಮೋಡ ನೀನು ಮಿಂಚು
ಜೇನು ಮಳೆಯ ಕರೆಯುವಾ ॥

ಬಾದಾಮಿಯ ಬಂಡೆ ಮೇಲೆ

ಶಾಸನಗಳೇ ಆಗುವಾ
ಮಹಾಕೂಟೇಶನಡಿಗೆ
ಚಂದನವನೆ ಚೆಲ್ಲುವಾ ॥

ಚಂದ್ರೋಜ :
ನಾಗು, ನನ್ನ ಹೃದಯೇಶ್ವರಿಯೇ, ಓ ನನ್ನ ನಾಗಶ್ರೀ,
ಏನು ಚೆಲುವೆಯೆ ನೀನು ! ಚೆಲುವು ಚಿಮ್ಮುವ ಚಿಲುಮೆ !
ಸುಣ್ಣ ಬಣ್ಣದ ನುಡಿಯ ಹಂಗೆನಗೆ ಬೇಕಿಲ್ಲ !
ಕೇಳು !

(ಹಾಡು)
ನಿನ್ನ ಬಣ್ಣಿಸಲೆನಗೆ ಸಿಂಗರದ ನುಡಿಯೇಕೆ ?
ನೀ ಚೆಲುವೆ ಎಂಬೊಂದು ನುಡಿ ಸಾಲದ ॥ಪ॥

ಕೋಗಿಲೆಯ ಕೂಜನಕೆ ಶ್ರುತಿ ತಂತಿ ಬೇಕೇನು ?
ಹಾಡಿದುದೆ ತಾ ಭಾವಗೀತೆಯಲ್ಲೇನು?
ಜಗದೊಲವು ಚೆಲುವೆಲ್ಲ ಎರಕಗೊಂಡಿಹ ದೇಹ
ಪ್ರೇಮ ಕಾರಂಜಿಯೊಲು ಪುಟವ ಮಾಟ !
ಸೊಬಗು ಸೋರಿದೆ ಇಲ್ಲಿ ಇವಳೆದೆಯ ಬದಿಯಲ್ಲಿ
ದಳದೆರೆದ ಹೂವಚಿತೆ ಇವಳ ನೋಟ ! ॥1॥

ಇಬ್ಬನಿಯ ಮಣಿಯಾಗಿ ಮಿನುಗು ತಾರೆಯಾಗಿ
ಜಲಪಾತ ತುಂತುರಿನ ಮಂಜು ಹೊಗೆಯಾಗಿ
ಏನು ಚೆಲುಮೆಯ ನೀನು ಏಳು ಬಣ್ಣದ ಬಿಲ್ಲು
ಕಣ್ಣುಗಳು ಸಾರ್ಥಕವು ನೀಲಾಂಜನೆ ! ॥2॥

ಮನದಮಲ ತೀರ್ಥದಲಿ ನಿನ್ನ ಅಡಿಗಳ ತೊಳೆವೆ
ಪ್ರೇಮ ಕುಸುಮಗಳನ್ನು ಸೂರೆಗೈವೆ
ನಿನ್ನೊಂದು ನಗೆಗಾಗಿ ಶತಮಾನ ತಪಗೈವೆ
ಪ್ರೇಮದಧಿ ದೇವತೆಯೆ ಬಕುತ ನಾನು ॥3॥

ನಾನೆಂಬುದೇನಿಲ್ಲ ನೀನು ನೀನೇ ಎಲ್ಲ
ನನ್ನ ಕನಸಿನ ರಾಣಿ ಕರಮುಗಿವೆನು
ನನ್ನದೆಂಬುದನೆಲ್ಲ ನಿನ್ನೊಡಲಿಗರ್ಪಿಸುವೆ
ನಿನ್ನಲ್ಲಿ ಒಡ ಬೆರೆದು ಐಕ್ಯನಹೆನು ॥4॥

(ವದನ) ನಾಗು, ನಾನು ಇಂದೇ ಹೊರಡಬೇಕಿದೆ ಅಜಂತಕ್ಕೆ
ನಾಗಶ್ರೀ : ಹ್ಞಾ ! ಇಂದೆ ಹೊರಡಬೇಕೆ? ಸ್ವಾಮಿ ನನ್ನ ಜೀವವೇ ಹಾರಿ ಹೋದಂತೆ ಭಾಸವಾಗುತ್ತಿದೆ. ನೀವಿಂದು ಇಲ್ಲಿಯೇ ನನ್ನ ಜೊತೆಯಲ್ಲಿಯೇ ಇದ್ದುಬಿಡಿ.

ಚಂದ್ರೋ : ನಾಗು, ನಾನು ರಾಜರಪ್ಪಣೆ ಇಲ್ಲದೆ ಕದ್ದು ಬಾದಾಮಿನಗರ ಪ್ರವೇಶ ಮಾಡಿದ್ದೇನೆ. ಪುಲಿಕೇಶಿ ಪ್ರಭುಗಳಿಗೆ ತಿಳಿದರೆ ತಲೆದಂಡ!

ನಾಗಶ್ರೀ : ಅಪ್ಪಾಜಿಯವರಲ್ಲಿ ನಾನು ಬೇಡಿಕೊಳ್ಳುತ್ತೇನೆ.

ಚಂದ್ರೋಜ : ನಾಗು, ಪ್ರೇಮಭರದಲ್ಲಿ ಕರ್ತವ್ಯ ಭ್ರಷ್ಟರಾಗುವುದು ಬೇಡ. ಕೇವಲ ಒಂದು ವಾರ, ತಪ್ಪಿದರೆ ಎರಡು ವಾರಗಳಲ್ಲಿ ಚಿತ್ರಕಾರ್ಯ ಮುಗಿಸಿ ಓಡೋಡಿ ಬರುವೆ. ಬರಲೆ.. ಬ..ರ..

– (ನಿರ್ಗಮನ) –

ನಾಗಶ್ರೀ: ಬೇ..ಬೇ..ಡ (ಅವನು ನಡೆದ ಹಾದಿಯನ್ನೇ ವೀಕ್ಷಿಸುತ್ತಾ)
ಸ್ವಾಮಿಯರು ಸೆರಗಿನಲಿ ಬಚ್ಚಿಟ್ಟುಕೊಂಡಂಥ
ಇಂದಿನಿರುಳಿಗೆ ಯಾವ ದಾಕ್ಷಿಣ್ಯ ತಿಳಿದಿಲ್ಲ;
ಚಂದ್ರೋಜರನು ಹೊತ್ತ ಕುದುರೆಗಿಲ್ಲವು ಕರುಣೆ;
ಅವರ ನಡಿಗೆಗೆ ಒಂದು ಕಡೆ ಮಾಡಿಕೊಟ್ಟಂಥ
ಆ ಅಜಂತೆಯ ಹಾದಿಗಿಲ್ಲ ದಯೆಯೆಂದೂ !
ದಯೆ ಇಲ್ಲವೆಂದೂ !
ಕುಬ್ಜ ವಿಷ್ಣು (ಪ್ರವೇಶಿಸಿ)

ಹಾದಿಗಿಲ್ಲವೆ ತರುಣಿ
ಆದರೀ ಮಾರನಿಗೆ ಮಾರುದ್ಧ ದಯೆ ಇಹುದು !

ನಾಗಶ್ರೀ : ಹ್ಹಾ ! ಯಾರು? ಚಿಕ್ಕಪ್ಪಾಜಿಇ ! .. ನೀವು ?

ಕುಬ್ಜ : ಹೌದು ನಾನೆ. ಆದರೆ ನಾ ನಿನ್ನ ಚಿಕ್ಕಪ್ಪನಲ್ಲ ಚೆಲುವೆ !

ನಾಗಶ್ರೀ : ಹ್ಹಾ! ಎಂತ ಮಾತಿದು ತಂದೆ ! ನಾನು ನಿಮ್ಮಣ್ಣ ಪುಲಿಕೇಶಿ
ಸಾರ್ವಭೌಮರ ಮಗಳು; ಅವರ ಮಾನಸ ಪುತ್ರಿ
ಕನ್ಯ ಕುಬ್ಜದ ಅರಸು ಹರ್ಷವರ್ಧನರಿಂದ
ಕೊಡಮಾಡಲಾದಂಥ ಗೆಲವೆಣ್ಣು ನಾನು
ನರ್ಮದೆಯ ತಡಿಯಲ್ಲಿ ನಡೆದು ಆ ಯುದ್ಧದಲಿ
ಪುಲಿಕೇಶಿ ಅಪ್ಪಾಜಿ ಗೆಲವ ಗಳಿಸಿದಕಾಗಿ
ಶ್ರೀ ಹರ್ಷವರ್ಧನರು ಇತ್ತ ಜಯವಧು ನಾನು 1
ಪುಲಿಕೇಶಿಗಳಿಗೆಂತೊ ಅಂತೆಯೇ ಅವರ ತಮ್ಮಂದಿರಾದ
ವಿಷ್ಣುವರ್ಧನರೇ, ನಾನು ನಿಮಗೂ ಪ್ರೀತಿಯ ಮಗಳು,
ನಿಮ್ಮ ಮಾನಸ ಪುತ್ರಿ ನಾಗಶ್ರೀ ನಾಉ ।

ಕುಬ್ಜ : ನಾಗಶ್ರೀ ನಾ ನಿನ್ನ ಪಿತನಲ್ಲ, ನೀನೆನ್ನ ಮಗಳಲ್ಲ
ಅಣ್ಣ ಪುಲಿಕೇಶಿಯರಿಗಿರಬಹುದು ಪ್ರಿಯಗುವರಿ ।
ನನಗೆ ನೀನಿಂದಿನಿಂ ಪ್ರೇಮ ಪಂಜರ ಪಕ್ಷಿ ।
ನೀನಿಲಿಯೆ ವರಿಸುವೆನು ।
ಒಲಿಯದಿರೆ.. ಒಲಿಯೆದಿರೆ ?
ನಾಗಶ್ರೀ, ಈ ಬಾದಾಮಿ ರಾಜ್ಯದಾ ಯುವರಾಜ ನಾನು ತಿಳಿದಿರಲಿ !!

ನಾಗಶ್ರೀ: ಪಾಪಿ ಯುವರಾಜನಿರಬಹುದು, ಅಧಿಕಾರವಿರಬಹುದು,
ದಂಡುವ ದರ್ಪಿಷ್ಠ ಪ್ರಭುವು ನೀನಿರಬಹುದು.
ಅದರೆನ್ನೆದೆಯಲ್ಲಿ ಧರ್ಮವಿದೆ, ಸತ್ಯವಿದೆ,
ನನ್ನೊಲವು, ನನ್ನಿನಿಯ, ಆ ನನ್ನ ಪ್ರಾಣಪ್ರಿಯ

ಚಂದ್ರೋಜರಿಹರಯ್ಯ ।
ನಿನ್ನ ಹುಟಡುಗೀತು ! ಎಚ್ಚರಾ ಎಚ್ಚರಾ !!

ಕುಬ್ಜ : ಹಹ್ಹಹ್ಹಹ್ಹಾ ! ಅಯ್ಯೋ ಹ್ಮಚ್ಚೀ,
ನಾಟಕದ ನಟಿಯಂತೆ ಮಾತನೊಪ್ಪಿಸುತಿರುವೆ
ಅಧಿಕಾರದೆದುರಿನಲಿ ನಿಲಲು ದೈರ್ಯವೆ ಇಲ್ಲ
ಆ ನಿನ್ನ ಸತ್ಯಕ್ಕೆ,
ನಾಗಸ್ರೀ ನಿನ್ನ ಮತ್ತಾ ನಿನ್ನ
ಚಂದ್ರೋಜರಾ ಮಾತುಗಳ ಕೇಳಿದೆನು.
ಮರೆಯಲ್ಲೆ ನಿಂತೆಲ್ಲ ಕೇಳಿದೆನು. ಆ ನಿನ್ನ ಚಂದ್ರೋಜ
ಆ ಅಜಂತದ ಹಾದಿಯಲ್ಲಿಲ್ಲ ಓ ಚೆಲುವೆ,
ಅವನೀಗ ಯಮಪುರಿ ಹಾದಿಯನು ಹಿಡಿದೀಗ ನಡೆದಿಹೆನು

ನನ್ನವರು ಅವನಪರ ಕರ್ಮವೆಲ್ಲವ ಮುಗಿಸಿ,
ಇಷ್ಟರಲೆ ಬರುವರೂ ನನ್ನ ಅರಮನೆಗೆ,
ಅಷ್ಟರಲಿ ನೀನೆನ್ನ ತೊಡೆಯೇರು
ಬದುಕಿರುವವರೆವಿಗೂ ನನ್ನ ಗುಟ್ಟಿನ ರಾಣಿಯಾಗಿ
ಮೆರೆಯುವೆ ನೀನು,

ನಾಳೆಯಿಂದಲೇ ನಾನು

ವೆಂಗಿ ದೇಶದ ರಾಜ ! ನಿನನ್ ಕರೆದೊಯ್ದು,
ಯಾ ಭಯವೂ ಇರದೆ ಅಲ್ಲಿ ಬಾಳಲು ಬಹುದು !
ಒಪ್ಪಿಗೆಯೆ ?

ನಾಗಶ್ರೀ : ಹ್ಹಾ ! ಏನೆಂದೆ ವಿಷ್ಣು !
ನನ್ನ ಸ್ವಾಮಿ ಚಂದ್ರೋಜರಿಗೆ ಏನಾಯ್ತು ?

ಕುಬ್ಜ : ಮೃತಿಯಾಯ್ತು !
ಬದುಕಲಾರದ ಜೀವ ಬಟ್ಟ ಬಯಲಾಯ್ತು !

ನಾಗಶ್ರೀ : ಅಯ್ಯೋ ಪಾಪ ! ಮೈ ಹೇಗೋ ಮನವೂ ಹಾಳು ಕೊಳಚೆ ಗುಂಡಿಯೋ ನಿನತು ! ಓ ಕುಬ್ಜ ವಿಷ್ಣು ! ನೀನಿಂಥ ಪಾಪಿಯೆಂದರಿತಿದ್ದೆ. ನೀನ ಹುಳು ನೀನೆಲ್ಲಿ ? ಪುಣ್ಯಾತ್ಮ ನಿಮ್ಮಣ್ಣ ಪುಲಿಕೇಶಿಯೆಲ್ಲಿ? ಈ ಚಣವೆ ಹೊರಹೊರಡ, ಅಪ್ಪಾಜಿಯವರಲ್ಲಿ ಅರಿಕೆಗೈಯುವ ಮೊದಲೆ, ಅವರಿಂದಲೇ ತಕ್ಕ ಶಿಕ್ಷೆಯಾಗುವ ಮೊದಲೇ ತೊಲಗಾಚೆ !

ಕುಬ್ಜ : ಹುಚ್ಚೀ ಹುಚ್ಚೀ !
ಅಣ್ಣನೆಡೆ ಸಾರಲಿಕೆ ನಿನ್ನ ಬಿಟ್ಟರೆ ತಾನೆ !
ಮಂತ್ರಕ್ಕೆ ಮಾಗಾಯಿ ಕೆಳಗೆ ಬೀಳುವುದಿಲ್ಲ!!
ನನ್ನ ತೋಳ್ಸೆರೆಯಿಚಿದ ಹೇಗೆ ಪಾರಾಗುವೆಯೊ
ನೋಡಿಯೇ ಬಿಡುವೆ !

[ಅವಳ ದಾವಣಿ ಹಿಡಿದೆಳೆಯುವನು. ಅವಳು ತನ್ನ ಎದೆಭಾಗವನ್ನು ಮುಚ್ಚಿಕೊಳ್ಳಲು ಹೋಗಿ ವಿಫಲವಾಗಿ ಅವನ ತೋಳುಗಳಲ್ಲಿ ಸೆರೆಸಿಕ್ಕುವಳು. ವಿಧಿಯಿಲ್ಲದೆ ಬಲಿಯಾಗುವಳು]
[ರಂಗ ಒಂದು ಕ್ಷಣಕಾಲ ಕತ್ತಲಾಗಿ ಮತ್ತೆ ಬೆಳಗವುದು]

[ಆಗ ಮುಡಿಗೆದರಿದ ನಾಗಶ್ರೀ ಚಂಡಿಯಂತೆ ಆರ್ಭಟಿಸಿ ಭೀಕರ ನರ್ತನ ಮಾಡತೊಡಗುವಳು]
ನಾಗಶ್ರೀ : ಫಡಫಡಾ ಪಾತಕಿಎಯ ಪುಡಿಗೈವೆ ನಿನ್ನ
ನಿನ್ನ ಹುಟ್ಟಡಗಿಸುವೆ ಕುಟ್ಟಿ ನುರಿಗೈವೆ ॥
–ಬೀಜಿಮ್‌ನಲ್ಲಿ ಭೀಕರ ತಾಂಡವ–
[ನರ್ತಿಸಿ ನರ್ತಿಸಿ ನರ್ತಿಸುತ್ತಲೇ ತನ್ನ ಸೊಂಟದಲ್ಲಿದ್ದ ಕಠಾರಿಯಿಂದ ಇರಿದುಕೊಂಡು ಉರುಳುವಳು. ರಂಗ ಧುತ್ತನೆ ಮೌನ ತಾಳುವುದು]
–ನರ್ತಕ–ನರ್ತಕಿಯರು–
ಶೋಕಗೀತೆ ಹಾಡುತ್ತಾ:
ಹಗಲೊಂದು ಇರುಳಾಯ್ತು, ಇರುಳು ನರಳಿಕೆಯಾಯ್ತು
ಕರುಳ ಹಿಂಡುವ ಕಥೆಯ ನೆನಪು ನೆರಳಾಯ್ತು !
ಕರುಳ ಹಿಂಡುವ ಕಥೆಯ ನೆನಪು ನೆರಳಾಯ್ತು !
–ತೆರೆ–

## ಉಡುಪಿ

ಪಾತ್ರಗಳು

ಸಂತ ಕನಕದಾಸ
ಕೃಷ್ಣ
ವಾದಿರಾಜರು
ಆನಂದ ಭಟ್ಟ
ಮುಕುಂದ ಭಟ್ಟ
ರುದ್ದ
ರೊದ್ದ
ಬಾಲಕೃಷ್ಣ
ಯಶೋದೆ
ನರ್ತಕಿಯರು

[ರಂಗದ ಹಿಂಬದಿಯ ಜಗಲಿಯ ಮೇಲೆ ಕಂಬಳಿ ಹೊಡೆದ ಕನಕ ಮಲಗಿರುತ್ತಾನೆ. ಮುಂದೆ ಬಣ್ಣಬಣ್ಣದ ಬೆಳಕಿನ ವಿನ್ಯಾಸದಲ್ಲಿ ನರ್ತಕ–ನರ್ತಕಿಯರ ನರ್ತನ]
ಉಡುಪಿ ಉಡುಪಿ
ಉಡುಪಿ ಉಡುಪಿ ಉಡುಪಿ ॥

ಜಗದೊಡೆಯ ಕೃಷ್ಣನುಡುಪಿ
ಅವತಾರ ಪುರುಷನುಡುಪಿ
ಅಕ್ಷಯನ ರಕ್ಷೆಯುಡುಪಿ
ಭೂ ಸ್ವರ್ಗವೆನಿಸುದುಡುಪಿ ॥ಉಡುಪಿ॥

ತುಳುನಾಡ ಕ್ಷೇತ್ರ ಸಪ್ತಕಗಳಲ್ಲಿ

ತಾನೆ ತಾನಾದ ಉಡುಪಿ

ಪಡುಗಡಲ ತಡಿಯ ತಾಯ್ ತೊಡೆಯ ಮೇಲೆ
ಪವಡಿಸಿಹ ಬೆಡಗಿನುಡುಪಿ
ಕೊಡೆ ಹಿಡಿದ ತೆಂಗು ಜೋಕಾಲಿ ಕೌಂಗು
ಗೋಡಂಬಿ ಬೆಳೆವ ಉಡುಪಿ
ಕರೆಕರೆಯ ಮೇಲೆ ತೆರೆ ತೆರೆಯ ಲೀಲೆ
ಮುನ್ನೀರ ಮೊಳಗಿನುಡುಪಿ

ಬೆಳ್ನಕ್ಕಿ ಮಾಲೆ ಬೆಡಗನ್ನು ಬೀರೆ
ಸೌಂದರ್ಯ ಸೀಮೆ ಉಡುಪಿ ॥ಉಡುಪಿ॥

ನಡೆ ಮಡಿಯ ಮಳಲ ಹಾಸಿನಲಿ ಕಾಣೋ
ಆ ಪುಟ್ಟ ನಿಟ್ಟ ಹೆಜ್ಜೆ
ಮರಮರಗಳಲ್ಲಿ ಮೊರೆಯುವುದೊ ಗಾನ
ಮೋಹನನ ಕಾಲಗೆಜ್ಜೆ ॥ಉಡುಪಿ॥

[ನರ್ತನ ನಡೆಯುತ್ತಿರುವಂತೆಯೇ ಶಬ್ದ ಕ್ಷೀಣಿಸುತ್ತದೆ. ರಂಗದ ಮೇಲಣ ದೀಪಗಳೆಲ್ಲಾ ನಂದಿ ಒಂದೇ ಒಂದು ಹಣತೆಯಷ್ಟು ಬೆಳಕು ಮಿನುಗುತ್ತಿರುತ್ತದೆ. ಆ ಮಬ್ಬಿನಲ್ಲಿ ನೇಪಥ್ಯದ ದನಿಯೊಂದು ಕರೆಕೊಡುತ್ತದೆ.
'ಏಳು ಕನಕ ಎದ್ದೇಳು ಕನಕಣ್ಣ'
ಎಂದು
ಎಚ್ಚೆತ್ತ ಕನಕದಾಸ ಕಂಬಳಿ ಒಳಗಿಂದ ನಿಧಾನವಾಗಿ ಮೈ ತೆರೆದು ಮೇಲೆದ್ದು ಕುಳಿತುಕೊಳ್ಳುತ್ತಾನೆ. ಆಕಳಿಸಿ, ಕಣ್ಣು ಹೊಸಕಿ ಅಂಗೈಗಳನ್ನು ನೋಡಿಕೊಳ್ಳುವಷ್ಟರಲ್ಲಿ ಅತ್ತ ಗೋಪಿಕೆಯರೊಡನೆ ಕೂಡಿ ಆಡುವ ಶ್ರೀಕೃಷ್ಣನ ರಾಸಲೀಲೆ ದೃಗ್ಗೋಚರವಾಗುತ್ತದೆ.
ರಂಗುರಂಗಿನ ರಾಸಲೀಲೆಯನ್ನು ಕನಕದಾಸ ತೆರೆದ ಕೈ, ತೆರೆದ ಕಣ್, ತೆರೆದ ಬಾಯವನಾಗಿ ಕುಳಿತು ವೀಕ್ಷಿಸುತ್ತಾನೆ]

ಮೃದುಮಧುರಾಧರ ಚುಂಬನದಿಂಚರ ॥1॥
ಮುರಳಿಯ ಕೊರಳಿಂದಿಳಿಯುತಿದೆ

ಗೋಪಿಯರೆದೆಯಲಿ ತಾಪವ ತುಂಬಿಸಿ
ನಲ್ಲೇ.. ನಿಲ್ಲೆಂದುಸುರುತಿದೆ

ಮೋಹನ ಮುರಳೀ ನಾದಾಮೋದಕೆ
ಯಮುನಾ ತೀರವೆ ಅರಳುತಿದೆ

ಕುಂಜಾರುಪುಂಜ ಆ ಪೂರ್ಣಪ್ರಜ್ಞ
ಶ್ರೀ ಮಧ್ವಾಚಾರ್ಯರುಡುಪಿ
ಸೋದೆ ಶಿರೂರು ಅದಮಾರು ಪೇಜವರ
ಕಾಣೆಯೂರು ಪಲಿಮಾರು ಪುತ್ತಿಗೆ
ಕೃಷ್ಣಪುರವೆಂಬ ಅಷ್ಟ ಮಠಗಳಾ
ನಿತ್ಯಾನುಷ್ಠಾನದುಡುಪಿ
ಚಂದ್ರಮೌಳಿ ಶ್ರೀ ಅನಚಿತೇಶ್ವರರ
ಅನಂದ ನೆಲೆಯೊ ಉಡುಪಿ

ಉಡುಪನೆನಿಸಿದಾ ಪೂರ್ಣ ಚಂದ್ರಮಗೆ
ಶಿವನೊಲಿದ ತಾಣ ಉಡುಪಿ ॥ಉಡುಪಿ॥

ಮಲ್ಲೆಯಲಿ ಕೇಳೊ ನದಿನದಿಯ ಜಲ್ಪ
ನಡುಗಡ್ಡೆ ತೆಂಗು ದ್ವೀಪ
ಪಟ್ಕೋಣ ರಚನೆ ಆ ದೇವ ಘುಣೆ
ಬೇಸಾಲ್ಟು ಶಿಲೆಯ ಸ್ತಂಭ
ಸೇಂಟ ಮೇರಿ ದ್ವೀಪಗಳ ಗುಂಪು
ವಡಭಾಂಡೇಶನುಡುಪಿ
ಮಣಿಪಾಲನೆಂಬ ಶ್ರೀವಾಣಿ ನೆಲೆಯ
ತಾ ಪಡೆದು ಮೆರೆವ ಉಡುಪಿ॥ಉಡುಪಿ ॥

ಶ್ರಿ ಕೃಷ್ಣವ್ಮಠದ ಎದೆಯಲ್ಲಿ ಮುಂದೆ
ಪುಷ್ಕರಿಣಿ ಮಧ್ವ ಕರುಣಿ

ಸ್ವರ್ಣ ನದಿಯ ಸಂಸ್ಕರಣದಿಂದ
ಪಾವನವು ಪುಣ್ಯ ಧರಣಿ

ರಾಧಮಾಧವರಾಲಿಂಗನಕೆ
ಬೃಂದಾವನ ಮೈ ಮರೆಯುತ್ತಿದೆ ॥2॥

ಕುಸುಮ ಕಪೋಲಕೆ ಸುಷ್ಮ ಸುಗಲ್ಲಕೆ
ಮೆಲ್ಲನೆ ಹೂದುಟಿ ಚಾಚುತಿದೆ
ಪೀನ ಪಯೋದರ ಭಾರಾಧಾರಕೆ
ಸುಸಿಲಿನ ಬಿಸಿಯುಸಿರಾಡುತಿದೆ ॥3॥

[ನರ್ತನ ಮುಂದುವರಿಯುತ್ತಿರುವಂತೆಯೇ ಹಿನ್ನೆಲೆಯಲ್ಲಿ ವಾಣಿ ಪುಟಿಯುತ್ತದೆ]

ಹೌದು, ಬೃಂದಾವನದ ವಕ್ಷಸ್ಥಲದಲ್ಲಿ ಮೋಹನ ಮುರಳಿ ನುಡಿಸುತ್ತಾ ಗೋಪಿಕೆಯರೊಡನೆ ರಾಸಲೀಲೆಯಾಡುವ ಜಗನ್ನಾಟಕ ಸೂತ್ರಧಾರಿ ಶ್ರೀ ಕೃಷ್ಣ ಪರಮಾತ್ಮನನ್ನು ಅತಿ ಸ್ವಪ್ನಾವಸ್ಥೆಯಲ್ಲಿ ದರ್ಶಿಸಿದ ಸಂತ ಕನಕದಾಸನೇ ಧನ್ಯ ! ಈ ಕನಕಣ್ಣ ಇಂದಿನ ಧಾರವಾಡ ಜಿಲ್ಲೆಯ ಬಾಡ ಎಂಬ ಗ್ರಾಮದವನು. ಬೀರಪ್ಪ ಬಚ್ಚಮ್ಮ ಎಂಬ ಪುಣ್ಯ ದಂಪತಿಗಳ ಪ್ರೀತಿಯಪುತ್ರ. ವಿಜಯನಗರ ಸಾಮ್ರಾಜ್ಯ ಮತ್ತು ಷಾಹೀ ರಾಜ್ಯಗಳ ಗಡಿ ಪ್ರದೇಶದ ಡಣಾಯಕ ಕೂಡ. ಕಾಲ ಸುಮಾರು ಕ್ರಿ.ಶ.1550. ಹಂಡೆ ಕುರುಬ ಕುಲದವನಾದ ಇವನ ಮೂಲ ಹೆಸರು ತಿಮ್ಮಪ್ಪ ಎಂದು. ಕೊಪ್ಪರಿಗೆ ಕನಕ ದೊರೆತದ್ದರಿಂದ ಕನಕ ಎನ್ನಿಸಿದ. ಪಂಪಾಂಬಿಕಾ ಮತ್ತು ಶ್ರೀ ವಿರೂಪಾಕ್ಷರಿರುವ ಹಂಪೆಯಲ್ಲಿ ಪುರಂದರ ದಾಸರ ಪ್ರಾರ್ಥನೆಯ ಮೇರೆಗೆ ಶ್ರೀ ವ್ಯಾಸರಾಯರಿಂದ ದಾಸದೀಕ್ಷೆ ಪಡೆದು 'ಕನಕದಾಸ' ಎಂದಾದ.

ಇವನು ಕಾಗಿನೆಲೆ ಆದಿಕೇಶವನ ಪರಮಭಕ್ತ. ಅದೇ ಅಂಕಿತದಲ್ಲಿ ನೂರಾರು ಕೀರ್ತನೆಗಳು, ಮುಂಡಿಗೆಗಳು, ಉಗಾಭೋಗಗಳು, ಸೂಳ್ನುಡಿಗಳು ಮತ್ತು ನೃಸಿಂಹ, ಸ್ತವ ಎಂಬ ಒಂದು ಪ್ರಾರ್ಥನಾಗೀತೆಯನ್ನೂ ರಚಿಸಿದ್ದಾನೆ. ಅಂತೆಯೇ ಹರಿದಾಸರೆಲ್ಲರಿಗೂ ಭಿನ್ನವಾಗಿ ಕೀರ್ತನೆಗಳನ್ನಷ್ಟೇ ಅಲ್ಲದೆ, ಹರಿಭಕ್ತಿ ಸಾರ. ಮೋಹನ ತರಂಗಿಣಿ, ನಳ ಚರಿತ್ರೆ, ರಾಮಧಾನ್ಯ ಚರಿತ್ರೆ ಮೊದಲಾದ ಸತ್ತ್ವಶಾಲೀ ಕಾವ್ಯ ಕುಸುಮಗಳನ್ನಿತ್ತು ಮಹಾಕವಿಯೂ ಆಗಿದ್ದಾನೆ.

ಸಂತ ಕವಿ, ಮಹಾಕವಿ ಕನಕದಾಸನು ದೇಶಪರ್ಯಟನಾರ್ಥವಾಗಿ ಹಂಪಿಯಿಂದ ಹೊರ ಹೊರಟು ಇಂದು ಉಡುಪಿಗೆ ಆಗಮಿಸಿದ್ದಾನೆ. ಇಲ್ಲಿ ಇವನು ಹಸಿದ ಸ್ವಾಮಿಗೆ ಆಹಾರವಿತ್ತ ಪುಣ್ಯಪ್ರಸಂಗ ಪ್ರಸ್ತುತ ನೃತ್ಯ ರೂಪಕದ ವಸ್ತು.

ಬನ್ನಿ.. ನೋಡಿ..ನಲಿಯಿರಿ..

[ನೃತ್ಯ ಮುಂದುವರಿಯುತ್ತದೆ ತುಮಬು ಬೆಳಕಿನಲ್ಲಿ]

ಹಾಡು : ಲಲಿತ ಲವಂಗ ಲತಾ ಪರಿಶೀಲನ
ಕೋಮಲ ಮಲಯ ಸಮೀರೇ

ಮಧುಕರ ನಿಕರ ಕ್ಹರಂಬಿತ ಕೋಕಿಲ
ಕೂಜಿತ ಕುಂಜ ಕುಟೀರೇ ॥4॥

ಚಂದನ ಚರ್ಚಿತ ನೀಲಕಲೇವರ
ಪೀತವಸನ ವನಮಾಲೀ
ಕೇಲಿ ಚಲನ್ಮಣಿ ಕುಂಡಲ ಮಂಡಿತ
ಗಂಡಯುಗ ಸ್ಮಿತಶಾಲೀ ॥5॥

ನರ್ತಕ–ನರ್ತಕಿಯರು ನರ್ತಿಸುತ್ತಲೇ ನೇಪಥ್ಯದೆಡೆಗೆ ಸಾಗುತ್ತಾರೆ. ರಂಗಭೂಮಿ ನಿಧಾನವಾಗಿ ಮತ್ತೆ ಮಬ್ಬಿನಿಂದಾವೃತವಾಗುತ್ತದೆ. ಆಗ –
'ಏಳು ಕನಕದಾಸ ಎದ್ದೇಳೋ ಕನಕಣ್ಣ'
ಎಂಬ ವಾಣಿ ಎಬ್ಬರಿಸುತ್ತದೆ, ಕನಕದಾಸ ಬೆರಗಾಗಿ ನೋಡುತ್ತಾನೆ. ಅವನ ನೋಟದ ವಿರುದ್ದ ದಿಕ್ಕಿನಿಂದ ಒಂದು ತುಂಬು ಬೆಳಕು ಅವನ ಮುಖದ ಮೇಲಷ್ಟೇ ಬೀಳುತ್ತೆ. ಆಗ ಮತ್ತೊಮ್ಮೆ ಕರೆಕೊಡುತ್ತದೆ ಆ ಅಶರೀರ ವಾಣಿ –

ಏಳು ಕನಕಣ್ಣ, ಎದ್ದು ಬಾ ನನ್ನಣ್ಣ
ಏಳು ದಾಸರದಾಸ ಶ್ರೀ ಹೃದಯವಾಸ !
ಕನಕ : (ಬೆಳಕು ಬಂದ ದಿಸೆಯನ್ನೇ ನೆಟ್ಟ ಹಾಗೂ ಚಕಿತ ದೃಷ್ಟಿಯಿಂದ ವೀಕ್ಷಿಸುತ್ತಾ)
ಯಾರು ? ಯಾರವರು ಕರೆದವರು?
ಅಣ್ಣಾ ಅಣ್ಣಾ ಎಂದು ಕೂಗಿ ಕರೆದವರು
ಪರದೇಶಿ ದಾಸನನು ವಾತ್ಸಲ್ಯ ವಕ್ಷದಲಿ
ಮುಚ್ಚಿ ಬಚ್ಚಿಟ್ಟಂತೆ ಮುದ್ದಿಸಿದವರಾರು?

[ಕನಕ ದರ್ಶಿಸುತ್ತಿದ್ದ ಬೆಳಕೇ ಕೃಷ್ಣನ ರೂಹುವಡೆದಂತೆ ಕೃಷ್ಣ ಆ ದಿಸೆಯಿಂದ ಆಗಮಿಸುತ್ತಾ]
(ನೃತ್ಯ)
ಕೃಷ್ಣ : ನಾನು ನಾನೇ ದಾಸ
ನಿನ್ನೆದೆಯ ವಾಸ ॥
ಶ್ರೀನಿವಾಸ ಎಂಬ
ಶ್ರೀ ಮಂದಹಾಸ ॥

ಗುಡಿಯೊಳಗೆ ಗುಹೆಯೊಳಗೆ
ಬಯಲು ಬತ್ತಲೆಯೊಳಗೆ
ಬೆಟ್ಟ ಗುಡ್ಡಗಳಲ್ಲಿ ದಟ್ಟಡವಿಯಲ್ಲಿ
ಅಲ್ಲಿ ಆ ಮರದಲ್ಲಿ
ಪಾಸರೆಯ ಮೇಲಲ್ಲಿ
ನದಿಯಲ್ಲಿ ಪೊದೆಯಲ್ಲಿ ಎಲ್ಲೆಡೆಯ ವಾಸ ॥

ಕನಕ: ಆಹಾ ! ಪರಮಾತ್ಮ !! ಕೃಷ್ಣಾ !!

ಸಚ್ಚಿದಾನಂದ ನಿತ್ಯ ಪರಿಪೂರ್ಣನೆ !
ನಿತ್ಯ ನೃತ್ಯೋತ್ಸವದ ಮನ್ಮನೋಹಾರಿ ।
ಅಣು ರೇಣು ತೃಣ ಕಾಷ್ಠದಲ್ಲಿ ಅಡಗಿರುವಂಥ
ಓ ದಿವ್ಯ ಚೇತನವೆ,
ಶಂಖ ಚಕ್ರ ಗ್ದಾಧಾರಿಯಾದ ನರನೆ ನಾರಾಯಣನೆ,
ಲಘು ವಾಘೆಯಂ ಪಿಡಿದ ಓ ಪಾರ್ಥಸಾರಥಿಯೆ
ನನಗರ್ಥವಾಗದಿಹ ಒಗಟೆ ನೀನು !
ಹೇಳು ಪರಮಾತ್ಮ, ಹೇಳು, ತಿಳಿಯ ಹೇಳೋ ತಂದೆ ;

ಕೀರ್ತನೆ : ನೀ ಮಾಯೆಯೊಳಗೊ ನಿನ್ನೊಳು ಮಾಯೆಯೋ ॥ಪ॥
ನೀ ದೇಹದೊಳಗೊ ನಿನ್ನೊಳು ದೇಹವೋ ॥ಅನು.ಪ॥

ಬಯಲು ಆಲಯದೊಳಗೊ
ಆಲಯವು ಬಯಲೊಳಗೊ
ಬಯಲು ಆಲವೆರಡು ನಯನದೊಳಗೋ?
ನಯನ ಬುದ್ದಿಯ ಒಳಗೊ
ಬುದ್ದಿ ನಯನದ ಒಳಗೊ
ನಯನ ಬುದ್ಧಿಗಳೆರಡು ನಿನ್ನೊಳಗೊ ಹರಿಯೇ ॥1॥

ಸವಿಯು ಸಕ್ಕರೆಯೊಳಗೊ
ಸಕ್ಕರೆಯು ಸವಿಯೊಳಗೊ
ಸವಿಯು ಸಕ್ಕರೆಯೆರಡು ಜಿಹ್ವೆಯೊಳಗೋ ?
ಕುಸುದೊಳು ಗಂಧವೊ
ಗಂಧದೊಳು ಕುಸುಮವೊ
ಕುಸುಮ ಗಂಧಗಳೆರಡು ಘ್ರಾಣದೊಳಗೋ ॥2॥

ನೀ ಮಾಯೆಯೊಳಗೊ ನಿನ್ನೊಳು ಮಾಯೆಯೋ
ನೀ ದೇಹದೊಳಗೊ ನಿನ್ನೊಳು ದೇಹವೋ
ಅಸಮಭವ ಕಾಗಿನೆಲೆಯಾದಿ ಕೇಶವರಾಯ
ಉಸುರಲೆನ್ನೊಶದ ಸರ್ವವೂ ನಿನ್ನೊಳು ಹರಿಯೇ ॥3॥

ಕೃಷ್ಣ : ಕನಕಣ್ಣ ಕಂಡರಿಯೆಯಾ,
ಅದು ಜೀವ-ದೇವರ ಒವಲು
ಐಕ್ಯಾನು ಸಂಧಾನ !

ಅಂತಿರಲಿ, ಆ ಮಾತು ಬದಿಗಿರಲಿ
ಈಗೆನಗೆ ಬಹು ಹಸಿವು ಕಿತ್ತು ತಿನ್ನುವ ಹಸಿವು !
ಹಿಟ್ಟುರೊಟ್ಟಿಯನಿಟ್ಟು ಗುಟುಕು ನೀರೆರೆಯುವೆಯಾ ?

ಕನಕ : ಅಯ್ಯೋ ನನ್ನಪ್ಪ, ಅಯ್ಯೋ ನನ್ನರಗಿಣಿ
ಹಸಿದು' ಬಂದಿಹ ನಿನಗೆ ನಾ ಅಶಯವೀಯಲುಬೇಕೆ?
ದೆಸೆ ದೆಸೆಯಲೆಸೆದಿರುವ ಕ್ರಿಮಿಕೀಟ ಶಿಶುಗಳಿಗೆ
ಅಸಮ ಬಲ ನೀನಿವೆ ಉಣಿಸು ಉಪಾಹಾರ !

ಎಲ್ಲರಾಹಾರವೇ ನೀನಾದ ನಿನಗಿಂದು ಹಸಿವೆಯೇನೋ ಸ್ವಾಮಿ,
ಬಾ ತಂದೆ, ಬಾ ಒಲವೆ, ಬಾರೆನ್ನ ಭಗವಂತ,
ಕಂಬಳಯ ಗೊಂಗಡಿಯ ಒಣರೊಟ್ಟಿ ಮೆದ್ದು
ಕುಡಿಕೆ ನೀರಲಿ ದಣಿವ ನೀಗಿಕೊಳು ಬಾರಾ !

ಇದಿಕೋ ಈ ಒಣರೊಟ್ಟಿ, ಕೋ ತಂದೆ ತಿಂದು ತಣಿ !
ಹಂಪೆಯಾಳ್ದನ ಮಡಿಲಿಂದೊಲಿದು ತಂದದ್ದು !
ಇದಿಕೊ ಈ ಜಲತೀರ್ಥ, ಮದ್ವ ಪುಷ್ಕರಿಣಿಯು
ಮೊಗೆಮೊಗೆದು ತಂದದ್ದು.
(ಕಂಬಳಿಯ ಒಳಪದರದಿಂದ ರೊಟ್ಟಿ ತೆಗೆದುಕೊಡುತ್ತಾನೆ. ಕೃಷ್ಣ ಮೆಲ್ಲನೆ ಮೆಲ್ಲುತ್ತಾ)

ಕೃಷ್ಣ : ಕನಕಣ್ಣ, ನಿನ್ನ ಹಾಡನು ಕೇಳೆ
ಅಮಿತವಾದಾನಂದ ! ಪಾಡುವೆಯಾ ?

ಕನಕ : ಆಗಲಿ ನನ್ನಪ್ಪ
ಮಗನೆಂದಾಡಿಸುವಳು ಮೊಗ ನೋಡಿ ನಗುವಳು ॥ಪ॥
ಜಗದುದ್ಧಾರನ ಮೊಗ ಮೊಗದೊಳಿರಿಕೊಂಡು ॥ಅನು.ಪ॥
ಹಾಡು ಹರಿಯುವಾಗ ಒಂದು ಬದಿಯಲ್ಲಿ ಬಾಲಕೃಷ್ಣ ಮತ್ತು ಯಶೋಧೆಯರ ನತ್ನ ಹಾಡನ್ನನುಸರಿಸಿ ನಡೆಯುವುದು.

[ಆಗ ಕೃಷ್ಣ ಕನಕರು ಕುಳಿತಿದ್ದ ಭಾಗ ಕತ್ತಲಾಗುವುದು]
ಕಾಲಲಂದುಗೆ ಗೆಜ್ಜೆ ತೋಳ ವ್ಮಣಿಯ ದಂಡೆ
ಫಾಲದ ಅರಳೆಲೆಯು ಕುಣಿಯೆ
ನೀಲದುಡುಡೆಯುಟ್ಟ ಬಾಲನೆ ಬಾರೆಂದು
ಪಾಲುಣಿಸುವ ಪುಣ್ಯವೆಚಿತು ಪಡೆದಳಚ್ಯ್ಯಾ ॥1॥

ಬಣ್ಣ ಸರಗಳೆಡೆ ರನ್ನದ ನೇವಳ
ಹೊನ್ನೆ ಘಂಟೆಯ ಘಣ ಘಣರೆನಲು
ಪನ್ನಗಶಯನನೆ ಕುಣಿವೊಮ್ಮೆ ಕುಣಿಯೆಂದು
ಕುಣಿಸಿ ನಗುವ ಪುಣ್ಯವಚಿತು ಪಡೆದಳಯ್ಯಾ ॥2॥

ಶಂಕ ಚಕ್ರ ಗದಾ ಪದುಮ ಧಾರಕನ
ಪಂಕಜ ಮಿತ್ರ ಶತಕೋಟಿ ತೇಜವನು
ಸಂಖ್ಯೆ ಇಲ್ಲದ ಆಭರಣಗಳ ತೊಡಿಸಿ
ಅಲಂಕರಿಸುವ ಪುಣ್ಯವೆಚಿತು ಪಡೆದಳಯ್ಯಾ ॥4॥

ಸಾಗರ ಶಯನನ ಭೋಗೀಶನ ಮೇಲೆ
ಯೊನಿದ್ರೆಯೊಳಿಪ್ಪ ದೇವನೇ ನಗು
ಆಗಮ ನಿಮಗಳರಸಿ ಕಾಣದ ವಸ್ತು
ತೂಗಿ ಪಾಡುವ ಪುಣ್ಯವೆಂತು ಪಡೆದಳಯ್ಯಾ ॥5॥

ಪನ್ನಗ ಶಯನನ ಉನ್ನಂತ ಮಹಿಮನ
ಸನ್ನುತ ಭಕುತರ ಸಲಹುವನ
ಪನ್ನಗಾರಿವಾಹನ ಕಾಗಿನೆಲೆಯಾದಿ

ಚನ್ನಕೇಶವನೆಂತು ಪಡೆದಳಯ್ಯಾ ॥6॥

[ಹಾಡು ನರ್ತನಗಳು ಮುಗಿದು, ಆ ಕಡೆ ಕತ್ತಲಾಗುವುದು. ಕೃಷ್ಣ ಕನಕರಿದ್ದ ಭಾಗ ಬೆಳಕಾಗುವುದು]

ಕೃಷ್ಣ : ಓಂ !
ತೃಪ್ತನಾದೆನೊ ಕನಕ
ಕೊಡು ಕುಡಿವೆ ಉದಕ!

ಕನಕ : ಒಣರೊಟ್ಟಿ, ಹಸಿ ಖಾರ
ಬಡ ಕುರುಬನಾಹಾರ !

ಮೆಚ್ಚಾಯಿತೇ ಸ್ವಾಮಿ
ತೃಪ್ತಿ ತಂದಿತೆ ತಂದೆ ?

ಕೃಷ್ಣ : ಕನಕ,
ರುಕ್ಮಿಣಿಯ ಕೈ ತುತ್ತು ಇದಕಿಂತ ಮಿಗಿಲಲ್ಲ !
ಹಸಿದವಗೆ ಅಕ್ಕರೆಯು ಬೆರೆತ ಅಲ್ಲವೆ ಕಲ್ಪ
ಅದುವೆ ಸುಗ್ರಾಸಭೋಜನವು ಅಮೃತ ಸ್ಕಂದಿ !!
(ಚಣ ಕಾಲ ತಡೆದು)

ಅದು ಸರಿಯೊ ಕನಕಣ್ಣ,
ನಿನ್ನ ಅನ್ನವ ನಾನು ಕಿತ್ತು ತಿಂದೆ?
ನಿನಗೇನು? ನಿನ್ನ ಗತಿಯೇನು ?
ಕನಕ : ನಿನ್ನ ತೃಪ್ತಿಯೆ ನನಗೆ ತೃಪ್ತಿಯಲ್ಲವೆ ತಂದೆ?
ನೀನುಂಡ ಬಳಿ ನನ್ನುದರದಾ ಗೊಡವೆ ನನಗಿಲ್ಲವೆಂದೆ ।

ಕೃಷ್ಣ : ಹಾಗಲ್ಲ
ಒಬ್ಬರಾಹಾರವನು ಕಸಿದು ತಿಂಬುದು ಪಾಪ ।
ಕೋ ಒಡವೆ, ನನ್ನುಡುಪು ಆಭರಣ
ಉಡುಪಿ ನಗರದೊಳಿಹನು ಬಹು ದೊಡ್ಡ ವ್ಯಾಪಾರಿ
ಅವಗಿತ್ತು. ಹಣಪಡೆದು, ಬೇಕಾದ ಉಣಿಸು ಕೊಳ್
ಹ್ಞೂ ತೆಗೆದುಕೋ ಕನಕಣ್ಣ !

[ಕನಕ ಕೈ ಚಾಚದಿರಲು ಕೃಷ್ಣ ಒತ್ತಾಯ ಪೂರ್ವಕವಾಗಿ ಒಡವೆ ವಸ್ತ್ರಗಳಿದ್ದ ಗಂಟನ್ನು ಅವನ ಕೈಗಿರಿಸುತ್ತಾ]

ಅಂಜದಿರು, ಅಂಜದಿರು, ಅಚಿಜಿ ಹಿಂಜರಿಯದಿರು
ಕೋ ಕನಕ, ಕನಕಣ್ಣ,
ನೀನಿದನು ಕೊಳ್ಳದಿರೆ ಎನ್ನ ಮೇಲಾಣೆ !
ಕನಕ : ಹ್ಞಾ !
ಆಣೆ ಇಟ್ಟಯ ತಂದೆ !
ಕೈಗೆ ಬಂದಾ ತುತ್ತು ಬಾಯಿಗಿಲವಾಯ್ತೆ !
ದೇವ ದೇವನ ತಣಿಸಿ ಪಡೆದ ಪುಣ್ಯದ ಪಾಲು
ಎನಗಿಲ್ಲವಾಯ್ತೆ !

ನಾ ತೆಗೆದುಕೊಳ್ಳದಿರೆ ನೊಂದುಕೊಳ್ಳುವೆ ನೀನು !
ಕೊಂಡೆನೇ ಈ ಪಾತಕಿಯ ಭಾಗ್ಯ ಬಯಲಾಯ್ತು !
ಆಗಬೇಕಾದುದನು ತಡಯಲಿಕೆ ನಾನಾರು ?
ನಾನೊಂದು ನರಕೀಟ !
ಕೊಡು ಸ್ವಾಮಿ, ಕೊಳ್ಳುವೆನು–
ತಿನಿಸ ಕೊಳ್ಳುವೆ ತಾರೊ
ಹೊನ್ನಿನಾಭರಣಗಳ ಮುಡಿಕಟ್ಟೆ ತಾರೊ

(ಕೃಷ್ಣ ಕೊಡುವನು)
ನೀನಿತ್ತ ಒಡವೆಗಳ ಕಂಬಳಿಯ ಒಳಗಿಡುವೆ
ನಾಳೆ ಬೆಳಗಿನ ವೇಳೆ ಮಾರಿ ಬರುವೆ
ಆಹಾರ ಕೊಂಡು ತರುವೆ !
ನಾಳೆಯೂ ನಿನಗಿತ್ತು ಉಣಿಸಿ ನಲಿವೆ !

ನಡೆ ತಂದೆ, ನಡೆ ನನ್ನ ಉಸಿರೆ
ನನ್ನೆದೆಯ ಮಂದಿರದ ಪುಣ್ಯ ಪರಮೇಷ್ಠಿಯೇ,
ಹೋಗು ನಿನ್ನಾಲಯಕೆ !
ನಿನ್ನಡಿಯ ಗುಡಿಯಲ್ಲಿ ಪವಡಿಪೆನು
ನಡೆ ನನ್ನ ಒಲವಿನೊಲವೆ !
[
ಕೃಷ್ಣ ನರ್ತಿಸುತ್ತಾ ನಿರ್ಗಮಿಸುವನು. ಬೀಜಿಮ್‌ನಲ್ಲಿ ನರ್ತನ ನಡೆಯಬೇಕು ಚಣಕಾಲ, ಅದನ್ನೇ ನೋಡುತ್ತಾ ಆನಂದಿಸಿದ ಕನಕ ಕಂಬಳಿ ಹೊದೆದು ಮಲಗುವನು.
ರಂಗ ಸಂಪೂರ್ಣ ಕತ್ತಲಾಗಿ ಅರೆಚಣದಲ್ಲಿ ಮತ್ತೆ ಬೆಳಗುವುದು)

–ಅರ್ಚಕ ದ್ವಯರ ಆಗಮನ–
[ಉದ್ಧರಣೆಯ ನೀರನ್ನು ಮುಂದೆರೆದುಕೊಂಡು, ಎಚ್ಚರಿಕೆಯ ಹೆಜ್ಜೆಯಿಡುತ್ತ]
ಗಂಗೇ ಯಮುನೇ ಚೈವ ಕೃಷ್ಣೆ ಗೋದಾವರೀ ತಥಾ..
[ಎಂದನ್ನುವಷ್ಟರಲ್ಲೆ ನಿಲ್ಲಿಸಿ ದೇಗುಲದ ತೆರೆದ ಬಾಗಿಲು ನೋಡಿ]
ಆನಂದ : ಮುಕುಂದ ಭಟ್ಟರೇ..
ಮುಕುಂದ : ಏನು ಆನಂದ ಭಟ್ಟರೇ..
ಆನಂದ : ಏನಿದು ! ಶ್ರೀ ಕೃಷ್ಣ ದೇಗುಲದ ದ್ವಾರ ತೆರೆದಿದೆಯಲ್ಲಾ !! ಕಳೆದಿರುಳು ಮುಚ್ಚುವುದ ಮರೆತಿರೇನು?
ಮುಕುಂದ : ಇಲ್ಲವಲ್ಲಾ. ನಾವಿಬ್ಬರೂ ಸೇರಿಯೇ ಭದ್ರಪಡಿಸಿದೆವಲ್ಲಾ !
ಆನಂದ : ಮತ್ತೆ !!! ಬಾಗಿಲಿದು ತೆರೆದಿಹುದು !
ಏನಾನಾಹುತವಾಗಿಹುದೊ ಕಾಣೆನೇ !
ಮುಕುಂದ ಭಟ್ಟರೆ, ಬೇಗ ಒಳ ಹೋಗಿ ನೋಡಿಕೊಂಡು ಬನ್ನಿ ಏನಾಗಿದೆಯೋ ಏನೋ 1
ಮುಕುಂದ : [ಒಳಗೆ ಹೋಗಿ ತುಸು ಹೊತ್ತಾದ ಮೇಲೆ ಅಲ್ಲಿಂದಲೇ ಜೋರಾಗಿ ಕೂಗಿಕೊಳ್ಳುವನು]
ಅಯ್ಯೋ ಸರ್ವನಾಶ ! ಸರ್ವನಾಶ !!
ಸ್ವಾಮಿಯ ಮೈಮೇಲಿನ ಆಭರಣಗಳ ಅಪಹರಣ !!!
(ರಂಗ ಪ್ರವೇಶಿಸಿ)
ಆನಂದ ಭಟ್ಟರೇ, ಅನಾಹುತ! ಅನಾಹುತ !!
ಕೃಷ್ಣಮೂರ್ತಿಯ ಮೇಲಿದ್ದ ವಸ್ತ್ರಾಭರಣಗಳು ಕಾಣೆಯಾಗಿವೆ !
ಅನಂದ : ಕೃಷ್ಣಾ ! ಕೃಷ್ಣಾ ! ಮಕುಂದ ! ಮುರಾರಿ !! ಏನಪ್ಪಾ ನಿನ್ನ ಲೀಲೆ !
ಮುಕುಂದ : ದಳವಾಯಿಗಳೇ, ದ್ವಾರಪಾಲಕರೇ, ಈ ಮಠದ ಕಾಪಿನವ್ರಎ ॥

ಏಳಿ ಬೇಗ ಬನ್ನಿ, ಸ್ವಾಮಿಯ ಆಭರಣಗಳು ಕಳವಾಗಿವೆ !
ಕಳ್ಳನನ್ನು ಹುಡುಕಿ ಹಿಡಿದು ಎಳೆತನ್ನಿ, ತ್ವರೆಮಾಡಿ ತ್ವರೆ ಮಾಡಿ !

(ದಂಡಧಾರಿಗಳಾದ ಇಬ್ಬರು ಕಾಪಿನಾಳುಗಳು ಆಗಮಿಸುವರು)
ನೋಡುತಿಹಿರೇನನ್ನು ? ಹುಡುಕಿರೈ ಕಳ್ಳರನು !

[ಅತ್ತ ಇತ್ತ ಒಳಗೆ ಹೊರಗೆ ರಭಸದಿಂದ ಎಲ್ಲರು ಓಡಾಡುವರು. ಇಬ್ಬರೂ ಒಬ್ಬನನ್ನೊಬ್ಬ ಹಿಡಿದು 'ಕಳ್ಳ ಸಿಕ್ಕಿದ' ಎಂದು ಕೂತಿ ಛೀಮಾರಿ ಮಾಡಿಸಿಕೊಳ್ಳುವರು]
(ಕನಕನನ್ನು ಕಂಡು)

ಮುಕುಂದ : ಸ್ವಾಮಿ, ಇಲ್ಲಿ ನೋಡಿ ಯಾವನೋ ಮಲಗಿದ್ದಾನೆ.
ಕರಿ ಕಂಬಳಿಯ ದುಟ್ಟಗೊರವ
ಅರೆ ಬತ್ತಲೆಯ ಬೈರಾಗಿ
ಏಕ ನಾದವ ಮಿಡಿವ ತ್ರಿನಾಮಧಾರಿ

ಆನಂದ : ರುದ್ದ

ರುದ್ಧ : ಸ್ವಾಮಿ

ಆನಂದ : ರೊದ್ದ

ರೊದ್ದ : ಬುದ್ಧೀ

ಆನಂದ : ಅವನನೆಬ್ಬಿಸಿ ಕೇಳಿ ಕಳವೇಕೆ ಗೈದನೆಂದು ?

ಮುಕುಂದ : ಕೇಳ್ರೋ ! ಕದ್ದ ಒಡವೆಗಳನ್ನು ಎಲ್ಲಿಟ್ಟಿದ್ದಾನೆ ಕೇಳ್ರೋ !

ರುದ್ದ : ರೊದ್ದ, ನೀನೇ ಕೇಳ್ಲಾ

ರೊದ್ದ : ನನಗೆ ಭಯ ಆಯ್ತದಪ್ಪಾ ! ನೀನೆ ವಸಿ ಎಬ್ಬುಸ್ಲಾ ! ಆಮ್ಯಾಕೆ ನಾನ್ ಕೇಳ್ತೀನಿ.

ರುದ್ದ : ಹಂಗಾರೆ, ಬರೇ ಎಬ್ಬಿಸೋದು ನನ್ನ ಕೆಲ್ಸ, ಕೇಳೋದು ಕೀಳೋದು ನಿನ್ ಕೆಲ್ಸ !

ರೊದ್ದ : ಹಾಗೆ ಆಗ್ಲಿ.. ಎಬ್ಬುಸು ಮೊದ್ಲು.

[ರುದ್ದ ಕನಕನ ಹತ್ತಿರ ಹೋಗುವನು . ಮಬ್ಬುಗತ್ತಲಲ್ಲಿ ಅವನಿಗೆ ಕರಡಿಯಂತೆ ಕಾಣುವುದು]

ರುದ್ದ : [ಚೀರಿಕೊಂಡು, ಹೌಹಾರಿ ಹಿಂದೆ ನೆಗೆದು, ಬಿದ್ದು ಎದ್ದು ಧಾವಿಸಿ ಬಂದು]
ಅಯ್ಯಯ್ಯಮ್ಮೋ ಲೇ ರುದ್ದಾ ಅದು ಮನಸಾ ಅಲ್ಲ, ಕರಡೀ ! ಕರೆ ಕರಡಿ !.. ಕಲ್ಡೀ !! ..

[ರೊದ್ದನು ಹಾರಿ ಬೀಳುತ್ತಾನೆ. ಅವನನ್ನು ಹಿಡಿದು ಇವನು, ಇವನನ್ನು ಹಿಡದು ಅವನು ಇಬ್ಬರೂ ಹಿಂದೆ ಹಿಂದಕ್ಕೆ ಎಳೆದಾಡಿ, ಬಿದ್ದು ಒದ್ದಾಡಿ ಬೋರಿಡುತ್ತಾರೆ]

ಮುಕುಂದ : ಏಯ್! ಮುಠ್ಠಾಳ್ರಾ, ಅದು ಕರಡಿ ಆದ್ರೆ ನಿಮ್ಮಲ್ಲಿ ಭರ್ಜಿಗಳಿಲ್ಲವೇ ? ಇರಿಯಿರಿ.

ಆನಂದ : ಕರಡಿ ಎಲ್ಲಿಂದ ಬರಬೇಕಪ್ಪಾ !
ಅದು ಕರಡಿ ಅಲ್ಲ, ಸರಿಯಾಗಿ ನೋಡಿ.

ರುದ್ಧ : ನಾನ್ ಸರಿಯಾಗೇ ನೋಡಿವ್ನಿ ಬುದ್ದೀ.. ಅದು ನಮ್ಮಪ್ಪನಾಳೆ ನಮ್ಮವ್ವನಾಣೆ, ನನ್ಹೆಂಡ್ರಾಣೆ ಕಲ್ಡೀನೇ ! ಸ್ವಾಮೀ, ಅದು ಕರೇ ಕಲ್ಡಿ !!

ಮುಕುಂದ : ರೊದ್ದ ನೀನೊಮ್ಮೆ ಪರೀಕ್ಷಿಸಿ ನೋಡು.

ರೊದ್ದ : ಹ್ಞಾ !.. ನಾ.. ಆ (ಮೂಗಿನಲ್ಲಿ ಪದಗಳನ್ನು ಉಚ್ಚರಿಸುತ್ತಾ)
ನ..ನ..ನ..ನ..ನ..ನಾ.. ನಾ?

ಮುಕುಂದ : (ಹೆದರಿ) ಓಯ್ತೀನಿ.. ಓಯ್ತೀನಿ..!
ಅಮ್ಮಾ .. ಅಮ್ಮಮ್ಮಾ.. ಅದೇನಾದ್ರ ಕಲ್ಡೀ ಅಲ್ದೇ..

ರುದ್ದ : ದೆವ್ವ ..!

ರೊದ್ದ : (ಹೌಹಾರಿ ಹಿಂದೆ ನೆಗೆದು) ಅಯ್ಯಯ್ಯಮ್ಮೋ, ದೆವ್ವಾ, ದೆವ್ವಾ ಕಂಬಳಿ ದೆವ್ವಾ ! ಭರ್ಜರಿ ದೆವ್ವಾ !
(ರಂಗದ ತುಂಬ ಇಬ್ಬರ ಹಾರಾಟ ಚೀರಾಟ)
ಮುಕುಂದ : ಬಡಕೋಬೇಕು, ಲೋ ಪಾಪಿ ! ಅದಲ್ವೋ ದೆವ್ವ ನೀನೇ ಒಂದು ದೊಡ್ಡ ದೆವ್ವ !

ರೊದ್ದ : ಇಲ್ಲಾ.. ಇಲ್ಲಾ ಅದು ಕೃಷ್ಣ ಪರಮಾತ್ಮನ ಆಣೆಗೂ ಕರೀ ಕಂಬ್ಳಿ ದೆವ್ವಾ !

ರುದ್ದ : ಅಂಗಾರೆ ಭರ್ಜಿ ಐತಲ್ಲಾ, ಅದರಾಗೆ ಇರಿಯ್ಲಾ

ರೊದ್ದ: ಬಲ್ ಜಾಣಾ ನೀನು ! ಕಲ್ಡೀ ಆದ್ರೆ ಇರೀ ಬೈದು. ದೆವ್ವನ್ನಿರಿಯಾಕಾಯ್ತದಾ? ನಮ್ಮ ನೆಳಲಿನ ಸಂಗಡ ನಾವೆ ಕುಸ್ತಿ ಮಾಡಿದಂಗೆ! ದೆವ್ವ ಇರಿದರೆ ಚುಚ್ಚಲ್ಲ. ಕಡಿದರೆ ಕಚ್ಚಲ್ಲ, ಕುಟ್ಟಿದರೆ ನುಚ್ಚಲ್ಲಾ! ನನ್ನಪ್ಪಾ ನನ್ ಕೈಯಾಗಾಗಲಪ್ಪಾ !
(ಅಷ್ಟರಲ್ಲಿ ಕನಕ ಕಂಬಳಿ ಒಳಗಿಂದ ಎಚ್ಚೆತ್ತು ಮಿಸುಕಾಡುವನು)

ರುದ್ದ : ಆಗಾಳಪ್ಪಾ, ಎದ್ದೇಳ್ತಾ ಐತೆ ದೆವ್ವಾ !
[ಕೂಡಲೇ ಇಬ್ಬರೂ ಅಯ್ಯಯ್ಯಮ್ಮೋ.. ಅಯ್ಯಯ್ಯಮ್ಮೋ ಎಂದು ಅರಚಿ, ಎದ್ದು ಬಿದ್ದು ರಾಣಾರಂಪ ಮಾಡುವರು]

ಆನಂದ : ಲ್ರೋ ಮೂರ್ಖ ಶಿಖಾಮಣಿಗಳೇ, ನೀವು ಭಟರು, ಭರ್ಜಿ ಹಿಡಿದ ಕಾವಲುಗಾರರು. ನಿಮ್ಮನ್ನು ನೇಮಿಸಿದವರ ಕೈಗೆ ತೊಡಿಸಬೇಕು ಕಡಗಾನ ! ನೋಡಿ, ಅದು ಕರಡೀನೂ ಅಲ್ಲ, ದೆವ್ವಾನೂ ಅಲ್ಲ ! ಮನುಷ್ಯಾ !1 ಮನುಷ್ಯಾ !!

ಕನಕ: ಶರಣು ಮಹಾತ್ಮರೇ, ಏನಿದೀ ಕೋಲಾಹಲ ?

ರುದ್ದ : ಎಲಲಾ ಕಲ್ಡೀ ಅಲ್ಲಾ..?

ರೊದ್ದ : ದೆವ್ವ ಅಲ್ಲಾ..??

ಕನಕ : ಅಲ್ಲ, ನಾನೂ ನಿಮ್ಮ ಹಾಗೆ ಇರುವ ಮನುಷ್ಯ ಅಣ್ಣಗಳಿರಾ !

ರುದ್ದ : ಲೇಯ್ ಅಣ್ಣ ಪಣ್ಣ ಅಂತಾ ಬಣ್ಣದ ಮಾತಾಡ ಬ್ಯಾಡ. ನೀನು ಯಾರನ್ನ ಕೇಳಿ ಈ ಮಠದೊಳಗೆ ಬಂದೆ? ಹೇಳು?

ರೊದ್ದ : ಯಾರನ್ನ ಕೇಳಿ ದೇವರ ಮೈಮೇಲಿನ ಒಡವೆ ಕದ್ದೆ? ಹೇಳು.

ರುದ್ದ : ಮೊದಲು ನಿನ್ನ ಹೆಸರು ಹೇಳು.

ರೊದ್ದ : ಆಮೇಲೆ ನಿಮ್ಮಪ್ಪನ ಹೆಸರು ಹೇಳು.

ಕನಕ : ನನ್ನ ಹೆಸರು.. ಕನಕ !

ರೊದ್ದ : ಹ್ಞಾ! ಕನಕ ! ಗುರುಗಳೇ, ಕನಕ ಅಂದರೆ ಯಾರು?

ಮುಕುಂದ : ಚಿನ್ನ !

ರೊದ್ದ : ನೋಡಿದ್ರಾ. ಕದ್ದ ಈ ಕಳ್ಳನೇ ಚಿನ್ನದ ಒಡವೆ ಕದ್ದೆ ಅನ್ನೋದು ಬಿಟ್ಟು ಸಂಸ್ಕೃತದಾಗೆ.. ಅದೇ ನಿಮ್ಮ ಬಾಸೇಗೇ 'ಕನಕ ಕದ್ದೆ' ಅಂತಿದಾನೆ !

ಆನಂದ : ಇರಲಿ ತಾಳಿ, ಏನಯ್ಯಾ, ನೀನು ಸ್ವಾಮಿಯ ಒಡವೆಗಳನ್ನು

ಕನಕ: ಕದಿಯಲಿಲ್ಲ ಸ್ವಾಮಿ, ಅವನೇ ನನ್ನ ಕೈಗಿತ್ತ..!...
ಇದೋ ನೀಡಿ ಎಲ್ಲವೂ ಇಲ್ಲಿವೆ !!

(ಗಂಟನ್ನು ಮುಂದಿಡುವನು)

ರುದ್ದ : ಸುಳ್ಳು ! ಸುಳ್ಳು !!...

ರೊದ್ದ : ಅಪ್ಪಟಾ ಸುಳ್ಳು, ಹಸೀಸುಳ್ಳು, ಬಿಸೀಸುಳ್ಳು, ಕಸೀಸುಳ್ಳು, ಕಳ್ಳಸುಳ್ಳು, ಮಳ್ಳುಸುಳ್ಳು, ಸುಳ್ಳೊಂದ್ರೆ, ಸುಳ್ಳು ತಾಜಾಸುಳ್ಳು!

ರುದ್ದ : ಸ್ವಾಮಿ, ಇವನು ಕಳ್ಳನೂ ಹೌದು, ಸುಳ್ಳನೂ ಹೌದು.

ರೊದ್ದ : ಲೋ, ನಮ್ಮ ಕೃಷ್ಣ ಬೆಣ್ಣೆ ಕಳ್ಳ ನಿಜ, ಆದರೆ ನಿನ್ನ ಹಾಗೆ ಸುಳ್ಳು ಹೇಳ್ತಿರಲಿಲ್ಲ!

ರುದ್ದ : ನೀ ನೋಡಿದ್ದೇಯೇನೋ ? ಕಂಡನವ ಹಾಗೆ ಬೊಗುಳ್ತಾನೆ !

ರೊದ್ದ : ಕೃಷ್ಣ ಬೆಣ್ಣ ಕಳ್ಳ, ಇವನು ಒಡವೆ ಕಳ್ಳ.. ಸರಿಯಾಗ್ಯೆತೆ !
(ಕುಣಿದಾಡುವರು)

ಮುಕುಂದ : ಲ್ರೋ ! ನಿಲ್ಲಿಸಿರಿಯ್ಯಾ ನಿಮ್ಮ ತಲೆಹರಟೆ !

ಇಬ್ಬರೂ : ಅಷ್ಟಣೆ ಬುದ್ಧೀ ! ಗಪ್‌ಚಿಪ್, ಬಾಳೇಹಣ್ಣಿನ ಚಿಪ್!!
(ಇಬ್ಬರು ಕೈಗಳಿಂದ ಬಾಯಿಮುಚ್ಚಿಕೊಂಡು ನಿಲ್ಲುವರು)

ಆನಂದ : ಅಪ್ಪಾ, ನೀನೇಕೆ ಸ್ವಾಮಿಯ ಮೈಮೇಲಿನ ಒಡವೆಗಳನ್ನು ಕದ್ದೆ?

ಕನಕ : ಇಲ್ಲಾ ಸ್ವಾಮಿ ಪರಮಾತ್ಮನ ಪಾದಸಾಕ್ಷಿಯಾಗಿಯೂ ನಾನು ಕದಿಯಲಿಲ್ಲ. ಅವನೇ ನನಗೆ ಕೈಯಾರ ಕೊಟ್ಟ !!

ರುದ್ಧ : ಎಂಥಾ ಸೋಜಿಗದ ಮಾತಪ್ಪಾ ಇದು. ನಾವು ಇಷ್ಟು ವರ್ಸಾ ಸ್ವಾಮಿ ಸೇವ ಮಾಡ್ಥ ಇದೀವಿ, ಒಂದಿನಾನೂ ನಾನು ಕಾಸು 'ಕ್ವಾ' ಅಂತಾ ಕೈಯೆತ್ತಿ ಕೊಡ್ಲಿಲ್ಲ. ಇವನಿಗೆ ಒಂದೆ ಒಂದು ರಾತ್ರಿಗೆ ಒಲ್ದು ಕೊಟ್‌ಬುಟ್ನಂತೆ ! ಬಲೇ ಡೋಂಗಿ ಬಡ್ಡೀಮಗ !

ವಾದಿರಾಜ : ಅಲ್ಲಾ.. ಇವನಲ್ಲ ಕಳ್ಳ. . ! ಅವನೇ, ಅವನೇ
ಆ ನವನೀತ ಚೋರ !.. ಅವನೇ ಬಲುಗಳ್ಳ !!

[ಕೂಡಲೇ ಬೀಜಿಮ್ ಆರಂಭವಾಗಿ ತೀವ್ರಗತಿಯಲ್ಲಿ ಮುಂದುವರಿಯುವುದು ರಂಗಭೂಮಿ ಕತ್ತಲಾಗುವುದು. ಕೃಷ್ಣ, ಕನಕರಿಬ್ಬರೂ ಬೆನ್ನಿಗೆ ಬೆನ್ನು ಕೂಡಿಸಿ, ತಮ್ಮ ತೋಳುಗಳೆರಡನ್ನೂ ಹಿಂದು ಮುಂದಾಗಿ ಹೆಣೆದುಕೊಂಡು ನಿಲ್ಲುವರು. ಖಙಣ ಟಙಣ ಹರಿದಾಗ ಅವರು ಒಬ್ಬರಾದ ಮೇಲೊಬ್ಬರು ತಿರುಗುವರು. ಬೆಳಕು ಅವರ ಮೇಲೆ ಕ್ರಮವಾಗಿ ಬೀಳುವುದು. ಕೃಷ್ಣನೇ ಕನಕ, ಕನಕನೇ ಕೃಷ್ಣ–ಎಂಬ ಅಭೇದ ಕಲ್ಪಿತವಾಗುವಂತೆ ದೃಗ್ಗೋಚರವಾಗಬೇಕು. ಆಗ–]

ಕಳ್ಳನವನು ಕಳ್ಳನೋ ಒಳ್ಳೆ ಕಳ್ಳನೋ
ಮಳ್ಳಿ ಹಾಂಗೆ ಮಡಕೆ ಇಳುಹೊ ಕಳ್ಳ ನಮ್ಮ ಕಳ್ಳನೋ ॥ಪ॥
ಬಳ್ಳಿ ಮಾಡದಲ್ಲಿ ಅಡಗಿ ಬೆಳ್ಳಿ ಬೆಡಗಿಯನ್ನು ಬಿಡದೆ
ಹಿಡಿದು ಬೆಣ್ಣೆ ಕಸಿಯುವಂಥ ಹಗಲುಗಳ್ಳನೋ ॥ಅನು.ಪ॥

[ಹಾಡಿನೊಡನೆ ಎಲ್ಲರೂ ನರ್ತಿಸುವರು. ಹಿನ್ನೆಲೆಯಲ್ಲಿ ಹಾಡು ಹರಿದಂತೆ ಬಾಲಕೃಷ್ಣ. ಬೆಣ್ಣೆ ಬೆಡಗಿಯರು, ಸೀರೆ ಅಪಹರಣ ಸನ್ನಿವೇಶ ಇತ್ಯಾದಿಗಳನ್ನು ಅಭಿನಯದ ಮೂಲಕ ತೋರಿಸಬಹುದು]
ಮಡುವಿನಲ್ಲಿ ಕ್ರೀಡೆಗೈವ
ತುಡುಗಿಯರಾ ಉಡುಗ ಕದ್ದನೋ
ಅವರ ಮನವ ಕದ್ದನೋ ॥

ತನ್ನ ಒಡವೆ ತಾನೆ ಕದದು ಚೆನ್ನ ಚೆಲುವ ನಿಂದನೋ
ಸಂತ ಕನಕದಾಸರನ್ನು ಉಂತೆ ಹೊಡಿಸಿದಾತನೋ ॥
ಕೊರಡೆ ಏಟು ಬಿಡದೆ ಬೀಳೆ ತನ್ನ ಮೈಯನಿತ್ತನೋ.
ಬಾಸುಂಡೆ ಮೂಡೆ ನೋವನೆಲ್ಲ ತಾನೆ ತನ್ನೊಳುಂಡನೋ ॥
ಹಸಿದು ಬಂದು ರೊಟ್ಟಿ ತಿಂದು ಒಸಗೆ ಎಮಗೆ ಇತ್ತನೋ
ಶ್ರೀಶಸ್ವಾಮಿ ಉಡುಪಿ ಕೃಷ್ಣ ದಾಸರಿಂಗೆ ದಾಸನೋ॥

[ಹಾಡು ತಾರಕಕ್ಕೇರಿ ನರ್ತನ ತುರೀಯ ಸ್ತರಕ್ಕೇರಿದಾಗ ಸ್ವಾಮಿ ಮಾಯವಾಗುವನು]

ವಾದಿರಾಜ : ಪರಮ ತಪೋಧನರೆ, ಓ ದಾಸ ಶ್ರೇಷ್ಠರೇ,
ಮನ್ನಿಸಿರಿ ಅಪರಾದ, ಮನ್ನಿಸಿರಿ ಅಪಚಾರ !

ಕನಕ : ಕರ ಮುಗಿದು ಬೇಡುವೆನು

ಕ್ಷಮೆಯ ಯಾಚಿಸಬೇಡಿ
ಅವನೆ ಗೈದಪಚರ,
ಅವಗಾಯ್ತು ಉಪಚಾರ !

(ಹಾಡು) ಏನು ಲೀಲೆಯೋ ಸ್ವಾಮಿ
ಎಂಥ ಮಾಯೆಯೋ ॥ಪ॥
ಕಪಟ ನಾಡಕ ಸೂತ್ರಧಾರಿ ಶ್ರೀ ಕೃಷ್ಣಾ ॥ಅನು.ಪ॥

ಒಂದು ಕೈಯಲಿ ಕೊಡುವೆ
ಕೊಟ್ಟ ಕೈಯಲೆ ಪಡೆವೆ
ಕೊಡುವನು ಕೊಂಬವನು
ತಾನೆ ಎಂದೆನುವೆ ॥
ಅಧಿಕಾರವೆಂದೆನುವೆ
ಫಲಗಳನು ಬಲಗಳನು
ಎಲ್ಲ ಮೀಸಲುಗೊಳುವೆ ॥1॥

ಒಳ್ಳೆಯವನನು ಹಿಡಿಸಿ
ಕಳ್ಳನೆಂದೆನ್ನಿಸುವೆ
ಮುಳ್ಳಿನಲಿ ಹೂವಿಹುದ
ನೀನೆ ತೋರಿಸುವೆ ॥
ಬಳ್ಳಿ ಮೊಗ್ಗೆಯ ರೀತಿ
ಎಲ್ಲರೊಳಗಡಗಿರುವೆ
ಸಲ್ಲಲಿತ ಕಾಗಿನೆಲೆ –
ಆದಿ ಕೇಶವ ಕೃಷ್ಣಾ ॥2॥

ಕ್ಷೀರವಾರಿಧಿ ಶಯನ
ತಾಮರಸ ದಳ ನಯನ
ಮುಗ್ಧ ಗೋಪೀ ಜಾರ
ನವನೀತ ಚೋರ ॥

ಮಾರಪಿತ ಗುಣಹಾರ
ಸಾಮಗಾನ ಪ್ರೇಮ
ಶಾಂತ ಸಾಕಾರ ಶ್ರೀ
ತುಂಬುರ ನಾರದ ಪ್ರಿಯನೆ ॥3॥

(ವಚನ) ಸಾಕ್ಷಾತ್ ಕೃಷ್ಣ ಸ್ವರೂಪಿಗಳಾದ ವಾದಿರಾಜಾದಿ ಪೂಜ್ಯರೆ, ದಯಮಾಡಿ, ನಮ್ಮ ವಂಚಿಸಿ ಮಿಂಚಿಮಾಯವಾದ ಆ ಕಂಚೀ ಕರಿವರದನನ್ನು ಮತ್ತೆ ಭಜಿಸಿ ಸಾಕ್ಷಾತ್ಕರಿಸಿಕೊಳ್ಳೋಣ.

(ಶ್ಲೋಕ) ಶಾಂತಾಕಾರಂ ಭುಜಯಶಯನಂ ಪದ್ಮನಾಭಂ ಸುರೇಶಂ
ವಿಶ್ವಾಧಾರಂ ಗಗನ ಸದೃಶಂ ಮೇಘವರ್ಣಂ ಶುಭಾಂಗಂ
ಲಕ್ಷ್ಮೀಕಾಂತಂ ಕಮಲನಯನಂ ಯೋಗಿಭಿಃ ಧ್ಯಾನಗಮ್ಯಂ
ವಂದೆ ವಿಷ್ಣುಂ ಭಯಭಯಹರಂ ಸರ್ವಲೋಕೈಕ ನಾಥಂ ॥

(ಷಟ್ಪದಿ) ವೇದಗೋಚರ ವೇಣುನಾದ ವಿ
ನೋದ ಮಂದರ ಶೈಲಧರ ಮಧು
ಸೂದನಾಚ್ಯುತ ಕಂಸದಾನವರಿಪು ಮಹಾಮಹಿಮ ।
ಯಾದವೇಂದ್ರ ಯಶೋನಂದನ
ನಾದ ಬಿಂದು ಕಳಾತಿಶಯ ಪ್ರ
ಹ್ಲಾದ ರಕ್ಷಕ ವರದ ರಕ್ಷಿಸು ನಮ್ಮನನವರತ ॥

[ಕನಕದಾಸರು ಹೇಳಿಕೊಟ್ಟಂತೆ ಎಲ್ಲರೂ ಹಾಡುವರು. ಆನಂದ ತುಂದಿಲರಾಗಿ ನರ್ತಿಸುವರು]
ಕೃಷ್ಣ ಕೃಷ್ಣ ಕೃಷ್ಣ ಕೃಷ್ಣ
ಉಡುಪಿ ಕೃಷ್ಣ ಕೃಷ್ಣನೇ ।
ವಿಶ್ವರೂಪಿ ವಿಶ್ವವ್ಯಾಪಿ
ವಿಶ್ವಾತ್ಮನೇ ಕೃಷ್ಣನೇ ॥

ಜಗದ್ವಂದ್ಯ ಜಗನ್ಮಾನ್ಯ
ವಿಶ್ವಪೂಜ್ಯ ಕೀರ್ತಿಯೇ
ಶಂಖ ಚಕ್ರ ಗದಾಧಾರಿ
ವಿಶ್ವ ದೇಹ ಮೂರ್ತಿಯೇ ॥

ನಮೋ ನಮೋ ಭವವಿನಾಶ
ಭಕ್ತ ಭೋ ವಿಲಾಸ
ವಿಸ್ತಾರದ ಸತ್ತ್ವರೂಪಿ
ಸಮಸ್ತ ತಾ ನಾದನೆ ॥

ಕಾಗಿನೆಲೆಯ ಕೇಶವಾ
ಬೇಲೂರ ಚೆನ್ನಕೇಶವಾ
ತಿರುಪತಿಯಾ ಗಿರಿಯಲಿರುವ
ಶ್ರೀನಿವಾಸ ಮಾಧವ ॥
[ತಾರಕಕ್ಕೇರಿದಾಗ ಸ್ಫೋಟದೊಂದಿಗೆ ಶ್ರೀ ಕೃಷ್ಣನ ಸಾಕ್ಷಾತ್ಕಾರವಾಗುವುದು. ಪುಷ್ಪವೃಷ್ಟಿಯೊಂದಿಗೆ ಮಂಗಳ]
– ತೆರೆ –

ಮುನ್ನುಡಿ

'ಶಿವಲೀಲೆ' ನಾಲ್ಕು ನೃತ್ಯರೂಪಕಗಳ ಒಂದು ಸಂಕಲನ. ಇವು ನನ್ನ ಆತ್ಮೀಯರ ಮಿತ್ರರೂ, ವಿಖ್ಯಾತ ನೃತ್ಯಪಟುವೂ ಆದ ಶ್ರೀ ಆರ್.ಸುಧೀಂದ್ರರವರಿಗಾಗಿ ಬರೆದವುಗಳು. ಹಾಗೆ ಬರೆಯಿಸಿದ ಶ್ರೀ ಆರ್.ಸುಧೀಂದ್ರರವರಿಗೆ, ಅಂದವಾಗಿ ಮುದ್ರಿಸಿಕೊಟ್ಟ ಶ್ರೀ ಲಕ್ಷ್ಮೀ ಆರ್ಟ್ ಪ್ರಿಂಟರ್ಸ್‌ನ ಮಾಲೀಕರಿಗೆ ನಾನು ಆಭಾರಿ.
'ರಾಗಿಣಿ"– ಸಾ.ಶಿ.ಮರುಳಯ್ಯ
25.12.1994

ನೃತ್ಯ ರೂಪಕಗಳು

1. ಬುದ್ಧಿಗಣಪ
2. ಭಕ್ತ ಮಾರ್ಕಂಡೇಯ
3. ಚೀಲಾಳ
4. ಗಂಗಾಗೌರಿ ಹೃದಯ ವಿಹಾರಿ

ದೃಶ್ಯ ಕೈಲಾಸ

ಮೇಳ : ಓಂ ನಮಃ ಶಿವಾಯ ಓಂ ನಮಃ ಶಿವಾಯ ಓಂ ನಮಃ ಶಿವಾಯ ।
ಶ್ಲೋಕ ಪಠನ : ವಿಶ್ವೇಶ್ವರಾಯ ವಿಶ್ವಪೂಜಾಯ ವಿಶ್ವದೇಹಿನೇ
ಶಿವಾಯ ಶಶಿಭೂಷಣಾಯ ನೇತ್ರತ್ರಯಾಯ ಶೋಭಿನೇ
ಜಟಾಧರಾಯ ಮಣಿಕುಂಡಲ ಮಂಡಿತಾಯ
ಮಂಜೀರ ಪಾದಯುಗಲಾಯ ನಮಃ ಶಿವಾಯ ।

ಗೌರೀಪ್ರಿಯಾಯ ವೃಷಭೇಶ್ವರ ವಾಹನಾಯ
ಗಂಗಾಧರಾಯ ರಜನೀಶ ಕಲಾಧರಾಯ
ಗೀತ ಪ್ರಿಯಾಯ ಕಮಲಾಸನ ಪೂಜಿತಾಯ
ಪುಣ್ಯಾಯ ಪುಣ್ಯ ಚರಿತಾಯ ನಮಃ ಶಿವಾಯ ॥
ಓಂ ನಮಃ ಶಿವಾಯ ಓಂ ನಮಃ ಶಿವಾಯ

ಲಯಗತಿಯಲ್ಲಿ: ಕೈಲಾಸೇ ಗಿರಿ ಶಿಖರ ವರಕಲ್ಪ ದ್ರುಮ ವಿಪಿನೇ ।
–ಶಿವಕಲ್ಪ ದ್ರುಮವಿಪಿನೇ–
ಗುಂಜತಿ ಮಧುಕರ ಪುಂಜೆ ಕುಂಜವನೆ ಗಹನೇ ।
–ಶಿವಕುಂಜವನೇ ಗಹನೇ–
ಕೋಕಿಲ ಕೂಜಿತ ಖೇಲಿತ ಹಂಸೀ ವನಲಲಿತಾ
–ಶಿವ ಹಂಸೀ ವನಲಲಿತಾ–
ರಚಯತಿ ಕಲಾ, ಕಲಾಸೀ ನೃತ್ಯತಿ ಮುದ ಸಹಿತಾ ।
–ಹರ ಹರ ಹರ ಮಹದೇವ–
ಹರ ಹರ ಹರ ಮಹದೇವ । ಹರ ಹರ ಹರ ಮಹದೇವ॥

(ಗಣಧರರು ಮತ್ತು ರುದ್ರಕನ್ನಿಕೆಯರ ನರ್ತನ ನಡೆಯುವಾಗ ಮುಚ್ಚಿದ ಕಣ್ಣುಗಳನ್ನು ಪಾರ್ವತಿ ತೆರೆಯುತ್ತಾಳೆ. ಆದರೆ ಶಿವ ಹಾಗೆಯೇ ಧ್ಯಾನ ಸಮಾಧಿಯಲ್ಲಿರುತ್ತಾನೆ. ಆಗ)

ಪಾರ್ವತಿ : ಉದಯರಾಗದ ಕೂಡೆ ಹೂವರಳಿ ನಗುವಂತೆ
ಮಡಲಿನಲಿ ಪವಡಿಸಿಹ ಹಸುಳೆ ಕಣ್ ತೆರೆವಂತೆ
ಚಂಚು ಸಂಪುಟದೆರೆದು ಕುಕಿಲಿಡುವ ಮರಿಯಂತೆ
ಬನದ ಕಾರಂಜಿಯಲಿ ನೀರನಟಿ ಪುಟಿವಂತೆ

ಏಳು ಗಂಗಾಧರನೆ, ಏಳು ಗೌರೀವರನೆ
ಏಳು ಮಂಗಳಕರನೆ ಏಳಯ್ಯಾ ಏಳೋ ।
(ಢಣ್ ಎಂದು ಘಂಟನಾದ)

ಚಂದ್ರಚೂಡನೆ ಏಳೊ ಇಂದ್ರವಂದಿತ ಏಳೊ
ಏಳು ಸರ್ವೇಶ್ವರನೆ ಏಳಯ್ಯಾ ಏಳೊ !
(ಚಳ್‌ಚಕ್ ಎಂದು ಝುಲ್ಲರಿಯ ಸದ್ದು)

ಏಳು ಜಟೆ ನಿಟಿಲಾಕ್ಷ ಏಳು ದಿಕ್ತಟ ಘೋಷ
ಏಳು ಪಟುಭಟ ನಾಟ್ಯ ನಟನಾಟ ಲೋಲುಪನೆ !
("ಚಡಣ್ ಚಣ್" ಚಂಡೆಯ ಧ್ವನಿ)
ಏಳಯ್ಯಾ ಏಳೊ ಏಳಯ್ಯಾ ಏಳೋ॥

(ಆಲಾಪನೆಗನುಗುಣವಾಗಿ ಶಿವ ನಿಧಾನವಾಗಿ ಕಣ್ತೆರೆದು ತಾಂಡವಕ್ಕೆ ತೊಡಗುತ್ತಾನೆ. ಚಂಡೆ, ಮೃದಂಗ ಭೇರಿ, ಜಾಗಟೆ, ಶಂಖ, ಝುಲ್ಲರಿ, ಸಣ್ಣ ಮೇಳ, ಕರಡಿ ವಾದ್ಯಗಳ ವಿಶೇಷ ನಿರ್ಘೋಷ, ಚಣಕಾ ತಾಂಡವ ಅನಂತರ ದೇವಿಯ ಪ್ರಾರ್ಥನೆಯ ಮೇರೆಗೆ ಶಿವ ಪ್ರಸನ್ನನಾಗುತ್ತಾನೆ.
ಪ್ರಸನ್ನವದನನಾಗಿ ಶಿವೆಯನ್ನಾಲಂಗಿಸಿ, ಅವಳ ಸ್ತುತಿಗೈಯಲು ಆರಂಭಿಸುತ್ತಾನೆ. ಅವನ ಕೈ ತಾಳ ಹಾಕಿಕೊಂಡು ಹಾಡುವಾಗ ಪಾರ್ವತಿ ನರ್ತಿಸುತ್ತಾಳೆ]

ಲಾಸ್ಯ [ಪಾರ್ವತಿಯಿಂದ]
ಶಿವ : ಶಕ್ತಿ ನೀನು ಜಗದಾದಿ ಶಕ್ತಿಯು ನೀನು
ಶಿವೆಯು ನೀನು ಪರಶಿವೆಯು ನೀನು ॥

ನೀರಲ್ಲಿ ತಂಪಾಗಿ ಗಾಳಿಯಲ್ಲಿ ವೇಗವಾಗಿ
ಸೂರ್ಯನಲಿ ಚಂದ್ರನಲಿ ತೇಜಕಾಂತಿಯಾಗಿ
ನಕ್ಷ್ರ ನಗೆಯಾಗಿ ಹೂವ ಪರಿಮಳವಾಗಿ
ಹಕ್ಕಿಯ ಕಂಠದಲ್ಲಿ ಹಾಡಾಗಿರುವೆ ॥

ಎಲ್ಲೆಡೆಯು ಎಲ್ಲೆಲ್ಲು ಅಣುರೇಣು ತೃಣದಲ್ಲು
ನೂತನದ ಚೇತನವೆ ನೀನಾಗಿರುವೆ
ಜಯಗೌರಿ ಶಿವೆ, ಶಿವನರ್ಧಾಂಗಿಯೇ
ನಿನ್ನರಿವು ಹೊನಲಾಗೆ ಹೇಳಲೇನೇ ! ॥

ಸತ್ಯ ಸುಂದರಿ ನೀನು ನಿತ್ಯ ಶಾಶ್ವತೆ ನೀನು
ಋತ ಚಿತ್ತದಚ್ಚರಿಯ ವೀಕ್ಷಿಸುವ ಸಾಕ್ಷಿ !
ನೀನೇ ಧನ್ಯೆ ನೀ ಜಗಮಾನ್ಯೆ
ವಿಶ್ವಾಂತರಾಲದ ಬೆಳಕೂ ನೀನೆ ! ॥

ಪಾರ್ವತಿ : [ಇವಳು ಹಾಡುವಾಗ ಶಿವ ನರ್ತಿಸುವನು]
ಎಡೆಯಿಲ್ಲದ ಕಡೆಯಿಲ್ಲದ ಓ ಅಖಂಡ ಮೃಡನೇ
ಚಂದ್ರಚೂಡ ಜಟಾಪಟಲ ರುಂಡಮಾಲಾ ಧಾರಿಯೇ
ಬ್ರಹ್ಮಾಂಡದ ಗುಂಡಿಗೆಯಲಿ ತಾಂಡವವನುಗೈದವನೆ
ಬೇಡಿದವರ ಕಾಡುತ ಕೈಲಾಸಕೊಯ್ವಭವನೆ ॥
॥ನಿನಗೆ ವಂದನೆ ನಿನಗೆ ವಂದನೆ ನಿನಗೆ ವಂದನೆ ಶುಭ್ರನೇ ॥

ತ್ರಿಪುರ ತ್ರಿಶಿರ ಮೂಕಾಸುರರ ಗಜಾಸುರನ ತರಿದನೇ
ಕಾಲಾಂತರ ಕಾಮಾಂತಕ ಓ ಕಪರ್ದಿ ಭರ್ಗನೇ
ಅಪಸ್ಮಾರ ಪುರುಷನೆದೆಯ ಮೆಟ್ಟಿ ಕುಟ್ಟಿ ಮೆರೆದನೇ
ಪಟುಭಟ ನಿಟಿಲಾಕ್ಷ ನಟನೆ ನತ್ಕ ನಟರಾಜನೇ ॥
॥ನಿನಗೆ ವಂದನೆ ನಿನಗೆ ವಂದನೆ ನಿನಗೆ ವಂದನೆ ಶುಭ್ರನೇ ॥

ಶಿವ : ನೀನೇ ಸ್ವಹ ನೀನೆ ಸ್ವಧಾ ನೀ ಅಮೃತ ರೂಪಳು
ನಿತ್ಯ ಸತ್ಯೆ ನಿರಾಲಂಬೆ ನೀ ಜಗತ್ ಸ್ವರೂಪಳು
ವಿಶ್ವ ಜನನಿ ವಿಶ್ವೇಶ್ವರಿ ಕಾತ್ಯಾಯನಿ ಕಾಮಿನೀ
ಪುಣ್ಯಗರ್ಭ ಪರಮೇಶ್ವರಿ ನಿರ್ಗುಣಿ ನಿರಂಜನೆ ॥

(ಬೇರೆ ಧಾಟಿ) ಚಂಡಿ ಪ್ರಚಂಡಿ ದಾಡೆ ಚಾಮುಂಡಿ ಮುಂಡಾಸುರ ಸಂಹಾರಿಣಿಯೇ
ಶುಂಭ ನಿಶುಂಭ ಪ್ರಭಂಜನೆಗೈದಾ ಬಿಂಬಾಧರೆ ದಾಕ್ಷಾಯಿಣಿಯೇ
ಭರ್ಗೇ ದುರ್ಗೇ ಉಗ್ರಸ್ವರೂಪಿಣಿ ಭದ್ರಕಾಳಿ ಚಿದ್ರೂಪಿಣಿಯೇ
ಬನಶಂಕರಿ ನೀ ರಣಭಯಕಾರಿಣಿ ರಕ್ತಾಂಜಲಿಯಲಿ ಮೆರೆದವಳೇ ॥

[ಅನಂತರ ಬೀಜಿಮ್‌ನಲ್ಲಿ ನರ್ತನ ಶಿವ ಶಿವೆಯರದು]
[ನತ್ನ ನಡೆಯುತ್ತಿರುವಾಗ ಗಣೇಶ ಮತ್ತು ಷಣ್ಮುಖರ ಪ್ರವೇಶ]

ಇಬ್ಬರೂ : ಶಿವ ಶಿವೆಯರ ಶೃಂಗಾರದ ಲಾಸ್ಯಕೆ
ಕೈಲಾಸವೆ ತಾವರಳುವುದು
ಭುವನ ತ್ರಯಗಳು ಮುದವನು ತಳೆವುವು
ಆನಂದದ ಹೊಳೆ ಹರಿಯುವುದು
ಇಳೆ ಇಳೆ ನಂದನ ಭುವಿ ಬಾನ್ ಬಂಧನ
ಓಂಕಾರಾತ್ಮಕವೀ ಜಗವು
ಮಂಗಳ ಮಂಗಳ ಜಗತಳದಂಗಳ
ತಿಂಗಳ ಬೆಳಕಿನ ಪ್ರಾಂಗಣವು
ಜ್ಯೋತಿರ್ವಲಯವು ಝುಗಝುಗಿಸುವುದು
ನೀಹಾರಿಕೆಯದು ಮಿರುಗುವುದು
ಓಂಕಾರಾತ್ಮಕ ತಾನಹುದು ॥

–[ಚಣಕಾಲ ಎಲ್ಲರೂ ನರ್ತಿಸುವರು]–
ಪಾರ್ವತಿ : ಬನ್ನಿ ಬನ್ನಿ ಮಕ್ಕಳೇ
ಚೊಕ್ಕ ಚಿನ್ನದೊಕ್ಕಲೇ
ಅಕ್ಕರೆ ಆನಂದ ತಂದ
ಸಕ್ಕರೆ ಸಿಹಿಸವಿಗಳೇ ॥ಪ॥

ಪಾರ್ವತಿ: ಜ್ಞಾನಿ ಸುಜ್ಞಾನಿ ನೀನು
ಅಜ್ಞಾನವಳಿದ ಜ್ಯೋತಿ ನೀನು
ಬಾರೊ ಗಣಪ ಬಾರೋ
ಮನಕೆ ಮುದವ ತಾರೋ ॥1॥

ಕ್ರಿಯಾರೂಪಿ ದಯಾಮೂರ್ತಿ
ಜಯ ಜಯಂಗಳಾದಿ ಕೀರ್ತಿ
ಷಣ್ಮುಖ ಸಿರಿ ಸ್ವಾಮಿ ಬಾರೋ
ಉನ್ಮುಖ ವಿಜಯಾದ್ರಿ ಬಾರೋ ॥2॥

ಶಿವ–ಪಾರ್ವತಿ ॥ಬನ್ನಿ ಬನ್ನಿ ಮಕ್ಕಳೇ॥
ಪಾರ್ವತಿ : ಸೃಜನಶೀಲ ಶಕ್ತನೆ
ಭುಜಗ ಭೂಷಣಾಂಗನೆ
ಅಜ ಸಹಸ್ರ ದಿವಿಜರೊಡೆಯ
ಗಜಾನನೆ ಬಾರೊ ॥3॥

ಶಿವ : ತೆಳು ಮೈಯಿನ ತಿಳಿಗೊಳವೇ
ಬೆಳು ಬೆಳಗಿ ಜೇನ್ನೊಡವೇ
ಮುದ ಮಯೂರ ವಾಹನ
ಸ್ಕಂದಾನಂದ ಬಾ ಬಾರೊ ॥4॥

ಶಿವ–ಪಾರ್ವತಿ : ॥ಬನ್ನಿ ಬನ್ನಿ ಮಕ್ಕಳೇ॥

[ಎಲ್ಲರೂ ಕೈ ಕೈ ಹಿಡಿದು ವೃತ್ತಕಾರವಾಗಿ ನರ್ತಿಸುವರು]
ಎಲ್ಲರೂ : ವೃಂದಂ ಮಧುರಂ ಚಂದಂ ಮಧುರಂ
ಬಂದಂ ಮಧುರಂ ಇಂದುಂ ಮಧುರಂ
ಮಧುರಂ, ಮಧುರಂ ಮದು ಸಂಚಯಿಸೇ ॥

ಗಣೇಶ–ಷಣ್ಮುಖ : ತಂದೆಯು ಮಧುರಂ ತಾಯಿಯು ಮಧುರಂ
ಬಂಧುವು ಮಧುರಂ ಬಳಗವು ಮಧುರಂ
ಮಧುರಂ ಮಧುರಂ ಮಧು ಸಂಚಯಿಸೇ ॥

ಶಿವ : ಕಂದಂ ಮಧುರಂ ಸ್ಕಂದಂ ಮಧುರಂ
ಬೃಂದಂ ಮಧುರಂ ಷಣ್ಮುಖ ಮಧುರಂ
ಮಧುರಂ ಮಧುರಂ ಮಧು ಸಂಚಯಿಸೇ ॥

ಪಾರ್ವತಿ : ಗಣಪಂ ಮಧುರಂ ಗುಣಕಂ ಮಧುರಂ
ಗುಣಯುತ ಮಧುರಂ ಗಣಪತಿ ಮಧುರಂ
ಮಧುರಂ ಮಧುರಂ ಮಧು ಸಂಚಯಿಸೇ

ಶಿವ : ಸತಿಯುಂ ಮಧುರಂ

ಪಾರ್ವತಿ : ಪತಿಯುಂ ಮಧುರಂ

ಇಬ್ಬರೂ : ಸುತರುಂ ಮಧುರಂ ಸೌಧಂ ಮಧುರಂ
ಮಧುರಂ ಮಧುರಂ ಮಧು ಸಂಚಯಿಸೇ ॥

ಎಲ್ಲರೂ : ಕ್ಷೋಣಿಯು ಮಧುರಂ ಅರಣಿಯು ಮಧುರಂ
ಕಿರಣಮ ಮಧುರಂ ಅರುಣಂ ಮಧುರಂ
ಮಧುರಂ ಮಧುರಂ ಮಧು ಸಂಚಯಿಸೇ ॥

ವೃಕ್ಷಂ ಮಧುರಂ ಭಕ್ಷ್ಯಂ ಮಧುರಂ
ಕ್ಷೀರಂ ಮಧುರಂ ತೋಯಂ ಮಧುರಂ
ಮಧುರಂ ಮಧುರಂ ಮಧು ಸಂಚಯಿಸೇ ॥

ಪೃಥ್ವಿಯು ಮಧುರಂ ಅರ್ತಿಯು ಮಧುರಂ
ದ್ಯಾವಾ ಮಧುರಂ ದ್ಯುಃವೂ ಮಧುರಂ
ಮಧುರಂ ಮಧುರಂ ಮಧು ಸಂಚಯಿಸೇ ॥

ಜ್ಯೋತ್ಸ್ನಾ ಮಧುರಂ ತೀಕ್ಷ್ಣನು ಮಧುರಂ
ವರುಣಂ ಮಧುರಂ ಭೈಷಜ ಮಧುರಂ
ಮಧುರಂ ಮಧುರಂ ಮಧು ಸಂಚಯಿಸೇ ॥

[ಪಾರ್ವತಿಯು ತೊಡೆಯ ಮೇಲೆ ಗಣೇಶ, ಶಿವನ ತೊಡೆಯ ಮೇಲೆ ಷಣ್ಮುಖ ಕೂರುವರು. ಚಣಕಾಲದ ನಂತರ ಗಣೇಶ, ಷಣ್ಮುಖರು ಮೇಲೆದ್ದು, ಶಿರಬಾಗಿ ಕೈ ಮುಗಿದು ಬಿನ್ನವಿಸಿಕೊಳ್ಳುವರು]

ಇಬ್ಬರೂ: ಬಿನ್ನಹ ಮಾತ ಪಿತೃಗಳೇ
ಬಿನ್ನಹ ಲಾಲಿಸಿ ಧಾತೃಗಳೇ ॥

ಷಣ್ಮುಖ : ಲೊಕಾಲೋಕಾಂಗಳನ್ನೆಲ್ಲ
ಸೌರವ್ಯೂಹವನೆಲ್ಲೆಲ್ಲ
ಜ್ಯೋತಿರ್ವಲಯದ ಆಚೆಗೆ ಇರುವಾ
ಸಮಸ್ತ ತಾರ ನಿಹಾರಿಕೆಗಳ
ದ್ಯೂಹಲೋಕ ದ್ವಾವ ಪೃಥಿವಿಗಳ
ಸುತ್ತಿ ಸುತ್ತಿ ಕ್ಷಣಮಾತ್ರದಲಿ
ಮತ್ತೆ ಇದೇ ಈ ನೆಲೆಯಲ್ಲಿ
ಯಾರು ಮೊದಲು ಗುರಿ ಸೇರುವರೊ
ಅವರೇ ಪಂಥವ ಗೆದ್ದವರು
ಅವರೇ ವಿಜಯಕೆ ಭಾಜನರು ॥

ಗಣೇಶ: ಸಕಲಕು ಮಾತ ಪಿತರಾಗಿರುವ
ಲೀಲಾ ಜಗಕತಿ ಕಾರಣರಿರುವ
ಈ ಶಿವ-ಶಿವೆಯರ ಸಾನ್ನಿಧ್ಯದಲಿ
ನಿಮ್ಮಯ ಚಿನ್ಮಯ ಪದತಲದಲ್ಲಿ
ಯಾರು ಮೊದಲು ಬಳಿ ಸಾರುವರೋ

ಅವರೆ ಪಂಥವ ಗೆದ್ದವರು
ಅವರೇ ವಿಜಯಕೆ ಭಾಜನರು ॥

ಷಣ್ಮುಖ: ಅಮ್ಮಾ, ಅಪ್ಪಾಜಿ..
ಬಿಲದ ಇಲಿಯ ಬಯಲಿಗೆದು
ಗಣಪನದರ ಬೆನ್ನನೇರಿ
ವಿಶ್ವ ಪಯಣ ಭ್ರಮಣಕೆ
ಹೊರಲಿರುವನೀಗಳೇ !!

ಗಣೇಶ : ಅಹುದು ಅಮ್ಮಾಜಿ, ಅಹುದು ಅಪ್ಪಾಜೀ
ಸೋಗೆ ನವಿಲ ಗರಿಯ ಕೆದರಿ
ಜಾಗರ ಝಣು ಝಣರಿನಲ್ಲಿ
ಮಯೂರ ತೇರ ತಾನೇ ಏರಿ
ಬೇಗ ಬಹು ಕುಮಾರಸ್ವಾಮಿ
ವಿಶ್ವ ಪರ್ಯಟನವ ನೀಗಿ ॥

ಇಬ್ಬರೂ : ಸಮ್ಮತವೇ ಜಗ ಮಾತಾಪಿತರೆ
ಸೈತಹುದೇ ನಾವ್ ಹಿಡಿದಹ ಕಾಯಕ ?
ಜಯವಾಗಲಿ ಎಂದು ಹರಸಿರಿ ನೀವು
ವಿಜಯವೆಂದು ಸೊಲ್ಲಿಸಿರೀ ನೀವು ॥

ಶಿವ–ಪಾರ್ವತಿ : ಬನ್ನಿ ಕಂದಮ್ಮಗಳೇ ಹೋಗಿ ಬನ್ನಿ
ಶುಭಮಕ್ಕೆ ಜಯಮಕ್ಕೆ ಹೋಗಿ ಬನ್ನಿ ॥ಪ॥

ಇಳೆಯೊಳಗೆ ಕೊಳೆ ತೊಳೆದು ಬೆಳೆ ಹರಿಸಿ ಬನ್ನಿ
ಅರಿವು ನಗೆ ಮೊಳೆಮೊಳೆದು ಕಳೆ ತುಂಬಿ ಬನ್ನಿ ॥1॥

ಮಂಗಳ ಮಹೋದಯದ ಹೊಸ ಬೆಳಕು ತನ್ನಿ
ತಿಂಗಳಿನ ತಿಳಿನಗೆಯ ತಿಳಿವುಗಳ ತನ್ನಿ ॥2॥

[ಷಣ್ಮುಖನು ಶೀಘ್ರಗತಿಯಲ್ಲಿ ಓಡುವನು. ಗಣಪನು ಅಲ್ಲೇ ಭಕ್ತಿಭಾವುಕನಾಗಿ ಒಂದೆಡೆ ನಿಂತಿರುವನು. ಶಿವ–ಶಿವೆಯರು ಯೋಗನಿದ್ರಾ ಮುದ್ರಿತರಾಗುವರು.

[ಚಣಕಾಲ ರಂಗ ಮವನ. ಅನಂತರ ಗಣಪ]–
ಗಣೇಶ : (ಶಿವ–ಶಿವೆಯರ ಮುಂದೆ ಧ್ಯಾನಾಸಕ್ತನಾಗಿ ನಿಂತು)

(ಷಟ್ಪದಿ) ಜಯತು ಶಂಕರ ಭರ್ಗ ಪಶುಪತೀಶ್ವರ ಶಂಭು
ಜಯತು ಗಿರಿಜಾರಮಣ ಚಂದ್ರಶೇಖರ ಶರ್ವ
ಜಯತು ಶಿವ ಶೂಲಿ ಸರ್ವೇಶ ತ್ರಿಯಕ್ಷ
ಗಂಗಾ ಮಕುಟ ಮಣಿ ಕಟಕನೆ ॥
ಜಯಜಯಯೆನುತ್ತಭವನಂ ಗಿರಿಜೆಯಂತಂದು
ಜಯರೆವಕೆ ಕೈಲಾಸದರಮನೆಯ ತುಂಬ ಜಯ

ಜಯಯೆಮತ್ತೋಲೈಸುತಿದದ ಮಹಿಮರ ವಿಮ
ಚರಣಾಂಭುಜಕ್ಕೆ ಶರಣು ॥

ನಮೋ ನಮೋ ಶ್ರೀ ಗಂಗಾಧರನೆ
ಗೌರೀ ಮನೋವಿಹಾರಿ !
ಗಂಗಾ ಸಲಿಲ ತರಂಗಾಚ್ಛಾದಿತ
ಬಳಸಿ ಬ್ರಹ್ಮಚಾರೀ ॥1॥

ಯೋಗ ಸಮಾದಿಯ ಯೋಗೀಶ್ವರನೆ
ಆತ್ಮರತನೆ ಅಧ್ಯಾತ್ಮ ಋಷಿ !
ಲೀಲೆಯು ಮಿಗೆ ನೀ ಉಮಾಪತೀ
ಲೀಲೆತಪ್ಪೆ ಸ್ವಾಯಂಬು ಯತೀ ॥2॥

ತಂದೆ ತಾಯರಿಗೆ ಮಿಗಿಲಹರಿಲ್ಲ
ವಿಶ್ವವೆ ಧರಿಸಿಹ ಯಶವೆ

ವಿಶ್ವದೇಹಿಗಳು ವಿಶ್ವಾತ್ಮರುಗಳು
ಅವರ ಪ್ರದಕ್ಷಿಣೆಗೊಳುವೆ
ಅವರ ಪ್ರದಕ್ಷಿಣೆಗೊಳುವೆ
ಅವರ ಪ್ರದಕ್ಷಿಣೆಗೊಳುವೆ

[ಮೂರು ಬಾರಿ ಶಿವ-ಶಿವೆಯರನ್ನು ಪ್ರದಕ್ಷಿಣೆ ಬರುವನು]

-ಅಷ್ಟರಲ್ಲಿ ಷಣ್ಮುಖ-
ಷಣ್ಮುಖ : ಅಹಹಾ ಅಹಹಾ ಅಹ್ಹಾ ಅಹ್ಹಾ !
ಒಹೊಹೋ ಒಹೊಹೋ ಒಹ್ಹೋ ಒಹ್ಹೋ॥
ಗೆಲವಿ ನವಿಲಿ ಪಯಣ ವಿಹಾರಿ
ನಾನೇ ವಿಶ್ವ ಸಂಚಾರಿ
ಮುಗಿಲಿನ ಹೊಗೆಯಲಿ ನಗೆಯನು ಬೀರಿ
ನಿಂದೆನಿದೋ ಗುರಿ ಸೇರಿ !
ಪರ್ಯಟನದ ಈ ಪಂಥದಲಿ
ಸ್ಪರ್ಧೆಯ ಗೆದ್ದವ ನಾನು !
ಬಂದೆನು ಬಂದೆನು ಬಂದೇ ಬಂದೆನು
ಒಂದೇ ನಿಟ್ಟಿನ ಓಟದಲಿ !
ಕಣ್ಣ ಮುಚ್ಚಿ ತೆರೆವಷ್ಟರಲಿ
ಕ್ರಮಿಸಿದೆನೆಲ್ಲಾ ಲೋಕ
ಅಣ್ಣನಿಗೂ ಮುಂ ಗಮಿಸಿದೆನು
ಗಾಳಿಯಲಿ ನಾ ಬೇಗ !
ಅಣ್ಣಾ, ಏ ಗಣಪ್ಪಾ !
ನಾನು ಗೆದ್ದೆ ನೀನು ಸೋತೆ
ಜಾಣ ನಾನು ತಿಳಿಯಿತೇ
ಸಾಹಸಿಯು ತಿಳಿಯಿತೇ

ಗಣೇಶ: ಗರುವ ಪಡಬೇಡ ಓ ಕುಮಾರ
ಗೆಲುವು ನಿನಗೆ ದಕ್ಕದೋ ॥
ಲೋಕ ಲೋಕಗಳನು ತಮ್ಮ
ಗರ್ಭದಲ್ಲಿ ತಳೆದಿರುವರ
ಈ ಮಾತಾ ಪಿತರ ನಾನು
ಬಳಸಿ ಬಂದು ನಿಂದೆನೋ !

ನನ್ನ ನಿಲವೆ ಜಾಣ್ಮೆ ಗೆಲುವು
ನಿನ್ನದೆಲ್ಲವೊ ॥

ನಿನ್ನದಹುದು ವ್ಯರ್ಥ ಪಯಣ
ಬರಿದೆ ಬಾಹ್ಯ ಸಾಧನ !
ತತ್ತ್ವ ತುಂಗ ಶೃಂಗದಲ್ಲಿ
ಜ್ಞಾನ ಭಾವದಂಜನ !॥

ಷಣ್ಮುಖ : ಹ್ಞಾ! ಹೌದೆನು ? ಅಮ್ಮಾ. ಅಪ್ಪಾಜಿ..
ನಾನು ಮೂರ್ಖನಾದೆನೆ ನಾನು ಮೂರ್ಖಾದೆ
ದುಡುಕಿನಲ್ಲಿ ಹಾರಾಡುತ ಜ್ಯೋತಿಯನ್ನೇ ಮರೆದೆನೆ ॥

ನಾನು ಸೋತೆ ಸತ್ತೇ ಹೋದೆ
ಅಜ್ಞಾನಕೊಡೆಯನಾದೆನು
ವಿಶ್ವದೆಡೆಯದೊಡೆಯರನ್ನು
ವಿಸ್ಮೃತಿಯಲಿ ದೂಡಿದೆ ॥1॥

ಅಣ್ಣನಲ್ಲಿ ಪಂಥಕಟ್ಟಿ
ನಾನು ತಣ್ಣಗಾದೆನು
ಕಣ್ಣಿದ್ದು ಕುರುಡನಾಗಿ
ದಿಟವ ಕಾಣದಾದೆನು ॥2॥

ನಾನು ಪಾಪಿ, ಪಾಪಿ ನಾನು
ಗತಿಯ ಕಾಣದಿರುವೆನು
ದಾರಿ ತೋರಿರಮ್ಮಾಪ್ಪಾಜಿ
ಬೆಳಕ ನೀಡಿ ಸಲಹಿರಿ ॥3॥

ಪಾರ್ವತಿ : ಏಳು ಏಳೇಳು ಕಂದ
ಏಳು ಸ್ವಾಮಿ ಕುವರನೆ
ನಿನ್ನ ಶ್ರಮವು ವ್ಯರ್ಥವಲ್ಲ
ಸಾರ್ಥಕ ಸನ್ಮಾನ್ಯವು ॥ಏಳು ಏಳೇಳು ಕಂದ॥

ವಿಶ್ವ ಸಂಚಾರದಲ್ಲಿ
ವಿಶ್ವಂಬರ ನೀನಾದೆ
ಲೋಕ ಕಲ್ಯಾಣ ಕಾರ್ಯ
ಕಂಡೆಡೆಯಲಿ ನಡೆಸಿದ ॥ಏಳು ಏಳೇಳು ಕಂದ॥

ಕುಮಾರ ಸ್ಕಂದ ಷಣ್ಮುಖ
ಕುಮಾರಸ್ವಾಮಿ ಸೇವಕ
ವಿಶ್ವದೊಳಿತಿಗಾಗಿ ದುಡಿದ
ಅವನ ವೀರ ಬಾಲಕ ॥ಏಳು ಏಳೇಳು ಕಂದ ॥

ಶಿವ: ಕೇಳಿ ಮಕ್ಕಳೆ ಕೇಳಿ, ಗಣಧರ ರುದ್ರಕನ್ನಿಕೆಯರೇ ನೀವೂ ಕೇಳಿ
ದೇವತೆಳೆಂಬುವರು ದರ್ಪಿಷ್ಠರಲ್ಲ
ಜಗದ ಶೋಷಣೆ ಅವರ ಗಾಯತ್ರಿಯಲ್ಲ
ಲೋಕ ಕಲ್ಯಾಣಕ್ಕೆ ಲೋಕದಭ್ಯುದಯಕ್ಕೆ
ಅವರು ದಾಸರು ಮತ್ತೆ ಸೇವಕರೆ ಎಲ್ಲ !

ಗಣಪ ಷಣ್ಮುಖರಿವರು ತತ್ತ್ವದ್ವಯರು
ಗಣಪ ಜ್ಞಾನಕೆ ಪಡಿಯು
ಷಣ್ಮುಖನು ಕ್ರಿಯೆಗೆ
ಕ್ರಿಯೆ ಜ್ಞಾನಗಳು ಕೂಡೆ
ಭಾವಕ್ಕೆ ಬೆಳಕು !

ಒಬ್ಬನೆನ್ನಯ ಹೃದಯ
ಮತ್ತೊಬ್ಬ ಶ್ವಾಸ !
ಎರಡು ಕಣ್ಣಗಳವರು
ಶಾಶ್ವತರು ಚಿರರು !

ಓ ದೇವಿ ಓ ಗೌರಿ ನೋಡು ಬಾರೇ ಇಲ್ಲಿ
ನಿನ್ನ ಕಂದಮ್ಮಗಳ ಬೆಡಗು ಬೆಳಕ !
ಗಣಪನಹ ಜ್ಞಾನಿ, ಷಣ್ಮುಖನು ತಾ ಕ್ರೀಯೆ
ಬದುಕಿಗರ್ಥವನೀವ ಕಥೆಯ ಪುಲಕ !

ಪಾರ್ವತಿ ಅಹುದಹುದು :
ಜಡವು ಚೇತನವೆಂಬ ಎರಡು ತತ್ತ್ವಗಳುಂಟು
ಸ್ಥಾವರ ಜಂಗಮಗಳಹರು ಅವರು
ಒಂದು ಕ್ರಿಯೆ ಜ್ಞಾನವರು ಮತ್ತೊಂದು
ಎರಡು ಸೇರಿದರೇನೇ ಕಾರ್ಯಸಿದ್ದಿ !

ಕಂದಮ್ಮಗಳೇ ಕೇಳಿ –
ಅರಳಿದು ಮೂರಾಗಿ ಮೂರಳಿದು ಎರಡಾಗಿ
ಎರಡಳಿದು ಒಂದಾಗಿ ನಿಲ್ಲಬೇಕು
ಇದುವೆ ತತ್ತ್ವ ರಹಸ್ಯ ಇದೆ ಸೃಷ್ಟಿ ಮರ್ಮ
ಋಷಿ ಕವಿಯ ದರ್ಶನವು ಬೆಳಗಬೇಕು ॥

ಗಣಧರರು
ರುದ್ರಕನ್ನಿಕೆಯರು ಜೈ ನಮಂ ಪಾರ್ವತಿ ಪತೇ
ಎಲ್ಲರೂ ಹರ ಹರ ಮಹದೇವ ॥

ಜಯ ಜಯ ಶಂಕರ ಜಯ ಅಭಯಂಕರ
ಜಯ ಜಯ ಜಯ ಹೇ ಸರ್ವೇಶ್ವರಾ ॥
ಜಯ ಶಿತಿಕಂಠನೆ ಜಯ ಯತಿ ಶ್ರೇಷ್ಠನೆ
ಜಯ ಜಯ ಜಯ ಹೇ ಶಶಿಶೇಖರ ॥

ಜಯ ಜಯ ಶಂಕರ
ಜಯ ಶಿವ ಶಂಕರ
ಜೈ ಜೈ ಶಂಕರ
ಜೈ ಜೈ ಜೈ ..

–ಭದ್ರಂ–ಶುಭಂ–ಮಂಗಲಂ–

[ಕತ್ತಲಿನ ಮೊತ್ತ ರಂಗವನ್ನು ತುಂಬಿರುತ್ತದೆ ಆಗ
ಆ ಗರ್ಭದಿಂಮದ್ಭವಿಸಿ ಬಂದ ವಾಣಿ]
ವಂದೇ ಶಂಭುಂ ಉಮಾಪತಿಂ ಸುರಗುರಂ
ವಂದೇ ಜಗತ್ಕಾರಣಮ
ವಂದೇ ಪನ್ನಗ ಭೂಷಣಂ, ಮೃಗಧರಂ
ವಂದೇ ಪಶೂನಾಂಪತಿಂ
ವಂದೆ ಸೂರ್ಯ ಶಶಾಂಕ ವಹ್ನಿ ನಯನಂ
ವಂದೇ ಮುಕುಂದಪ್ರಿಯಂ
ವಂದೇ ಭಕ್ತಜನಾಶ್ರಯಂಚ ವರದಂ
ವಂದೇ ಶಿವಂ ಶಂಕರಂ ॥

[ರಂಗ ಬೆಳಕಾದಾಗ ಹಲವಾರು ವಟುಗಳ ಅಮೋಘ ನರ್ತನ ದೃಗ್ಗೋಚರ]
ಮೇಳ : ಭಕ್ತಿ ಎಂಬುದು ಶಕ್ತಿ, ಶಕ್ತಿ ಎಂಬುದು ಮುಕ್ತಿ
ಭಕ್ತಿಯೇ ಶಿವಾಜೀವರೈಕ್ಯಾನುರಕ್ತಿ

ಭಕ್ತಿ ಎಂಬುದು ಪಾಶ, ಭಕ್ತಿ ಎಂಬುದು ತೋಷ
ಭಕ್ತಿಯೇ ಮನತೊಳೆವ ಭಾಗೀರಥಿ

ಭಕ್ತಿ ಎಂಬುದು ಪ್ರೀತಿ ಭಕ್ತಿ ಎಂಬುದು ಪ್ರೇಮ
ಭಕ್ತಿ ಎಂಬುದು ಪ್ರಾಂಜಲದೊಲವು

ಭಕ್ತಿ ಎಂಬುದು ಶುದ್ದಿ, ಭಕ್ತಿ ಎಂಬುದು ಸಿದ್ದಿ
ಭಕ್ತಿ ಅಕ್ಕರೆಯಾ ಅಗರವು !

ಭಕ್ತಿ ಎಂಬುದು ಧಾತು, ಭಕ್ತಿ ಎಂಬುದು ದ್ರವ್ಯ
ಭಕ್ತಿ ಎಂಬುದು ಸಕಲಕಾಧಾರವು

ಭಕ್ತಿ ಎಂಬುದು ಭಾವ, ಭಕ್ತಿ ಎಂಬುದು ಜೀವ
ಭಕ್ತಿ ಎಂಬುದೆ ಭಗವದಾಕಾರವು !

[ನರ್ತನ ನಡೆಯುತ್ತಿರುವಾಗಲೆ ಹಿನ್ನೆಲೆಯಲ್ಲಿ ಗಂಭೀರವಾಗಿ  ಗಟ್ಟಿಯಾಗಿ ವಾಣಿ. ಆದರೆ ಸಂಗೀತ ನೃತ್ಯಗಳು ಕ್ಷೀಣಸ್ವರದಲ್ಲಿ ನಡೆಯುತ್ತಲೇ ಇರಬೇಕು]

ವಾಣಿ : ಅಹುದು ಭಕ್ತಿ ಎಂಬುದು ಒಂದು ಅತ್ಯದ್ಭುತ ಶಕ್ತಿ ವಿಶ್ವಾಂತರಾಳದಾ ಕುಂಡಿಲಿನಿ ಶಕ್ತಿ. ಅದು ಕ್ರತು ಶಕ್ತಿ ಕ್ರಿಯಾಶಕ್ತಿಯೂ ಹೌದು ! ವಿಶ್ವದ ಯಾವುದೇ ಶಕ್ತಿಯನ್ನು ತನ್ನೆಡೆಗೆ ಸೆಳೆಯಬಲ್ಲ ಪಾಶ ಕೂಡ! ಅದು ಅನುರಾಗದ ಬಳ್ಳಿಯೂ ಹೌದು ಲೋಕಾಲೋಕಗಳನ್ನು ಸೇರಿಸುವ ಸೂತ್ರವೂ ಹೌದು.
ಇಂತಹ ಭಕ್ತಿಗೊಡ್ಡಿದ ಒಂದು ಮಹಾ ಪ್ರತಿಮೆಯಾಗಿ
ಭವ್ಯ ಭಾವನೆಯ ಬೆಳಕಾಗಿ ನಿಂತಿದೆ ಭಕ್ತ ಮಾರ್ಕಂಡೇಯನ
ದಿವ್ಯ ಜೀವನದ ಭವ್ಯೇತಿಹಾಸ !

ಹಿಂದೆ ಕೃತಯುಗದಲ್ಲಿ ಶಿವನ ಅನುಗ್ರಹ ಆಶೀರ್ವಾದಗಳ ಫಲವಾಗಿ ಜನ್ಮ ತಳೆದ ಮಾರ್ಕಂಡೇಯ ಮೃಕಂಡು ಮುನಿವರರ ಏಕಮಾತ್ರ ಪುತ್ರ; ಅವರ ಧರ್ಮಪತ್ನಿ ಗುಣವತಿ ಶ್ರೀಮತಿ ಹೇರಂಬದೇವಿಯರ ಅಕ್ಕರೆಯ ಅಣುಗ, "ರಾಮಡಿ" ಎಂಬ ಬಿಲ್ವಾರಣ್ಯದಲ್ಲಿ ಅವನ ವಾಸ್ತವ್ಯ. ಅದು ಅವನ ತಪದ ತಾಣವೂ ಹೌದು. ಅವನು ಕಾರಣಿಕ ಶಿಶು ಶಿವದಂಪತಿಗಳು ಜಗತ್ಪಿತನನ್ನು ಕುರಿತು ತಪಗೈದು ಒಲಿಸಿ ವರವ ಬೇಡಿದರು. ದರ್ಶನವಿತ್ತ ಸ್ವಾಮಿ. "ದೀರ್ಘಾಯುಷಿ ಮೂರ್ಖ ಮಗ ಬೇಕೋ ಅಥವ ಅಲ್ಪಾಯುಷಿ ಮಹಾಜ್ಞಾನಿ ಸತ್ಪುತ್ರ ಬೇಕೊ" ಎಂದು ಪ್ರಶ್ನಿಸಿದ. ಮೃಕಂಡು ಮತ್ತು ಹೇರಂಬ ದೇವಿಯರು ಅಲ್ಪಾಯುಷಿಯಾದ ಸತ್ಪುತ್ರನ್ನೇ ಬೇಡಿ ಪಡೆದರು.
ಅದರಂತೆ ಮಾರ್ಕಂಡೇಯ ಹುಟ್ಟಿ ಹದಿನಾರು ವರುಷಗಳು ಮುಗಿಯುತ್ತಾ ಬರಲು ಅವನ ತಂದೆ ತಾಯರಿಗೆ ಚಿಂತೆ. ಅದನ್ನರಿತ ಮಾರ್ಕಂಡೇಯ ಕುಮಾರನು ಶಿವನನ್ನು ಒಲಿಸಲು ಹೋಗಿ ಘೋರ ತಪಗೈಯುತ್ತಾನೆ . ಅಂದು :

[ನರ್ತನ ಮುಂದುವರಿಯುತ್ತಿದ್ದಂತೆಯೇ ರಂಗಭೂಮಿ ಕತ್ತಲಾಗುವುದು]
–ದೃಶ್ಯ ಬದಲಾವಣೆ–
ಬ್ರಹ್ಮಮುರಾರಿ ಸುರಾರ್ಜಿತಲಿಂಗಂ ನಿರ್ಮಲಭಾಷಿತ ಶೋಭಿತ ಲಿಂಗಂ
ಜನ್ಮಜ ದುಃಖ ವಿನಾಶಕಲಿಂಗಂ ತತ್ಪ್ರಣಮಾಮಿ ಸದಾಸಿವಲಿಂಗಂ ॥

ದೇವ ಮುನಿಪ್ರವರಾರ್ಚಿ ಲಿಂಗಂ ಕಾಮದಹನ ಕರುಣಾಕರ ಲಿಂಗಂ
ರಾವಣದರ್ಪ ವಿನಾಶಕ ಲಿಂಗಂ ತತ್ಪ್ರಣಮಾಮಿ ಸದಾಶಿವ ಲಿಂಗಂ

ಸರ್ವ ಸುಗಂಧ ಸುಲೇಪಿತ ಲಿಮಗಂ ಬುದ್ಧಿವಿವರ್ಧನ ಕಾರಣ ಲಿಂಗಂ
ಸಿದ್ಧಿ ಸುರಾಸುರ ವಂದಿತ ಲಿಂಗಂ ತತ್ಪ್ರಣಮಾಮಿ ಸದಾಶಿವ ಲಿಂಗಂ

ಕನಕ ಮಹಾಮಣಿ ಭೂಷಿತ ಲಿಂಗಂ ಫಣಿಪತಿವೇಷ್ಠಿತ ಶೋಭಿತ ಲಿಂಗಂ
ದಕ್ಷಸುಯಜ್ಞ ವಿನಾಶನ ಲಿಂಗಂ ತತ್ಪ್ರಣಮಾಮಿ ಸದಾಶಿವ ಲಿಂಗಂ

ಕುಂಕುಮ ಚಂದನ ಲೇಪಿತ ಲಿಂಗಂ ಪಂಕಜ ಹಾರ ಸುಶೋಭಿತ ಲಿಂಗಂ
ಸಂಚಿತ ಪಾಪ ವಿನಾಶನ ಲಿಂಗಂ ತತ್ಪ್ರಣಮಾಮಿ ಸದಾಶಿವ ಲಿಂಗಂ

ದೇವಗಣಾರ್ಚಿತ ಸೇವಿತ ಲಿಂಗಂ ಭಾವೈರ್ಭಕ್ತಿಬಿರೇವಚ ಲಿಂಗಂ
ದಿನಕರ ಕೋಟಿ ಪ್ರಭಾಕರ ಲಿಂಗಂ ತತ್ಪ್ರಣಮಾಮಿ ಸದಾಶಿವ ಲಿಂಗಂ

ಅಷ್ಟದಳೋಪರಿ ವೇಷ್ಠಿತ ಲಿಂಗಂ ಸರ್ವಸಮುದ್ಭವ ಕಾರಣ ಲಿಂಗಂ
ಅಷ್ಟದರಿದ್ರ ವಿನಾಶನ ಲಿಂಗಂ ತತ್ಪ್ರಣಮಾಮಿ ಸದಾಶಿವ ಲಿಂಗಂ

ಸುರಗುರು ಸುರವರ ಪೂಜಿತಲಿಂಗಂ ಸುರವನ ಪುಷ್ಪ ಸದಾಶಿವ ಲಿಂಗಂ

ಪರಮಪದಂ ಪರಮಾತ್ಮಕ ಲಿಂಗಂ ತತ್ಪ್ರಣಮಾಮಿ ಸದಾಶಿವ ಲಿಂಗಂ

ಲಿಂಗಾಷಟಕಮಿದಂ ಪುಣ್ಯಂ ಯಃಪಠೇಚ್ಛಿವ ಸನ್ನಿರೌ
ಶಿವಲೋಕಮವಾಪ್ನೋತಿ ಶಿವೇನ ಸಹಮೋದತೇ ॥
****

ಅರೆರಂಗೆ – 1

ಅರ್ಚನಾ ಪದ್ಯ ಮುಗಿಯುವಷ್ಟರಲ್ಲಿ ಆರ್ಭಟ. ಶಬ್ದ ಸ್ಫೋಟ ಕತ್ತಲು ಬೆಳಕಿನ ಮಬ್ಬು ವಿನ್ಯಾಸದಲ್ಲಿ ನಾಲ್ಕೂ ಕಡೆಯಿಂದ ಕಪ್ಪು ಉಡುಪಿನ ಭೀಕರಾಕಾರದ ಯಮದೂತರು ಒಬ್ಬೊಬ್ಬರಾಗಿ ಒಂದೊಂದು ದಿಕ್ಕಿನಿಂದ ನರ್ತಿಸುತ್ತ ಬರುವರು. ಬಾಲಕನು ಶಿವಲಿಂಗವನ್ನು ಅಪ್ಪಿ ಹಿಡಿಯುವನು.

1. ಯಮದೂತರ ಭೀಕರ ನೃತ್ಯ : 1 (ಬೀಜಿಮ್‌ನಲ್ಲಿ)

ಚಣಕಾಲತಡೆ ರಂಗ ಕತ್ತಲಾಗುವುದು

ಅರೆರಂಗೆ – 2

- ಕತ್ತಲು –
- ರಂಗ ನಿಧಾನವಾಗಿ ಬೆಳಕಾಗುವುದು –
- ಶಿವ ಪಾರ್ವತಿಯರು –

1. ಶಿವನ ಲಾಸ್ಯ (ಬೀಜಿಮ್‌ನಲ್ಲಿ) 1

(ಅನುಕ್ರಮವಾಗಿ ಇಕ್ಕೆಲಗಳಲ್ಲೂ ನಡೆಯುವುವು)
(ಇಲ್ಲಿ ಕ್ರಿಯೆ ನಡೆಯುವಾಗ ಅಲ್ಲಿ ಕತ್ತಲು; ಅಲ್ಲಿ ಕ್ರಿಯೆ ನಡೆಯುವಾಗ ಇಲ್ಲಿ ಕತ್ತಲು)

****
ಶಿವ : ಜಗದೀಶ್ವರಿ,
ಇದು ಭಕ್ತ–ಭಗವಂತರ ಸ್ಪರ್ಧೆ, ಭಕ್ತನ ಭಕ್ತಿ ಹೆಚ್ಚೋ ಭಗವಂತನ ಶಕ್ತಿ ಹೆಚ್ಚೋ ಎಂಬ ವಿಶುದ್ಧ ಹೋರಾಟ ಈ ಹೋರಾಟದಲ್ಲಿ ಗೆಲುವು ಯಾರಿಗೆ ಹೇಳು ?
ಪಾರ್ವತಿ : ಭಕ್ತನಿಗೆ !

ಶಿವ : ಅಹುದು
ಸತ್ಯಸ್ಯ ಸತ್ಯ ನಿನ್ನ ನುಡಿ ಗಿರಿಜೆ
ಯಾವಾಗಲೂ ಭಕ್ತಿಗೇ ಗೆಲವು !
ಆ ಕಾರಣ
ಗೆಲ್ಲುವವನೇ ಭಕ್ತ ಸೋಲುವವ ಭಗವಂತ !
ಬಾ ಈ ಮುಂದಿನ ಆಟ ನೋಡೋಣ !

[ಯಮದೂತರ ನಿರ್ಗಮನದ ತರುಣದಲ್ಲೇ ಯಮಧರ್ಮನ ಪ್ರವೇಶ. ಪಾಶಯುಕ್ತ ಯಮನು ಕೋಣನ ಬೆನ್ನೇರಿ ಬರುವನು. ಅವನ ವಿಕಟಾಟ್ಟಹಾಸ ಭೀಕರ, ಹಿನ್ನೆಲೆಯ ಚಂಡೆ ತಮಟೆಗಳ ನಿರ್ಘೋಷ ಕರ್ಣಕಠೋರ!]

ಯಮ:
ಫಡಫಡಾ ನಿನಿಗಿನಿತು ಸೊಕ್ಕೇನೊ ಹುಡುಗ?
ಮೃತ್ಯುವನು ಅಂಜಿಸುವ ಸಾಹಸದ ಬೆಡಗ !
ಮೃಕಂಡು ಮುನಿವರನ ಹೃದಯ ಮೃತ್ಪಿಂಡ
ಗುಣವತಿಯ ಸಿರಿಖಂಡ, ರಾವಡಿಯ ಗಾವಿಲನೆ,

ನಿನ್ನ ರುಂಡವನಿಲ್ಲೆ ಚೆಂಡಾಡಿ ಕೊಂಡೊಯ್ವೆ
ಉದ್ದಂಡ ಪಾಶದಿ ಸೆಲೆದೊಯ್ವೆ ಪುರಿಗೆ
ಆ ನನ್ನ ಯಮಪುರಿಗೇ ॥

[ಪಾಶವನ್ನು ಬೀಸುವನು. ಚಣಕಾಲ ಅವನ ಪಾಶ ಸೆಳೆವ ಸಾಹಸದ ಅಭಿನಯ ಗೋಚರ. ಮಾರ್ಕಂಡೇಯನ 'ಶಿವಪಠಣ' ಕೇಳಿಸುತ್ತಿರುವುದು. ಅನಂತರ ಗುಡುಗು ಮಿಂಚು ಸ್ಫೋಟದೊಂದಿಗೆ ಶಿವ-ಪಾರ್ವತಿಯರ ತಾಂಡವ- ಮಧ್ಯರಂಗದ ಮೇಲೆ ಅದು ತುಂಬ ರೋಚಕವಾಗಿರಬೇಕು; ಪರಿಣಾಮಕಾರಿಯೂ ಆಗಿರಬೇಕು. ಯಮಧರ್ಮ ಭೀತನಾಗಿ ಒಂದೆಡೆ ಸರಿದು ನಿಲ್ಲುವನು]

ಶಿವ: ನಿಲ್ಲು ಧರ್ಮ ನಿಲ್ಲು !
ಮೃಕಮಡುಮುನಿ ತನಯ ಈ ಚಿಣ್ಣ ಆ ಅಣುಗ
ಮಾರ್ಕಾಂಡನಿಹನಿದೋ ನನ್ನದೆಯ ಮಾರ್ತಾಂಡ !
ದಿವ್ಯ ದೇಹಿಯು ಇವನು ದೇವತಾತ್ಮ !
ಇವನೊಲಿವುದೇ ನನ್ನ ಗೆಲುವು ತಿಳಿಯೊ
ಸೆಳೆಯದಿರು ಪಾಶದಲಿ, ಯಮಪುರಿಗೆ ಒಯ್ಯದಿರು !

ಯಮ : ಶರಣು ಶರಣ್ಯೆ ಶಿವನೆ ಓ ಜಗತ್ಪಿತನೆ
ಆಯು ಮುಗಿದಾವ್ಯಕ್ತಿ ಭಕ್ತಮಾರ್ಕಂಡೇಯ
ಇವನ ಹರಣವ ನಾನು ಬಿಡುವುದೆಂತೈ ತಂದೆ
ಬ್ರಹ್ಮ ಲಿಖಿತವ ಅಳಿಸೆ ಶಕ್ತ ನಾನಲ್ಲ !

ಶಿವ : ಕೇಳು ಕೇಳಲೆ ಮಿತ್ರ ಯಮಧರ್ಮರಾಯ,
ನನ್ನ ಭಕ್ತರು ನನಗೆ ಪ್ರಾಣಕಿಂತಲು ಮಿಗಿಲು
ಪ್ರಿಯರವರು, ಅಹುದವರು ಅವರೆನ್ನ ಭಾಗ್ಯ !
ಅವರ ರಕ್ಷಣೆ ನನ್ನ ಆದ್ಯ ಕರ್ತವ್ಯ
ಅವರ ವೈಭವೀಕರಣ ನನ್ನ ಸೌಭಾಗ್ಯ !

ಕೇಳು –
ಮದ್ಭಕ್ತ ದ್ವೇಷಿಯೋ ಮೋಹಾಪರಾಧ್ಯ ನರಾಧಮಃ
ನ ಸಹೇತಂ ದುರಾತ್ಮಾನಂ ಸಹೆಮನ್ಯಪರಾಧಿನಂ
ಮದ್ಭಕ್ತ ರಕ್ಷಣಾಯೈವ ಮಮ ಸರ್ವಹಿಚೇಷ್ಟಿತಂ
ಇತಿ ಜ್ಞಾನತಾಹಿ ಮದ್ಭಕ್ತಾಃ ಪ್ರಾಣೇಭ್ಯೋಸಿ ಗರೀಯಸಃ

ಅದರಿಂದೆ ಪೇಳುವೆನು :
ಮಿಗಿಲು ಭಕ್ತರ ಹಿತವು
ನೀನವರ ಮುಟ್ಟದಿರು, ನೀನವರ ಕೆಣಕದಿರು
ಇದು ನನ್ನ ಕಟ್ಟಾಜ್ಞೆ, ಕಡೆಯಾಜ್ಞೆಯೂ ಹೌದು !

ಯಮ : ಇತ್ತ ಪುಲಿ, ಅತ್ತ ದರಿ ! ಉಭಯ ಸಂಕಟವೆನಗೆ
ಏನಗೈಯಲಿ ಶಿವನೆ ? ಮಾರ್ಗದರ್ಶನ ನೀಡು.

ಶಿವ: ಯಮದೇವ,
ಇವನೊಮ್ಮೆ ನುಡಿದಂತೆ ಹದಿನಾರು ವಯದವನು

ಮಾರ್ಕಾಂಡನೀ ಮಗುವು ಇಂದು ಸತ್ತವನಹನು !
ಈ ಮುಂದೆ ಮರುಹುಟ್ಟು ನನ್ನಿಂದೆ. ಆಯುವದು ನನ್ನಿಂದೆ.
ಇವನು ನೂತನ ದೇಹಿ ಭವ್ಯ ಜೀವಿ !
ಭಕ್ತ ಮಾರ್ಕಂಡೇಯ ಶ್ರೀ ಚಿರಂಜೀವಿ ! !

ಯಮ : ಆಯಿತಾಯಿತು ತಂದೆ ಮಣಿಯುವೆನು ನಿನಗಿಂದೆ !
ಭಕ್ತ ಮಾರ್ಕಂಡೇಯ ಭಕ್ತ ಜನ ಕಣ್ಮಣಿಯೆ
ಮೃತ್ಯುವನು, ಗೆದ್ದವನೆ, ಭಕ್ತಿಮಾರ್ಗದ ಬೆಳಕೆ
ನೀನು ಚಿರಂಜೀವಿ, ನೀ ಧನ್ಯ ಜೀವಿ !
ಗೆಲಮಕ್ಕೆ ಶುಭಮಕ್ಕೆ ನಿನಗಕ್ಕೆ ಮಂಗಲವು !

ಮಾರ್ಕಂಡೇಯ : ಧನ್ಯ  ನಾ ಯಮದೇವ ಧನ್ಯ ಜೀವರ ಜೀವ
ನಿನ್ನ ಆಶೀರ್ವಚನ ಅಕ್ಷಯವು ಆಗಿರಲಿ
ಲೋಕದೆಲ್ಲೆಡೆ ನಿನ್ನ ನ್ಯಾಯ ಶಾಶ್ವತ ನಿಲಿ
ಸತ್ಯ ಬೆಳಗಲಿ ಎಂಬ ಶಾಶ್ವತನು ನೀನೆಂಬೆ
ಎಲ್ಲೆಲ್ಲಿಯೂ ಶಾಂತಿ ನೆಲಸಲೆಂದೆ !

ಪಾರ್ವತಿ : ಮಾರ್ಕಂಡೇಯ, ನಮ್ಮ ಮುದ್ದಿನ ಮಗಳೆ,
ನಮ್ಮ ಕಣ್ಣಿನ ಬೆಳಕೆ, ಕರುಣೆಯಾ ಕಂದ,
ಹಾಲುಗಲ್ಲದ ಹಸುಳೆ ಮಾರ್ಕಂಡೇಯನೇ
ನಿನ್ನ ಭಕ್ತಿಗೆ ಮೆಚ್ಚಿ ದರ್ಶನವನಿತ್ತಿಹೆವು
ಮುಗ್ಧ ಭಕ್ತನೆ ನಿನ್ನ ಜಗದಿ ಮೆರೆಸುವೆವು
ನೀನ ಚಿರಂಜೀವ ! ನೀ ಚಿರಂಜೀವ !
ಭಕ್ತ ಮಾರ್ಕಂಡೆಯ ನೀ ಚಿರಂಜೀವ ॥

ಮಾರ್ಕಂಡೆಯ : ಕಂಡೆ ಶಿವನ ಕಂಡೆ
ದೇವಾದಿ ದೇವನ ದಿವ್ಯ ಪ್ರಭಾವನ ॥ಕಂಡೆ॥

ಜಡೆಯಲಿ ಗಂಡೆ ತೊಡೆಯಲಿ ಗ್ಣಿ
ಮುಡಿಯಲಿ ಚಂದ್ರನ ಮುಡಿದವನ
ರುಂಢ ಮಾಲಾಧರ ಖಟ್ವಾಂಗಧರನ
ಕೆಂಡಗಣ್ಣಿನ ಹನೆಯ ಭಸ್ಮಾಂಗದೇಹಿಯ ॥ಕಂಡೆ॥

ಸರ್ಪಭೂಷಣನ ಕಂದರ್ಪ ಹರನ
ಧೂರ್ತ ದೈತ್ಯರ ತ್ರಿಪುರ ಸಂಹಾರನಾ
ಆತ್ ರಕ್ಷಕನಾ ಕವಿ ಕರ್ತಾರನ
ಭಸ್ಮ ಸುಶೋಭಿತ ರುದ್ರಾಕ್ಷಿಧರನಾ ॥ಕಂಡೆ॥

ಶೂಲಪಾಣಿಯ ಕಂಡೆ ಫಾಲನೇತ್ರನ ಕಂಡೆ
ಲೀಲೆಯೊಳಾಗುವ ಅಭವನ ಕಂಡೆ
ನೀಲಕಂಠನ ಕಂಡೆ ಕಾಲಹರನಾ ಕಮಡೆ
ನೂಪುರಾಳಾಪದ ಯುಗಳ ಪಾದನ ಕಂಡೆ ॥ಕಂಡೆ॥

– ತೆರೆ –

**ಚೀಲಾಳ**

**[ರಂಗ ಕತ್ತಲಾಗುವುದು ಆಗ..]**

(ಹಿನ್ನೆಲೆಯಲ್ಲಿ) ನೆಚ್ಚಿದೆನೆಂದರೆ ಮೆಚ್ಚಿದೆನೆಂದರೆ
ಸಲೆ ಮಾರು ಹೋದೆನೆಂದರೆ
ತನುವನಲ್ಲಾಡಿಸಿ ನೋಡುವ ನೀನು
ಮನವನಲ್ಲಾಡಿಸಿ ನೋಡುವೆ ನೀನು
ಧನವನಲ್ಲಾಡಿಸಿ ನೋಡುವೆ ನೀನು
ಇದಕ್ಕೆಲ್ಲ ಅಂಜದಿದ್ದರೆ
ಭಕ್ತಕಂಪಿತ ನಮ್ಮ ಕೂಡಲ ಸಂಗಮದೇವ ॥

ನಿವೇದಕ : ಅಣ್ಣನ ಅಮೃತವಾಣಿಗೆ ಒಡ್ಡಿದ ಪ್ರತ್ಯಕ್ಷ ಪ್ರಮಾಣವೊ ಎಂಬಂತಿರುವುದು ಶಿವಭಕ್ತ ಸಿರಿಯಾಳ ದೇವನ ಚರಿತೆ. ಕಾಂಚಿಯ ಪಲ್ಲವ ಚಕ್ರವರ್ತಿ ನರಸಿಂಹವರ್ಮನ ದಂಡಾಧೀಶನಾಗಿದ್ದ ಈತ ಬಾದಾಮಿಯ ಚಾಲುಕ್ಯರೊಡನೆ ನಡೆದ ವಾತಾಪಿ ಯುದ್ಧದ ಕಗ್ಗೊಲೆ ಕಂಡು ಹೇಸಿ ವೈರಾಗ್ಯ ಪರವಶನಾಗಿ ಶ್ರೇಷ್ಠ ಶಿವಭಕ್ತನೆನಿಸಿದ. ಚಂದಲೆ ಅವನ ಧರ್ಮಪತ್ನಿ; ಚೀಲಾಳ ಮಗ. ಕೇವಲ ಏಳು ವರ್ಷದ ಹಸುಳೆ. ಇವನ ಮೈಮಾಂಸವನ್ನು ಶಿವ ಬೇಡಿ ಪಡೆಯುತ್ತಾನೆ. ಆ ಸಂದರ್ಭದ ಸಿರಿಯಾಳ ಚಂದಲೆಯರ ಅಸಾಮಾನ್ಯ ಭಕ್ತಿಯ ಸ್ಪಷ್ಟ ದರ್ಶನ ಇಲ್ಲಾಗುತ್ತದೆ. ಗುಣವಂತ ಮಕ್ಕಳನ್ನು ಪಡೆಯುವುದಕ್ಕೂ ಭಾಗ್ಯವಿರಬೇಕು. ಅದಕ್ಕಿತ್ತ ನಿದರ್ಶನ ಶಿವಭಕ್ತ ಸಿರಿಯಾಳ ದೇವನ ಬದುಕಿನ ಈ ಒಂದು ಘಟನೆ.

[ನಾಲ್ಕೆಂಟು ನರ್ತಕ ನರ್ತಕಿಯರೊಡನೆ ದೃಶ್ಯ ಆರಂಭ. ನರ್ತನ ನಡೆಯುತ್ತಿರುವಂತೆಯೇ ಮೇಲಿನ ನಿವೇದನೆ Super Impose ಆಗಿ ಆಗಿಬರುವುದು]

–ನೃತ್ಯ ಸಾಮೂಹಿಕ–
ಭರತ ಖಂಡದ ದಕ್ಷಿಣದಲ್ಲಿ
ಪಲ್ಲವರಾಳಿದ ಕಾಂಚಿಯಲ್ಲಿ
ಸಿರಿಯಾಳನೆಂಬೊ ಶಿವಭಕ್ತನಿದ್ದ
ಭಕ್ತಿಗೆ ಬೇರೊಂದು ಹೆಸರಾಗಿದ್ದ
ಚಂದಲೆ ಹೆಂಡತಿ ಚೀಲಾಳ ಮಗನು
ಕಂಡರು ಸ್ವರ್ಗದ ಸಂಸಾರವನು ॥

ಸಿರಿಯಾಳ ದೇವಗೆ ಭಕ್ತಿಯ ನೇಮ
ಜಂಗಮ ದಾಸೋಹ ನಿತ್ಯದ ನಿಯಮ
ಶಿವನು ಪರೀಕ್ಷಿಸಲೆಂದೆ ಹವಣಿಸಿ
ಜಂಗಮ ಸ್ವಿಧಂತಾಗಿಸಿದ ॥

ತಾನೇ ತಾನೊಬ್ಬ ಬೈರಾಗಿಯಾಗಿ
ನರಮಾಂಸ ಭುಂಜಿಸಬೇಕೆಂದು ಒಪ್ಪಿಸಿ
ಸಿರಿಯಾಳದೇವನ ಮನೆಗೈತಂದ !

– ದೃಶ್ಯ ಬದಲಾವಣೆ –

[ಮನೆ ಮುಂದೆ ಬಂದ ಜಂಗಮನ ಸ್ವಾಗತಕ್ಕಾಗಿ ಚಂದಲೆ ಮತ್ತು ಗೆಳತಿಯರು ತುಂಬಿದ ತಂಬಿಗೆ, ತಟ್ಟೆ ಹಿಡಿದು ನಿಂತಿದ್ದಾರೆ. ನರ್ತಿಸುತಾ ಸ್ವಾಗತಿಸುತ್ತಾರೆ]

ಎಲ್ಲರೂ : ಸ್ವಾಗತವು ಸ್ವಾಗತವು ಸುಸ್ವಾಗತವು ನಿಮಗೆ

ಸ್ವಾಗತವು ಜಂಗಮ ಜ್ಯೋತಿರೂಪರಿಗೆ ॥ಪ॥

ಶಿವರುದ್ರ ಭದ್ರರಿಗೆ ಶುದ್ಧಾತ್ಮ ಹೃದಯರಿಗೆ
ಸಕಲಸದ್ಯೋಜಾತ ಉದ್ಯಭೂತರಾದರಿಗೆ
ಅಖಿಲಾಂಡ ಬ್ರಹ್ಮಾಂಡ ಜೀವಕೋಟಿಗಳಲ್ಲಿ
ಅಕ್ಕರೆಯ ಸಕ್ಕರೆಯನಿಕ್ಕಿ ಘೋಷಿಸುವವಗೆ ॥1॥

ಚಿದ್‌ರತ್ನ ಚಿದ್ರೂಪಿ ಚಿದ್ಘನಾಚಾರ್ಯರಿಗೆ
ಉದ್ಬೋಧಗಳನಿತ್ತು ಸಲಹುವಾದ್ಯರಿಗೆ
ಆ ಚಿರಂತನ ಚಿಲುಮೆ ಚಿನ್ಮಯಗೆ ಚೇತಸಗೆ

ನಿತ್ಯ ನಿರ್ಮಲನಾದ ನಿರ್ಗುಣ ನಿರಂಜನಗೆ ॥2॥

ಚಂದಲೆ: ದೇವ ಬಂದ ಮನೆಗೆ ಶರಣರ
ಕಾವ ಬಂದ ಮನಕೆ ॥ಪ॥
ಮಹದೇವ ಬಂದ ತಿರೆಗೆ ।
ಜಯದೇವನಾಗಿ ಧರೆಗೆ ॥ಅನು.ಪ॥

ದೇವ ಬಂದ ನಮ್ಮ ಜೀವ ಬಂದನವ್ವ
ಸಕಲವನು ಸಲಹುವಂಥ ಸರ್ವೇಶ ಬಂದನವ್ವ ॥1॥

ರಾಗರಹಿತ ಬಂದ ಭೋಗದೂರ ಬಂದ
ತ್ಯಾಗವೀರ ಬಂದ ಶತಶೃಂಗವಾಸಿ ಬಂದ ॥2॥

ನೇಪ್ಯ: ಗದ್ಯ: ಆಗ ಜಂಗಮರೂಪಿಯಾದ ಈ ಕಪಾಲಿಯು
ಬೇಡಿದ್ದಾದರೂ ಏನು?

ಶಿವ : ಸಿರಿಯಾಳ ಚಂದಲೆಯರೆ ನಿಮಗೆ
ಅರಿವಿರಲಿ ನೀಡಿಕೆಯಲಿ
ನಾನು ಬಯಸಿದಿದುಂಟು ನರಮಾಂಸ ಭಕ್ಷ್ಯ
ಆದರದು ಶಿಶುವಿನದು ಸತ್ಕುಲ ಪ್ರಸೂತನದು
ಸದ್ಭಕ್ತ ಸರ್ವಗುಣ ಸರ್ವನ ಪ್ರಿಯನದ್ದು
ಹಸುಳೆ ಏಳನು ದಾಂಟಿ ಎಂಟರಲ್ಲಿರಬೇಕು.
ವಂಶ ವರ್ಧಕನಾಗಿ ಒಂದೇ ಕುಡಿ ಇರಬೇಕು.
ನಿಮ್ಮ ಚೀಲಾಳನೇ ನನಗೆ ಪ್ರಸಾದ!
ನೀಡುವಿರಾ? ಇಲ್ಲವೇ ಕಾಡುವಿರ? ಹೇಳಿ

ಸಿರಿಯಾಳ : ಲಿಂಗ ಜಂಗಮ ಪೂಜೆ ನಮ್ಮಾದ್ಯ ಕರ್ತವ್ಯ
ಲಾಭ ನಷ್ಟಗಳೆಣಿಕೆ ನಮಗಿಲ್ಲ ತಂದೆ !
ಮಜ್ಜನಕೆ ದಯಮಾಡಿ ಜ್ಯೋತಿಪೂರ್ಣರೆ ನೀವು
ಸಜ್ಜುಗೊಳಿಸುವೆ ನಾವು ಪೂಜೆಗೆಡೆಗಾಗಿ !
ಶಾಲೆಯಲಿ ಶಿಶುವಿಹಿದು ಬೇಗ ತರುವೆನು ತಂದೆ
ಅವನನರ್ಪಿಸಿ ತಮಗೆ ಧನ್ಯರಾಗುವೆವೆಲು ॥

ಶಿವ : ಬೇಗ ನಡೆಯಲಿ ಮತ್ತೆ ಭಾವುಕರು ಆಗದಿರಿ
ಭಕ್ತಿ ಭಾವನೆಯಿಂದ ಕಂದನನ್ನರ್ಪಿಸಿರಿ ॥
ಬಂದೇ ಬರುವೇ ನಾನು ಮಜ್ಜನವ ಮುಗಿಸಿ!
ಧೂರ್ಜಟಿಯ ಪುಟಗೊಳಿಸಿ ಪೂಜೆಗಳ ಸಲಿಸಿ ॥

(ನಿರ್ಗಮನ)
(ಸಿರಿಯಾಳ ಚಂದಲೆಯರು ಚಿಂತಾಕ್ರಾಂತರಾಗಿ ನಿಲ್ಲುವರು)
ನರ್ತಕಿಯರು : (ಭಾವಾಭಿನಯ ಮಾಡುತ್ತಾ)
ಅಯ್ಯೋ ಶಿವನೇ ! ಅಯ್ಯಯ್ಯೋ ಭವನೇ
ಏನ ಬೇಡಿದೆ ತಂದೆ ! ಏಕೆ ಕಾಡುವೆ ಬರಿದೆ !
ಕಂದನನು ಕಡಿದುಂಡು ಬಾಳಬಹುದೆ ! ಬಾಳಬಹುದೇ !

ದೃಶ್ಯ :2 ಶಾಲೆ
ಮಕ್ಕಳು : ನಾವು ಮಕ್ಕಳು !
ನಾವು ದೇವರೊಕ್ಕಲು ॥ಪ॥
ನಮ್ಮ ಲೋಕದಲ್ಲಿ ಇಲ್ಲ
ಯಾವ ಕತ್ತಲು ॥ಅನು.ಪ॥

ಬೆಳಕು ಬೆಳಕು ಬೆಳಕೆ ಎಲ್ಲ
ಥಳುಕು ಪಳುಕು ಎಂಥದಿಲ್ಲ
ಕೊಳೆಯ ಮನಸು ನಮ್ಮದಲ್ಲ
ಗಂಗೆಯಂತೆ ಪಾವನ
ಹಾಲಿನಂಥ ಚೇತನ ॥1॥

ಹಳ್ಳ ದಿಣ್ಣೆ ಮೇಲುಕೀಳು
ಸುಳಿಯದಿಹುದು ಯಾವ ನೆರಳು
ಎಲ್ಲರೊಂದೆ ಒಂದೇ ಕರುಳು
ಎಂಬ ಭಾವ ನಮ್ಮದು
ಸೋದರತ್ವ ತಪ್ಪದು ॥2॥

(ಮಾರುವೇಷದ ಶಿವನ ಪ್ರವೇಶ)
ಶಿವ: ಬನ್ನಿರಿ ಬನ್ನಿರಿ ಮಕ್ಕಳೇ
ಸಿಂಗಾರದ ಹೂದೋಟಕೆ
ಭೃಂಗಾರಕರಾಡುವ ನೆಲಕೆ ॥ಬನ್ನಿರಿ॥

ಚಿಟ್ಟೆಗಳಾಡುವ ಪಟ್ಟಣಕೆ
ಪುಟ್ಟರೆ ಚಿಣ್ಣರೆ ನೀವ ಬನ್ನಿ
ಬಂಡನು ಉಂಡಾ ದುಂಬಿಗಳು
ಝೇಂಕೃತಿಗೈಯುತ ಹಾಡುವುವು
ಚಿಗುರನು ಮೆದ್ದಾ ಕೋಗಿಲೆ
ಕುಹು ಕುಹು ಕೂಜನಗೈಯುವುವು ॥ಬನ್ನಿರಿ॥

ರಂಗ ಸಿಂಗ ಮಾಧು ಮುದ್ದು
ಗಂಗೆ ತುಂಗೆ ಪುಟ್ಟಿ ಗೌರಿ
ಎಲ್ಲಾ ಎಲ್ಲ ಬನ್ನೀರೇ
ಸೌಂದರ್ಯದ ಸೀಮೆಗೆ ಬನ್ನಿರೇ
ನಯನ ಮನೋಹರ ಸಾಗರಕೆ
ಹಿಂಸೆಯ ತಿಳಿಯದ ಸಗ್ಗಕ್ಕ ॥ಬನ್ನಿರಿ॥
ನವಿಲಿನ ಜಾಗರವಾಡೋಣ
ಗರಿಗಳ ಕೆದರುತ ಕುಣಿಯೋಣ
ಕೊಳಗಳ ಅಲೆ ಅಲೆ ಅಲೆ ಮೇಲೆ
ಹಂಸೆಯ ನಡಿಗೆಯ ನಡೆಯೋಣ
ಜುಳು ಜುಳು ಜುಳು ನೀರಾಟದಲಿ
ತಾವರೆ ತೇರಲಿ ತೇಲೋಣ ॥ಬನ್ನಿರಿ ॥

(ಗದ್ಯ) ಅಪ್ಪಾ ನಿಮ್ಮಲ್ಲಿ ಚೀಲಾಳ ಯಾರು ?

ಮಕ್ಕಳು : ಇವನು ಇವನೆ ಇವನೆ ತಾತ ನಮ್ಮ ಚೀಲಾಳ
ಇವನೆ ನೋಡಿ ನಮ್ಮ ಕಣ್ಣು ನಮ್ಮ ಬಲ್ಲಾಳ
ಚಿಲ್ಲಾಳ ಚಿಲ್ಲಾಳ ಚಿಲ್ಲಾಳ
ಚಿಲ್ಲಾಳ ಚಿಲ್ಲಾಳ ಚಿಲ್ಲಾಳ
ಇವನೇ ನಮ್ಮ ಬಾಳ ಮೇಳ
ಇವರೇ ನಮ್ಮ ಉಸಿರು ಜಾಲ
ನಮ್ಮ ನಿಮ್ಮ ಪ್ರೀತಿ ಚೇಲ
ಇವನೇ ನಮ್ಮ ಚೀಲಾಳ ॥

ಶಿವ : ನೀನೇ ಏನಪ್ಪಾ ಆ ಚೀಲಾಳ !
ಸಿರಿಯಾಳ ಚೆಂಗಳೆಯರ ಸತ್ಪುತ್ರ ?

ಚೀಲಾಳ : ಹೌದು ತಾತ. ಆ ಭಾಗ್ಯ ನನ್ನದು ಕೇಳಿ
ಎಳೆಯರ ಬಳಗದ ಗಿಳಿ ನಾನು
ಗಳ ಗಳ ಗಳಹುದೆ ನುಡಿಗಳನು ॥ಪ॥

ಚೆಂಗಳೆ ತಾಯಿಯ ಕರುಳಕುಡಿ
ಸಿರಿಯಾಳ ತಂದೆಯ ಎದೆಯಗುಡಿ ॥ಅನು.ಪ॥

ಚೀಲಾಳನೆಂಬರು ನನ್ನನ್ನು
ಚಿನ್ಮಯ ಶಿವನಾ ಶಿಶುವನ್ನು
ಅವನಾ ಕರುಣೆಯ ಕಂದ ನಾನು
ನಿಮ್ಮೆಲ್ಲರ ಪ್ರೀತಿಯ ಅನುಗ ನಾನು ॥1॥

ತಿಂಗಳ ಮಾಮನ ಕಂಗಳಲೆ
ಬೆಳದಿಂಗಳ ಪುತ್ಥಳಿಯಾದವನು
ಮಂಗಳ ಲೋಕದ ಅಂಗಳದಿ
ನಳನಳಿಸುವ ಬೆಳೆಸಾದವನು ॥2॥

(ಮಕ್ಕಳು ನರ್ತಿಸುತ್ತಲೆ ಮರೆಯಾಗುವರು ಚೀಲಾಳ ಮತ್ತು ಶಿವ ಹೊರತು)
(ದೃಶ್ಯ ಬದಲಾವಣೆ: ಅರಣ್ಯ ಗೋಚರ)

ಶಿವ : ಅಯ್ಯೋ ಅಯ್ಯೋ ಮುದ್ದಿನ ಕಂದ
ಮನಸಿಗೆ ಮುದ ತಂದ ನನ್ನಾನಂದ
ಕೊಂಡು ತಿನ್ನವರಲ್ಲೊ ಪಾಪಿಗಳು । ನಿನ್ನ
ಚಿಂದಿಗೈಯುವರಲ್ಲೊ ಆ ಪಾಷಂಡಿಗಳು
ಏನ ಹೇಳಲಿ ಮಗುವೆ ನಿನ್ನ ತಾಯ್ತಂದೆ
ಮನುಜರಲ್ಲವಯ್ಯ ಪೈಶಾಚಗಳು ॥ಅಯ್ಯೋ॥

ಒಬ್ಬನೆ ಮಗನು ವಂಶಕಿರುವ ಕುಡಿ
ಹಾಲುಗಲ್ಲದ ಹಸುಳೆ ಕೋಮಕ ಶರೀರಿ
ಸದ್ಬುದ್ಧಿ ಸತ್‌ಶೀಲ ಸಾಕಾರಮೂರ್ತಿ
ವಿನಯ ಸಂಪನ್ನನೆ ನನ್ನ ಚೀಲಾಳ ॥ಅಯ್ಯೋ॥

ಯಾವನೊ ಭೈರವ ಬಂವಾ ಎಂದು
ನಿನ್ನನ್ನೆ ಕೈಯಾರ ಕತ್ತರಿಸಿಂದು
ಪಾಕವ ಮಾಡಿ ಕಪಾಲಿಗೆ ನೀಡಿ
ಪ್ರಸಾದವೆಂದು ಅರ್ಪಿಪರಂತೆ ॥ಅಯ್ಯೋ॥

ಕೇಳೆನ್ನ ಮಾತ ಚೀಲಾಳ ಚಿಣ್ಣ
ವೇಳೆಯ ಕಾಯದೆ ಓಡೆನ್ನ ಬಣ್ಣ
ಕಾಡು ಮೇಡನು ಸೇರಿ ತಲೆಮರೆಸಿಕೊಳ್ಳಣ್ಣ
ಬಾಡದೇ ಬದುಕಣ್ಣ ನಾ ಬಹೆನೊ ಕಿಣ್ ॥ಅಯ್ಯೋ॥

ಚೀಲಾಳ: ಎಂಥ ಮಾತು ಎಂಥ ಮಾತು ಎಂಥ ಮಾತಿದು
ದೇವತಾತ್ಮರಾದ ತಂದೆ ತಾಯಿ ತೊರೆವುದು ॥

ನೀನು ವೃದ್ಧ ಹಣ್ಣು ಮುದುಕ ನಿನ್ನ ವಯಸಿಗೆ
ತಕ್ಕ ನುಡಿಯು ಅಲ್ಲ ತಾತ, ಕ್ಷಮಿಸಿ ನೋಯಿಸೆ

ಶೀರ್ಣ ವಸ್ತುವಾದ್ದರಿಂದ 'ಶರೀರ'ವೆಂಬರು
ದಹನ ಯೋಗ್ಯವಾದ್ದರಿಂದ 'ದೇಹ' ವೆಂಬುದು
ಕಾಲೆಗತಿಯಲೆಲ್ಲ ಎಲ್ಲ ಕರಗಿಹೋಹುದು
ಹುಡಿಯ ಒಳಗೆ ಹುಡಿಯೆ ಆಗಿ ಇಲ್ಲವೆನಿಪುದು ॥1॥

ಹಲ್ಲ ಚಿಲೀ ಚಿಲೀ ಬಿಟ್ಟ ಅಸ್ಥಿಪಂಜರ
ಕಣ್ಣು ತೂತು ತಲೆಯು ಓಡು ನೋಟವು ಘೋರ
ಹಳೆಯ ಮನೆಯ ಜಂತೆಯಂತೆ ಜೀರ್ಣ ಶೀರ್ಣವಾದ
ಗೂಡುಹೋದ ಬೇಡವಾದ ಹೇಯ ಘಟವಿದು ॥2॥

ಶಿವ : ನಿನ್ನಂಥ ಮೂರ್ಖನನು ನಾನೆಲ್ಲು ಕಾಣೆ

ಕಡಿವ ಕಟುಕನ ಹಿಂದೆ ನಡೆವ ಕುರಿಯವನ ॥

ತಾನು ಬೆಳೆಸಿದ ಸಸಿಯ ಸುಳಿ ಚಿವುಟುವಂತೆ
ಹೆತ್ತ ಕರುಳಿಗೆ ಕತ್ತಿ ಎತ್ತುತಿಹರಂತೆ ॥
ಅವರ ತಾಳಕೆ ತಕ್ಕ ಮೇಳ ನಡೆಸುವ ನೀನು
ಮನುಜನಲ್ಲವೊ ಘೋರ ಶದ್ದ ಶತಮೂರ್ಖ ॥

ಚೀಲಾಳ (ಗದ್ಯ) ತಾತ, ಕುಪಿತರಾಗದಿರಿ
(ಹಾಡು) ಹೇಳಿ ತಾತ ಈ ಶರೀರ ಚಿರಸ್ಥಾಯಿಯೆ !
ಸೂರ್ಯ ಚಂದ್ರರಿರುವ ತನಕ ಬಳಗಿ ಬಾಳ್ವುದೆ?
ಎಂದಾದರೊಂದು ದಿನ ಬಿದ್ದು ಹೋಹುದು
ಹೇಳ ಹೆಸರು ಇಲ್ಲದಂತೆ ಅಳಿಸಿ ಹೋಹುದು ॥

ನನ್ನ ಪೂಜ್ಯ ತಂದೆ ತಾಯಿ ಎಂಥ ಶರಣರೊ
ದಾರ್ಶನಿಕರು ದಯಾಪರರು ಕರುಣೆಗಣಿಗಳು
ಶಿವಸ್ವರೂಪಿ ಜಂಗಮರ ಒಡಲಿಗಾಹಾರ
ನನ್ನನಿತ್ತು ಗಣಪದವಿಯ ಕೈಗೆ ಕೊಟ್ಟರೊ ॥

ಬಂದ ದಾರಿ ಹಿಡಿಯೋ ತಾತ ಸಾಕು ಭದ್ರನೆ
ಸಗ್ಗ ಸುದ್ದಿ ತಿಳಿಸಿದಂಥ ನಿನಗೆ ವಂದನೆ
ತಾಯಿಗಿಂತ ದೇವರಿಲ್ಲ, ತಂದೆಗಿಲ್ಲ ಮಿಗಿಲು
ಅವರುಗೈದ ಪುಣ್ಯದಲ್ಲಿ ನಾನು ಭಾಗಿ ಈಗಲೂ ॥

ಶಿವ : ನಿನ್ನ ಕರ್ಮ ಅದಕ್ಕಾರು ಹೊಣೆ ! ಅನುಭವಿಸು ನಾ ಬರುವೆ
(ನಿರ್ಗಮನ)
ಚೀಲಾಳ: ತಾತ, ತಾತ, ಇಲ್ಲಿ ಕೇಳಿ.. ಇಲ್ಲಿ ಕೇಳಿ..
ಹೋಗಿಯೇ ಬಿಟ್ಟರು!

ತಾಯಿಗಿಂತ ದೇವರಿಲ್ಲ ತಂದೆಗಿಲ್ಲ ಮಿಗಿಲು
ಅವರುಗೈವ ಪುಣ್ಯದಲ್ಲಿ ನಾನು ಭಾಗಿ ಈಗಲೂ ॥
(ಹಾಡುತ್ತಾ ನರ್ತಿಸುತ್ತಾ ನಿರ್ಗಮನ)

**ದೃಶ್ಯ – 2 ಸಿರಿಯಾಳನ ಗೃಹ**
(ದುಃಖತಪ್ತ ಚಂದಲೆ)

ಚಂದಲೆ : ಶಿವ ಶಿವ
ಸಾಕಪ್ಪಾ ಸಾಕು ಈ ಹೆಣ್ಣು ಜನ್ಮ !
ಹೆಣ್ಣಿನ ಬಾಳೆಂದೂ ಕಣ್ಣೀರು ಕರ್ಮ !

ಹೆಣ್ಣಿಗೆ ಬದಲಾಗೋದು ಹಣ್ಣಿನ ಮರವಾಗಿ
ಬೆಳೆದಿದ್ದರೆನಿತೋ ಒಳಿತಿತ್ತು !
ಏನು ಮಾಡಲು ನಾನು? ಅರೆ ಮೊರೆ ಹೋಗಲಿ?

ಜ್ಞಾನದಂತಸ್ತನ್ನೂ ಮೀರಿ ನುಗ್ಗುತಿದೆ ನನ್ನ
ತಾಯ್ತನದ ಕಡಲು !
ಅಯ್ಯೋ ತಾಯ್ತನವೆ !

ಒಡಲ ಶಿಶುವನು ಸಿಗಿದು ತಿನ್ನುವ
ಈ ತಾಯ್ತನಕೆ ಧಿಕ್ಕಾರ ! ತಾಯ್ತನಕೆ ಧಿಕ್ಕಾರ !
ಅಹುದು ! ನಾನೊರ್ವ ಬಂಜೆಯಾಗಿದ್ದಿದ್ದರೆ ?
ಬಂಜೆಯಾ .. ಗಿ .. ದ್ದಿ ..

ಇಲ್ಲಾ ಇಲ್ಲಾ 1
ಇಂತಹ ಪವಿತ್ರಾವಕಾಸ ನನಗೆ ಸಿಗುತ್ತಿರಲಿಲ್ಲ !
ಶಿವ ಸ್ವರೂಪಿ ಜಂಗಮ ಜ್ಯೋತಿಗೆ ಒಡಲ ಶಿಶುವನವನು
ಪ್ರಸಾದ್ ರೂಪದಲ್ಲಿ ಪ್ರದಾನಗೈಯುವ
ಪುಣ್ಯಾವಕಾಸ ನನಗೆ ದೊರಕುತ್ತಿರಲಿಲ್ಲ !
ಪತಿಗೆ ತಕ್ಕ ಸತಿ ಎನಿಸಿ ಬಾಳಲಾಗದ
ಜೀವ ಹೆಣನ ನಾನಾಗುತ್ತಿದ್ದೆ !
ಇದೇ ಸರಿ, ಇದೇ ಸರಿ
ನಾ ಹೆಡೆದ ಲೋಕ ಪ್ರಿಯ ಕಂದನ್ನನು
ಮತ್ತೆ ಅರ್ಪಿಸಿದೆ ಲೋಕೈಕನಾಥನಿಗೆ !
–ಹ ಹ್ಹ ಹ್ಹ ಹ್ಹ ಹ್ಹ ಹ್ಹಾ –

(ಗಂಭೀರ ಭಾವದಿಂದ)
ಕಲ್ಲಾಗು ಎದೆಯೇ ಕಲ್ಲಾಗು
ವಜ್ರಕಿಂ ಮಿಗಿಲಾದ ಕಾಠಿಣ್ಯ
ನಿನ್ನ ನಾವರಿಸಿರಲಿ ಇಂದಿನೊಂದರಗಳಿಗೆ ಮಾತ್ರ !
ಮಾತೆಯೆಂಬವಳೆದೆಯ ಮಮತೆ ಮೋಹದ ಬಳ್ಳಿ
ಸುರುಟಿ ಸೀಕರಿಗೊಂಡು, ಎನ್ನೆದೆಯು ಬಯಲಾಗಿ
ಬತ್ತಲೆಯ ಬೀಡಾಗಿ, ಸೆಲೆಯಿರದ ಶ್ಮಶಾನವಾಗಲಿ!
ಪ್ರೀತಿ, ವಾತ್ಸಲ್ಯಗಳ
ಸೆಲೆಯಿರದ ಸಶ್ಮಾನವಾಗಲಿ ॥
ಚೀಲಾಳ: ಅಮ್ಮಾ.. ಅಮ್ಮಾ.. (ಓಡಿಬಂದು ಅಪ್ಪುವನು)
ಚಂದಲೆ : ಬಾ ಕಂದ, ಬಾ ನನ್ನ ಮುದ್ದಿನ ಮರಿಯೆ
ಮಲ್ಲಿಗೆಯ ದಂಡೆ ಮುಟ್ಟಿದಡೆ ನೋವ..
ಈ ಕೋಮಲದ ಕಂಠವನು..
ಕಡಿವುದಾದರು ಹೇಗೊ? ಹೇಳೋ ನನ ಕಂದ ?

ಚೀಲಾಳ : ಅಮ್ಮಾ
ರೋಗದಿಂದಲೊ ರುಜಿನದಿಂದಲೊ
ಯಾವುದೋ ಅಪಘಾತದಿಂದಲಿ
ಮಡಿದಿದ್ದೀರೀ ಮಗುವು
ಏಗೈಯುತ್ತಿದ್ದಿರಿ ಹೇಳಿ ! – ಹೇಳಿ !

ಅಂತಾಗದಿಂದು ಈ ಮೂಳೆ ನೆತ್ತರ ಗೂಡು

ಮಜ್ಜೆ ಮಾಂಸದ ಮುದ್ದೆ
ಶಿವನಿಗೆ ಶಿವಸ್ವರೂಪಿ ವೀರಮಾಹೇಶ್ವರಗ
ಮೀಸಲು ಪ್ರಸಾದ ತಾನಾಗಿ ವಿನಿಯೋಗ !
ಎಂಥ ಯೋಗಾಯೋಗ ! ಎಂಥ ಭಾಗ್ಯವೆ ತಾಯಿ !

ಚಂದಲೆ: ನನ್ನ ಕರುಳುರಿ ಬೇಗೆ ನಿನಗರ್ಥವಾಗೊಲ್ಲ
ಚೀಲಾಳ ಹಡೆದೊಡಲ ಸಂಕಷ್ಟ ಅರ್ಥವಾಗದೊ ನಿನಗೆ !

ಚೀಲಾಳ : (ಬಿಕ್ಕಿಬಿಕ್ಕಿ ಅಳುತ್ತಾ)
ಅಮ್ಮಾ, ಅಮ್ಮಾ, ನಿನ್ನ ಸಂಕಟ ನನಗೆ ತಿಳಿಯದೆ ತಾಯಿ !
ನಾ ನಿನ್ನ ಕರುಳ ಕುಡಿ, ನಿನ್ನೊಂದು ಬೆಳೆಯ ಕಿಡಿ
ನಿನ್ನ ಅಪ್ಪಾಜಿಯರ ಮೈ ರಕ್ತವೆ ನನ್ನ
ಧಮನಿ ಧಮನಿಗಳಲ್ಲಿ ತೊರೆಯಾಗಿ ಹರಿಯುತಿದೆ!
ಇದಕೆ ವೇದ್ಯವಿಲ್ಲೇನಮ್ಮಾ ? ಹೇಳಮ್ಮಾ ? ಅಮ್ಮಾ !

ಚಂದಲೆ : ಸಂತೈಸಿಕೋ ಮಗುವೆ
ಸಂತವಿಸಿಕೋ ಕಂದ
ನಿನ್ನ ಮುದ್ದಿನ ಮಾತ ಕೇಳುವುದೆ ಕಿವಿಗೆ ಹಿತ !
ಆದರೆ ಓ ಮಗುವೆ, ಯಾರನ್ನು ನಾನು
'ಚೀಲಾಳ' 'ಕಂದಾ' ಎಂದು ಕೂಗಿ ಕರೆಯಲೋ ಅಪ್ಪಾ?
ಇನ್ನಾರ ನಾನಪ್ಪಿ ತಬ್ಬಿ ಮುತ್ತಿಡಲೊ?

ಚೀಲಾಳ : ಅಮ್ಮಾ, ನಾ ಮಾತ್ರ ನಿನ್ನ ಮಗ,
ಆ ದೀನದಲಿತರ ಮಕ್ಕಳು ನಿನ್ನವಲ್ಲೇನು?
ಅವರನ್ನೆ ! ನಿನ್ನ 'ಚೀಲಾಳ' ಎಂದು ಭಾವಿಸಿ ಮುದ್ದಿಡಮ್ಮಾ!
ಧಾವಂತವೇಕಮ್ಮ ವಯೆಧೈರ್ಯ ತಳೆಯಮ್ಮ.

ಶಿವ : (ಒಳಗಿನಿಂದ ಆರ್ಭಟಿಸುತ್ತಾ ಸಿರಿಯಾಳನೊಡನೆ ಆಗಮಿಸುತ್ತಾನೆ)
ಆಯಿತೋ ಸಿದ್ಧವಾಯಿತೋ
ಎಳೆಯ ಹಸುಳೆಯ ಬಿಸಿಬಿಸಿಯ ಮಾಂಸ
ಸಿದ್ಧವಾಯಿತೊ?

ಚೀಲಾಳ : ಪೂಜ್ಯ ಮಾಹೇಶ್ವರರೆ, ದಯಮಾಡಿ
ಇದೋ ಇಲ್ಲಿದೆ ನಿಮ್ಮ ಕರುಣೆಯ ಪ್ರಸಾದ
ಇದರಲ್ಲಿ ಮಲವಿಲ್ಲ, ಮೈಲಿಗೆ ಇಲ್ಲ
ಶುದ್ಧ ಮಾಂಸವ ಮುದ್ದೆ, ಎಳೆಯ ಬಂಬಲಗರುಳು
ತಿಳಿ ಹೃದಯದ ಕುಕ್ಷಿ ನವನೀತ ತಲೆ ಮಿದುಳು
ಧಮನಿ ಧಮನಿಯ ರಕ್ತ, ತವನಿಧಿಯ ತೀರ್ಥ !
ಹೆಚ್ಚೇನು ತಂದೆ, ಇದೆ ಇದೇ ಈ
ಚೀಲಾಳನೆಂಬಭಿಧಾನದ ಮೃತ್ತಿಕೆಯ ಮೂರ್ತಿ !
ಭುಂಜಿಸಿರಿ ನೀವಿದನು ಪ್ರಸಾದ ರೂಪದಲಿ ಸ್ವೀಕರಿಸಿ
ಈ ಮೃಣ್ಮೇಯಕೆ ಚಿನ್ಮಯತೆ ನಿಡಿ
ದಯಮಾಡಿ ಮುಕ್ತಿಕೊಡಿ ! ದಯಮಾಡಿ ಮುಕ್ತಿ ಕೊಡಿ !

ಆಗಲ ಸಕಲವೂ ಸಿದ್ಧವಾಗಲಿ, ಶಿವಪೂಜೆಗೈಯುವೆನು
–(ನಿರ್ಗಮನ)–
ಚೀಲಾ: ಅಮ್ಮಾಜಿ, ಅಪ್ಪಾಜಿ,
ಸಮಯ ಸನ್ನಿಹಿತವಿದೆ, ಚಿಂತೆಗೊಳಗಾಗದಿರಿ
ಅಮ್ಮ, ಜನ್ಮ ಜನ್ಮಕು ನೀನೇ ತಾಯಿಯಾಗೇನಗೆ !
ತಂದೆ ಸಿರಿಯಾಳರೇ ಪಿತರು ತಾವಾಗಿರಲಿ !
ಅಮ್ಮ ತೊದಡೆಯ ತಲ್ಪವನಿತ್ತು
ಮುದಗೊಳಿಸು ತಾಯಿ, ನಿನ್ನೆದೆಯ ಪ್ರೇಮವಧು
ಪಿಯೂಷವನ್ನಿತ್ತು ಪೊರೆದು ಪೋಷಿಸು ತಾಯಿ !
ಹೋಗಿ ಬರುವೆನೆ ಅಮ್ಮ ಹೋಗಿ ಬರುವೆನು ತಂದೆ !
ಬರಲೆ ಅಕ್ಕಾಜಿಗಳೇ, ನನ್ನ ತಂದೆಯ ಮೊದಲ
ತೊದಲು ನುಡಿ ಆಲಿಸಿ ಓ ನನ್ನ ಮನೆಯೆ,
ನನ್ನ ತಾಯಿಯ ಪಾದಸ್ಪರ್ಶದಿಂದ, ಪುಲಕಿತಮಾದ
ಹೊಸ್ತಿಲಿನ ಮಸ್ತಕವೆ, ಹೋಗಿಬರಲೇ ನನ್ನ
ಮಹಮನೆಯ ಸೌಭಾಗ್ಯದೇವತೆಯೆ?
ನಿಮೆಲ್ಲರಿಗಿದೋ ನನ್ನ ಅಂತಿಮದ ನಮನಗಳು !
ಅಂತಿಮ ಪ್ರಣಾಮಗಳು
(ಮಧ್ಯದೆಡೆ ಶಿರಬಾಗಿ ಕೂರುವನು. ಅವನ ಶಿರಚ್ಛೇದನಕ್ಕೆ ಸಿರಿಯಾಳ ಕೊಡಲಿ ಎತ್ತಿ ನಿಲ್ಲುವನು)

ಗುಡುಗು ಮಿಂಚುಗಳ ಆರ್ಭಟ! ಕತ್ತಲು ಬೆಳಕುಗಳ ವಿನ್ಯಾಸಲದಲಿ ದೃಶ್ಯ ಭಯಾನಕವಾಗುವುದು. ನತ್ಕರಿಯರೆಲ್ಲ 'ಅಯ್ಯೋ ಅಯ್ಯೋ' ಎಂದು ಚೀರಿಡುತ್ತಾ ಘನಘೋರ ಆಸ್ಫೋಟದೊಂದಿಗೆ 'ಚೀಲಾಳ ಚೀಲಾಳ' ಎಂದು ಚೀತ್ಕಾರ !

– ದೃಶ್ಯ ಮುಗಿಯುವುದು –

– ಚಣಕಾಲ ಕತ್ತಲು ತುಂಬಿದ ರಂಗ –

ಹಿನ್ನೆಲೆಯಲ್ಲಿ : ಜೀವ ಬಿಡುಗಡೆಯಾಯ್ತು !

ದೇಹ ಸಂಸ್ಕಾರ ಆಹಾರವಾಯ್ತು !!
ಶಿವರೂಪಿ ಜಂಗಮಗೆ ಉಣಬಡಿಸಿ ಆಯ್ತು

ರಂಗ ಬೆಳಗಿದಾಗ ಜಂಗಮ ದಾಸೋಹ ನಡೆಯುತ್ತಿರುತ್ತದೆ. ಪೀಠದ ಮೇಲೆ ಜಂಗ ಕುಳಿತಿದ್ದಾನೆ. ಅವನ ಮುಮದೆ ಅಡ್ಡಣಿಗೆ, ತಾಟು ಪಕ್ಕದಲ್ಲಿ ನೀರು ತುಂಬಿದ ತಂಬಿಗೆ.
[ಸಿರಿಯಾಳ ಭಯಭಕ್ತಿಯಿಂದ ಕರ್ಪೂರ ಹಚ್ಚಿ ಕೆಳಗಿನ ಶ್ಲೋಕ ಹೇಳಿ ಪತ್ನಿ ಸಮೇತನಾಗಿ ಉದ್ದಕ್ಕೆ ಅಡ್ಡ ಬೀಳುತ್ತಾನೆ]

ಸಿರಿಯಾಳ ಶ್ಲೋಕ : ಶಿವಯೋಗಿನೀ ಸಂತೃಪ್ತೆ ತೃಪ್ತೋ ಭವತಿ ಶಂಕರ
ತತ್ತೃಪ್ತ್ಯಾ ತನ್ಮಯಂ ವಿಶ್ವಂ ತೃಪ್ತಮೇತಿ ಚರಾಚರಂತಿ
– ಜೈ ನಮಃ ಪಾರ್ವತೀ ಪತೇ
– (ಎಲ್ಲರೂ) ಹರ ಹರ ಮಹದೇವ ! –
ಸ್ವಾಮಿ ಪ್ರಸಾದ್ನವನು ಸ್ವೀಕರಿಸೋಣವಾಗಲಿ
ಶಿವ : ಸಿರಿಯಾಳ ಚಂದಲೆಯರೆ,
ಇದ್ದರೇ ನಿಮ್ಮಂಥ ಭಕ್ತರಿರಬೆಕು.
ಪ್ರಸಾದವಿದು ಬಹು ಚೆನ್ನು, ಬಹು ಚೆನ್ನು !
ಆದಡೆ, ಮುದ್ದುಮಕ್ಕಳ ಸದ್ದುಗ್ದಲವಿಲ್ಲದೀ

ಮನೆಯು ಮನೆಯೇ? ಅಲ್ಲ ಶ್ಮಶಾನ !
ಅಲ್ಲಿ ಪ್ರಸಾದ ಸೇವನೆ ಸಲ್ಲ!
ಚಣಕಾಲ ಕೂರುವುದೂ ಯುಕ್ತವಲ್ಲ !

ಸಿರಿಯಾಳ: ಅಪ್ಪಪ್ಪಾ, ಇದ್ದೊಂದು ಶಿಶುವನ್ನು ಅರ್ಪಿಸಿದೆವಲ್ತೆ ! ತರುವುದಾದರೂ ಹೇಗೆ ಬೇರೊಂದ ನನ್ನಪ್ಪ !

ಚಂದಲೆ : (ಗಂಭೀರೆಯಾಗಿ)
ಈ ಉಗ್ರ ಪರೀಕ್ಷಕ ನೀನು ಯಾರೆಂದು ತಿಳಿಯಿತು !
ಹೇಳಿಬಿಡು ತಂದೆ ! ಹೇಳಿಬಿಡು ಒಮ್ಮೆಲೇ !
ಆಗ ಮಾಡೆಲ್ಲವನು ನಾವು ಮಡಿಯುವೆವು!
ಹೇಳು.. ಹೇಳು !! ಹೇಳೋ !!!

ಶಿವ : ತಾಯಿ ಇನ್ನ ಪಾತಿವ್ರತ್ಯ, ನಿನ್ನ ಸತ್‌ಶೀಲ ಚಾರಿತ್ರ್ಯ
ನಿನ್ನ ಚಲ ಭಕ್ತಿ ನೈಷ್ಠಿಕ ಭಾವ ಬಲಿತಿದ್ದರೀಗಲ್ಲಿ
ನಿನ್ನೊಡವೆಯನು ತಾನೆ ತಂದೆ ತಹುದು.
ನಂಬಿ ಕನೆದಡೆ ಶಿವನೆ ಓಗೊಡುವನಂತಮ್ಮ !
ನಿನ್ನ ಮಗ ನಿನ್ನೆಡೆಗೆ ಬಾರದಿಹನೇ ?
ಕೂಗಮ್ಮ ನಿನ್ನಣಗನುನ್ನೊಮ್ಮೆ ಕೂಗಿ ಕರೆಯಮ್ಮಾ !

ಚಂದಲೆ : ಅಪ್ಪಣೆ ಸ್ವಾಮಿ
ಚೀಲಾಳಾ.. ಮಗನೇ ಚೀಲಾಳ
ಬಾರಯ್ಯ ಬಾರೋ ಕಣ್ಣ
ಬಂಗಾರ ಬಾರೋ ಚಿಣ್ಣಾ ॥
ಎನ್ನೆದೆಯ ರನ್ನ ಕಣ್ಮಣಿಯೆ ಚಿನ್ನ
ಚಿನ್ಮಯನೆ ಬೇಗ ಬಾರೊ
ಎನ್ನುಸಿರೆ ಎನ್ನೆದೆಯ ಸುಧೆಯೆ
ಬಾ ಬೇಗ ಮುಖವ ತೋರಿ ॥ಚೀಲಾಳ॥
ಕರುಳುಮಡ ಉಣಿಸೆ ಮನ ಕಂಡ ಕನಸೆ
ಸವಿ ಹಾಲು ಜೇನುಗನಸೇ
ಎನ್ನೆದೆಯ ಬದಿಯ ಬಾಂದಳದ ಸೂರ್ಯ
ಶತಕೋಟಿ ತೇಜ ನಿಧಿಯೇ
ಇದ್ದಾರೆ ಬಾರೊ ಎದ್ದೊಮ್ಮೆ ಬಾರೊ
ನಿದ್ದೆಯನು ನೀಗಿ ಬಾರೋ
ಮುದ್ದಾದ ನಿನ್ನ ಮುಖವನ್ನು ತೋರೊ
ಎದೆ ಹಾಲ ತೊರೆಯ ಹೀರಿ ॥ಚೀಲಾಳ॥

ಕಯ್ಯಾರ ಕೊಂದ ಪಾತಕಿಗಳೆಂದು
ಕಡು ಕೋಪ ಬೇಡ ಕಂದಾ
ಸುಯ್ಯೆಲರ ಸೂಸಿ ಬಿಸಿಯುಸಿರ ಬೀಸಿ
ತೋಳ್ತೆರೆದು ಕರೆವ ತಂದೇ
ಬಾರಯ್ಯ ಬಾರೊ ಬಂಗಾರದೊಲವೆ
ಬಾರೆನ್ನ ಭಾಗ್ಯನಿಧಿಯೇ
ಕರೆಕರೆವೆ ಬಾರೊ ಮೊರೆ ಇಡುವೆ ಬಾರೊ

ಹಲನೊಲವೆ ಕಂದ ಬಾರೋ ॥ಚೀಲಾಳಾ॥

ಚೀಲಾಳ ಚೀಲಾಳ ಚೀಲಾಳ ಬಾರೊ
ಬೇರೆಲ್ಲು ಸಿಗದಿರುವ ಒಲವರವೆ ಬಾರೊ
ಚಿನ್ಮಯನೆ ಚಿಲುವಿಕೆಯ ಚೇತನವೆ ಬಾರೊ
ನನ್ನೆದೆಯ ನಂದನದ ಚೈತ್ರನೀ ಬಾರೋ
[ಆರ್ತತೆಯ ತುರೀಯ ಸ್ತರದಲ್ಲಿ ಚೀರಿ ಬೀಳುವಳು]

ಚೀಲಾ: ಅಮ್ಮಾ! ಅಮ್ಮಾ..!!
ಬಂದೆನಮ್ಮಾ ನಾನು ಬಂದೇನೇ
ನಿಂದೆನಮ್ಮಾ ನಾನು ನಿನ್ನ ಮುಂದೇನೇ ॥

ನಿನ್ನೆದೆಗೆ ತಂಪ ನೀಡೇನೆ
ಮಡುಲೊಡ್ಡು ನಾನೊಮ್ಮೆ ಪವಡಿಸೇನೆ ॥
ನಿನ್ನ ತೊಡೆ ತಲ್ಪದಲಿ ನಾ ನಾಲಿಯಾಡೇನೆ
ನಿನ್ನ ಆಲಿಂಗನದಿ ಇಹವನ್ನೇ ಮರೆತೇನೆ ॥

ಚಂದಲೆ : ಅಯ್ಯೋ ನನ್ನ ಕಂದ
ಅಯ್ಯೊ ನನ್ನ ಕಟ್ಟಾಣಿ
ನಾನೆಂಥ ಭಾಗ್ಯಶಾಲಿ, ಸ್ವಾಮಿ
ನಾವು ನಿಜಕ್ಕೂ ಭಾಗ್ಯಶಾಲಿಗಳು !

[ಪ್ಯು ಪ್ಯು ಪ್ಯು ಮೈತುಂಬ ಮುತ್ತಿಡುವಳು ಅಪ್ಪು ಮುದ್ದಾಡುವಳು ಸಿರಿಯಾಳನೂ ಅದರಲ್ಲು ಪಾಲ್ಗೊಳ್ಳುವನು]

ಸಿರಿಯಾಳ : ಚಂದಲೇ ಅನಾಹುತವಾಯಿತು, ಅಪಚಾರವಾಯಿತು. ಮಗನ ಮೇಲಣ ಮೋಹದಲಿ ಸ್ವಾಮಿಯನ್ನೇ ಮರೆತೆವು.

ಚಂದಲೆ : ಹ್ಹಾ ಹೌದೇ..ಸ್ವಾಮೀ..

ಚೀಲಾಳ : ಚಿಂತೆ ಬೇಡ ತಾಯಿ, ಚಿಂತೆ ಬೇಡ.
ನಮ್ಮನ್ನಗಲಿ ಅವನು ಹೋಗುವುದಾದರೂ ಎಲ್ಲಿಗೆ !
ನಾವು ಕರೆದರೆ ಬಾರದಿರನೇ ಶಿವನು !

ಶ್ಲೋಕ ॥ ಶಿವಾಕಾಂತ ಶಂಭೋ ಶಶಾಂಕರ್ಧ ಮೌಲೇ
ಮಹೇಶಾನಾ ಶೂಲಿನ್ ಜಟಾಜೂಟಾಧಾರಿನ್
ತ್ವಮೇಕೋ ಜಗದ್ವ್ಯಾಪಕೋ ವಿಶ್ವರೂಪಃ
ಪ್ರಸೀದ ಪ್ರಸಿದ ಪ್ರಭೋ ಪೂರ್ಣರೂಪ ॥

ಹಾಡು : ಶ್ರೀ ಗಿರಿವಾಸ ಕೈಲಾಶಧೀಶ
ಭಕ್ತ ಜನ ತೋಷ ಭಾಗ್ಯೋದಯಾಶ ॥ಪ॥

ಜಟೆಯಲಿ ಗಂಗೆಯ ಧರಿಸಿರುವವನೆ
ಭ್ರುಕುಟಿಯ ಮಧ್ಯದ ಕಿಡಿಗಣ್ಣವನ

ಕಟಿತಟಿಯಲಿ ರುಂಡಮಾಲೆಯ ಬಿಗಿದನೆ
ಪಟು ಭಟ ನಟರಾಜ ನಾಟ್ಯ ವಿನೋದನೆ ॥1॥

ಜಯ ಜಯ ಶಂಕರ ಜಯ ಅಭಯಂಕರ
ಜಯ ಜಯ ಗಿರಿಜಾಧೀಶ ನಮೋ
ಜಯ ಸರ್ವೇಶ್ವರ ಜಯ ಶ್ರೀಕಾರ
ಜಯ ಜಯ ಜಯ ಜಯ ಓಂಣಕಾರ ॥

ಎಲ್ಲರೂ : ಜಯ ಜಯ ಶಂಕರ ಜಯ ಅಭಯಂಕರ ॥
ಜಯ ಜಯ ಶಂಕರ ಜಯ ಅಭಯಂಕರ ॥ಜಯ ಜಯ ॥

ಜೈ ಜೈ ಶಂಕರ ಜೈ ಜೈ ಶಂಕರ
ಜೈ ಜೈ ಶಂಕರ ಜೈ ಜೈ ಶಂಕರ ಜೈ ಜೈ ಶಂಕರ
– ಜೈ ಜೈ ಜೈ ಜೈ –
(ಎಲ್ಲರೂ)
ಮೇಳ : ಜಯ ಜಯ ಜಯ ಜಯ ಜಯ ನಾಟ್ಯಾಂಜಲಿ
ಜಯ ಜಯ ಜಯಹೇ ಜಯ ಗೀತಾಂಜಲಿ ॥

ಶ್ರೀ ಸುಧೀಂದ್ರ ಕಲಾ ಶಾಲೆಯ ಮಕ್ಕಳು
ಅತೀಂದ್ರಿಯವನು ಆಹ್ವಾನಿಸಲು
ಆದರದಿಂದಲಿ ನಾವಾಡಿದ ಕಲೆ
ಇದುವೇ ಈ ಕೃತಿಯ ಜಯ ನಾಟ್ಯಾಂಜಲಿ
ಇದುವೇ ಈ ಕೃತಿ ಮಧು ನಾಟ್ಯಾಂಜಲಿ ॥

## ಗಂಗೆ ಗೌರಿ ಹೃದಯವಿಹಾರಿ

– ಪಾತ್ರಗಳು –

ಶಿವ,
ಗಂಗೆ,
ಗೌರಿ,
ಮನ್ಮಥ,
ರತಿ,
ಮೇಳ

ಮೇಳ : ಓಂ ನಮಃ ಶಿವಾಯ ಓಂ ನಮಃ ಶಿವಾಯ
ಓಂ ನಮಃ ಶಿವಾಯ
ಶಿವಾಯ ನಮಃ ಓಂ ನಮಃ ಶಿವಾಯ
ಶಿವಾಯ ಶಿವಾಯ ಶಿವಾಯ ನಮಃ ಓಂ ॥
ಶಿವ ಶಿವ ಶಿವ ಶಿವ ಶಿವಾಯ ನಮ ಓಂ
ಭವ ಭವ ಭವ ಭವ ಭವಾಯ ನಮ ಓಂ
ಹರ ಹರ ಹರ ಹರ ಹರಾಯ ನಮ ಓಂ
ಓಂ ಓಂ ಓಂ

ಗಂಗೆ : (ಅಭಿಸಾರಿಕಾ ನಾಯಿಕೆ )
ಸಾರಿ ಬರುವೆನೊ ಶಿವನೆ ನಿನ್ನ ಬಳಿಗೆ
ಮರಿದುಂಬಿ ಬಂಬಲಲಿ ಹಾರಿ ಬರುವೆ ॥

ಅಭಿಸಾರಿಕಾ ತೆರದಿ ನಿರಿಗೆಗಳ ನೇವರಿಸಿ
ಸೆರಗ ಸೌರಭ ಸೂಸಿ ಚವರಿ ಬೀಸಿ
ದಳದೆರೆದ ಹೂವಾಗಿ ತುಟಿದೆರೆದು ನಾ ಬರುವೆ
ಎದೆಯ ಹೊಂಬಟ್ಟಲಿನ ಮಧು ಮೀಸಲಿರಿಸಿ ॥1॥

ಕಳ್ಳ ಹೆಜ್ಜೆಯನಿರಿಸಿ ಬಳ್ಳಿಯೊಲು ಬಳುಬಳುಕಿ
ಮಳ್ಳಿಯಂದದಲಾಡಿ ಮೆಲ್ಲನೈತರುವೆ
ನಲ್ಲನೇ ನೀನೆನ್ನ ಲಲ್ಲೈಸುವಂತೆಸಗಿ
ಗಲ್ಲ ಗಂಧವ ಸವರಿ ಸುಧೆಯ ಸುರಿವೆ ॥2॥

ಜಿಂಕೆಯೊಲು ಜಿಗಿಜಿಗಿದು ನಾ ಬಂದೆ ಬರುವೇ
ಕೋಗಿಲೆಯ ಕಂಠದಲಿ ಹಾಡಾಗಿ ಹರಿವೆ
ಗಿರಿ ನವಿಲು ನಾನಾಗೆ ಗರಿಗೆದರಿ ನರ್ತಿಸುವೆ
ನಟರಾಜ ನಿನ್ನೊಡನೆ ಲಾಸ್ಯವಾಡುವೆ ಕೂಡಿ ॥3॥

ಶಿವ : ನೀನಾರು ಚೆನ್ನೇ? ನೀನಾರು ಚೆಲುವೆ ?
ಚೆಲುವಿನಾ ಚಿಲುಮೆಯೊಲು
ಪುಟಿಪುಟಿದು ಹರಿವೆ ॥

ನೀರ ನೆರಿಗೆಗಳನ್ನು ಮರಿಮುರಿದು ಕೆದರುತಿಹೆ !
ಸೀರ್ಪನಿಯ ಮುತ್ತುಗಳ ಸುತ್ತಲಲ್ಲ ಬಿತ್ತುತಿಹೆ
ತೆರೆ ನೊರೆಯ ನಗೆ ಬೀರಿ ಸರಿವವಳು ನೀನಾರೆ ?
ಬಡ ನಡುವಿನಾ ಬೆಡಗಿ ವೈಯಾರಿ ಯಾರೆ ? ॥1॥

ಚೆಂದಳಿರು ನಡನಡುಗೆ ಮಲ್ಲಿಗೆಯು ನಗುತಿಹಳು
ತಾವರೆಯು ಮುಖ ಮುಚ್ಚಿ ನಾಚುತಿಹಳು
ಸುರಗಿ ಸುರಹೊನ್ನೆಯರು ಬಿಸಿಯುಸಿರು ಬಿಡುತಿಹರು
ಇಂತೆಸಗುವಾ ಚದುರೆ ನೀನಾರು ಯಾರೆಲು ॥2॥

ಗಂಗೆ : ಗಂಗೆ ನಾನು ನವತರಂಗೆ ಶಿವಶಂಗೋತ್ತಾಸಿನೀ
ನಾನೆ ಗಂಗೆ ದೇವ ಗಂಗೆ ಶಿವಮನೋವಿಲಾಸಿನಿ ॥

ಶಿವ : ಪರಮ ಪಾವನ ಗಂಗೆ
ಪಾರ್ವತಿಯ ತಂಗೆ
ಶಿವಗಂಗೆ ಶುಭಗಂಗೆ ಸ್ವಚ್ಛಾಮಬು ತುಂಗೇ ॥

ಉಲ್ಲಾಸದಲಿ ಮೇಲೆ ಹಂಸೆವೊಲು ತೇಲೋಣ
ಸಲ್ಲಲಿತ ಸಲಿಲದಲಿ ಕಿಲಕಿಲಾ ನಗುತಾ ॥

ಎದೆದೆರೆದು ಮನ ತೆರೆದು ತೊರೆ ಹರಿದು ಬಾರೆ
ತುಂಬು ಜವ್ವನ ನಿಂಬೆ ದುಂಬಿ ಬಾರೆ ॥

(ಚಣಕಾಲ ಲಾಸ್ಯ ಗಂಗೆ ಮತ್ತು ಶಿವ ಇವರದು. ಅದುವರೆಗೂ ತಿರುಗಿದ ಮೋರೆಯವಳಾಗಿ ನಿಂತಿದ್ದ ಗೌರಿ ಕುಪಿತೆಯಾಗಿ ಹೂಂಕರಿಸಿ ಅಭಿನಯ ವ್ಯಕ್ತಪಡಿಸುವಳು)

ಶಿವ: (ಹೆದರಿ) ಗಂಗೆ ನೀನ ಚಣಕಾಲ ಮರೆಯಾಗು ಆಗು
ಗೌರಿ ಆಗಿಹಳಿಲ್ಲಿ ತ ಮಹಾಮಾರಿ
ಅವಳ ಕೋಪದ ಖಡ್ಗ ಬಲಿಗೊಳ್ಳ ಬಹುದೀಗ;
ಬೇಗ ನಡೆ, ಮರೆಯಾಗು, ಅವಳೊಲುಮೆ ಪಡೆವೆ ॥1॥

ಅವಳ ಕಣ್ಣುಗಳಲ್ಲಿ ಕಡಲುಗಳು ಉರುಳುತಿವೆ
ಕೆಂಡದುಂಡೆಗಳು ದಿಂಡುರುಳಿ ಬೀಳುತಿವೆ
ಕೋಪಾಗ್ನಿ ಭುಗಿಲೆಂದು ಹೊತ್ತಿ ಹೊಡೆಯಾಡುತಿದೆ
ಸವತಿ ಮಾತ್ಸರ್ಯಕ್ಕೆ ಶಿಕ್ಷೆ ಸಂಹಿತೆ ಇಲ್ಲ ॥2॥

(ಹಿನ್ನೆಲೆಯಲ್ಲಿ ಚಂಡೆ ಮದ್ದಳೆ ಭೇರಿ ತಾಳಗಳು ಗುಡುಗುತ್ತವೆ. ಗಂಗೆ ಬೇರೊಂದು ಬದಿಯಲ್ಲಿ ಮುದುಡಿ ನಿಲ್ಲವಳು. ಢಂ ಢಂ ಡಂ ಶಬ್ದ ಸ್ಫೋಟಿಸುತ್ತಾ ನರ್ತಿಸುವಳು. ಶಿವನೂ ಜೊತೆಗೂಡುವನು. ಚಣಕಾಲ ಪ್ರಳಯ ತಾಂಡವ, ಎಂಟು ಜನ ನರ್ತಕಿಯರೂ ಭಾಗಿಗಳಾಗುವರು. ಇಡೀ ರಂಗವೆ ನರ್ತನದ ವೈಭವದಿಂದ ತುಂಬಿರುವುದು)

ಮೇಳ : ಖಡ್ಗಿನಿ ಶೂಲಿನಿ ಘೋರಕಾರಿಣಿ
ಶಂಖಿನಿ ಚಾಪಿನಿ ಬಾಣಾಧಾರಿಣಿ
ಭುಶುಂಡಿ ಚಕ್ರಅ ಪರಿಘಾಯುಧಧರೆ
ಭೂಮಿಯು ಗಡ ಗಡ ನಡನಡಗುತ್ತಿರೆ
ತಾಂಡವನಾಡಿದಳಾಹಾ ಶಂಕರಿ
ಭೀಕರ ಭೈರವಿ ರೂಕ್ಷ ವಿಹಾರಿ !

(ಶಿವನ ತಾಂಡವ ತೀವ್ರವಾಗುವುದು)

ಗೌರಿ : ತಪ್ಪುಗೈದವ ನೀನು
ತೆಪ್ಪಗಿರಲೊಲ್ಲೆದೆಯೆ
ಕುಪ್ಪಳಿಸಿ ಕುಣಿಯುತಿಹೆ
ಏಕೋ ಶಿವನೆ !
ಪ್ರಳಯ ತಾಂಡವಗೈದೆ
ಪ್ರಣಯ ಮೂರುತಿ ನೀನು
ಇಬ್ಬಂದಿಕಾರನೋ
ನೀನು ಭವನೆ !

ಶಿವ : ಅಪರಾಧಿ ನಾನಲ್ಲ
ಅಪರಾಧಗೈದಿಲ್ಲ
ಬರಿದೆ ಸಂದೇಹಿಸುವೆ
ನಿನಗಿದುವೆ ತರವೆ !

ಗೌರಿ : ಜಡೆಯೊಳಗೆ ಅಡಗಿರುವ ಬೆಡಗಿ ಯಾರೋ?
(ಖಂಡಿತಾ ನಾಯಿಕಾ) ಮೃಡ, ನಿನ್ನ ತೊಡೆಯೇರಿ
ನಾ ಕುಳಿತುಕೊಂಡಿರಲು ॥ಪ॥
ಕಂಡು ಕೇಳದ ಹೆಣ್ಣು ಯಾರೆಂದು ಬೆಸಗೊಳಲು
ಖಂಡ ಕರ್ಪೂರದುಂಡೆ ಮಂಡೆ ಮೇಲಿದೆ ಎಂದೆ !
ದುಂಡುಗೆನ್ನೆಯದಲ್ಲ, ಹಿಮಖಂಡವೆಂದೆ !!
ಏನು ಗಂಡಸೊ ನೀನು ಹೇಳಯ್ಯ ಶಿವನೆ ?
ನಂದನದ ವನದಲ್ಲಿ ಕಾರಂಜಿ ಪುಟಿವಂತೆ
ಪುಟಿಯುವಳು ನೀರನಟಿ ನಿನ್ನ ನೆತ್ತಿಯಲಿ
ಕೇಳಿದರೆ ಸಟೆ ಎಂಬೆ ! ಬಾಲ ಚಂದಿರನೆಂಬೆ !!
ನಂಬುವುದು ಹೇಗಯ್ಯ ಚಪಲದೀ ಗಂಡಸರ ॥2॥

ಮೇಳ: ಇಬ್ಬರು ಹೆಂಡಿರು
ಇಬ್ಬಂದಿ ಸಂಸಾರ
ತಬ್ಬಿಬ್ಬು ತಾನಾದನಾ ಭರ್ಗನು
ಅಬ್ಬಬ್ಬ ವಂಚನೆಯೆ
ಹುಬ್ಬೇರುತಿಹುದಿಲ್ಲಿ
ಸಬ್ಬವಕಾರನೊ ಶಿವ ಸಟೆಗಾರನು ॥1॥

ಎರಡು ದೋಣಿಗಳಲ್ಲಿ
ಎರಡು ಕಾಲುಗಳಿಟ್ಟು
ಕಡಲಿನ ಯಾನವ ಕೈಕೊಂಡಂತೆ !
ಓ ಮೃಡನೇ ಶರ್ವನೇ
ಓಡು ಒಡೆದೀತು
ಗೂಡು ಸೇರುವವರೆಗೆ ರೂಢಿಸಿಕೊಳ್ಳೋ ॥2॥

ಶಿವ : ಗಂಗೆ ಬಾರೆ
ಗೌರಿ ಬಾರೆ
ತುಂಗ ಭದ್ರೇ
ತಾಯಿ ಬಾರೇ
ಕೃಷ್ಣೆ ಕಾ..
ವೇರಿಯರು ಬನ್ನಿರೆ
ನರ್ಮದೆಯ ನಡು ದಡದಲಿ
ಹೇ ಶರಾವತಿ
ಕುಮುದವತಿಯೇ
ಓ ಘಟಪ್ರಭೆ
ಮಲಪ್ರಭೆಯರೆ
ಯಮುನೆ ಸಿರಿ
ಸರಸತಿಯರೇ

ಬನ್ನಿರೇ ನೀವೆಲ್ಲ ಬನ್ನಿರೆ
ನನಗೆ ರಕ್ಷೆಯ ನೀಡಿರೇ !
ನನಗೆ ರಕ್ಷಣೆ ನೀಡಿರೇ !!

ಗೌರಿ : (ಸ್ವಾಗತ) ಗಂಗೆ, ಗೌರಿ ತುಂಗೆ ಭದ್ರೇ.. ಓಹ್ !
ಇಷ್ಟು ಜನರಿಹರೇನೋ ನನ್ನ ಸವತಿಯರು ॥ಪ॥
ಶಿವ ನಿನ್ನ ಗೆಣತಿಯರು ನಿನ್ನ ಉಪಪತ್ನಿಯರು ॥ಅನು.ಪ॥

ಪುರುಷಕುಲ ಚಕಪಲಕುಲ ವಂಚನೆಯ ಸಂಕುಲವು
ಕಂಚು ಮಿಂಚಂತಾಗಿ ಮಂಚಗಳನೇರುವುದು
ಹೆಣ್ಣಿನೆದೆ ಕನಸುಗಳ ಮಣ್ಣುಗೂಡಿಸುವುದು
ಕರುಳೆಂಬುದೇ ಇಲ್ಲ ದುರುಳರಿವರು ॥1॥
ಬಾಳೆಲ್ಲ ಬರಿದಾಗೆ ಬದುಕಿಗರ್ಥವೆ ಹೇಳೊ
ಪ್ರೇಮದಲು ಹಂಚಿಕೆಯೆ ? ಪಾಲು ಕೊಡಲುಂಟೆ?
ಹೇಳು ಹೇಳೆಲೊ ಶಿವನೆ ಹೇಳದಿರೆ ನಾ ಬಿಡೆನೊ
ಹೃದಯವನು ಸೀಳದಿರು ಸೀಳದಿರು ಎಂಬೆ ॥2॥

ಗಂಗೆ : ನಾನೆ ಹೇಳುವೆ ಕೇಳೆ :

ಗಂಗೆ ನಾನು ನವತರಂಗೆ ಶಿವ ಶರಂಗೋತ್ರಾಸಿನೀ
ನಾನೆ ಗಂಗೆ ದೇವಗಂಗೆ ಶಿವ ಮನೋವಿಲಾಸಿನೀ ॥

ವಿಷ್ಣು ಪಾದದಿಂದ ಉದಿಸಿ ಧರೆಗೆ ಹರಿದು ಬಂದೆನಾ
ವ್ಯೋಮಮೂರ್ತಿ ಜಗತ್ಕೀರ್ತಿ ಶಿವನ ಜಟೆಯ ತಟಿಯು ನಾ
ಕೋಟಿ ಕೋಟಿ ವಿಪಿನ ದಾಟಿ ಬುವಿಗೆ ಉಳಿದ ಪುಣ್ಯವತೀ
ಇಳೆಯ ಕೊಳೆಯ ತೊಳೆಯುವಂಥ ದಿವ್ಯದ ಭಾಗೀರಥೀ

ಗಿರಿಗಳಲ್ಲಿ ಹರಿಣಿಯಂತೆ ಜಿಗಿದು ಜಿಗಿದು ಹಾರುವೆ
ನಿತ್ಯ ನಿರ್ಝರಣಿಯಾಗಿ ಧುಮುಕಿ ಧರೆಯ ಪೊರೆಯುವೆ
ನಾನೆ ಜೀವ ನಾನೆ ಭಾವ ನಾನೆ ದೇವ ಪೂಜ್ಯಳು
ತಿರೆಯನೆಲ್ಲ ತಣಿವಿನಲ್ಲಿ ಅಣಿಗೊಳಿಸುವ ಮಾನ್ಯಳು ॥2॥

(ವಚನ) ಅದು ಸರಿ, ನೀನಾರೆ
ಗೌರಿ : (ವಚನ) ನಾ ಗೌರಿ.. ಗಜಗೌರಿ ನಾನು
(ಹಾಡು) ಶಕ್ತಿ ನಾನು ಜಗದಾದಿ ಶಕ್ತಿಯು ನಾನು
ಶಿವೆಯು ನಾನು ಪರಶಿವೆಯು ನಾನು ॥

ನೀರಲ್ಲಿ ತಂಪಾಗಿ ಗಾಳಿಯಲ್ಲಿ ವೇಗವಾಗಿ
ಸೂರ್ಯನಲಿ ಚಂದ್ರನಲಿ ತೇಜಕಾಂತಿಯಾಗಿ
ನಕ್ಷತ್ರ ನಗೆಯಾಗಿ ಹೂವ ಪರಿಮಳನಾಗಿ
ಹಕ್ಕಿಯಾ ಕಂಠದಲಿ ಹಾಡಾಗಿ ಇರುವೆ ॥
ಎಲ್ಲೆಡೆಯು ಎಲ್ಲೆಲ್ಲು ಅಣುರೇಣು ತೃಣದಲ್ಲು
ನೂತನದ ಚೇತನವೆ ನಾನಾಗಿರುವೆ
ಜಯಗೌರೀ ಶಿವೆ, ಶಿವನರ್ಧಾಂಗಿಯು
ನನ್ನಿರವು ಮರೆಯಾಗೆ ಹೇಳಲೇನೇ ? ॥

(ವಚನ) ಗಂಗೆ ಓ ಗಂಗೆ !
(ಹಾಡು) ಸತ್ಯ ಸುಮದರಿ ನಾನು ನಿತ್ಯ ಶಾಶ್ವತೆ ನಾನು
ಋತ ಚಿತ್ತದಚ್ಚರಿಯ ವೀಕ್ಷಿಸುವ ಸಾಕ್ಷಿ !
ನಾನೇ ಧನ್ಯೆ ನಾ ಜಗಮಾನ್ಯೆ
ವಿಶ್ವಾಂತರಾಳದಾ ಬೆಳಕು ನಾನೆ ॥

ಗಂಗೆ : ಮನ್ನಿಸಿರಿ ಅಕ್ಕಾಜಿ ಮನ್ನಿಸಿರಿ ಸಿರಿ ಕಿರಿಯವಳ
ತುಂಬು ಧಾರ್ಷ್ಟ್ಯದ ಮಾತ ನಿಮ್ಮ ಮುಂದಾಡಿದೆನು
ಅದನೆಲ್ಲ ಮನ್ನಿಸರಿ ನಾನು ನಿಮ್ಮವಳು
ನಿಮ್ಮ ಪ್ರೇಮದ ಕಥೆಯ ನಾ ಬಹಳ ಕೇಳಿಹೆನು
ಮತ್ತೆ ಬಿತ್ತರಿಸುವಿರ ಎಲ್ಲವನು ಕೇಳಿ ಧನ್ಯಳಹೆನು !

ಗೌರಿ : ಸಂತೋಷ, ಕೇಳು ತಂಗಿ
ಬೆಳ್ಳಿ ಬೆಟ್ಟದ ಒಡೆಯ ಬಿಡು ಜಡಯ ಬೆಡಗನನು
ಪಡೆಯಲಿಕೆ ಪರಶಿವನ ಸಿದ್ಧಳಾದೆ
ತಾಯಿ ಮೇನೆಯು ಮತ್ತೆ ತಂದೆ ಹಿಮವಂತರೂ
ಸಂತೈಸಲೆಳಸಿದರು ತಿಳಿಯ ಹೇಳಿದರು
ದಕ್ಷಸುತೆ ದಾಕ್ಷಾಯಿಣಿಯು ಆಗಿದ್ದಾತ್ಮ
ಮರುಜನ್ಮ ತಳೆದಿತು ಗಿರಿರಾಜಸುತೆಯಾಗಿ
ಇದನರಿಳತಿದ್ದರೂ ತಾಯಿಗಾವುದೊ ಭೀತಿ
ತಂದೆ ಹಿಮವಂತನಿಗೆ ಆವುದೋ ಮೋಹ
ತಾಯಿ ಹಡೆದಳು ನನ್ನ "ಮಾ.. ಉಮಾ" ಎಂದು
ಬೇಡ ತಪಬೇಡ ಬೇಡವೇ ಬೇಡೆಂದು
ತಾಯಿ ಮೇನೆಯ ಸೊಲ್ಲೆ ನನಗಾಯ್ತು ಮುಂದೆ
"ಉಮಾ ಉಮಾ" ಎಂಬ ಪರ್ಯಾಯ ನಾಮ
ನನಗಾವ ಭಯವಿಲ್ಲ ಆವ ಭ್ರಮೆಯೂ ಇಲ್ಲ
ಆತ್ಮವಿಶ್ವಾಸದಲಿ ನುಡಿದೆ ನಡೆದೆ
ಶಿವನ ಸೇವೆಯ ದೀಕ್ಷೆ ಸ್ವೀಕರಿಸಿ ನಿಂದೆ
ಅವನೊಲವ ನಾ ಪಡೆದು ಬರುವೆನೆಂದೆ

(ವಚನ) ಗಂಗೆ, ಆಗ ತಾಯಿ ಕಣ್ಣಲ್ಲ ಕಣ್ಣೀರ ಕೋಡಿ ಹರಿಯಿತು ಅವತ ಸಂತೈಸಲೆಂದು ನುಡಿದೆ
(ಹಾಡು) (ಸ್ವಾಧೀನ ಪಥಿಕಾ)
ಪಡೆದೆ ಪಡೆವೆನು ತಾಯೆ ಪರಶಿವನ ಪ್ರೇಮವನು
ಅವನನೊಲಿಸುವ ಶಕ್ತಿ ಯುಕ್ತಿಗಳು ನನಗಿಹವು ॥
ಎಂಥವನೆ ಅವನಿರಲಿ ಚಿಂತಿಸದಿರೌ ತಾಯೆ
ಅವನ ತಪ ತೇಲುವೊಲು ಗೈವೆ ನಾನು
ನೇಮನಿಷ್ಠೆಗಳನ್ನು ಹೋಮಗೈವೆನು ಅಮ್ಮಾ
ಪ್ರೇಮಭಿಕ್ಷುಕನಾಗಿ ಬರುವವೊಲು ಮಾಡುವೆನು ॥1॥

ಎಮೆದೆರೆದ ಮುಗುಳಂತೆ ಬಿರಿದ ತಾವರೆಯಂತೆ
ಕುಂಚವುನ್ಮೀಲಿಸಿದ ಚಿತ್ರದಂತೆ !
ತುಂಬು ಜೀವನದಿಂದ ತುಳುಕುತಿಹ ಈ ದೇಹ
ಚಿತ್ತ ಚಂಚಲಗೊಳಿಸಿ ಸೂರೆಗೊಳುವುದು ಮನವ ॥2॥

(ಇಲ್ಲಿ ರತಿ–ಮನ್ಮಥರ ನೃತ್ಯ ತರುವುದು)
ರತಿಪತಿಯ ಒಲವಿಹುದು, ಚೆಲುವು ಚಿಮ್ಮುತಲಿಹುದು
ಚಿಲುಮೆಯೊಲು ಪುಟಿಯುವೆನು ಅವನ ಮುಂದೆ
ಮಗ್ನ ಮನವನು ನಾನು ಭಗ್ನಗೊಳಿಸುವೆ ತಾಯೆ
ಆತ್ಮವಿಶ್ವಾಸವಿದೆ ಅಳುಕು ಬೇಡಮ್ಮಾ ॥3॥
ಕುಣಿಯುವತೆನು ಮೆರೆಯುವನು ಪ್ರೇಮದುನ್ಮಾದದಲ್ಲಿ
ಪರಶಿವನ ಪ್ರೇಮವಧು ಪಿಯೂಷವಾಗಿ
ಅವನ ತೋಳ್ಸರೆಯಲ್ಲಿ ಪ್ರಣಯದಾದೋದದಲಿ
ಕರಗುವನು ಮಂಜಿನೊಲು ನೀರು ನೀರಾರಿ ॥4॥

(ವಚನ)ಇಂತು ಅಚಲ ಆಶ್ವಾಸನವಿತ್ತು ನಡೆದೆ ಬೆಳ್ಳಿ ಬೆಟ್ಟಕ್ಕೆ
ಅಲ್ಲಿ ದೇವದಾರು ತುಂಡಿನ ವೇದಿಕೆಯ ಮೇಲೆ ಅರ್ಧನಿಮೀಲಿತ
ನೇತ್ರನಾಗಿ ಆತ್ಮರತನಾಗಿ ತಪೋಮಗ್ನನಾಗಿ ಕುಳಿತಿದ್ದ
ಶಿವನನ್ನು ಆ ಮನೋಹರಮೂರ್ತಿ ಯೋಗಿಶ್ವರರನ್ನು
ಅನನ್ಯ ಭಾವದಿಂದ ಬೇಡಿದೆ ಪ್ರಾರ್ಥಿಸಿದೆ. ಆಗ

ಮೇಳ : ಅಕಾಶ ವಸಂತದಾಗಮನ
ಪ್ರಣಯಕೆ ಎಲ್ಲೆಡೆ ಆಹ್ವಾನ !
ಪ್ರೇಮಿಗಳೆದೆಯಲಿ ಕಾಮ ಪ್ರಚೋದ
ಮನ್ಮಥಗಮವೆ ಜಯಪ್ರದ !
ತಪೋಮೂರ್ತಿಯಾ ಶಿವನೆಡೆಗೆ
ನೆಡೆದಳು ಅವಳ ಜೊತೆಗೂಡಿದನು
ಬಾಣಗಳೈದನು ಒಮ್ಮೆಲೆ ಬಿಟ್ಟನು !
ಯೋಗೀಶ್ವರ ತಪ ಭಂಗವಾಯ್ತು
ದೇಹದಿ ವಿದ್ಯುತ್ ಸಂಚಾರವಾಯ್ತು !
ಕಂಗಳ ತೆರೆದನು ಶಿವ ನೋಡಿದನು
ಎಲುವಿನ ಚಿಲುಮೆಯ ಕಾಣುತಲೆ
ಚಂಚಲವಾಯಿತು ಮನದ ನೆಲೆ !
ಆದರೆ. (ಬೇರೆ ಧಾಟಿಯಲ್ಲಿ)
ಎಚ್ಚೆತ್ತು ಕತ್ತೆತ್ತಿ ಸುತ್ತಲೂ ನೋಡಿದನು
ಚಾಂಚಲ್ಯಕನುವಾದ ಕಾರಣವ ಹುಡುಕಿದನು
ಸ್ಥಿರ ಮನದ ಸ್ಥಿತಪ್ರಜ್ಞ ನೇನಾದನಂದು
ಚಿತ್ತವನು ಕಲಕಿದೀ ಉನ್ಮತ್ತನಾರೆಂದು ॥
ನೋಡಿದನು ಮನ್ಮಥನ ರತಿಯ ಜೊತೆಯಿದ್ದವನ
ಗಿರಿಜೆ ಬೆಂಬಲಕಾಗಿ ಹಿಂಬಿಯಲ್ಲಿದ್ದವನ,
ಕಂಡು ಶಿವ ಕೆಂಡಾಮಂಡಲನೆ ಆಗಿ
ನಿನ್ನ ಸುಟ್ಟುರುವೆನು ಎಂದೊಮ್ಮೆ ಕೂಗಿ
ತೆರೆದ ಕಿಡಿಗಣ್ಣಿಂದ ಶಿವನ ಕೋಪಾಗ್ನಿ
ಭುಗಿಲೆದ್ದು ಹೊಗೆ ಕಾರ್ದು ಪರಪರನೆ ನುಗ್ಗಿ
ದಗ್ಧಗೊಳಿಸಿತು ರತಿಯ ಸತಿಯ ಕ್ಷಣದಲ್ಲೆ
ಬಣ್ಣನೆಗೆ ಮಾತುಗಳು ಸೋಲುತಿಹನಲ್ಲೆ !

ಆಗ– (ಚಣ ಚಣ ಚಣ ಚಂಡೆ ಇತ್ಯಾದಿಗಳ ಆರ್ಭಟ. ಶಿವ ತಾಂಡವ ನೃತ್ಯ ರುದ್ರ ರಮಣೀಯವಾಗಿ)
ರಗಳೆ : ತಾಂಡವ ಮೂರ್ತಿಯ ನೃತ್ಯ ವಿಲಾಸಕೆ
ಭೂಮಿಯು ಗಡಗಡ ನಡನಡುಗುತ್ತಿರೆ

ಹೆಜ್ಜೆಯ ಇಟ್ಟೆಡೆ ನೆಲ ನೆಗ್ಗುತ್ತಿರೆ
ದಿಕ್ತಟಗಳು ಪಟಿಪಟಿಸಿ ಹಾರುತಿರೆ
ತಾರಾಲೋಕವೆ ಪಳಪಳ ನದುರಲು
ಸಪ್ತ ಸಾಗರವು ಕೊತ ಕೊತ ಕುದಿಯಲು
ವಿಳಯ ರುದ್ರನವ ಪ್ರಳಯ ಕಪರ್ದಿಯು
ಭೀಕರ ತಾಂಡವನಾಡಿದನಾಗಳೆ
ನೆತ್ತಿಯ ಗಂಗೆಯು ತುಳು ತುಳುಕಾಡಲು
ಹಿಮಕರ ಶೀಕರ ಚಂದ್ರಮನು ಯಲು
ಜಟಾಪಟಲವನು ಬಿಡದಪ್ಪಳಿಸುತೆ
ಪಟಭಟನಾರ್ಭಟದಿಂದಲೆ ನಟಿಸಿದ
ಒಂದು ಪದಂ ಪಾತಾಳವನೊತ್ತಲ್
ಒಂದ ಪದಂ ಬ್ರಹ್ಮಾಂಡವನೆತ್ತಲ್
ತೋಂ ತೋಂ ತೋಂ ತೋಂ ತೋಂ ತೋಂ ತೋಂ ಎನುತಂ
ಧೀಂ ಧೀಂ ಧೀಂ ಧೀಂ ಧೀಂ ಧೀಂ ಧೀಂ ಎನುತಂ
ತಾಂಡೆವನಾಡಿದನಾಹಾ ! ರುದ್ರನು !
ಭೀಕರ ಭೈರವನೋಹೋ ಭದ್ರನು !

(ಬೇರೆ ಧಾಟಿ) ಭಸ್ಮವಾದನು ಕಾಮ ಹಣೆಗಣ್ಣಿನುರಿಗೆ
ಬೆಂದು ಹೋದಳು ರತಿಯು ವಿರಹಾಗ್ನಿ ಚಿತೆಗೆ !
ಮುಚ್ಚಿ ತಿಳಿದೆಚ್ಚತ್ತು ಸತಿಯ ಸೆರಗನು ಹಿಡಿದು
ಬೇಡಿದಳು ಬೇಡಿದಳು ಪತಿಭಿಕ್ಷೆ ಬೇಡಿದಳು
ಸಹಿಸಲಸದಳ ನಲ್ಲನಿಲ್ಲದೀ ಬಾಳು ಹಾಳೆಂದು ಬೇಡಿದಳು
ಹಲುಬಿದಳು, ಹಂಬಲಿಸಿ, ಬಸವಳಿದಳು.

ರತಿ : ಮದನಾ.. ಮೋಹನ

(ವಿರಹೋತ್ಕಂಠಿತಾ) ಮನದಲ್ಲೆ ಮುದವಡೆದ ಸಮ್ಮೋಹನ !
ನನ್ನವನೆ, ನನ್ನೊಲವೆ ನನ್ನಿನಿಯ ಸಖನೇ ॥
ನನ್ನೆದೆಯ ಬಾಂದಳದ ಪೂರ್ಣಿಮೆಯ ಚಂದಿರನೆ
ಹೇ ವಿಶ್ವದಭಿಜಾತ ನವಚೇತನಾ ॥

ರತಿಯೊಬ್ಬಳನು ಬಿಟ್ಟು ನೀ ಎಲ್ಲಿ ಹೋದೆ?
ಗತಿಯರು ನನಗಿಂದು, ನೀ ಎಲಿ ಹೋದೆ?
ಮನೆಶೂನ್ಯ, ಮನಶೂನ್ಯ, ಸಕಲ ಲೋಕವು ಶೂನ್ಯ
ಅಕಲಂಕ ನಿನಗೇಕ ಇಷ್ಟು ಮರವೆ? ॥1॥

ಓ ಎನ್ನೋ, ಎನ್ನೆಡೆಗೆ ಬಾ ಎನ್ನೋ ಮನ್ಮಥನೆ
ಪ್ರೇಮದಾಲಿಂಗನದಿ ಇಹವ ಮರೆಸೊ !
ಚುಂಬನದ ಸುಧೆಯುಣಿಸಿ, ಬಿಂಬಾಲಯದ ಸೃಜಿಸಿ

ಇರಲೆನಗೆ ಇಂಬುಗೊಡೆಒ, ಕುಂದದಿರಿಸೊ ॥2॥

ಸ್ಪರ್ಶಿಸಿದ ತೋಳ್ಗಳಲಿ ಹರ್ಷವೆಂಬುದೆ ಇಲ್ಲ
ನುಡಿಸಿದೀ ನಾಲಗೆಗೆ ರುಚಿಯು ತಿಳಿದಿಲ್ಲ
ವಚನ : ರತಿ ವಿಲಾಸಕೆ ಸತಿಯ ಬೆಣ್ಣೆ ಹೃದಯವು
ಕರಗಿ ನೀರಾಗಿ ಹೋಯ್ತು, ಅವಳ ಸತಿ ಜೊತೆಗೊಳಿಸೆ
ದೃಢ ನಿಶ್ಚಯಂಗೈದು ಭರವಸೆಯ ನೀಡಿದಳು
ಸಾಂತ್ವನದಿ ನುಡಿ ಹಾಡಿ ಸಂತೈಸಲೆಳಸಿದಳು

ಗಿರಿಜೆ : ಸಂತೈಸಿಕೊ ತಾಯೆ ಶಾಂತಳಾಗಮ್ಮ
ಶಿವನ ಮುಳಿಸನು ತೆಗೆವೆ ಭ್ರಾಂತಿ ಬೇಡಮ್ಮಾ ॥ಪ॥

ಓ ಕಾಮನರಗಿಣಿಯೆ, ಕಾಮಿನಿಯೆ, ಕಣ್ಮಣಿಯೆ
ಭಾವ ಭಾಗೀರಥಿಯೆ, ಕಲ್ಪನೆಯ ಕುಸುಮವೇ ॥ಅನು ಪ॥
ನಿನ್ ಪತಿಯೊಡನಿರುವೆ ಚಿಂತಿಸದಿರೌ ದೇವಿ
ಅಂತಾಗಿಸುವತನಕ ನಾ ಅಪರ್ಣೆ
ಇಂದೆ ಪಂಚಾಗ್ನಿಗಳ ನಿರ್ಮಿಸುವೆ ತಪಗೈವೆ
ಶಿವನನೊಲಿಸುವೆ ಕೇಳು ಪ್ರೇಮಪೂರ್ಣನೆ ! ॥1॥

ತೊಡವುಗಳ ತೆಗೆದೀವೆ ನಾರುಡೆಯ ನಾನುಡುವೆ
ಮಕರಿಕಾ ಪತ್ರಗಳ ಬರೆವುದನು ಬಿಡುವೆ
ಅಲತಿಕೆಯ ಚಿರಮುಳಿದು ಭಸ್ಮವನೆ ಪೂಸುವೆನು
ತುಟಿಗೆ ಲಾಕ್ಷಾರಸವ ಬಳಿವುದನೆ ಬಿಡುವೆ ॥2॥

ನಿಶಿತ ಗರ್ಭಾಂಕುರದ ಪಚ್ಚೆ ಆಸನು ಹಾಸಿ
ಜಪಮಣಿಯ ಗುಣಿಸುತ್ತೆ ತಪಕೂರುವೆ
ಒಲಿಸೆ ಒಲಿಸುವೆನವನಾ ಕಪರ್ದಿಯ ಮನವ
ನಿನ್ನ ಕುಂಕುಮ ಭಾಗ್ಯ ಬೇಗ ಮರಳಿಸುವೆ ॥3॥

ಉಮೆಯ ಜಪ ತಪ ನೋಡಿ ಬೆಮೆಯ ತಳೆಯಿತು ವಿಶ್ವ
ವಿಶ್ವನಾಥನಿಗಂತೂ ಅಚ್ಚರಿಯ ಮೇಲಚ್ಚರಿ !
ಬಾನಲೆವ ರವಿಯೊಂದು ಕಡೆ ಧಗಧಗನೆ ಉರಿಯುತ್ತಿರುವ
ರಾಶಿ ರಾಶಿ ಕಟ್ಟಿಗೆ ಮತ್ತೊಂದು ಕಡೆ, ಈ ಬಗೆಯ
ಪಂಚಾಗ್ನಿಗಳ ಮಧ್ಯೆ ಶಾಂತಳಾಗಿಯೆ ಕುಳಿತ ಸತಿದೇವಿಯು
ಮತ್ತೆ ಮುಂಗಾರಿನಲ್ಲಿ ಹೊಸಮಳೆಯು ಸುರಿದರೂ
ನೆನೆದಳಷ್ಟೇ ಹೊರತು, ಮೈ ಒದರಲಿಲ್ಲ, ಬೆದರದೆಯೆ
ಬೆಚ್ಚದೆಯ ಅಚಲಳಾಗಿ ಕುಳಿತು ತಪಗೈದಳು, ತಾವರೆಯ
ನೂಲಿನೊಲು ಮೃದುವೆನಿಸಿದಂಗವನು
ಬಗೆಬಗೆಯ ನೋಂಪಿನೊಳು ಸವೆಸಿದಳು, ಶಿವ ಒಲಿದು
ಬಂದ ಅವಳ ದೇಹ ಸೌಂದರ್ಯವನ್ನು ತಿರಸ್ಕರಿಸಿದ
ಪರಮೇಶ್ವರನು ಅವಳ ಆತ್ಮಸೌಂದರ್ಯನವನು
ಪುರಸ್ಕರಿಸಿದ ಬಂದದ್ದು ಹೇಗೆ? ಓರ್ವ ವಟು ವೇಷಧಾರಿ
ಯಾಗಿ, ಬಂದವನೇ ತಪವಿದ್ದ

ಅನಜೆಯನ್ನು ಛೇಡಿಸತೊಡಗಿದ. ಕಡೆಗೆ ದಿವ್ಯದರ್ಶನವಿತ್ತು
ಲಗ್ನವಾದ ಜಗನ್ಮಾತಾಪಿತರ ವಿವಾಹ
ವೈಭವೋಪೇತವಾಗಿ ನೆರವೇರತಿತು !

ಮೇಳ : ಶಪತಗೈದಳು ಗಿರಿಜೆ ತಪಕೆ ಕುಳಿತಳು ಅಲ್ಲೆ
ಪಂಚಾಗ್ನಿಗಳ ಮಧ್ಯೆ ಕಂಚಿನಂಆಗಿ !
ಓಂ ನಮಃ ಶಿವಾಯ ಓಂ ನಮಃ ಶಿವಾಯ
ಓಂ ನಮಃ ಶಿವಾಯ ಓಂ ನಮಃ ಶಿವಾಯ

(ಗೌರಿ ತಪಸ್ಸನ್ನು ಅಭಿನಯಿಸುತ್ತಾ ಕುಳಿತುಕೊಳ್ಳಬೇಕು. ಅವಳ ಸುತ್ತ ಮೇಳದವರ ಹಾಡು ನರ್ತನ. ಅವುಗಳ ಹಿನ್ನೆಲೆಯಲ್ಲಿ ಓಂ ನಮಃ ಶಿವಾಯ ಎಂಬ ಷಡಕ್ಷರ ಮಂತ್ರ ನಿರಂತರ ಸಾಗುತ್ತಲೇ ಇರಬೇಕು)

ಹಾಡು : ಸುರಿವ ಮಳೆ ಹರಿವ ಹೊಳೆ ಬಿರು ಬಿಸಿಲನಾಂತು
ಅಪಣೇಯಾದಳೊ ಗೌರಿ ಘೋರ ವ್ರತವಾಂತು
ಶಿವನೊಲಿದ ಭವನೊಲಿದ ಭರ್ಗ ತನೊಲಿದ
ಸತಿದೇವಿಯಚ್ಚರಿಯ ಉಗ್ರ ತಪಕೊಲಿದ
(ಶಿವನ ಅಭಿನಯ ಇಲ್ಲಿರಲಿ)
ಮೆಚ್ಚಿ ಕೈ ಹಿಡಿದನೋ ಗಿರಿಜೆಗೊಲವಿತ್ತು
ಅವಳಿಚ್ಚೆಯಂತೆಯೇ ರತಿಗೆ ಸತಿಯಿತ್ತು ॥
ರತಿ ಮನ್ಮಥ (ಅರೆ ರಂಗದಲ್ಲಿ)
ಶ್ಲೋಕ : ಓಕಾರ ಬಿಂದು ಸಂಯುಕ್ತಿಂ ನಿತ್ಯಂ ಧ್ಯಾನಂತಿಯೋಗಿನಃ
ಕಾಮದಂ ಮೋಕ್ಷದಂ ಚೈವ ಓಂಕಾರಾಯ ನಮೋ ನಮಃ ॥
ನಮೋ ನಮೋ ಶ್ರೀ ಗಂಗಾಧರನೆ
ಗೌರೀ ಮನೋವಿಹಾರಿ
ಗಂಗಾ ಸಲಿಲ ತರಂಗಾಚ್ಛಾದಿತ
ಬಳಸಿ ಬ್ರಹ್ಮಚಾರಿ ।

ಯೋಗ ಸಮಾಧಿಯ ಯೋಗೀಶ್ವರನೆ
ಆತ್ಮರತನೆ ಅಧ್ಯಾತ್ಮ ಋಷಿ
ಲೀಲೆಯು ಮಿಗೆ ನೀ ಉಮಾವತೀ
ಲೀಲೆತಪ್ಪೆ ಸ್ವಾಯಂಭು ಯತೀ ॥
ತಂದೆ ತಾಯರಿಗೆ ಮಿಗಿಲಹರಿಲ್ಲ
ವಿಶ್ವವ ಧರಿಸಿಹ ಯಶವೆ
ವಿಶ್ವದೇಹಿಗಳೆ ವಿಶ್ವಾತ್ಮರುಗಳೆ
ನಿಮಗೆ ಪ್ರಣಾಮವು ಸಲಲಿ ॥
(ಮುರು ಬಾರಿ ಶಿವ–ಶಿವೆ–ಗಂಗೆಯರನ್ನು ಪ್ರದಕ್ಷಿಣೆ ಮಾಡುವರು)

ಶಿವ: (ವಚನ) ಗಂಗೆ–ಗೌರಿ ಕೇಳಿ –
ನಾವು ಮೂವರು ಒಂದೇ ತತ್ತ್ವದ ಮೂರು ರೂಪಗಳು.
ಇವಳು ಭಾವ ನೀನು ಭಾಷೆ
ನಾನು ಭಾವಗೀತವು
ಇವಳು ಶ್ರುತಿಯು ನೀನು ತಾಳ
ನಾನು ಮದುರ ರಾಗವು ॥1॥

ಇವಳು ತೈಲ ನಾನು ಪ್ರಣತಿ
ನಾನು ಜ್ಯೋತಿಯಾದೆನು
ಇವಳು ಕಿರಣ ನೀನು ಕಾಂತಿ
ನಾನು ಸೂರ್ಯನಾದೆನು ॥2॥

ಸೃಷ್ಟಿ ಇವಳು ಸ್ಥಿತಿಯು ನೀನು
ನಾನೆ ಲಯಕೆ ನಾಯಕ
ದ್ರವ್ಯ ಇವಳು ಧಾತು ನೀನು
ಅನಿಲ ನಾ ಅಮಾಯಕ ॥3॥

ಶೂನ್ಯದಿಂದ ಬಂದ ನಾವು
ವಿಶ್ವ ರಚನೆಯಗೊದಗುವಂಥ
ಅಂಶ ಅಂಶ ಮಾತ್ರರಹೆವು
ಭೇದವಿಲ್ಲ ಕಾಮಿನೀ

ಶಿವ–ಗಂಗೆ–ಗೌರಿಯರು
ಜಗಕೆ ಮಂಗಳವಾಗಲಿ
ವಿಶ್ವಶಾಂತಿಯು ನೆಲೆಸಲಿ
ಎಲ್ಲರಿಗೂ ಶುಭವಾಗಲಿ
ಸತ್ಯ ಧ್ವಜ ತಾ ಮೆರೆಯಲಿ
(ಆಶೀರ್ವಾದ ಮುದ್ರೆಯಲ್ಲಿ ನಿಲ್ಲುವರು. ಆಗ..)

ಮೇಳ : ಓಮ ನಮಃ ಶಿವಾಯ ಓಂ ನಮಃ ಶಿವಾಯ
ಓಂ ನಮಃ ಶಿವಾಯ
ಶಿವಾಯ ನಮಃ ಓಂ ಶಿವಾಯ ನಮಃ ಓಂ
ಶಿವಾಯ ಶಿವಾಯ ಶಿವಾಯ ನಮಃ ಓಂ
ಶಿವ ಶಿವ ಶಿವ ಶಿವ ಶಿವಾಯ ನಮಃ ಓಂ
ಭವ ಭವ ಭವ ಭವಾಯ ನಮ ಓಂ
ಶಿವ ಶಿವ ಶಿವ ಶಿವ ಶಿವಾಯ ನಮಃ ಓಂ
ಹರ ಹರ ಹರ ಹರ ಹರಾ ನಮಃ ಓಂ ॥

– ಜೈ ನಮಃ ಪಾರ್ವತೀ ಪತೇ –

– ಹರ ಹರ ಮಹಾದೇವ –

ಶಿವಲೀಲೆ ಆರಂಭದ ಪುಟ
ನಿವೇದಕ (ಹಿನ್ನೆಲೆಯಲ್ಲಿ)

**ದಯವಿಟ್ಟು ಸೇರಿಸಿಕೊಳ್ಳಿ**

ಶಿವಲೀಲೆ : ಆರಂಭದ ಪುಟ
ನಿವೇದಕ (ಹಿನ್ನೆಲೆಯಲ್ಲಿ)

ಇದು ಶಿವಲೀಲೆ; ಪರಶಿವನ ಪಂಚವಿಂಶಸತಿ ಲೀಲೆಗಳಿಗೆ ಉತಷ್ಟಂಭಕವಾಗಿ ನಾಲ್ಕುಉಪಲೀಲೆಗಳು ಒಂದು ಗಣೇಶ–ಷಣ್ಮುಖರ ಸಂವಾದ; ಎರಡು, ಭಕ್ತ ಮಾರ್ಕಂಡೇಯ; ಮುರು ಶಿವಪ್ರಸಾದ ಚೀಲಾಳ; ನಾಲ್ಕು ಗಂಗಾ ಗೌರಿ ಹೃದಯವವಿಹಾರಿ.
ಭಗವದ್ ಭಕ್ತಿಯೇ ಈ ಮೂರು ನೃತ್ಯ ರೂಪಗಳ ಮೂಲ ದ್ರವ್ಯವಾದರೂ ಛಲ, ಬಲ ಶಾಂತಗಳನ್ನು ಸ್ಥಾಯಿಯಾಗುಳ್ಳ ಸತ್ವ, ರಜಸ್ ಮತ್ತು ತಮೋ ಗುಣಗಳನ್ನಾಶ್ರಯಿಸಿದ ವಿಶಿಷ್ಟ ಭಕ್ತಿಯ ವಿಶೇಷ ದರ್ಶನ ಇಲ್ಲಾಗುತ್ತದೆ. ಇದು ಶಿವಲೀಲೆ; ಮಕ್ಕಳಿಗೆ ಮೀಸಲಾದ ಪೌರಾನಿಕ ಪ್ರತಿಮೆ ನಮ್ಮ ಭಾರೀಯ ಸಂಸ್ಕೃತಿಯ ಪ್ರತೀಕ ! ದ್ಯುತಿವಡೆದ ದರ್ಶನದ ತೇಜೋ ವಿಲಾಸ.

ಇದು ಸುಧೀಂದ್ರ ನೃತ್ಯ ಕಲಾನಿಕೇತನ, ಬೆಂಗಳೂರು
ಇವರ ಕೊಡುಗೆ
ಸಾಹಿತ್ಯ ಶಿಲ್ಪಿ : ಡಾ॥ ಸಾ.ಶಿ.ಮರುಳಯ್ಯ
ಸಂಗೀತ : ವಿದ್ವಾನ್ ಶ್ರೀನಿವಾಸ್
ನಿರ್ದೇಶನ : ನಾಟ್ಯಾಚಾರ್ಯ ಸುಧೀಂದ್ರ
ಈಗ ನೋಡಿ ಶಿವ ಲೀಲೆ !
ಶಿವಲೀಲೆ !!

**ಭಕ್ತ ಮಾರ್ಕಂಡೇಯ : ಪುಟ 16 ಆರಂಭದಲ್ಲಿ**
ಮಾರ್ಕಂಡೇಯ ಪುಟ 194ರಲ್ಲಿ
ರಕ್ಷಣೇ ಶಿವನೆ ರಕ್ಷಣೇ
ಅಕ್ಷಯ ಸಇರಿ ಅದ್ವೈತರೂಪನೇ ॥

ಭಕ್ಷಿಸುತಿಹರೀ ರೂಕ್ಷದೇಹಿಗಳು
ರಕ್ಷಕರಿಲ್ಲವೊ ವಿಶ್ವೇಶಾ !
ದಕ್ಷ ವಿನಾಶಕ ಶಿಕ್ಷ ಮಹೋಕ್ಷಾ
ಈಕ್ಷಿಸಿ ಕಾಯೋ ಸರ್ವೇಶಾ ॥1॥

ಮೃತ್ಯಂಜಯೇ ಮೃಗಧರ ಭೂಷನೆ
ಧೂರ್ಜಟಿ ತ್ರಿಪುರ ಸಂಹಾರೀ
ಯಮದೂತರುಗಳು ಹಿಂಸಿಪರಯ್ಯೋ
ನಿನ್ನೀ ಶಿಶುವನು ಭಕ್ಷಿಪರೋ ॥2॥

**ನರ್ತಕಿಯರ ಪುಟ 27 (ವಚನದ ನಂತರ)**
– ನರ್ತಕಿಯರ ಪ್ರವೇಶ–
ಹಾಡು : ಇಂತಾಯ್ತು ಇಂತಾಯ್ತು ಶಿವಲೀಲೆ
ತಪ್ಪಿಲ್ಲದೊಪ್ಪಾಯ್ತು ಶಿವಲೀಲೆ ॥

ಎಲ್ಲಿಗೆ ಬಂತಪ್ಪ ಶಿವಲೀಲೆ ?
ಕಾಂಚಿಗೆ ಬಂತಪ್ಪ ಶಿವಲೀಲೆ !
ಬಾದಾಮಿ ಬದಲಾದ ಶಿವಲೀಲೆ
ಸಿರಿಯಾಳ ದೇವನ ಶಿವಲೀಲೆ
ಚೀಲಾಳ ಚೆಲುವಿನ ಶಿವಲೀಲೆ
ಚಂದಲೆಯಂದದ ಶಿವಲೀಲೆ ॥1॥

ಶಿವಲೀಲೆ ಇದು ಶಿವಲೀಲೆ
ಜಂಗಮ ಜ್ಯೋತಿಯ ಭವಲೀಲೆ
ಧೂರ್ಜಟಿಯಾರ್ಭಟ ಶಿವಲೀಲೆ
ಭರ್ಗನ ಸ್ವರ್ಗದ ಶಿವಲೀಲೆ
ಮೋಕ್ಷ ಪ್ರದಾಯಕನಾ ಶಿವಲೀಲೆ
ಶಿವ ಶಿವ ಶಿವ ಎಂಬ ಶಿವಲೀಲೆ ॥2॥

**ನಾಟ್ಯಾಂಜಲಿ**

(ಭಾಸನ ಸ್ವಪ್ನವಾಸವದತ್ತ)
ನೋಟ 1

(ನಾಂದಿಯಾದ ಮೇಲೆ ಮೊದಲ ತೆರೆ ಸರಿಯುತ್ತದೆ. ನಾಟ್ಯ ವೇದಿಕೆಯ ಮಧ್ಯದಲ್ಲಿ ಭಾಸ ಆಲೋಚನಾ ಮಗ್ನನಾಗಿ ಕುಳಿತಿರುತ್ತಾನೆ. ಅವನು ಕುಳಿತಿರುವುದು ಒಂದು ಮಂದಾಸನ. ಅವನ ಮುಂದೆ ಒಂದು ಬರಿದಾದ ವ್ಯಾಸಪೀಠ ಇದೆ. ಅದರ ಇಕ್ಕೆಲದಲ್ಲೂ ಥಾಳಾಗಿ ಉರಿಯುತ್ತಿರುವೆರಡು ಹಣತೆಗಳ ಬೆಳಕು ವಿನಃ ರಂಗದಲ್ಲಿ ಮತ್ತಾವ ಬೆಳಕೂ ಇರಬಾರದು. ಭಾಸನ ಎರಡ ಬದಿಯಲ್ಲೂ ತುಸು ದೂರದಲ್ಲಿ ಕಲಾದೇವಿ ಮತ್ತು ಸ್ಫೂರ್ತಿ ಕನ್ಯೆಯರು ಪ್ರಣಾಮ ಭಂಗಿಯಲ್ಲಿ ಒರಗಿರುತ್ತಾರೆ. ಹೂ ಕುಮಡಗಳ ಮಧ್ಯೆ ಮಂದಾಸನದಲ್ಲಿ ಸ್ಥಿತನಾಗಿರುವ ಭಾಸನ ಮುಖಮುದ್ರೆ ಹಣತೆಯ ಬೆಳಕಿನಲ್ಲಿ ಅಸ್ಪಷ್ಟವಾಗಿ ಗೋಚರಿಸುತ್ತಿದೆ. ಈ ಎಲ್ಲ ಪೂರ್ವಸಿದ್ಧತೆಗಳೂ ಆಗಿ ಮುಗಿದ ಮೇಲೆ ವೀಣಾ ಕ್ವಣಿತದೊಡನೆ ಸೂತ್ರಧಾರನ ತುಂಬುಕಂಠದ ಗಂಭೀರವಾಣಿ ಪುಟಿಯುತ್ತದೆ. ನಿವೇದನೆಯ ಉದ್ದಕ್ಕೂ ವೀಣೆ ಅಥವ ಪಿಟೀಲಿನ್ ಹಿನ್ನೆಲೆಯ ವಾದನ ಮುದುವರಿಯುತ್ತಿರಬೇಕು.)

ಸೂತ್ರದಾರ :
ಇದು ನಾಟ್ಯಾಂಜಲಿ !
ಇದು ನಾಟ್ಯಾಂಜಲಿ !!
ಪ್ರೇಮದಲತೆಯನ್ನು ಬೆಳಗಿಸಿದ ದಿವ್ಯ ತೇಜೋರಾಶಿ !
ಇದೇ ಭಾರತದ ಪ್ರೇಮದರ್ಶನ !
ಅಳಿಕಾಮವಲ್ಲ, ಪವಿತ್ರತಮ ಪ್ರೇಮ !
ಗಂಗೆಯಂತೆ ಪಾವನ ಅಗ್ನಿಯಮತೆ ಪರಿಶುದ್ಧ !
ಏಳು ಭಾರತ ಪುತ್ರ, ಎದ್ದೇಳು –
ನೋಡಲ್ಲಿ (ಭಾಸನನ ಮುಖಕ್ಕೆ ಮಾತ್ರ ಬೆಳಕು ಚೆಲ್ಲಬೇಕು, ಸ್ಪಾಟ್–ಲೈಟ್ ಬಳಸುವುದು)

ಯಾರವನು ಗೊತ್ತೆ ?
ಅವನೊಂದು ಬೆಳಕು !
ಮಾನವನ ಎದೆಗವಿಯ ಕತ್ತಲನು
ಹರಿಸಿದ ಜ್ಯೋತಿ ಆತ !
ಅವನೇ ಮಹಾಕವಿ ಭಾಸ !!
ಸರಸ್ವತಿಯ ಮುಖಹಾಸ !!
ಧನ್ಯಾತ್ಮ ಭಾಸ !
ಪುಣ್ಯಜೀವಿ ಭಾಸ !
ಮಹಾಕವಿ ಭಾಸ 1

ಶ್ರೀ ರಾಮಾಯಣ, ಭಾರತ, ಬೃಹತ್ಕಥೆ, ಭಾಗವತಾದಿ ಮಹತ್ಕೃತಿಗಳಿಂದ ವಸ್ತುವನ್ನಾಯ್ದು ದಿವ್ಯಸುಂದರ, ಕಲಾಪೂರ್ಣ ನಾಟ್ಯಕೃತಿಗಳನ್ನು ರಚಿಸಿ ಭಾಸ ಇಂದೇಕೋ ಚಿಂತಾಮಗ್ನನಾಗಿದ್ದಾನೆ. ಅವನ ವ್ಯಾಸಪೀಠ ಕಂಠ ಓಲೆಗಳಿಲ್ಲದೆ ಬರಿದಾಗಿದೆ! ತೈಲವಿಲ್ಲದ ಹಣತೆ ಮಿನುಮಿನುಗಿದಂತೆ ಅವನೆದೆಯಲ್ಲಿ ಕಾವ್ಯಸೆಲೆ ಪುಟಿಪುಟಿದು ಅಳಿಯುತ್ತಿದೆ !

ಏಕೆ?.. ಏಕೆ?? ಅರ್ಥವಾಗದು..... ಏನೊಂದೂ ಹೊಳೆಯುತ್ತಿಲ್ಲ ಆ ಮಹಾಕವಿಯ ಮಸ್ತಿಷ್ಕಕ್ಕೆ !
ಆಗ

(ಹಾಡು ಆರಂಭವಾಗುತ್ತದೆ. ಹಿನ್ನೆಲೆಯಲ್ಲಿ ಕಲಾ ಮತ್ತು ಸ್ಫೂರ್ತಿ ಇಬ್ಬರೂ ನಾಟ್ಯಾಭಿನಯವನ್ನು ಪ್ರದರ್ಶಿಸುತ್ತಾ ನಿಧಾನವಾಗಿ ಮೇಲೇಳುತ್ತಾರೆ. ಅವರಿಬ್ಬರ ಮೇಲೆ ಬಣ್ಣಬಣ್ಣದ ಬೆಳಕು ಚೆಲ್ಲುತ್ತಿರಬೇಕು)

ಹಾಡು : (ರಾಗ–ಭೂಪಾಳ)
ಉದಯರಾಗದ ಕೂಡೆ
ಹೂದಳವು ಬಿರಿವಂತೆ
ಕಣ್ಣಿಮೆಯ ತೆರೆ ಭಾರಸ
ಸರಸತಿಯ ಮುಖಹಾಸ
ತೆರೆಯಯ್ಯಾ.. ತೆರೆಯೋ ॥

ಉಧಯದರವಿಂದವದು
ಪಟಪಟನೆ ದಳದೆರೆದು
ಕಾವ್ಯ ಸೌರಭವನು ಸೂಸಲ್ಕೆ ಧರೆಗೆ ।
ಏಳು ಭಾರತ ಭಸ ।
ಏಳು ಸುಜನರ ತೋಷ ।
ಏಳಯ್ಯ ಏಳೋ ॥

ಸೂತ್ರಧಾರ: ಅಹಹಾ ! ಎಂತಹ ದಿವ್ಯವಾಣಿ !
ಭಾಸನೆದೆ ತುಮಬೆ ಬಹ ಅಮೃತವಾಣಿ !
ಅವರೆ..! ಹೌದು ! .. ಅವರೆ !!

ಒಬ್ಬಳು ಕಲಾದೇವಿ !
ಮತ್ತೊಬ್ಬಳು ಸ್ಫೂರ್ತಿಕನ್ಯೆ !!

ಇವರಿಬ್ಬರೇ ಭಾಸನಿಗೆ ಇಂದಾದ ಬೆಳಕುಗಳು ! ಕರುಣಾಮೃತ, ಹಾಸ್ಯ, ವೀರ, ರೌದ್ರ, ಬಯಾನಕ ರಸಕೃತಿಗಳನ್ನು ರಚಿಸಿದ ಭಾಸ ಶೃಂಗಾರದ ಶೃಂಗಕೃತಿಯನ್ನೀಯಲು ಹಂಬಲಿಸಿ, ವಸ್ತುವಿಗಾಗಿ ಹುಡುಕಾಡುತ್ತಿದ್ದಾನೆ. ಆಗ.. ಕಲಾದೇವಿ ಮತ್ತು ಸ್ಫೂರ್ತಿ ಕನ್ಯೆಯರು

(ನಾಟ್ಯಾರಂಭ)

ಹಿನ್ನೆಲೆ
ವಾಸವದತ್ತಾ ಕೃತಿ ರಚಿಸುತಲಿ
ಭಾಸುರ ಪ್ರೇಮವ ಬಿತ್ತರಿಸುತಲಿ
ಉದಯನ ಪದ್ಮಾವತಿ ಪ್ರಣಯದಲಿ
ವಾಸವದತ್ತೆಯ ತ್ಯಾಗವು ಮೆರೆಯಲಿ ॥
ಏಳಯ ಭಾಸ

ಮಂಗಳಘೋಷ ॥1॥

(ಕಂಠಪತ್ರಗಳ ಕೋ ಇದೋ ಭಾಸ ಎಂದಾಗ, ಕೆಲ ಕಂಠವನ್ನೂ ಸ್ಫೂರ್ತಿ ಓಲೆಯ ಕಟ್ಟನ್ನೂ ತೆಗೆದುಕೊಡುತ್ತಾರೆ. ಭಾಸ ಅವರೆಡನ್ನೂ ಸ್ವೀಕರಿಸಿ, ಹರ್ಷಚಿತ್ತನಾಗಿ ವಾಸವದತ್ತಾ ಕೃತಿರಚನೆಗೆ ತೊಡಗುತ್ತಾನೆ)

ಕಂಠಪತ್ರಗಳ ಕೋ ಇದೋ ಭಾಸ
ಕುಂಠಿತ ಮತಿಯಲಿ ಮೂಡಲಿ ಹಾಸ
ಸುಂದರ ಸ್ವಪ್ನ ಸುಶೋಭಿತ ಸ್ವರ್ಗವು
ಬಂಧುರವೆನಿಸಲಿ ಈ ನಾಟ್ಯಾಂಜಲಿ ॥
ಏಳೈ ಭಾಸ
ಮಂಗಳ ಘೋಷ ॥2॥

ಪ್ರೇಮ ಪರಿಧಿ ಪರಮಾತ್ಮನ ಸೇರಲಿ
ಮೃಣ್ಮಯ ಚೇತನ ಚಿನ್ಮಯವಾಗಲಿ
ಪಟು ನಟರಾಜನ ನಟನಾಚಾರ್ಯನ
ನಾಟ್ಯಲಹರಿ ತಾ ದಿಗಂತಟ ಪುಟಿಯಲಿ
ಏಳೈ ಭಾಸ

ಮಂಗಳಘೋಷ ॥3॥

(ಇಬ್ಬರೂ ಭಾಸನ ಪಕ್ಕದಲ್ಲಿ ಕುಳಿತುಕೊಳ್ಳುತ್ತಾರೆ)
ಸೂತ್ರಧಾರ : ಅದೇ ! ಅದೇ !
ಭಾಸಕವಿಯ ಭಾಗ್ಯರಚನೆ

–ಸ್ವಪ್ನ ವಾಸವದತ್ತಾ–
ಅವನ ಸ್ವಪ್ನವೇ... ಅವನುಂಡ ಸವಿಗಣಸೇ ಇಂದು ಸಂಸ್ಕೃತ ಸಾಹಿತ್ಯಾಕಾಶದಲ್ಲಿ ಮಿನುಗುತ್ತಿರುವ ಧ್ರುವತಾರೆ "ಸ್ವಪ್ನವಾಸವದತ್ತಾ!"

ಸ್ವಪ್ನ ವಾಸವದತ್ತಾ ಕೃತಿರಚನೆಗೆ
ಓಂ ಶುಭ ಓಂ ಭದ್ರ ಮಂಗಲಂ

ಹಿನ್ನೆಲೆ : ಶ್ಲೋಕ : ರಾಗ–ಕೇತಾರಗೌಳ
ಉದಯ ನವೇಂದು ಸವರ್ಣಾ ವಾಸವದತ್ತಾ
ಬಲೌ ಬಲಸ್ಯ ವಾಮ್ !
ಪದ್ಮಾವತೀರ್ಣ ಪೂರ್ಣೌ ವಸಂತಕಮ್ರೌ
ಭುಜೌ ಪಾತಾಮ್ ।

ನೋಟ – 2

(ಸುಮಧುರ ಸುಶ್ರಾವ್ಯ ಸಂಗೀತದ ಹಿನ್ನೆಲೆಯಲ್ಲಿ ಭಾಸನ ಹಿಂಬದಿಯ ತೆರೆ ಸರಿಯುತ್ತದೆ. ಸುತ್ತು ನರ್ತಕರಿಯರು, ನಡುವೆ ಪದ್ಮಾವತಿ. ಹಿಂಬದಿಯಲ್ಲಿ ಸ್ವರ್ಣಜನನಿಕೆ, ಮಧ್ಯೆ ನಾಟ್ಯವೇಇಕೆ. ಅಲ್ಲಿಯ ರಂಗಸಜ್ಜಿಕೆ ಮನಮೋಹಕವಾದದ್ದು. ಹು–ಚೆಂಡು ಹಿಡಿದು ನರ್ತಿಸುತ್ತಿರುತ್ತಾರೆ. ಆಗ )

ಸೂತ್ರಧಾರ: ಪದ್ಮಾವರಿ ದರ್ಶಕನ ತಂಗಿ ! ಇವಳ ಕೈ ಹಿಡಿದವನು ಭುವನವಿಖ್ಯಾತನೂ, ಬಲೋಕದೊಡೆಯನೂ ಆಗುವನೆಂದು ಸಿದ್ಧದೇಶವಿತ್ತು. ಆ ಕೀರ್ತಿಗೆ ಕೌಶಾಂಬಿಯ ಅಸು, ವಾಸವದತ್ತೆಯ ಪತಿ, ಉದಯನನ್ನು ಭಾಗಿಯನ್ನಾಗಿಸಬೇಕೆಂದು, ಅವನ ಮಹಾಮಂತ್ರಿ, ಯೌಗಂಧರಾಯಣ ಮತ್ತು ಮಹಾರಾಣಿ ಉದಯನನನ ಪ್ರೇಮಸಂಜೀವಿನಿ ವಾಸವದತ್ತೆ. ಇವರು ಯೋಜಿಸುತ್ತಾರೆ. ಅವನ್ನು ಕಾರ್ಯರೂಪಕ್ಕೆ ತರುವ ಸಲುವಾಗಿ ಒಂದು ನಾಟಕವನ್ನೇ ಹೂಡಿ ವಾಸವದತ್ತೆ ಅಗ್ನಿಗೆ ಆಹುತಿಯಾದಳೆಂದು ಸುಳ್ಳು ಸುದ್ದಿಯನ್ನು ಹಬ್ಬಿಸಿ, ವಾಸವದತ್ತೆ ಇಲ್ಲದ ಉದಯನ ಪದ್ಮಾವತಿಯನ್ನು ಒಲಿಯುವಂತೆ ಸಂಚು ಮಾಡುತ್ತಾರೆ.

ಸ್ವಾಮಿಭಕ್ತನಾದ ಯೌಗಂಧರಾಯಣ, ಪರಿವ್ರಾಜಕ ವೇಷಧಾರಿಯಾಗಿ ವಾಸವದತ್ತೆಯನ್ನೂ ವೇಷಾಂತರಗೊಳಿಸಿ, ಅವಳು ತನ್ನ ತಂಗಿಯೆಂತಲೂ ಅವಳ ಹೆಸರು ಆವಂತಿಕೆಂತಲೂ ಹೇಳಿ, ಇನ್ನೂ ಅವಿವಾಹಿತ ಕನ್ಯೆ ಯಾಗಿದ್ದ ಪದ್ಮಾವತಿಯ ಬಳಿಯಲ್ಲಿ ವಾಸವದತ್ತೆಯನ್ನು ನ್ಯಾಸವಾಗಿಟ್ಟು ಹೋಗುತ್ತಾನೆ.
ರಾಜಾಧಿರಾಜನ ಧರ್ಮಪತ್ನಿ ಈಗ ಸಾಧಾರಣ ಬ್ರಾಹ್ಮಣ ಕುವರಿ ! ಸಹಸ್ರ ದಾಸಿಯರಿಂದ ಸೇವೆ ಸ್ವೀಕರಿಸುತ್ತಿದ್ದರೂ ತಾನೀಗ ಬೇರೊಬ್ಬಳಿಗೆ ಸೇವಕಿ !

ಇದೆಲ್ಲಾ ಏಕೆ ?.. ಯಾರಿಗಾಗಿ?

ತನ್ನ ಪತಿದೇವ ಉದಯನನ ಅಭ್ಯುದಯಕ್ಕಾಗಿ ! ಅವನ ವಿಖ್ಯಾತಿಗಾಗಿ ! ಅರುಣಿ ಎಂಬುವನಿಂದ ಅಪಹರಿಸಲ್ಪಟ್ಟಿದ್ದ ರಾಜ್ಯವನ್ನು ಮತ್ತೆ ಉದಯನಿಗೆ ದೊರಕಿಸಿಕೊಡುವುದಕ್ಕಾಗಿ !

ಹೀಗೆ ಪುಣ್ಯವನಿತೆ ವಾಸವದತ್ತೆ ಮತ್ತು ಸ್ವಾಮಿಭಕ್ತ ಯೌಗಂಧರಾಯಣ ಇವರ ತ್ಯಾಗ, ಸೇವೆ ಇವುಗಳ ದಿವ್ಯದರ್ಶನವೇ.

–ಈ ಸ್ವಪ್ನ ವಾಸವದತ್ತಾ –
(ವಾಸವದತ್ತೆಯೊಡನೆ ಯೌಗಂಧರಾಯಣನ ಪ್ರವೇಶ)
ಅದೋ ಅವನೇ ಯೌಗಂಧರಾಯಣ–ಪರಿವ್ರಾಜಕ
(ಅವನ ಮೇಲೆ ಬೆಳಕು ಹರಿಸಬೇಕು)
ಅವಳೇ ವಾಸವದತೆ, ಅಲ್ಲ,
'ಆವಂತಿಕೆ' ಎಂಬ ಹೆಸರಿನ ಹೆಣ್ಣು !
ಇವಳೇ ! ಇಲ್ಲಿ ಹೂ–ಚೆಂಡು ಹಿಡಿದು ನಿಂತಿರುವ ಚೆಲುವೆಯೇ ಪದ್ಮಾವತಿ !
(ನಾಟ್ಯ ಆರಂಭವಾಗುತ್ತದೆ. ಪದ್ಮಾವತಿ ನಾಟ್ಯರೂಪದಲ್ಲೇ ಸ್ವಾಗತಿಸುತ್ತಾಳೆ)

ಪದ್ಮಾವತಿ: ರಾಗ–ಹಂಸಧ್ವನಿ
ಸ್ವಾಗತವು ಭೂಸುರನೆ
ನಿಮಗಿದೋ ಸ್ವಾಗತವು

ಯೌಗಂಧ: ರಾಗ–ಮೋಹನ
ಶ್ರೇಯೋಸ್ತು ಮಂಗಳೆಯೆ,
ಶ್ರೋಯೋಸ್ತು
ನಿನ್ನ ಬಾಳಿನಲಿರಲಿ
ಮಂಗಳದ ಮುತ್ತು
ಪದ್ಮಾವತಿ: ರಾಗ–ಧನ್ಯಾಸಿ
ಧನ್ಯಳಾದೆನು ದೇವ, ಧನ್ಯಳಾದೆ !
ಯಾರೀಕೆ ? ಸೋದರಿಯೆ ?
ಯೌಗಂಧ: ರಾಗ –ಭೀಂಪಲಾಸ್
ಅಹುದು ಪದ್ಮಾವತೀ..

ಇವಳೆನ್ನ ಸೋದರಿಯು..
ಹೆಸರು ಆವಂತಿಕೆಯು..
ಕೆಲ ದಿನದ ಪರ್ಯಂತ
ಇರಲೀಕೆ ನಿನ್ನ ಬಳಿ
ನಿನ್ನೊಲುಮೆ ಚಿಲುಮೆಯಲು !
ನಿನ್ನೆದೆಯ ಮಧುವಿನಲು !!

ಒಪ್ಪಿಗೆಯೆ ಮಹಾತಾಯಿ
ನಾನಿನ್ನು ಬರಲೇನು !

ಪದ್ಮಾವತಿ : ಸಂತೋಷ !
ಯೌಗಂಧ: ರಾಗ–ಆನಂದಭೈರವಿ
ಬರಲೆನ್ನ ಸೋದರಿಯೆ..
ನಿನ್ನ ಪತಿ ಕರೆವರೆಗು
ಇವಳೆ ನಿನಗೆಂದಿಗೂ ತಾಯಿ–ಬಂದು!
ಓಲೈಸು ಮರೆಯದಿರು
ಇಂದು ಬಿಸಿಲಿನ ಬೇಗೆ ನಾಳೆ ಕೌಮುದಿ ತಂಪು !
ಮರೆಯದಿರು ನೆಮ್ಮಿ ನಡೆ ಇರುವತನಕ !

(ಯೌಗಂಧರಾಯಣ ಹೋಗುವನು. ಅಕ್ಕರೆಯ ಅಣ್ಣನ ಅಗಲಿಕೆಯ ದುಃಖವನ್ನು ವೀಣೆಯೇ ಹೇಳಬೆಕು !.. ತುಸು ಕಾಲದ ನಂತರ ಪದ್ಮಾವತಿ ಮತ್ತು ಅವಳ ಗೆಳತಿಯರು ವಾಸವದತ್ತೆಯ ಮನಸ್ಸನ್ನು ಪ್ರಸನ್ನಗೊಳಿಸಲಿಕ್ಕಾಗಿ ಅವಳನ್ನು ನಾಟ್ಯಕ್ಕೆ ಎಳೆಯುತ್ತಾರೆ)

– ಈಗ ಸಾಮೂಹಿಕ ನೃತ್ಯ –
ಹಾಡು : ರಾಗ – ಸಿಂಧುಭೈರವಿ
ಬನ್ನಿ ಓ ಗೆಳತಿಯರೇ
ಆಡೋಣ ಬನ್ನಿ
ನಿನ್ನಯ ಬಾಳಿನ ರಾಗ ಹಾಡೋಣ ಬನ್ನಿ ॥
ವೀಣೆಯಿಂಚರದಂತೆ
ಕಣಿಯಾಗಿ ಬನ್ನಿ
ಕಿಂಕಿಣಿಯ ಝಣಝಣಕೆ
ಕಣವಾಗಿ ಬನ್ನಿ
ಬೆಳಗಿನೊಲು ಬೆಳಬೆಳಗಿ
ಹೋಲೆ ಹರಿದಂ ಬನ್ನಿ
ಚಿಲುಮೆಯೊಳು ಪುಟಿಪುಟಿದು
ನರ್ತಿಸಂದ ಬನ್ನಿ ॥
ಬನ್ನಿ ಓ ಗೆಳತಿಯರೇ ..॥

**–ನಿಷ್ಕ್ರಮಣ–**

**ನೋಟ 3**

(ರಂಗಭೂಮಿಯ ಕತ್ತಲಿನಲ್ಲಿ ಹಿಂದಿನ ದೃಶ್ಯದ ಹಿಂಬದಿಯ ಮೂರನೆಯ ತೆರೆ ಸರಿಯುತ್ತದೆ. ಅಲ್ಲಿ ವಿಧೂಷಕ ಮತ್ತು ಉದಯನ ಇವರ ಪ್ರವೇಶ)

ಸೂತ್ರಧಾರ : ಇಷ್ಟಾದರೂ ಸಂತುಷ್ಟನಾಗಿದ್ದವನೆಂದರೆ ಒಬ್ಬನೇ. ಅವನೇ ನೋಡಿ ಈತ (ಅವನ ಮೇಲೆ ಬಳಕು ಬೀಳುವುದು) ಅಹಹಾ ! ಅವನೋ, ಅವನ ರೂಪೋ, ಅವನ ಅರೆ ಬೋಳುತಲೆಯೋ, ಮುರಿದಹಲ್ಲೋ, ಹರಿದ ಗಡ್ಡವೋ ! ಬೆಳೆದ ಡೊಳ್ಳೋ.. ! ಇವನನ್ನು ಸೃಷ್ಟಿಸಿದ ಆ ಸೃಷ್ಟಿಕರ್ತನಿಗೆ ಪ್ರೀತಿ ! ಇವನ್ಯಾರು ಗೊತ್ತೇ?

ಇವನೇ ಮಹಾರಾಜ ಉದಯನನ ಆತ್ಮೀಯ ಗೆಳೆಯ, ರೇಮಸಚಿವ
ವಿಧೂಷಕ !
ಮಹಾರಾಜ ಉದಯನನಿಗೆ, ಅಗ್ನಿಗೆ ಅಹುತಿಯಾದ ಹೆಂಡತಿ ವಾಸವದತ್ತೆಯ ಚಿಂತೆಯಾದರೆ; ಆ ಬಕನಿಗೆ ಮೂರು ಹೊತ್ತೂ ಹೊಟ್ಟೆಯದೇ ಚಿಂತೆ! ಬೆಟ್ಟದಷ್ಟು ತಿಂದರೂ ತನ್ನ ಹೊಟ್ಟೆ ಬರಿದು ಎನ್ನುವ ಪ್ರಾಣಿ ಈತ.
ಅಂತೆಯೇ ಅವನ ಹಾಡು ಕೇಳಿ–
ವಿದೂಷಕ : ಹಾಡು ॥ (ನರ್ತಿಸುತ್ತಾ, ಲಘುರಾಗ ಸಂಯೋಜನೆ)
ಕಡ್ಬು ಕಡ್ಬು ಕಡ್ಬು ಕಡ್ಬು
ಕಾಯ್ ಕಡ್ಬು ಕಡ್ಬು !
ಹೂರಣಗಡ್ಬು, ಅಕ್ಕಿಕಡ್ಬು, ಬೇಳಕಡ್ಬು ಕಡ್ಬು !

ಕಡ್ಬಿನ್ ಜಾತಿ ಕೊಳ್ಳೆಹೊಡೆದು
ಮೇಲೆ ತೊವ್ವೆ ಕಾಲ್ವೆ ಹರಿಸಿ
ಪಟ್ಟಾಗಿ ಒಟ್ಟಿದೆನೋ ಗೆಳೆಯಾ
ನೀ ಸಿಟ್ಟಾಗಿ ಸಿಡಿಗೊಳ್ಳೋದ್ ಬೇಡಯ್ಯ ॥

ಕಾಲೆರಡೂ ಸೋತೂ sss
ಇಲ್ನೋಡೋ ಬಾತೂ sss
ಹೊಟ್ಟೆಗಿನ್ನೂ ಬೇಕೆಂತೆ !
ಕಣ್ಣಿಗೇ ಮಾತ್ರ ನಿದ್ಯಂತೆ !!
ತದಿಮಿ ತದಿಮಿ ತಕ
ತಾಳ ಮೃದಂಗದ ಗೆಣೆಯಾ ॥
ಕಡ್ಬು ಕಡ್ಬು ಕಡ್ಬು ಕಡ್ಬು...

(ಉನ್ಮತ್ತನಂತೆ ಕುಣಿಯುವನು)

ಉದಯನ: (ಚಿಂತಾಮಗ್ನನಾಗಿ..)
ಹಾಡು ॥ ರಾಗ ಬಾಗೇಶ್ರೀ

ಬಾಳ ನಂದನದಲ್ಲಿ ಬಿರಿದ ಮಲ್ಲಿಗೆಯರಳೆ
ಮಘ ಮಘಿಸಿ ಸೊಗವಿತ್ತೆ
ಓ ಅದಿರ್ಮುತ್ತೆ ! ವಾಸವದತ್ತೆ

ದಳ್ಳುರಿಯ ಧಗಧಗಿಸೆ
ದಗ್ಧಳಾದೆಯ ದೇವಿ
ನೆನಪೊಂದು ನನಗಿತ್ತೆ
ನೀನಿಲ್ಲವಾದೆ.. ವಾಸವದತ್ತೆ

ಮನದ ಮಾನಸದಲ್ಲಿ
ತೆರೆ ನರೆಗಳೇಳುತಿಹೆ

ನೆಲೆಯಿಲ್ಲದಲೆಯುತಿದೆ
ಆತ್ಮದೀ ಹಡಗು ॥

ದೂರವೆನಿತೋ ಕಾನೆ
ತೀರವಾವುದೋ ಕಾಣೆ
ಎತ್ತಲೊಯ್ವುದೊ ಗಾಳಿ
ಅದನು ನಾ ಕಾಣೆ ॥

ಬಾ ದೇವಿ ಭಾಗ್ಯವತಿ
ಬಾರೆನ್ನ ಪುಣ್ಯವತಿ
ಬಾರೆ ವಾಸವದತ್ತೆ
ಎನ್ನೆದೆಯ ಸಂಪತ್ತೆ
ಬಾರೆ ಬಾ.. ಬಾರೆ ಬಾ...
ಬಾರೆ  ವಾಸವದತ್ತೆ..॥

ವಿದೂಷಕ : ರಾಗ : ಅಠಾಣ

ಬಿಡು ಗೆಳೆಯ ಮರುಕವನು
ಮಡಿದವರು ಬಹರೇನು?
ಪಡೆದ ಪುಣ್ಯವ ಬೆಳೆಸು !
ತೀರಿದೊಡೆ ಹೊರಸು !

ಉದಯನ : ರಾಗ: ಷಣ್ಮುಖಪ್ರಿಯ

ಬತ್ತಲೆಯ ಮನಕಿಂದು
ಕತ್ತಲೆಯು ಕವಿದಿಹುದು
ಬೋಳು ವೇದಾಂತವಿದು
ಹರಿಸಲಹುದೇ ?

ವಿದೂಷಕ ; ರಾಗ: ಕೇಧರ್

ಅತ್ತರೇನದು ಬಹುದೋ ?
ಸತ್ತವರು ಸುಳಿಯುವರೋ ?
ಬಾಳ ಬೆಳಗಿಪ ರೀತಿ
ಬೇರೆಯಿಹುದೋ !

ಉದಯನ : (ಉತ್ಸಾಹದಿಂದ) ರಾಗ: ಕಮಾಚ್

ದಾರಿ ತೋರೆಲೋ ಗೆಳೆಯಾ ।
ಮನವ ಮುದಗೊಳಿಸುವೆಯಾ ?
ವಿಧೂಷಕ : ರಾಗ: ಹಿಂದೋಳ
ಬೇರೇನು ಭಾಗ್ಯವಿದೆ?
ಬೇರಾವ ಮುಕ್ತಿಇದೆ ?

ನಿನ್ನ ನಗೆಮೊಗವೆನಗೆ
ಬೆಳದಿಂಗಳೋ !

ಕೇಳು, ಓ ಉದಯನ,
ಮಗಧ ರಾಜನ ಕುವರಿ !
ಚೆಲ್ಲಂಗಂಗಳ ಚಿಗರಿ !
ಗುಣವನಿತೆ ಪ್ರಖ್ಯಾತೆ
ಚೆಲುವೆ ಸುಪ್ರೀತೆ !

ಉದಯನ : ರಾಗ : ಮಾಂಡ್

ಯಾರವಳು? ಹೆಸರೇನು?
ಚೆನ್ನೆ ಚಂದ್ರಿಕೆಯೆನು?
ಓ ವಸಂತಕ ಪೇಳೊ
ಪ್ರೇಮವತಿಯೇನೋ ?

ವಿದೂಷಕ : ರಾಗ: ಬೇಗಡೆ

ಏನೋ ನಾನದನರಿಯೆ
ಬಣ್ಣನೆಗೆ ಮಾತಿಲ್ಲ !
ನೀನೆ ನೋಡುವೆ ಬಾರೊ
ನಾಳೆ ಮದುವೆ

ಉದಯನ : ರಾಗ: ಯಮನ್

ಮನದ ಮಂಡಿಗೆ ಸಾಕು
ಅಡಿಯ ಮುಂದಿಡು ಗೆಳೆಯ
ವಿದೂಷಹ : (ಲಘುರಾಗ ಸಂಯೋಜನೆ)

(ಹ್ಹಾ! ಹಾಗಿದ್ದ ಮೇಲೆ)

ಹಪ್ಪಳ ಸೊಂಡಿಗೆ ಉಪ್ಪಿನಕಾಯಿ
ತುಪ್ಪದಿ ಕರೆದ ಮಂಡಿಗೆ ಸುಯ್‌ಸುಯ್ !
ಚಪ್ಪರಿಸುತಲೀ ತಪ್ಪಲೆ ಪಾಯಸ
ಫೇಣಿ ಲಾಡು ಸಕ್ಕರೆಗೂಡು
ಸಾಕಪ್ಪಾ, ಬೇಕಪ್ಪಾ...
ಆಗಪ್ಪಾ.. ಮದುವೆಯಾ..
ಥೈ ಥೈ ಥೈ ಥೈ ಥೈ ಥೈ ಥೈ ಥೈ ಥೈ ಥೈ ಥೈ

– ನಿಷ್ಕ್ರಮಣ –

ನೋಟ – 4

(ಕತ್ತಲೆಯಲ್ಲಿ ಮೂರನೇ ದೃಶ್ಯದ ಹಿಂಬದಿಯ ತೆರೆ ಸರಿಯುತ್ತದೆ. ಈ ದೃಶ್ಯ ದಲ್ಲಿ ಒಂದು ಕಡೆ ವಾಸವದತ್ತೆ ವೀಣೆ ಹಿಡಿದು ನುಡಿಸುತ್ತಿರಬೇಕು. ಕಡೆಯ ತೆರೆಯ ಮುಂಭಾಗದಲ್ಲಿ ರಥ ನಿಧಾನವಾಗಿ ಹರಿದುಬರುವಂತೆ ಏರ್ಪಡಿಸಿರಬೇಕು. ರಥದಲ್ಲಿ ಉದಯನನ ತೋಳುದಿಂಬಾಗಿ, ಅವನೆದೆಗೆ ಒರಗಿ ಪದ್ಮಾವತಿ ಮಲಗಿರುತ್ತಾಳೆ. ಕತ್ತಲೆಯಲ್ಲೇ ವೀಣಾನಾದದೊಂದಿಗೆ ಸೂತ್ರಧಾರನ ನಿವೇದನೆ ಕೇಳಿಬರುತ್ತದೆ.)

ಸೂತ್ರಧಾರ : ಪದ್ಮಾವತಿಯ ಪರಿಣಯವೇನೋ ಆಗಿ ಮುಗಿಯಿತು, ಕೌಶಾಂಬಿಯ ಅರಸು ಉದಯನನ ಕೂಡೆ ! ಆದರೆ ತನ್ನ ಗಂಡನ ಅಭ್ಯುದಯಕ್ಕಾಗಿ ಸ್ವಸುಖವನ್ನೇ ತ್ಯಾಗಮಾಡಿದ ತ್ಯಾಗಮೂರ್ತಿ ವಾಸವದತ್ತೆಯ ನೈಜಸ್ಥಿತಿ ಬಹಿರಂಗವಾಗಲೇ ಇಲ್ಲ.

ಆ ದಿನವೂ ಒಂದು ಬಂತು –

ಅಂದೊಂದು ದಿನ –

ನೂತನ ರಾಜದಂಪತಿಗಳಾದ ಉದಯನ ಮತ್ತು ಪದ್ಮಾವತಿಯರು ಕಾಂಚನರಥಾರೂಢರಾಗಿ ತಮ್ಮ ಅರಮನೆಯ ಬಹಿರುದ್ಯಾನದಲ್ಲಿ ವಿಹರಿಸುತ್ತಿದ್ದಾಗ ಮೇಲುಪ್ಪರಿಗೆಯ ಕಿಟಕಿಯಿಮದ ಸುಶ್ರಾವ್ಯ ಗೀತವೊಂದು ಕೇಳಿ ಬರುತ್ತದೆ. ಆ ಕಂಠ ಉದಯನನಿಗೆ ಚಿಪರಿಚಿತವಾದದ್ದು... ಹಾಗೆಯೇ ಅವನ ನೆನಪಿನ ಸುಳಿ ಬಿಚ್ಚಿ ಅವನ ಅರಿವಿಗೆ ಬರುತ್ತದೆ. ಅದು ತನ್ನ ನೆಚ್ಚಿನ ವೀಣೆ ಘೋಷವತಿಯ ದನಿಯೆಂದು ! ಕಂಠವೂ ಸಹ ಅವಳದೇ.. ಅವಳದೇ.. ತನ್ನ ವಾಸವದತ್ತೆಯದೆ ಎಂದು.

ಅದೋ ನೋಡಿ – (ವಾಸವದತ್ತೆಯ ಮೇಲೆ ಬೆಳಕು ಬೀಳುವುದು)

ಅಲ್ಲಿ ಕುಳಿತಿರುವವಳೇ ಆವಂತಿಕೆ ಎಂಬಭಿಧಾನದಿಂದ, ತನ್ನ ಸವತಿಗೇ ಸಖಿಯಾಗಿ ಸೇವೆ ಸಲ್ಲಿಸಿದ ಸ್ತ್ರೀ ದೇವತಾಮೂರ್ತಿ ವಾಸವದತ್ತೆ. ಅವಳ ಕೈಯಲ್ಲಿ ಶೋಭಸುತ್ತಿರುವುದೇ ಘೋಷವತಿ ಎಂಬ ವೀಣೆ. ಕೇಳಿ ಆ ಹಾಡು !

ಹಾಡು : ರಾ: ಹಿಂದೋಳ
ಹೃದಯೇಶಾ...
ಶುಭದಾಶಾ..
ಬಾಳಿನ ನಲುಮೆಯ ಎಸೆದೀಶ..।
ಪ್ರೇಮದ ಮಿಡಿತಕೆ ತಂತಿಯು ನಾನು
ರಾಗದ ಝುಣಿತಕೆ ಝೇಂಕಾರ ನೀವು
ಪಾವನ ಗುಣಯುತ ಕರುಣೆಯು ನೀವು
ಜೀವನ ರಾಗದ ತೇಜವು ನೀವು ॥
ಹೃದಯೇಶಾ ...

(ಹಾಡು ಮುಗಿದ ಮೇಲೆ, ವಾಸವದತ್ತೆ ಬರೀ ವೀಣೆಯನ್ನೇ ಜೋರಾಗಿ ನುಡಿಸುತ್ತಾಳೆ. ಆಗ ಉದಯನ ಪದ್ಮಾವತಿಯರನ್ನು ಹೊತ್ತ ರಥ ನಿಧಾನವಾಗಿ ರಂಗದ ಮೇಲೆ ಚಲಿಸುತ್ತದೆ.)

ಸೂತ್ರಧಾರ :

ಅದೋ ಉದಯನನಿಗೆ ಹಾಡಿದ ಕಂಠ, ನುಡಿದ ವೀಣೇಗಳ ಬಗ್ಗೆ ಸಂದೇಹ ಮಾಯವಾಗುತ್ತಿದೆ. ಈ ರೀತಿಯ ನಾದಬ್ರಹ್ಮ ಪ್ರತೀತಗೊಳಿಸುವ ಸಾಹಸನಾದ ಶ್ರೀ ಘೋಷವತಿ. ಅದನ್ನು ನುಡಿಸಲು ತಿಳಿದಿದ್ದ ಏಕಮಾತ್ರ ಸ್ತ್ರೀ ವಾಸವದತ್ತೆ. ಇದನ್ನರಿತಿದ್ದ ಉದಯನನಿಗೆ ರಥದ ಮೇಲಿರಲಾಗುವುದಿಲ್ಲ. ಆಗ ರಥದಿಂದಿಳಿದು ವಾಸವದತ್ತೇ ಎಂದು ಜೋರಾಗಿ ಕೂಗುತ್ತಾ, ಓಡಿಬಂದು ವೀಣೆಯೊಡನಿದ್ದ ಆವಂತಿಕೆಯನ್ನಪ್ಪುತ್ತಾನೆ.

– ತುಸುಕಾಲ ಮೌನ –

ಅಷ್ಟರಲ್ಲಿ ವಿದೂಷಕ ಮತ್ತು ಯೌಗಂಧರಾಯಣ ಆಗಮಿಸುತ್ತಾರೆ. ರಥದಿಂದಿಳಿದು ಬಂದ ಪದ್ಮಾವತಿ ದಿಗ್ಭ್ರಾಂತಳಾಗಿ ಆನಂತರ ನಿಜಸ್ಥಿತಿಯನ್ನು ತಾನೇ ಊಹಿಸಿ, ಉದಯನಮತ್ತು ವಾಸವದತ್ತೆಯರನ್ನು ಸಂತೈಸುತ್ತಾಳೆ.

ಆನಂದ ತುಂದಿಲರಾಗಿ ಮೂವರೂ ರಥಾರೋಹಣ ಮಾಡುತ್ತಾರೆ. ಉದಯನ ತನ್ನ ಇಕ್ಕೆಲದಲ್ಲೂ ಈರ್ವರು ಪತ್ನಿಯರನ್ನು ಕೂರಿಸಿಕೊಳ್ಳುತ್ತಾನೆ. ರಥ ನಿಧಾನವಾಗಿ ಮುಂಬರಿಯುತ್ತದೆ. ವಿದೂಷಕನಿಗೆ ಖುಷಿ ! ಯೌಗಂಧರಾಯಣನಿಗೆ ತೃಪ್ತಿ.

– ವೃಂದ ಗೀತೆಯೊಂದಿಗೆ ಸಾಮೂಹಿಕ ನಾಟ್ಯ ಆರಂಭವಾಗುತ್ತದೆ –

ಎಲ್ಲ ನರ್ತಕಿಯರೂ ನರ್ತಿಸುತ್ತಾರೆ. ಕ್ರಮೇಣ ಮೊದಲು ಹೇಗೆ ತೆಗೆದುಕೊಂಡಿದ್ದವೋ ಹಾಗೆ ಒಂದಾದ ಮೇಲೊಂದರಂತೆ ತೆರೆಗಳು ಮುಚ್ಚಿಕೊಳ್ಳುತ್ತಾ ಹೋಗುತ್ತವೆ. ಕಡೆಯಲ್ಲಿ ರಂಗದ ಮುಂಭಾಗದ ಭಾಸನ ದೃಶ್ಯ ಮಾತ್ರ ಉಳಿಯುತ್ತದೆ. ಅವನ ಪಕ್ಕದಲ್ಲೇ ಕುಳಿತಿದ್ದ ಕಲಾದೇವಿ ಮತ್ತು ಸ್ಫೂರ್ತಿಕನ್ಯೆಯರೂ ಎದ್ದು ನಾಟ್ಯ ಮಾಡುತ್ತಾರೆ. ಭಾಸ ಓಲೆಕಟ್ಟನ್ನು ಕಟ್ಟಿ, ಕಣ್ಣಿಗೆ ಒತ್ತಿಕೊಂಡು, ಹೂ ಇಟ್ಟು ವ್ಯಾಸ ಪೀಠದ ಮೇಲೆ ಇಡುತ್ತಾನೆ. ನಾಟ್ಯಾಂಲಿ ಮುಕ್ತಾಯವಾಗಿ ತೆರೆ ಮುಚ್ಚುತ್ತದೆ.

ಹಿನ್ನೆಲೆ ಹಾಡು : ರಾಗ : ಬೃಂದಾವನ ಸಾರಂಗ
ಜಯ ಜಯ ಜಯ ಜಯ ಜಯ ನಾಟ್ಯಾಂಜಲಿ
ಜಯ ಜಯ ಜಯ ಹೇ ಜಯ ಗೀತಾಂಜಲಿ ॥

ಸಹ್ಯಾದ್ರಿ ಸವಿ ಸೋಗಿಲ ಮಕ್ಕಳು
ಅಂಬೆಗಾಲಿನಲಿ ಶೈಲವನೇರಲು
ಹಂಬಲದೊಳು ನಾವೆರಚಿದ ಮಂಜರಿ
ಇದುವೇ ಮಂಗಳ ಮಧು ನಾಟ್ಯಾಂಜಲಿ ॥1॥

ಭಾಸೋಲ್ಲಾಸದ ಮಧುತಮಹಾಸ
ವಾಸವದತ್ತಾ ನಾಟ್ಯವಿಲಾಸ
ಎದೆಯ ಬದುವಿನಲಿ ಹಸುರಾಗಿರಲಿ
ಎಂದೆಂದಿಗೂ ಇದು ಈ ನಾಟ್ಯಾಂಜಲಿ ॥2॥

– ಓಂ ತತ್ ಸತ್ –

**ನೆತ್ತಿಯ ಮೆಟ್ಟಿದನು**

(ಒಂದು ರೂಪಕ)

ವೃಂದಗಾನ : (ಗಾನದೊಂದಿಗೆ ಗಂಡು ಹೆಣ್ಣಿನ ಜೋಡಿ ನರ್ತನ)
ನೆತ್ತಿಯ ಮೆಟ್ಟಿದನು । ಶ್ರೀ ಹರಿ
ನೆತ್ತಿಯ ಮೆಟ್ಟಿದನು ॥

ವಾಮನ ರೂಪದಿ ದಾನವ ಬೇಡಿ
ಮೂರಡಿ ನೆಲವನು ನಡೆಮುಡಿ ಮಾಡಿ
ದಿವ್ಯಾಮೋದದಿ ದಿವದೆಡೆ ಬೆಳೆದು
ಭೂಮ್ಯೋಮಗಳನು ಎರಡಡಿ ಅಳೆದು
ಮೂರನೆಯಡಿಯಲಿ ಬಲಿಯನು ತುಳಿದು

ಮೆಟ್ಟಿದನೋ ಹರಿ
ನೆತ್ತಿಯ ಮೆಟ್ಟಿದನು ॥

ಸ್ತ್ರೀ : ಮೇಲೆ ಚುಕ್ಕೆಗಳಿಂದ ಕಿಕ್ಕಿರಿದ ಕರಿಬಾನು; ಬಳ್ಳಿಮಾಡದಲ್ಲಿ ಬೆಳ್ಳಗೆ ಮೂಡಿದ ಮಲ್ಲಿಗೆಯ ಮುಗುಳಂತೆ ಮಿನುಮಿನುಗುವ ನಕ್ಷತ್ರದಕ್ಷತೆಯ ಕಾಳು. ಕಳೆಗೆ ನಭೋಮಂಡಲದ ನಕ್ಷತ್ರಗಳನ್ನೇ ಹೋಲುತ್ತ ಝಗಝಘಿಸುತಿರುವ ದಿವ್ಯ ದೀಪಾವಳಿಯ ಕೋಟಿ ಕೋಟಿ ಹಣತೆಗಳ ಹಂತಿ ! ಮನೆಮನೆಗಳಲ್ಲಿ ಬೀದಿಬೀದಿಗಳಲ್ಲಿ, ಅಂಗಡಿ ಮುಂಗಟ್ಟುಗಳಲ್ಲಿ, ಗುಡಿಗೋಪುರಗಳಲ್ಲಿ ಎಲ್ಲಿ ನೋಡಿದರಲ್ಲಿ ದರದೆರೆದ ಹೂವುಗಳಂತೆ ಕುಡಿಯಾಡಿಸುವ ದೀವಿಗೆ ಗಳು ! ಓಹ್! ಇಂದು ಎಂತಹ ಬೆಳಕಿನ ಜಾತ್ರೆ ನೆರೆದಿದೆ ಇಲ್ಲಿ !

ಪುರುಷ: ಅಲ್ಲಿ ನೋಡು ಚೆನ್ನೆ, ಕಿಟಕಿ, ಬಾಗಿಲು, ತಾರಸಿ ಎಲ್ಲವೂ ಬೆಳಕಿ ಹೂವನ್ನೆ ಮುಡಿದಂತೆ ತೋರುತ್ತಿವೆ. ಹಣತೆಗಳನ್ನು ಹತ್ತಿಸಿ, ಆರತಿ ಬೆಳಗುತ್ತಿರುವ ಆ ಚೆಲುವೆಯರ ತಂಡದ ಹಾಡ ಕೇಳು –

ವೃಂದಗಾನ (ನರ್ತನ)

ವರುಷದ ಹರುಷದ ದೀವಳಿಗೆಯ ಬಾ
ಬೆಳಕನು ತುಂಬುತ ಮನೆಮನೆಗೆ
ನಂದನ ಚಂದನ ತಾರಾಲೋಕದ
ಸೌರಭ ಸೂಸುತ ಎದೆ ಎದೆಗೆ ॥1॥

ಕತ್ತಲ ಬಳ್ಳಿಯೆ ಹೂ ಬಿಟ್ಟಿತೊ ಎನೆ
ಸುತ್ತಲು ಬೆಳಗುವ ಓ ಬೆಳಕೆ
ದೀಪಾವಳಿಯಲಿ ದಿವದಿಂದಿಳಿಯುವ
ಶುಭ್ರ ಸನಾತನ ಶ್ರೀ ಬೆಳಕೆ ॥2॥

ಬೆಳಕಿನ ಚಿಲುಮೆಯೆ ಪದ್ಮಪ್ರಣತಿಯೆ
ಇಲೆಯಂಗಳವನು ಬೆಳಗಿಸು ಬಾ
ತಿಳಿವಿನ ಹೊಳೆಯನು ಹರಿ ಹರಿಸುತೆ ಬಾ
ದೀವಳಿಗೆಯ ನವ ತೇಜವೆ ಬಾ ॥3॥

ಸ್ತ್ರೀ ; ಓಹ್ ! ಹಾಡು ಮಧುರವಾಗಿದೆ; ಭಾವ ಬಂಧುರವಾಗಿದೆ

ಪುರುಷ ! ಗೆಳತಿ. ಕೆಲವರಿಗೆ ಇದು ವರ್ಷದ ಮೊದಲ ದಿನ; ಮತ್ತೆ ಕೆಲವರಿಗ ಇದು ಹೊಸ ದೀವಳಿಗೆ, ಆದರೆ ನನಗೆ ನಿನಗೆ ಮಾರ ಅಲ್ಲ, ಅದೋ ನೋಡು, ಆ ನವದಂಪತಿಗಳನ್ನು ಆ ಮನೆಗೆ ಇಂದು ಅಳಿಯ ಬಂದಿದ್ದಾನೆ ಹೊಸದಾಗಿ, ಅವನ ಪ್ರೇಯಸಿ ಅವಗುಂತನವಗತಿಯಾಗಿ, ಓರೆಗಣ್ಣಿನಬೆಳಕ ಬೀರಿ ಸ್ವಾಗತಿಸುತ್ತಿದ್ದಾಳೆ. ಅವರಿಬ್ಬರ ಬಾಳಿನಲ್ಲಿ ಇಂದಿನಿರುಳು ಬಂದು ಎಂದಿನಿರುಳಿಲ್ಲ, ಜೇನಿರುಳು ! ಮಧುರ ಮಿಲನದ ಈ ಪ್ರಥಮ ರಾತ್ರಿಯಲ್ಲಿ ಗಂಡು ಬೇಡುವುದಾದರೂ ಏನು?

ಹಾಡು :
ಇಂದು ದೀಪಾವಳಿಯು ಶುಭದಿವಸವೆಂದವರು
ಮಂದಿರವ ಸಿಂಗಾರಗೈಯುತಿಹರು
ಹಣ್ಣು ಹೂ ಎಳನೀರು ಪನ್ನೀರುಗಳನಿಟ್ಟು
ಮಲ್ಲಿಗೆಯ ಮಳೆಯನ್ನೆ ಸುರಿಸುತಿಹನು

ನವಿಲ ಮಂಚಕೆ ನಲ್ಲೆ ಬೆಳದಿಂಗಳೆರೆದಿಹರು
ಸುತ್ತಲೂ ಮಾಲೆಗಳ ಕೋಟೆ ಕಟ್ಟಿ
ಆವುದೋ ಸಗ್ಗಸಿರಿ ಸಾಕಾರಗೊಂಡಿಹುದು
ಬೆಸಸದಿರು ಏನೆಂದು ಬೆನ್ನು ತಟ್ಟಿ

ಕೃಷ್ಣರಾಧೆಯರಿತ್ತ ಗಿರಿಜೆ–ಹರರೆಮಗಿತ್ತ

ದಿವ್ಯದೀಕಷೆಯನಿಂದೆ ನಾವು ಪಡೆದು
ಎತ್ತೋಣು ಬಾ ಗೆಳತಿ ಒಲಿವನಾರತಿಯನ್ನು
ಪ್ರೇಮರಸ ತೈಲವನು ಎರೆದು ಎರೆದು

ಮನದ ಸಿಂಗರದಾಕೆ ಶೃಂಘರ ಸುಂದರಿಯೆ
ಮೇಲೇಳು, ಬಾ ; ಒಸಗೆ ಸಾಕು ಇನ್ನು
ಕೋಟಿ ದೀಪದ ನಡುವೆ ನಮ್ಮ ದೀವಿಗೆಯಿರಿಸಿ
ಹಾಡೋನ ಅನುರಾಗ ರಾಗವನ್ನು !

ಸ್ತ್ರೀ : ಇತ್ತ ನೋಡಿ... ಮಮತೆಯ ಮನೆಯಂಗಳದಲ್ಲಿ ಎಷ್ಟೊಂದು ಪಟಾಣಿಗಳು ಈ ಮಕ್ಕಳ ಹರ್ಷಕ್ಕೆ ಮೇರೆಯೇ ಇಲ್ಲ. ಎಷ್ಟೇ ಆಗಲಿ ಇದು ಅವರ ವರ್ಷ.. ಅಂದರೆ.. ಮಕ್ಕಳ ವರ್ಷ ! ಅವರ ಹರ್ಷದ ಹೊನಲು ಇಂದು ಎಲ್ಲೆಡೆಯೂ ಹರಿಯುತ್ತಿದೆ. ಆ ಚಿನ್ನರ ಹಾಡು ಕೇಳಿ –

ಹಾಡು: (ಮಕ್ಕಳ ವೃಂದಗಾನದಲ್ಲಿ ನರ್ತಿಸುತ್ತಾ)
ಬನ್ನಿ ಬನ್ನಿ
ಬೆಳಕ ತನ್ನಿ ॥
ಬೆಳಕ ಬಿತ್ತಿ
ಬೆಳಕ ಚೆಲ್ಲಿ
ಬೆಳಕಿನೆಳೆಯ
ಬಳ್ಳಿ ಬೆಳೆದು
ಬೆಳಕನುಂಡು
ಬೆಳಕ ಕುಡಿದು
ಹಾಡಿ ನಲಿಯುವ
ಪಾಡಿ ಬಳೆಯುವ ॥ಬನ್ನಿ ಬನ್ನಿ॥

(ವಚನದ ಧಾಟಿಯಲ್ಲಿ)
ಬಾಣ, ಬಿರುಸು, ಕಡ್ಡಿ, ಮತಾಪು
ಜಾಗರವಾಡುವ ಭೂ ಚಕ್ರ
ಅಲ್ಲೇ ಗಗನದಿ ಕಿಡಿಗಳ ಕಕ್ಕುವ
ರಾಕೆಟ್ ರೌಡಿಯ ಆ ವಕ್ರ

ಆನೆಯ ದಪ್ಪದ ಆನೆ ಪಟಾಕಿ !
ಕುದುರೆಯ ಗುರುತಿನ ಸಣ್ಣ ಪಟಾಕಿ !

ತಂತಿ ಮತಾಪು
ಆಟಂ ಬಾಂಬು
ಹೂ ಮಳೆಗರೆಯುವ
ಮದ್ದಿ ಬಾಲ
ಢಂ ಢಂ ಢಂ ಎನೆ
ಸಿಡಿಯುವ ಜಾಲ
ಚನುಡೆಸುವ ಬನ್ನಿ
ನುಡಿಸುವ ಬನ್ನಿ

ಹಾಡು : (ಪುರುಷಕಂಠ)
ನಾಡಿನ ಗುಡಿಯಲಿ ನರಕಾಸುರನಿಗೆ
ನವೀನ ಪೂಜೆಯು ನಡೆಯುತಿದೆ
ಸಾಸಿರ ಕೈಗಳ ರಕ್ತಾಂಗುಲಿಯಲಿ
ಶೋಷಣೆಯಾರತಿ ಎತ್ತುತಿದೆ !

ಈ ನರಮೇಧಕೆ ಶಿಶು ಬಲಿಯಾಗಿದೆ
ಚೈತ್ಯಾಗ್ನಿಯೇ ಚಿತೆ ಏರುತಿದೆ
ನೇಸರ ತೇರಿಗೆ ಆಸೆಯಿಲ್ಲದೆ
ಭಸ್ಮಾಸರುನನು ಬೇಡುತಿದೆ !

(ಕ್ರಮೇಣ ನಾದ ತಗ್ಗುತ್ತಾ ಬರುತ್ತದೆ. ಸ್ತ್ರೀ ಕಂಠದ ವ್ಯಾಖ್ಯಾನ ಹೆಚ್ಚುತ್ತಾ ಹೋಗುತ್ತದೆ)
ಸ್ತ್ರೀ : ಇದೇನಿದು ! ಇದ್ದಕ್ಕಿದ್ಧಂತೆಯೇ ಎಂದಿಲ್ಲದ ರೋಧನ ಇಂದು ಸ್ವಾಮಿ ಅಲ್ಲಿ ನೋಡಿ, ಬೆಳಕಿನ್ನೂ ಅಲ್ಲಿ ಮೂಡಿದಂತಿಲಲ, ಹಾಳು ಕತ್ತಲೆ ಬತ್ತಲೆಯಾಗಿಯೇ ಮಲಗಿದೆ !
ಪುರುಷ : ಚಿನ್ನೆ, ಅದಕ್ಕೆ ಅರಿವಿಲ್ಲದಿಲ್ಲ.. ಅದು ನೈರಾಶ್ಯದಾಕಳಿಕೆ !

ಸ್ತ್ರೀ : ಕಾರಣ..?

ಪುರುಷ : ಅದನ್ನು ಹುಡುಕಿ ತೋರುವ ವಿಜ್ಞಾನಿ ಇನ್ನೂ ಹುಟ್ಟಿ ಬಂದಿಲ್ಲ.. ಮೊದಲು ಆತನ ಆಲಾಪ–ಆ ಪ್ರಲ್ಲಾಲಾಪವನ್ನು ಕೇಳು –

ಹಾಡು : (ಮುಂದುವರಿಯುತ್ತದೆ.. ಮೂರನೇ ಚರಣದೊಂದಿಗೆ, ಮೇಲಿನ ಸಂಭಾಷಣೆ ನಡೆಯುವಾಗಲೂ ಆ ಹಾಡಿನ ಗುಂಗು ಇರಬೇಕು)
ದೀಪದ ಬುಡದಲಿ ಕತ್ತಲು ಕವಿದಿದೆ
ತುದಿಯೊಳು ತುಂಬಿದೆ ಧೂಮಶಿಖೆsss
ನಂತಿಗೊಟ್ಟಾಗಿದೆ ಮತಿಗೆಟ್ಟಾಗಿದೆ
ಬರಬೇಕಾಗಿದೆ ಸು–ಸ್ಥಿರತೇss ॥

ಅನ್ನವೆ ಹಸಿದಿದೆ ಜಲಬಾಯಾರಿದೆ
ಭೂಮಿಯು ಬಯಸಿದೆ ಹಿಡಿಮಣ್ಣು ॥
ಏನೋ ಎಂಥದೊ ಹೆಸರಿಲ್ಲದ ತಮ
ಭಾಸುರ ತೇಜವೆ ಕರಗಿಸು ಬಾ
ದಿವ್ಯ ದಿವಂಗತದ ಜ್ಯೋತಿರ್ಲೇಖೆಯೆ
ಭೂತಳದಲಿ ಹರಿದಾಡುತೆ ಬಾ

ಸ್ತ್ರೀ : ಪರಿಸರದ ಪ್ರಕ್ಷುಬ್ಧತೆ, ರಾಜಕೀಯ ಮತ್ತು ಸಾಮಾಜಿಕ ಬದುಕಿನ ಅಸ್ವಸ್ಥತೆ– ಇವು ರಾಷ್ಟ್ರಪ್ರೇಮಿಯೊಬ್ಬನ ಹೃದಯ ವೇದಿಕೆಯ ಮೇಲೆ ಒಂದು ಕುರುಕ್ಷೇತ್ರವನ್ನೇ ನಿರ್ಮಿಸಿರಬೇಕು. ನಾಡಿನೇಳಿಗೆಗಾಗಿ ಚಿಂತಿಸುವ ರಾಷ್ಟ್ರಕನ ಮೊರೆ ಅದು ಅಲ್ಲವೆ?

ಪುರುಷ: ಹೌದು. ಮಾನವ ತನ್ನ ಇತಿಹಾಸ ಪುಟಗಳಲ್ಲಿ ರಸನಿಮಿಷ, ವಿಷ ನಿಮಿಷಗಳನ್ನು ಈ ದೀಪಾವಳಿಯ ಬೆಳಕಿನಲ್ಲಿ ಹುಡುಕಿ ಗುರುತಿಸಿ, ಟಿಪ್ಪಣಿ ಹಚ್ಚಿಕೊಳ್ಳಬೇಕಾಗಿದೆ. ಅದಕ್ಕಾಗಿಯೇ ಬಂಇದೆ ಈ ದೀಪಾವಳಿ ! ಚೆಲುವೆ, ಕಳೆದ ತಿಂಗಳು ನವರಾತ್ರಿಯ ದಿನಗಳಲ್ಲಿ ದೇವಿ,ದುರ್ಗ, ಧರಿತ್ರಿ, ಸರಸ್ವತಿಯರ ಔಪಾಸನೆಯಿಂದ ವಿಜಯಿಗಳಾದಂತೆ,

ಇಂದು ದೀಪಾವಳಿಯ ಶುಭ ದಿನದಲ್ಲಿ ನಮ್ಮಲ್ಲಿರುವ ದೈತ್ಯತೆಯನ್ನು ನೀಗಿಕೊಂಡು ದೇವತೆಳೆನಿಸಿಕೊಳ್ಳಬೇಕು. ಆ ದಿವ್ಯ ಸಂದೇಶವೇ ಈ ದೀವಳಿಗೆಯಲ್ಲಿ ಧ್ವನಿತವಾಗಿದೆ.

ಸ್ತ್ರೀ : ಈಗ ಒಂದು ಪ್ರಶ್ನೆ.. ಸ್ವಾಮಿ, ನಿನ್ನೆ ನರಕ ಚತುರ್ದಶಿ ನಾಳೆ ಬಲಿಪಾಡ್ಯಮಿ– ಇವುಗಳಲ್ಲಿ ಸಾಮ್ಯತೆ ಇದೆಯೆ?

ಪುರುಷ : ಇಲ್ಲ. ನರಕಾಸುರನ ಸಂಹಾರಕ್ಕಾಗಿ ಶ್ರೀಮನ್ ಮಹಾವಿಷ್ಣು ಕೃಷ್ಣಾವತಾರವೆತ್ತಿದ, ಬಲಿಚಕ್ರವರ್ತಿಯ ಉದ್ದಾರಕ್ಕಾಗಿ ಅದೇ ಶ್ರೀ ಹರಿ ವಾಮನಾವತಾರಿಯಾದ, ಒಂದು ಅವತಾರಕ್ಕೂ ಮತ್ತೊಂದು ಅವತಾರಕ್ಕೂ ಯುಗಯುಗಗಳ ಅಂತರ ಇದೆ.

ಸ್ತ್ರೀ : ಈ ಎರಡೂ ಬಗೆಯ ಹಬ್ಬದಾಚರಣೆಗೆ ಮತ್ತೊಂದು ಸೇರಿ ತ್ರಿವೇಣಿ ಸಂಗಮವಾಗಿದೆ. ಅದು ಕಾರ್ತಿಕೇಯನನ್ನು ಕುರಿತು ಪರ್ವ, ಕರ್ನಾಟಕದ ಕೆಲವೆಡೆಗಳಲ್ಲಿ ಸಗಣಿಯಲ್ಲಿ ಬೆನಕನನ್ನು ಮಾಡಿ, ಹುಚ್ಚೆಳ್ಳು ಹೂವು, ರಾಗಿ ತೆನೆ, ಜೋಳದ ಗರಿ ಇವುಗಳಿಂದ ಕೆರಕ ಅಥವ ಕಾರ್ತಿಕೇಯನನ್ನು ನಿರ್ಮಿಸುತ್ತಾರೆ. ಬಹುಶಃ ಕೃತ್ತಿಕಾ ನಕ್ಷತ್ರಾಭಿಮಾನಿ ದೇವತೆಗಳಿಗೆ ಪ್ರೀತಿಯ ಪುತ್ರನದ, ಮುಂದಿನ ಕಾರ್ತಿಕ ಮಾಸದಲ್ಲಿ ಆಗಮಿಸಲಿರುವ ಕಾರ್ತಿಕೇಯ ಅಥವಾ ಕುಮಾರಸ್ವಾಮಿಯನ್ನು ಅವರು ಇಂದೆ ಇದೇ ತಿಂಗಳಿನಲ್ಲಿ ಆಹ್ವಾನಿಸುತ್ತಿದ್ದಿರಬೇಕು. ಅವರೂ ಮೂರೂ ದಿನಗಳು ಹೂಡುವ ಈ 'ಕೆರಕ' ಮೂರು ರೂಪದಲ್ಲಿರುತ್ತಾನೆ. ಮೊದಲ ದಿನದ ಸಗಣಿ ಕಟ್ಟಿ, ಚೌಕಾಕಾರ, ಎರಡನೆಯ ದಿನದ್ದು ತ್ರಿಕೋಣ ಚಿಹ್ನೆ, ಮೂರನೆಯ ದಿನದ್ದು ಸ್ವಸ್ತಿಕಾಕೃತಿ.

ಪುರುಷ : ಈ ಮೂರು ದಿನಗಳ ಆಚರಣೆ ಬೇರೆ ಬೇರೆ ಕಾರಣಗಳಿಗಾಗಿ ಇದ್ದರೂ, ಅವುಗಳನ್ನು ಒಟ್ಟಿಗೆ ಕೂಡಿಸಿರುವುದನ್ನು ನೋಡಿದರೆ, ಬಹುಶಃ ವಾಮನಾವತಾರಿಯಾದ ಭಗವಂತನ ಮೂರು ಪಾದಗಳ ಸಂಕೇತವಿರಬಹುದು.

ಸ್ತ್ರೀ : ನೀವು ಏನೇ ಹೇಳಿ.. ನಮ್ಮ ಪುರಾಣಗಳು ಸುಳ್ಳಿನ ಸರಪಣಿಗಳು.
ಪುರುಷ : ತಪ್ಪು, ತಪ್ಪು... ನಮ್ಮ ಪ್ರಸಿದ್ಧ ಪುರಾಣಗಳ ಬಗಗೆ ನಿನ್ನದು ಶುದ್ಧಾಂಗ ತಿಳುವಳಿಕೆ. ಕೇಳು, ನಮ್ಮ ಪುರಾಣಗಳು ಮಾನವನವತಾರದ ಪೂರ್ವಪ್ರತಿಮೆಗಳ, ಅಲ್ಲಿಯದು ಭೌತ ಸತ್ಯವಲ್ಲ, ಭಾವ ಸತ್ಯ, ಅವು ನಿತ್ಯ ಸತ್ಯಕ್ಕೊಡಿದ್ದ ಮಹಪ್ರತಿಮೆಗಳು.

ಸ್ತ್ರೀ : ಅದೇನೆ ಇರಲಿ. ರಾಕ್ಷಸನೊಬ್ಬನ ಸಂಹಾರಕ್ಕೆ ಭಗವಂತ ಭೂಮಿಗವತರಿಸಿ ಬರಬೇಕೆ? ಅವತಾರದ ಮೇಲೆ ಅವತಾರ ಎತ್ತಬೇಕೆ? ಇದು ಎಂತಹ ವಿಪರ್ಯಾಸ !

ಪುರುಷ : ನಮ್ಮ ಪುರಾಣಗಳ ಬಗೆಗೆ ನಿನ್ನ ಲಘು ವಿಮರ್ಶೆ ಸಲ್ಲ. ಅದರ ಅರ್ಥ ಬೇರೆ. ಕೇಳು–ದೈತ್ಯನೊಬ್ಬನನ್ನು ಧ್ವಂಸ ಮಾಡಲಿಕ್ಕಾಗಿಯೇ ಭಗವಂತ ಅವತರಿಸಿದ ಅಂದರೆ ಅದು ಅವನ ದೇವತ್ವವನ್ನು ಅವಹೇಳನಗೊಳಿಸಿದಂತೆ : ಅವತಾರದ ಪಾವಿತ್ರ್ಯತೆಗೆ ಅಪಚಾರ ಮಾಡಿದಂತೆ ಅವನ ಅವತಾರ ರಕ್ಕಸಕೀಟವೊಂದರ ಸಂಸ್ಕೃತಿಗಾಗಿ ಅಷ್ಟೇ ಅಲ್ಲ. ಲೋಕ ಕಲ್ಯಾಣಕ್ಕಾಗಿ ಸೃಷ್ಟಿಯ ಸಮಷ್ಟಿ ಪ್ರಜ್ಞೆಯ ಸಾಮೂಹಿಕ ವಿಕಾಸಕ್ಕಾಗಿ, ಸರ್ವತೋಮುಖವಾದ ಚೈತನ್ಯೋನ್ಮೇಷನಕ್ಕಾಗಿ, ನವೋನವ ಋತಶಕ್ತಿ ಪ್ರಕಾಶನಕ್ಕಾಗಿ, ಬರಿಯ ಭೂತ ಸಂಸ್ಕೃತಿ ಅಲ್ಲ.

ಸ್ತ್ರೀ : ಒಳ್ಳೆಯ ಉತ್ತರ.. ಸಂತೋಷ.. ಆದರೆ ಸ್ವಾಮಿ, ಈ ಸಮಸ್ಯೆಯನ್ನು ಬಗೆಹರಿಸಿ; ನಾನು ಕೇಳಿದ್ದೇನೆ ದೇವ–ದಾನವರು ಬೇರೆ ಬೇರೆಯಾಗಿ ಕಂಡರೂ, ಒಂದೇ ವೃಕ್ಷದ ಎರಡು ಶಾಖೆಗಳು, ಅಂದರೆ ಒಬ್ಬ ತಂದೆಯ ಇಬ್ಬರು ಮಕ್ಕಳು ಎಂದು, ಹೀಗಿದ್ದರೂ ಅವರಲ್ಲಿ ಎರಡು ಬಗೆಯ ವಿರುದ್ದ ಗುಣಗಳು ಬೆಳೆಯಲು ಕಾರಣ ಏನು? ಪರಸ್ಪರ ವೈಷಮ್ಯ ಏಕೆ? ಈ ವೈಪರೀತ್ಯಕ್ಕೆ ಕಾರಣ ತಿಳಿಸುತ್ತೀರಾ?

ಪುರುಷ : ಅಗತ್ಯವಾಗಿ.. ದೇವತೆಗಳೂ, ದಾನವರೂ ಕಶ್ಯಪನ ಮಕ್ಕಳು. ಆದರೆ ಅವನ ಇಬ್ಬರು ಮಡದಿಯರಲ್ಲಿ ಹುಟ್ಟಿದವರು. ದಿತಿಯ ಹೊಟ್ಟೆಯಲ್ಲಿ ಹುಟ್ಟಿದವರು ದೈತ್ಯರಾದರು. ಅದಿತಿಯ ಹೊಟ್ಟೆಯಲ್ಲಿ ಹುಟ್ಟಿದವರು ಅದಿತೇಯರಾದರು ಅರ್ಥಾತ್ ದೇವತೆಗಳೆನಿಸಿದರು. ಅವರಿಗೆ ಶುಕ್ರಾಚಾರ್ಯ ಗುರುವಾದ, ಇವರಿಗೆ ಬೃಹಸ್ಪತಿ ಓಜನಾದ. ಅಕ್ಕಪಕ್ಕದಲ್ಲೇ ಬೆಳೆಯುತ್ತಿರುವ ಮಾವು ಮತ್ತು ಬೇವುಗಳು ಒಂದೇ ಭೂಮಿಯಿಂದ ಒಂದೇ ರೀತಿಯ ಸಾರ

ಹೀರಿ ಬೆಳೆಯುತ್ತವೆಯಾದರೂ, ಅವುಗಳ ಸವಿಯಲ್ಲಿ ಎಷ್ಟೊಂದು ಅಂತರ ಇದೆ ನೋಡು. ಭೂಮಿಯ ಸಾರ ಮಾವಿನಲ್ಲಿ ಸಿಹಿಯಾಯಿತು. ಬೇವಿನಲ್ಲಿ ಕಹಿಯಾಯಿತು. ತೆಂಗಿನಲ್ಲಿ ತಿಳಿನೀರಾಯಿತು, ಈಚಲದಲ್ಲಿ ಹೆಂಡವಾಯಿತು. ಅದೇ ರೀತಿ ಒಬ್ಬನೇ ತಂದೆಯ ಮಕ್ಕಳಾದರೂ ದೇವ–ದಾನವರಲ್ಲಿ ಗುಣಗಣನೆಯಲ್ಲಿ ಭೂಮಿ, ಆಕಾಶಗಳಷ್ಟು ಅಂತರ ಪಡೆಯಿತು.
ಸ್ತ್ರೀ : ಈಗ ಹೇಳಿ ಬಲಿ ಓರ್ವ ರಾಕ್ಷಸ. ಆ ರಕ್ಕಸನಿಗೆ ಪ್ರತಿವರ್ಷವು ಹಬ್ಬವೇಕೆ? ಪೂಜೆ ಏಕೆ? ಇದು ದೈತ್ಯೋಪಾಸನೆಯಲ್ಲವೆ? ನಮ್ಮ ಧರ್ಮದ ವಿರೋಧಾಭಾಸವಲ್ಲವೆ? ಇದನ್ನು ನಮ್ಮ ಜನರ ಮೌಢ್ಯವೆನ್ನಲೆ, ಇಲ್ಲವೆ ಬೊಗಳೆತನವೆನ್ನಲೆ?

ಪುರುಷ : ಏನನ್ನೂ ಅನ್ನಬೇಡ ಕೇಳು, ಪೂರ್ಣದರ್ಶನ ಭಾರತೀಯ ಧರ್ಮದ ಬುನಾದಿ. ಆ ದರ್ಶನ ಭಾರತೀಯ ಧರ್ಮದ ಬುನಾದಿ. ಆ ದರ್ಶನಕ್ಕೆ ಸರ್ವವೂ ಸಮಾನವೆ. ಶಿವ–ಅಶಿವಗಳಾಗಲಿ, ವಿದ್ಯೆ–ಅವಿದ್ಯೆಗಳಾಗಲಿ, ದೇವತ್ವ–ದಾನವತ್ವಗಳಾಗಲಿ ಎಲ್ಲವೂ ಒಂದೇ. ರಾಮತ್ವ ಅದರ ಒಂದು ಮುಖವಾದರೆ, ರಾವಣತ್ವ ಅದರ, ಇನ್ನೊಂದು ಮುಖ. ಶಿವೆಯಲ್ಲಿರುವ ಸಾತ್ವಿಕ ಮತ್ತು ತಾಮಸ (ಕಳೆಗಳಿದ್ದಂತೆ ಒಂದೇ ಹಕ್ಕಿಯ ಎರಡು ರೂಪಗಳು ಈ ದೇವ–ದಾನವ ಕಲ್ಪನೆಗಳು, ಇವುಗಳ ಸಾಕ್ಷಾತ್ಕಾರ ಮಾನವನಲ್ಲಿ ಆಗುತ್ತಿರಬೇಕು. ಮಾನವ ಹೃದಯ ದೇವತ್ವ ಮತ್ತು ದಾನವತೆಗಳ ಆ ದ್ವಂದ್ವ ಗುಣಗಳ ಸಂಗಮಸ್ಥಾನ. ಆದರೆ ಆತನಲ್ಲಿರುವ ದೇವತ್ವ ಸದಾ ಜಾಗೃತವಾಗಿದ್ದು, ದೈತ್ಯತೆಯನ್ನು ಮೆಟ್ಟುತ್ತಿರಬೇಕು. ಅದರ ಸಂಕೇತ ಸೃಷ್ಟಿ ಬಲಿಚಕ್ರವರ್ತಿಯ ಪುಣ್ಯ ಕಥೆ.

ಸ್ತ್ರೀ : ಅಂದರೆ ನಿಮ್ಮ ಅಭಿಪ್ರಾಯದಂತೆ ಬಲಿ ಹುಟ್ಟಿನಿಂದ ರಾಕ್ಷಸನಾದರೂ, ಭಾವನೆಯಲ್ಲಿ ದೇವತೆ ಎಂದೇ?
ಪುರುಷ; ಹೌದು, ಅವನು ಭಕ್ತಿಯ ಮೇರು, ಸದ್ಭಾವನೆಯ ಉತ್ತುಂಗಶೃಂಗ, ವಿಶ್ವಶಕ್ತಿಯ ಪವಿತ್ರ ಪಾದಸ್ಪರ್ಶದಿಂದ ಪುನೀತನಾದ ಪುಣ್ಯ ಮೂರ್ತಿ, ದೈತ್ಯತೆಯನ್ನು ನೀಗಿಕೊಂಡು ದೈವತ್ವಕ್ಕೇರಿ ಮಹದ್ ವಿಭೂತಿ.

ಸ್ತ್ರೀ : ಅವರ ವಿಭೂತಿತ್ವದ ಹಿನ್ನೆಲೆಯಲ್ಲಿ ಅವನ ಧರ್ಮಪತ್ನಿ ವಿಂಧ್ಯಾವಳಿಯ ಪಾತಿವ್ರತ್ಯದ ಹೋಲೆ ಹರಿದಿದೆ ಎನ್ನುವುದನ್ನು ಯಾರೂ ಮರೆಯಬಾರದು ಅಲ್ಲವೆ?
ಪುರುಷ : ಸತ್ಯವಾಗಿ, ವಿಂದ್ಯಾವಳಿಯ ಪಾತಿವ್ರತ್ಯದ ತೀವ್ರ ತಪಶ್ಶಕ್ತಿಯ ಜತೆಯಲ್ಲಿ. ಅವನ ಗುರು ಶುಕ್ರಾಚರ್ಯ ಅನುಗ್ರಹ ಆಶೀರ್ವಾದಗಳೂ ಬೆರೆತಿದೆ. ಬಲಿಚಕ್ರವರ್ತಿಯು ವೈಹಾಸವೆಂಬ ಮಾಯಾ ವಿಮಾನವನ್ನೇರಿ ದೇವೇಂದ್ರನೊಡನೆ ಹೋರಾಡಿ ಮಡಿದ. ಆದರೂ ಶುಕ್ರಾಚಾರ್ಯನಿಂದ ಮೃತ ಸಂಜೀವಿನೀ ಭಾವದಿಂದ ಬದುಕಿ, ವಿಶವಜಿತ್ ಯಾಗ ಮಾಡಿ, ಅಗ್ನಿದೇವನ ಮೂಲಕ ರಥಾಶ್ವಧ್ವಜಗಳನ್ನೂ, ತನ್ನ ಪಿತಾಮಹ ಪ್ರಹ್ಲಾದನಿಂದ ದಿವ್ಯ ಧನಸ್ಸನ್ನೂ, ಅಕ್ಷೆ ತೂಣಿರಗಳನು ಪಡೆದು, ಇಂದ್ರನನ್ನು ಸೋಲಿಸಿ, ಸ್ವರ್ಗ ಸಾಮ್ರಾಜ್ಯಕ್ಕೆ ಒಡೆಯನಾದ.

ಸ್ತ್ರೀ : ಕೇಳಿದ್ದೇನೆ. ಪುನರ್ಜಾತನಾದ ಬಲಿ ಬಹುಬೇಗ ಪ್ರಖ್ಯಾತನಾದ. ಅವನ ಅಭ್ಯುದಯವನ್ನು ಕಂಡು ಅದಿತಿಗೆ ತುಂಬಾ ಸಂಕಟವಾಯಿತು. ತನ್ನ ಮಕ್ಕಳ ಪುನರುತ್ಥಾನಕ್ಕಾಗಿ ಪತಿ ಕಶ್ಯಪನನ್ನು ಬೇಡಿದಳು.

ಅದಿತಿ ; ಸ್ವಾಮಿ, ಏನನ್ನೂ ಕಾಣದವರಂತೆ ಕಣ್ಮುಚ್ಚಿ ಕುಳಿತಿರೇಕೆ? ದೈತ್ಯದಾನವರಂತೆ ನನ್ನ ಹೊಟ್ಟೆಯಲ್ಲಿ ಹುಟ್ಟಿದ ದೇವತೆಗಳೂ ನಿಮ್ಮ ಮಕ್ಕಳಲ್ಲವೆ? ನನ್ನ ಮಕ್ಕಳ ಅದಿಕಾರ, ಸಂಪತ್ತುಗಳನ್ನು ನನ್ನ ಸವತಿಯ ಮಕ್ಕಳಾದ ದೈತ್ಯ ದಾನವರು ಕಸಿದುಕೊಂಡಿದ್ದಾರೆ. ಪ್ರಬಲರಾದ ಅವರನ್ನು ಇದಿರಿಸಲಾರದೆ ಸಾತ್ವಿಕ ಸ್ವಭಾವದ ನನ್ನ ಮಕ್ಕಳು ತಲೆ ಮರೆಸಿಕೊಂಡು ದೇಶಾಂತರಗತರಾಗಿದ್ದಾರೆ. ನನ್ನ ಮಕ್ಕಳನ್ನು ಕಾಪಾಡಿ, ಅವರ ಸಾಮ್ರಾಜ್ಯವನ್ನು ಅವರಿಗೆ ಕೊಡಿಸಿ ಕೊಡಿ.. ರಕ್ಷಿಸಿ.. ರಕ್ಷಿಸಿ..

ಕಶ್ಯಪ: ಅದಿತಿ, ಶಿಕ್ಷೆಗೆ, ರಕ್ಷಣೆಗೆ ನಾನಾರು? ಜಗನ್ನಾಟಕಸೂತ್ರಧಾರಿಯಾದ ಭಗವಂತನ ಮರೆಹೋಗು. ಪ್ರಯೋವ್ರತವನ್ನಾಚರಿಸಿ, ಅವರನ ಕೃಪೆಗೆ ಪಾತ್ರಳಾಗು.

ಪುರುಷ : ಅದಿತಿ ತಪಸ್ಸನ್ನಾಚರಿಸಿದಳು ತಪಸ್ಸು ಫಲಿಸಿತು. ಶ್ರೀಹರಿಯು ಪ್ರತ್ಯಕ್ಷನಾಗಿ :

ಶ್ರೀಹರಿ: ಅಮ್ಮಾ ದೇವಮಾತೆ, ನಿನ್ನ ಬಯಕೆಯೇನೆಂಬುದು ನನಗೆ ಗೊತ್ತು. ನಾನು ನಿನ್ನ ಗಂಡನ ತಪಸ್ಸಿನಲ್ಲಿ ನೆಲೆಸಿ ನಿನ್ನ ಗರ್ಭದಲ್ಲಿ ಮಗನಾಗು ಹುಟ್ಟುತ್ತೇನೆ. ಅನಂತರ ನಿನ್ನ ಮಕ್ಕಳನ್ನು ಕಾಪಾಡುತ್ತೇನೆ. ಆದರೆ ಈ ಸಂಗತಿ ಮಾತ್ರ ರಹಸ್ಯವಾಗಿರಲಿ.

ಪುರುಷ: ಹೀಗೆಂದು ನುಡಿದ ಭಗವಂತ ಅದಿತಿಯ ಹೊಟ್ಟೆಯಲ್ಲಿ ವಾಮನನಾಗಿ ಹುಟ್ಟಿದ; ಕಶ್ಯಪಾಶ್ರಮದಲ್ಲಿ ಉದಿತೋದಿತನಾಗಿ ಬೆಳೆದ. ಅಷ್ಟರಲ್ಲಿ ನರ್ಮದಾ ನದಿಯ ತೀರದಲ್ಲಿ ವಿಶ್ವವಿಜೇತನಾದ ಬಲೀಂದ್ರನು ಅಶ್ವಮೇಧಯಾಗ ಮಾಡುತ್ತಿದ್ದಾನೆಂದು ತಿಳಿಯಿತು. ಕೂಡಲೇ ವಾಮನಮೂರ್ತಿ ಅಲ್ಲಿಗೆ ಹೊರಟ. ಆ ತೇಜೋಮೂರ್ತಿಯನ್ನು ಕಂಡ ಬಲೀಂದ್ರ ಭಕ್ತಿ, ಗೌರವಗಳಿಂದಲೇ ಸ್ವಾಗತಿಸಿದ; ಕನಕಪೀಠದ ಮೇಲೆ ಕೂರಿಸಿದ. ಅರ್ಘ್ಯಪಾದ್ಯಾದಿಗಳನ್ನಿತ್ತು, ಭಕ್ತಿಭಾವ ಭರಿತನಾಗಿ –

ಬಲಿ : ಸ್ವಾಮಿ ಶತಮಾನಗಳ ತಪಸ್ಸೇ ಸಾಕಾರಗೊಂಡಂತಿರುವ ತಮ್ಮ ದಿವ್ಯ ದರ್ಶನದಿಂದ ಮಾನ್ಯನಾದೆ. ನನ್ನ ವಂಶವು ಪಾವನವಾಯಿತು. ನನ್ನ ಅಶ್ವಮೇದಯಾಗದ ಭೂಮಿಕೆಯಾದ ಈ ನರ್ಮದಾ ತರಂಗಿಣಿಯ ತೀರವು ಪುನೀತವಾಯಿತು; ನನ್ನ ಯಾಗವೂ ಸಫಲವಾಯಿತು. ಮಹಾತ್ಮಾ, ನಿನ್ನನ್ನು ನೋಡಿದರೆ ಯಾವುದೋ ಕಾರ್ಯಾರ್ಥವಾಗಿ ನನ್ನ ಬಳಿಗೆ ಬಂದಂತೆ ತೋರುತ್ತಿದೆ. ಹೇಳು ತಂದೆ, ನಿಸ್ಸಂದೇಹದಿಂದ ನುಡಿ. ವಿಶ್ವವಿಜೇತನಾದ ಈ ಬಲೀಂದ್ರನು ನಿನ್ನ ಬಯಕೆ ಏನಿದ್ದರೂ ನೆರವೇರಿಸಿ ಕೃತಾರ್ಥನಾಗುತ್ತಾನೆ.

ವಾಮನ : ಬಲೀಂದ್ರ ಶುಕ್ರನಂತಹ ಗುರು. ಪ್ರಹ್ಲಾದನಂತಹ ತಾತ ನಿನಗಿದ್ದಾರೆ. ಅವರ ಸದ್ಗುಣಗಳೇ ನಿನ್ನಲ್ಲಿ ಮುರ್ತೀಭವಿಸಿದೆ. ನನಗೆ ಹೆಚ್ಚೇನೂ ಬೇಡ. ಕೇವಲ ಮೂರೇ ಮೂರು ಪಾದದಷ್ಟು ಭೂಮಿಯನ್ನು ನನಗೆ ದಯಪಾಲಿಸು. ಅಷ್ಟು ಸಾಕು.

ಬಲಿ : ಹಹ್ಹಹ್ಹಾ ! ಅಯ್ಯೋ ಮಂಕು ಬ್ರಾಹ್ಮಣಾ ! ಎಂತಹ ಸಣ್ಣ ಬೇಡಿಕೆಯೋ ನಿನ್ನದು? ತ್ರಿಲೋಕಪತಿಯಾದ ನನ್ನಲ್ಲಿ ಮಂಡಲದ ಒಡೆತನವನ್ನೇ ಬೇಡಿದ್ದರೂ, ಆನಂದದಿಂದ ಕೊಡುತ್ತಿದ್ದೆ. ಏಕೆಂದರೆ ಈ ಬಲಿಚಕ್ರವತಿಯಿಂದ ದನ ಪಡೆದವನು ಬೇರೊಬ್ಬನ ಬಳಿ ಕೈ ಚಾಚಬಾರದು. ಅಂತಹ ನಿಧಿಯನ್ನೇ ನಿನ್ನ ಮಡಲಿಗಿರಿಸಬೇಕೆಂದಿದ್ದೆ. ಆದರೆ ಮೂರಡಿ ಭೂಮಿಯನ್ನು ಬೇಡಿ, ನನಗೆ ನನ್ನ ಘನತೆಗೆ ಅಪಮಾನವನ್ನಸಗುತ್ತಿದ್ದೀಯೆ !

ವಾಮನ : ಬಲಿಚಕ್ರವರ್ತಿ, ಆಸೆಗೆ ಕೊನೆ ಎಲ್ಲಿದೆ ಹೇಳು? ಆಸೆ ಆಕಾಶದಷ್ಟು ಅಗಲವಂತೆ ! ಅದಕ್ಕೆ ಮೂಲವೂ ಇಲ್ಲ, ಚೂಲವೂ ಇಲ್ಲ. ಆ ಕಾರಣ ನನ್ನ ಆಸೆಯನ್ನು ಮಿತಗೊಳಿಸಿಕೊಂಡು ಬೇಡುತ್ತಿದ್ದೇನೆ. ಎಲ್ಲಿ, ನಾನು ಬೇಡಿದಂತೆ ನನಗೆ ಮೂರೇ ಮೂರು ಪಾದದಷ್ಟು ಭೂಮಿಯನ್ನು ಧಾರೆಯರೆದುಕೊಡು ನನಗದೇ ತೃಪ್ತಿ.

ಬಲಿ : ನಿನ್ನ ಹುಚ್ಚಿಗೆ ನನ್ನಲ್ಲಿ ಮದ್ದಿಲ್ಲ ವಾಮನಮೂರ್ತಿ ! ಆಗಲಿ.. ಇದೋ ಈ ಯಜ್ಞಶಾಲೆಯಲ್ಲಿ ಧಾತೃ, ಉದ್ಗಾತೃ, ಹೋತೃ, ಬ್ರಹ್ಮ, ಅಧ್ವರ್ಯುಗಳ ಹಾಗೂ ನನ್ನ ಪರಮಾರಾಧ್ಯ ದೈವ, ನನ್ನ ಗುರುದೇವ ಶ್ರೀ ಶುಕ್ರಾಚಾರ್ಯರ ಸಮ್ಮುಖದಲ್ಲಿ ಇದೋ ನಿನ್ನಿಚ್ಛೆಯಂತೆ ಮೂರಡಿಯಷ್ಟು ಸ್ಥಳವನ್ನು ನೀಡಿದ್ದೇನೆ. ಸ್ವೀಕರಿಸು ಆಶೀರ್ವದಿಸು.

ಶುಕ್ರಾ: ಕೂಡದು..ಕೂಡದು.. ದೈತ್ಯೇಂದ್ರ.. ಮಾರುವೇಷದ ಈ ಮೋಸಗಾರನಿಗೆ ಧಾರೆಯೆರೆದು ದಾನಗೊಡುವುದು ಸರ್ವಥಾ ಕೂಡದು.

ಬಲಿ : ಓಹ್ ! ನನ್ನನ್ನು ಹೀಗೆ ತಡೆಯುತ್ತಿರುವವರು ನನ್ನ ಗುರು ಶುಕ್ರಾಚಾರ್ಯರು ! ಆಚಾರ್ಯ, ಇಂದಿನ ಅಶ್ವಮೇಧಯಾಗ ತಮ್ಮ ಸಮರ್ಥ ಪೌರೋಹಿತ್ಯದಲ್ಲಿ ಸಾಗಿದೆ. ಅಲ್ಲದೆ ಅವಭೃತ ಸ್ನಾನದ ಈ ಅಮೃತ ಮುಹೂರ್ತದಲ್ಲಿ ವಿಶ್ವಜ್ಯೋತಿಯೊಂದು ಬಂದು ಬೇಡಿದಾಗ ಯಜ್ಞ ದೀಕ್ಷಿತನಾದ ಈ ಬಲಿ ಹಿಂದೆ ಮುಂದೆ ನೋಡುವುದೇ? ವಚನ ಭ್ರಷ್ಟನಾಗಿ ಬಾಳುವುದೇ? ಇದು ತಮಗೆ ಗೌರವ ತರುವುದೇ? ನನಗೆ ಶುಭವೆ? ಮಂಗಳವೆ? ಹೇಳಿ ತಂದೆ ಹೇಳಿ.

ಶುಕ್ರಾ: ಬಲಿಚಕ್ರವರ್ತಿ, ಬಯಲಭ್ರಮೆಗೆ ದಾಸನಾಗಬೇಡ. ಈ ವಟುವೂ ಸಾಧುವಲ್ಲ, ಮಾನವನೂ ಅಲ್ಲ. ದೇವತೆಗಳ ರಕ್ಷಣಾರ್ಥವಾಗಿ ಅದಿತಿಯ ಹೊಟ್ಟೆಯಲ್ಲಿ ಹುಟ್ಟಿದ ಕಪಟ ನಾಟಕ ಸೂತ್ರಧಾರಿಯಾದ ಆ ಶ್ರೀಮನ್ನಾರಾಯಣ,

ಬಲಿಚಕ್ರವರ್ತಿ ಇವನಿಂದ ನಿನಗೆ ಕೇಡು ತಪ್ಪದು. ನಿಲ್ಲಿಸು.. ದಾನಧಾರೆಯನ್ನು ಅಲ್ಲಿಯೇ ತಡೆ.. ಈ ಛದ್ಮವೇಷದ ಈ ವಾಮನನನ್ನು ಯಜ್ಞಶಾಲೆಯಿಂದ ಬೇಗ ಹೊರಗಟ್ಟು.

ಬಲಿ: ಆಗದು ಗುರುದೇವ. ಅದೆಂದಿಗೂ ಆಗದ ಮಾತು. ನಡೆಯದ ಕಾರ್ಯ. ತಮ್ಮಂತಹ ಲೋಕಪೂಜ್ಯ ಗುರು ಶುಕ್ರಾಚಾರ್ಯರ ಶಿಷ್ಯನಾಗಿ, ಪ್ರಖ್ಯಾತ ಪುರುಷ ಪ್ರಹ್ಲಾದನಿಗೆ ಮೊಮ್ಮಗನಾಗಿ, ವಿರೋಚನನ ಮಗನಾಗಿ, ಪ್ರಸಿದ್ದ ಪುರುಷ ಬಾಣಾಸುರನಿಗೆ ತಂದೆಯಾಗಿ, ಇಂದ್ರಸೇನ ಎಂಬ ಸತ್ಕೀರ್ತಿಗೆ ಭಾಜನನಾಗಿ, ವಿಂದ್ಯಾವಳಿ ಎಂಬ ಮಹಾಪತಿವ್ರತೆಗೆ ಪತಿಯಾಗಿ ಮೆರೆದ ಈ ಬಲೀಂದ್ರ ಮಾತಿಗೆ ತಪ್ಪುವುದೇ? ಸರ್ವಥಾ ಸಾಧ್ಯವಿಲ್ಲ... ಗುರುಪಿತನೇ ತಾವೆ ನನಗೆ ಚಿಕ್ಕಂದಿನಲ್ಲಿ ಬೋಧಿಸಿದ್ದೀರಿ–ಸುಳ್ಳಿಗಿಂತ ದೊಡ್ಡ ಪಾಪವಿಲ್ಲ; ಒಂದು ಸುಳ್ಳು ಹೇಳುವುದೂ ಒಂದೇ ಒಂದು ಕೊಲೆ ಮಾಡುವುದೂ ಒಂದೇ ಎಂದು. ಅಂತಹ ಕೊಲೆಗೆ ನಾನು ಕಾರಣನಾಗಲೆ? ಶುಕ್ರಾಚಾರ್ಯರ ಪರಮಶಿಷ್ಯನು ಆ ಪಾತಕಕ್ಕೆ ಭಾಜನನಾಗಬೇಕೆ?

ಶುಕ್ರಾ : ಬೇಡ.. ನಿನ್ನಿಚ್ಚೆಯಂತೆಯೇ ನಡೆದುಕೊ. ಮುಂದಿನದನ್ನು ಅನುಭವಿಸು.. ಯಾರಿಗೆ ಯಾರು ಹೊಣೆ ಈ ಜಗತ್ತಿನಲ್ಲಿ, ಏನಾಗಬೇಕೋ ಅದು ಆಗಿಯೇ ತೀರುತ್ತದೆ.. ತಡೆಯುವುದಕ್ಕೆ ನಾನಾರು?

ಬಲಿ : ಸಂತೋಷ.. ಬಂದದ್ದು ಬರಲಿ.. ಆದರೆ ಧರ್ಮವೊಂದು ಉಳಿಯಲಿ ! ಋತವು ಗೆಲ್ಲಲಿ ! ವಿಂದ್ಯಾವಳಿ, ಈ ಕನಕ ಕಳಶವನ್ನು ನೀನೂ ಹಿಡಿ; ದಾನ ಧಾರೆಯನ್ನೆರೆದು ಧನ್ಯರಾಗೋಣ.

ವಿಂಧ್ಯಾವಳಿ : (ಅಚ್ಚರಿಯಿಂದ) ಸ್ವಾಮಿ.. ಇದೇನಿದು ನಾವು ಧಾರೆ ಎರೆ ಎರೆದಂತೆ ಈ ವಾಮನಮೂರ್ತಿ ಮೇರುವಾಗಿ ಬೆಳೆಯುತ್ತಿದ್ದಾನೆ. ಓಹೋಹೋ!... ಅವನ ಬೆಳವಣಿಗೆಗೆ ಕೊನೆ ಮೊದಲಿಲ್ಲವಾಗುತ್ತಿದೆ. ಅಬ್ಬಾ ! ಪಾತಾಳ ಅವನ ಅಂಗಾಲಿನಲ್ಲಿ, ಭೂಮಿ ಹೆಜ್ಜೆಯಲ್ಲಿ, ವಾಯು ಮಂಡಲ ಅವನ ತೊಡೆಯಲ್ಲಿ, ಅಂತರಿಕ್ಷ ನಾಭಿಯಲ್ಲಿ, ನಕ್ಷತ್ರ ಮಂಡಲ ಎದೆಯಲ್ಲಿ, ಶಿರಸ್ಸು.. ಊಹುಂ ಕಾಣಿಸದಾಗಿದೆ. ಭೂತ್ಯೋಮವ್ಯಾಪಿಯಾಗಿದ್ದಾನೆ. ವಿಶ್ವತೋ ಚಕ್ಷು, ವಿಶ್ವತೋ ಬಾಹು, ವಿಶ್ವತೋ ರೂಪಿಯಾಗಿ ನಿಂತಿದ್ದಾನೆ. ಇದೇನಿದು. ಈ ಮಹಾಮೂರ್ತಿಯ ಒಂದು ಪಾದ ಭೂಮಂಡಲವನ್ನೆಲ್ಲಾ ವ್ಯಾಪಿಸಿತು. ಮತ್ತೊಂದು ಪಾದ ನಭೋಮಂಡಲವನ್ನೆಲ್ಲಾ ಅಳೆದುಬಿಟ್ಟಿತು..!!

ಬಲಿ : ಹೌದು ದೇವಿ, ಶಂಕ ಚಕ್ರ ಗದಧಾರಿಯಾಗಿ, ಕೌಸ್ತುಭರತ್ನ ಸುಶೋಭಿತನಾಗಿ ಮೆರೆದ ಮಹಾವಿಷ್ಣು ಇಂದು ವಾಮನನಾಗಿ, ನಿರಾಭರಣ ಶೋಭಿತನಾಗಿ, ದರ್ಶನವನ್ನೀಯುತ್ತಿದ್ದಾನೆ. ಅದೋ ನೋಡು, ಅಲ್ಲಿ. ನಭೋ ವಿಭಾಗಕ್ಕೆತ್ತಿದ ಆ ಮಹಾ ಪಾದವನ್ನು ದೇವಾನು ದೇವತೆಗಳೆಲ್ಲರೂ ಕೂಡಿ ಪೂಜಿಸುತ್ತಿದ್ದಾರೆ ಆಹಾ ! ಅತ್ತ ನೋಡು ದೇವಿ, ಆ ದೇವತೆಗಳು, ಆ ಮಹಾವಿಷ್ಣುವಿನ ಪಾದವನ್ನು ತೊಳೆದ ಕೂಡಲೆ ಆ ಶ್ರೀ ಪಾದದಿಂದ ದೇವಗಂಗೆ ಜನಿಸಿದ್ದಾಳೆ. ಕೇಳು, ಆ ದೇವಗಂಗೆಯ ಭೋರ್ಗರೆವ ಮೊರೆತ.. ಆಹಾ ! ವಿಂದ್ಯಾವಳಿ ನಾವೆಷ್ಟು ಧನ್ಯರೆ..! ನಾವೆಷ್ಟು ಪುಣ್ಯಶಾಲಿಗಳೇ !! ಮೂರಡಿಯಷ್ಟು ಸ್ಥಳವನ್ನು ದಾನಗೊಡದಿದ್ದರೆ ನಮಗೆ ಈ ಭವ್ಯತೆಯ ದಿವ್ಯದರ್ಶನದ ಲಾಭ ಲಭಿಸುತ್ತಿತ್ತೆ?

ವಿಂಧ್ಯಾವಳಿ: ಇಲ್ಲ ಸ್ವಾಮಿ, ನಾವು ಧನ್ಯರು ! ಪರಮ ಪುರುಷೋತ್ತಮನು ನಮ್ಮ ಉದ್ದಾರಕ್ಕಾಗಿಯೇ ವಾಮನ ರೂಪದಲ್ಲಿ ದಯಮಾಡಿಸಿದ್ದಾನೆ ಅಲ್ಲವೆ?.. ಎಲ್ಲಿ ನೀವಿತ್ತ ಭಾಷೆಯಂತೆ ಎರಡು ಪಾದದಷ್ಟು ನೆಲ ಕೊಟ್ಟಾಯಿತು; ಇನ್ನು ಮೂರನೆಯ ಪಾದಕ್ಕೆ ಭೂಮಿ ಎಲ್ಲಿದೆ?

ಬಲಿ : ಇಲ್ಲಿದೆ ! .. ಇಲ್ಲಿದೆ ಈ ಬಲಿಚಕ್ರವರ್ತಿಯ ನೆತ್ತಿಯ ಮೇಲಿದೆ. ಇದನನು ಮಹಾನುಭಾವನು ತನ್ನ ಮೂರನೆಯ ಪಾದದ ನೆಲವೆಂದು ಬಗೆದು, ಈ ಬಲಿಗೆ ಮುಕ್ತಿನ್ನೀಯಲಿ ದೇವ ದೇವಾ, ದಯಾಮಯನೇ, ಅಣುರೇಣು ತೃಣಕಾಷ್ಠದಲ್ಲಡಗಿರುವ ಓ ವಿಶ್ವಚೇತನವೆ ನನ್ನ ನೆತ್ತಿಯನ್ನು ಮೆಟ್ಟು, ತುಳೀ, ತುಳೀ ಹತ್ತಿ ತುಳಿ; ಒತ್ತಿ ತುಳಿ; ಮೆಟ್ಟಿ ತುಳಿ, ನಾನು ಇಲ್ಲವಾಗಲಿ, ನೀನು ಮಾತ್ರ ಉಳಿಯಲಿ !

ದಿವ್ಯಧ್ವನಿ: ತಥಾಸ್ತು..! ಬಲಿಚಕ್ರವರ್ತಿ, ನಿನ್ನಂತಹ ಸದ್ಭಕ್ತ ಬೇರೊಬ್ಬನಿರಲಾರ ! ಭಕ್ತಾಗ್ರಣಿ, ನಾನೆಷ್ಟು ಕೆಳಗೆ ತುಳಿದೆನೋ, ನೀನಷ್ಟು ಮೇಲೆ ಏರಿದ್ದೀಯೆ ! ನೀನು ಇಂದಿನಿಂದ ದೈತ್ಯನಲ್ಲ. ಲೋಕ ಪೂಜ್ಯ ದೇವತೆ! ಆಶ್ವಯುಜ ಶುದ್ಧ

ಪಾಡ್ಯಮಿಯಂದು ಬಲಿ, ಲೋಕದ ಜನತೆ ನಿನ್ನನ್ನು ಸ್ಮರಿಸುತ್ತಾ ಹಬ್ಬವನ್ನಾಚರಿಸಲಿ. ನಿನ್ನ ಪುಣ್ಯ ಸ್ಮರಣೆಯಿಂದ ಪುನೀತರಾಗಲಿ. ಸತ್ಯವ್ರತನಾದ ನೀನು ಈಗ ಸಾಲೋಕ್ಯ ಪದವಿಯನ್ನು ಪಡೆದವನಾಗಿದ್ದೀಯೆ ಮುಂದೆ ಸಾವರ್ಣಿ ಮನ್ವಂತರದಲ್ಲಿ ನೀನು ದೇವೇಂದ್ರನಾಗುತ್ತೀಯೆ. ಅಲ್ಲಿಯವರೆಗೂ ಸುತಲ ಲೋಕದ ಪ್ರಭುವಾಗಿರು. ನೀನು ನೆನೆದಾಗ ಬಂದು ದರ್ಶನವನ್ನೀಯುತ್ತೇನೆ.. ಬಲೀಂದ್ರ, ನೀನು ಇಂದಿನಿಂದ ಸಪ್ತ ಚಿರಂಜೀವಿಗಳಲ್ಲಿ ಒಬ್ಬನಾಗಿದ್ದೀಯೆ.

ಶುಭಮಕ್ಕೆ ।
ಅಶುಭ ನಾಶವಾಗಲಿ ।
ವಿಶ್ವಕ್ಕೆ ಕಲ್ಯಾಣವಾಗಲಿ ॥
ಓಂ ಶಾಂತಿಃ ಶಾಂತಿಃ ಶಾಂತಿಃ

**ಬಾಪೂ ದರ್ಶನ**

[ಪ್ರಶಾಂತವಾದ ವಾತಾವರಣ, ನಡು ನಿಶೆಯ ಬಸುರಿಂದ ಗಾನ ವಹಿನಿ ಹರಿದು ಬರುತ್ತದೆ. ಗೀತಾ ವಾಚನದೊಡನೆ ಮಂಜುಳವಾಗಿ ವೀಣಾನಾದವೂ ಕೇಳಿಬರುತ್ತದೆ]

ಹಿನ್ನೆಲೆ :
ಯದಾ ಯದ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ !
ಅಭ್ಯುತ್ತಾನಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಾಹಂ ॥

॥ ಓಂ ಶಾಂತಿಃ ಶಾಂತಿಃ ಶಾಂತಿಃ ॥

ಬಾಪು : (ರಾಟೆ ಹಿಡಿದು ನೂಲುತ್ತಾ)
ಇಂದೇಕೆ ಸಂತಸವು ! ಆನಂದದೀ ಸುಳಿವು ಅರಿವುಗುಡದಂದದಲಿ ಹರಿಹರಿದು ಬರುತಿಹುದು ಸಗ್ಗದೊಲವೇ ಇಳೆಗೆ ಇಳಿದು ಬಂದಂತಿಹುದು ; ತಾರೆಗಳ ನಗೆನೋಟ ತಲ್ಲೀನವಾಗಿಹುದು ಓಹ್ ! ಎಂದಿನಂತಲ್ಲ ಇಂದಿನಿರುಳು ! ಪೊಳ್ತೆನಿತು ?

(ಗಂಟೆ ಹನ್ನೆರಡು ಹೊಡೆಯುವುದು)
ಅಹುದಹುದು: ಆಗಳೇ ನಟ್ಟಿರುಳು ದಾಂಟಿಹುದು. ಜಗದ ಜೀವನವೆಲ್ಲ ಜಡತೆಯೆಡೆ ಜಾರಿಹುದು; ಶ್ರಾಂತವಹುದೀ ದೇಹ ವಿಶ್ರಾಂತಿ ನಡೆಯಲಿ.

(ರಾಟೆಯನ್ನು ಬಿಟ್ಟು ಬಾಪು ಪಕ್ಕಕ್ಕೆ ಒರಗುವರು ಕ್ಷಣಕಾಲ ನಿಶ್ಯಬ್ಧ ಅನಂತರ ವೀಣೆಯ ಇಂಚರದೊಡನೆ "ಆತ್ಮಶ್ರೀ" ಬಾಪೂ ಹೃದಯದಿಂದ ಮೂಡಿ ಬರುವಳು)

ಬಾಪು : ಯಾರು ನೀನು?

ಆತ್ಮ ಶ್ರೀ :
ಅರಿಯಲಾರೆಯ ಬಾಪು ? ನಾನು ನಿನ್ನ "ಆತ್ಮ ಶ್ರೀ"
ನಿನ್ನೆದೆಯ ಮಂದಿರದ ಧವಳಕುಟ್ಟಿಗದ್ದು ಗೆಯ
ಶ್ವೇತ ಪದ್ಮಾಸನದಿ ವೀರ ಮಂಡಿತೆ ನಾನು,
ಧವಳ ದೀಧಿಯಮಲ ಶೋಭೆ ನಾನು
ನಿನ್ನಂತರಂಗದ ಜ್ಯೋತಿ ರೂಪಿಣಿ ನಾನು

ಈ ನಿನ್ನ ಮೃಣ್ಮಯದ ಪುತ್ಥಳಿಗೆ
ಚಿನ್ಮಯದ ಚೇತನವೆ ಆದವಳು ನಾನು
ಕೀರ್ತಿರೂಪಿಣಿ ನಾನು ಸ್ಫೂರ್ತಿರೂಪಿಣಿ ನಾನು ।

ನೀನು ಮೋಹನದಾಸ, ನಾನು ಮಹಾತ್ಮ ॥

ಬಾಪು :
ಬಂದುದೇತಕೆ ತಾಯಿ ಬಹಿರಂಗದೆಡೆಗೆ ?
ಆತ್ಮ ಶ್ರೀ :
ಇಂದೊಂದು ಹಬ್ಬದಿನ ನೀ ಹುಟ್ಟಿ ಬಂದ ದಿನ
ವಿಶ್ವ ವಂದನೆಯೆಲ್ಲ ತಾಯಿ ಭಾರತೆಗೆಂದು
ನಲಿನಲಿದು ನರ್ತನಂಗೈವ ಇದು ಮಹಾದಿನ
ವಿಶ್ವಚೇತನವಿಂದು ಜಡದೇಹದೊಳು ನಿಂದು
ಜೀವವನು ದೇವನ್ನಾಗಿಸಲು ತಂದ ದಿನ

ಇಂತಿದು ಜಗದ ಇತಿಹಾಸದಲಿ ಸ್ವರ್ಣದಿನ
.. .. (ಸ್ವಲ್ಪ ತಡೆದು) .. ..
ಬಾಪು, ಕಣ್ಣೆತ್ತಿ ನೋಡತ್ತ ಕಾಣುತಿಹುದೇನು ॥
(ಭಾರತಾಂಬೆ ಕಾಣಬರುವಳು)

ಬಾಪು : ಓ ನನ್ನ ಜನನಿ! ಓ ಭಾರತಾಂಬೆ, ತಾಯೀ, ನಿನ್ನಡಿಗೆ ಮುಡಿ ಚಾಚಿವಂದಿಸುವೆನಮ್ಮ

ಭಾರತಾಂಬೆ : ಶುಭವಿರಲಿ, ಗೆಲವಿರಲಿ, ಮಂಗಳುವು ಕೂಡಿರಲಿ,
ಜಗದಾದಿ ಚೇತನದ ಘನ ಹರಕೆ ನಿನಗಿರಲಿ,
ಮಂಗಳ ಮಹಾದಿನದಿ ದಿವ್ಯದಾಶೀರ್ವಾದ ನಿತ್ಯವಿರಲಿ !

ಆತ್ಮ ಶ್ರೀ : ಬಾಪು ಧನ್ಯನು ತಾಯಿ ನಿನ್ನ ಕಮಡು, ಆತನಾಂತರ್ಯದಲಿ ಬಹುದಿನದ ಬಯಕೆಯಿದೆ ಮತ್ತೊಮ್ಮೆ ಮಗುವಾಗಿ ನಿನ್ನ ಮಡಿಲೊಳು ಮಲಗಿ ತೋಲ ತೊಟ್ಟಿಲೊಳೊಮ್ಮೆ ಲಾಲಿಯಾಡಿ ನಿನ್ನೆದೆಯ ಪ್ರೇಮ ಮಧು ಪೀಯೂಷ ಪಾನದಿಂ ತೊದಲು ಗೀತಗಳಾಡಿ ತಣಿಸಲೆಂದು, ತೊಡೆಯ ತಲ್ಪದ ಮೇಲೆ ಪವಡಿಸುತ ನಗೆಗಣ್ಣ ನಿನ್ನ ಕಣ್ ಕಾಂತಿಯಲಿ ಬೆರೆಸಲೆಂದು !

ಭಾರತಾಂಬೆ : ಬರಲೇಳು ಕಂದಮ್ಮ, ಬೇಡವೆಂದೆನೆ ನಾನು;
ಮಗನಮೋಹಕ್ಕಿಂತ ಬೇರೊಂದು ಸಿರಿಯಿಹುದೆ
ತಾಯಿಯಾದವಳಿಗೆ ? ಅದಕಾಗಿ ಕಾತರಿಸಿ ನಾಂ
ಬಂದೆನಿಂದು. ಆದರೆ ಆದರಿದಿಕೋ ಕಂದ
ಸೆರಗೊಡ್ಡಿ ಬೇಡುವೆನು, ನೀಡೊಂದು ಭಿಕ್ಷೆಯನು
ಮಾತಿನಾ ಭಿಕ್ಷೆಯನು – ಕುಂತಿ ಕರ್ಣನ ಕಂಡು
ಬೇಡಿದಂತಲ್ಲ – ತಾಯಿ ಮನನು ಕೇಳಿ ಪಡೆಯುವಂತೆ.
ಮಮತೆಯಾವರ್ತದೊಳು ಕೂಡಿದಂತೆ.

ಬಾಪು : ಆಜ್ಞೆ ಏನದು ತಾಯೆ ಸಿದ್ಧನಿಹೆನು?

ಭಾರತಾಂಬೆ: ಸಮತೆ, ಶಾಂತಿ, ಸತ್ಯ, ಅಹಿಂಸೆಗಳು ನಿತ್ಯ
ಈ ವಿಶ್ವರಂಗದಲಿ ನಲಿಯುತಿರಲಿ ।
ಅದರಿದೊ ಓ ಕಂದ, ನನ್ನೆದೆಯ ಮಕರಂದ
ನಿನ್ನ ನೆಚ್ಚಿನ ನಿಚ್ಚ ಪ್ರಾರ್ಥನೆಯ ಬಿಟ್ಟು ಬಿಡು ।

ಸಕಲಭಾಂಧವರೊಡನೆ ಕೂಡಿದ ಪ್ರಾರ್ಥನೆಯ
ಸಾಮೂಹಿಕಾರ್ಥನೆಯ ಬಿಟ್ಟುಬಿಡು ಓ ಕಂದ
ಇದೆ ನನ್ನ ಬೇಡಿಕೆಯು, ಮನಕೆ ಆನಂದ !

ಆತ್ಮಶ್ರೀ : ಪ್ರಾರ್ಥನೆಯ ಬಿಟ್ಟು ಬಿಡು ! ಪ್ರಾರ್ಥನೆಯ ಬಿಟ್ಟು ಬಿಡು !
ಎಂಥ ಮಾತಿದು ಮಾತೆ ? ಪ್ರಾರ್ಥನೆಯ ಬಿಟ್ಟುಬಿಡು ॥
ಆತ್ಮಬಲದುನ್ನತಿಯ ಅಗ್ನಿಗೋಪುರ ಸಕ್ತಿ !
ನರ–ಹರರ ಬೆಸುಗೆಯಾ ಐಕ್ಯಾನುಸಂಧಾನ !
ಅಂತರಿತ ದೇವನನು ಎಚ್ಚರಿಸುವಾ ಮಂತ್ರ !
ತಾಯಿ, ಪ್ರಾರ್ಥನೆಯು ಪರಿಪರಿಯ ಪರಿತಾಪವಲ್ಲ,
ದೇವನಲಿ ಬಯಸಿದುದ ಯಾಚಿಸುವುದೂ ಅಲ್ಲ ;
ನಿರ್ಮಲಂತಃಕರಣದಮಲ ತೀರ್ಥದಿ ದಿನವೂ
ಮನದ ಮಾಲಿನ್ಯವನು ದೂರಗೈದು, ಶುರ್ದದ –
ಸತ್ವದಿ ತನ್ನ ಸತ್ಯ ಸೂರ್ಯನ ಮೆರೆಸಿ, ತಿಮಿರ
ತೇಜಿಯ ತಡೆವ ದಿವ್ಯ ದೇದೀಪ್ಯತೆಯ ವೈಜಯಂತಿ
ಇಂತಿದು ಬಾಪು ಜೀವನದಲ್ಲಿ ಮೂಲ–ಚೂಲ !
ಅವನ ಬಾಳಿನ ಉಸಿರು ಎದೆಯ ಹಸುರು !
ಇಂತಿರಲು ಪ್ರಾರ್ಥನೆಯ ಬಿಡುವುದೆಂತೌ ತಾಯೆ?

ಭಾರತಾಂಬೆ : ಕೇಡು ಬರುವುದು ಮುಂದೆ ಪ್ರಾರ್ಥನೆಯ ದೆಸೆಯಿಂದ
ನೆನೆನೆನೆದು ಮರುಗುತಿದೆ ತಾಯಿ ಕರುಳು

ಆತ್ಮ ಶ್ರೀ : ಕೇಡು ಬರುವುದು ಎಂದು ಕರ್ತವ್ಯ ಬಿಡಬಹುದೆ?
"ಅನ್ನ ನೀರುಗಳನ್ನು ಬಿಡು" ಎಂದ ತೆರನಾಯ್ತು
ಬಾಪುವಿಗೆ "ಪ್ರಾಥನೆಯ ಬಿಡು" ಎಂದ ಮಾತು !

ಭಾರತಾಂಬೆ :
ನಾಲಗೆಯು ತೊದಲುತಿದೆ ಮೂಕವಾಗಿದೆ ಬಾಯಿ
ಆದರಯ್ಯೋ ಇಲ್ಲ.. ನಾನೆನೆಯಲಾರೆ..
ನಾನು ಸುರಲಾರೆ... ಅಂತೆ ಇರಲಾರೆ.. ಅಂತೆ ಇರಲಾರೆ

ಆತ್ಮ ಶ್ರೀ : ಓಹ್ !
ಭಾರತಾಂಬೆಯ ನೇತ್ರದಂಗಳದಿ ಕಣ್ಣೀರು !
ಮಗನು ಪುಟ್ಟಿದ ದಿನವೆ ಮಾತೆಗೇನದು ಕೊರಗು?
ಸಂತೈಸಿಕೋ ತಾಯೆ ಶಾಂತಿನಡೆ ಮನದಲ್ಲಿ
ದುಃಕವೇಕಿನಿತಮ್ಮ ? ಕೊರಗುತ್ತಲಿಹೆಯೇಕೆ?
ಕೋಟಿ ನಲವತ್ತು ಜನ ಪುತ್ರರನು ಪಡೆದ ನೀ –
ನಿಂತು ಮರುಗಬಹುದೇ?

ಭಾರತಾಂಬೆ : ಎನ್ನಣುಗಿಯೇ ನೀನು ಕಾಣಲಾರೆಯ ಹೆತ್ತ ಕರುಳುರಿಯ ಬೇಗೆಯನು ಹತ್ತಾರು ಪುತ್ರರನು ಪೆತ್ತೊಡಲು ಬತ್ತುತಿದೆ. ಮತ್ತೆ ಕಾಂಬೆನೆ ಎಂಬ ಭೀತ ಯುದ್ಭವಿಸುತಿದೆ. ಇಂತಿಪ್ಪ ಎನಗಿನ್ನು ಶಾಂತಿಯುಂಟೆ ಹೇಳ?ಮಹಿಮರನು ಮಚ್ಚರದಿ ಮರ್ಧಿಸುತ್ತಿರುವಾಗ ನನ್ನವರೆ ನನ್ನನ್ನು ತಿವಿತಿವಿದು ನಲಿವಾಗ ಹೃದಯ ವೇದಿಕೆ ಮೇಲೆ ಮಾರಿ ನರ್ತಿಸುವಾಗ

ಶಾಂತಿಯೇ ? ಅಯ್ಯೋ ಇನ್ನು ಶಾಂತಿಯುಂಟೇ ? ಬಾ ಕಂದ ಉಸುರದಿರು ಅಳಲನ್ನು ಕಲಕದಿರು ಶಾಂತಿಯೆಂಬುದು ಬರಿಯ ಭ್ರಾಂತಿ ಕಾಣಾ !

ಆತ್ಮ ಶ್ರೀ : ಛೇ । ಛೇ। ಅಲ್ವಲ್ಲಾ ಜನನಿ ; ಶಕ್ತಿ ರೂಪಿಣಿ ನೀನು
ವಿಶ್ವ ಪೂಜ್ಯಳು ನೀನು, ವಿಶ್ವ ಮಾತೆಯು ನೀನು
ಬುದ್ಧ ಬಸವಾದಿಗಳ ರಮಣಾವಿಂದರನು
ರಾಮಕೃಷ್ಣ ವಿವೇಕ ಪರಮಹಣಸಾದಿಗಳ
ಭಾವೆ ; ಠಾಕೂರರನು ಅಂಬೇಡಕರರನ್ನು ಪಡೆದಿರುವೆ
ಬತ್ತದಿಹುದೆಂದಿಗೂ ನಿನ್ನೊಡಲ ಚಿಲುಮೆ !
ನೀ ವೀರಮಾತೆ, ನೀ ಲೋಕಮಾತೆ, ಮಹಿಮಾನ್ವಿತೆ !

ಭಾರತಾಂಬೆ : ಬುದ್ಧನನು ಬಸವನನು ತಿಂದು ತೇಗಿದ ಜನತೆ
ಸಿದ್ಧರನು ಮುಗ್ಧರನು ಉಳಿಸಬಳವೇ?
ಭವಿತವದ ಕಾಲದಾ ಭವ್ಯ ಗರ್ಭದಿನೆದ್ದ
ಭೀಮಭೀಕರ ಘೋರ ಕಾಳ ಹಸ್ತವ ಕಾಣು !

(ಭಯಂಕರ ಶಬ್ದ ಮೂರು ಬಾರಿ "ಢಂ ಢಂ ಢಂ" ಎಂದು ಗುಂಡು ಹಾರುವುದು  ಗದ್ದಲ ನಿಂತಮೇಲೆ)

ಆತ್ಮಶ್ರೀ : ಇದಕೇತಕೀ ಚಿಂತೆ ಕೆಮ್ಮಗಿರು ತಾಯೆ !
ಕೋಟಿ ಕ್ರಿಸ್ತರು ಬರಲು ಸುಖಿಸುವುದೇ ಈ ಜವು ?
ಇಲ್ಲಿಲ್ಲ ತಾಯಿ, ಗೋಲ್ಗೊಥದ ಶಿಖರದಲಿ ಬಟ್ಟ –
ಬಯಲಲಿ ನಟ್ಟ ಶಿಲುಬೆಯಲಿ ಮೊಳೆ ಜಡಿದು
ತಾ ಮುಗಿಸದೇನು? ಎನಿತು ಜನ ಬುದ್ಧರಿಗು
ಮದ್ದಿಕ್ಕದೇನ್ ತಾಯಿ? ಮತ್ತೊಮ್ಮೆ ಮೂರು ನದಿ
ಕೂಡಿದ ಸಂಗಮದಿ ಬಸವರೆನಿಬರುಬರಲಿ
ನೀರ್ಗುಡಿಸದಿಹುದೆ? ಸೀತೆ ಜಾರಿಣಿಯೆಂದು
ದಟ್ಟ ಕಾನನಕ್ಕಿ ಬೆಟ್ಟ ಕಂದರದಲ್ಲಿ
ತಳ್ಳದಿಹುದೆ? ಶರಣೆ ಮಹದೇವಿಯನು ಉಟ್ಟ
ಸೀರೆಯ ಕಿತ್ತು ಬಟ್ಟ ಬಯಲೊಳಗಟ್ಟಿ ನಕ್ಕು
ನಗದಿಹುದೆ? ಜೋನಳನು ಹಿಡಿದಳೆದು
ಬೀದಿಯಲಿ ಕಿಚ್ಚಿಟ್ಟು ಚಪ್ಪಾಳೆ ತಟ್ಟುತ್ತ
ಕುಣಿಯದಿಹುದೆ?
ಸಾಕ್ರಟೀಸನ ತುಟಿಗ ವಿಷದ
ಬಟ್ಟಲು ತಂದು ನೀಡದಿಹುದೆ? ತಂದೆ
ಲಿಂನನನ್ನು ನಾಟ್ಯದಾರಂಗದಲಿ
ಗುಂಡಿನಾ ಮಳೆಗರೆದು ಕೊಲ್ಲದಿಹುದೇ?
ಮಮತೆ ಮೋಸವದೆಂದು ಮಹಮ್ಮದನ ಸೆಳೆ ತಂದು
ಮೆಕ್ಕೆಯಿಂ, ಮದೀನದೆಡೆ ದೌಡಾಯ್ಸದೇನಮ್ಮಾ/
ಸ್ವೈರವೃತ್ತಿಯ ಶಿಬಿರ, ಅಜ್ಞಾನದಾಗಾರ
ಇದಕೆ ಕೊನೆಯುಂಟೆಲ್ಲಿ? ಇದಕೆ ನೆಲೆಯುಂಟೆಲ್ಲಿ?
ನಿಯತಿಯಂದದಿ ತಾನೆ ನಿಂತಿಹುದು ವಿಶ್ವದಲಿ !
ಮುಳಿಯದಿರು ತಾಯೆ ನೀ ಮರುಗದಿರು ಕೇಳು
ಹಗಲು ಇದ್ದೆಡೆಯಲ್ಲಿ ಇರುಳು ಸಹಜ

ಹಗಲಾಗ ಬಯಸುವೊಡೆ ಇರುಳಿರಲೆ ಬೇಕು

ಭಾರತಾಂಬೆ : ಅಹುದಹುದು ಮರೆತಿದ್ದೆ !
ಹಗಲು ಇದ್ದೆಡೆಯಲ್ಲಿ ಇರುಳು ಸಹಜ !
ಹಗಲಾಗ ಬಯಸುವೊಎ ಇರುಳಿರಬೇಕು !
ಇರುಳಿರಲೇಬೇಕು ॥

ಹಿನ್ನೆಲೆ :
ಅಸತೋಽಮಾ ಸದ್ಗಮಯ
ತಮಸೋ ಮಾ ಜ್ಯೋತಿರ್ಗಮಯ
ಮೃತ್ಯೋರ್ಮಾಮೃತಂಗಮಯ ॥
॥ಓಂ ಶಾಂತಿಃ ಶಾಂತಿಃ ಶಾಂತಿಃ॥

## ಬಿಡುಗಡೆಯ ಬೆಳಕೆ

(ಸಂಗೀತ ರೂಪಕ)

(ಭಾರತದ ಸ್ವಾತಂತ್ರ್ಯ ದಿನಾಚರಣೆಯ ಸಲುವಾಗಿ ಬೆಂಗಳೂರು
ಆಕಾಶವಾಣಿಗಾಗಿ ರಚಿಸಿ ಒಂದು ಸಂಗೀತ ರೂಪಕ
ದಿನಾಂಕ 15.8.2013
ಸೋಮವಾರ 9.30 ಬೆಳಿಗ್ಗೆ ಪ್ರಸಾರ)

ಪ್ರಧಾನ ಭೂಮಿಕೆಯಲ್ಲಿ
ಕಾಲ ಪುರುಷ
ರಾಷ್ಟ್ರ ಕುಂಡಿಲಿನಿ
ಸಂಗೊಳ್ಳಿ ರಾಯಣ್ಣ
ಕಿತ್ತೂರ ಚೆನ್ನಮ್ಮ
ಕಟ್ಟಬೊಮ್ಮು
ಬ್ಯಾನರ್‌ಮನ್
ಝಾನ್ಸಿರಾಣಿ
ನೇತಾಜಿ
ವಿವೇಕಾನಂದ ಮತ್ತು

(ಚಿತ್ರರಂಜನದಾಸ್, ಸ್ವಾಮಿ ಶ್ರದ್ಧಾನಂದ, ದಾದಾಭಾಯ್ ನಾಯರ್, ಬಸು, ಗೋಖಲೆ, ಮಾಳವೀಯ, ಮುಜುಮ್‌ದಾರ್, ಅನಿಬೆಸೆಂಟ್, ತಿಲಕ್, ಲಾಲಾಜಿ ಮೋತಿಲಾಲ್, ನೆಹರು, ಪಟೇಲ್, ಶ್ರೀಮತಿ ಸೇನ್ ಗುಪ್ತ ಇತ್ಯಾದಿ )

ಮಂಗಳೂರು, ದ.ಕ. ಜಿಲ್ಲೆಯ ಬಂಟ್ವಾಳ ತಾಲ್ಲೂಕು, ಕಾಡುಮಠದಲ್ಲಿರುವ ಶ್ರೀ ಕೆ.ಎಸ್.ಮಹಾಬಲ ಶೆಟ್ಟರು ಮತ್ತು ಶ್ರೀಮತಿ ಪ್ರಭಾದೇವಿ ಇವರ ಸ್ವಗೃಹದಲ್ಲಿ ರಚಿಸಿದ್ದು.

ಪ್ರತಿ ಮಾಡಿದವರು : ಕೆ.ಎಂ. ಸಂಗನಾಥ, 21.07.1983, ಭಾನುವಾರ.

ನೇಪಥ್ಯದಲ್ಲಿ:
ಬೆಳಗುತಿರು ಭಾರತದ ಬಿಡುಗಡೆಯ ಬೆಳಕೇ

ಶ್ರಾವಣದ ಶುಭದಿನದಿ ಎಂಎದೆರೆದ ಬೆಳಕೇ ॥

ಬೆಳಗುತಿರು ಬೆಳಗುತಿರು ಬೆಳಗುತಿರು ಬೆಳಕೇ
ಬೆಳಗುತಿರು ಭಾರತದ ಬಿಡುಗಡೆಯ ಬೆಳಕೇ ॥

(ನಾಡಿನ ಈ ಪಲ್ಲವಿಯ ಪುನರಾವರ್ತನೆಯ ಜೊತೆಯಲ್ಲೇ ಕಾಲಪುರುಷನ ಮಾತು ಪುಟಗೊಳ್ಳಬೇಕು)

ಕಾಲಪುರುಷ : ಬಾ ಬೆಳಕೇ, ಬಾ,
ಸ್ವರ್ಣ ವರ್ಣೋದಯದ ಅರುಣ ಜೀರ್ಕಳವಿಯಲಿ ಬೆಳ್ಪನ್ನೆ
ಮುಕ್ಕಳಿಸಿ ಬೆಳಬೆಳಗಿ ಬಾ
ಸಪ್ತಸಾಗರದೆದೆಯ ಕುದಿಗುದಿಯ ತಾಂಡವದಿ
ಲಾಸ್ಯಗೈಯತೆ ಬಾ
ಬತ್ತಲೆಯಬಯಲಿಂಗೆ ಶಕ್ತಿ ಸಂಕ್ರಮಿಸುತ್ತ
ಭಾರತೀಯರ ಎದೆಗೆ ಸೊದೆ ತುಂಬು ಬಾ
ಬಾ ಬೆಳಕೆ, ಬಾ,
ಭಾರತದ ಭಾಗ್ಯೋದಯದ ಶುಭದಿನವು ಇಂದು,
ಇಂದಿನರುಣೋದಯ ನಮ್ಮ ಸ್ವಾತಂತ್ಯೋದಯ !
ಎಂದಿನದೆ ಈ ಬೆಳಕು ?
ಅಲ್ಲಲ್ಲ,
ಇಂದಿನದು ಸವಿ ನೆನಪು ಸೂಸುತಿಹ ಸಿರಿ ಬೆಳಕು !
ಏಳು ಭಾರತದ ಪುತ್ರ, ಏಳು
ನೈರಾಶ್ಯದಾಕಳಿಕೆ ಸಾಕು ಮೇಲೇಳು,
ನಾಡದೇವಿಯನು ನುಡಿದೀ ಹಾಡು ಕೇಳು –

ಹಾಡು : ಭಾರತಾಂಬೆ ಕಾರುಣ್ಯಗಂಗೆ ಕಂಡಂಥ ಜೇನುಗನಸೇ
ವೇದಿವಿದರ ಶ್ರುತಿಘೋಷವೆಂಬ ಜೋಗುಳದಿ ಬೆಳೆದ ಕೂಸೇ
ಸ್ವಾತಂತ್ರ್ಯದುರಸಿರ ಸ್ವಚ್ಛಂದದಿಂದ ಸೆಳೆದುಲಿವ ಸವಿಯ ತೇನೇ
ಗಂಗೆ ತುಂಗೆಯರ ದಿವ್ಯ ಸಲಿಲದಲಿ ಮಿಂದು ಮೆರೆವ ಮೀನೇ ॥

ಸಾರುತಿಹುದು, ಓ ಭಾರತೀಯ ಒಕ್ಕೊರಲಿನಿಂದ ಜನತೇ
ಹಕ್ಕು ಬಂದಿದುದು ಭಿಕ್ಕೆಯಲ್ಲ ದಕ್ಷತೆಯ ವಿಜಯ ಮಾಲೆ
ರಾಜರಾಜ್ಞೆಯನು ತುಳಿದೆ ನೀನು ಬೀದೆಯೊ ಗಂಡುಗೊಡಲಿ
ರಕ್ತರಹಿತ ಕ್ರಾಂತಿಯನು ನಡೆಸಿ ನಿಲಿಸಿದೆಯೊ
ವಿಶ್ವಶಾಂತಿ ॥

ಹರಿವ ನೀರು ಕಣ್ತೆರೆವ ಹೂವು ಕುಕಿಲಿಡುವೆ ಬನದ ಹಕ್ಕಿ
ನೆಗೆವ ಜಿಂಕೆ ನರ್ತಿಸುವ ನವಿಲು ಜಾಗರದಿ ಮೈಯಿ ಸೊಕ್ಕಿ
ಬಂಡನುಂಡು ಝೇಂಕಾರದಿಂದ ಓಂಕಾರಗೈವ ದುಂಬಿ
ಸ್ವೇಚ್ಛೆಯಿಂದ ಪಂಚಮವ ಮಿಡಿವ ಕೋಗಿಲೆಯ ಇಂಚರ ಶ್ರೀ

ಇಂತಿಹುದು ಪ್ರೀತಿ ಸ್ವಾತಂತ್ರ್ಯಜ್ಯೋತಿ ಸಹಜತೆಯ ನೇಮ ನಿಯತಿ
ಮನವುಳ್ಳ ಜೀವಿ ಆತ್ಮವನು ಪಡೆದ ಮಾನವನಿಗೇಕೆ ನೇತಿ ?
ಸ್ವಾಭಿಮಾನ ದೇಶಭಿಮಾನ ಸ್ವಾತಂತ್ರ್ಯ ಬಯಸದವನು

ಸತ್ತಂತೆ ಎಂದೆ ನೈಚ್ಯತೆಗೆ ಮುನಿದೆ ನಿಲ್ಲಿಸಿದೆ ಸಮತೆಯನ್ನು !

ತ್ಯಾಗದಿಂದ ಬಲಿದಾನದಿಂದ ಹೋರಾಟ ಜತನದಿಂದ
ದೈತ್ಯತೆಯ ಮೆಟ್ಟಿ ದೇವತ್ವ ಮೆರೆಸಿ ಸಗ್ಗವನೆ ಸೂರೆಗೊಂಡ
ಪುರುಷ ಪುಂಗವರು ಹತ್ತಿಸಿಟ್ಟ ಈ ಹಣೆ ಬೆಳಗುತಿರಲಿ
ಜಯಮಕ್ಕೆ ನಿನಗೆ ಶುಭಮಕ್ಕೆ ಜಗಕೆ ಮಂಗಳವು ಕೂಡಿಬರಲಿ ॥

ರಾಷ್ಟ್ರಕುಂಡಿಲಿನಿ: ಭಾರತಾಂಬೆಯ ಮನದ ಸುಮಧುರ ಸುಸ್ವಪ್ನವೆ,
ಅವಳ ಈ ಇಚ್ಛೆ ಇಂದಿನದಲ್ಲ, ಹಿಂದಿನದು, ಎಂದಿನದು;
ಯುಗಯುಗಾಂತರದಿಂದ ಪುಟಿದೆದ್ದು ಬಂದದ್ದು ;
ಗಂಡುಗೊಡಲಯ ಗಂಡ ಭಾರ್ಗವನ ರೋಷದಲಿ
ಪುರುಷಸಿಂಹನೆ ಅದ ರಆಣಾ ಪ್ರತಾಪನಲಿ,
ಟಿಪ್ಪು,ಶಿವಾಜಿ ಮತ್ತೆಲ್ಲ ರೂಪದಲಿ ಅವತರಿಸಿ,
ವ್ಯಕ್ತಿ ಸ್ವಾತಂತ್ರ್ಯವನು ದೇಶ ಸ್ವಾತಂತ್ರ್ಯವನು
ನೆಲಜಲದಬೆಳೆ–ಬೆಳಕು ಏನೆಲ್ಲ ಹಕ್ಕುಗಳ
ಹಕ್ಕೆ ಹಕ್ಕೆಯೊಳಿಟ್ಟು ಒಕ್ಕಲಾಗಿಸಿತು.

ಕಾಲಪುರುಷ :
ತೇಜೋಮೂರ್ತಿ ಭಾರತ,
ಇದು ಬರಿಯ ವಈರ ಪುರುಷರ ಬೀಡಲ್ಲ,
ವೀರ ವನಿತೆಯರ ಅಡುಂಬೊಲ !
ಬ್ರಿಟಿಷರಿಗೆ ಮೊದಲ ಸೋಲಿನ ಸಇವ ಉಣಿಸಿದಾಕೆ
ಕಿತ್ತೂರ ಕೇಸರಿಣಿ! ನೆನಪಿದೆಯೆ ?
ಅವಳೆಮ್ಮೆ ಭಾಗ್ಯದ ಬಿತ್ತು, ಪೌರುಷದ ಗೊತ್ತು,
ಅವಳೆ ವೀರರಾಣಿ ಚೆನ್ನಮ್ಮ, ಕಿತ್ತೂರ ಚೆನ್ನಮ್ಮ.

ವೃಂದಗಾನ (ಜಾನಪದ ಧಾಟಿಯಲ್ಲಿ)

ಕಿತ್ತೂರ ರಾಣಿ ಮುನಿದಾಳಾ ! ಹೋಯ್
ಕಿತ್ತೂರ ರಾಣಿ ಕೆರಳ್ಯಾಳಾ !

ಕೆಂಡದುಂಡೆಯ ಕಣ್ಣ ಕಿಡಿಕಿಡಿಯ ಕಾರುತ್ತ
ಗಂಡುಗಾಸೆಯ ಹಾಕಿ ಮುಮಡಾಸು ಮಡಿಸುತ್ತ
ದುಂಡು ಖಂಡೆಯವ ದೆಸೆರೆಡೆಗೆ ತಿರುಹುತ್ತ

ಬಂದಾಳು ರಾಣಿ ಚೆನ್ನಮ್ಮ
ಕಿತ್ತೂರ ರಾಣಿ ಚೆನ್ನವ್ವಾ

ಕೇಸರಿನೀ ನಮ್ಮ ಚೆನ್ನವ್ವ
ಬಂದಾಳು ನಮ್ಮ ಚೆನ್ನವ್ವ ॥

ರಾಷ್ಟ್ರಕುಂಡಿಲಿನಿ:
ಇದು ಬೈಲಹೊಂಗಲದ ಕೋಟೆ – ಅಲ್ಲ–

ಕನ್ನಡ ರಾಜರಾಜೇಶ್ವರಿಯ ಸೆರೆಮನೆ !
ಅಲ್ಲಿಗೂ ನುಸುಳಿ ಬಂದ ಮೀನಿನ ಮರಿ ಸಂಗೊಳ್ಳಿ ರಾಯಣ್ಣ.
ಅಂದು ಆ ಸರಿ ರಾತ್ರಿಯಲಿ ಬೈಲಹೊಂಗಲದ ಸೆರೆಯಲ್ಲಿ..

(ದೃಶ್ಯ ಬದಲಾವಣೆ..
ಸನ್ನಿವೇಶ ಸರಿರಾತ್ರಿಯ ನೆನಪು ತರುವಂತಿರಬೇಕು
ನಲ್‌ನಿಶೆಯ ಗರ್ಭದಿಂದ ಮಾತು ಪಿಸುಗುಟ್ಟುತ್ತದೆ)

ಸಂಗೊಳ್ಳಿ ರಾಯಣ್ಣ: ತಾಯೀ..

ಕಿತ್ತೂರ ಚೆನ್ನಮ್ಮ:
ಯಾರು? ಈ ಆವೇಳೆಯಲ್ಲಿ, ಈ ಸೆರೆಮನೆಯಲ್ಲಿ ಈ
ಆಭಾಗಿನಿಯನ್ನು "ತಾಯಿ" ಎಂದು ಸಂಬೋಧಿಸುವ
ಕನ್ನಡದ ಕಂದ ನೀನಾರಪ್ಪಾ?

ರಾಯಣ್ಣ : ನಾನು ತಾಯಿ ಸಂಗೊಳ್ಳಿ ರಾಯಣ್ಣ !

ಚೆನ್ನಮ್ಮ : ರಾಯಣ್ಣ ! .. ರಾಯಣ್ಣ ನೀನೇಕಪ್ಪಾ ಬಂದೆ ಈ ರಾಕ್ಷಸರ ತಾಂಡೆಗೆ !

ರಾಯಣ್ಣ : ಅಮ್ಮಾ, ಹೆತ್ತ ತಾಯಿಯನ್ನು ಸೆರೆಯಲ್ಲಿಟ್ಟು ಹೇಗಮ್ಮಾ
ಮಕ್ಕಳು ನಿಶ್ಚಿಂತರಾಗಿರಲು ಸಾಧ್ಯ.. ! ಹೇಳು ತಾಯಿ
ಯಾವ ರೂಪದ ಸೇವೆ, ಯಾವ ಮಟ್ಟದ ತ್ಯಾಗ
ನಮ್ಮಿಂದಾಗಬೇಕಾಗಿದೆ? ಅಮ್ಮಾ, ಬಿಚ್ಚುಗತ್ತಿ ಚನ್ನಬಸಪ್ಪ
ಗಜವೀರ ಬಾಲಣ್ಣ, ಗಂಡುಗಲಿ ಗುರುಸಿದ್ದಪ್ಪ–ಇವರೆಲ್ಲರೂ
ಬದುಕಿದ್ದಾರೆ ತಾಯಿ, ಹೇಳಿ ಏನಾಗಬೇಕು ಹೇಳಿ.

ಚೆನ್ನಮ್ಮ :
ರಾಯಣ್ಣ ನಿಮ್ಮ ಮಾತೇ ಚೆಂದ ! ಆಗುವುದನ್ನು ಹೇಳಲು
ನಾನೇನು ಆದಿಶಕ್ತಿ !.. ಇರಲಿ ರಯಣ್ಣ, ನಾವಾರ ಸಂಪತ್ತಿಗೂ
ಆಸೆಪಟ್ಟವರಲ್ಲ; ನಮ್ಮಲ್ಲಿ ದುರಾಸೆಯಲ್ಲ, ದುರಾಕ್ರಮಣ ಬುದ್ಧಿ ಇಲ್ಲ,
ಆದರೆ ನಮ್ಮ ಮೇಲೆ ದರ್ಪ ನಡೆಸಲು ಬರುವ ಈ
ದ್ರೋಹಿಗಳನ್ನು ಕಂಡರೆ ಸಹಿಸುವುದಾದರೂ ಹೇಗೆ ?

ರಾಯಣ್ಣ :
ಅವರಿಗಿಂತಲೂ ಇವರ ದ್ರೋಹ ಸಹಿಸದಳವಲ್ಲ ತಾಯಿ !
ನಮ್ಮವರೇ ಆಗಿದ್ದು, ಒಂದೇ ನೆಲದಲ್ಲಿ ಹುಟ್ಟಿ, ಒಂದೇ ನೀರು
ಕುಡಿದು, ಒಂದಾಗಿ ಬೆಳೆದು ದ್ರೋವನ್ನೆಣಿಸಿದ ಆ ವಂಚಕರು
ಮಲ್ಲಪ್ಪ ಶೆಟ್ಟಿ ಮತ್ತು ವೆಂಕರಾಯರಂಥವರಿಂದಲೇ ನಮಗೆ
ಹೆಚ್ಚು ಅಪಾಯ ತಾಯಿ, ನಮ್ಮ ಮದ್ದಿನಾಗಾರಕ್ಕೆ ಸಗಣಿಯ
ಬಗಗಡ ಹೊಯ್ಸಿ ನಮ್ಮ ಸೋಲಿಗೆ ಕಾರಣರಾದರು ಆ ದರೋಹಿಗಳು !

ಚೆನ್ನಮ್ಮ:
ಯಾರನ್ನು ಎಷ್ಟೆಂದು ಏನು ಪ್ರಯೋಜನ ರಾಯಣ್ಣ ? ಈಗ

ನೀವು ಕರ್ತವ್ಯ ಜಾಗೃತರಾಗಿ ; ಕಿತ್ತೂರು ಶೂನ್ಯ ಸ್ಮಶಾನವಾದರೂ
ಸರಿಯೆ, ಆ ಬ್ರಿಟಿಷರ ಕೈಗತವಾಗಬಾರದು ! ನನ್ನನ್ನೇ
ರಕ್ಷಿಸಿಕೊಳ್ಳಲಾರದವಳಾದ ನಾನು ದೇಶ ರಕ್ಷಿಸಬಲ್ಲೆನೆಂಬ
ಭರವಸೆ ನನಗಿಲ್ಲ ರಾಯಣ್ಣ   ಆದರೂ ನೀವು ನನ್ನ
ಆಶಾಜ್ಯೋತಿಗಳು.. ಹೋಗಿ, ಹೆದರಬೇಡಿ, ತಾಯ್ನಾಡ
ಕೀರ್ತಿಯ ಕುಇಗೆ ಹೂವಾಗಿ ಮೂಡಿ, ಸತತ ಹೋರಾಟವೇ
ಯಜ್ಞ, ಜಯಕಾರವೇ ಮಂತ್ರ, ತ್ಯಾಗವೇ ಬಲಿದಾನ !
ಜೈ ಭುವನೇಶ್ವರಿ...! ಜೈ ಕರ್ನಾಟಕ ಮಾತೆ ॥

ಕಾಲಪುರುಷ : ನಾಡಬಿಡುಗಡೆಯಾಗಿ ನಾಂದಿ ಹಾಡಿದ ಮಹಿಳೆ ಕಿತ್ತೂರ
ಚೆನ್ನಮ್ಮನಂತೆ, ಪಾಂಚಲ ಕುರುಚ್ಚಿಯಲ್ಲಿ ವಿಟ್ಟಪ್ಪನೆಂಬ
ದೇಶದ್ರೋಹಿಯ ಕುಹಕದಿಂದಾಗಿ ಬ್ರಿಟಿಷರಿಗೆ ಸೆರೆಸಿಕ್ಕು
ಗಲ್ಲುಗಂಬವನೇರಿದ ವೀರಶಿರೋಮಣಿ ಕಟ್ಟಬೊಮ್ಮ
ಅಂದು 'ರಾಮಲೀಮಗ ವಿಲಾಸ' ಎಂಬ ಅರಮನೆಯಲ್ಲಿ
ಈಸ್ಟ್ ಇಂಡಿಯಾ ಕಂಪನಿಯ ಅಧಿಕಾರಿ ಮ್ಯಾಕ್‌ಬೆಲ್‌ಗೆ
ಕೊಟ್ಟ ಉತ್ತರ –

ಕಟ್ಟಬೊಮ್ಮ; ಕಪ್ಪ ~ ಹಹ್ಹಹ್ಹಹ್ಹ ಯಾರಿಗೆ ಕೊಡಬೇಕು ಕಪ್ಪ !1
ಆಕಾಶ ಮಳೆಗರೆಯುತ್ತದೆ. ಭೂಮಿ ಬೆಳೆ ಬೆಳೆಯುತದೆ.
ದುಡಿಯುವುದಕ್ಕೆ ತಾಯ್ನಾಡ ತನಯರಾದ ನಾವಿದ್ದೇವೆ.
ಪರದೇಶಿ ಪುಂಡರಿಗೆ ನಾವೇಕೆ ಕೊಡಬೇಕು ಕಪ್ಪ?
ಒಂದು ವೇಳೆ ಅದು ಸಲ್ಲುವುದಾದರೆ ಸೃಷ್ಟಿಕರ್ತನಾದ
ಸರ್ವೇಶ್ವರನಿಗೆ ಮಾತ್ರ !

ಬ್ಯಾನರ್‌ಮನ್ : ಆಯಿತು ಬೊಮ್ಮು ಈ ಗಲ್ಲುಗಂಬದ ಮಾರ್ಗವಾಗಿ ಬೇಗ ನಡೆ ಈ ಸರ್ವೇಶ್ವರನಿಗೆ ನಿನ್ನ ಕಾಣಿಗೆ ಸಲ್ಲಿಸಲು

ಕಟ್ಟಬೊಮ್ಮು : ಸಿದ್ಧನಿದ್ದೇನೆ. ಆದರೆ.. ಕುಚೋದ್ಯದ ಮಾತು ಬೇಡ
ಕೇಳು ಬ್ಯಾನರ್‌ಮನ್ –
ಭೌತದೇಹದ ಅಳಿವು ವ್ಯಕ್ತಿತ್ವದ ನಾಶವಲ್ಲ, ಅದರ ಅಮರತ್ವ.
ಅದರ ಅಜೇಯತ್ವ. ವ್ಯಕ್ತಿಯ ಅಳಿವಿನಲ್ಲಿ ಅವನ
ಆದರ್ಶ ಬೆರೆತಿಲ್ಲ. ಅದು ಎಂದೆಂದಿಗೂ ಉಳಿದು ಬೆಳೆಯುವ
ವಸ್ತು ಬೆಳೆದು ಬೆಳಗಿಸಬಲ್ಲ ಬೆಳಕು ! ಅದು ಚಿರಂತನವಾದ
ಚೈತನ್ಯ ಬಾಳ ಕಣದಲ್ಲಿ ನಡೆವ
ದಾರಿಗನಿಗೆ ಅದೇ ದಾರಿದೀಪ ! ಆದ್ದರಿಮದ ಬಂಧುಗಳೆ
ಅಂತಹ ಆದರ್ಶ ಜ್ಯೋತಿಯಿಂದ ಎಂದಿಗೂ ನೀವು ವಿಮುಖರಾಗ ಬೇಡಿ...

(ಬೊಮ್ಮುವನ್ನು ಗಲ್ಲಿಗೇರಿಸಿದ ಛಾಯಾ ದೃಶ್ಯ ತೋರಿ ರಂಗಭೂಮಿ ಕತ್ತಲಾಗಿ ಚಣಕಾಲದ ನಂತರ ಬೆಳಕಾಗುವುದು)

ಹಾಡು : ಅಗ್ನಿಜ್ವಾಲೆಯ ಆಗಸದಲ್ಲಿ
ಭಗ್ನ ಮನೋರಥ ಭೂವಲಯದಲಿ
ನಟ್ಟ ನಡುವಿರುವ ಈ ಶೂನ್ಯತೆಯಲಿ

ನಿಟ್ಟಿರಿಸಿರೂದಮ ನಿಂದಿಹೆ ಏಕೆ ?

ರಾಷ್ಟ್ರವು ಬೇಡಿತೊ ನೆತ್ತರ–ಕೊಡುಗೆ
ಅರ್ಪನವಾಯಿತು ಸರ್ವವು ಅದಕೆ
ನಿಷ್ಠೆಯ ಮುಷ್ಟಿಯ ನೀಸ್ವಾರ್ಥದಲಿ
ನಿಲಿಸಿತು ನಲ್ಮೆಯ ನವಕೇಳಿ

ಏಳು ಏಳು ತಾರುಣ್ಯದ ತೇಜವೆ
ನಮ್ಮಯ ನಾಡಿನ ಆಶಾಕಿರಣವೆ
ನಿನ್ನಯ ನಾಡಿಯಲೆಂದೂ ಮಿಡಿಯಲಿ
ಭಾರತಮಾತೆಗೆ ಜೈ
ಭಾರತಮಾತೆಗೆ ಜೈ
ಭಾರತಮಾತೆಗೆ ಜೈ !

ರಾಷ್ಟ್ರ ಕುಂಡಿಲಿನಿ : ಈ ರೀತಿ ನಾಡಿನ ಸುಪ್ತ ಚೈತನ್ಯವನ್ನು ಬಿಡಿದೆಬ್ಬಿಸಿದಾಕೆ
ಝಾನ್ಸಿರಾಣಿ ಲಕ್ಷ್ಮೀಬಾಯಿ, ತನ್ನ ಅನುಯಾಯಿಗಳಾದ
ತಾತ್ಯಾಟೋಪಿ, ನಾನಾ ಸಾಹೇಬ, ರಾವ್ ಸಾಹೇಬ
ಮೊದಲಾದ ರಾಷ್ಟ್ರಭಕ್ತರಿಗೆ ಅವಳಿತ್ತ ಕರೆ ಏನು
ಗೊತ್ತೆ?

(ರಣಭೇರಿನಾ.. ಯುದ್ದ ಕೋಲಾಹಲ ಶಬ್ದ)

ಝಾನ್ಸಿರಾಣಿ ಕೆಚ್ಚೆದೆಯ ಕಟ್ಟಾಳುಗಳೇ ,
ಇದು ನಿಮ್ಮ ಕಟ್ಟಕಡೆಯ ಹೋರಾಟ, ಸೋಲಾಗಲಿ
ಗೆಲುವಾಗಲಿ ಅದರ ಗೊಡವೆ ಬೇಡ, ನಿಮ್ಮೆಲ್ಲ ಸ್ವಾರ್ಥ
ವನು ಬದಿಗಿರಿಸಿ ದೇಶರಕ್ಷಣೆಗಾಗಿ ಹೋರಾಡಿ
ನೀಗಿದ ದಾರುಣ ದಿನ, ಪಂಜಾಬಿನ ಕಿಶೋರ ಕೇಸರಿ
ಭಗತ್‌ಸಿಂಗ್, ಸಿಡಿಲ ಚಕ್ಕೆ ಸುಖದೇವ್, ಚಂದ್ರಶೇಖರ
ಅಜಾದ್, ಶಿವರಾಮ ರಾಜಗುರು, ಭಗವತೀ ಚರಣ್
ಮೊದಲಾದ ವೀರಪುತ್ರರು ಹುತಾತ್ಮರಾದ ದಿನ. ಅವರ
ಅರೆಬೆಂದ ದೇಹಗಳು ಸಟ್ಲೇಜ್ ನದಿಯಲ್ಲಿ ತೇಲುತ್ತ
ಜಲಚರಗಳಿಗೆ ಉಣಿಸಾದ ಕಣ್ಣೀರ ಕಡಲ ದಿನ – ಆ ದಿನದ
ನೆನೆ.. ಮತ್ತೆ ಮರೆಯದಿರು ಆಂದೋಲನವನ್ನು ಸ್ಫೋಟಿ
ಸಿದ ಸ್ವಾಭಿಮಾನದ ಶಿಶು ಆ ರಾಜಾರಾಮ ಮೋಹನ
ರಾಯನನ್ನು ! ಅಂತೆಯೇ ಖಡ್ಗಧಾರೆಯ ಮೇಲೆ
ಸ್ವಾತಂತ್ರ್ಯ ಸಾಧಿಸುವ ಹಣತೊಟ್ಟ ನೇತಜಿ ಅವರ
ನೆನಪಿದೆಯೇ ನಿನಗೆ ? ಕೇಳು ನೇತಾಜಿ ನುಡಿ ಕೇಳು –

(ಹಿನ್ನೆಲೆಯಲ್ಲಿ ಸೈನಿಕರ ಮಾರ್ಚಿಂಗ್ ನೆನಪು ತರುವಂತಹ ಬ್ಯಾಂಡ್ ಶಬ್ದ ಮತ್ತು ಜಯಘೋಷ)
ಹಿನ್ನೆಲೆ : ಇಂಕಿಲಾಬ್ – ಜಿಂದಾಬಾದ್
ಇಂಕದೆಲಾಬ್ ಜಿಂದಾಬಾದ್
ಅಜಾದ್ ಹಿಂದ್ – ವಂದೇಮಾತರಂ

ಅಜಾದ್ ಹಿಂದ್ ವಂದೇಮಾತರಂ
ನೇತಾಜಿ ಸುಭಾಷ್ ಚಂದ್ರಬೋಸ್ ಕೀ ಜೈ !

ನೇತಾಜಿ :
ಮಿತ್ರರೆ,
ನಾವಿನ್ನು ದಾಸರಾಗಿ ಉಳಿಯಲಾರೆವು. ದಾಸ್ಯದ ಸವಿಯನ್ನು ಈಗಾಗಲೇ ಸವಿದಿದ್ದೇವೆ. ವಿದೇಶೀಯ ಆಕ್ರಮನಕಾರರಿಂದ ಮಾತೃಭೂಮಿಯನ್ನು ರಕ್ಷಿಸುವುದಕ್ಕಾಗಿ ಜಗತ್ತಿನಲ್ಲಿಯೇ ಹೆಚ್ಚು ಬಲಶಾಲಿಯಾದ ಸೇನೆಯನ್ನು ಸಂಘಟಿಸುವುದು ನಮ್ಮ ಕರ್ತವ್ಯವಾಗಿದೆ. ಭಗವಂತನು ಭಾರತೀಯರಾದ ನಿಮ್ಮನ್ನು ಸೃಷ್ಟಿಸಲು ಬಳಸಿದ ಲೋಹವೇ ಬೇರೆ. ಆದರೆ ನೆನಪಿರಲಿ ಸ್ವಾತಂತ್ರ್ಯವೆನ್ನುವುದು ಎಂದಿಗೂ ದಾನದಿಂದ ಪಡೆಯುವ ವಸ್ತುವಲ್ಲ. ಅದಕ್ಕೆ ನೆತ್ತರಿನ ಬೆಲೆಕೊಟ್ಟುಕೊಳ್ಳಬೇಕಾಗುತ್ತದೆ. ಸುಲಭದಲ್ಲಿ ದೊರೆತದ್ದಕ್ಕೆ ಬೆಲೆ ಇಲ್ಲ; ಅದು ಬಹುಕಾಲ ಬಾಳುವುದೂ ಇಲ್ಲ !
ಕಾಲಪುರುಷ : ನೇತಾಜಿ ಹೀಗೆ ಕ್ರಾಂತಿಕಹಳೆ ಊದಿದರೆ ಗಾಂಧೀಜಿ ಶಾಂತಿಮಂತ್ರ ಪಠಿಸಿದರು. ಆದರೂ ಬ್ರಿಟಿಷರ ಸುಳ್ಳು ಆಶ್ವಾಸನೆಗಳಿಗೆ ಕೆಂಡವಾದರು. 1942 ಆಗಸ್ಟ್ 7, 8, 9 ರಂದು ಮುಂಬಯಿಯಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸ್ ಮಹಾಧಿವೇಶನದಲ್ಲಿ
ಬ್ರಿಟಿಷರೆ ಭಾರತದಿಂದ ತೊಲಗಿರಿ
ಕ್ವಿಟ್ ಇಂಡಿಯಾ ! ಕ್ವಿಟ್ ಇಂಡಿಯಾ !
ಭಾರತೀಯ ಬಂಧುಗಳೇ ಮಾಡಿ ಇಲ್ಲವೇ ಮಡಿಯಿರಿ !!!
– ಎಂಬ ಪ್ರಚಂಡ ಘೋಷಣೆ ಮಾಡಿದರು. ಗಾಂಧೀಜಿ.
ರಾಷ್ಟ್ರ ಕುಂಡಲಿನಿ:
ಅಂತೆಯೇ ಭಾರತ ಸ್ವಾತಂತ್ರ್ಯದಷ್ಟೇ ಮುಖ್ಯವಾಗಿತ್ತು.
ಬಾಪೂಜಿಗೆ ಭಾರತದ ಒಕ್ಕೂಟ. ಭಾರತೀಯರಲ್ಲಿ ಭಾವೈಕ್ಯ ಸಾಧಿಸಲು ಹಾಡಿದರು ಬಾಪು –

ಹಾಡು :
ವೇಷ ಬೇರೆ ಭಾಷೆ ಬೇರೆ ದೇಶವೊಂದೆ ಭಾರತ
ಒಂದೆ ತಾಯಿ ಮಕ್ಕಳೆಂದು ಘೋಷಿಸೋಣ ಸಂತತ ॥
ತೀರ್ಥನಗೆಯ ಕ್ಷೇತ್ರವಿದೊ ಭವ್ಯನಾಡು ಭಾರತ
ಋಷಿಗಳುಸಿರ ಹರಕೆ ಹೊತ್ತ ದಿವ್ಯನಾಡು ಭಾರತ ॥
ಕಡಲುಗಳನೆ ಉಡುಗೆಯುಟ್ಟು
ಘಟ್ಟದೋಳು ಬಳೆಯ ತೊಟ್ಟು
ನದಿನದಗಳ ಹಾರವಿಟ್ಟು

ಸೇತುವಿಂದ ಸಿಂಧುವರೆಗೂ ಬೆಳೆದು ನಿಂತ ಭಾರತ
ಭಂಗೊಳದ ವಂಗನಾದ ಕೂಡಿ ಮೆರೆದ ಭಾಋತ

ಇದೇ ನಮ್ಮ ಭಾರತ
ಪುಣ್ಯ ಭೂಮಿ ಭಾರತ

ಭರತಖಂಡದಿಂದಲೇನೆ ನಿನಗೆ ಮೋಕ್ಷ ಪ್ರಾಪ್ತಿ
ತಪ್ಪನುಡಿದೆಯೆಂದರಹುದು ನಿನಗೆ ತಕ್ಕ ಶಾಸ್ತಿ,

ಯಾವ ದೇಶದಲ್ಲೆ ದುಡಿ
ಯಾವ ಮಣ್ಣಿನಲ್ಲೆ ಮಡಿ
ನಿಂತ ನೆಲವು ಹಿಡಿದ ಹುಡಿ

ಭರತ ಭೂಮಿಯೆಂದು ತಿಳಿ

ಮಣ್ಣ ಮೋಹ ಬಿಟ್ಟರಿಲ್ಲೊ ನಿನಗೆ ಬೇರೆ ಸದ್ಗತಿ
ಬರಿಯ ಮಾತಿನಲ್ಲೆ ಮುಗಿಯುದಲ್ಲೊ ನಿನ್ನ ಸಂಸ್ಕೃತಿ

ಮಾನವತೆಯ ಶುಚಿಮತಿ
ಸನಾತನದ ಸತ್ಕೃತಿ

ವೇಷ ಬೇರೆ ಭಾಷೆ ಬೇರೆ ದೇಶವೊಂದೆ ಭಾರತ
ಒಂದೆ ತಾಯ ಮಕ್ಕಳೆಂದು ಘೋಷಿಸೋಣ ಸಂತತ ।\

ಕಾಲಪುರುಷ : ರಾಷ್ಟ್ರಶಿಲ್ಪಿ, ಬಾಪೂಜಿಯವರ ಸ್ವಾತಂತ್ರ್ಯ ಯಜ್ಞ ವೇದಿಕೆಯ
ಸುತ್ತ ನೆರೆದ ರಾಷ್ಟ್ರ ಪ್ರೇಮಿಗಳು ಪ್ರತಜ್ಞೆ ಸ್ವೀಕರಿಸಿ, ಯ
ಘೋಷ ಮಾಡಿದರು. ಆಗೋ ಇತ್ತ ಬರುತ್ತಿರುವ ಆ ಮಹಾ
ಮೂರ್ತಿಗಳನ್ನು ಒಬ್ಬೊಬ್ಬರನ್ನಾಗಿ ಸ್ವಾಗತಿಸು ಸೋದರನೆ..
(ವೀಣೆಯಕುಣಿತ)

ಚಿತ್ತರಂಜನದಾಸ್ : ದಬ್ಬಾಳಿಕೆಯ ಕಾಯಿದೆಯನ್ನು ಎದುರಿಸುವುದು ಪ್ರತಿಯೊಬ್ಬನ
ಕರ್ತವ್ಯ. ಅದನ್ನು ಮಾಡಿದ್ದೇನೆ. ಭಾರತದ ಪ್ರತಿಯು
ಅದರ ಸ್ವಾತಂತ್ರ್ಯದಲ್ಲಿ ಅಡಗಿದೆ. ಅದೀಗ ಆಗಬೇಕಾಗಿದೆ.

ರಾಷ್ಟ್ರ ಕುಂಡಲಿನಿ: ಎಂದ ದೇಶಬಂಧು ಚಿತ್ರರಂಜನ್ ದಾಸ್

ಶ್ರದ್ಧಾನಂದ : 'ಚಲಾವ್ ತೇರಿ ಗೋಲಿ'

ಕಾಲಪುರುಷ: ಎಂದು ಎದೆಯೊಡ್ಡಿದ ಸ್ವಾಮಿ ಶ್ರದ್ಧಾನಂದ

ದಾದಾಭಾಯ್ : ಜಗತ್ತಿನಲ್ಲಿ ಬಹುದೊಡ್ಡ ಸಾಮ್ರಾಜ್ಯವುಳ್ಳ ಬ್ರಿಟಿಷರು ಭಾರತದಂತಹ ಪ್ರಾಚೀನ ರಾಷ್ಟ್ರವನ್ನು ಬಂಧು ಪ್ರೇಮದಿಂದ ಬರಮಾಡಿಕೊಳ್ಳುವ ಅದ್ಭುತ ದೃಶ್ಯವು ಜಗತ್ತಿನ ಕಣ್ಣಿಗೆ ಬೀಳಲು ಬಹುದೂರವಿಲ್ಲ.

ರಾಷ್ಟ್ರ ಕುಂಡಲಿನಿ: ಎಂಬ ಆತ್ಮವಿಶ್ವಾಸವಿರಿಸಿಕೊಂಡಿದ್ದರು ದಾದಾಭಾಯಿ ನವರೋಜಿ

ನಾಯಕ್: ಬ್ರಿಟಿಷರಿಂದ ನಮಗೆ ಲಾಭಗಳಾಗಿರಬಹುದು; ಆದರೆ ಭಾರತ ರಾಷ್ಟ್ರವ ಸ್ವತಂತ್ರವಾಗಲ ಆತಂಕಗಳೇನು?

ಕಾಲಪುರುಷ : ಎಂದು ಪ್ರಶ್ನಿಸಿದ ಶಂಕರನ್ ನಾಯಕ್

ಬಸು : ಸ್ವಾರ್ಥ ತ್ಯಾಗವಿಲ್ಲದೆ ರಾಷ್ಟ್ರದ ಏಳಿಗೆಯು ಎಂದೆಂದಿಗೂ ಸಾಧ್ಯವಿಲ್ಲ.

ರಾಷ್ಟ್ರ ಕುಂಡಲಿನಿ:
ಎಂದು ನಿರ್ಧಾರದ ನುಡಿನುಡಿದ ಆನಂದ ಮೋಹನ ಬಸು.

ಗೋಖಲೆ : ಭಾರತವು ಬ್ರಿಟಿಷರ ವಿಲಾಸ ಭೂಮಿ ! ತಾವು ಆಳುವವರು. ಜಾಗಟೆ, ಶಂಖ ಮೊದಲಾದ ವಾದ್ಯಗಳು ನಿನದಿಸುತ್ತವೆ. ತಾಂಡವ ನೃತ್ಯದ ಗ್ವಿಶಿ ಚಾರಿ ಬ್ರುಣಗಳ ಸದ್ದು, ಮೃದಂಗದ ಅದ್ಭುತ ಶಬ್ದ ! ಇಡಿಯ ಹಚಿತ ತಾಂಡವ ನೃತ್ಯದ ಪರಿಚಯವಾಗಬೆಕು )

ಶುದ್ದ ದೇಶಿ ವರ ಪ್ರೇರುಣಿ ಪ್ರೇಯಿನಿ
ಕಲಶ ಚಂಡಿಕೊದ್ದಂಡ ಕುಂಡಿಲೀ
ಭರತಾರ್ಣವದಾ ಸಪ್ತಲಾಸ್ಯದಲಿ
ಕರಣ ಭ್ರುಗತಿ ಮಕ್ತ ಬ್ರುಣಗತಿ
ಪುಷ್ಪಾಂಜಲಿ ಧ್ರುವ ಉಡುಪ ಶಬ್ದ ಚಲಿ
ಶುದ್ಧಯತಿಯ ಸವಿ ನೃತ್ಯವಿಲಾಸದಿ
ಅಲರಿಪು ಕೊನರಿಸಿ ಕವಿತೋಲ್ಲಾಸದಿ
ಬಿಡದೆ ಝುಣರು ಝುಣ ಝುಣ ಝುಣ ಎನುತುಂ

- ತಾಂಡವ ನೃತ್ಯ ಧ್ವನಿ –
- ಅನಂತರ ಲಾಸ್ಯ ಪರಿದಾಡುತ್ತದೆ–

ಲಾಸ್ಯ ತಾಂಡವದ ನಾಟ್ಯದ ಮಯೂರಿ
ಭರತಾಗಮ ಸುಕ್ಷೇತ್ರ ವಿಹಾರಿ ॥

ಗೀತ ವಾದ್ಯಗಳ ನೃತ್ಯ ಕಳಾಧರೆ
ಶಾಚಿತಲೆ ಸುಸ್ತಿರೆ ಮೃದು ಬಿಂಬಾಧರೆ
ನಾಟ್ಯ ಸರಸ್ವತಿ ಅಭಿನವಾರುಂಧತಿ
ವಿಷ್ಣುವರ್ಧನನ ಚಿತ್ತ ಚಕೋರಿ ॥

ಲಾಸ್ಯ ತಾಂಡವದ ನಾಟ್ಯ ಮಯೂರಿ
ಭರತಾಗಮ ಸುಕ್ಷೇತ್ರ ವಿಹಾರಿ ॥

ನಾಟ್ಯಾ: ನಮ್ಮ ಜಾನಪದದ ಮೇಳ ಸುಗ್ಗಿ ಕುಣಿತ, ಪಟದ ಕುಣಿತ ನಂದಿ ಧ್ವಜ, ವೀರಗಾಸೆ ಕುಣಿತ ಕೋಲಾಟ ಎಂದೆಷ್ಟೋ ವಿಧ. ಇವೆಲ್ಲಾ ನಯನ ಮನೋಹರ ಪ್ರಭು. ಅದರಲ್ಲಿ ಒಂದೇ ಒಂದು ಉತ್ತರಿ ಕುಣಿತ...

(ಉತ್ತರಿ ಕೊಡಗರ ಧಾಟಿಯಲ್ಲಿ)

ನಾಟ್ಯಾ: ದಕ್ಷಿಣ ಭಾರತದಲ್ಲಿ ಹೆಚ್ಚು ಪ್ರಚಲಿತವಿರುವ ನಾಟ್ಯವೆಂದರೆ ಭರತನಾಟ್ಯ ಪ್ರಭು.. ಇದು ತಮಿಳುನಾಡು ತೆಲುಂಗುನಾಡು ಕನ್ನಡನಾಡು.. ಈ ಮೂರು ನಾಡುಗಳಲ್ಲಿ ತುಂಬಾ ಪ್ರಚಾರ.. ಇದನ್ನು ಆ ನಾಡುಗಳ ದೇಗುಲಗಳು ಹಾಗೂ ಅರಮನೆಗಳು ರಕ್ಷಿಸಿ ಪೋಷಿಸಿಕೊಂಡು ಬಂದಿವೆ.

ಶಾಂತಲೆ : ಮಹಾಪ್ರಭು, ಕೂಚುಪುಡಿ, ಭಾಗವತಮೇಳ, ಕೊರವಂಜಿ, ಮೋಹಿನಿಅಟ್ಟಂ ಮುಂತಾದುವು ಈ ಭರತನಾಟ್ಯ ತಂತ್ರದಿಂದ ತುಂಬಾ ಪ್ರಭಾವಿತವಾಗಿದೆ. ಈ ಕೊರವಂಜಿ.

ಕೊರವಂಜಿ: ಕಣಿಯವ್ವೋ ಕಣೀ.. ಕಣೀ
ಕಣಿ ಹೇಳ್ತಿನವ್ವೋ ಕಣೀ..
ಕೈ ತೋರ್ಸಿ ಕಾಸುಕೊಡಿ
ಸೋಲಾಕಿಲ್ಲಾ ನಾನೊಂದ್ ಕಾಣಿ

ಕಣೀ ಕಣೀ ಕಣೀ ಕಣೀ
ಕೇಳು ಬಾರೆ ಕಣ್ಮಣಿ ॥
ಗೊಲ್ಲರ್‍ರುಡುಗ ಕಾಡೌನೆ
ಚೆಲ್ಲದಂಗೆ ಸೀಗೌನೆ
ಗಲ್ಲದ ತುಂಬಾ ಮುತ್ತು ಕೊಟ್ಟು
(ಗದ್ಯ) ಹೆಂಗಿತ್ತಮವ್ವೊ ಮುತ್ತು
ಚೆಂದಾಗಿತ್ತಾ ಸೀ ಮುತ್ತು

(ಪದ್ಯ) ಕೆಣಿಯವ್ವೊ ಕಣೀ
ಕಣಿ ಹೇಳ್ತಿನ್ರವ್ವೋ ಕಣೀ
ಕಣೀ ಕಣೀ ಕಣೀ ಕಣೀ
(ನೃತ್ಯದೊಂದಿಗೆ ಹಾಡು ಕ್ರಮೇಣ ಕ್ಷೀಣಿಸುತ್ತದೆ)

(ಮರುಕ್ಷಣದಲ್ಲೇ ನಾಗಸ್ವರ ಅಥವಾ ಪುಂಗೀನಾದ ಆರಂಭವಾಗುತ್ತದೆ)
ನಾಟ್ಯಾ: ಪ್ರಭು, ಇದು ಗಾರುಡಿಗನ ನೃತ್ಯ. ನಾಗಬಂಧ ಪ್ರದರ್‍ಶ್ನ.. ಸರ್ಪಗತಿಯಲ್ಲಿ ಈ ಚೆಲುವೆ ನೆಲದಲ್ಲಿ ಹರಿದರೆ, ನರ್ತನ ಮಾಡುತ್ತಲೇ ಆ ಗಾರುಡಿಗ ಗಾರುಡಿ ನುಡಿಸುತ್ತಾನೆ.
–ಪುಂಗಿನಾದ–
(ನಾದದೊಡನೆಯೇ ನರ್ತನದ ಗತಿ ಕೇಳಿಬರುತ್ತದೆ)
ಶಾಂತಲೆ : ಇದು ಮಯೂತ ನತ್ನ ಪ್ರಬು, ನಯನ ಮನೋಹರ.
– ಮಯೂರು ನೃತ್ಯ –
ಕೊಕ್.. ಕೊಕ್..ಕೊಕ್
ಕೊಕ್ ಕೊಕ್ ಕೊಕ್ ಕೊಕ್ ಕೊಕ್ ಕೊಕ್ ॥

(ಬರಿಯ ತಾಳದಲ್ಲಿ ನರ್ತನ ಪಡೆಯುತ್ತದೆ. ಮಧ್ಯೆ ನವಿಲು ಗರಿಗೆದರಿ ನಿಲ್ಲುತ್ತದೆ)

ಅದೋ ಪ್ರಭು ಈ ನವಿಲು ತನ್ನ ಸಹಸ್ರ ನೇತ್ರಗಳನ್ನು ತೆರೆಯುತ್ತಿದೆ. ಅದೋ ಗರಿಗೆದರಿತು. ಜಾಗರವಾಡುತ್ತಿದೆ. ಓಹ್ ಅದ್ಭುತ ರಮ್ಯ !
(ನರ್ತನ ಕ್ರಮೇಣ ಕ್ಷೀಣಿಸುತ್ತಿದ್ದಾಗ)

ನಾಟ್ಯಾ: ಮಹಾಪ್ರಭು – ಇದು ವಂಚಿತ ನರ್ತನ ..
(ವಾದ್ಯ ಗೋಷ್ಠಿ – ಗೆಜ್ಜೆಯಲ)
ಸಸ್ಯ ಸಂಕುಲಕೆಲ್ಲ ಸಪ್ತವರ್ಣವನೆರಚಿ
ಚಿತ್ತಚಿತ್ತಾರವನೆ ಬರೆದ ಚೈತ್ರ
ಮಾವು ಬೇವಿಗು ಮಧುರೆ ಬಾಚಿಧವ್ಯವನೆ ಬೆಸೆದ
ಸಮರಸದ ಹರಿಕಾರ ಓ ಪವಿತ್ರ !

ತಂಬೆಲರ ಚುಂಬನಕೆ ತುಟಿದೆರೆದ ಹೂ ಎದೆಗೆ
ದುಂಬಿಗಳ ಛೂ ಬಿಡುವ ಮೋಜುಗಾರ
ಮಧುಮಾಸದೊಸಗೆಯನು ತಾರಕದಿ ಸಾರಿಸುತೆ
ಚಿಗುರ ಕಚಗುಳಿಯಿಡುವ ಮೋಡಕಾರ !
–ನರ್ತನ–ತಿಲ್ಲಾನ–

ನಾಟ್ಯಾ: ಮಣಿಪುರಿ, ಮಣಿಪುರ ರಾಜ್ಯದ ವಿಶಿಷ್ಟ ನೃತ್ಯ. ಲಾಯ ಹರೋಬ ಮತ್ತು ರಾಸ ಎಂದು ಎರಡು ಬಗೆ ಅದರಲ್ಲಿ, ದೇವತಾ ತೃಪ್ತಿಯನ್ನು ಗುರಿಯಾಗಿ ಉಳ್ಳದ್ದು ಲಾಯ ಹರೋಬ. ರಾಧೇ ಶ್ಯಾಮರ ಪ್ರಯಣಯೋನ್ಮಾದದ ನೃತ್ಯ, ರಾಸ ! ಅದೋ ಪ್ರಭು...

(ನೃತ್ಯಾರಂಭ – ಗೆಜ್ಜೆ ನಿನಾದ)
ಶಾಂತಲೆ : ಆ ಬೃಂದಾವನದ ವಕ್ಷಸ್ಥಲದಲ್ಲಿ ಗೋಪಿಯರು ನೆರೆದಿದ್ದಾರೆ. ನೃತ್ಯಭಂಗಿಯಲ್ಲಿ ವರ್ತುಲಾಕಾರವಾಗಿ ನಿಂತಿದ್ದಾರೆ. ಅವರ ನಡುವೆ ನಿಂತಿದ್ದಾರೆ ಕೃಷ್ಣ–ರಾಧೆ. ಇದು ರಾಸಲೀಲೆ !
ಹಾಡು ॥ (ನೃತ್ಯದೊಡನೆ) ರಾಸಲೀಲೆ ಸು–ಹಾಸಲೀಲೆ
ವಸಂತ ಮಾಸದೊಸಗೆ ತಂದ
ಭಾಸಲೀಲೆ – ರಾಸಲೀಲೆ ॥
ಮುದ್ದು ಮೋಹನ
ಘನಶ್ಯಾಮನ
ತೋಳ ಸೆರೆಯ ಬಂಧನ ಅಪ್ಯಾಯನ ॥ರಾಸಲೀಲೆ॥

ನಂದಗೋಪನ
ಚೆಲುವ ಚಿಣ್ಣನ
ಬೆಣ್ಣೆ ದೇಹದಲ್ಲಿ ಬೆರೆಯೆ
ಇದುವೆ ಸಾಧನ ॥ರಾಸಲೀಲೆ॥
ಗೆಜ್ಜೆ ನುಡಿಯು ಘಲ್ಲೆನೆ
ಎದೆಯೊಳೇನೋ ಝಲ್ಲೆನೆ
ಮನದ ಕೊನೆಗೆ ಮುಲುಕು ತಂದ
ಸುರತಲೀಲೆ – ಇದು ರಾಸಲೀಲೆ ॥
ರಾಸಲೀಲೆ – ಸು – ರಾಸಲೀಲೆ ॥

ವಿಷ್ಣು : ಮಣಿಪುರಿಯಂತೆಯೆ ಕಥಕ್ ಕೂಡ ಉತ್ತರ ಭಾರತದ್ದಲ್ಲವೇ ಆಚಾರ್ಯ..?

ನಾಟ್ಯಾ: ಹೌದು ಪ್ರಭು, ಬುಗುರಿಯಂತೆ ಸುತ್ತುವುದು ಅದರ ವೈಶಿಷ್ಟ್ಯ. ಆದರೆ ಅದು ಕ್ರಮೇಣ ಸಾಂಕರ್ಯಕ್ಕೆ ಬಲಿಯಾಗುತ್ತಿದೆ. ಮ್ಲೇಚ್ಛ ಶೈಲಿ ಅದರಲ್ಲಿ ಬೆರೆತು ಕಥಕ್ ತನ್ನ ಮೊದಲ ನೈಜತೆಯನ್ನು ನೀಗಿಕೊಳ್ಳುತ್ತಿದೆ. ಅದರೆ ಮೂಲೋದ್ದೇಶ ಭಕ್ತಿಪ್ರಧಾನವಾದ ಆರಾಧನೆ ಔಪಾಸನೆ. ಅದು ಅಳಿದು ಅದರ ಜಾಗದಲ್ಲಿ ಅರಸ ಅರಸಿಯರನ್ನು ರಂಜಿಸುವ ಮನೋರಂಜನೆಗೆ ಮೀಸಲಾದ ವಿಲಾಸದ ವಸ್ತುವಾಗಿದೆ.

ಶಾಂತಲೆ : ಕಥಕ್ ಅಂತಿರಲಿ ಮಹಾಪ್ರಭು, ಕಥಕ್ಕಳಿ ನಿಜಕ್ಕೂ ಒಂದು ಗಂಡುತಲೆ ! ವೀರ ಹಾಗೂ ರೌದ್ರರಸ ಪ್ರಧಾನವಾದ ಕಣಕ್ಕಳಿಯಲ್ಲಿ ತಾಂಡವ ಪ್ರಕಾರಕ್ಕೆ ಪ್ರಮುಖ ಸ್ಥಾನವಿದೆ. ಪುರಾಣ ಪ್ರಸಿದ್ಧ ವ್ಯಕ್ತಿಗಳ ಬದುಕು ಅದರೆ ಕೇಂದ್ರ ವಸ್ತು . ಕಥಕ್ ಅಂದರೆ ಕಥೆ, ಕಳಿ ಅಂದರೆ ಆಟ ! ಅದು ನನ್ನ ಅಚ್ಚುಮೆಚ್ಚಿನ ನಾಟ್ಯ !

ವಿಷ್ಣು : ಅಂತಿದ್ದರೆ ನಿನ್ನಿಂದಲೇ ಆ ನೃತ್ಯ ಪ್ರದರ್ಶನ ನಡೆಯಲಿ..
ಶಾಂತಲೆ : ಆಚಾರ್ಯ !
ನಾಟ್ಯಾ: ಅಪ್ಪಣೆ ತಾಯಿ..
(ಚಪ್ಪಾಳೆ ತಟ್ಟಿದ ಸದ್ದು0ಅದರ ಬೆನ್ನ ಹಿಂದೆಯೇ ಚಂಡೆ ಏಳ–ಇತ್ಯಾದಿಗಳ ನಿರ್ಘೋಷ)
ತೋಂ ತೋಮ ತೋಂ ತೋಮ ಧಿತ್ತೋಂ..
ಧಿತ್ತೊಂ ಧಿಧ್ಧಿತ್ತೋಮ ಧಿತ್ತೋಂ..
ಹಾಡು ಹಾಡಿದನಾಡಿದನಾಹಾ ಶಂಕರ

ನಾಟ್ಯವನಾಡಿದನೆ ಅಭಯಂಕರ ॥

(ಗದ್ಯದ ಗತಿಯಲ್ಲಿ)
ಸತಿ ಸೀಮಂತಿನಿ, ಶಿವೆ ದಾಕ್ಷಾಯಿಣಿ
ಯಜ್ಞ ಕುಂಡದೊಳು ಧಗಧಗ ದಹಿಸಲು
ಕೆಂಡದುಂಡೆಯೊಲು ಶಿವ ಜಟೆಯಪ್ಪಳಿಸುತೆ
ಚಂದ್ರ ಸೂರ್ಯರನು ಚಪ್ಪಳೆಯಿಕ್ಕುತೆ
ತಾರೆಗಳೆಲ್ಲವ ತತರಿದೆಸೆಯುತೆ
ದಿಕ್ಕುದಿಕ್ಕುಗಳ ಬೆಸುಗೆಯು ಬಿರಿಯಲು
ಭೂಮಿ ವ್ಯೋಮಗಳು ತಲ್ಲಣಗೊಳುತಿವೆ
ರುಂಡ ಮಾಲಾಧರ ಚಂಡಿಯ ಮೆರೆಯಿಸಿ
ಚಂಡೆ ಮದ್ದಲೆಯು ಜಾಗಟೆ ಝಣರೆನೆ
ಭೋಂ ಭೋಂ ಭೋಂ ಭೋಂ ಶಂಖ ಪೂರೈಸಲು
ಧಿಮಿ ಧಿಮಿ ಧಿತ್ತೋಂ ಧಿತ್ತೋಂ
ಎಂದೆಂದೆನಿತೋ ರುದ್ರತಾಂಡವದಿ

ಹಾಡು ॥
ಆಡಿದನಾಡಿದನಾಹಾ ಶಂಕರ
ನಾಟ್ಯವನಾಡಿದನೈ ಅಭಯಂಕರ ॥

ಡಮರುಗ ಢಮ ಢಮ ಢಂ ಢಂ ಎನಲು
ದಿವ್ಯ ಮೃದಂಗವು ತೋಂ ತೋಂ ಎನಲು
ಚಂಚಳ ಚಳ ಚಳ ತಾಳವು ನುಡಿಯಲು
ಜಂಘೂ ಝಲ್ಲರಿಯು ಝಳ್ ಝಳ್ ಎನಲು ॥

ಆಡಿದನಾಡಿದನಾಹಾ ಶಂಕರ
ನಾಟ್ಯವನಾಡಿದನೈ ಅಭಯಂಕರ ॥

ಭಾರತೀಯರು ಆಳಿಸಿಕೊಳ್ಳುವವರು ಎಂಬ ಭಾವನೆಯು ಕರ್ಜನರಿಗಿದೆ. ಅದಕ್ಕೆ ನನ್ನ ಧಿಕ್ಕಾರ !

ಕಾಲಪುರುಷ:
ಎದು ಧಿಕ್ಕರಿಸಿದ ಗೋಪಾಲಕೃಷ್ಣ ಗೋಖಲೆ !

ಮಾಳವೀಯ :
ನಮ್ಮ ಚೈತನ್ಯದ ಪ್ರತಿಕಣವು ತಾಯ್ನಾಡಿನ ಸೇವೆಗಾಗಿ ಮೀಸಲಿರಲಿ. ನಮ್ಮ ಭವಿಷ್ಯವು ನಮ್ಮ ಒಗ್ಗಟ್ಟಿನಲ್ಲಿಯೇ ಇದೆ.

ರಾಷ್ಟ್ರಕುಂಡಲಿನಿ :
ಎಂದು ಸಾರಿದ ಮದನ ಮೋಹನ ಮಾಳವೀಯ.

ಮಜುಮ್‌ದಾರ್:
ತನ್ನ ರಕ್ಷಣೆಯನ್ನು ತಾನು ಮಾಡಿಕೊಳ್ಳದ ಯಾವುದೆ ಜನಾಂಗವು ಸ್ವಾಭಿಮಾನಿಯಾಗಿ ಬಾಳಲಾರದು.. ಗೆಲ್ಲುವಾ ಇಲ್ಲವೆ ಸಾಯುವಾ ಎಂಬ ದೃಢ ನಿಶ್ಚಯದಿಂದ ಹೋರಾಡಲು ಒಗ್ಗಟ್ಟಾಗಿರಿ.

ಕಾಲಪುರುಷ :
ಎಂದು ಕರೆಕೊಟ್ಟ ಅಂಬಿಕಾ ಚರಣ್ ಮುಜುಮ್‌ದಾರ್ !

ಅನಿಬೆಸೆಂಟ್ :
ಭಾರತವು ಬಿಕ್ಕೆಗಾಗಿ ಮೊಣಕಾಲೂರಿಲ್ಲ. ತನ್ನ ಹಕ್ಕುಗಳಿಗಾಗಿ ಹೋರಾಡುತ್ತಿದೆ.

ರಾಷ್ಟ್ರಕುಂಡಲಿನಿ :
ಎಂದು ಸ್ಪಷ್ಟೀಕರಿಸಿ ಶ್ರೀಮತ ಅನಿಬೆಸೆಂ

ತಿಲಕ್ :
ಸ್ವರಾಜ್ಯವು ನನ್ನ ಜನ್ಮಸಿದ್ಧ ಹಕ್ಕು ಅದನ್ನು ದೊರಕಿಸಿಯೇ ತೀರುವೆನು.

ಕಾಲಪುರುಷ :
ಎಂದು ಗರ್ಜಿಸಿದ ಬಾಲಗಂಗಾಧರ ತಿಲಕ್

ಬಾಲಾಜಿ : ರಾಷ್ಟ್ರ ಪ್ರಜ್ಞೆಯೇ ನನ್ನ ಧರ್ಮ

ರಾಷ್ಟ್ರಕುಂಡಲಿನಿ : ಎಂದ ಲಾಲಾಲಜಪತರಾಯ್

ಮೋತಿಲಾಲ್ : ನನಗೆ ಮರಣ ಬಂದರೂ ಸ್ವತಂತ್ರ ಭಾರತದಲ್ಲಿಯೇ ಬರಲಿ

ಕಾಲಪುರುಷ : ಎಂದು ಆಶಿಸಿದ ಮೋತಿಲಾಲ್ ನೆಹರು

ನೆಹರು : ಜನತೆಯನ್ನು ಸರ್ವದುಃಖಗಳಿಂದ ಮುಕ್ತಗೊಳಿಸುವುದೇ ನಾವಾಡುವ ಸ್ವಾತಂತ್ರ್ಯದ ಅರ್ಥ
ರಾಷ್ಟ್ರಕುಂಡಲಿನಿ : ಎಂದ ಭಾರತರತ್ನ ಪಂಡಿತ ಜವಾಹರಲಾಲ್ ನೆಹರು
ಪಟೇಲ್ : ಯಾವ ರಾಷ್ಟ್ರದ ಆರ್ಥಿಕ ಆಳಿತವು ಅದರ ಕೈಯಲಿಲ್ಲವೊ ಅದು ಎಂದಿಗೂ ಪ್ರಗತಿಯನ್ನು ಹೊಂದಲಾರದು
ಕಾಲಪುರುಷ : ಎಂದು ಎಚ್ಚರಿಸಿದ ಉಕ್ಕಿನ ಸರ್ದಾರ್ ವಲ್ಲಭಬಾಯ್ ಪಟೇಲ್
ಶ್ರೀಮತಿ ಗುಪ್ತ : ನಾವು ನಮ್ಮ ರಕ್ತದಿಂದಲೇ ಭಾರತದ ಇತಿಹಾಸವನ್ನು ಬರೆಯುತ್ತಲಿದ್ದೇವೆ.
ರಾಷ್ಟ್ರಕುಂಡಲಿನಿ : ಎಂದ ಶ್ರೀಮತಿ ಸೇನಗುಪ್ತ
ಕಾಲಪುರುಷ : ಡಾ॥ಬಾಬು ರಾಜೇಂದ್ರ ಪ್ರಸಾದ್, ಲಾಲ್ ಬಹದ್ದೂರ್ ಶಾಸ್ತ್ರಿ, ಕ್ಯಾಪ್ಟನ್ ಲಕ್ಷ್ಮಿ, ಆಂಧ್ರಕೇಸರಿ ಪ್ರಕಾಶಂ, ಮೌಲಾನಾ ಅಬ್ದುಲ್ ಕಲಂ ಅಜಾದ್, ಸಂವಿಧಾನಶಿಲ್ಪಿ ಬಾಬಾ ಅಂಬೇಡ್ಕರ್ ಒಬ್ಬರೇ ಇಬ್ಬರೇ ಲೆಕ್ಕಕ್ಕೆ ಸಂಖ್ಯೆಯಿಲ್ಲ ಇವರೆಲ್ಲ ನಿನ್ನವರು. ನಿನ್ನ ಅಭ್ಯುದಯಕ್ಕಾಗಿ ತಮ್ಮನ್ನೇ ಬಲಿಗೊಟ್ಟುಕೊಂಡ ತ್ಯಾಗಮೂರ್ತಿಗಳು. ಅವರ ಅನಂತ ಆಶೀರ್ವಾದ ನಿನಗೆ ಶ್ರೀರಕ್ಷೆಯಾಗಿರಲಿ ಭಾರತೀಯ–ಅವರ ಹರಕೆ, ಹಂಬಲಗಳು ಹಣ್ಣಾಗಲಿ ಎಲ್ಲಿ, ಒಮ್ಮೆ ಹಾಡು –

ವೃಂದಗಾನ :
ಓರ್ವ ತಾಯಿಯ ಗರ್ಭದಿಂದುಸಿ ಬಂದವರು
ಭಾರತೀಯರು ನಾವು ಜ್ಯೋತಿರತರು
ಸರ್ವರಿಗು ಸಮಪಾಲು, ಸರ್ವರದು ಸುಖಬಾಳು
ಸಗ್ಗ ಸಿರಿ ಸಂಪದವ ಸೂರೆಗೊಂಡವರು.

ಆಳರಸರಿಲಿಲ್ಲಿಲ್ಲ ಅಂಕುಶಕೆ ಎಡೆಯಿಲ್ಲ
ನಮಗೆ ನಾವೆ ಆಳು ಒಡೆಯರುಗಳಹೆವು !

ಅಂದಿದ್ದುದಾ ದಾಸ್ಯ ಇಂದದುವೆ ಪರಿಹಾಸ
ಎಂದೆಂದಿಗೂ ನಾವು ಕೂಡ ಬಾಳುವೆವು

ಜೀತಪದ್ಧತಿ ಸತ್ತು ನೀತಿ ನೆಲೆ ನಿಂತಿಹುದು
ಸತ್ಯ ಸೂರ್ಯನ ತೇಜ ಬಿತ್ತರಿಸುತಿಹುದು
ಜೀತದಾಳಿಗು ಇಂದು ಸಮುದಾಯ ಸಂದಿಹುದು
ಮಾನವೀಯತೆಯೊಮದೆ ಮೆರೆಯುತಿಹುದು

ಸರ್ವತಂತ್ರ ಸ್ವತಂತ್ರ ಸ್ವಚ್ಛಂದದೈಸಿರಿಯು
ಹಂಚಿಹುದು ಗುಡಿಸಲಿಗೆ ಗುಡಿಗೆ ಸೌಧಕ್ಕೆ
ದಿಕ್ತಟದಿ ಧ್ವಜಪಟವು ಪಟಪಟಿಸಿ ಹಾರುತಿದೆ
ಸಾರುತಿದೆ ಇನ್ನಿಲ್ಲ ಸ್ವಾತಂತ್ರ್ಯ ಧಕ್ಕೆ !

ರಾಷ್ಟ್ರ ಕುಂಡಿಲಿನಿ:
ಆದರೆ ಮಂತ್ರಕ್ಕೆ ಮಾವಿನಕಾಯಿ ಉದುರುವುದಿಲ್ಲ ಭಾರತೀಯ,
ಬರಿ ಮಾತಿನಿಂದಲೇ ಹೊಟ್ಟೆ ತುಂಬುವುದಿಲ್ಲ
ನೂರು ಹೇಳುವುದಕ್ಕಿಂತ ಮೂರು ಮಾಡು.
ಮಾತಿನಮಲ್ಲರು ನಾವಾಗುವುದು ಬೇಡ.
ಮಂತ್ರ ಪಠಿಸುತ್ತಲೇ ರಾಷ್ಟ್ರವನು ನೀಗಿದೆವು.
ಮಾನವನು ಮಾರಿದೆವು; ತುತ್ತು ಕೂಳಿಗೆ ನಿತ್ಯ ತೊತ್ತಾಗಿ
ಸತ್ತಿಹೆವು.
ಅಂದಿದ್ದ ಭಾರತೀಯರ ಸಂಖ್ಯೆ ಐವತ್ತು ಕೋಟಿ : ಅವನಾಳುತ್ತಿದ್ದ ಬ್ರಿಟಿಷರ ಸಂಖ್ಯೆ ಕೇವಲ ಇಪ್ಪತ್ತೈದು ಲಕ್ಷ. ಎಲ್ಲಿಂದೆಲ್ಲಿಗೆ ! ಪ್ರಪಂಚದ ಭೂಪಟವನ್ನು ತೆರೆದು ನೋಡಿದರೆ ನೊಣದ ಕಾಲಿನಷ್ಟಿಲ್ಲ ಆ ಬ್ರಿಟಿಷ್ ದ್ವೀಪಗಳ ಗುಂಪು. ಆದರೆ ಖಂಡದಷ್ಟು ವೈಶಾಲ್ಯವೆತ್ತ ಬೃಹತ್ ಭಾರತವನ್ನು ಸುಮಾರು ಇನ್ನೂರು ವರ್ಷಗಳು ತನ್ನ ಕಾಲಕಸವನ್ನಾಗಿ ಮಾಡಿಕೊಂಡಿತ್ತು. ಇದು ಬ್ರಿಟಿಷರ ಪೌರುಷದ ಪ್ರತೀಕವಲ್ಲ; ಭಾರತೀಯರ ಅಶಕ್ತತೆ ಅಸೂಯೆ, ಅನೈಕಮಾತ್ಯ, ಅಯೋಗ್ಯತೆ ಇವುಗಳ ದ್ಯೋತಕ ಇದನ್ನು ನೆನೆದೇ ಇರಬೇಕು ಯುಗಪುರುಷ ಶ್ರೀ ಸ್ವಾಮಿ ವಿವೇಕಾನಂದರು –

ವಿವೇಕಾನಂದ :
ಭರತ ಖಂಡದ ನನ್ನ ಸೋದರರ ಸೋದರಿಯರೆ, ಭಾರತಕ್ಕೆ ಸ್ವಾತಂತ್ರ್ಯ ಬಂದೇ ಬರುತ್ತದೆ. ಇಂದು ನೀವು ಊಹಿಸಲಾಗದಿರುವ ರೀತಿಯಲ್ಲಿ ನೀವು ನಿದ್ದೆಯಲ್ಲಿದ್ದಾಗ ಬಂದು ನಿಮ್ಮ ಕೈ ಸೇರಿ ಅಚ್ಚರಿಗೊಳಿಸುತ್ತದೆ. ಆದರೆ ಬಹು ಜನರ ತ್ಯಾಗ ಮತ್ತು ಬಲಿದಾನಗಳಿಂದ ಗಳಿಸಿದ ಆ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳುವ ಯೋಗ್ಯತೆಯನ್ನು ಭಾರತೀಯರಾದ ನೀವು ಪಡೆದುಕೊಳ್ಳದೆಹೋದಲ್ಲಿ ಕೇವಲ ಮೂರೇ ಮೂರು ತಲೆಮಾರುಗಳಲ್ಲಿ ನಿಮ್ಮ ದೇಶ ಸ್ವಾತಂತ್ರ್ಯವನ್ನು ನೀಗಿಕೊಳ್ಳುತ್ತೀರಿ. ಎಚ್ಚರ !

ಕಾಲಪುರುಷ :
ಇದು ಕೊಟ ವರಲವಲ್, ಇಟ್ಟ ಶಾಪವೂ ಅಲ್ಲ. ಇದು ಯೋಧೃವಾಣಿ ಆದ್ದರಿಂದ ಅವರಿತ್ತ ಆ ಮಾತು ಮಂತ್ರವಾಗಲಿ. ಉತ್ತಿಷ್ಠತ , ಜಾಗ್ರತ, ಪ್ರಾಪ್ಯವರಾನ್ನಿಬೋಧತ

ಎಲ್ಲರೂ :
ಉತ್ತಿಷ್ಠತ, ಜಾಗ್ರತ ಪ್ರಾಪ್ಯವರಾನ್ನಿಬೋಧತ

ಹಾಡು :
ತೈಲ ತೀರಿದರುಂಟು ದುಡಿವವರ ಬೆಮರು

ಬತ್ತಿಯದು ಬರಡಾಗೆ ಮಡಿದವರು ಉಸಿರು
ನಿನ್ನೊಡಲ ಬಟ್ಟಲಿಗೆ ಕೋಟಿ ಮಕ್ಕಳ ಬಸಿರು
ಮೀಸಲಿದೆ ಓ ಬೆಳಕೆ ಆ ಹುತಾತ್ಮಕರ ಮಡಿಸಲು

ಬೆಳಗುತಿರು ಬೆಳಗುತಿರು ಬೆಳಗುತಿರು ಬೆಳಕೆ
ಬೆಳಗುತಿರು ಭಾರತದ ಬಿಡುಗಡೆಯ ಬೆಳಕೇ ॥

ಗಣತಂತ್ರದಟ್ಟಣೆಯ ವಿಸ್ತೃತದ ಗಂಧಕುಟಿ
ಜನಮನವೆ ವೇದಿಕೆಯು, ವೈಜಯಂತಿ !
ಸಕಲ ಸೌಹಾರ್ದದಾ ಸಮಬಾಳು ನಿನ್ನ ಗುಡಿ
ಸತ್ಯ ಸೂರ್ಯನ ತೇಜ ನಿನದಾಯ್ತು ಪ್ರಣತಿ

ಬೆಳಗುತಿರು ಬೆಳಗುತಿರು ಬೆಳಗುತಿರು ಬೆಳಕೆ
ಬೆಳಗುತಿರು ಭಾರತದ ಬಿಡುಗಡೆಯ ಬೆಳಕೇ ॥

ಬೆಳಗುತಿರು ಜಗದೊಡಲ ಚೆಲುವಿಕೆಯ ಚೇನತವೆ
ಬೆಳಗುತಿರು ಕವಿಸವಿದ ಸುಸ್ಮೃತಿಯ ಸೌರಭವೆ !
ಬೆಳಗುತಿರು ರಾಷ್ಟ್ರಕನ ನಡೆಸುತಿಹ ಹೊಂಬೆಳಕೆ !
ಬೆಳಗುತಿರು ಅಭಿಜಾತ ಸ್ವಾತಂತ್ರ್ಯದ ಹಣತೆ ~

ಬೆಳಗುತಿರು ಬೆಳಗುತಿರು ಬೆಳಗುತಿರು ಬೆಳಕೆ
ಶ್ರಾವಣದ ಶುಭದಿನದಿ ಎಮೆದೆರೆದ ಬೆಳಕೇ ॥
ಬೆಳಗುತಿರು ಬೆಳಗುತಿರು ಬೆಳಗುತಿರು ಬೆಳಕೆ
ಬೆಳಗುತಿರು ಭಾರತದ ಬಿಡುಗಡೆಯ ಬೆಳಕೇ ॥

## ಹಾಲಾಹಲಧಾರಿ !
### (ನೃತ್ಯರೂಪಕ)

ದೃಶ್ಯ : 1 ಕೈಲಾಸ
ಶಿವ ಪಾರ್ವತಿಯರ ನಾಟ್ಯದ ವೈಖರಿ
ಭರತಾಗಮ ಸುಕ್ಷೇತ್ರ ವಿಹಾರಿ ॥

ಕಿಂಕಿಣಿ ಕಿಣಿ ಕಿಣಿ ಗೆಜ್ಜೆಗಳುಲಿಯಲು
ಧಣ್ ಧಣ ಧಣ್ ಧಣ ಚಂಎಯು ಮೊರೆಯಲು
ನಸು ನಾಚುತೆ ಶಿವೆ ಲಾಸ್ಯವನಾಡಲು
ತಾಂಡವದೋರಿದನಾಹಾ ! ಶಿವನು ॥

ಡಮರುಗ ಢಮ ಢಮ ಢಂ ಢಂ ಎನಲು
ದಿವ್ಯ ಮೃದಂಗವು ತೋಂ ತೋಮ ಎನಲು
ಚಂಚಳ ಚಳ ಚಳ ತಾಳವು ನುಡಿಯಲು
ಜಂಘು ಝುರಿಯು ಝುಳ್ ಝುಳ್ ಎನಲು

ತಾಂಡವ ತೋರಿದನಾಹಾ ಶಂಕರ

ನಾಟ್ಯಾಗಮದಾ ಮೂಲಾಧಾರ ॥

ವಚನ ಧಾಟಿಯಲ್ಲಿ :
ಶುದ್ಧ ದೇಶಿವರ ಪೇರುಣಿ ಪ್ರೇಯಿನಿ
ಕಲಶ ಚಂಡಿಕೋದ್ದಂಡ ಕುಂಡಿಲಿನಿ
ಭರತಾವರ್ಣವದಲಿ ಸುಪ್ತ ವಿಲಾಸದಿ

ಕರಣ ಚಾರಿಗತಿ ಮುಕ್ತ ಚರಣಗತಿ
ಪುಷ್ಪಾಂಜಲಿ ಧ್ರುವ ಉಡುಪ ಶಬ್ದದಲಿ
ಶುದ್ಧ ಯತಿಯ ನವ ನೃತ್ಯವಿಲಾಸದಿ
ಅಲರಿಪು ಕೊನರಿಸಿ ಕವಿತೋಲ್ಲಾಸದಿ
ಬಿಡದೆ ಝಣರು ಝಣ ಝಣ ಝಣ ಎನುತಲಿ
ವಿಶ್ವವೆ ಚೇತೋಹಾರಿ ಎನ್ನುವೊಲು ॥

ಆಡಿದರಾಡಿದರಾ ಶಿವ ಶಿವೆಯರು
ಆಡಿದರೈ ಈ ಮೂಜಗದೊಡೆಯರು ॥

ನಿವೇದಕ :
ಓಹ್ ಎಂತ ಮನಮೋಹಕ ನೃತ್ಯ ವಿಲಾಸ !
ಜಗನ್ಮಾತಾಪಿತರ ವೈಭವೋಪೇತ ನರ್ತನ ಪ್ರಗತಿ !
ಸುಮಧುರ ಸುಶ್ರಾವ್ಯ ಸಂಗೀತದ ಹಿನ್ನೆಲೆಯಲ್ಲಿ
ಮನೋಜ್ಞ ರಾಗರಂಜನೆಯ ಮಂಗಳಮಯ ವಾತಾವರಣದಲ್ಲಿ
ಓಹ್ !
ನಾದಮೋದವೇ ಮೋಹನಾಕಾರ ತಳೆದಂತೆ
ಶಿವ ಶಿವೆಯರ ನಾಟ್ಯ ವೈಭವ !

(ಕನಕ ಮಂಟಪ)

ಶಿವ ಪಾರ್ವತಿಯರು ನರ್ತಿಸುತಿರಲು
ಝುನ ಝಣ ಧಣ ಧಟ ಗೆಜ್ಜಯುಂ ಚಲಿಸಿತು !
ಧಿಮಿ ಧಿಮಿ ಧಿಮಿ ಧಿಮಿ ಶಿವ ತಾಂಡವವಾಡೆ
ನಸುನಾಚುತೆ ದೇವಿಯು ಲಾಸ್ಯವ ಮಾಡೆ
ವಿವಿಧ ಬಂಗಿಯಲ್ಲಿ ವಿವಿಧ ಗತಿಯಲ್ಲಿ
ನಾಟ್ಯ ಶಾಸ್ತ್ರವನೆ ಧರೆಗಿಳಿಸಿದರು !
ಆ ನೃತ್ಯವ ಕಂಡು
ಸೂರ್ಯ ಚಂದ್ರರು ನಾಟ್ಯ ವೇದಿಕೆಗೆ ಬೆಳಕಾದರು
ಬ್ರಹ್ಮನು ತಾಳವ ಹಾಕಿದನು
ಹರಿಯು ಮದ್ದಳೆಯ ನುಡಿಸಿದನು
ಸರಸತಿ ವೀಣೆಯ ದನಿಗೂಡಿಸಲು
ಲಕ್ಷ್ಮಿಯು ಪ್ರೋತ್ಸಾಹಕಳಾಗಿ ಹಾಡಿದಳು ಹಾಡಿದಳು

–ನಾಲ್ವರು ಸುವಾಸಿನಿಯರ ಪ್ರವೇಶ–
ಏನು ಮೋಹಕವೊ ಶಿವ ಶಿವೆಯರ ಲಾಸ್ಯ

ಕಣ್ ಮನ ತಣಿಸುವ ಈ ದೃಶ್ಯ ॥ಪ॥
ಕಿಲ ಕಿಲ ನಗುತಿದೆ ಹಿಮಗಿರಿ ಕಂದರ
ಆದರು ಮೆರೆದಿದೆ ಶಿವ ಶೃಂಗಾರ ॥ಅನು.ಪ॥

ತಾಳ ಮೇಳಗಳ ಪ್ರಾಶಸ್ತ್ಯದಲಿ
ಅಂಗಿಕಾಭಿನಯ ಭಾವ ಭಂಗಿಯಲಿ
ಹಸ್ತ ಮುದ್ರೆಗಳ ವಿನ್ಯಸ್ತತೆಯಲಿ
ನೃತ್ಯ ವಿಲಾಸದ ವೈಭವ ಮೆರೆವಲ್ಲಿ ॥1॥

ಢಮರು ಢಮಗುಡಲು ಸರಿಗಮಪದನಿ
ಸಪ್ತ ಸ್ವರ ಬೀಜಾಕ್ಷರ ಉದಿಸಲು
ಲಹರಿ ಲಹರಿಯಲಿ ವ್ಯೋಮಕೇಶವೇ
ಛಂದೋ ಗತಿಯನು ನಿರ್ಧರಿಸಿರಲು ॥2॥

ಪಾರ್ವತಿ ದೇವಿಯ ಹೆಜ್ಜೆಯ ಗೆಜ್ಜೆಯು
ಲಜ್ಜೆ ತೋರಿ ನವ ಲಯಗತಿ ಅರುಹಲು
ಕಿಂಕಿಣಿ ಕಂಕಣ ಗೀತವನಾಡಲು ॥3॥

(–ಇದ್ದಕ್ಕಿದ್ದಂತೆ ಭಯಂಕರ ಸ್ಫೋಟ ಚಣಕಾಲ ರಂಗಭೂಮಿ ಭಯಭೀತವಾದಂತೆ ಗೋಚರ–)

ನಿವೇದಕ :
ಏನಿದೀ ಆಸ್ಫೋಟ !
ಒಡೆವಂತೆ ದಿಕ್ತಟ !!
ಅರ್ಥವಾಯಿತು.. ಅದುವೆ
ಸುರಾಸುರ ಮಥನ ಸಂಜಾತ
ವಿಶ್ವ ಪ್ರಳಯದ ವಿಷಕಾಳಕೂಟ !

(–ವರದಿ ಒಪ್ಪಿಸಲು ಬಂದರು ನಾಲ್ವರು – ಕಾರ್ಮುಗಿಲ ಗರ್ಭದಿಂದುಸಿ ಬಹ ಮಿಂಚಂತೆ!)

ನರ್ತಕಿ 1: ಓ ಶಂಕರಽ
ನರ್ತಕಿ 2: ಶಿವ ಶಂಕರಽ
ನರ್ತಕಿ 3: ಅಭಯಂಕರಽ
ನರ್ತಕಿ 4: ಜಗದೀಶ್ವರಽಽಽಽ

ನಾಲ್ವರೂ : ರದ್ರ ಕಪರ್ದಿಯೆ ಕಾಯೊ
ಭವನೆ ಭರ್ಗನೆ ಭಾಸುರ ತೇಜನೆ
ಧೂರ್ಜಟಿ ತ್ರಿನಯನೆ ಕಾಯೋ
ರತಿಪತಿ ನಾಶನೆ ನೀ ಕಾಯೋ ॥

ನರ್ತಕಿ 1 : ರಕ್ಕಸರೊಕ್ಕಲು ಆ ದೇವತೆಗಳು
ಕಡಲನು ಕಡೆದರು ಸೊದೆಗಾಗಿ
ಕ್ಷೀರ ಸಾಗರವೆ ದಧಿ ಭಾಂಡವೊ ಶಿವ
ಸುಂದರ ಪರ್ವತ ಕಡೆಗೋಲು

ಭೋರ್ಗರೆದೇಳುವ ತರೆಗಳ ಮೇಲೆ
ಆದಿಶೇಷನೇ ಸೆಳೆ ಹಗ್ಗ ॥

ನರ್ತಕಿ 2 : ಹಾಲಲಿ ಉದಿಸಿತು ಹಾಲಾಹಲವು
ವಿಶ್ವ ಪ್ರಳಯದ ಕಾರ್ಮುಗಿಲು
ವಿಶ್ವ ವಿನಾಶಕೆ ನಾಂದಿಯ ಹಾಡಿತು
ವಿಶ್ವೇಶ್ವರನೇ ನೀ ಕಾಯೋ ॥

ಢಮತ್ ಢಮತ್ ಢಮತ್ ಢಮರು
ಗುಡುತ್ ಗುಡುತ್ ಗುಡುಗುತಿರಲು
ಚಡತ್ ಚಡತ್ ಚಡತ್ ಚಂಡೆ

ಶೂಲವೆದ್ದು ಜಾಲದಲ್ಲಿ
ಕಾಲನನ್ನು ತಿವಿಯುತಿರಲು
ಭಾಳನೇತ್ರ ಕೆಂಡವಾಗಿ
ಜ್ವಾಲೆಯನ್ನೆ ಕಾರುತಿರಲು

ಪಿನಾಕ ಪಾಣಿ ಅ ಕಪರ್ದಿ
ಇಳೆಗೆ ಇಳಿದ ಧೂರ್ಜಟಿ
ವ್ಯೋಮಕೇಶ ರಸಾವೇಶ
ರಸೆಗೆ ಬಂದಾಕ್ರೋಶದಿ ॥

ಚಳತ್ ಚಳ್ ಚಳತ್ ತಾಳ !
ಚಲತ್ ಚಲತ್ ಚಲತ್ ಪ್ರಘಾಲ !
ದಿಸೆ ದಿಸೆಗೆ ಬೀಸಿ ತೋಳ
ಧ್ರುತದ ಗತಿಯ ಧ್ರುವಿ ವಿಶಾಲ ॥

ಬಂದ ಬಂದ ಭಾಳನೇತ್ರ
ನಿಂದ ನಿಂದ ಮಲೆಯ ಗಾತ್ರ !

–ಶಿವ ತಾಂಡವ ಚಣಕಾಲ–
(ನರ್ತಿಸುತ್ತಲೇ ಶಿವ ದಿಕ್ಕುದಿಕ್ಕುಗಳಿಗೆ ಕೈ ಚಾಚುತ್ತಾನೆ ವಿಷ ಹಿಡಿಯಲು)

ಅಧು ಕೈಗತವಾಗುವುದಿಲ್ಲ
ಬಲಾತ್ಕಾರದಿಂದ ಅದನ್ನು ಸೆರೆ ಹಿಡಿದು ತನ್ನ
ಅಂಜುಳಿಯಲ್ಲಿರಿಸಿಕೊಳ್ಳುತ್ತಾನೆ. ಮತ್ತೆ ಮೇಲೆತ್ತಿ
ಆಪೋಷಣೆ ತೆಗೆದುಕೊಳ್ಳುತ್ತಾನೆ.
– ಆ ವೇಳೆಯಲ್ಲಿ ಭಯಚಕಿತಳಾದ ಶಿವೆ ಚೀರುವಳು –

ಶಿವೆ : ಅಯ್ಯೋ ಅಯ್ಯೋ ಅಯ್ಯೋ ಪ್ರಳಯ
ನರಕ ದ್ವಾರದಿ ವಿಪ್ಲವ ವಿಲಯ ॥ಪ॥\

ಮಥನೋದ್ಭೂತವು ಹಾಲಾಹಲವು

ವಿಶ್ವ ವಿನಾಶಕ ಘನತಮ ವಿಷವು
ಶಿವನಾಪೋಷಣಗೈದನು ಅಹಹಾ !
ಶಶಿಧರ ವಿಷಧರನಾದನು ಅಹಹಾ ! ॥1॥

(ಬೇರೆ ಲಯಗತಿಯಲ್ಲಿ)

ಓ ಭೂಮಿ ಆಕಾಶ ಓ ವಾಯು ಮಂಡಲವೆ
ನಕ್ಷತ್ರ ನೀಹಾರಿಕಾ ಜ್ಯೋತಿ ವಲಯವೇ
ದಶ ದಿಶೆಯ ದೇವಿಯರೆ ನೀವೋಡಿ ಬನ್ನಿ
ನನ್ನೊಡೆಯ ಜಗದೊಡೆಯ ಶಿವನುಳಿಸೆ ಬನ್ನಿ ॥1॥

ಓ ಸೂರ್ಯಚಂದ್ರರೇ ಅಗ್ನಿ ಜಲದೇವಿಯರೆ
ಇಂದ್ರ ಇಂದ್ರಾಣಿಯರೆ ವರುಣ ವಾರಾಹಿಯರೆ
ಓ ನಿಶೇ ಗಂಭೀರೆ ನಿತ್ಯೆ ತ್ರಿಯಾಮೇ
ಕದ್ದಿಂಗಳನು ಹರಿಸಿ ಬೆಳಗು ಬಾ ತಾಯೇ ॥2॥
– ಸ್ಫೋಟ –

(ಶಿವೆ ಓಡಿ ಬಂದು ಆಪೋಷಣೆಯ ಭಂಗಿಯಲ್ಲಿರುವ ಶಿವನ ಕೊರಲನ್ನು ಬಿಗಿ ಹಿಡಿದಳು)

ಚಣಕಾಲ ಮೌನ !
ರುಂದ್ರ ಮೌನ !!
ಮಹಾ ಮೌನ !!!

(ಮೌನ ಮುಂದು ಶಿವ ಮುಗುಳ್ನಗೆ ಸೂಸುತ್ತ)
ಶಿವ : ಬೆಚ್ಚದಿರು ಶರ್ವಾಣಿ ನೆಚ್ಚನಿಡು ಕಲ್ಯಾಣಿ
ನಿಚ್ಚ ಸಾಕ್ಷಿಯು ನೀನು ಕಿಚ್ಚೇಕೆ ಫಣಿವೇಣಿ
ಲೋಕಸಂಗ್ರಹ ಕಾರ್ಯ ನಮ್ಮಾಧ್ಯ ಕರ್ತವ್ಯ
ಜಗದ ಉದ್ಧಾರವೆ ಜಗದೀಶ ಹೃದಯ ॥ಅನು.ಪ॥

ಆದಿಶಕ್ತಿಯು ನೀನು ಅಂತರಾತ್ಮಳು ನೀನು
ವಿಶ್ವಚೇತನ ನೀನು ವಿಶ್ವಾತ್ಮಳೌ ನೀನು
ಸರ್ವಮಂಗಳೆ ದೇವಿ ಸಕಲಕುಲದಧಿ ದೇವಿ
ಶಾಂತಳಾಗಲು ಬೇಕು ಮಾತೆಯಂತೇ

ಶಿವೆ : ದುಷ್ಟ ಶಿಕ್ಷಕ ಶಿಷ್ಟ ರಕ್ಷಕ
ಇಷ್ಟದಾಯಕ ಶ್ರೇಷ್ಠನೇ
ತ್ರಿಪುರ ದಹನನೆ ತ್ರಿದಶವಂದ್ಯನೆ
ನಿನಗೆ ವಂದನೆ ವಂದನೆ

ನಿವೇದಕ: ಶಿವನಿಂತು ನಂಜುಂಡನಾದ !
ವಿಷಕಂಠ, ಶಿತಿಕಂಠ, ಶ್ರೀಕಂಠ
ನೀಲಕಂಠ ಎಂಬೆಲ್ಲ ಹಲಬಗೆಯ ಹೆಸರಾದನು !
ಹಸೆಮಣೆಯ ಹೊಸ ಹೆಣ್ಣಿನಂತಾದಳಾ ಶಿವೆಯು

ಮಂಜುಮಣಿ ಮುಕುಟಮಣಿ ತಾನಾದಳು !

ಮಂಗಲ:
ದಕ್ಷ ಸುಯಜ್ಞ ವಿನಾಶಕನೀಶನೆ
ಸುಜ್ಞನಾಂಬುಧಿ ಪೋಷಕನೆ
ಪ್ರಜ್ಞಾನಾಂಬಕ ಚುಂಬಕ ಚೇತನೆ
ಜಿಯಹೇ ಜಯ ಶಿವ ಶಂಕರನೇ ॥1॥

ಶ್ರಿದೇವಿ ಭೂದೇವಿ ರತಿದೇವಿಯರ ಕೂಡೆ
ನಿತ್ಯೋತ್ಸವಾಚರಿಪ ಶ್ರೀ ಗೌರಿಯೆ
ಧರೆಗೆ ಧೃತಿ ಮತಿ ಇತ್ತೆ
ಧನ್ಯತೆಗೆ ನೆಲೆಯಾದೆ
ಜಯವು ಜಯ ಜಗದಂಬೆ ಶ್ರೀಮಾತೆಯೇ ॥2॥

ಮಂಗಳವಾಗಲಿ ಮಹಿಮೋನ್ನತರಿಗೆ
ಮಂಗಳವಾಗಲಿ ಈ ಕಲೆಗೆ
ಮಂಗಳವಾಗಲಿ ಶ್ರೀ ಶಿವರಾತ್ರಿಗೆ
ಮಂಗಳವಾಗಲಿ ಸರ್ವರಿಗೆ ॥3॥

ಭದ್ರಂ ಶುಭಂ ಮಂಗಲಂ

## ನಾಟ್ಯ ಸರಸ್ವತಿ

**(ನೃತ್ಯ ರೂಪಕ)**

ರಚನೆ : ಡಾ॥ ಸಾ.ಶಿ.ಮರುಳಯ್ಯ

ಪಾತ್ರಗಳು
ಶಾಂತಲಾದೇವಿ
ವಿಷ್ಣುವರ್ಧನ
ನಾಟ್ಯಾಚಾರ್ಯ
ಮದನಿಕೆಯರು ಮತ್ತು ಮೇಳ

ನಾಟ್ಯಾಚಾರ್ಯ : (ಗಂಭೀರ ವಾಣಿಯಲ್ಲಿ)

ಯಂ ಶೈವಾಹ ಸಮುಪಾಸತೇ ಶಿವ ಇತಿ ಬ್ರಹ್ಮೇತಿ ವೇದಾಂತನೋ
ಬೌದ್ಧಾ ಬುದ್ಧ ಇತಿ ಪ್ರಮಾಣ ಪಟವಃ ಕರ್ತೇತಿ ನೈಯಾಯಿಕಾಃ
ಅರ್ಹಶ್ವೇತಿ ಹ ಜೈನ ಶಾಸನಮತಿಃ ಕರ್ಮೇತಿ ಮೀಮಾಂಸಕಾಃ
ನೋ ಯಂ ವೋ ವಿದಧಾತು ವಾಂಛಿತ ಫಲಂ ಶೀ ಕೇಶವೇಶಸ್ಸದಾ ॥

(ಗೆಜ್ಜೆಯುಲಿಡೊನೆ ನಾಟ್ಯದ ನೆನಪು )

ಶ್ರೀ ಚೆನ್ನಕೇಶವಾ ।

ಶ್ರೀ ಚೆನ್ನಕೇಶವಾ ಸಕಲ ಕಳಾರ್ಣವ
ವಿಮಲ ಚರಣತಲ ಸನ್ನುತ ವಿಭವ ॥
ಶ್ರೀ ಚೆನ್ನಕೇಶವಾ ॥

ಶಂಖ ಚಕ್ರಧರ ಶಾಲಿನಿ ಶಾರ್ಙ್ಗವ
ದೀರ್ಘಾಲಿಂಗನ ಪುಣ್ಯ ಪ್ರಭಾವ
ಕೋಟಿ ಸೂರ್ಯ ಪ್ರಭಾಮಯ ಮಂಡಲ
ವರದ ಹಸ್ತಿ ಶ್ರೀ ಕರುನಾ ಪ್ರಾಂಜಲ ।
ಶ್ರೀ ಚೆನ್ನಕೇಶವಾ ॥

ಅಣುರೇಣು ಋಣಕಾಷ್ಠದಾಂತರ್ಯ ಸದನ
ಮುಗ್ಧ ಮನೋಹರ ಸೌಂದರ್ಯ ವದನ
ವಿಶ್ವ ಮೋಹನ ಸಕಲ ಕಾರಣ
ತ್ರಿಜಗದ್ವಂದಿತ ಪಾವನ ಚರಣ
ಶ್ರೀ ಚೆನ್ನಕೇಶವಾ ॥

ವಿಷ್ಣು : ಧನ್ಯೆ ಶಾಂತಲೆ ನೀನು ಧನ್ಯೆ, ನಾಟ್ಯ ಸರಸ್ವತಿಯೆನಿಸಿದ ನಿನ್ನನ್ನು ಪತ್ನಿಯನ್ನಾಗಿ ಪಡೆದ ನಾನೂ ಧನ್ಯ, ಓಹ್, ಜಗನ್ನಾಟಕ ಸೂತ್ರಧಾರಿಯಾದ ಶ್ರೀ ಚೆನ್ನಕೇಶವನ ದಿವ್ಯ ಸಾನ್ನಿಧ್ಯದಲ್ಲಿ ನನ್ನ ಶಾಂತಲೆಯ ಪೂಜಾನೃತ್ಯ, ಅಲ್ಲ ಅದು ಪೂಜಾನೃತ್ಯವಲ್ಲ – ನೃತ್ಯ ಪೂಜೆ.. ಅಬ್ಬ ! ಎಂತಹ ಮನಮೋಹಕ ದೃಶ್ಯವಿದು.. ಗರ್ಭಗುಡಿಯ ಮುಂಭಾಗದ ಈ ನರ್ತನದ ನವರಂಗಕ್ಕೆ ರಂಗು ತಂದಿದೆ ಈ ಸರ್ಣಕಾಂತಿ ! ಇದೆಲ್ಲಿಯದು ಈ ಚೆಲುವು.. ಸಪ್ತವರ್ಣ ಸುಶೋಭಿತವಾದ ಕಾಮನಬಿಲ್ಲಿನಂತೆ ಕಮನೀಯವಾಗಿದೆ. ಅಲ್ಲಿನ ವರ್ಣ ವೈಖರಿ. ಈ ಚೆಲುವ  ನಾರಯಣನನ ದೇಗುಲವಾದರೊ ಸ್ವರ್ಣ ಲೋಕದ ವರ್ಣಸೌಧದಂತಿದೆ.. ಶುಭ್ರ ನೀಲಾಕಾಶದಲ್ಲಿ ತೇಲುವ ಉಣ್ಣೆ ಮೋಡ ಬೆಣ್ಣೆ ಮೋಡಗಳ ಉಡೆ ಉಟ್ಟಿದೆ.. ಷೋಡಶ ಕಳಾಪೂರ್ಣವಾದ ಪರಿಪೂರ್ಣ ಚಂದ್ರಮನನ್ನು ಮುಡಿಹೂವು ಮುಡಿದಿದೆ.. ಚಿಕ್ಕೆಗಳ ಕೂಡೆ ಚಕ್ಕಂದವಾಡಿ, ಆ ನೀಹಾರಿಕೆಯೊಡನೆ ಬೇಹಾರ ಗೈಯುವಂತಿದೆ.. ಓಹ್ ! ಈ ಶಿಲ್ಪಕಲಾ ಸೌಂದರ್ಯ ಈ ನಾಟ್ಯ ವೈಖರಿ.. ಈ ಸಂಗೀತ ಸುಧೆ.. ಈ ದೇವ ದೇವನ ದಿವ್ಯ ಸಾನ್ನಿಧ್ಯ, ಇವೆಲ್ಲವೂ ಅನೂಹ್ಯ ಅರ್ವಚನೀಯ, ಇಂದು ನಾನು ಧನ್ಯ.. ಈ ವಿಶ್ವ ಜಗತ್ತೂ ಇಂದಾಯ್ತು ಧನ್ಯ.

ಮೇಳ ವಿಜಯೀಭವ.. ವಿಜಯೀಭವ
ಯಾದವ ಕುಲಮಣಿ, ಸಮ್ಯಕ್ತ ದ್ಯುಮಣಿ
ದ್ವಾರಾವತಿಪುರ । ಮಹಮಂಡಲೇಶ್ವರ
ನಾಟ್ಯ ಸರಸ್ವತಿ ಶಾಂತಲೆ ಈಶಗೆ
ವಿಷ್ಣುವರ್ಧನಗೆ । ಶ್ರೀಹರಿ ರೂಪಗೆ ॥
ವಿಜಯಿಭವ – ವಿಜಯೀ ಭವ॥

(ನೃತ್ಯಗತಿ)

(ಓಡಾಡುವವರ ಅಥವಾ ಹಿಂದೆ ಸರಿಯುವವರ ಗೆಜ್ಜೆಯುಲಿ – ಹಿನ್ನೆಲೆಯಲ್ಲಿ ಕೇಳಿ ಬರುತ್ತಿರುತ್ರದೆ)
ನಾಟ್ಯಾ: ಸ್ವಾಗತ.. ಸುಸ್ವಾಗತ..

ಪೃಥ್ವೀಪತಿಗೆ ಹಾರ್ದಿಕ ಸ್ವಾಗತ –

ವಿಷ್ಣು : ಧನ್ಯೋಸ್ಮಿ ಆಚಾರ್ಯ, ಧನ್ಯೋಸ್ಮಿ ..। ಶಾಂತಲಾ

ಶಾಂತಲೆ : ಓಹ್ ! ನನ್ನ ಸ್ವಾಮಿ, ಹೊಯ್ಸಳೇಶ್ವರ ಮಹಾಪ್ರಭು –

(ಓಡಿ ಬರುವ ನರ್ತಕಿಯ ಕಾಲಗೆಜ್ಜೆಯ ಸಪ್ಪಳ)
ನನ್ನ ನರ್ತನ ಮೆಚ್ಚಾಯಿತೆ ನನ್ನ ಸ್ವಾಮಿಗೆ ?
ವಿಷ್ಣು : ದೇವಕನ್ಯೆಯ ನರ್ತನ ಮಾನವನಿಗೆ ಮೆಚ್ಚಾಗದಿರುತ್ತದೆಯೇ?
ಶಾಂತೀ, ಆ ದೇವಾಧಿ ದೇವನಾದ ಚೆಲುವ ನಾರಾಯಣನಿಗೇ ಮೆಚ್ಚಾಗಿದೆ ಎಂದ ಮೇಲೆ ಈ ಸಾಮಾನ್ಯ ಮಾನವನ ಮನಸ್ಸಿಗೆ ಮೆಚ್ಚಾಗದಿರುತ್ತದೆಯೆ? ಇರಲಿ ಶಾಂತಲೆ ಯಾರಿವರು – ಇದುವರೆಗೂ ನಿನ್ನೊಡನೆ ನರ್ತಿಸಿದ ಈ ಚೆಲುವ ಕನ್ಯೆಯರು ಯಾರು?

ಶಾಂತಲೆ : ದೇವಕನ್ಯೆಯ ನರ್ತನ ಮಾನವನಿಗೆ ಮೆಚ್ಚಾಗದಿರುತ್ತದೆಯೇ?
ಶಾಂತೀ, ಆ ದೇವಾಧಿ ದೇವನಾದ ಚೆಲುವ ನಾರಯಣನಿಗೇ ಮೆಚ್ಚಾಗಿದೆ ಎಂದ ಮೇಲೆ ಈ ಸಾಮಾನ್ಯ ಮಾನವನ ಮನಸ್ಸಿಗೆ ಮೆಚ್ಚಾಗದಿರುತ್ತದೆಯೆ? ಇರಲಿ ಶಾಂತಲೆ ಯಾರಿವರು ಇದುವರೆಗೂ ನಿನ್ನೊಡನೆ ನರ್ತಿಇಸಿದ ಈ ಚೆಲುವ ಕನ್ಯೆಯುರು ಯಾರು?

ಶಾಂತಲೆ : ಇವರು.. ಇವರು ನನ್ನ ನಾಟ್ಯಾಚಾರ್ಯರ ಮಾನಸ ಪುತ್ರಿಯರು
ನಾಟ್ಯಾ : ಶಾಂತಃ ಪಾಪಂ ! ಶಾಂತಂ ಪಾಪಂ ! .. ಮಹಾಪ್ರಭು ಇವರು ಬೇರಾರು ಅಲ್ಲ.. ಸಾಕ್ಷಾತ್ ಶಾಂತಲಾ ದೇವಿಯವರೇ ! ಅವರ ವ್ಯಕ್ತಿತ್ವದ ಕಲಾಭಿಜ್ಞತೆಯ ಪ್ರತಿರೂಪಗಳು ! ಅವರ ನಾಟ್ಯಕಲಾನೈಪುಣ್ಯಕೊಡ್ಡಿದ್ದ ವಿವಿಧ ಭಂಗಿಗಳ ಮಹಾ ಪ್ರತಿಮೆಗಳು, ಪ್ರಭು ಹೆಚ್ಚು ಮಾತಿನಿಂದೇನು .. ಇವರೆಲ್ಲ ತಾಯಿ ಶಾಂತಲಾದೇವಿಯವರ ನೃತ್ಯ ಭಂಗಿಯ ವಿವಿಧ ವಿನ್ಯಾಸ ಪ್ರತೀಕಗಳು. ಚಣಕಾಲದಲ್ಲಿ ಮಿಂಚಿ ಮಾಯವಾಗುತ್ತಿದ್ದ ಅವರ ಅದ್ಭುತ ನಾಟ್ಯಭಂಗಿಗಳನ್ನು ನಾನಾ ಮನಸ್ಸಿನಲ್ಲೇ ರೂಪಿಸಿಕೊಂಡು ಅಮರ ಶಿಲ್ಪಿ ಜಕ್ಕಣಾರ್ಯರಿಗೆ ಕೊಟ್ಟೆ, ಅವರು ಅವನ್ನೇ ಶಿಲೆಯಲ್ಲಿ ನೆಲೆಗೊಳಿಸಿದ್ದಾರೆ.

ಶಾಂತಲೆ : ಪ್ರಭು ದಿವ್ಯ ದಾರ್ಶನಿಕರಾದ ಈ ನನ್ನ ಗುರುವರ್ಯರ ಒಂದು ಕ್ಷಣದ ಸ್ಮಾರಕಗಳಾಗಿ ಮದನಿಕಾ ವಿಗ್ರಹಗಳೆನಿಸಿ ನಿಂತಿದ್ದಾರೆ. ಈ ಚೆಲುವ ನಾರಯಣನ ದೇಗುಲದ ಹೊರವಲಯದ ಸುತ್ತಲೂ ಅಲ್ಲಲ್ಲಿ ಬೋದಿಗೆಗಳಡಿಯಲ್ಲಿ ಸೌಂದರ್ಯದ ಸಿರಿಗನ್ನಡಿಗಳಾಗಿ ನಿಲ್ಲುತ್ತಾರೆ. ಇವರು.. ಅಲ್ಲವೇ ಗುರುದೇವ?
ನಾಟ್ಯಾ.. ಹೌದು ತಾಯಿ... ಮಹಾಪ್ರಭು, ಮಹಾರಾಣಿಯವರು ಹೆಸರಿಟ್ಟಂತೆ ಇವರು ಮದನಿಕೆಯರಲ್ಲ. ಶ್ರೀ ಚೆನ್ನಕೇಶವನ ವಾರಾಂಗನೆಯರು, ಮೇಳದ ಕೆಳದಿಯರು, ಇವಳು ಮುಕುರ ಮುಗ್ಧ (ಝಣ ಝಣ ಗೆಜ್ಜೆ ಸದ್ದು)

(ಪ್ರತಿಯೊಬ್ಬಳನ್ನು ಪರಿಚಯಿಸಿದಾಗಲೂ ಬಗೆಬಗೆಯ ನರ್ತನ)
ಇವಳು ಶುಖಭಾಷಿಣಿ, ಇವಳು ನಾಟ್ಯ ಮಯೂರಿ..
ಇವಳು ಕಿರಾತ ವನಿತೆ.. ಇವಳು ಮಂಜು ಘೋಷೆ..
ಇವಳು ಗಜ ಗಂಭೀರೆ.. ಇವಳು ಮುಕ್ತಕೇಶಿ.
ಇವಳು ರಕ್ತನೇತ್ರೆ. ಇವಳು..

ವಿಷ್ಣು : ನಾಟ್ಯ ಸರಸ್ವತಿ (ನಗು) ನಿಮ ಶಿಷ್ಯೆ, ನನ್ನ ಶಾಂತಲೆ !.. ಚೆನ್ನಾಗಿದೆ.. ತುಂಬಾ ಚೆನ್ನಾಗಿದೆ! ಶಾಂತಲಾ

ಶಾಂತ : ಸ್ವಾಮಿ..

ವಿಷ್ಣು : ಏನಿದೆಲ್ಲಾ? ಕಲ್ಲಿನಲ್ಲೇ ಸಂಗೀತ, ಸಾಹಿತ್ಯ, ನೃತ್ಯ ಒದಲಾದ ಎಲ್ಲ ಕಲೆಗಳನ್ನೂ ಸಾಕಾರಗೊಳಿಸುವ ಸಾಹಸ !

ಶಾಂತಲೆ : ಮಹಾಪ್ರಭು, ಇದು ನನ್ನ ಬದುಕಿನ ಬಹುದಿನದ ಕನಸು ~ ಈ ವೇಲಾಪುರಿಯಲ್ಲಿ ವಿಜಯನಾರಾಯಣ, ಚೆಲುವ ನಾರಾಯಣ ದೇಗುಲ ದ್ವಯಗಳು. ದೋರಸಮುದ್ರದಲ್ಲಿ ಶಾಂತಲೇಶ್ವರ, ಹೊಯ್ಸಳೇಶ್ವರ ಅವಳಿ ದೇಗುಲಗಳ ನಿರ್ಮಾಣ, ತದನಂತರ ಕೈದಾಳ, ಗದ್ದವಳ್ಳಿ ಶ್ರವಣಬೆಳಗೊಳ ಮೊದಲಾದೆಡೆಗಳಲ್ಲಿ ಹೊಯ್ಸಲ ವಾಸ್ತುಶಿಲ್ಪದ ವಿಜಯ ಧ್ವಜ ಹಾರಾಡಬೇಕು ! ನಮ್ಮ ದೇವಾಲಯಗಳು ಅಪೂರ್ವವಾದ ಅಮರ ಕಲೆಯ ವಿದ್ಯಾಲಯಗಳಾಗಬೇಕು ! ಶಿಲ್ಪದಲ್ಲಿ ನೆಲೆಗೊಳಿಸಿದ ನೃತ್ಯ ಕಲೆಯ ಒಂದು ಸಾಕಾರ ವಿಶ್ವವಿದ್ಯಾಲಯವಾಗಿ ಪರಿಣಾಮಪಡೆಯಬೇಕು ಈ ಕನ್ನಡನಾಡು, ಈ ಹೊಯ್ಸಳ ಸಾಮ್ರಾಜ್ಯ.

ವಿಷ್ಣು : ನಿನ್ನಾಸೆ ಹೆಣ್ಣಾಗಲಿ ಶಾಂತಿ.. ಆಚಾರ್ಯ ನಮ್ಮದೊಂದು ಕೋರಿಕೆ..

ನಾಟ್ಯಾ: ಅಪ್ಪಣೆ ಆಗಲಿ ಮಹಾಪ್ರಭು..

ವಿಷ್ಣು : ಆಚಾರ್ಯ, ವೈವಿಧ್ಯಮಯವೂ, ವೈಶಿಷ್ಟ್ಯ ಪೂರ್ಣವೂ ಆದ ಭಾರತೀಯ ನೃತ್ಯವನ್ನು ಪ್ರಯೋದೊಂದಿಗೆ ಪರಿಚಯಿಸಿ ಕೊಡುವಿರಾ ? ಹೇಗೂ ನಿಮ್ಮ ಮಾನಸಪುತ್ರಿಯರಿದ್ದಾರೆ ಈ ಮದನಿಕೆಯರು.. ನಿಮ್ಮ ಪಟ್ಟ ಶಿಷ್ಯೆ ಇದ್ದಾಳೆ. ನನ್ನ ಭಾಗದ ಈ ನಾಟ್ಯ ಸರಸ್ವತಿ..! ಶಾಂತಿ, ಸಮ್ಮತವೆ ?

ಶಾಂತಲೆ : ಪ್ರಭುಚಿತ್ತ ! ಶ್ರೀ ಗುರುವಿನ ಕರುಣೆ ಅಗತ್ಯವಾಗಿ ಆಗಲಿ.

ನಾಟ್ಯಾ: ಮಹಾಪ್ರಭು, ಶ್ರೀ ವಿಜಯ ನಾರಾಯಣನ ಈ ಗರ್ಭಗುಡಿಯ ಮುಂಭಾಗದ ನವರಂಗದಲ್ಲಿ ಮಹಾರಾಣಿಯವರ ನಿತ್ಯನರ್ತನ ನಡೆಯುತ್ತಿದೆಯಷ್ಟೆ ಮಹಾಮಂಗಳಾರತಿಯ ವೇಳೆಯಲ್ಲಿ ? ಇದರ ಉದ್ದೇಶವೇನು ? ನೃತ್ಯಕಲೆ ಔಪಾಸನೆಯ ಸಾಧನ, ಭಾರತೀಯರಲ್ಲಿ ಕಲೆ ಒಂದು ಮನೋರಂಜನೆಯ ಮಾಧ್ಯಮವಲ್ಲ. ಅದು ದೈವಾರಾಧನೆಯ ಪ್ರತೀಕ, ಮೋಕ್ಷ ಸಾಧನೆಗಾಗಿ ಸಮದ ಸುಂದರ ಸೋಪಾನ, ಧರ್ಮ ಮತ್ತು ದರ್ಶನಗಳು ನಮ್ಮ ಭಾರತೀಯ ನೃತ್ಯಕಲೆಯಲ್ಲಿ ಹಾಸುಹೊಕ್ಕಾಗಿದೆ. ನಟರಾಜ ಈ ನಾಟ್ಯವೇದ ಅಧಿದೇವತೆ. ದೇಹ ಮತ್ತು ಆತ್ಮಗಳ ಸಮ್ಮೇಳನದ ಸಂಕೇತವಾಗಿದ್ದಾನೆ ಆತ. ಅದೇರೀತಿ ಗೋಪಿಯರೇ ಜೀವಾತ್ಮರು. ಶ್ರೀ ಕೃಷ್ಣನೇ ಪರಮಾತ್ಮ. ಇವರಿಬ್ಬರ ಸಮ್ಮಿಲದ ಸಂಕೇತವೇ ರಾಸಲೀಲೆ !

ಶಾಂತಲೆ : ಆಚಾರ್ಯ, ಇದು ಶಿಷ್ಟ ಶಾಸ್ತ್ರೀಯ ನೃತ್ಯಕ್ಕೆ ಮಾತ್ರ ಅನ್ವಯಿಸುತ್ತದೋ ಅಥವಾ..

ನಾಟ್ಯಾ: ಜಾನಪದ ನೃತ್ಯಕ್ಕೂ ಅನ್ವಯಿಸುತ್ತೆ ತಾಯಿ..

ವಿಷ್ಣು : ಆಚಾರ್ಯ ಶಿಷ್ಟ ಶಾಸ್ತ್ರೀಯ ನೃತ್ಯಕ್ಕೂ ಪರಂಪರೆಯ ಪ್ರಖ್ಯಾತ ಜಾನಪದ ನೃತ್ಯಕ್ಕೂ ಇರುವ ವ್ಯತ್ಯಾಸ ?

ನಾಟ್ಯ: ಬಹಳಷ್ಟು ಪ್ರಭು.. ಭರತನಾಟ್ಯ ಕಥಕ್ಕಳಿ, ಕಥಕ್ ಮಣಿಪುರಿ ಇವು ಶಾಸ್ತ್ರೀಯ ನೃತ್ಯಕಲೆಗಳೆಂದು ಪ್ರಸಿದ್ಧವಾಗಿರುವ ನಾಲ್ಕು ಶಿಷ್ಟ ಶೈಲಿಗಳು ಕೊಡಗಿನ ಹುತ್ತರಿ ಮಲೆನಾಡು ಮತ್ತು ಪಶ್ಚಿಮ ಕರಾವಳಿಯ ಯಕ್ಷಗಾನ ಬಯಲುನಾಡಿನ ಸುಗ್ಗಿ ಕುಣಿತ ಮೊದಲಾದ ಮುಕ್ತ ಶೈಲಿಯ ನೃತ್ಯಪ್ರಕಾರಗಳೂ ಜಾನಪದಕ್ಕೆ ಸೇರಿದವುಗಳು.

ಶಾಂತಲೆ: ಮಹಾಪ್ರಭು, ಭಾರತೀಯ ನೃತ್ಯದಲ್ಲಿ ಪ್ರಮುಖವಾಗಿ ಎಡು ವಿಧ. ಒಂದು ತಾಂಡವ ಮತ್ತೊಂದು ಲಾಸ್ಯ. ಇವುಗಳಿಗೊಂದು ಕಥೆಯೂ ಪ್ರಚಲಿತವಾಗಿದೆ. ನಾಟ್ಯಾಧಿದೇವತೆಯಾದ ಶಿವ ತನ್ನ ನೃತ್ಯದ ತತ್ತ್ವಗಳನ್ನು ಪ್ರಚುರಪಡಿಸುವಂತೆ ತನ್ನ ಗಣಧರರರಲ್ಲೊಬ್ಬನಾದ ತಂಡುವಿಗೆ ಆಜ್ಞೆಯಿತ್ತನಂತೆ ಈ ತಂಡು ಪ್ರಕಟಿಸಿದ ನೃತ್ಯ ಪ್ರಕಾರವೆ ತಾಂಡವ ನೃತ್ಯ.

ಅದೇ ರೀತಿ, ಪಾರ್ವತಿ ತ್ನನೌತು ವಿಧಾನವನ್ನು ಶ್ರೀ ಕೃಷ್ಣನ ಮೊಮ್ಮಗನಾದ ಅತಿರುದ್ಧನ ಪತ್ನಿ ಉಷೆಗೆ ಹೇಳಿಕೊಟ್ಟಳಂತೆ, ಅದು ಲಾಸ್ಯವೆಂದಾಯಿತಂತೆ, ಈಗ ಮಹಾಪ್ರಭುಗಳು ವೀಕ್ಷಿಸೋಣವಾಗಲಿ –

ನೃತ್ಯಮೇಳ :
ಲಾಸ್ಯ ತಾಂಡವದಿ ನಾಟ್ಯ ಮಯೂರಿ
ಭರತಾಗಮ ಸುಕ್ಷೇತ್ರ ವಿಹಾರಿ ॥

ತಾಳಮೇಳಗಳ ಪ್ರಾಶಸ್ತ್ರಯದಲಿ
ಅಂಗಿತಾಭಿನಯ ಭಾವ ಭಂಗಿಯಲಿ
ಹಸ್ತಮುದ್ರೆಗಳ ವಿನ್ಯಸ್ತತೆಯಲಿ
ನೃತ್ಯ ವಿಲಾಸದ ವೈಭವ ಮೆರೆಯಲಿ ॥

ಲಾಸ್ಯ ತಾಂಡವದ ನಾಟ್ಯಮಯೂರಿ
ಭರತಾಗಮ ಸುಕ್ಷೇತ್ರ ವಿಹಾರಿ ॥

(ಹಿನ್ನೆಲೆಯಲ್ಲಿ ಗೆಜ್ಜೆಯುಲಿ ತಾಳಮೇಳಗಳು ಆದೇ ಲಯದಲ್ಲಿ. ಆದರೆ ಪ್ರಕಾಶದಲ್ಲಿ ಈ ಕೆಳಗಿನ ಗದ್ಯಭಾಗವನ್ನು ಒಂದೇ ಸಮನೆ ಸ್ಪುಟವಾಗಿ ಗಟ್ಟಿಯಾಗಿ ಓದಬೇಕು. ಅದು ಮುಗಿದೊಡನೆಯೇ ಸಣ್ಣ ಮೇಳ, ಚಂಡೆ ನಗಾರಿ,

ವಿಷ್ಣು : ಭಲೇ ! ಭೇಷ್ !! ಆಚಾರ್ಯ ಮಹದಾನಂದವಾಯಿತು. ನಿಮ್ಮ ಪ್ರೇರಣೆಯಿಂದ ಶಾಂತಲೆಯ ಅಪೇಕ್ಷೆಯಂತೆ ಅಮರಶಿಲ್ಪಿ ಜಕ್ಕಣರು ಈ ಶಿಲಾಬಾಲಿಕೆಯರನು ಕಡೆದು ನಿಲ್ಲಿಸಿದ್ದಾರೆ. ಹೌದು, ಇವರು ಶಿಲಾಬಾಲಿಕೆಯರಲ್ಲ, ಕಲಾಬಾಲಿಕೆಯರು. ನಶ್ವರನ್ನು ಕೆಲ ಶಾಶ್ವತಗೊಇಸುತ್ತದೆ ಎಂಬುದಕ್ಕೆ ನಿಮ್ಮಿಬ್ಬರ ಪ್ರಯತ್ನದ ಫಲವೇ ಸಾಕ್ಷಿ.. ನಾವಿನ್ನು ಬರಬಹುದೇ!

ನಾಟ್ಯ : ನಾಡಾಳುವ ಪ್ರಭುಗಳಿಗೆ ಸೇವಕನ ಅಪ್ಪಣೆ ಅಗತ್ಯವೇ ಮಹಾಪ್ರಭು.

ವಿಷ್ಣು : ಹಾಗಲ್ಲ ಆಚಾರ್ಯ, ಈ ಕಲಾ ಸಾಮ್ರಾಜ್ಯದಲ್ಲಿ ನೀವು ಸಾಮ್ರಾಟರು, ನಾನು ಕೇವಲ ಸಾಮಾನ್ಯ ಪ್ರಜೆ, ಅಲ್ಲದೆ ಶಾಂತಿ,

ಶಾಂತಲೆ : ತುಂಬಾ ಅರ್ಥಪೂರ್ಣ ನುಡಿ ನನ್ನ ಸ್ವಾಮಿಯದು, ಗುರುಗಲೇ ನಿಮ್ಮ ಶಿಷ್ಯೆ ಶಾಂತಲೆ ಅಪ್ಪಣೆ ಬೇಡುತ್ತಾಳೆ ಸಮ್ಮತವೆ ?

ನಾಟ್ಯ: ಅದು ಸಲ್ಲ ತಾಯಿ, ಸಾಕ್ಷಾತ್ ಶಿವ–ಶಿವೆಯರಂತೆ, ಲಕ್ಷಮೀ ನಾರಾಯಣರಂತೆ ಇರುವ. ತಮ್ಮ ದರ್ಶನವೇ ಒಂದು ಭಾಗ್ಯ, ತಮ್ಮನ್ನು ಪಡೆದ ಈ ಕನ್ನಡ ನಾಡು ಧನ್ಯ, ನಾವೆಲ್ಲರೂ ಧನ್ಯರು ದಯಮಾಡಿಸೋಣವಾಗಲಿ.

(ಬೀಳ್ಕೊಡುವರು. ಶಾಂತಲೆ ನರ್ತನ ವಿನ್ಯಾಸದಲ್ಲಿ ವಿಷ್ಣುವಿನೊಡನೆ ನಿರ್ಗಮಿಸುವಳು )

ಎಲ್ಲ ಅಭಿನೇತೃಗಳು ರಂಗದ ಮೇಲೆ ಬರುವರು. ಆಗ.

ಸತ್ಯಂ ಶಿವಂ ಸುಂದರಂ

ಜಯ ಜಯ ನಾಟ್ಯಾಂಜಲಿ
ಜಯ ಜಯ ಗೀತಾಂಜಲಿ ॥

ಶಾಂತಲೆಯ ಶಿಲ್ಪಕಲೆ ಕಲೆ ಕಾವೇರಿ ಹೊರೆಯಾಗಿ
ದಾಸರುಸಿರೇ ಗಾನ ಗಂಗೆಯಾಗಿ
ವಿಜಯನಗರದ ಶುಭದ ವೈಜಯಂತಿಯು ಮೆರೆದ

ಕರುನಾಡ ನುಡಿಹಾಲು ಭದ್ರೆಯಾಗಿ ॥

ಚೆಲುವಿರಲಿ, ಗೆಲುವಿರಲಿ ಚೆನ್ನಿಗನ ಬೀಡಿನಲಿ
ವೀರ ನಾರಾಯಣನ ನಾಡಿನಲ್ಲಿ
ಗೊಮಮಟನ ಬೆಳುಗೊಳದಿ ಬಸವ ಕಲ್ಯಾಣದಲಿ
ನನ್ನ ಈ ಕರುನಾಡ ತವರಿನಲ್ಲಿ ॥

ಜಯತು ಕನ್ನಡ ನಾಡು ಜಯತು ಮಂಗಲ ಬೀಡು
ಜಯಜಯತು ಜಯ ರಾಜರಾಜೇಶ್ವರೀ
ಜಯವು ಕನ್ನಡ ನುಡಿಗೆ ಜಯವು ಕನ್ನಡ ಜನತೆ
ಜಯ ನಿನಗೆ ಕರುನಾಡ ಬನಂಕರಿ ॥

ಭಕ್ತಿ ಭಾವುಕಿ
ಅಥವಾ
ಕೋಳೂರ ಕೊಡಗೂಸು

[ನೃತ್ಯ ರೂಪಕ]

ರಚನೆ
ಡಾ. ಸಾ.ಶಿ.ಮರುಳಯ್ಯ

ಪಾತ್ರವಗ್
ಚೆನ್ನಲೆ
ಸೋಮಲೆ
ಸಂಗುಯ್
ವಿಭೂತಿ
ಶಿವ
ಶಿವೆ
ಕಲ್ಲವ್ವ
ಸಿದ್ದಮ್ಮ
ಯಾತ್ರಿಕರು
ನರ್ತಕಿಯರು

ಪ್ರಸ್ತಾವನೆ

ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡೆ, ಮುನಿಯಬೇಡ, ಅನ್ಯರಿಗೆ ಅಸಹ್ಯ ಪಡಬೇಡ, ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ–ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ ಇದೇ ನಮ್ಮ ಕುಡಲ ಸಂಗಮದೇವನ ಪರಿ ॥

– ಅಣ್ಣನ ಸಪ್ತ ಸೂತ್ರಗಳಲ್ಲಿ 'ಸುಳ್ಳು ಹೇಳದಿರುವುದು' ಎಂಬುದೂ ಒಂದು ತತ್ವ.ಕಳವು ಮಾಡುವುದು ಹೇಗೆ ಪಾಪವೋ ಸುಳ್ಳು ಹೇಳುವುದೂ ಒಂದು ಮಹಾಪಾಪ ! ಸುಳ್ಳು ಹೇಳುವುದೂ ಒಂದೇ, ಕೊಲೆ ಮಾಡುವುದು ಒಂದೆ ! ಸಂಸಾರಿಗೆ ಸುಳ್ಳ ಸಲ್ಲ, ಅತಿ ಸುಳ್ಳು ಗತಿಗೇಡು, ಅದು ಸಂಸಾರ ಯೊಗ ಅಲ್ಲ; ಪರಿಶಿವನಿಗೆ ಪ್ರಿಯವೂ ಅಲ್ಲ. ಶರಣರಂತು ಮರೆತಾದರು ಸುಳ್ಳಾಡುವರಲ್ಲ. ಇದಕ್ಕೆ ನಿದರ್ಶನವೊ ಎನ್ನುವಂತೆ ಒಂದು ಸತ್ಯಕತೆ ಇದೆ. ಕಲಬುರ್ಗಿಯ ಬಳಿಯಿರುವ ಕೋಳುರಲ್ಲಿ ಸಂಗಯ್ಯ ಎಂಬ ಒರ್ವ ಶಿವಭಕ್ತ. ಸೋಮಲೆ ಅವನ ಪತ್ನಿ. ಕೋಳೂರ ಕ್ಲಲಿನಾಥನಿಗೆ ಬಳ್ಳ ಹಾಲು ಕುಡಿಸಿ ಆನಂದ ಹರಿಸಿ ಕೋಳೂರ ಕೊಡಗೂಸಿನ ಕಥೆ ಒಂದು ಪುಣ್ಯ ಕಥೆ. ಈ ಕಥಾವಲೋಕನದಿಂದ ಲೊಕಪಾವನವಾಗಲಿ. 1ಹುಸಿಯ ನುಡಯಲು ಬೇಡ' ಎಂಬ ಅಣ್ಣನ ನುಡಿ ಸಾರ್ಥಕ್ಯ ಪಡೆಯಲಿ.

ದೃಶ್ಯ – 1 ಉದ್ಯಾನ

[ಅದು ಅರುಣೋದಯದ ಪ್ರಭಾವ ಸಮಯ. ತೆರೆ ಸರಿದಾಗ ಕಾಣಿಸುವುದು ಕೋಳೂರಿನ ಬಹಿರುದ್ಯಾನದ ರಮ್ಯನೋಟ. ಹೂವುಗಳು ಅರಳಿದಂತೆ ಚೆನ್ನಲೆ ಮತ್ತು ಅವಳ ಗೆಳತಿಯರು ಮೆಲ್ಲನೆ ಮೇಳೇಳುತ್ತಾರೆ. ಹಾಡಿನ ಹಿನ್ನೆಲೆಯಲ್ಲಿ ಮೊದಲು ಅವರ ಅಬಿನಯ, ಅನಂತರ ಅವರ ನೃತ್ಯ ವಿಲಾಸ. ವಿದ್ಯುದ್ದೀಪಗಳ ಚಮತ್ಕಾರದಲ್ಲಿ ಸಕಲವೂ ವರ್ಣರಂಜಿತ; ನಯನ ಮನೋಹರ, ಹಾಕಿರುವ ಸೆಟಿಂಗ್ಸ್ ಕೂಡ ಆಕರ್ಷಣೀಯ ಔಚಿತ್ಯಪೂರ್ಣ]

ಹಿನ್ನೆಲೆ :

ಉದಯ ಕಾಲದೊಳೆದ್ದು ನದಿಯ ಸ್ನಾನವ ಮಾಡಿ
ಮುದದಿ ನಂದನದಲ್ಲಿ ಚೆಂದದಲಿ ಹೂವಾಯ್ದು
ನಾಸಿಕವು ತಾ ಮುಸಿ ಮಿಸಲೀಸುವ ಮುನ್ನ
ಮನವು ಮೋಹಿಪ ಮುನ್ನ, ಮೈಲಿಗೆಯ ಮಡದ ಮುನ್ನ
ರವಿಯ ಕಿರಣಗಳಿಂದ ಸ್ಪಶಿಸುವ ಮುನ್ನ
ಸುಳಿಸುಳಿವ ಎಳೆಗಾಳಿ ನಗಿಸಿ ಕಚಗುಳಿಯನಿಡೆ
ದುಂಬಿ ಬಮಬಲು ಬಂದು ಬಂಡುಮಡು ಎಂಜಲಿಸೆ
ಯಾವ ಅಪಚಾರಕ್ಕು ಅಸ್ಪದವ ನೀಯದಲೆ
ಬಿರಿ ಮುಗುಳ, ಸಿರಿಮುಗುಳ, ಮಂಗಳದ ಮುಗುಳುಗಳ
ಬಗೆಬಗೆಯ ಹೂವುಗಳ ಮಡಿ ಕರಂಡಕದಲ್ಲಿ
ಪಟ್ಟಿರಿಸಿ ಜತನದಲಿ ಕೊಂಡೊಯ್ದು ದಂಡೆಯನು
ಮಾಡಿ ಶಿವಗರ್ಪಿಸುವೆ ಕೋಳುರ ಕಲ್ಲಿನಾಥನಿಗೆ

[ತಬಲ ಅಥವ ಮೃದಂಗಕ್ಕೆ ತನಿ: ಅದರೊಡನೆ ಮಕ್ಕಳ ನರ್ತನ ಚಣಕಲ–ಇಡೀ ರಂಗ ಮಂಚವೆ ನರ್ತಿಸಿದಂತೆ]

ಭಕ್ತಿ ಭಾವುಕಿ ಅಥವ ಕೋಳರು ಕೊಡಗೂಸು
ಬಲಮುರಿ : ಚಂದ್ರನ ಮಂಚನ ಚಿತ್ತ ಚಕೋರಿಯೆ
ನಕ್ಷತ್ರದ ನಿಡು ನೀಹಾರಿಕೆಗಳೆ
ದ್ಯುಃ ಲೋಕದ ದೆದೀಪ್ಯದ ಕುಡಿಗಳೆ
ದಶ ಸಿಕ್ಕಿನಲಿಹ ದಿಗ್ ದೇವತೆಗಳೆ

ವನ್ನಿ ಬನ್ನಿ ಬನ್ನಿ ಕೋಳೂರಿಗೆ ಬನ್ನಿ
ಭೂ–ಕೈಲಾಸಕೆ ಬನ್ನಿ
ಕ್ಲಲಯ್ಯಗೆ ಶರಣೆನ್ನಿ

ಎಡಮುರಿ : ತೊರೆಗಳೆ ಝುರಿಗಳೆ ಬೆಳ್ಳಿಯ ಗೆರೆಗಳೆ
ಗಿರಿಬನದಲಿ ಸಂಚರಿಸುವ ಸಿರಿಗಲೆ
ಸಸ್ಯಶ್ಯಾಮಲ ಸ್ವರ್ಣಲಾಂಚಲದ
ಮೃದುಲ ದುಕೂಲದ ವನದೇವತೆಯರೆ
ಬನ್ನಿ ಬನ್ನಿ ಬನ್ನಿ, ಕೋಳೂರಿಗೆ ಬನ್ನಿ
ಭೂ–ಕೈಲಾಸಕೆ ಬನ್ನಿ
ಕಲ್ಲಯ್ಯಗೆ ಸರಣೆನ್ನಿ ॥

ನಡುನೆಲೆ : ಹಸುರಿನ ಶಿಶುಗಳೆ ಕಿಸು ಸೋಜಿಗಗಳೆ
ಬಹಿರುದ್ಯಾನದ ತುಹಿನ ಕಣಂಗಳೆ
ಮಿನುಗುವ ಮಣಿಗಳೆ ಬೆಳಕಿನ ಕಿಡಿಗಳೆ
ಬಣ್ಣಬಣ್ಣದ ಹೂವಿನ ಜಡೆಗಳೆ

ಬನ್ನಿ ಬನ್ನಿ ಬನ್ನಿ ಕೋಳೂರಿಗೆ ಬನ್ನಿ
ಭೂಕೈಲಾಸಕೆ ಬನ್ನಿ
ಕಲ್ಲಯ್ಯಗೆ ಶರಣೆನ್ನಿ ॥

[ರಂಗಭೂಮಿ ನಿಧಾನವಾಗಿ ಕಪ್ಪಗಾಗುವುದು ಚೆನ್ನಲೆಯೊಬ್ಬಳನ್ನುಳಿದು ಬೇರೆಲ್ಲರೂ ನರ್ತಿಸುತ್ತಲೇ ಎಡ ಬಲ ನೇಪಥ್ಯಗಳಿಗೆ ಸರಿಯುತ್ತಾನೆ. ಆದರೂ ಅವರ ನೃತ್ಯದ ಹೆಜ್ಜೆಯ ಗೆಜ್ಜೆಯ ನುಡಿ ಕೇಳಿಸುತ್ತಲೇ ಇರುತ್ತದೆ. ರಂಗಪೂರ್ಣ ಕತ್ತಲಾಗುವಾಗ ನಮನ ಭಂಗಿಯಲ್ಲಿರುವ ಚೆನ್ನಲೆಯ ಮೇಲೆ Sport light ಬೀಳುತ್ತದೆ. ಅನಂತರ ಹಿನ್ನೆಲೆಯಲ್ಲಿ ತುಂಬು ಕಠದ ಗಂಭೀರವಾಣಿ ಪುಟಿಯುತ್ತದೆ]

ಹಿನ್ನೆಲೆ : ಮನೆಯೊಳಗಂಣದೊಳಗೆ ಶೂಲಿಯಮ ಪಾರುತುಂ
ಮನದೊಳಗೆ ಮನೋಹರನ ನೆನೆದು ನಲಿದಾಡುತುಂ
ಆಟದೊಳು ಕಲ್ಲಿನಾತನ ನೆನಹು ತನಗಲ್ಲಿ
ಪಾಠದೊಳು 'ಕಲ್ಲಿನಾಥಾ' ಎಂದು ನೆನೆದಲ್ಲಿ
ಬಲೆವುತಿರ್ದಳು ಹರನೊಳಗಿರಿಸಿ ಕೊಡಗೂಸು
ತಳೆವುತಿರ್ದಳು ಸಿವನ ಭವವಂ ಕೊಡಗೂಸು

[ಹಿಂಬದಿಯ ತೆರೆ ಸರಿಯುತ್ತದೆ. ಅದು ಕೈಲಾಸ ಪರ್ವತ. ಶಿವ–ಪಾರ್ವತಿಯರು ಆ ಬೆಳ್ಳಿ ಬೆಟ್ಟದ ಅಟ್ಟಣೆಯ ಮೇಲೆ ಕಾಣಿಸಿಕೊಳ್ಳುತ್ತಾಲೆ. ಶವಿ–ಪಾರ್ವತಿಯ ಕೈ ಹಿಡಿದು ಎಳೆ ತರುತ್ತಾನೆ–ನರ್ತಿಸುತ್ತಲೇ]

ಶಿವ : ಓಡೋಡಿ ಬಾ ಗಿರಿಜೆ ಬಾ ಗಿರಿಜೆ
ಕೊಡಗೂಸಿನೊಡಗೂಡಿ ಆಡು ಬಾ ಗಿರಿಜೆ
ನನ್ನ ಮುದ್ದಿನ ಮುಗುಳು ನಿನ್ನ ಮೋಹದ ಅರಳು
ಆಕಾರ ತಳೆದಂತೆ ಆನಂದದಾ ತಿರುಳು
ಅವಳೆ ಆ ಕೊಡಗೂಸು ಕೋಳೂರ ಕೊಡಗೂಸು !
ನನ್ನ ಚೆನ್ನಲೆ ನೋಡು ಚೆಲುವಿನಾ ಚಿಲುಮೆ !

ಶಂಕರಿ : ಓಹೊಹೋ ! ಏನು ಸಡಗರ ಸ್ವಾಮಿ !
ಮಕ್ಕಳಾ ಮುದ್ದೆನಲು ಸಕ್ಕರೆಯ ಸವಿಜೇನು !
ಮಕ್ಕಳಕ್ಕರೆ ಮುಮದೆ ಕರಗುವಿರಿ ವಿಶ್ವೇಶ !

ಶಿವ : ಅಹುದಹುದು ಶಂಕರಿ, ವಾತ್ಸಲ್ಯ ವಲ್ಲರಿ!
ಶಿಶುವಿನ ಲೋಕದಲಿ ಕಿಲುಬಿಲ್ಲ, ಕೊಳೆಯಿಲ್ಲ
ನಿರ್ಮಲೋದಕದಂತೆ ಪಾವನವು ಪರಿಶುದ್ಧ
ಈ ನನ್ನ ಚೆನ್ನಲೆಯೊ ಮುಗ್ಧ ಭಕ್ತಳು ಮತ್ತೆ,
ನಿಷ್ಠೆ ನಿಧಿ, ಗುಣದ ಗಣಿ, ಚೆಲುವೆ ಮೈವೆತ್ತಂತೆ !
ಶೀಲ ಸಕಾರಕ್ಕೆ ಶುದ್ದ ಚೂಡಮಣಿಯು
ಅವಳೆನ್ನ ನೈದಿಲೆ ಚೆನ್ನಾಕೆ ಚೆನ್ನಲೆ !

ಶಂಕರಿ : ಧನ್ಯೆ ಚೆನ್ನಲೆ ಧನ್ಯೆ ! ನೀನೆ ನಿಜ ಮಾನ್ಯೆ !
ವಿಶ್ವನಾಥ್ನ ಕರಪೆಗೆ ಪಾತ್ರಳಾಗಿಹೆ ನೀನು
ನಿನ್ನ ಜನ್ಮವು ನಿಜಕು ಸಾರ್ಥಕವು ಕೊಡಗೂಸು !

ಶಿವ : ಶಾಂಭವಿ, ಇವಳ ಮುದ್ದಿನ ನುಡಿಗೆ ಮೋಹಿಸಿಯೆ
ಬಂದಿರುವೆ. ಇವಳ ಭಕ್ತಿಯ ಬೇಡಿ ಪಡೆಯುವೆನು
ನಲಿನಲಿದು; ಅದುವೆ ಲೀಲೆಯು ದೇವಿ,
ನೋಡಿ ಆನಮದಿಸಲು ನ್ನನ ಜೊತೆಗೂಡು.

ಶಂಕರಿ : ಅಂತೆ ಆಗಲಿ ಸ್ವಾಮಿ, ಆ ಸೈಘು ನನಗಿರಲಿ
ಈಗಲೇ ದರ್ಶನವ ನೀಡುವಿರ ಸ್ವಾಮಿ ?

ಶಿವ : ಸುಲಭದಲಿ ದೊರೆತುದಕೆ ಬಲೆ ಇರದು ಮಂಗಲೆ !
ಮಂಗಳದ ದಿನದಲಿ ಅಂಗಳದೊಳಾಡಿ ಬಹ
ತಿಂಗಳಿನ ಬೆಳಕಾಗಿ ತೇಲಿಬರುವೆ
ಸವಿ ನುಡಿಯ ಸವಿ ಸವಿದು ಹಾಲಕುಡಿವೆ !

[ಬೇರೆ ಗತಿಯಲ್ಲಿ ಕೊಡಗೂಸು ಒಬ್ಬಳೇ ನರ್ತಿಸುತ್ತಾ ಹಾಡುವಳು]

ಚೆನ್ನಲೆ : ಬೇಡಿರೆ ಬೇಡಿರೆ ಹೂವ ಮುಡಿಸಬೇಡಿರೆ
ಮುಡಿವ ಸವಾಮಿ ಗುಡಿಯಲಿಹನು ಕೊಮಡೊಯ್ಯುವ ಬನ್ನಿರೆ
ಕಲ್ಲಯ್ಯನ ಕುಸುಮಗಳಿವು ಮೀಸಲಳಿಯ ಬೇಡಿರೆ
ಅವನು ನಡೆವ ಹಾದಿಯಲ್ಲಿ ಗುಡಗಟ್ಟುವ ಬನ್ನಿರೇ

ಶಿವ ಶಿವ ಶಂಕರ ಗಿರಿಜಧವನೆ
ಭವ ಭವ ಓಂ ಕರ ಕಂಜದ ನಿಜನೆ

ಗಂಗಾದರ ಶಿವ ಗೌರೀವರನೆ
ಕೋಳೂರೇಶನೆ ಕಲ್ಲಿನಾಥನೆ

ಜಯ ಜಯ ಮಂಗಳ ಕಲ್ಲಿನಾಥನೆ
ಜಯ ಜಯ ಮಂಗಳ ಎಲ್ಲವಾದವನೆ
ಜಯ ಜಯ ಮಂಗಳ ಪುಲ್ಲಶರನ ಅರಿ
ಜಯ ಜಯ ಮಂಗಳಅಕ್ಷಲ್ಲ ಕಪರ್ದೀ

ಜಯ ಜಯ ಜಯ ಜಯ ಜಯ ಜಯ
ಜಯ ಜಯ ಜೈ ಜೈ ಜೈ ಜಯ ಜಯ ಜೈ ಜೈ

[ಕಾರಕಕ್ಕೇರಿದಾಗ ಝಲ್ ಎಂಬ ಝಲ್ಲರಿಯ ಮುಕ್ತಾಯದೊಂದಿಗೆ ಹಾಡು ಮುಗಿಯುವುದು]

ಚೆನ್ನಲೆ; ಕಲ್ಲಯ್ಯ ಕಲ್ಲಿನಾಥ, ಓ ನನ್ನ ಸ್ವಾಮಿಯೆ
ನಿನ್ನ ನಾಮ ಸ್ಮರಣೆಯಲ್ಲಿ ಅದೆಷ್ಟು ಸವಿಯಡಗಿದೆಯೊ ತಂದೆ
ತೃಪತ್ತಿಯ ತವರು ನೀನು, ನಿತ್ಯದ ಗೊತ್ತು ನೀನು
ಸತ್ಯ ಶರಣರ ಭಾಗ್ಯ ನಿಧಿಯಪ್ಪಾ ನೀನು
ಉಂಭಾಗ, ಉಡುವಾಗ, ಕುಂತಾಗ, ನಿಂತಾಗ
ಯಾವಾಗಲೂ ನಿನ್ನ ದಿವ್ಯ ರೂಪೇ ಗೋಚರಿಸುತ್ತದೆ
ನಿನ್ನನಲ್ಲದೆ ಅನ್ಯವನು ನಾ ಕಾಣೆ, ಅನ್ಯವನು ನಾ ಕೇಳೆ,
ನನ್ನಪ್ಪಾ ನನ್ನ ಹೃನ್ಮಂದಿರದಲ್ಲಿ ಪ್ರತಿಷ್ಠಾಪಿತನಾಗಿರುವ
ಪುಣ್ಯ ಪರಮೇಷ್ಠಿಯಪ್ಪಾ ನೀನು, ಬಾ ತಂದೆ ಬಾ ನನ್ನಪ್ಪ
ನಿರ್ಮ್ಲಾಂತಃಕರಣದಮಲ ತೀರ್ಥದಿ ನಿನ್ನ
ಪಾದ ಪ್ರಕ್ಷಾಳನವ ಮಾಡಿ ನಾನಿಂದು ಧನ್ಯಳಾಗುವೆ ತಂದೆ
ನುಡಿಯಲರ ಮುಡಿಗಿತ್ತು, ಮುಕ್ತಳಾಗುವೆನಲ್ಲಾ
ಬಾ ಕಲ್ಲಿನಾಥ ! ಬಾ ಕಲ್ಲಿನಾಥ !

ಕಲ್ಲಮ್ಮ: ಏನು ಸೋಜಿಗವೆ ಇದು ಸಿದ್ದವ್ವ ಈ ನಮ್ಮ ಚೆನ್ನಿಯದು !
ಯಾವಾಗಲು ಇವಳಿಗೆ  ಕಲ್ಲಿನಾಥ ! ಕಲ್ಲಿನಾಥ !
ಹುವ ತುರುವದಕೆಂದು ಕರೆತಂದ ಈಕೆ
ಕುಳಿತಿಲ್ಲಿ ಜಪಮಾಡೆ ನಾವೇನ ಮಾಡುವುದು
ಇವಳ ವತ್ನೆ ಏಕೊ ನನಗಿನಿತು ಹಿಡಿಸಲ್ಲ

ಸಿದ್ದವ್ವ : ಇರಲಿ ಬಿಡೆ ಕಲ್ಲವ್ವ, ಅವಳಲಿಹ ಶಿವಭಕ್ತಿ ನಿನ್ನಲಿಹುದೆ?
ನನ್ನಲಿಹುದೆ? ಯಾರ ಹೊದ್ದಿದೆ ಹೇಳು?

ಕಲ್ಲಮ್ಮ: ಹೌದಮ್ಮ ತಾಯಿ ಹೌದೆ ! ಎಷ್ಟೇ ಆಗಲಿ ಚೆನ್ನಿ
ಶಿವಕೊಟ್ಟ ಶಿವಕುಸು ಕೊಡಗುಸು ಅಲ್ಲವೆ ?

ಚೆನ್ನಲೆ : ಏನಾದರು ಅನ್ನು ಏನಾದರೂ ಆಡು
ಎಂತು ಕರೆವೆಯೊ ನನ್ನ ಅಂತೆ ಸಂತಸ ತಯಿ
ಆದರಿದೊ ಈ ನನ್ನ ಕಲ್ಲಿನಾಥನ ಬಜಿಸೆ
ನುತಿಸಿ ನರ್ತಿಸಲೆನೆಗೆ ಅಡ್ಡಿಬರಬೇಡ

ಸಿದ್ದವ್ವ ; ನೋಡಿದೆಯ ಕಲ್ಲವ್ವ, ಚೆನ್ನವ್ವ ಎಂಥ ಚೆಲುವಿನ
ಹೆನ್ಣೊ ಅಂಥ ಭಕ್ತಿ ಕಣ್ಣು 1
ಪರಸಿವನೆ ಪ್ರಿಯ ಹಣ್ಣು !
ಚೆನ್ನಲೆ ನೀನು ಕೊಡಗೂಸು ಅಲ್ಲೇನೆ ?

ಚೆನ್ನಲೆ : ಅಕ್ಕಂದಿತು, ಅವನು ಕೊಡದೀ ಜಗದಿ ಯಾವುದಾಗಿದೆ

ಹೇಳಿ ?ಹರಿವ ತೊರೆ ಮೊರೆವ ನದಿ
ಬಿಮ್ಮನಿಹ ಬೆಟ್ಟಗಳು, ತೇಲುತಿಹ ಮೊಡಗಳು,
ಮೈ ಹಾಸಿ ಮಲಗಿರುವ ಈ ರಮ್ಯ ವನರಜಿ,
ಮಿನುಗುತಿಹ ತಾರೆಗಳು, ಉರಿವ ಆ ಸೂರ್ಯ್,
ಷೋಢ ಕಲಾಪೂರ್ಣನಾದ ಆ ಚಂದ್ರಮಾನ,
ಸಪ್ತವರ್ಣ ಸುಶೋಭಿತವಾದ ಆ ಮಲೆ ಬಿಲ್ಲು,
ಇಳಿಗಿಳಿವ ಜಡಿಮಳೆಯು, ಮುಡಿ ಎತ್ತ ಬೆಳೆವ ಬೆಳೆ
ಏನೆಲ್ಲವೀ ಸೃಷ್ಟಿ, ಅವನ ನಲ್ಮೆಯ ಕೊಡುಗೆ !
ನಾನು ನೀನೂ ಇವಳು ಇ ಎಲ್ಲ ಸಂಪತ್ತು
ಸರಷ್ಟಿ ಸಚರಾಚರದ ಜಡಜಿವ ತೇಜಸ್ಸು
ಎಲ್ಲ ಅವನಾ ಕೊಡುಗೆ ಅವನದೆ ಕರುಣೆ
ಅವನು ಕೊಡಲಾವಾದೆವೆಂಬುದನು ಮರೆಯದಿರಿ

ಸಿದ್ದವ್ವ : ನಾವೆಲ್ಲ ಕರೆಯುವುದು ಚೆನ್ನ ಚೆನ್ನಲೆ ಎಂದು
ಆದರೆಲ್ಲರು ನಿನ್ನ ಕೊಡಗೂಸು ಎನ್ನುವರು
ನಾನು ಹಾಗೆಯೇ ಕರೆವೆ ? ಬೇಸರಿಕೆ ಬೇಡವ್ವೆ.

ಚೆನ್ನಲೆ: ಹೇಗೋ ಕರೆಯಿರಿ ನನ್ನ ಅಕ್ಕಂದಿರೆ ! ನಿಮ್ಮ
ಅಕ್ಕರೆಯ ಸಕ್ಕರೆಗೆ ನಾನಿಷ್ಟು ಹಾಲಾದರಷ್ಟೆ ಸಾಕು !

ಸಿದ್ದವ್ವ : ಎನು ಮುದ್ದಿನ ಮಾತೆ ? ಎಂತ ಮಮತೆಯೆ ಚೆನ್ನವ್ವ ?

ಚೆನ್ನಲೆ : ಆಕ್ಕಂದಿರಾ, ವೇಳೆಯಾಯಿತು ಏಳಿ
ಗಿಡ ಗುಲ್ಮ ಬಳ್ಳಿ ಮನೆ ಹೂ ಹಿಡಿದ ತೊಂಗಲಲಿ
ಬೇಡಿ ಪಡೆಯುವ ಏಳಿ ಕಲ್ಲಿನಾಥ್ನ ಮನಕೆ
ಮೆಚ್ಚಾದ ಮುಗುಳನ್ನು

{ರಸ್ತೆಯ ತೆರೆ ಇಳಿವುದು ಎಲ್ಲರೂ ರಸ್ತೆಯಲ್ಲಿ ನರ್ತನ]

ದೃಶ್ಯ – 2 ರಸ್ತೆ

ಮೇಳಗೀತೆ : ನೀಲಿಯ ಅಕಾಶದಲ್ಲಿ ತೇಲುವ ಬಿಳಿಮೋಡಗಳೆ
ಮಲ್ಲಿಗೆಯ ಮಾಲೆಯಂತೆ ಗಹಾರು ಬೆಳ್ಳಕ್ಕಿಗಲೆ
ಕಾಶ್ಮೀರದ ಕಣಿವೆಯಲ್ಲಿ ಕವಿ ಕಾಣುವ ಕನಸುಗಳೆ
ಬನ್ನಿ ಬನ್ನಿ ಬನ್ನಿ, ಕೋಳೂರಿಗೆ ಬನ್ನಿ,
ಭೂ ಕೈಲಾಸಕೆ ಬನ್ನಿ
ಕಲ್ಲಯ್ಯಗೆ ಶರಣೆನ್ನಿ !

ವಿಭೂತಿ : [ಜಿಂಕೆಯಮತೆ ಹಾರಿಬಂದು]
ಬಂದೆ ಬಂದೆ ಬಂದೆ ಬಂದೆ ನಿಲ್ಲೇ ಹೆಣ್ಣೆ
ಹೋಗು ಬ್ಯಾಡ ಅಡ್ಡಬಂದೆ ನಿಂಬೇಹಣ್ಣೆ !

[ಮದ್ದಲೆ ಮುಖವೀಣೆ ತಾಳೆ ಝುಲ್ಲರಿ ಇತ್ಯಾದಿಗಳ ಹಿನ್ನೆಲೆಯಲ್ಲಿ ಯಕ್ಷಗಾನ ನೃತ್ಯ ಆರಂಭಿಸುತ್ತಾನೆ]

ರಾಗ ಕಲ್ಯಾಣಿ: ಕಾಮ ನ ರತಿ ರಂಭೆ ಸೋಮsನ ಕೈಗೊಂಬೆ

[ಗದ್ಯ : ಏನೆಂದೆ ? ನಮ್ಮಮ್ಮನ ತಲೆ ಮೇಲಿನ ಸಿಂಬೆ ನಮ್ಮಪ್ಪನ ತೋಟದ ಮಾವಿನ ಮರದ ಕೊಂಬೆ]

ಕಾಮsನ ರತಿ ರಂಭೆ ಸೊಮನ ಕೈಗೊಂಬೆ
ಬೇಗsನೆ ಬಮದು ನೀನ ಮನವನ್ನು  ತುಮಬೆ !

[ಢಿರ್‌ರ್ ಭಳಿರೆ ಶಹಬ್ಬಾಸ್ ! ಎಂದು ಹೇಳುತ್ತಾ ಛಂಗನೆ ಹಾರಿ ಕೆಳಗೆ ಭಾವ ಭಂಗಿಯಲ್ಲಿ ಕೂರುವನು]

[ಬೇರೆ ಧಾಟಿಯಲ್ಲಿ]

ಕಾಮsನ ರತಿರಂಭೆ ಸೋಮsನ ಕೈಗೊಂಬೆ
ಬೇಗsನ ಬಂದು ನೀ ಮನವನ್ನು ತುಂಬೆ !!

ಧೋಂ ತದಿಗಿಣ ಥೋಂ ತದಿಗಿಣಥೈ ದಿದಿಗಿಣ ಥೈ !
ಡಿರ್‌ರ್ ಭಳಿರೆ ಶಹಬ್ಬಾಸ್ !

ನಿನಗಾಗಿ ಕಾದಿವ್ನಿ ಮದುವೇಗೆ ನಿಂತಿವ್ನಿ
ಕೈ ಹಿಡಿದು ಕಾಪಾಡೆ ಕಾಲೀಗೆ ಬೀಳುವೆ ॥

ಧೋ ತದಿಗಿಣ ಥೋಂ ತದಿಗಿಣಥೈ ತದಿಗಿಣಥೈ !
ಹೇಳಿದಂಗೆ ಕೇಳತೀನಿ ತಾಳಕ್ ತಕ್ಕಂಗ್ ಕುಣಿತೀನಿ
ಮಳ ಅಂದ್ರ ಮಳ್ಳ ಅಂದ್ರು ಏನೆಲ್ಲ ನೀ ಬೈದ್ರು
**

ನೃತ್ಯ ನಡೆಯಿತೇ ವಿನಾ ಸಂಭವನೆಯನ್ನೇನೂ ಕಾಣಲಿಲ್ಲ...
ಎಲ್ಲಾ ನಿನ್ನಾಟ !... ನೀನೆ ನೊಡ್ಕೋ ನ್ಯಾಯ, ಅನ್ಯಾಯನಾ !

ಚೆನ್ನಲೆ : ಅಣ್ಣಯ್ಯ ನಿನಗೆ ಮೋಹವೆ ?
ಏನು ಬೇಕಿದೆ ಹೇಳು ?

ವಿಭೂತಿ : ನನ್ನ ಲಗ್ನ ಆಗ್ತೀಯಾ? ಹೇಳು ನನ್ನ ಅರಗಿಣಿ
ಒಪ್ಕೊಮಡ್ಯಾ ಈ ಗಂಡಭೇರುಂಡನ್ನ !

ಚೆನ್ನಲೆ : ಅಯ್ಯೋ ಮರುಳೇ ! ಮದುವೆಯ ಹುಚ್ಚು ನಿನಗೆ !
ಮದುವೆ, ಮಕ್ಕಳು, ಬದುಕುಮ ಮರಣ !
ಏನು ಹುಚ್ಚು ಲೀಲೆಯಪ್ಪಾ ನಿನ್ನದು ಕಲ್ಲಿನಾಥ !
ಎಷ್ಟೇ ಆಗಲಿ ನೀನು ಹುಚ್ಚವೀರನಲ್ಲವೆ ?
ಮರುಳು ಶಂಕರನಲ್ಲವೆ ?

[ವಿಭೂತಿಯನ್ನುದ್ದೇಶಿಸಿ]

ಅಣ್ಣಾ, ಮದುವೆಯ ಮಾತು ಬಿಟು ಬೇರೆ ಏನನ್ನಾದರೂ ಕೇಳು.

ವಿಭೂತಿ : ಊ ಹುಂ  ನನಗೆ ಮದ್ವೇನೇ ಆಗ್ಬೇಕು !
ಅದೂ ನೀನೇ ಆಗ್ ಬೇಕು

ಕಲ್ಲವ್ವ : ಏಯ್ ವಿಭೂತಿ ಏನು ಇವಳೇ ಆಗ್ಬೇಕಾ !
ಈ ಚೆನ್ನೀನೆ ಆಗ್ಬೇಕಾ ?

ವಿಭೂತಿ : ಊಂ..ಊಂ..! (ತಲೆ ಹಾಕುವನು)

ಕಲ್ಲವ್ವ : ಯಾಕೆ ನಾವ್ಯಾರೂ ಬ್ಯಾಡ್ವಾ ?

ವಿಭೂತಿ : [ಹಿಗ್ಗಿನಿಂದ ಬಾಯಿ ತೆರೆದು] ಆ.. ಹೂಂ.. ಆಗ್ರಿ !
ನೀವೆಲ್ಲರೂ ಆಗ್ರಿ ಬೇಕಾದ್ರ !.. ಆದ್ರೆ ...
ಚೆನ್ನಿ ಮಾತ್ರ ನನ್ನ 'ಗಡಾ' ಅಂತನ್ನಬೇಕು.

***

ಹೋಗು ಬ್ಯಾಡ ಅಡ್ಡ ಬಂದೆ ನಿಮಬೆ ಹಣ್ಣೆ !
ಲೆ ಲೆಲೆ ಲೆಲೇ !...ಚೆನ್ನಿ..! ಚೆನ್ನಲೇ!

[ಓಡುವನು]

ದೃಶ್ಯ : 3 ಸಂಗಯ್ಯನ ಮನೆ

[ಪೂಜಾಗೃಹ : ಮಂದಾಸನದಲ್ಲಿ ಕಲ್ಲಿನಾಥಮೂರ್ತಿ – ಮುಂದೆ ಪೂಜಾ ಪರಿಕರಗಳು. ಇಕ್ಕೆಲಗಳಲ್ಲೂ ಚೆನ್ನಲೆ ಮತ್ತು ವಿಭೂತಿ ಕುಳಿತಿದ್ದಾರೆ. ಧ್ಯಾನ ಸಮಾಧಿಯಲ್ಲಿ ಇಬ್ಬರೂ ಹಾಡುತ್ತಿರುತ್ತಾರೆ. ಮೊದಲ ಪಾದವನ್ನು ಚೆನ್ನಲೆ, ದ್ವಿತೀಯ ಪಾದವನ್ನು ವಿಭುತಿ ಹಾಡುವರು]

ಚೆನ್ನಲೆ : ಜಯ ಗಂಗಾಧರ, ಹರಹರ, ಜಯ ಗಿರಿಜಾಧೀಶ.

ವಿಭೂತಿ : ಶಿವ ಜಯ ಗಿರಿಜಾಧೀಶ !

ಚೆನ್ನಲೆ : ತ್ವಮಾಂ ಪಾಲಯ ನಿತ್ಯಂ
ತ್ವಮಾಂ ಕರಪಯಾ ಜಗದೀಶ!

ವಿಭೂತಿ : ಶಿವಕೃಪಯಾ ಜಗದೀಶ

[ಸಂಗಯ್ಯ ಮತ್ತು ಸೋಮಲೆ ಬರುವರು. ಭಾವಪರವಶರಾಗಿ ನಿಲ್ಲುವರು. ಕ್ರಮವಾಗಿ ಮೊದಲ ಪಾದವನ್ನು ಚೆನ್ನಲೆ ಎರಡನೆಯ ಪಾದವನ್ನು ವಿಭೂತಿ ಹಾಡುವರು ಮೊದಲಿನಂತೆ]

ಚೆನ್ನಲೆ :  ಕೈಲಾಸೇ ಗಿರಿಶಿಖರೆ ವರ ಕಲ್ಪದ್ರುಮ ವಿಪಿನೆ !

ಮುತ್ತು ಶಿವ ಕಲ್ಪದ್ರುಮ ವಿಪಿನೇ !

ವಿಭೂತಿ : ಗುಂಜತಿ ಮಧುಕರ ಪುಂಜೆ ಕುಂಜ ವನೇ ಗಹನೇ !
– ಶಿವ ಕುಂಜ ವನೇ ಗಹನೇ !
– ಕೋಕಿಲ ಕೂಜಿತ ಖೇಲಿತ ಹಂಸೀ ವನಲಲಿತ !
– ಶಿವ ಹಂಸೀ ವನಲಲಿತಾ !
– ರಚಯತಿ ಕಲಾ ! ಕಲಾಸೀ ನೃತ್ಯತಿ ಮುದ ಸಹಿತಾ !
– ಹರ ಹರಹರ ಮಹಾದೇವ

**

ಭಾಸುರ ಕಟಿತಟಿ ನಟನಾಚಾರ್‍ಯ್ನೆ
ಕೋಟಿ ಪ್ರಭಾಪೂರ್ಣ ಸೂರ್ಯತೇಜನೆ
ಧಿಕಿಟ ಧಿಕಿಟ ಥೈ ಥೈ ಥೈ ಎನುತ
ನಾಟ್ಯ ತಾಡವದ ಪಟು ನಟರಜನೆ ॥

[ಚೆನ್ನಲೆ : ನಾಟ್ಯ ಮುಗಿದ ಮೇಲೆ ತಂದೆ ತಾಯಿಯವರಿಗೆ ಮಂಗಳಾರತಿ, ತೀರ್ಥ, ಪ್ರಸಾದ ನೀಡುತ್ತಾ]

ಅಪ್ಪಾಜಿ ! ಬಂದು ಬಹಳ ಹೊತ್ತಾಯಿತೆ ಅಮ್ಮಾಜಿ ?

ಸೋಮಲೆ : ಇಲ್ಲ ಕಂದ. ಇದೆ ಈಗ ಬಂದೆವಮ್ಮ: ನಿನ್ನ ಧ್ಯಾನ ಸಮಾಧಿಗೆ ಭಂಗ ಬರದಿರಲೆಂದು ದ್ವಾರದಲೆ ನಿಂತೆವು. ಅಮ್ಮಮ್ಮಾ ! ನಿನ್ನೆ ಭಕ್ತಿಯ ಹೊನಲು ನಮ್ಮನ್ನೂ ಕೊಚ್ಚಿ ಹರಿಯಿತು ಮಗಳೆ !

ಸಂಗಯ್ಯ : ಇಂಥ ಭಕ್ತಿಗೆಮೆಚ್ಚಿ ಹೊರೆಯೊಂದು ಹರಿಸುವೆವು !
ಹೇಳಿ ಅಪ್ಪಾಜಿ.. ನಿಮ್ಮ ನುಡಿ ನನಗೆ ಶೊರೋಧಾರ್‍ಯ !

ಚೆನ್ನಲೆ : ಅಪ್ಪಾಜಿ, ತಮ್ಮ ಪಾದವಿಟ್ಟಡೆಯಲ್ಲಿ ನನ್ನ ಶಿರ ಹಸುವೆ.
ಹೇಳಿ ಅಪ್ಪಾಜಿ.. ನಿಮ್ಮ ನುಡಿ ನನಗೆ ಶಿರೋಧಾರ್‍ಯ!

ಸಂಗಯ್ಯ : ಮಗು ಚೆನ್ನಲೆ, ನಿನ್ನ ಜನನಕ್ಕೆ ಪೂರ್ವದಲಿ
ಶ್ರೀಶೈಲ ಮಲ್ಲಯ್ಯನಿಗೆ ಹರಕೆ ಹೊತ್ತಿದ್ದೆವಮ್ಮ –
ಭ್ರಮರಾಂಬೆ ಕನಿಕರಿಸೆ ಮಗಳು ಜನಿಸಲು ಸಾಕು
ಬಂದೆ ಬರುವೆವು ಸ್ವಾಮಿ ನಿಮ್ಮ ಸೇವೆಗೆ ಎಂದು.
ಹರಕೆಯನುಸಲ್ಲಿಸುವ ಸಮಯ ಬಂದಿದೆ ತಾಯಿ
ನಿತ್ಯನೇಮವ ನಡೆಸೆ ಹೋಗಿ ಬರುವೆವು ನಾವು
ಶಿವನ ಸೇವಿಸಿ ಬೇಗ ಹಿಂತಿರುಗಿ ನಾವ್ ಬಹೆವು.

ಚೆನ್ನಲೆ : ವ್ರತಕೆಭಂಗವ ತರುವ ಪಾತಕಿಯು ನಾನಲ್ಲ
ಹೇಳಿ ಅಪ್ಪಾಜಿ, ನನ್ನಿಂದೇನಾಗಬೇಕಿದೆ ಹೇಳಿ.

ದೃಶ್ಯ : 4 ದೇಗುಲದ ದಾರಿ

[ ಕಲ್ಲವ್ವ  ಮತ್ತು ಸಿದ್ದಮ್ಮ ನರ್ತನ ]

ನಮ್ಮೂರು ದಾರೀಲೀ ರಂಗೋಲೆ ಬರದವ್ವೆ
ಹೊನ್ನ ಹೊಂಬಾಳೆ ಹುಡಿ ಚೆಲ್ಲಿ
ಹೊನ್ನ ಹೋಮಬಾಳೆ ಹುಡಿ ಚೆಲ್ಲ ಮುಡಿದವ್ವೆ
ಮುಳ್ಳೀನ ಬೇಲಿ ಕುಡಿಬಾಳೆ !
ಬನದಮ್ಮ ಹೊಸದಾಗಿ ಹಸುರುಟ್ಟು ನಿಂತೌಳೆ
ಮೊಗ್ಗೀನ ಜಡೆಯ ಕಡು ಬೆಡಗಿ
ಬಳ್ಳಿ ಬಲು ಚೆಲುವೆ ಬಳುಕುತ್ತ ಬಾಗ್ಯಾಳೆ
ಚಿಗುರಿನ ಸೆರಗ ಮರೆ ಮಾಡಿ
ಚಿಗುರಿನ ಸೆರಗ ಮರೆ ಮಾಡಿ ನಗುವಾಗ
ಚಿಟ್ಟೆ ಮುಚ್ಚೀತು ತುಟಿ ತುಂಬಿ
ಹೂವು ಹೂವಿನ ಮ್ಯಾಲೆ ಜೋಮಾಲೆ  ಜೀಕ್ಯಾವೆ
ಜೇನು ಜೋಗುಳವ ಹಾಡ್ಯಾವೆ
ಜೇನು ಜೋಗುಳವ ಹಾಡುವ ಹೊತ್ತಿಗೆ
ಗಿಣಿರಾಯ ಕಣಿಯಾ ಹೇಳ್ಯಾನೆ !

ದೃಶ್ತಯ : 5 ಕಲ್ಲಿನಾಥನ ದೇಗುಲ

[ಸ್ವಾಮಿಗೆವೈಭವದ ಪೂಜೆ ಆಗಿದೆ. ಚೆನ್ನಲೆ ಎಲ್ಲವನ್ನೂ ನೆರವೇರಿಸಿ ಗರ್ಭಗುಡಿಯ ಮುಂದೆ ನಿಂತು ನರ್ತಿಸುತ್ತಿದ್ದಾಳೆ]

ಗಿರಿಜಾಧೀಶ ಸದಾಶಿವ ಮೃಡ ಸರ್ವೇಶ್ವರ ಶಿವನೆ
ಪ್ರಮಥಾದಿಪ ಹರ ಚಂದ್ರಶೇಖರ ಮೃತ್ಯುಂಜಯ ಭರ್ಗ

***

ನಾನು ನಿಂತಿರುವೆನೆಂದೋ ? ಕುಡಿಯಲು ನಾಚಿಕೆ ಅಲ್ಲವೆ ? ಆಗಲಿ ಈ ಕಂಬದ ಮರೆಯಲ್ಲಿ ನಿಲ್ಲುತ್ತೇನೆ. ಬೇಗ ಕುಡಿದು ಬಿಡು.. ಹಾಂ.. ಹೂಂ, ತಪ್ಪದೆ ಕುಡಿಯಬೇಕು.. ಹಾಲು ಬೇಕಾದರೆ ನನ್ನನ್ನು ಕರೆಯಬೇಕು.. ಹಾಂ. ಊಂ..

[ಕಂಬದ ಹಿಂದೆ ಚಣಕಾಲ ಅಡಗಿ ಅಲ್ಲೀಮದಲೇ ..]

ಅಯಿತೆ ?   ಇನ್ನೂ ಹಾಲು ಬೇಕೆ ?

[ಉತ್ತರ ಇಲ್ಲ ಮುಂದೆ ಬಂದು ನೊಡಿ ಬೆಚ್ಚ ]

ಹಾ ! ಇದೇನಿದು ಸ್ವಾಮಿ ಸ್ವೀಕರಿಸಿಯೇ ಇಲ್ಲ ! ಕಾರಣ ತಿಳಿಯದಾಗಿದೆಯಲ್ಲಾ ! ಅಯ್ಯೋ ನನ್ನ ಮಂದ ಬುದ್ಧಿಗೆ ಎನೊಂದೂ ಹೊಳೆಯುತ್ತಿಲ್ಲ ! ಅಪ್ಪಾ. ಬರಿಯ ಹಾಲು ಕುಡಿಯಲು ಬೇಸರವೇನಪ್ಪಾ ? ಹಣ್ಣು, ಹಾಲುಗಳನ್ನು ಹೊಂಬಾಳೆಯಲ್ಲಿಟ್ಟು ತರಲೇನು! ಏನು ಬೇಕೋ ಸ್ವಾಮಿ, ಮಾತಾಡು ನನ್ನಪ್ಪಾ...

ಮಾತಾಡು ಮಾತಾಡು ಲಿಂಗವೆ – ನೀನು
ಮಾತಾಡಲೊಲ್ಲೇಕೋ ಲಿಂಗವೇ ॥

ಚೆನ್ನ ಬಂದಾಕ್ಷಣಕೆ ಬನ್ನವೇ – ನಿನಗೆ

ರನ್ನದೊಡಿಗೆಯನಿವೆ ಲಿಂಗವೇ ॥

ಮಾತಾಡು ಮಾತಾಡು ಲೀಮಗವೇ – ನೀನು
ಮಾತಾಡಲೊಲ್ಲೇಕೋ ಲಿಂಗವೇ ॥

ಕಲ್ಲಿನಾತ, ವಿನಾಕಾರಣ ನನ್ನ ಮೇಲೆ ಕೋಪಗೊಂಡಿದ್ದೀಯೆ. ನೋಡು ಸ್ವಾಮಿ, ನನ್ನ ಮಾತು ಕೇಳಿ ಹಾಲು ಕುಡಿ. ಹಸಿದುಂಡರೆ ಆರೋಗ್ಯ ಕೆಡುತ್ತದೆಯಂತೆ! ಬೇಗ ಹಾಲು ಕುಡಿದು ಬಿಡು. ಹಬ್ಬಕ್ಕೆ ನಿನಗೆ ಹೊಸ ಬಟ್ಟೆ ! ಆಗಬಹುದಾ .. ಏಳು ಮತ್ತೆ.. ಹಾಡು ಹೇಳ್ತೀನಿ..

ತ್ರಿಪದಿ ಕಾಳ ಹಸುವಿನ ಹಾಲು ಕಾದರ ಕಡುರುಚಿ
ಹಾಲು ಸಕ್ಕರೆ ಎರಡು ಸವಿಗೂಡಿ – ತಂದಿವ್ನಿ
ಬೋಳು ಕಲ್ಲಯ್ಯ ಸಲಿಸೇಳಿ ॥

**

ಶಂಕರಿ : ನಾಥ.. ನಾಥ ! ಓಹೊಹೋ ! ಇದೇನು ಊರು ಬೆಂದರೂ ಕೊರೆ ನಿದ್ದೆ ತಪ್ಪಿಲ್ಲ ನನ್ನ ಸ್ವಾಮಿಗೆ !

ಶಿವ: ಅಂತಹ ವಿಲಯವೇನೂ ಸಂಭವಿಸಿಲ್ಲ ಪಾರ್ವತಿ !
ಶಂಕರಿ: ಏಕೆ ? ಪ್ರಳಯವೆ ಆಗಬೇಕೆ ? ಇದು ಸಾಲದೇನೋ ! ಪಾಪ! ಆ ಕೊಡಗೂಸಿನ ಕರೆಗೆ ಕರುಳು ಕತ್ತರಿಸುತ್ತದೆ.

ಶಿವ : ಎಷ್ಟಾದರೂ ನೀನು ಹೆಣ್ಣಲ್ಲೆ ? ಇದು ಸಲದೇನೋ ! ಪಾಪ ! ಆ ಕೊಡಗೂಸಿನ ಕರೆಗೆ ಕರುಳು ಕತ್ತರಿಸುತ್ತದೆ.

ಶಂಕರಿ : ಹಾಗಾದರೆ ಗಂಡಿನ ಹೃದಯ ಕಲ್ಲಾಗಿರಬಹುದು.

ಶಿವ : ಹಾಗಲ್ಲ ಗಿರಿಜೆ !

ಶಂಕರಿ : ಮತ್ತೆ ಹೇಗೆ ? .. ನನ್ನ ನಿಮ್ಮ ವಾದ ಸಕು.. ಕೂಸು ಬಡವಾದೀತು ! ನಿಮ್ಮ ಯೊಗ ಮುದ್ರಿತ ನೇತ್ರವನ್ನು ತೆರೆದು ಈ ಬಾಲಕಿಯ ಇಷ್ಟಾರ್ಥವನ್ನು ನೆರವೇರಿಸಿ.

ಶಿವ : ಸ್ವಲ್ಪ ತಾಳು ಶಂಕರಿ, ಆತುರವೇಕೆ?

ಶಂಕರಿ : ಅಯ್ಯೋ ಅವರ ದುಃಖವನ್ನು ನೋಡಲಾರೆ. ಎಷ್ಟು ಅಳಲಿಸುವಿರಿ ಅದೆಷ್ಟು ಒಳಲಿಸುವಿರಿ ಆ ಕುಸನ್ನು ? ಕುಡಿದು ಬಿಡಬರದೆ ?

ಶಿವ : [ನಗುತ್ತಾ ] ಶಾಂಭವಿ, ನಾನೇನು ಮಾಡಲೆ ? ಈ ಬಾಲೆಯ ಮುದ್ದು ಮಾತುಗಳು ಅವಳು ತಂದ ಹಾಲಿಗಿಂತಲೂ ಸವಿಯಾಗಿವೆಯಲ್ಲೇ ! ಹಾಲು ಕುಡಿದು ಬಿಟ್ಟರೆ ನುಡಿ ಜೇನಿನ ಸಿಗದಂತಾಗುತ್ತದೆ. ಚಣಕಾಲ ಅವಕಾಶ ಕೊಡು ಇನ್ನಷ್ಟು ಅವಳ ಮುಗ್ಧ ಭಕ್ತಿಯ ಮಾಧುರ್ಯವನ್ನು ಸವಿದು, ಅನಂತರ ಹಾಲು ಸವಿಯುತ್ತೇನೆ ; ನಿನ್ನ ಮನೋಭಿಷ್ಟವನ್ನು ಸಲ್ಲಿಸುತ್ತೆನೆ. ಆಗಬಹುದೆ ?

ಶಂಕರಿ : ಪ್ರಬು ಚಿತ್ರ !

[ಗುಡುಗು ಮಿಮಚಿನ ಆರ್ಭಟ ನರ್ತನ, ಅಭಿನಿಯಗಳೊಡನೆ ನಡೆದ ಶಿವ–ಶಂಕಿರಯರ ಸಂಭಾಷಣೆ ಮುಗಿದು ಅವರಿಬ್ಬರೂ ಅಂತರ್ಧಾನರಾಗುವರು]

***

[ಶಿವ ಬರಲಿಲ್ಲ ! ಸ್ಥಿರಚಿತ್ತಳಾಗಿ ಸ್ವಾಮಿ ಎದುರು ಪ್ರತಿಜ್ಞೆ ಸ್ವೀಕರಿಸುವಳಂತೆ ಸೆಟೆದು ನಿಂತು ]

ಪ್ರಭೋ, ಕಲ್ಲಿನಾಥ,

ನಾನೆಷ್ಟು ವಿಧದಲ್ಲಿ ಹಂಬಲಿಸಿ ಬೇಡಿದರೂ ನಿನಗೆ ದಯೆ ಬರಲಿಲ್ಲ. ಅಲ್ಲವೆ ? ಆಗಲಿ ನೋಡಿಯೇ ಬಿಡುತ್ತೇನೆ. ಇದು ನಿನ್ನ ಭಕ್ತಳ ಬಕ್ತ ಪರೀಕ್ಷೆಯ ಪರಮಾವಧಿ.. ನಿನ್ನೊಡನಾಡಿದ ಈ ಹುಡುಕಾಟವೂ ಸಾಕು, ನಿನ್ನ ಕಣ್ಣು ಮುಚ್ಚಾಲೆಯೂ ಸಾಕು ! ನೋಡುತ್ತಿರು, ನೀನಾಗಿಯೇ, ಹಾಲು ಕುಡಿಯದಿದ್ದರೆ, ನಾನಾಗಿಯೇ ಹಾಲು ಕುಡಿಸುತ್ತೇನೆ – ಬರಿಯ ಹಾಲನ್ನಷ್ಟೆ ಅಲ್ಲ. ಈ ನನ್ನ ಹರಣವನ್ನೂ ಸಹ ಸ್ವೀಕರಿಸು ಕರುಣಾನಿಧಿ.. ಸ್ವೀಕರಿಸು ! ಜೈ ಕಲ್ಲಿನಾಥ ! .. ಜೈ ಕಲ್ಲಿನಾಥ .. ! ಜೈ

[ಕಂಬಕ್ಕೆ ತಲೆಹಾಯಿಸಲು ಹೋಗುವಳು ಕುಡಲೇ ಶಬ್ದ ಮೊಳಗಿ ಸ್ವಾಮಿ ಬೆಳಗುತ್ತಾನೆ.. ಕಂಬಕ್ಕೆ ಹೊಡೆಯಲೆತ್ತಿದ ತಲೆಯನ್ನು ಹಿಡಿದು..]

ಶಿವ : ನಿಲ್ಲು ನಿಲ್ಲೆಲೆ ಚೆನ್ನೆಲೆ ! ನಿಲ್ಲು ನಿಲ್ಲೆಲೆ ಮಂಗಲೆ
ಭಕ್ತಿ ಸಕ್ಕರೆ ಬೆರೆಸಿದೆ ಹಾಲಬಟ್ಟಲ ಸವಿಯೊಳು
ಹಾಲನಾರೊಗಿಸುವೆನೌ ಜಗವೆಲ್ಲ ಕೌತುಕಬಡುವೊಲು ॥

[ಕೊಡಗೂಸು ಆನಂಧಭರಿತಲಾಗಿ ಹಾಡುವಳು]

ಚೆನ್ನಲೆ : ಕಮಡೆ ! ಕಣ್ಣಾರೆ ಕಮಡ ॥ಪ॥
ದೇವನದೀ ಧರ ಭಾವಜ ಹರನ ॥ಅನು ॥
ಕಲ್ಲಿನಾಥನ ಕಲಾಮಯ ರೂಪನ ।
ಜಗದಿಭೀರಮ ಸುಶೋಭಿತ ಸೋಮನ
ಸರ್ವಮಂಗಳೆ ಶಿವಸರ್ವಜ್ಞನ ।
ಸಚ್ಚಿದಾನಂದನ ಭೂತೋನ್ನಿತನ ॥1॥

ನಂಜುಂಡವನ ಕೆಂಜಡೆಯವನ ।
ಸೌಮ್ಯರ ಭಜಕರ ರಂಜಿಸುವವನ ।

**

ಶಿವ : ಅಮ್ಮ ಇದೇ ರೀತಿ ನೀನು ನಿತ್ಯವೂ ಹಾಲು ಕುಡಿಸಲು ಬೇಕು. ನೀನು ಕೊಡುವ ಹಾಲಿಗಗಿ ನಾನು ಹಸಿದು ಹಂಬಲಿಸಿ ಬರುತ್ತೇನೆ.

ಚೆನ್ನಲೆ : ಹಾಗೆಯೇ ಆಗಲಿ ನನ್ನಪ್ಪ. ನಾನಿತ್ತ ಹಾಲು ಸವಿಯಾಗಿತ್ತೆ ?

ಶಿವ : ಹೆತ್ತ ತಾಯಿಯ ಎದೆಯ ಸೊದೆಯ ಕುಡಿದಂತಿತ್ತು !

ಚೆನ್ನಲೆ : ದೊಡ್ಡ ಮಾತು .. ಬಹು ದೊಡ್ಡ ಮಾತು ! ಅಪ್ಪಪ್ಪಾ, ನಿತ್ಯವೂ ಬರಬೇಕು; ಕಾಡಬೇಡ ಕಂಡೆಯಾ ?

ಶಿವ : ಇಲ್ಲ ತಾಯಿ : ಇನ್ನೆಂದಿಗೂ ಕಾಡುವುದಿಲ್ಲ ಆಗಬಹುದೆ?

ಚೆನ್ನಲೆ : ಆಗಲಿ ..

ಶಿವ: ತಾಯಿ, ವೇಳೆಯಾಯಿತು ! ಅದೋ ನಿನ್ನೆ ಮುಗ್ಧ ಗೆಳೆಯ ವಿಭೂತಿ ! ಅಮ್ಮಾ, ನಾನಿನ್ನು ಬರಲೆ ?
[ವಿಭೂತಿ ಬಾಗಿಲ್ಲಲೇ ಸ್ವಾಮಿ ಹಾಲು ಕುಡಿಯುವುದನ್ನು ಕಂಡು ಸ್ತಬ್ಧನಾಗಿ ನಿಲ್ಲುತ್ತಾನೆ]
ಚೆನ್ನಲೆ : ಹೋಗಿ ಬಾ ತಂದೆ.. ಹೋಗಿ ಬಾ ನನ್ನಪ್ಪ. ಜಗದ್ರಕ್ಷಕನಿಗೆ ನಾನೊಬ್ಬಳೇ ಭಕ್ತಳಲ್ಲ,

[ಶಿವ ಅಂತರ್ಧಾನನಾಗುವನು, ಚೆನ್ನಲೆ ವಿಭೂತಿ ಬಳಿ ಒಡಿ ಬಮದು]
ವಿಭೂತಿ, ವಿಭೂತಿ, ಸ್ವಾಮಿ ಇಂದು ನನಗೆ ನನ್ನ ದಿವ್ಯ ದರ್ಶನವನ್ನು ದಯಪಾಲಿಸಿದನಪ್ಪಾ.. ನೀನೂ ಕಂಡೆಯಾ ?

ವಿಭೂತಿ : (ಮಂತ್ರಮುಗ್ಧನಾಗಿಯೇ) ಕಂಡೆ !

ಚೆನ್ನಲೆ : ಹಾಗಾದರೆ ನೀನು ಪುಣ್ಯಶಲಿ !

ವಿಭೂತಿ : ಅದರ ಫಲ ನಿನ್ನದು ಚೆನ್ನಲೆ !

ಚೆನ್ನಲೆ : ಅದು ಹೇಗಾದೀತನ್ನಾ.. ನಿನ್ನ ಪುಣ್ಯ ನಿನ್ನದು

ವಿಭೂತಿ : ಅಮ್ಮಾ ನೀನು ಕೇಲವ ಹೆಣ್ಣಲ್ಲ.. ನನ್ನ ಹಡೆದ ತಾಯಿ !
(ಅವಳ ಪಾದ ಹಿಡಿದು ನಮಿಸುವನು)
ಮಣಿಕುಂಡಲ, ಸರ್ಪಭೂಷಣ, ಶೂಲಿ, ಪರಶಿವನೇ ಕುಡಿದನಪ್ಪಯ್ಯ !
ಸಂಗಯ್ಯ :ಮತ್ತೆ ಅದೇ ಸುಳ್ಳು ..

ಚೆನ್ನಲೆ : ಇಲ್ಲ ಅಪ್ಪಾಜಿ ಇದರಲ್ಲಿ ಕಣದಷ್ಟೂ ಸುಳ್ಳಿಲ್ಲ.. ಸತ್ಯ ಸತ್ಯ ಸತ್ಯ !
ಸಂಗಯ್ಯ : ಹಾಗಿದ್ದಲ್ಲಿ ಕಲ್ಲೆದ್ದು ಬಂದು ಹಾಲು ಕುಡಿಯಲಿ! ಇಲ್ಲವಾದರೆ ಇದೋ ಈ ಮಚ್ಚಿನಿಂದಲೇ ಕಲ್ಲೇಶನಿಗೆ ನಿನ್ನ ರಕ್ತಾಭಿಷೇಕ !

(ಗರ್ಭಗುಡಿಯಲ್ಲಿದ್ದ ಕುಡುಗೋಲನ್ನು ಮೇಲೆತ್ತಿ ಎಡಗೈಯಲ್ಲಿ ಚೆನ್ನಲೆಯ ಮುಡಿ ಹಿಡಿದು ಲಿಂಗಕ್ಕೆ ಬಡಿಯುವನು)

ಚೆನ್ನಲೆ : ದಮ್ಮಯ್ಯ, ದತ್ತಯ್ಯ, ಓ ಕಲ್ಲಿನಾಥಯ್ಯ
ಬಂದು ಹಾಲ್ಗುಡಿಯಯ್ಯಾ ಶ್ರೀ ಕಲ್ಲಿನಾಥಯ್ಯ !
ತಡವೇಕೊ ತರಳೆಯಿದೊ ನೊಂದೆ ತಂದೆ
ಲೋಕ ನಿಂದೆಯ ಮಾಣೊ ನಾನು ಬೆಂದೇ ॥
ಶಶಿಧರನೆ ಪಶುಪತಿಯೆ ಹುಸಿಕಳೆಂದೆನಿಸದಿರೊ
ಅಸಮಾಕ್ಷ ಮೈದೋರು ಮೈದೋರು ಬಾರೋ ॥

ಓ ಕಲ್ಲಿನಾಥ
ಶ್ರೀ ಕಲ್ಲಿನಾಥ
ಬಾ ಕಲ್ಲಿನಾಥ

(ಗುಡುಗು ಮಿಮಚುಗಳ ಆರ್ಭಟ, ಚಂಡೆ ಮದ್ದಲೆಗಳ ಪ್ರಚಂಡ ಧ್ವನಿ. ಸ್ವಾಮಿ ನಾಟ್ಯಲೋಲನಾಗಿ ಶಿವೆಯೊಡನೆ ಪ್ರತ್ಯಕ್ಷನಾಗಿ ತಾಂಡವವನ್ನಾಡುತ್ತಾನೆ. ಚೆನ್ನಲೆಯ ಗೆಳೆಯ ಗೆಳತಿಯರು ಎಲ್ಲರೂ ಆಗಮಿಸುತ್ತಾರೆ. ದೂರ ಸರಿದು ಇಕ್ಕೆಲಗಳಲ್ಲೂ ಬಿಟ್ಟ ಕಣ್ ತೆರದ ಬಾಯವರಾಗಿ ನಿಲ್ಲುತ್ತಾರೆ. ರಂಗದ ನಡುವೆ ಚೆನ್ನಲೆ ಹಾಲಿನ ಬಟ್ಟಲು ಹಿಡಿ

ಅಭಿನಯಿಸುತ್ತಿರುತ್ತಾಲೆ ಶಿವ–ಶಿವೆಯರ ಭವ್ಯತಮ ನರ್ತನ ನಡೆಯುತ್ತದೆ.. ಹಿನ್ನೆಲೆಯಲ್ಲಿ ಹಲವು ಕಂಠಗಳು "ಓಂ ಓಂ ಶಂಕರ ಓಮ ನಟ ಗಂಭೀರ" ಎಂದು ಘೋಷಿಸುತ್ತಿದ್ದರೆ ಸ್ತ್ರೀ ಕಂಠವೊಂದು ಹಾಡು ಹಾಡುತ್ತಿರುತ್ತದೆ)

ಸ್ತ್ರೀಕಂಠ : (ತನ್ನ ಕಂಠಶ್ರೀಯಲ್ಲಿ ತಾರಕದಲ್ಲಿ)

**ಧ್ರುವತಾರೆಯಾಗುವೆನು**

ಪಾತ್ರಗಳು
ಧ್ರುವ
ಉತ್ತಮ
ಸುನೀತಿ
ಸುರುಚಿ
ಭಗವಂತ
****

ಧ್ರುವನಾರು ? ನಾನಾರು ? ನಮ್ಮೊಳೇತಕೆ ಭೇದ ?
ಹೆತ್ತವರು ನೀವಿಬ್ಬರು ಸುನೀತಿ–ಸುರುಚಿ !
ಅದೊಡೇಂ ತಂದೆ ಒಬ್ಬನೇ ಉತ್ತಾನಪಾದರಾಯ !
ಒಂದೇ ಬಳ್ಳಿಯ ಎರಡು ಹೂವುಗಳು ನಾವು !
ಧ್ರುವನಿಹನು ನನ್ನಣ್ಣ ಭಾವಿ ಸಾಮ್ರಾಟ
ನಾನವನ ಸೋದರನು ಮೇಣವನ ಕಿಂಕರ !

ಸುರುಚಿ ; ಅಂತಾದೊಡಾಂ ಸತ್ತೆ ! ಅಯ್ಯಯ್ಯೋ !
ನನ್ನಾಸೆ ಕನ್ನಡಿಯು ಒಡೆದು ಚೂರಾಯ್ತೆ !

ಉತ್ತಮ : ಅಮ್ಮಾಜಿ ಏಕಿನಿತು ಉದ್ವೇಗ
ನಾ ಬೇರೆ ಧ್ರುವ ಬೇರೆ ಎಂಬ ಮಾತೆ ಸಲ್ಲ !
ಇಬ್ಬರು ಉಸುರುವುದು ಒಬ್ಬ ತಂದೆಯ ಹೆಸರು
ಎಣ್ಣೆ ಬೇರಾದರು ಉರಿವ ಜ್ಯೋತಿಯು ಒಂದೆ
ಉತ್ತನಪಾದನಿಗೆ ಅದೆ ಕಿರ್ತಿ ಎಮದೆ !

ಸುರುಚಿ : ಹಾಳಾಗು ಮೂರ್ಖಮತಿ ! ನೆಗೆದಾಚೆ ಬೀಳು !
ಕಲ್ಲನೆತ್ತಿಗೆ ಎಣ್ಣೆಯೊತ್ತಿದಂತ್ತಾಯ್ತು ನನ್ನ ದುಡಿಮೆ !
(ಸಶಬ್ದದೊಡನೆ ದೃಶ್ಯ ಮುಗಿವುದು)
****

ದೃಶ್ಯ – 2

ಉತ್ತಮ : ಧಿಕ್ಕಾರ ಅಲ್ಪತೆಗೆ ಧಿಕ್ಕಾರ
ಎದೆಯ ಹಾಲ್ಗಡಲಲ್ಲಿ
ಹೇಯ ಹಾಲಹಲನೆಬ್ಬಿಸಿದ
ಈ ಬಗೆಯ ಸ್ವಾರ್ಥಕ್ಕೆ ಧಿಕ್ಕಾರ !

ದರ್ಪ ದೌರ್ಜನ್ಯಕ್ಕೆ ಇರಲಿ ಧಿಕ್ಕಾರ !

ಧ್ರುವ : ತಾಯಿ ದೇವರಿಗಿಮತ ಬೇರೆ ದೇವರೆ ಇಲ್ಲ
ತಾಯಿ ದೂಷಣೆ ನಿನಗೆ ಶುಭವಲ್ಲ ಉತ್ತಮಾ !
***

ಅಮ್ಮನಿಗೆ ಬಣ್ಣಿಸಲು ಇದೊ ಇಂದೆ ಹೊರಟೆ
ದೊಡ್ಡಮ್ಮ, ಅಣ್ಣಯ್ಯ ಇಲ್ಲೆ ಬರುವೆ !
(ಹೋಗುವನು)

***
ಸುನೀತ : ಧ್ರುವರಾಯ ಚಿಕ್ಕಮ್ಮನೆಂದುದಕೆ ಬೇಸರವೆ ನಿನಗೆ ?
ಧ್ರುವ : ಇಲ್ಲಮ್ಮ... ಚಿಕ್ಕಮ್ಮ ನಾಡಿದುದು ನನಗೆ ಆಶೀರ್ವಾದ
ಅವಳೆಳೆದು ಬಿಸುಡಿದ್ದೂ ತಾಯ ಹರಕೆಯ ತುತ್ತು
ಅವಳ ಪದಧೂಳಿಯನು ಮೊದಲು ಮುಡಿಯುವ ಭಾಗ್ಯ
ಈ ನನ್ನ ಮಸ್ತಕಕೆ ಲಭಿಸಿತ್ತು ತಾಯಿ..
ನಾ ಭಾಗ್ಯಶಾಲಿ.. ತಾಯ ಹರಕೆಯ ಹೊತ್ತ
ಧನ್ಯ ನಾನು !

ಸುನೀತಿ : ಆದರೂ ಅಳುಕಿಹುದು ನುಡಿಯಲ್ಲಿ
ಸುಳುಹುಂಟು ಕಣ್ಣಲ್ಲಿ !
ಆತ್ಮವಂಚನೆ ಬೇಡ ಸ್ಪಷ್ಟಪಡಿಸು !

ಧ್ರುವ : ಅಮ್ಮಾಜಿ, ನಾನೊಂದು ಅಂಶದಲಿ ಹತಭಾಗ್ಯ !

ಸುನೀತಿ : ಯಾವುದದು ? ನಿನ್ನ ತಂದೆಯು ತಳೆದ ಕಡು ಮೌನವೆ ?

ಧ್ರುವ : ಅಲ್ಲಮ್ಮ.. ನನ್ನ ತಂದೆಯ ತೊಡೆಯ ತಲ್ಪದಲಿ
ಪವಡಿಸುವ ಭಾಗ್ಯವಿನಿತಿಲ್ಲಾಯ್ತೆ !
ಈ ಬಾಲ್ಯ ಮುಗಿವಷ್ಟರಲ್ಲಿ ನನ್ನ ತಂದೆಯ
ತೊಡೆಯ ಮೇಲೆ ಕೂರುವ ಭಾಗ್ಯ
ನನಗಿದೆಯೆ ತಾಯಿ ?

****
ಹೇಳಲಾಗದ ಬವಣೆ !
ನೀನು ಆಗಸದಲ್ಲಿ, ನಾನು ನೆಲದಲ್ಲಿ !
ಎನಿತು ಅಂತರ, ದೂರ ! ಹೇಗೆ ಸಹಿಸಲಿಕಮದ !

ಧ್ರುವ : ಅಮ್ಮಾಜಿ ಶ್ರೀಗಂಧ ಸಿದ್ಧಿಸಲು ಚಂದನವು ಸವೆದಂತೆ
ತಪದ ಸಿದ್ಧಿಗೆ ತನುವ ತ್ಯಾಗಗೈಯಲೆ ಬೆಕು.
ತ್ಯಾಗವಿರದಾತಪಕೆ ಎಲ್ಲಿಹುದು ಸಿದ್ದಿ ?

ಸುನೀತಿ : ಜ್ಞಾನವಂತನು ನೀನು ಸತ್ಯಮೂರ್ತಿಯು ನೀನು

ನಿನ್ನ ಹಾದಿಯ ಹಿಡಿದು ಅಡವಿಯೆಡೆ ನಡೆ ಕಂದ !

ಧ್ರುವ : ಹೊಗಿ ಬರುವೆನು ತಾಯಿ, ಹೋಗಿ ಬರುವೆನು ತಂದೆ
ಹೋಗಿ ಬರುವೆನು ತಮ್ಮ ಬರಲೆ ಚಿಕ್ಕಮ್ಮ..
ಹೋಗಿ ಬರಲೇ ನನ್ನ ತಂದೆಯ ಮೊದಲ ತೊದಲ
ನುಡಿಯಾಲಿಸಿದ ಅರಮನೆಯೆ :
ಹೋಗಿ ಬರಲೆ ನನ್ನ ತಾಯಿಯ ಪಾದಸ್ಪರ್ಶದಿಂ
ಪುಲಕಿತನಾದ ಹೊಸ್ತಿಲಿನ ಮಸ್ತಕವೆ !
ಹೋಗಿ ಬರಲೇ ನನ್ನ ಮಹಮನೆಯ
ಸೌಭಾಗ್ಯ ದೇವತೆಯೆ ?.. ಬೀಳ್ಕೊಡಿರಿ ನೀವಿಂದು
ನಿಮ್ಮ ಕರುಣೆಯ ಕಂದನೀ ಧ್ರುವನ ಬೀಳ್ಕೊಡಿರಿ
ನಿಮ್ಮ ಸಿರಿಮುಡಿಗಂದು ಹುವತಹೆನಲ್ಲದೆ ಹುಲ್ಲತಾರೆ
ಹೂವ ತಹೆನಲ್ಲದೆ ಹುಲ್ಲತಾರೆ !

***

ದೃಶ್ಯ – 3

ಹಿನ್ನೆಲೆಯಲ್ಲಿ : ಓಂ ನಮೋ ನಾರಾಯಣಾಯ
ಹರಿ ಓಂ ಹರಿ ಓಂ .. ಹರಿ ಹರಿ ಹರಿ ಓಮ ..! ಎಂಬ ಮಂತ್ರ –
***

ನಾರಾಯಣಾ.. ಓಂ ನಮೋ ನಾರಾಯಣಾ
ಓಂ ನಮೋ ನಾರಾಯಣ.. ನಾರಾಯಣಾ..
ನಾರಾಯಣಾ..
(ಗುಡುಗು ಮಿಂಚುಗಳ ಆರ್ಭಟದಲ್ಲಿ ಭಗವಂತನ ಸಾಕ್ಷಾತ್ಕಾರ)

ಭಗವಂತ : ಕಣ್ಣ ತೆರೆ ಧ್ರುವರಾಯ ಕಣ್ಣೆವೆಯ ತೆರೆಯೊ
ಇದೆ ನಾನೆ ಬಂದಿಹೆನು ಏನು ಅಣತಿಯೊ ?

ಧ್ರುವ : ಕಂಡೆ ಹರಿಯ ಕಂಡೆ
ಕಂಡೆ ಹರಿಯ ಕಂಡೆ

ದೇವಾದಿದೇವಬ ದಿವ್ಯಾನುಭಾವನ
ಕಮಡೆ ಹರಿಯ ಕಮಡೆ

ಶಂಕ ಚಕ್ರ ಗೆ ಶಾರ್ಙ್ಗ ಧರಿಸಿದ
ಪಂಕದ ವದನದಿ ಅಜನನು ಮುಡಿದಿಹ
ರತ್ನ ಕಇರೀಟದ ತೇಜೋ ಮಂಡಲ
ಕನಕಾಂಬರಧರ ಕೌಸ್ತುಭಹಾರನ ॥ಕಂಡೆ॥\

ಧನ್ಯನಾದೆನು ತಂದೆ ನಿನ್ನ ದಯದಿಂದೆ
ಸನಕಾದಿ ಮುನಿಗಳಿಗೆ ಸಕಲ ದೇವತೆಗಳಿಗೆ

ಕನಸಿನಲು ಸುಳಿಯದಿಹ ಪಾದಾರವಿಂದವಿದು
ನನಗೆ ದರ್ಶನವಿತ್ತು ಧನ್ಯತೆಯ ನೀಡಿತ್ತು !
ಸಾಕಿಮದು ಭಗವಂತ ಸಾಕದುವೆ ಮುಕ್ತಿ !
ನಿನ್ನ ತೊಡೆ ಮೇಲಲ್ಲ, ದಿವ್ಯ ಪಾದವ ತುಂಬಿ ನನ್ನ ನಿಲಿಸು,

ಭಗವಂತ : ಧ್ರುವರಾಯ, ನಿನ್ನ ಮುಗ್ಧಪ್ರೇಮ
ಈ ಜಗದ ರಂಗದಲಿ ಆದರ್ಶವಾಗಲಿ,
ನೀನೇರಿದೆತ್ತರಕೆ ನಾನೇರಲಾರದಿಹೆ ..
ನೀನಾನು ಎಂದಿಗೂ ಮಿರು ಮಿರುಗುವಾ ತಾರೆ
ಸಪ್ತರ್ಷಿ ಮಂಡಲದ ನಿಹಾರಿಕಾ ಲೋಕದೇಕೈಕ ಧ್ರುವತಾರೆ !
ಆಗು ತಿಂಗಳಿನಾಚೆ ಮಂಗಳದ ಮನೆಯಾಗು !
ಆಗು ತಿಂಗಳಿನಾಚೆ ಮಂಗಲದ ಮನೆಯಾಗು !

ಶುಭಮಕ್ಕೆ ಜಯಮಕ್ಕೆ
ಮಂಗಳವು ಮೆರೆದಿಕೆ
ವಿಶ್ವಕ್ಕೆ ಕಲ್ಯಾನ ಶಾಂತಿ ಲಭಿಸಿಕೆ

ಓಂ ಶಾಂತಿಃ ಓಂ ಶಾಂತಿಃ ಓಂ ಶಾಂತಿಃ

ಮೇಳ ಗೀತೆ : (ರಾಗ : ಬೃಂದಾವನ ಸಾರಂಗ)

ಜಯ ಜಯ ಜಯ ಜಯ ಜಯ ನಾಟ್ಯಾಂಜಲಿ
ಜಯ ಜಯ ಜಯ ಜಯಹೇ ಗೀತಾಂಜಲಿ
ಕನ್ನಡ ತಾಯಿಯ ಸೋಗಿಲ ಮಕ್ಕಳು
ನಾಟಕ ರಂಗದ ಶಿಖರವನೇರಲು
ಹಂಬಲದೊಳು ನಾವೆರಚಿದ ಮಂಜರಿ
ಇದುವೆ ಮಂಗಳ ಮಧು ನಾಟ್ಯಾಜಂಲಿ
ಜಯ ಜಯ ಜಯ ಜಯ ಜಯ ನಾಟ್ಯಾಂಜಲಿ

## ಶಿವರಾತ್ರಿ ಮಹಿಮೆ
## ನೃತ್ಯ ರೂಪಕ

ರಚನೆ : ಡಾ.ಸಾ.ಶಿ.ಮರುಳಯ್ಯ

ಪಾತ್ರವರ್ಗ
ಶಿವ
ಶಿವೆ
ಸೂತಪುರಾಣಿಕ
ಬೇಡ
ಜಿಂಕೆ
ಮೊಲ
ಋಷಿಗಳು

ನರ್ತಕಿಯರು

ಕೈಲಾಸ

ದೃಶ್ಯ – 1

[ಹಿಮಾಚ್ಛಾದಿತ ಬೆಳ್ಳಿ ಬೆಟಟದಲ್ಲಿ ಋಷಿಮುನಿಗಳ ಸಮಾಗಮ, ಮೇಲಿನಟ್ಟಣೆಯಲ್ಲಿ ನರ್ತನದ ಭಂಗಿಯಲ್ಲಿ ಶಿವ–ಶಿವೆಯರ, ಕೆಳಗಡೆ ಅವರ ಪಾದದಡಿಯೆಡೆಯಲ್ಲಿ ಸೂತಪುರಾನಿಕರು, ಹಲಜನ ಗಣಧರರು. ಎಡಭಾಗದಲ್ಲಿ ಗಣೇಶ, ಷಣ್ಮುಖ, ಸರಸ್ವತಿ ಮೊದಲಾದವರವದ್ಯವೃಂದ, ಬಲಭಾಗದಲ್ಲಿ ಶ್ವೇತವಸನದಧಾಋಇಣಿಯರಾದ ನಾಲ್ವರು ನರ್ತಕಿಯರು] ತೆರೆ ಸರಿಯುವ ಮೊದಲು ರಂಗದಲ್ಲಿ ಓಂಕಾರದ ಝೇಂಕಾರ ಮಟಯುವುದು ಗಂಭೀರ ಧ್ವನಿಯಲ್ಲಿ, ಕ್ರಮವಾಗಿ ಶಂಖನಾದ ಮಧ್ಯೆ ಮಧ್ಯೆ ಜಾಗಟೆ ಧ್ವನಿಗೈಯುವುದು. ಅವೆಲ್ಲ ನಾದಗಳನ್ನೂ ಹಿಂಬಾಲಿಸಿಕೊಂಡು ಶ್ಲೋಕ ಪಠನ ಹಾಗೂ ರಾಗಸಂಯೋಜಿತ ಹಾಡು ಆರಂಭವಾಗುವುದು]

ಋಷಿಗಳು

ನರ್ತಕಿಯರು

***

ಋಷಿಗಳು ಶ್ಲೋಕ ಪಠನ : ವಂದೇ ಶಂಭುಂ ಉಮಾಪತಿಂ ಸುರುಗುರಂ
ವಂದೇ ಜಗತ್ಕಾರಣಂ
ವಂದೇ ಪನ್ನಗ ಭೂಷಣಂ ಮೃಗಧರಂ
ವಂದೇ ಪಶೂನಾಂ ಪತಿಂ
ವಂದೇ ಸೂರ್ಯ ಶಶಾಂಕ ವಹ್ನಿ ನಯನಂ
ವಂದೇ ಮುಕುಂದ ಪ್ರಿಯಂ
ವಂದೇ ಭಕ್ತಜರ್ನಾರಯಂ ಚ ವರದಂ
ವಂದೇ ಶಿವಂ ಶಂಕರಂ ॥

(ಲಯಗತಿಯಲ್ಲಿ ಹಾಡನ್ನು ಹಿಂಬಾಲಿಸಿ ನರ್ತಕಿಯರ ನರ್ತನ ನಡೆಯುವುದು)
ಕೈಲಾಸೆ ಗಿರಿಶಿಖರೆ ವರಕಲ್ಪ ದ್ರುಮ ವಿಪಿನೇ
–ಶಿವಕಲ್ಪ ದ್ರುಮ ವಿಪಿನೇ–
ಗುಂಜತಿ ಮಧುಕರ ಪುಂಜೇ ಕುಂಜವನೇ ಗಹನೇ
–ಶಿವ ಕುಂಜವನೇ ಗಹನೇ–
ಕೋಕಿಲ ಕೂಜಿತ ಖೇಲಿತ ಹಂಸೀ ವನಲಲಿತಾ
–ಶಿವ ಹಂಸೀ ವನಲಲಿತಾ–
ರಚಿತಿ ಕಲಾ ಕಲಾಸೀ ನೃತ್ಯತಿ ಮುದ ಸಹಿತಾ
–ಹರ ಹರ ಹರ ಮಹದೇವ–
ಹರ ಹರ ಹರ ಮಹದೇವ । ಹರ ಹರ ಹರ ಮಹದೇವ
[ ಚಣಕಾಲ ಶಿವ ಪಾರ್ವತಿಯರ ನರ್ತನ ಬೀಜಿಮ್‌ನಲ್ಲಿ]

**ಗಣೇಶ ಷಣ್ಮುಕ**
ಮೊದಲಾದವರು
(ಗದ್ಯ) ಓಹ್ ! ಎಂತಹ ಮನಮೋಹಕ ನೃತ್ಯ ವಯಭವ ಶಿವ ಪಾರ್ವತಿಯರದು.
(ಶ್ಲೋಕ ಪಠನ ಧಾಟಿಯಲ್ಲಿ)
ಶುದ್ದ ಧೇಶವರ ಪೇರಾಣಿ ಪ್ರೆಯಸಿ
ಕಲಶ ಚಂಡಿಕೋದ್ದಂಡ ಕುಂಡಿಲಿನಿ
ಭರತಾರ್ನವದಲಿ ಸುಪ್ತ ವಿಲಾಸದಿ
ಕರಣ ಚಾರಿಗತಿ ಮುಕ್ತ ಚರಣಗತಿ

ಪುಷ್ಪಾಂಲಿ ಧ್ರುವ ಉಡುಪ ಶಬ್ದದಲಿ
ಶುದ್ಧ ಯತಿಯ ನವನೃತ್ಯ ವಿಲಾಸದಿ
ಅಲರಿಪು ಕೊನರಿಸಿ ಕವಿತೋಲ್ಲಾಸದಿ
ಬಿಡದೆ ಝುಣರು ಝುಣ ಝುಣ ಝುಣ ಎನುತಲಿ
ವಿಶ್ವೆ ಚೇತೋಹಾರಿ ಎನ್ನುವೊಲು !

ಆಡಿದರಾಡಿರಾಡಿದರಾ ಶಿವ ಶಿವೆಯರು
ಆಡಿದರೈ ಈ ಮೂಜದೊಡೆಯರು ॥

[ಮೇಲೆ ನಿರೂಪಿಸಿದ ನತ್ನದ ವಿವಿಧ ವಿನ್ಯಾಸಗಳನ್ನು ನರ್ತಕಿಯರು ಶಿವ ಪಾರ್ವರಿಯರೂ ಅಭಿನಯಿಸಿ ತೋರುತ್ತಿರಬೇಕು]
ನರ್ತಕಿಯರು
(ಗದ್ಯ)
ಅಹುದು ಸೂರ್ಯ ಚಂದ್ರರು ನಾಟ್ಯವೇದಿಕೆಗೆ ಬೆಳಕು ನೀಡಿದರು.
(ರಂಗದ ಮೇಲೆ ಪ್ರಖರವಾದ ಬೆಳಕು ಎರಡೂ ದಿಕ್ಕುಗಳಿಂದ ಚೆಲ್ಲಬೇಕು)
(ಕುಮಾರಸ್ವಮಿಯು ಮೃದಂಗ ನುಡಿಸಿದ !
ಕುಮಾರಸ್ವಮಿಯ ಕಡೆ Focus ಮಾಡಿ ಅವನು ನುಡಿಸುವ ಮೃದಂಗ ವಾದನವನ್ನು ಚಣಕಾಲ ತೋರಿಸುವುದು)

ವಿಘ್ನ ನಿವಾರಕ ಶ್ರೀ ಗಣಪತಿಯೆ ತಾಳವ ಹಾಕಿದ !

(ಗಣೇಶನ ಕಡೆ ಈಥಿಿ ಮಾಡಿ ತಾಳ ಹಾಕುವುದನ್ನು ತೋರಿಸುವುದು)
ಸರಸ್ವತಿ ವೀಣೆಯ ದನಿಗೂಡಿಸಿದಳು
(ಸರಸ್ವತಿಯ ವೀಣಾವಾದನದತ್ತ ಬೆಳಕು ಚೆಲ್ಲುವುದು)
ಲಕ್ಷ್ಮೀ ಶಚಿಯರೆ ಹಾಡಹಾಡಿದರು !
(ಕಡೆ Focus ಮಾಡಿದಾಗ ಆದಾಗ ಎಲ್ಲರು ಹಾಡತೊಡಗುವರು)

ಹಾಡು 1 ಶಿವ ಶಿವೆಯರ ಶೃಂಗಾರದ ಲಾಸ್ಯಕೆ
ಕೈಲಾಸವೆ ತಾನರಳುವುದು ॥
ಭುವನತ್ರಯಗಳು ಮುದವನು ತಳೆವುವು
ಆನಂದದ ಹೊಲೆ ಹರಿಯವುದು॥
ಇಳೆ ಇಳೆ ನಂದನ ಭುವಿ–ಬಾನ್ ಬಂಧನ
ಓಂಕಾರಾತ್ಮಕವೀ ಜಗವು ॥

ಮಂಗಳ ಮಂಗಳ ಜಗತಳದಂಗಳ
ತಿಂಗಲ ಬೆಳಕಿನ ಪ್ರಾಂಗಣವು ॥
ಜ್ಯೋತಿವ್ಲಯವು ಝುಗ ಝುಗಿಸುವುದು
ನಿಹಾರಿಕೆಯದು ಮಿರುವುಗುವುದು ॥
ತಾರಾಲೋಕವೆ ಝೇಂಕರಿಸುವುದು
ಓಂಕಾರಾತ್ಮಕ ತನಹುದು ॥

(ಇಡೀ ರಂಗವೆ ಕ್ಷಣ ಕಾಲ ನರ್ತಿಸುವುದು)

ನರ್ತಕಿಯರು (ಸೂತ ಪುರಾಣಿಕರ ಕಡೆ ತಿರುಗಿ)
ಸ್ವಾಗತು ಸ್ವಾಗತವು ಸ್ವಾಗತವು ನಿಮಗೆ
ಸ್ವಾಗತವು ಪೌರಾಣ ಕಾರಣಿಕ ಗುರುವೆ !
ಶಿವಗೇಕೆ ಆನಂದ ಎಂದಿಲ್ಲದುಲ್ಲಾಸ ?
ಶಿವೆಯ ಜೊತೆಗೂಡಿಂದು ಲಾಸ್ಯಗೈಯುವನು !
ಸೂತ ಪೌರಾಣಿಕರೆ ಶಿವಲೀಲೆ ಹೇಳಿ !

ಸೂತ
ಪುರಾಣಿಕರು : ಶಿವರಾತ್ರೀ ಇದು ಶಿವರಾತ್ರಿ
ಮಂಗಳದೊಲುಮೆಯ ಶುಭರಾತ್ರಿ !
ಭತಕುರ ಪೊರೆಯಲು ಶಿವ ಧರೆಗಿಳಿವನು
ಬೇಡಿದ ವರಗಳ ನಿಡುವನು
ಇಂದಿನ ಇರುಳೇ ಜನ ಜಾಗರಣೆಯ
ಮಾಡುತ ಶಿವನನು ಭಜಿಸುವರು
ಭಕುತಿಗೆ ಮೆಚ್ಚಿದ ಶ್ರೀ ಪರಶಿವನು
ಮುಕುತಿಯನಿತ್ತು ಸಲಹುವನು ॥
ನರ್ತಕಿಯರು : ಶಿವನೊಲುಮೆಗೆ ಹಾಡು ಬೇಕಲ್ತೆ?
ಸೂತ : ಉಹುಂ !
ನರ್ತಕಿಯರು : ಭವನೊಲುಮೆಗೆ ನರ್ತನವು ಬೇಕಲ್ತೆ?
ಸೂತ : ಉಹುಂ !
ನರ್ತಕಿಯರು : ಅವನ ಕಾರುಣ್ಯಕ್ಕ ವೇದೋಕ್ತ ಪಠನದಾ ಮಂತ್ರ ಮಾಧ್ಯಮ ಬೇಕೆ?
ಸೂತ : ಬೇಡಾ..! ಬೇಡ..! ಬೇಡಾ !
ನರ್ತಕಿಯರು : ಮತ್ತೆ?
ಸೂತ : ಕೇಳಿ,
ನಾದಪ್ರಿಯ ಶಿವನಲ್ಲ
ವೇದಪ್ರಿಯನೂ ಅಲ್ಲ
ಅವನು ಭಕ್ತಿಪ್ರಿಯ !
ಅಗ್ನಿ ಪರಿಶುದ್ದದಲು, ಪಾವನದ ಗಂಗೆಯೊಲು
ಅಮಲ ಪ್ರಾಂಜಲ ಮನದ ನಿರ್ಮಲಿನ ಭಕ್ತಿ
ಆ ಭಕಿ ಪರಶಿವಗೆ ಅಚ್ಚುಮೆಚ್ಚು !

ನರ್ತಕಿಯರು : ನಿಚ್ಚಗೈಯುವ ನಮ್ಮ ಸಹಜ ಭಕ್ತಿಯು ತಾನೆ?
ಹೇಳಿ ಪೌರಾಣಿಕರೆ,
ಭಕ್ತಿ ಪ್ರಿಯ ಶಿವನಂಬಿರಿ. ಸಹಜ ಭಕ್ತಿಗೆ ಸ್ವಾಮಿ ಅವನೊಲಿವನೇನು?
ಸೂತ : ಇಲ್ಲಿಲ್ಲ !
ಸಹಜ ಭಕ್ತಿಗು ಮಿಗಿಲು ಸಂಕಲ್ಪ ಭಕ್ತಿ 1
ನರ್ತಕಿಯರು : ಅಂದರೆ ?

ಸುತ : ಅಂದರೇ,
ಮುಗ್ಧ ಭಕ್ತಿ, ಶುದ್ದ ಭಕ್ತಿ !
ಕಣ್ಣನಿತ್ತ ಕಣ್ಣಪ್ಪನಮತೆ
ಅನ್ನವಿತ್ತ ವೈಜಕವ್ವೆ
ಲಾಲಿಗಯದ ಎಳೆಯರಂತೆ !

ನಿಃಸ್ವಾರ್ಥ ನಿಜದ ಭಕ್ತಿ !

ನರ್ತಕಿಯರು : ಸಹ ಭಕ್ತಿಗು ಮಿಗಿಲು ಸಂಕಲ್ಪ ಭಕ್ತಿ !
ಅದಕೆ ಸಾಕ್ಷಿ ಇದೆನು ಇಂದಿನೀ ಶಿವರಾತ್ರಿ ?
ಸೂತ : ಅಹುದು ಹೇಳುವೆ ಕೇಳಿ –
[ನರ್ತಕಿಯರು ರಂಗದ ಮುಂದೆ ಬರುತ್ತಾರೆ. ಹಿಂದಿನ ದೃಶ್ಯ ಮರೆಯಾಗುತ್ತದೆ. ಹಾಡುತ್ತಾ ನರ್ತಿಸುವರು]

ನರ್ತಕಿಯರು : ಕಥೆಯ ಹೇಳುವೆ ಕೇಳಿರೆಲ್ಲ
ಇಳೆಯ ಜಾಣರು ಬಾಳಿರೆಲ್ಲ ॥

ವಿಂಧ್ಯವೆಂಬುದು ದಟ್ಟ ಕಾಡು
ಆ ಕಾಡೆಲ್ಲವಾಗಿತ್ತು ಮೃಗಗಳ ಬಿಡು ॥
ಬೇಡನೊಬ್ಬನು ಬೇಟೆಗೆಂದು
ಆ ಕಾಡೊಳು ಸೋವುತ್ತ ಬರಲು
ಶಿವನ ಕರುಣೆ ಅವಗೆ ತಾನಾಗಿ ದೊರಕಿತ್ತು
ಆ ನೋಟವ ನೀನು ನಲನಿಂದ ನೋಡು ॥

**ಅಡವಿ**

ದೃಶ್ಯ – 2
[ಬೇಟೆಗಾಗಿ ಬಂದ ಬೇಡ ಜಿಂಕೆಯೊಂದನ್ನು ಅಟ್ಟಿಸಿಕೊಂಡು ಪ್ರವೇಶ]
ಬೇಡ : ನಿಲ್ಲು ನಿಲ್ಲು ಹೇ ಹುಲ್ಲೆ ಕರುವೆ
ನಿನ್ನನ್ನು ಕೊಲದೆ ಮಾಣೆ
ಬಾಣಕ್ಕೆ ಬೆದರೆ ನೇಣಿಹುದು ಚಿಗರೆ
ಕಳುಹುವೆನು ಯಮನ ಪುರಿಗೆ ॥1॥

ಖಂಡ ಖಂಡ ಶತಖಂಡವಾಗೆ
ಚೆಂಡಾಡಿ ಹರಿದು ತಿನುವೆ
ಬಡಿದೆ ಬಡಿವೆ ಸದೆ ಬಡಿವೆ ನಿನ್ನ
ಬಡಿವಾರ ಬೇಡ ಪಶುವೆ ॥2॥

ಕುಲಗಳ ಕಡಿದು ಚರ್ಮವನೆ ಸುಲಿದು
ಹಸಿಮಾಂಸ ಕಿತ್ತು ತಿನುವೆ
ಕರುಳನ್ನು ಕೊರೆದು ತಿರುಳನ್ನು ತೋಡಿ
ಮೊಗೆ ಮೊಗೆದು ರಕ್ತ ಕುಡಿವೆ ॥3॥

ಜಿಂಕೆ : ಬೇಡ ಬೇಡ ದಮ್ಮಯ್ಯ ಬೇಡ
ಬೇಡುವೆನೊ ನಿನ್ನ ಸ್ವಾಮಿ ॥

ಬೀಡಿನಲ್ಲಿ ಮೊಲೆಯುಂಬ ಹಸುಳೆ
ಕುಡಿಯೊಂದೆ ಬಾಳ ಬಳ್ಳಿ ॥

ಹಸಿರು ಹಂಬಲಿಸಿ ಕಾದು ಕುಳಿತಿಹುದು
ನನಗಾಗಿ ಬಾಯಿ ತೆರೆದು ॥

ಉಣಿಸಿತ್ತು ಬರುವೆ ಹಾಲೂಡಿ ಬರುವೆ
ಇದು ಸತ್ಯವಾಕ್ಕು ನಂಬು ॥

ಬೇಡ : ಕಾಡು ಕರುಣೆ, ನಾಡು ಬವಣೆ
ಬೀಡು ಬೀಡು ಶೋಷಣೆ !
ಅದರುಂಟು ಸತ್ಯವಿಲ್ಲ
ಮ್ಮ ಅಡವಿ ಪೊಡವಿಯಲ್ಲಿ
ಪೋಗು ಪಶುವೆ ನಂಬಿ ಬಿಡುವೆ
ಮರಳು ಬೇಗ ಕಾಯುವೆ !

[ಜಿಂಕೆಯ ನಿರ್ಗಮನ]
ಸುದಿನವೋ ದುರ್ದಿನವೊ ದೇವ ದೇವನೆ ಬಲ್ಲ
ಇಂದೇಕೋ ನನಗೊಂದೂ ಬೇಟೆ ಸಿಗಲಿಲ್ಲ !
[ಅಷ್ಟರಲ್ಲಿ ಒಂದು ಮೊಲ ಅತ್ತ ಸುಳಿಯುವುದು]
ಹ್ಹಾ ! ಹ್ಹಾ!!
ಸಿಕ್ಕಿತು ಸಿಕ್ಕಿತು ಸಿಕ್ಕಿಯೆ ಸಿಕ್ಕಿತು !
ಎಲೆ ಎಲೆಯ ಬಿಳಿ ಮೊಲವೆ
ಕಿರು ತುಟಿಯ ಚೆನ್ನೊಲವೆ
ಬಳಿಗೆ ಬಾ ಚೆಲುವೆ
ನಿನ್ನ ನಾ ಕೊಲುವೆ !

ಮೊಲ : ಬೇಡ ಬೇಡಪ್ಪಯ್ಯ
ನಾ ನಿನ್ನ ಮಗಳು
ನನಗಾಗಿ ಕಾದಿಹುದು
ಬೇರೊಂದ ಕುರುಳು !
ಬರುವೆನದಕೊಂದಿನಿಸು ಉಣಿಸನಿತ್ತು
ತೆಕ್ಕೆಯಲಿ ತೆಗೆದಪ್ಪಿ ಕೊಟ್ಟು ಮುತ್ತು !

ಬೇಡ : ಆಯ್ತಾಯ್ತು ಬೇಗ ಬಾ ಸಾಗಿ ಬಾ ಸವಿಯ
ನೀನು ಮೊಲವಲ್ಲ ಮೊಲ್ಲೆ ಹೂ ! ಚೆಲ್ಲೆ ಚೆಲುವೆ !
[ಮೊಲದ ನಿರ್ಗಮನ]

[ಇದ್ದಕ್ಕಿದ್ದಂತೆಯೇ ನವಿಲು ಜಾಗರ ಆಡುತ್ತ ಪ್ರವೇಶಿಸುವುದು ಬೀಜಿಮ್‌ನಲ್ಲಿ ಮಯೂರ ನರ್ತನ]

ನರ್ತಕಿಯರು : ಆಡು ಆಡು ಆಡು
ಜಾಗರವನಾಡು ನವಿಲೆ ॥

ಗರಿಗರಿಯ ನಿರಿಯ ಕೆದಕೆದರಿ ಆಡು
ಕುಣಿದಾಡು ಸೋಗೆ ನವಿಲೇ ॥

ಎಳೆ ಹುಲ್ಲ ಮೇಲೆ ಮಳೆ ಬಿಲ್ಲ ಲೀಲೆ
ಕಾವಣವ ಕಟ್ಟು ನವಿಲೇ ॥

ಬಾಳೆಲೆಯ ತೋಳು ತೂಗಾಡುತಿರಲಿ
ತೋರಣವ ಸೃಜಿಸು ಮಯಿಲೇ ॥
[ನವಿಲು ನರ್ತಿಸುತ್ತ ನಿರ್ಗಮಿಸುವುದು]
ಬೇಡ : ಏನು ವೈಯಾರ ಮೈಯಿ ಬಂಗಾರ
ಚೆಲುವ ಚಿಲುಮೆ ಪೂರ

ಸಾಗಿರಲೊ ಅಣ್ಣ ಸಾವಿರದ ಕಣ್ಣ
ಸಾವಿಹುದು ನಿನಗೆ ದೂರ

ಹೋಗಿ ಬಾ ನವಿಲೆ ಸೌಂದರ್ಯ ಹೊನಲೆ
ಸುಖ ಶಾಂತಿ ಬಾಳಲಿರಲಿ
ಶಿವನ ಸತಿಯ ವಾತ್ಸಲ್ಯವತಿಯ
ಕಾರುಣ್ಯ ಕೂಡಿ ಬರಲಿ !

[ಕ್ಷಣಕಾಲ ತಡೆದು]
[ಸ್ವಾಗತ]ಏನಿದೀ ಪರಿಹಾಸ ! ಈ ವಿಪರ್ಯಾಸ
ನಾನು ಕೊಲಗಾರ, ಕಗ್ಗೋಲೆಯ ಕಟುಕ
ಬೇಟೆ ತೀಟೆಯ ಸಲಿಸೆ ನೊನೆವೆ ಜಿವಿಯ ಬದುಕ !
ಇಂತಿರಲು ಇಂದೇಕೆ ಬಗೆ ಬೇರೆಯಾಗಿಹುದು ?
ಕೊಲಲು ಕೈ ಬಾರದಿದೆ, ಬಾಣ ಮೇಲೇರದಿದೆ
ಕಣ್ಣಿನಲಿಕರಣದಲಿ ಉರುಳುತಿದೆ ಕಡಲು
ಕರುಣೆಯ ಕಡಲು !
ಕಟುಕನಲಿ ಪುಟಿಯುವುದೆ
ಒಲವರದ ಬುಗ್ಗೆ! .. ಇಲ್ಲ.. ಎಂದಿಗೂ ಇಲ್ಲ !
ಮರಳಿನಲಿ ಎಣ್ಣೆ
ಕಲ್ಲಿನಲಿ ನಾರು !
ಬರಲುಂಟೆ ಬದುಕಿನಲಿ ?
ಇಲ್ಲ ... ಪಾಷಂಡ ಹೃದಯದಲಿ ದಯೆಗೆಎಡೆಯಿಲಲ !
ಇಂದಿನಿರವಿಗೆ ಬೇರೆ ಕಾರಣವೆ ಇರಬೆಕು
ಇರಬೇಕು ದಿನದ ಕರುಣೆ!
ಅಥವ
ಇರಬೇಕು ದಿನದ ಮಹಿಮೆ !
ಈ ದಿನದ ಶುಭದ ಮಹಿಮೆ !
ಅಹುದು.. ಇಂದು ಶಿವರಾತ್ರಿ
ಸುಖ ಶಾಂತಿ ದಿವದಿಂದ ಧರೆಗಿಳಿವ ರಾತ್ರಿ !
ಹೂಂ.. ಇರಲಿ ಪರಿಕಿಸುವೆನೀ ರಾತ್ರಿ ಈ ಮರದ ಎದೆಯೆರಿ
ಸುಧೆ ಸುರಿವ ಚಂದಿರನ ಚಂದ್ರಿಕೆಯ ಹೀರಿ !
ಜಾವ ಮೂರರವರೆಗು ಜಾಗರಣೆ ಇದ್ದು
ರೆಂಬೆ ಕೊಂಬೆಯ ಎಲೆಯ ನೆಲಕೆಸೆವೆ ಕಿತ್ತು !

ನಮ್ ಮನೆ ದೇವನನ್ನು, ಶಬರ ಶಂಕರನನ್ನು
ಬೇಂಟೆ ದೇವನ ನೆನೆವೆ ಒಂದೆ ಚಿತ್ತದಲಿ

ಜಾಗರಣೆ, ಧ್ಯಾನವೊ ಪೂಜೆಯೋ ಅರ್ಚನೆಯೊ
ಏನೊಂದೂ ನಾನರಿಯೆ ಬರಿದೆ ನೆನೆವೆ
ಆ ಪರಶಿವನ ನೆನೆವೆ !

[ಮರವೇರಿ ಕುಳಿತು, 'ಓ ನಮಃ ಶಿವಾಯ' ಎಂಬ ಪ್ರಣವ ಪಂಚಾಕ್ಷರಿಯನ್ನು ಪಠಿಸುತ್ತಾ ಒಂದೊಂದೇ ಆ ಮರದ ಎಲೆಯನ್ನು ಕಿತ್ತು ಕೆಳಗೆ ಹಾಕುವನು. ಅದು ಆ ಮರದಡಿಯಲ್ಲಿದ್ದ ಒಡಮೂಡಿದ ಶಿವಲಿಂಗದ ಮೇಲೆ ಬೀಳುವುದು. ಬೀಳುತ್ತಾ ಬೀಳುತ್ತಾ ರಾಶಿಯಾಗುವುದು. 'ಓ ನಮಃ ಶಿವಾಯ' ಮಂರ ನಿರಂತರ ಸಾಗುತ್ತಿರಬೇಕು. ಆಗ..]
ನರ್ತಕಿಯರು :
ನಮೋ ನಮೋ ಶ್ರೀ ಗಂಗಾಧರನೆ
ಗೌರೀಇ ಮನೋವಿಹಾರಿ
ಗಂಗಾ ಸಲಿಲ ತರಂಗಾಚ್ಛಾದಿತ
ಬಳಸಿ ಬ್ರಹ್ಮಚಾರಿ ॥1॥

ಯೋಗ ಸಮಾಧಿಯ ಯೋಗೀಶ್ವರೆ
ಆತ್ಮರಚನೆ ಆಧ್ಯಾತ್ಮ ಋಷಿ
ಲೀಲೆಯು ಮಿಗೆ ನೀ ಉಮಾಪತೀ
ಲೀಲೆ ತಪ್ಪೆ ಸ್ವಾಯಂಭು ಯತೀ ॥2॥

[ಕ್ಷಣಕಾಲನತ್ನ ಬಿಜಿಮ್‌ನಲ್ಲಿ. ಅನಂತರ ನರ್ತನ ನಿಲ್ಲಿಸಿ ಶಿವಲಿಂಗದ ಇಕ್ಕೆಲಗಳಲ್ಲಿ ಇಬ್ಬಿಬ್ಬರು ನಿಂತು ಪುಷ್ಪಾರ್ಪಣ ಮಾಡುವರು. ಹಿನ್ನೆಲೆಯಲ್ಲಿ ಲಿಂಗಾಷ್ಟಕ ಪುಟಿಯುವುದು]
ಲಿಂಗಾಷ್ಟಕ
ಬ್ರಹ್ಮಮರಾರಿ ಸುರಾರ್ಚಿತಲಿಂಗಂ ನಿರ್ಮಲ ಭಾಷಿತ ಶೋಭಿತ ಲಿಮಗಂ
ಜನ್ಮಜ ದುಃಖ ವಿನಾಶಕ ಲಿಮಗಂ ತತ್ಪ್ರಣಮಾಮಿ ಸದಾಶಿವ ಲಿಂಗಂ ॥
ದೇವ ಮುನಿಪ್ರವರಾಚಿಥ ಲಿಂಗಂ ಕಾಮದಹನ ಕರುಣಾಕರ ಲೀಮಗಂ
ರಾವಣ ದರ್ಪ ವಿನಾಶಕ ಲಿಂಗಂ ತತ್ಪ್ರಣಮಾಮಿ ಸದಾಶಿವ ಲೀಮಗಂ
ಸಿದ್ಧಿ ಸುರಾಸುರ ವಂದಿತ ಲಿಂಗಂ  ತತ್ಪ್ರಣಮಾಮಿ ಸದಾಶಿವ ಲಿಂಗಂ
ಕನಕ ಮಹಾಮಣಿ ಭೂಷಿತ ಲಿಂಗಂ ಫಣಿಸತಿವೇಷ್ಠಿತ ಶೋಭತಿ ಲಿಂಗಂ
ದಕ್ಷಸುಯಜ್ಞ ವಿನಾಶನ ಲಿಂಗಂ ತತ್ಪ್ರಣಮಾಮಿ ಸದಾಶಿವ ಲಿಂಗಂ
ಕುಂಕುಮ ಚಣದ ಲೇಪಿತ ಲಿಂಗಂ ಪಂಕಜಹಾರ ಸುಶೋಭತಿ ಲಿಂಗಂ
ಸಮಚಿತ ಪಾಪ ವಿನಾಶನ ಲಿ<ಗಂ ತತ್ಪ್ರಣಮಾಮಿ ಸದಾಶಿವ ಲಿಂಗಂ
ದೇವ ಗಣಾರ್ಚಿತ ಸೇವಿತ ಲಿಂಗ ಭವೈರ್ಭಕ್ತಿಬಿರೇವಚ ಲಿಂಗಂ
ದಿನಕರಕೋಟಿ ಪ್ರಭಾಕರ ಲಿಂಗಂ ತತ್ಪ್ರಣಮಾಮಿ ಸದಾಶಿವ ಲಿಂಗಂ
ಅಷ್ಟದಳೋಪರಿ ವೇಷ್ಠಿತ ಲಿಂಗಂ ಸರ್ವಸಮುದ್ಭವ ಕಾರಣ ಲಿಂಗಂ
ಅಷ್ಟ ದರಿದ್ರ ವಿನಾಶನ ಲಿಂಗಂ ತತ್ಪ್ರಣಮಾಮಿ ಸದಾಶಿವ ಲಿಂಗಂ
ಸುರಗುರು ಸುರವರ ಪೂಜಿತಲಿಂಗಂ ಸುರವನ ಪುಷ್ಪ ಸದಾಶಿವ ಲಿಂಗಂ
ಪರಮಪದಂ ಪರಮಾತ್ಮಕ ಲಿಂಗಂ ತತ್ಪ್ರಣಮಾಮಿ ಸದಾಶಿವ ಲಿಂಗಂ ॥

[ಎಲ್ಲರೂ ಕುಳಿತು ಧ್ಯಾನ ಸಮಾಧಿಯಲ್ಲಿ ಮಗ್ನರಾಗಿ]
ಶ್ಲೋಕ  ಓಕಾರ ಬಿಂದು ಸಂಯುಕ್ತಂ ನಿತ್ಯಂ ಧ್ಯಾನಂತಿ ಯೋಗಿನಃ
ಕಾಮದಂ ಮೋಕ್ಷದಂ ಚಯವ ಓಂಕಾರಾಯ ನಮೋನಮಃ ॥
ವಿಶ್ವೇಶ್ವರಾಯ ವಿಶ್ವಪೂಜ್ಯಾಯ ವಿಶ್ವ ದೇಹಿನೇ
ಶರ್ವಾಯ ಶಶಿಭೂಷಣಾಯ ನೇತ್ರತ್ರಯಾಯ ಶೋಭಿನೇ
ಜಟಾಧರಾಯ ಮಣಿಕುಂಡಲ ಮಂಡಿತಾಯ

ಮಂಜೀರ ಪಾದಯುಗಲಾಯ ನಮಃ ಶಿವಯ ॥

ಗೌರೀ ಪ್ರಿಯಾಯ ವೃಷಭೇಶ್ವರ ವಾಹನಾಯ
ಗಂಗಾಧರಾಯ ರಜನೀಶ ಕಲಾಧರಾಯ
ಗೀತ ಪ್ರಿಯಾಯ ಕಮಲಾಸನ ಪೂಜಿತಾಯ
ಪುಣ್ಯಾಯ ಪುಣ್ಯ ಚರಿತಾಯ ನಮಃ ಶಿವಾಯ ॥

ಓಂ ನಮಃ ಶಿವಾಯ ..! ಓಂ ನಮಃ ಶಿವಾಯ ..
[ಎಲ್ಲರೂ ಧ್ಯಾನ ಸಮಾಧಿಯಲ್ಲಿ ಕಣ್ಮುಚ್ಚಿ ಕುಳಿತಾಗ ಶಿವ ಶಿವೆಯರ ದರ್ಶನ ಕ್ಷಣಕಾಲ ಬೀಜಿಮ್‌ನಲ್ಲಿ ಲಾಸ್ಯ)
ಶಿವೆ : ಏನಿದು ಶಿವನೇ ನಿನ್ನಯ ವರ್ತನೆ
ಮುನಿವರಿಗೆಲ್ಲ ಮನ ಕೊಡುವೆ ॥ಪ॥

ಕಲ್ಲಲಿ ಹೊಡೆದನ ಕಲಾವಿದನೆನಿಸುವೆ
ಮುಳ್ಳಲಿ ಮುರಿದಗೆ ಮಾಣಿಕ್ಯವೀವೆ
ಎಡಗಾಲಿನ ಹಿರಿ ಉಂಗುಷ್ಟದಲಿ
ಮೆಟ್ಟಿದ ಗೀಯುವೆ ಪಟ್ಟಾ ಪದವಿ ॥1॥

ನಿಂದಕ ನಂಬಿಯ ದುಂಬಿಯಗೈದೆ
ಪಾದಾಂಬುಜದಲಿ ಪೋಷಿಸಿದೆ
ಅಬಲೆಗೆ ಮಗುವಾದೆ ಅಣ್ಣಗೆ ವರವಾದೆ
ಮುಗ್ಧ ಭಕ್ತರಿಗೆಲ್ಲ ನೀನಾದೆ ತಂದೆ ॥2॥

ಶಿವ : ಅಹುದು ಪಾರ್ವತೀ  ಭಕ್ತರೆನ್ನ ಕೀರುತಿ
ಅವರೆ ನನ್ನ ಜೀವ ಜೀವ ರತ್ನದಾರುತಿ ॥
ಈಗ ಒಲಿದೆನೇ ಈ ಮುಗ್ಧ ಭಕ್ತಗೆ
ಇರುಳು ಜಾಗರಣೆ ಇದ್ದು ಪೂಜೆಗಯದಗೆ
ಇದುವೆ ಮಾನಸ ಪೂಜೆ ಶುದ್ದ ಹೃದಯದರ್ಚನೆ
ಇದೇ ಸಂಕಲ್ಪ ಭಕ್ತಿ ಇರಲಿ ಇದಕೆ ಊರ್ಜನೆ ॥

ಬಾರೊ ಮಗನೆ ಸನಿಹಕೆ
[ಮರದಿಂದ ಬೇಡ ಇಳಿದು ಬರುವನು ಕೈ ಜೋಡಿಸಿ]

ಬಾರೋ ಮಗನೆ ಸನಿಹಕೆ
ಸರಿಸೊ ಇಂದೆ ಜವನಿಕೆ
ಗಣಾಧಿಪದವಿ ಕೊಡುವೆ ನಿನಗೆ
ಬಾರೋ ಕೈಲಾಸಕೆ !

ಬೇಡ : ಬೇಡ ತಂದೆ ಬೇಡ ಶಿವನೆ
ನನಗೆ ಬೇಡ ಪಟ್ಟ ಪದವಿ
ಮುಕ್ತಿ ಬೇಡ, ಬೇಡ ಮೋಕ್ಷ
ನಿನ್ನ ಕರುಣೆ ಇರಲಿ !

ಬೆಳ್ಳಿ ಬೆಟ್ಟ ಬಿಟ್ಟು ಬಾರೊ

ಬೇಡ ಪಡೆಗೆ ಒಡೆಯನಾಗು
ನೀನ ಶಬರ, ಅವ್ವೆ ಶಬರಿ
ಅಷ್ಟೆ ನಮಗೆ ಸಾಕು !

ಶಿವ : ಆಯಿತಾಯಿತು ಭಕ್ತ
ನಾನು ಶಬರ, ಇವಳು ಶಬರಿ
ಇರುವೆ ವಿಲ್ಲಿ ನೆಲದಲಿ
ಬೇಡರುದ್ಧಾರಕ್ಕಾಗಿ ಮಲೆಯ ಮಾದಪ್ಪನಾಗಿ
ಮಣ್ಣ ಮಕ್ಕಳಾಗಿ ನಾವು ಬದುಕ ಕೊಂಬೆವು
ಇವಳು ಮಹಾದೇವಿಯು ನಾನು ಮಲೆ ಮಾದೇಶನು
ನಿಮ್ಮ ಉದ್ಧಾರಕ್ಕಾಗಿ ಶ್ರಮಿಸುವೆವು ಅನವರತ
ನಿಮ್ಮ ಭಕುತಿ ನಿಲ್ಲಲಿ ಧರೆಯ ಮೇಲೆ ಶಾಶ್ವತ !

(ಎಲ್ಲರಿಂದಲೂ ಅನಂದ ನರ್ತನ)

ನರ್ತಕಿಯರು :
ಆನಂದ ಆನಂದ ಆನಂದವೆ
ಶಿವರಾರಿಯ ಶುಭದನಂದವೆ ॥ಪ॥

ವಿಶ್ವಕೆ ಶಾಂತಿಯ ಕೋರುತಲಿ
ವಿಶ್ವಾತ್ಮನ ನಾವ್ ಭಜಿಸುವೆವು ॥
ಶಿವ ಶಿವ ಎನ್ನಿರ ಆನಂದದೆ
ಭವ ಭವ ಎನ್ನಿರಿ ಆನಂದದೆ ॥1॥

ಶಿವ ಶಿವ ಶಿವ ಸಿವ ಶಿವಾಯ ನಮ ಓಂ
ಭವ ಭವ ಭವ ಭವ ಶಿವಾಯ ನಮ ಓಂ
ಶಿವ ಶಿವ ಶಿವ ಶಿವ ಶಿವಾಯ ನಮ ಓಂ
ಹರ ಹರ ಹರ ರ ಹರಾಯ ನಮಃ ಓಂ
–ಮಂಗಳಂ–

'ರಾಗಿಣಿ' ದಿನಾಂಕ : 28 ಜನವರಿ 1996
ಬೆಂಗಳೂರು ಭಾನುವಾರ

## ಉಳ್ಳಾಲದ ರಾಣಿ

ಪಾತ್ರಗಳು
ಅಕ್ಕಮಹಾದೇವಿ
ಕಿತ್ತೂರ ಚೆನ್ನಮ್ಮ
ಬೆಳವಡಿ ಮಲ್ಲಮ್ಮ
ಸರೋಜಿನಿ ನಾಯ್ಡು
ಅನಿಬೆಸೆಂಟ್
ಅರುಣಾ ಆಸಫ್ ಆಲಿ
ರಾಣಿ ಅಬ್ಬಕದೇವಿ
ತಿರುಮಲರಾಯ

ಕಾಮರಾಜ
ಭಾಗೀರಥಿ
ತಿರುಮಲದೇವಿ
ಚಂದ್ರಶೇಖರ ರಾಜ
ನರ್ತಕಿಯರು
ಮೊಗವೀರರು
ನಿವೇದಕ

ಉಳ್ಳಾಲದ ರಾಣಿ
ಹಿನ್ನೆಲೆಯಲ್ಲಿ

ಭಾರತಾಂಬೆಯ ಮನದ ಸುಮಧುರ ಸುಸ್ವಪ್ನವೆ
ಓ ಕನ್ನಡಿತಿ, ಕರುಣಾಳು ದೇವಿ
ನೀನೆಂಥ ಪುಣ್ಯಗಭೆ

ಕವಿಗಳನು ಋಷಿಗಳನು ಗಮಕಿ ಗಂಧರ್ವರನು
ನೃತ್ಯ ಶಿಲ್ಪ ಪ್ರೌಢ ವರ್ಣಶಿಲ್ಪಿಗಳನ್ನು
ಪಡೆದಿರುವೆ ತಾಯಿ !

ನತ್ತೆನಿತೋ ವೀರರತ್ನಗಳಿಹವು
ನೊನ್ನೊಡಲ ಕಡಲಲ್ಲಿ
ವೀರ ನಾರಿಯರೆನಿತೊ ಕಂಡು ಮಿಂಚಾಗಿರಹರು
ನಿನ್ನ ಕಣ್ಣಂಚಿನಲಿ !
ಅವರ ಯದಿಯ ನೀಡು
ಅವರ ತೇಜದ ತೋರು
ನಿನ್ನಡಿಗೆ ಪೊಡಮಟ್ಟು ಹಾಡಾಗಿ ಹರಸುವೆನು
ಹಾಲ ಹೊಲೆ ಹರಿಸು
ಜೇನು ಮಳೆ ಸುರಿಸು

ನರ್ತಕಿಯರು :
ಭಾರತಾಂಬೆ ಕಾರುಣ್ಯೆ ಗಂಗೆ ಕಂಡಂಥ ಜೇನುಗನಸೇ
ವೇದವಿದರ ಶೃತಿಗೋಷವೆಂಬ ಜೋಗುಳದಿ ಬೆಳೆದ ಕೂಸೆ
ಸ್ವಾತಂತ್ರ್ಯದುಸಿರ ಸ್ವಚ್ಛದದಿಂದ ಸೆಳೆದುಲಿವ ಸವಿಯ ತೇನೇ
ಗಂಗೆ ತುಂಗೆಯರ ದಿವ್ಯ ಸಲಲಿದಲಿ ಮಿಂದು ಮೆರೆದ ಮೀನೇ ॥

ಸಾರುತಿಹುದು, ಓ ಭಾರತೀಯ, ಒಕ್ಕೊರಲಿನಿಂದ ಜನತೇ
ಹಕ್ಕು ಬಂದಿಹುದು ಬಿಕ್ಕೆಯಲ್ಲ ದಕ್ಷತೆಯ ವಿಜಯಮಾಲೆ
ರಾಜರಾಜ್ಞೆಯನು ತುಳಿದೆ ನೀನು ಬೀಸಿದೆಯೊ ಗಂಡುಗೊಡಲಿ
ರಕ್ತರಹಿತ ಕ್ರಾಂತಿಯನೆ ನಡೆಸಿ ನಿಲಿಸಿದೆಯೊ ವಿಶ್ವಶಾಂತಿ

ಹೇಳು ತಾಯಿ ಸ್ವಾತಂತ್ರ್ಯದೇವಿ, ಕನ್ನಡತಿ ಕರುಣೆ ಮಾಯಿ
ಓ ಇವಳು ಅಕ್ಕ, ಮಹದೇವಿಯಕ್ಕ ಉಡುತಡಿಯ ಮಡಿಲ ಶಿಶುವು
ಹೆಣ್ಣು ಕುಲದ ಬಲು ಹೆಮ್ಮೆ ಇವಳು ಬಿಡುಗಡೆಗೆ ಹೋರಿದವಳು ॥

ಸ್ವಾಗತವು ನಿನಗೆ ಉಡುತಡಿಯ ತೊಡವೆ
ನಡೆಮುಡಿಯ ಹಾಸಿ ಕರೆವೆ
ಬಾರವ್ವ ಆಯಿ ಸಂದೇಶ ನೀಡು
ಭಾರತಿಯ ಹಾಡಿ ಹರಸು ॥

ಅಕ್ಕಮಹಾದೇವಿ : (ಪ್ರವೇಶ)
ಹೊಲೆವ ಕೆಂಜೆಡೆಗಳ ಮಣಿಮುಕುಟ ಒಪ್ಪುವ ಸುಲಿಪಲ್ಲ
ನಗೆಮೊಗದ ಕಂಗಳ ಕಾಂತಿಯ ಈರೇಳು ಭುವನದ ಬೆಳಗುವ
ದಿವ್ಯಸ್ವರೂಪನ ಕಂಡೆ ನಾನು, ಕಂಎನ್ನ ಕಂಗಳ ಬರ ಹಿಂಗಿತ್ತಿಂದು
ಗಂಡಗಂಡರನೆಲ್ಲ ಹೆಂಡಹೆಂಡಿರಾಗಿ ಆಳುವ ಗರುವನ ಕಂಡೆ ನಾನು
ಜಗದಾದಿ ಶಕ್ತಿಯೊಳು ಬೆರಸಿ ಮಾತನಾಡುವ ಪರಮ ಗುರು
ಚೆನ್ನಮಲ್ಲಿಕಾರ್ಜುನನ ನಿಲವ ಕಂಡು ಬದುಕಿದೆನು
(ನಿರ್ಗಮನ)

ನರ್ತಕಿರಯ :
ಅಕ್ಕನ ಒಕ್ಕಲು ಸಾಸಿರವಾಗಲಿ
ಹೇಳವ್ವ ತಾಯಿ ಕತೆ ಹೇಳೆ
ಕಿತ್ತೂರ ರಾಣಿ ಸ್ವಾತಂತ್ರ್ಯ ಪ್ರೇಮಿ
ಬರುತಿಹಳು ನೋಡಲಲಿ ಚೆನ್ನಮ್ಮ
ಮಲ್ಲಸರ್ಜನ ಮಡದಿ ಚೆನ್ನಮ್ಮ

ಚೆನ್ನಮ್ಮ : (ಪ್ರವೇಶ)
ಕಿತ್ತೂರು ಕೇಸರಿಗಳೇ,
ಆಂಗ್ಲರಿದೊ ವಂಚಕರು, ನಿಮಗೆ ತಿಳಿದಿಲ್ಲ
ಆ ಗುಳ್ಳೆ, ನರಿಗಳಿಗೆಬೆವರದಿರಿ ಎಂದೂ
ಆಮಿಷಕೆ ಬಾಯ್ದೆರೆದು
ನಾಡ ಬಲಿಗೊಡಬೇಡಿ.

ತುತ್ತು ಕೂಳಿಗೆ ನಿಮ್ಮ ಹೆತ್ತ ತಾಯಿಯ ಮಾರಿ
ಬದುಕುವುದು ಸರಿಯೇ?
ಹೋರಾಡಿ, ಧಮನಿಯಲಿ ಹನಿರಕ್ತವಿರುವ ತನಕ !
ಇದು ಯುದ್ಧ ಯಜ್ಞ, ಹೋರಾಟವೇಕರ್ಮ
ಜಯಘೋಷವೇ ಮಂತ್ರ
ಕಿತ್ತೂರ ಕೀರ್ತಿಗೆಂದಿಗೂ
ಕಳಂಕ ತರದಂತೆ ಬದುಕಿ

ಜೈ ಕನ್ನಡಾಂಬೆ, ಜಯ ರಾಜರಾಜೇಶ್ವರಿ!
(ನೇಪಥ್ಯದಲ್ಲಿ) ಜೈ ಭವಾನಿ, ಜೈ ಶಿವಛತ್ರಪತಿ
ನರ್ತಕಿಯರು :
ಏನಿದೇನಿದು ಕೂಗು
ಮರಾಠಿಗಳ ಮೊಳಗು ।
ಬಂದಳು ನೋಡಿ ಮಲ್ಲಮ್ಮ ಬೆಳವಡಿ , ಹರಿವಳು ಎಲ್ಲರ ಬಂಧನ ಬೇಡಿ.

ಬೆಳವಡಿ ಮಲ್ಲಮ್ಮ : (ಪ್ರವೇಶಿಸಿ)
ಬಂಧುಗಳೇ,
ಹೋರಾಡಿ, ಮಡಿಯಲಲ್ಲ, ಮಸಣಕೊಯ್ಯಲೂ ಅಲ್ಲ.
ಸ್ನೇಹ ಸೌಹಾರ್ದಕ್ಕೆ, ಭಾರತದ ಬಾಂಧವ್ಯಕೆ
ಒಮದೆ ಬಸಿರಿಂದಿಳೆಗೆ ಇಳಿದು ಬಂದವರಾವು
ನೀವು ಬದುಕಿ ಅನ್ಯರಿಗೆ ಬದುಕುಕೊಡಿರಿ
ನಮ್ಮ ಕಿತ್ತಾಟ, ಅನ್ಯರಿಗೆ ಚೆಲ್ಲಾಟ !
ತಿಳಿಯಿರಿ, ಸ್ಪಷ್ಟ ತಿಳಿಯಿರಿ ನೀವು –
ಭಾರತವನ್ನು ಯಾರೂ ಗೆಲ್ಲಲಿಲ್ಲ
ಭಾರತೀಯರು ತಮಗೆ ತಾವೇ ಸೋತರು !
ತಮ್ಮ ಅಲ್ಪತೆಯಿಂದ ಅಸೂಯೆ ಅಜ್ಞಾನದಿಂದ
ಇಂದು ಮುಂದಾದರೂ ಇಂತಾಗದಿರಲಿ
ಭಾರತೀಯರು, ನಾವು ಎಂದಿಗೂ ಒಂದೆ !
ಜೈ ಹಿಂದ್
ಜೈ ಕರ್ನಾಟಕ

ನರ್ತಕಿಯರು
ಕಿತ್ತೂರ ಚೆನ್ನಮ್ಮ ಬೆಳವಡಿ ಮಲ್ಲಮ್ಮರಾಣಿ
ಅಬ್ಬಕ್ಕದೇವಿ, ಮಹದೇವಿ, ಕೆಳದಿ ಚೆನ್ನಮ್ಮ
ಒನಕೆ ಓಬವ್ವ
ನಾಡಿಕಟ್ಟಿದ ನಾರಿಮಣಿಯರು !
ವೀರನಾರಿಯರಿಲ್ಲಿ ಹೋರಾಡಿ ಮಡಿದರು !
ಈ ನೆಲ ಅವರಾ ಬೆವರುಂಡು ಬೆಳೆದಿದೆ
ಇತಿಹಾಸ ಜ್ಯೋತಿ ಹಿಡಿಯೋಣ,

ಬಂದಳಾ ನೋಡು ಕ್ಯಾಪ್ಟನ್ ಲಕ್ಷ್ಮಿ
ನೇತಾಜಿ ಕಟ್ಟಿದ ಫೌಜಿನಲಿ
ನೇತಾರಳಾಗಿ ಹೋರಾಡಿ ಮಡಿದಳು
ಸಾರುತ್ತ ಬಾಯಲ್ಲಿ ಜಯಕಾರ
(ಬ್ರಾಂಡ್ ವಾದ್ಯ ಮೊಳಗುವುದು)

ಅಜಾದ್ ಹಿಂದ್ ಅಜಾದ್ ಹಿಂದ್
ಜಿಂದಾಬಾದ್ ಜಿಂದಾಬಾದ್

(ಜಯದ್ವನಿ ಮೊಳಗುವುದು ಕ್ಯಾಪ್ಟನ್ ಲಕ್ಷ್ಮಿ ರಾಷ್ಟ್ರಧ್ವಜ ಹಿಡಿಉದ 'ನೇತಾಜಿ ಸುಭಾಸ್ ಚಂದ್ರಬೋಸ್ ಕಿ ಜೈ' ಎಂದು ಮರುಧ್ವನಿಗೊಡುತ್ತಾ ಒಂದು ಬದಿಯಿಂದ ರಂಗಪ್ರವೇಶಿಸಿ ಮತ್ತೊಂದು ಕಡೆಗೆ ನಡೆಯುವಳು )
ಮತ್ತಿವಳಾರೆ ಅರುಣಾ ಅಸಫ್ ಅಲಿ ಕರುಣಾಳು ತಾಯಿ
(ಅರುಣಾ) (ರಂಗಪ್ರವೇಶಿಸಿ) ರಾಷ್ಟ್ರ ನನ್ನನದು ನಾನು ರಷ್ಟ್ರಕ್ಕಾಗಿ
ಬೋಲೋ ಭಾರತ್ ಮಾತಾಕಿ ಜೈ (ಎಂದು ಘೋಷಿಸುತ್ತಾ ನಡೆವಳು)

ಮುತ್ತು ಮಾಣಿಕದ ಮಾತನ್ನು ಕೋದವಳು
ಇವಳೆ ನೋಡಮ್ಮ ಕವಯಿತ್ರಿ

ಭಾರತದ ಕೋಗಿಲೆ ಸರೋಜಿಸಿ ನಾಯ್ಡು !

ಸರೋಜಿನಿ ನಾಯ್ಡು : (Enters with a Lamp)

ಹರಿವ ನೀರು ಕಣ್ತೆರೆವ ಹೂವು ಕುಕಿಲಿಡುವ ಬನದ ಹಕ್ಕಿ
ಜಿಗಿದ ಜಿಂಕೆ ನರ್ತಿಸುವ ನವಿಲು ಜಾಗರದಿ ಮೈಯಿಸೊಕ್ಕಿ
ಬುಡನುಂಡು ಝೇಂಕಾರದಿಂದ ಓಂಕಾರಗೈವ ದುಂಬಿ
ಸ್ವೇಚ್ಛೆಯಿಂದ ಪಂಚಮವ ಮಿಡಿದ ಕೋಗಿಲೆಯ ಇಂಚರಶ್ರೀ ॥

ಇವಕಿಹುದು ಪ್ರೀತಿ ಸ್ವಾತಂತ್ರ್ಯ ಜ್ಯೋತಿ ಸಹಜತೆಯ ನೇಮನಿಯತಿ
ಮನವುಳ್ಳ ಜೀವಿ ಆತ್ಮವನು ಪಡೆದ ಮಾನವನಿಗೇಕೆ ನೇತಿ ?
ಸ್ವಾಭಿಮಾನ್ಯ ದೇಶಾಭಿಮಾನ, ಸ್ವಾತಂತ್ರ್ಯ ಬಯಸದವನು
ಸತ್ತಂತೆ ಎಂದೆ ನೈಚ್ಚತೆಏ ಮುನಿದೆ ನಿಲ್ಲಿಸಿದೆ ಸಮತೆಯನ್ನು ॥

ತ್ಯಾಗದಿಂದ ಬಲದಾನದಿಂದ ಹೋರಾಟ ಯತನದಿಂದ
ದೈತ್ಯತೆಯ ಮೆಟ್ಟಿ, ದೇವತ್ವ ಮೆರೆಸಿ ಸಗ್ಗವನೆ ಸೂರೆಗೊಂಡ
ಪುರುಷ ಪುಂಗವರು ಹತ್ತಿಸಿಟ್ಟ ಈ ಹಣತೆ ಬೆಳಗುತಿರಲಿ
ಜಯಮಕ್ಕೆ ನಮಗೆ ಶುಭಮಕ್ಕೆ ಜಗೆಕ ಮಂಗಳೂವು ಕೂಡಿಬರಲಿ ॥

ಅನಿಬೆಸೆಂಟ್ ಸ್ವಾತಂತ್ರಯ ಭಿಕ್ಕೆಯಲ್ಲ ಆಜನ್ಮಸಿದ್ಧಹಕ್ಕು ।
ಅದನಿಂದು ನಾನು ಪಡೆವ ನಿಮಗೇಕೋ ಹೀನ ಸೊಕ್ಕು ।
(ಅನಿಬೆಸೆಂಟ್ ಪ್ರವೇಶ ಮತ್ತು ನಿರ್ಗಮನ)

ನರ್ತಕಿಯರು : ಬಿಳಿಯ ಜನರ ಪ್ರಶ್ನಿಸಿದಳೀಕೆ
ಮಹಾಮಹಿಳೆ ಆ ಅನಿಬೆಸೆಂಟ್

ಕನ್ನಡದ ನಾಡು ಬರಡಲ್ಲ ಕೇಳೊ
ವೀರಮಹಿಳೆಯರ ತೇಜೋಬಲ !
ಬಳ್ಳಾರಿ ಸಿದ್ದಮ್ಮ ತಾಯಿ ಯಶೋದಮ್ಮ

ದುಡಿದುಡಿದು ಮಡುದರು ಭಲಾ ಭಳ
ಎಲ್ಲರು ನೆರೆದ ಹಾಡಿದರಂದು
ಕನ್ನಡದಾರತಿ ಬೆಳಗುತ್ತ

ವಂದೇ ಮಾತರಂ
ಸುಜಲಾಂ ಸುಫಲಾಂ
ಮಲಯಜ ಶೀತಲಂ
ಸಸ್ಯ ಶ್ಯಾಮಲಾ ಮಾತರಂ ॥ವಂದೇ॥

(ಬೇರೆ ಧಾಟಿಯಲ್ಲಿ)
ಹೋಗೋಣ ಬನ್ನಿರೋ ತುಳುನಾಡಿಗೆ
ರಾಣಿ ಅಬ್ಬಕ್ಕದೇವಿ ತವರೂರಿಗೆ ॥ಪ॥

ಕಡಲ ತಡಿ ತೊಡೆಗಳಲಲಿ ಪವಡಿಸಿಹ ಬೀಡು

ತೆಂಗುಗರಿ ತೋಳುಗಳ ಜಾಗರದ ನಾಡು
ಗೋಡುಂಬೆ ಗುಡಿಗಟ್ಟಿ ಅಡಕೆ ಚಾಮರವಿಕ್ಕಿ
ಬಾಳೆ ಬಂಗಾರವನು ಬೆಳೆವಂಥ ನಾಡು

ಬೆಳ್ಳಿ ಬೆಡಗಿನ ಮೀನ ಉಡಿಯಲ್ಲಿ ತುಂಬಿ
ಓಲಾಡಿ ನಲಿಯುವಳು ಕಡಲೊಡತಿ ದೇವಿ
ಮೊಗವೀರ ಬಂಟರು ಭಿಲ್ಲವ ಪೂಜಾರಿಳು
ಆಳ್ವರಾಳಿದ ನಾಡು ಒಲವಿತ್ತ ಗಂಡಿಎ

ಅಲ್ಲಿಹುದು ಕಿರುರಾಜ್ಯ ಳ್ಳಾಲಹಸರು
ರಾಣಿ ಅಬ್ಬಕ್ಕದೇವಿ ಹಾಲುಂಡ ತವರು
ಪೋರ್ಚುಗೀಸರ ಬಡಿಯೆ ಸುರಿಸಿದಳು ಬೆವರು
ಭಾರತದ ಬಿಡುಗಡೆಗೆ ನಾಂದಿ ಹಾಡಿದಳು
(ತೆರೆ ಸರಿದಾಗ ರಾಣಿ ಅಬ್ಬಕ್ಕದೇವಿತನ್ನ ಸೋದರಮಾವ ತಿರುಮಲರಾಯನೊಡನೆ ಶಸ್ತ್ರಾಭ್ಯಾಸ ಮಾಡುತ್ತಿರುವ ದೃಶ್ಯ ಗೋಚರವಾಗುತ್ತದೆ. ಖಣಿಲ್
ಖಟಿಲ್ ಎಂಬ ಖಡ್ಗ ಶಬ್ದದ ಹಿನ್ನೆಲೆಯಲ್ಲಿ ನಿವೇದಕ ಈ ಒಕ್ಕಣೆಯನ್ನು ಬಿತ್ತರಿಸುತ್ತಾನೆ)

ನಿವೇದಕ : ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಮಂಗಳೂರಿನ ಬಳಿ ಇರುವ ಉಳ್ಳಾಲದ ರಾಣಿ ಅಬ್ಬಕದೇವಿ. 1844ರಲ್ಲಿ ಪಟ್ಟಕ್ಕೆ ಬಂದ ಇವಳು ಗೋವೆಯ ಪೋರ್ಚುಗೀಸರನ್ನು ಭಾರತದಿಂದ ಹೊಡೆದೋಡಿಸುವ ಪಣತೊಟ್ಟಳು. ಪತಿ ಬಂಗರಾಜನನ್ನೂ ಮಕ್ಕಳು ತಿರಮಲದೇವಿ ಮತ್ತು ಚಂದ್ರಶೇಖರ ರಾಯರನ್ನೂ ಸಹ ಸ್ವಾತಂತ್ರ್ಯಕ್ಕಾಗಿ ಬಲಿಕೊಟು, ದೇಶದ್ರೋಹಿ ಕಾಮರಾಜನ ಕೈತವಕಕೆ ಸಿಕ್ಕು ರಣರಂಗದಲ್ಲಿ ಹೋರಾಡುತ್ತಲೇ ಮಡಿದಳು.

ಆ ವೀರವನಿತೆಯ ಧೀರ ಸಾಹಸ ಇಲ್ಲಿದೆ. ಮತ್ತೆ ಇಲ್ಲಿದೆ ಆ ಕರುಣ ಕಥೆ ! (ಅಭ್ಯಾಸ ನಡೆಯುತ್ತಿರುವಾಗಲೆ ಓರ್ವ ಪೋರ್ಚುಗೀಸ್ ರಾವುತನ ಪ್ರವೇಶ. ಅವನು ಗೋವೆಯಿಂದ ಬಂದವನು ಓಲೆಯನ್ನು ರಾಣಿಯ ಕೈಗೆ ಕೊಡುವನು ಅವಳು ಓರುತ್ತಿರಲು)
ನರ್ತಕಿಯರು : ಕ್ಲಿಪ್ ಕ್ಲಾಪ್ ಕ್ಲೆಪ್
ಕ್ಲಿಪ್ ಕ್ಲಾಪ್ ಕ್ಲೆಪ್
ಕುದುರೆ ಗೊರಸು ಚಿಪ್
ಕೈಯಲಿ ಓಲೆ ಸ್ಲಿಪ್
ಗೋವೆ ಕಾವು ರಪ್ ಪ್
ಪೋರ್ಚುಗೀಸರ ಪಫ್
(ಹಾಡು ಹರಿವಾಗ ಕ್ರಿಯೆ ನಡೆಯುತ್ತಿರಬೇಕು)

ಅಬ್ಬಕದೇವಿಯ ಬಳಿಯಲ್ಲಿ
ನಿಂತರನು ರಾವುತ ಶಿಸ್ತಿನಲಿ
ತೆರೆದನು ಓಲೆ, ಓದಿದ ಬಾಲೆ
ಹರಿದಳು ಕತ್ತಿಯ ಚಳಕದಲಿ
(ಕತ್ತಿ ಇರಿದು ಓಲೆಯನ್ನು ಎರಡು ಹೋಳು ಮಾಡುವಳು )
ಎರಡೂ ಚೂರನು ಕಾಲಲಿ ತುಳಿದು
'ಇದುವೇ ಉತ್ತರ ನಿನ್ನೊಡೆಯನಿಗೆ"
ಎಂದಳು ಕೆಂಡವ ಕಾರುತಲಿ !
ದೂತನು ವಂದಿಸಿ ತೊಲಗಿದ ಮೇಲೆ
ಸೋದರ ಮಾವಗೆ ನುಡಿದಳು ಪ್ರಬಲೆ –

ಅಬ್ಬಕ್ : ಮಾಮಾಶ್ರೀ,

ಭಾರತೀಯರು ನಾವು ಬಂಧುಗಳು ಬಾಮಧವರು
ಪೋರ್ಚುಗೀಸರಿಗೇಕೆ ಕೊಡಬೇಕು ಕಪ್ಪ?
ಓಲೆಯಟ್ಟಿಹನಿದೋ ಆ ಗೋವೆ ಗವರ್ನರ್
ಸೊಕ್ಕಿನವನಿಗೆ ನಾನು ತಕ್ಕುದೆ ಗೈದೆ

ತಿರುಮಲ  ಒಳಿತಾಯ್ತು ಮಗಳೆ, ಒಳ್ಳಿತನೆ ಗೈದೆ !
ಅದರೀ ಸ್ಥಿತಿಗತಿಗೆ ಕಾರಣರು ನಾವೆ !
ಭಾರತೀಯರುಗಳಲಿ ಐಕಮತ್ಯವೆ ಇಲ್ಲ
ಅಸೂಯೆ ಅಸಹನೆ ; ಅಲ್ಪಮತತಿಗಳೆ ಎಲ್ಲ
ಇದರ ಲಾಭವ ಪಡೆದು ಮೆರೆಯುತ್ತಿಹರವ್ವ
ಪರದೇಶಿ ಪೋರ್ಚುಗರು, ಬಿಳಿತೊಗಲ ಆಂಗ್ಲರು

ಅಬ್ಬಕ್  ಅಹುದು ತಿರುಮ ಮಾಮ, ಅಹುದು ಮಾಮಶ್ರೀ
ಜ್ಞಾತಿಕಲಹಗಳಿಂದ ಹೋರಾಡಿ ಮಡಿದೆವು
ನಮ್ಮ ಗಓರಿಯ ನಾವೆ ತೋಡಿಕೊಂಡಿಹೆವು
ಸಂಘಟನೆ ಶ್ರೇಯಕರ ಹೋರಾಟ ಪ್ರೇಯಕರ
ಹೊರಗಡೆಯ ಶತ್ರುವಿಗೂ ಮಿಗಿಲಹರು ಒಳಗಿಹರು !
ಮನೆಯ ಒಳಗಣ ಕಿಚ್ಚು ತಾವಾಗಿ ಸುಡುತಿಹರು
ಮಾಮಾ, ಇವರು ಗೋಮುಖವ್ಯಾಘ್ರಗಳು
ಹಡಗಿನೊಡಲನೆ ಕೊರೆವ ಪ್ಜ್ಛನ್ನ ಕಿಟಗಲು ?

ತಿರುಮಲ :ಯಾವನವ ಹೇಳಮ್ಮ? ದೇಶದ್ರೋಹಿಯಾದಾರು ?
ಯಾರವನು ಉಸುರು ಮಗಳೇ?

ಅಬ್ಬಕ : ಮಂಗಳೂರಿನ ಮಡೆಯ ಮಾಯವಿ ಕಾಮುಕ
ವೀರನರಸಿಂಹನಾ ಸೋರಳಿಯನು ಮಾಮ !

ತಿರುಮಲ : ಕಾಮರಾಯನೆ ತಾಯಿ
ಅಬ್ಬಕ್ಕ : ಅಹುದು !ಅಹುದವೆನ ಮಾನ !
ಮಂಗಳೂರಿನ ಕಾಮ, ರಾಷ್ಟ್ರಘಾತಕ ಕಾಮ !
ಮಂಗಳೂರಿನ ರಾಜ್ಯಕೊಡೆಯನಾಗಲು ಬಯಸಿ,
ಕಾಮತುಂಬಿದ ಕಣ್ಣ ಹರಸಿದನು ನನ್ನೆಡೆಗೆ
ಅಂದೊಂದುದಿನದಂದು ರಾಣಿವಾಸ ಬಳಿಯ ಒಳಗಿನೋವರಿಯಲ್ಲಿ–

(ದೃಶ್ಯ ಬದಲಾವನೆ–ಫ್ಲಾಷ್ ಬ್ಯಾಕ್)

(ಅರಮನೆಯ ಕೊಠಡಿಯಲ್ಲಿ ಅಬ್ಬಕದೇವಿಯ ಸೆರಗುಹಿಡಿದು ಹಾಡುತ್ತಾ, ಕುಣಿಯುತ್ತಾ ಕಾಮರಾಯನ ಪ್ರವೇಶ)

ಕಾಮ : ಅಂಬೆ ಅಂಬೆ ಅಂಬಿಕೆ
ಬಾರೆ ಚಂದ್ರ ಮಮಚಕೆ

ತೋಳಿನಲ್ಲಿ ತೋಳ ಬೆರಸಿ
ರಾಗತರಿಯ ಲಯಲಯದಲಿ
ಪ್ರೇಮಗೀತೆ ಹಾಡುವಾ!
ನಾನೆ ಕಾಮ ನೀನೆ ರತಿ
ಇಂದಿನಿಂದ ಸತಿಪತಿ
ಹತ್ತಿಸೋಣ ಬಾರೆ ಪ್ರಣತಿ
ಆಲಿಂಗನಕೆ ಧಾಔತಿ !
(ಅಪ್ಪಲು ಮುಂದೆ ಹೋಗುವವನು ಅಬ್ಬಕ ಛಂಗನೆ ದೂರ ಹಾರಿ ನಿಂತು)
ಅಬ್ಬಜ : ದೂರಸರಿ ಮಾಯಾವಿ ದೂರಸರಿ ಕಾಮ
ಬಂಗರಾಜನ ಮಡದಿ ನದಿಬೆಯು ನಾನು
ಮಕ್ಕಳೆರಡರ ತಾಯಿ ಕುಲದೇವಿಯಾನು !
ಕಾಮ : ಯಾರಾದರೇನಗೇನು ? ನನ್ನ ಬೇಟದ ಊಟ
ಉಂಡೆ ಉಣುವೆನು ನಾನಜ ಪಡೆವೆ ಕೂಟ !

ಅಬ್ಬಕ : ಅಡಿಯ ಮುಂದಿಡು ನೋಡು, ಕಡಿವೆ ಕಾಲುಗಳನ್ನು
ಚಾಚಿದರೆ ತೋಳುಗಳ ಹೋಳುಗೈವೆ
ಎದೆಯನಿಬ್ಬಗಿ ಮಾಡಿ ನೆತ್ತರನು ಕುಡಿಯುವೆನು
ಒಂದು ಕಾಲನು ಮೆಟ್ಟಿ ಮತ್ತೊಂದು ಸಿಗಿಯುವೆನು !

ಕಾಮ : ಎನಗೈಯಲು ಬಲ್ಲೆ ನೋಡಿಎಯ ತೀರುವನು !
ಸೆರೆಗಳೆದು ಉಡೆಗಳದು ಭೋಗಿಸುವೆ ಅಂಬೆ !

ಅಬ್ಬಕ : ಕಾಮ, ಕಾಮಕೀಟವೆ ನಿನ್ನ ಎದೆಮೆಟ್ಟೆ ನಿಲ್ಲುವೆನು
ಹುಟ್ಟಳಿಸಿ ಹುಡಿಗೈದು ಸುಟ್ಟುರುಹಿ ಕೆಡಹುವೆನು

(ಎಡಗೈಯಿಂದ ತಳ್ಳಿದ ಕೂಡಲೆ ಅಂಗಾತ ಬೀಳುವನು ಅಬ್ಬಕ ತನ್ನ ಸೊಂಟದ ಕಿಗ್ಗಜಾರಿಯ ತೆಗೆದು ಅವನ ಎದೆಮೆಟ್ಟಿ ನಿಂದು ಅವನ ಅರ್ಧಮೀಸೆಯನ್ನು ಕಠಾರಿಯಿಂದ ಹರಿಯುವಳು. ಎಡಗೈಯಲಿ ಹಿಡಿದು ನೇಪಥ್ಯಕ್ಕೆ ಸರಿಯುವಳು ಅರೆಮೀಸೆಯ ಸರದಾರ ಮೇಲೆದ್ದು ನಾಚಿ ತಲೆ ಮೇಲೆ ಮುಸುಕಿಟ್ಟು ಹೊರಕ್ಕೆ ನಿಧಾನವಾಗಿ ಹೆಜ್ಜೆ ಇಡುತ್ತಾ –
ಕಾಮ : ಅಪಮಾನ ಅಪಮಾನ
ಸೊಕ್ಕು ಸೊಗಡಿನ ಹೆಣ್ಣೆ !
ಸೆರಗಿನಲಿ ಗಂಟಿಟ್ಟುಕೊ
ಮುಯ್ಯಿಗೆ ಮುಯ್ಯಿ
ಸೇಡಿಗೆ ಸೇಡು
(ನಿರ್ಗಮನ)
(ಹಿಂದಿನ ದೃಶ್ಯ ಗೋಚರ, ತಿರುಮಲ ಮತ್ತು ಅಬ್ಬಕರ ಸಂಭಾಷಣೆ)

ಅಬ್ಬಕ : ಅವನೀಗ ಪೋರ್ಚುಗೀಸರ ಸೇರಿ ಸನ್ನಾಹ ನಡೆಸಿಹನು !
ಪರದೇಶಗಳಿಗಿವನೆ ಆಶೆಯಾಗಿಹನು
ಕಡಲ ತೀರದ ನಮ್ಮ ಮೀನಿಗಾರರಿಗೆಲ್ಲ ಕಟ್ಟಾಜ್ಞೆ ಮಾಡಿಸಿಹ !
ಮೀನ ಹಿಇಯಲು ಅವರ ಅನುಮತಿಯು ಬೇಕೆಂತೆ !
ಕಾಮರಾಯನ ನಾನು ಮೊದಲು ಬಲಿಗೊಡುವೆ
ತರುವಾಯ ಪೋರ್ಚುಗರ, ಗೋವೆಯಿಂದೇಕೆ
ಭಾರತ ಗಡಿಯಿಂದ ಅಟ್ಟಿ ನಾ ಓಡಿಸುವೆ

ಬೇಕಲದ ನಾಡವರು. ಬಸರೂರಿನರಸರು
ಕಲ್ಲಿಕೋಟೆಯನಾಳ್ವ ಶೂರ ನಾಡಿಗರು
ಎಲ್ಲರನು ಎಲ್ಲೆಡೆಯು ಎತ್ತಿಕಟ್ಟಿಹೆ ಮಾಮ
ಹೋಗಿಹರು ಗೋವೆಗೆ ಕೋವಿ ಕೈದುಗಳೊಡನೆ
ಇಷ್ಟರಲ್ಲಿಯೆ ಬಹುದು ಯುದ್ದ ಫಲಿತಾಂಶ!

ನರ್ತಕಿಯರು :
ಎಚ್ಚರಾ ! ಎಚ್ಚರಾ ! ತಾಯಿ ಎಚ್ಚರಾ !
ಅಂಬೆ ಅಂಬಿಕೆದೇವಿ ಎಚ್ಚರಾ ! ಉಳ್ಳಾಲ ರಾಣಿಯೇ ಬಲು ಎಚ್ಚರಾ !
ಕಾಮರಾಜನ ಬಗೆಗೆ ಎಚ್ಚರಾ ! ದೇಶದ್ರೋಹಿಯ ಬಗೆಗೆ ಎಚ್ಚರಾ !
ಎಚ್ಚರಾ ತಾಯಿ ಎಚ್ಚರಾ !

ಪೋರ್ಚುಗೀಸರ ಬಗೆಗೆ ಎಚ್ಚರಾ 1
ಸ್ವಾರ್ಥಸಾಧಕರಿಹರು ಎಚ್ಚರಾ ! ಎಚ್ಚರಾ ತಾಯಿ ಎಚ್ಚರಾ !

(ಮೀನುಗಾರ ಮೊಗವೀರರು ದೋಣಿ ನಡೆಸುತ್ತಾ)
ಮೊಗವೀರರು :
ಅಲೆಲಾ ಲೊಯ್ ಅಲೆಲಾಲಾಲೊಯ್
ಅಲ್ಲೆ ಲಲಲೋಯ್ ಅಲೆಲಲಲ ಲೋಯ್ ॥

ಪಡುಗಡಲ ಮಡಲಾಗೆ ತೊಡಮೀನು ಗುಡಗ್ಯಾವೆ
ಬಿಡದೆ ದಿಬ್ಬಣಕೆ ಹೊರಟ್ಯಾವೆ ॥
ಹೊಯ್ಯಾರೆ ಹೊಯ್ಯ ಹೊಯ್ ಹೊಯ್
ಹೊಯ್ಯಾರೆ ಹೊಯ್ಯ ಹೊಯ್ ಹೊಯ ॥
ಅಲೆಲಾ ಲೊಯ್ ಅಲೆಲಾಲಾ ಲೊಯ್
ಅಲೆಲಾ ಲೊಯ್ ಅಲೆಲಾಲಾ ಲೊಯ್
ಅಲ್ಲೆ ಲಲಾಲಾಯ್ ಅಲೆಲಲಲ ಲೋಯ್ ॥

ಗೋವೆಯ ದೇವೀಗೆ ಹಾಸಾದ ಬಲೆ ಬೀಸಿ
ಹಿಡಿದೇವು ಪೋರ್ಚುಗೀಸ ಕೊರವಗಳ
ಹೊಯಾರೆ ಹೊಯ್ಯ ಹೊಯ್ ಹೊಯ್
ಹೊಯ್ಯಾರೆ ಹೊಯ್ಯ ಹೊಯ್ ಹೊಯ್
ಅಲೆಲಾಲೊಯ್ ಅಲೆಲಾಲಾ ಲೊಯ್
ಅಲ್ಲೆ ಲಲಾಲೊಯ್ ಅಲೆಲಲಲ ಲೋಯ್ ॥

ನರ್ತಕಿಯರು :
ಮೊಗವೀರ ಧೀರರು ದೋಣಿಯಲಿ ಸಾಗಿದರು
ತಿಮ್ಮಣ್ಣನಾಯಕನ ಆಜ್ಞೆಯಲಿ
ಗುಟ್ಟಾಗಿ ಆಯುಧ ರಟ್ಟಗಿ ಬಲೆ ಬುಟ್ಟಿ
ನೆಟ್ಟಾಗೆ ನಡೆದಾರು ಪಂಜಿಮಕೆ
ಗೋವೆಗೆ ಗಾಳವ ಹಾಕಲು ಸಜ್ಜಾಗಿ
ಮಾರುವೇಷಗಳ ತಳೆಯುತಲಿ

(ಹಿಂದಣ ತೆರೆ ಸರಿದಾಗ ಕಾಣುವುದು ಕುಡುಕರ ಕೂಟ. ರ್‍ಯಾಕ್=ಎನ್=ರೋಲ್ ಇಲ್ಲವೇ ಬ್ರೇಕ್ ಡ್ರಾನ್ಸ್ ನಡೆಯುತ್ತಿರುತ್ತದೆ. ಕತ್ತಲು ಬೆಳಕಿನ ಜಾಲ. ತಬ್ಬಿಕೊಂಡು ಕುಣಿಯುವ ಹೆಣ್ಣು–ಗಂಡು ಜೋಡಿಗಳು. ಪಾನ ಸರಬರಾಯಿ, ಕುಡಿತ, ಮೆರೆತ ಮೋಜು ಇವುಗಳಿಗೆ ತಕ್ಕ ರಂಗಸಜ್ಜು)

Drinks-N- Drinks
Hoi Mary Hens !
Lovely Shoorts
Heart of Deans !!

ಸೊಕ್ಕಿನ ಹಕ್ಕಿ
ಅಬ್ಬಕ ಗುಬ್ಬಿ
ರೆಕ್ಕೆ ಪುಕ್ಕ
ಸುಟ್ಟೇ ಹೋಯ್ತು ! ಹ ಹ್ಹ ಹ್ಹ ಹ್ಹಾ ॥
ಸಿಯ ಸಿಯ ಸಿಯ ಸಿಯ ಸಿಯ ಸೀಯುತಲಿ
ಕುಯ ಕುಯ ಕುಯ ಕುಯ ಗುಟ್ಟತಲ್ !

(ಕುಡಿತ ಮೆರೆತ ತಾರಕಕ್ಕೆ  ಹೋದಾಗ ವೇಷಧಾರಿ ಮೊಗವೀರರು ಆಕ್ರಮಣ ಮಾಡಿ ಕಾಮರಾಯನನ್ನು ಗೋವೆಯ ಗರ್ವನರರನ್ನೂ ಸೆರೆಹಿಡಿಯುವರು)

ನರ್ತಕಿಯರು :
ಘಟನೆ ಗಂಭೀರವಾಗಿ
ತಟ ವಟ ನಡೆಯದಾಗಿ
ಬಿಡುಗೆ ಬೇಡಿದ ವೈಸರಾಯಿ
ಗೋವೆಯ ಗವರ್ನರ್ ಕಾಮರಯ ಇವರಿಬ್ಬರ
        ಬಿಡುಗಡೆ ಬೇಡಿದನು
ಕದ್ರಿಯ ತುದಿಯಲ್ಲಿ – ಸಿದ್ದರ ನೆಲೆಯಲ್ಲಿ
ಕೌಲೊಂದು ಆಯ್ತು, ಮುಗಿದಿತ್ತು;
ಇಬ್ಬರ ಬಿಡುಗಡೆ ಆಗಿತ್ತು
ನರ್ತಕಿ  – 1 ಆಮೇಲಾಮೇಲ ಆಮೇಲೇನಯತು ?
ನರ್ತಕಿ–2 (ವಚನ) ಸೆಗಣಿಯ ಬೆನಕಂಗೆ ಸಂಪಗೆಯರಳಲ್ಲಿ ಪೂಜಿಸಿದರೆ
ರಂಜನೆಯಿಲ್ಲದೆ ಅದರ ಗಂಜಳ ಬಿಡುವಣ್ಣಾ
        –        ಎಂದ ಅಣ್ಣ ಬಸವಣ್ಣ ಮಾತು ಸತ್ಯವಾಯ್ತು !
ನರ್ತಕಿ–3 ಅಂದರೆ ?
ನರ್ತ್ಕಿ–4 ಅಂದರೇ
ರಾಣಿಯಿಂದುಪಕಾರ ಪಡೆದನಾದರು ಕಾಮ
ಮಾಡಬಾರದ ಕಾರ್ಯ ಮಾಡಿಯೇ ಬಇಎಟ್ಟ !
ಅಬ್ಬಕನ ಪತಿದೇವ ಬಂಗಾರರಾಜನಲಿ
ಸುಳ್ಳು ಸ್ನೇಹವ ತೋರಿ ಕರೆದೊಯ್ದ ಹೊರಗೆ
ಗೋವೆಯಲಿ ಕಾದಿರುವ ಕನ್ಯೆಯರು ಬಹುಮಂದಿ

ಭೋಗಿಸಲು  ದಿನಗಳೇ ಸಾಲದಾಗುವವು
ರಾಜಸೂತ್ರವ ಹಿಡಿದ ಆ ಗುಮಡುಬೀರಿಗೆ
ನಿನ್ನ ಗೊಡವೆಯೆ  ಇಲ್ಲ ಮದಿರಾಕ್ಷಿಗೆ !
ಅಧಿಕಾರವೆನ್ನುವುದು ಅಮಲಿಳಿಯದಾ ಹೆಂಡ॥\

ಬಂಗಾರಿ ಅಂಬಿಕೆಯ ಬಿಟ್ಟು ಕಳೆ, ಸೊಕ್ಕಿಗಾಗಲಿ ಶಾಸ್ತಿ !
ಬಂಗಾರ ಮೈಯವರು ಗೋವೆ ಹೆಣ್ಣುಗಳು !

ನರ್ತಕಿ–2 ಹೆಣ್ಣಿನಾಸೆಯ ತೋರಿ ಬಂಗಾರಿ ಕರೆದೊಯ್ದು
ಗೋವೆಯಾ ದಾರಿಯಲ್ಲಿ ಕೊಲೆಗೈದ ಕಾಮ ।
ಅವನ ಹೆಣ ತುಂಡಾಗಿ ಹದ್ದು ನರಿಗುಣಿಸಾಗಿ
ಹರಿ ಹಂಚಿಹೋಯ್ತು !
ವಂಚನೆಗೆ ದ್ರೋಹಕ್ಕೆ ಕೊನೆಯಿಲ್ಲವಾಯ್ತು !

ನರ್ತಕಿ–3 ಮುಂದೆ ಮತ್ತೇನಾಯ್ತು ?
ನರ್ತಕಿ–4 ಆಗಬಾರದುದಾಯ್ತು ! (ರಂಗದ ಮೇಲೆ ನಸುಕು ಮುಸುಕು ವುದು ಕಪ್ಪು ಬಟ್ಟೆ ಹೊಡೆದ ಚಂದಯ್ಯ ಕಠಾರಿ ಹಿಡಿದು ಪ್ರವೇಶಿಸುವನು. ಮಂಚ ಮೇಲೆ ಭಾಗೀರಥಿ ಎಂಬ ದಾದಿ ಅಬ್ಬಕ್ಕನ ಎರಡೂ ಮಕ್ಕಳನ್ನು ಮಲಗಿಸಿಕೊಂಡು ಮಧ್ಯದಲ್ಲಿ ಮಲಗಿರುವಳು. ಹಾಡು ಹರಿದಂತೆ ಕ್ರಿಯೆ ರಂಗದ ಮೇಲೆ ನಡೆಯುತ್ತಿರಬೇಕು)

ಕಾಮರಾಜನ ಭಂಟ ಚಂದಯ್ಯನೆಂಬವನು
ಉಳ್ಳಾಲದವರಮನೆಗೆ ಸೋಗಿನಲಿ ಹೊಗಿ –
ದಾದಿ ಬಳಿ ಮಲಗಿದ್ದ ಚಂದ್ರಶೇಖರನನ್ನು
ಉಳ್ಳಾಲ ವಂತದಾ ಗಂಡು ಕುಡಿಯನ್ನು –

–(ಪ್ರತ್ಯಕ್ಷ ದೃಶ್ಯ ಕೊಲೆ, ಮಗು ಚೀರಿದಾಗ ಗಪ್ಪನೆ ಮೇಲೇಳು ತ್ತಾಳೆ ದಾದಿ ಭಾಗೀರಥಿ, ತಲೆದಿಂಬಿನ ಖಡ್ಗವಿರಿದು ಕೊಲೆ ಗಡುಕ ಚಂದ್ರಯ್ಯನ ಮೇಲೆ ಬೀಳುತ್ತಾಳೆ)

ಭಾಗೀರಥಿ ಓ ಪಾಪಿ ! ಚಂದಯ್ಯಾ
ಕಂದನನು ತಿಂದವನೆ ಪರಮ ಪಾತಕಿಯೆ
ನೆಲದ ಋಣಹರಿಯಿತ್ತು ನಿನಗಿಂದೆ ಮುಕ್ತಿ !
ನನ್ನ ಕಣ್ ತಪ್ಪಿಸಿ ನೀ ಬದುಕಲಾರೆ !
ನನ್ನಖಡ್ಗಕೆ ನೀನೆ ಮೊದಲಾಹುತಿ !

(ಕ್ಷಣಕಾಲ ಹೋರಾಟ, ಭಾಗೀರಥಿಯ ಖಡ್ಗಕ್ಕೆ ಚಂದಯ್ಯನ ಕತ್ತಿ ತುಂಡಾಗುವುದು. ಅವನನ್ನು ಆ ಕೂಡಲೆ ಇರಿಯುವಳು. 'ಬಾಗೀ' ಎಂದು ಚೀರುತ್ತಾ ರಾಣಿಯ ಆಗಮನ. ನೆತ್ತರಿನ ಮಾಡುವಿನಲ್ಲಿದ್ದ ಮಗನನ್ನು ಎತ್ತಿ ಮುದ್ದಾಡುವಳು. ಒಂದು ಕಡೆ ಮಗ, ಮತ್ತೊಂದು ಕಡೆ ಮಗಳು ತಿರುಮಲೆ. ಚಂದಯ್ಯನ ಹೆಣದ ಬದಿಯಿಂದಲೇ ಶಿರಬಾಗಿ ಖಡ್ಗವನ್ನು ನೆಲಕ್ಕೆ ಚಾಚಿ ವಂದಿಸುತ್ತಾ ನಿಂತಿರುತ್ತಾಳೆ ಭಾಗೀರಥಿ)

(ತಿರುಮಲೆ ಅಣ್ಣಾ ಅಣ್ಣಾ ಎಂದು ಅಂಗಲಾಚುವಳು. ರಾಣಿ ಇಬ್ಬರನ್ನೂ ತಬ್ಬಿಕೊಂಡು)
ಅಬ್ಬಕ : ಅಯ್ಯೋ ನನಕಂದ, ಅಯ್ಯೋ ನನ್ನ ಕಟ್ಟಾಣಿ !
ಕಣ್ಣೊಡೆಯ ಬಾ ದೇ ಎದೆ ಬಿರಿಯಬಾದೆ । (ಅಳುವಳು ಎಲ್ಲರೂ ಅಳುವರು)
(ಅಮ್ಮಾ ಅಮ್ಮ ನನ್ನಣ್ಣನೆಲ್ಲಮ್ಮ? ಎಂದು ತಿರುಮಲೆ ತಾಯಿಯನ್ನು ತಬ್ಬುವಳು)
ನಿನ್ನಣ್ಣನಿಲ್ಲಿಹನು ಮಾತನಾಡಮ್ಮ
ತಿರುಮಲೆ ಚಂದ್ರಶೇಖರ ರಾಜ ಈ ದೊಡ್ಡರಾಯ !
ಇವನಿಂದು ಸತ್ತಿಲ್ಲ ಅಮರನಾಗಿಹನು । ಅಮರಾನಿಗಹನು ।
ಬಾಗೀ ಸನಿಹಕ್ಕೆ ಬಾ ಬಾಗಿ,
ನೀನ ವೀರನಾರಿ ! ನಿನ್ನ ಸಾಹಸವಿಂದು
ಮಗನ ಮರಣವ ಮುಚ್ಚಿ ಮರೆ ಮಾಡುತಿಹುದು !

ಬಾಗಿ, ಬಾಗೀ ನನ್ನ ಭಾಗೀರಥಿ
ನೀನೆನ್ನ ಗೆಳತಿ ಅಲ್ಲ ನನ್ನ ಕಂದನ ತಾಯಿ
ಈ ನನ್ನ ತಿರುಮಲೆ ನಿನ್ನ ಮಡಿಲಿನ ಹಸುಳೆ
ಅವಳ ರಕ್ಷಣೆ ನಿನದು ಸಲಹು ತಾಯಿ । ಶಿಶುವಿಂಗೆ
ಸಂಸ್ಕಾರ ಗೈಯು ತಾಯಿ ॥

(ಮೇಲೆದ್ದು ರೋಷದಿಂದ)

ಪಾಪಿ ಕಾಮನ ಕೊಂದು ದೆಸೆದೆಸೆಗೆ ಬಲಗೊಟ್ಟು
ರಾಷ್ಟ್ರ ನಿಷ್ಕಂಟವ ಮಾಡಿ ಬರುವೆ !
ಪೋರ್ಚುಗೀಸರ ಪರ್ಚಿ ಗೋವೆಯಿಂದಟ್ಟುವೆನು
ಭಾರತದ ಬಿಡುಗಡೆಗೆ ಹೋರಾಡುವೆ
ನನ್ನ ಗಂಡನಿಗಿಂತ ನಾಡೆನಗೆ ಮಿಗಿಲು
ನನ್ನ ಮಕ್ಕಳಿಗಿಂತ ಪ್ರಜರೆನ್ನ ಒಕ್ಕಲು
ಸೋಮನಾಥನ ತಿಸುಳ ಡಮರುಗಗಳಿರುವ
ಕನ್ನಡದ ಧ್ವಜಪಟವ ಎತ್ತಿ ಹಿಡಿವೆ ।
ಜೈ ಸೋಮನಾಥ । ಜೈ ಕನ್ನಡಾಂಬೆ ।
ಜಯವಾಗಲೀ ನಿನಗೆ ಬನಶಂಕರಿ ॥

ನರ್ತಕಿಯರು :ಏಳು ಬಲ್ಲಾಳ ರಾಣಿ ಏಳು ಸಿಂಗಾರ ವೇಣಿ
ಏಳವ್ವ ಹಡಗು ಹುಡಿಯಾಯ್ತು !
ಏಳವ್ವ ಹಡಗು ಹುಡಿಯಾಯ್ತು ಪಡುವಲ
ಬಂಗಾರ ಕುಂಭ ಚೂರಾಯ್ತು ॥ಏಳು॥

ಭೂದೇವಿ ಭುಗಿಲೆದ್ದು ನೀರು ಬಾಯಾರಿದ್ದು
ಅನ್ನವೆ ಹಸಿದೈತೆ ಈ ನಾಡಲಿ
ಕಡಲೆಲ್ಲ ಕುದಿದೆದ್ದು ಮಡಿಲು ಮಣ್ಣಾಗೈತೆ
ಗಾಳಿಯು ಬಯಸ್ಯೆತೆ ಬೀಸಣಿಗೆ ॥ಏಳು॥

ಕಾಲವೆ ಕೆಟ್ಹೋಗಿ ಕಾಗೆ ರಾಗೀತಿಂದು
ತಣ್ಣೀರಾರ್‌ಸಿ ಕುಡಿಯೋ ಕಾಲ ಬಂದೈತೆ !
ಎಚ್ಚರ ನಮ್ಮವ್ವ ತಾಯಿ ಅಬ್ಬಕದೇವಿ
ಏನೋ ಗಂಡಾಂತರ ಕಾದೈತೆ ॥ಏಳು॥

(ಯುದ್ಧದ ಕೋಲಾಹಲ, ಚೀರಾಟ ಬೋರಾಟ ! ಖಡ್ಗಗಳ ಖಣಿ ಖಟಿಲುವಾದ, ಇವುಗಳ ನಡುವೆ )

ಅಬ್ಬಕ : ಕೆಚ್ಚೆದೆಯ ಕಟ್ಟಾಳುಗಳೇ
ಹುಟ್ಟೊಮ್ಮೆ, ಸಾವೊಮ್ಮೆ ಅದಕೇಕೆ ಭಯ ನಿಮಗೆ ?
ಬರಲಿ ಆ ಫರಂಗಿಗಳು, ಆ ಕೆಂಪು ಕೋತಿಗಳು ।
ಅವರೊಡೆದ ದೇಗುಲ, ಸುಲಿದಂಥ ಸುಲಿಗೆ

ಮಾಡಿದಂತಹ ಪಾಪ ಪುಂಡಾಟಗಳಿಗೆ
ತಕ್ಕುದನೆ ಗೈಯುವನು ಕಡಲಾಚೆಗೋಡಿಸುವೆ !

ಪೂಂಡು ಪೋರ್ಚುರಿಗಿಂದೆ ಪೋರ್ಚುಲ್ ತೋರಿಸುವೆ !
ಬರಲಿ, ಮೇಲೇರಿ ಬರಲಿ
ನಮ್ಮೂರ ಗುಳ್ಳೆನರಿ ಕಾಮರಾಜ !

ಕಾಮ: ಬಂದೆನಿದೊ ಮಹರಾಣಿ
ನಮ್ಮೂರ ಹಾವ್‌ರಾನಿ !
ನಿನ್ನ ಗಂಡನ ಕೊಂದೆ ನಿನ್ನ ಮಗನನು ತಿಂದೆ
ನನಗೆ ನೆತ್ತರದಾಹ, ರಾಜ ಗದ್ದುಗೆ ಮೋಹ !
ಅವನು ಪೂರೈಸಲಿಕೆ ಹಿಡಿದಿಹರು ವಈಳ್ಯ !
ಪೋರ್ಚುಗೀಸರು ನನಗೆ ಕೊಟ್ಟಿಹರು ಸುಳ್ಯ !

ಅಬ್ಬಕ : ಸುಳ್ಯ ಬಾರ್‌ಕೂರುಗಳೆ ನಿನ್ನ ಶ್ಮಶಾನಗಲು !
ಪಾತಕಿ, ಇರಿ ಖಡ್ಗ, ಹೋರಾಡು,
ರಾಣಿ ಅಬ್ಬಕ ದೇವೀ ನಿನ್ನ ಭಾಗದ ಮೃತ್ಯು
ಹೂಂ ತಡವೇಕೆ ಸಾಯಲನುವಾಗು

(ಖಡಾಖಾಡಿ ಹೋರಾಟ ನಡೆಯುವುದ. ಕಾಮನನ್ನು ದೂರಸರಿಸಿ ಅವಳ ಸುತ್ತ ಫರಂಗಿ ಹತ್ತು ಜನ ಮುತ್ತುವರು. ಸುತ್ತುವರಿಯುತ್ತದೆ. ರಾಣಿ ಹೋರಾಡಿ ಕೆಳಗುರುಳುವರು. ತತ್ತರಿಸಿ ತಡವರಿಸಿ ಮೇಲೆದ್ದ ರಾಣಿ)

ಪಾಪಿಗಳಾ
ಥೂ ನಿಮ್ಮ ಯೋಗ್ಯತೆಗೆ । ಹತ್ತು ಜನ ಮುತ್ತಿದಿರಿ
ಹೆಣ್ಣೊಂದ ಬಲಿಗೊಡಲು । ನಿಮಗಿರಲೆ ಬೇಕಿತ್ತು ಕಿಂಚಿತ್ತು ನಾಚಿಕೆ ।
ನಿಮ್ಮ ಪಾದಾರ್ಪಣಕೆ ಮಲಿನವಾಯಿತು ನನ್ನ ಕರ್ನಾಟಕ ।
ಕನ್ನಡದ ಸಿರಿದೇವಿ ಕಣ್ಣೀರ ಕರೆಯುವಳು
ಅವಳ ಕಣ್ಣೀರಿನಲಿ ಕರಗಿ ಹೋಗಿರಿ ನೀವು
ಕೊಚ್ಚಿ ಹೋಗಲಿ ಕಾಮ, ಆ ದೇಶದ್ರೋಹಿ !
ಆಯಿತು ! ಅಧರ್ಮ ಅನ್ಯಾಯಕ್ಕೆ ಜಯವಾಯಿತಿಂದು !
ಕಣ್ಣಾಲಿ ತಿರುಗುತಿವೆ, ಉಸಿರಾಟ ಕುಂಟುತಿದೆ !
ನನ್ನ ಧಮನಿಯ ರಕ್ತ ತಣ್ಣಗಾಗುತ್ತಲಿದ !

ಹೋಗಿ ಬರುವೆ, ನನ್ನ ಕನ್ನಡಿಗರೇ
ನೀವೆಲ್ಲ ಬೀಳ್ಕೊಂಡಿರಿ, ಪಾಪಕ್ಕೆ ಪ್ರೋತ್ಸಾಹ ನೀಡದಿರಿ ನೀವು.
ಹೋಗಿ ಬರುವೆ ಹೋಗಿ ಬರುವೆ !
ಓಂ ಶಾಂತಿ ಓಂ ಶಾಂತಿ ॥

(ಒರಗುವಳು)
(ಕ್ಷಣಕಾಲ ರಂಗ ಮೌನದ ಮುದ್ದೆಯಾಗುವುದು)

ಹಿನ್ನೆಲೆಯಲ್ಲಿ:

ದೇಶಕ್ಕೆ ದುಡಿದುಡಿದು ಮಡಿದಿತ್ತು ದೇಹ
ಬೆಳಗಿನೊಳು ಬೆಳಕಾಗಿ ಕೂಡಿತ್ತು ಭಾವ !

**ಮದುವೆ**

**ನಿರ್ಮಾತೃ**

ಶ್ರೀ ಎಸ್.ಆರ್.ಆರಾಧ್ಯ
ಸಾಹಿತ್ಯ ಸಂಗೀತ
ಡಾ.ಸಾ.ಶಿ.ಮರುಳಯ್ಯ ಶ್ರೀ ಬಿ.ಆರ್.ಹೇಮಂತ್‌ಕುಮಾರ್

ನಿರ್ದೇಶನ
ಶ್ರೀಮತಿ ಬಿ.ಆರ್.ಮಂಜುಳಾ

**ಮದುವೆ**

ವಿವಾಹಂ ಅನುರಾಗ ಬಂಧು
ಪ್ರಣಯ ಪ್ರದೀಪಂ ಪ್ರೇಮ ಪುಷ್ಕರಾವರ್ಷಂ ।
ಸ್ತ್ರೀ ಪುರುಷ ಸಹಯೋಗ ಸಹಕಾರ ಋಊಪಂ
ಗ್ರಾಹಸ್ಥ್ಯ ದೀಕ್ಷಾಂ ಸ್ಥಿತಂ ಂಸಾರ ಸರೋದಯಮ ॥
ಮದುವೆ !
ಓಹ್! ಎಂತಹ ಸುಂದರ
ಸುಮಧುರ ಶಬ್ದ!

ವ್ಯಕ್ತಿ ಜೀವಿತದಲ್ಲಿ ನಡೆಯಲೇಬೇಕಾದ ಒಂದು ಶ್ರೇಷ್ಠ ಸಂಸ್ಕಾರ ! ಅದು ಪ್ರಣಯಿಗಳ ನಡುವೆ ನಡೆಯುವ ಲೈಂಗಿಕ ಒಪ್ಪಂದವಲ್ಲ: ಅದೊಂದು ಧರ್ಮ ಭಾರತೀಯರಿಗೆ! ಗಂಡು ಹೆಣ್ಣುಗಳು ಕೂಡು ಸ್ವೀಕರಿಸಿದ ಬಾಳ ದೀಕ್ಷೆ !
ಆ ದೀಕ್ಷಾ ಪ್ರಕ್ರಿಯೆಯಲ್ಲಿ ಕರ್ನಾಟಕದ್ದೇ ಒಂದು ವೈಶಿಷ್ಟ್ಯ: ವೈವಿಧ್ಯವೂ ಹೌದು.
ಮದುವೆ ಗೊತ್ತಾದ ಹಿಂದಿನ ದಿನ –
ಅದು ಬೀಗರ ಬರುವಾ ದಿನವಸಶ
ಅದು ಹೆಣ್ಣಿನ ಬಣ್ಣದ ದಿವಸಶ
ಪಟ್ಟೆಯ ಸೀರೆಯನುಟ್ಟು ಬಟ್ಟಲ ಕುಂಕಮವಿಟ್ಟು
ಹಾಲುಕ್ಕಿ ಜೇನು ಹರಿಯಲಿ ಮುಂದೆ
ನಾ ಸೇರುವ ಮನೆಯಲಿ ಎಂದು
ಹಾಡಿ ಹರಸಿ ಬಹಳು
ಓಲಾಡಿ ನಲಿದು ಬಹಳು !

ಅದು ಬೀಗರು ಬರುವಾ ದಿವಸs
ಸಿಹಿಯೋಗರ ಘಮಘಮ ಪಾಯಸ
ಹಳ್ಳಿಯ ತುಂಬಾ ಹಬ್ಬs ।
ಮದುವೆ ಮದುವೆ ಮದುವೆ ॥ಮದುವೆ॥
ಮನಸಿಗೆ ಮುದವನು ತರುವೆ !
ಅದ್ದೂರಿಯಿಂದ ಆನಂದ ಕಂದ

ಅಂದದ ಚೆಂದದ ಮದುವೆ ॥

ಅಂದಿನ ಬೆಳಗಿನ ಮುಂದೆ
ಚೆಂದದ ಚೆಲುವಿನ ಮಂದೆs
ಹೊಸ ಹೊಸ ಬಣ್ಣ ಹರಿಶಿಣ ಸುಣ್ಣ
ಹಸೆಮಣೆ ರಂಗೋಲೆ ಸಿಂಗಾರ !
ಮೈಯೆಯಲ್ಲ ಬಂಗಾರ ವಯ್ಯಾರ !

ನಾಗರ, ಪಿಲ್ಲಿ, ಚೌಲೀತುಂಬು,
ಅತ್ಕಟ್ಟು ಅಡ್ಡಿಕೆ, ಮೂಗಿನ ತುಂಬು
ಕೆನೆನಗೆ ಸರಪಣಿ, ಜುಂಕಿ, ಮಕ್ಕಿ
ಜಡೆಹೂ ತಾವರೆ ಕುಡಿಯಲಿ ಕುಚ್ಚು !
ಕಿವಿಯಲಿ ಓಲೆ, ಸೊಂಟದ ಡಾಬು.
ಕಾಲಿನ ಅಂದುಗೆ ಕಿರುಗೆಜ್ಜೆ
,
ಹೆಜ್ಜೆ ಹೆಜ್ಜೆಗೂ ನೆಲ ಮುತ್ತಿಡುವೊಲು
ಗಂಭೀರ ಗತಿಯಲ್ಲಿ ನಡೆಯುವರು
ನರ್ತಕಿಯರ ನಡೆ ನಾಟ್ಯದೊಲು
ಎತ್ತೆತ್ತಲು ಮೆರೆದಾಡುವರು ! ॥ಮದುವೆ॥

ಸಂಜೆಯು ಸೇರುವ ಮುನ್ನ
ಹಸೆಯನು ತರುವುದೆ ಚೆನ್ನ ।
ಹಸೆಗಂಬವ ತರುವುದೆ ಚೆನ್ನ ।
ಹಾಲ್‌ಗಂಬವ ತರುವುದೆ ಚೆನ್ನ ॥

ಹಳ್ಳಿಯ ಹಿರಿಯರು ಸೇರಿ
ಕಳ್ಳಿಯ ಕಡ್ಡಿಯ ಬೀರಿ
ಅತ್ತೀ ಎಕ್ಕೆ ಗಿಡಗಳ ರೆಂಬೆ
ಜೋಡಿಸಿ ಮೂರೂ ಕೊಂಬೆ

ತೆಂಗಿನ ಗರಿಯಾ ಸೀರೆಯನುಡಿಸಿ
ತರುವರು ಪೂಜಿಸಿ ಊರೊಳಗೆ ॥

ಮಂಗಳವಾದ್ಯದ ಮೊಳಗೊಳಗೇ
ಹಸೆಗಂಬವ ತರುವರು ಊರೊಳಗೆ

ದೇವರು ತರುವಾ ತೆರದಲ್ಲಿ
ತಂದದ ನೆಡುವರು ಹಂದರದಿ ॥ ॥ಮದುವೆ॥

ಅಂದಿನ ಹಗಲಿನ ಮುಂದೆ, ಚೆಂದದ ಚೆಲುವನ ಮಂದೆs ॥
ಆರಾಳು ಮುತ್ತೈದೇರು
ಏಳನೆಯಾಕೆ ಕಳಶ !
ಬಡ ನಡುವಿನ ಈ ಬೆಡಗಿಯರು

ಮಡಿನೀರನು ತರುವರು ಕೊಡದಲ್ಲಿ ॥

ಓಲಾಡಿ ಒಡ್ಡಾಡಿ ಬರುತಾರೆ
ನಡೆ ಮುಡಿ ಗಂಗೆಯ ತರುತಾರೆ ॥
ಮಂಗಳವಾದ್ಯದಿ ಅಂಗಳ ಮೊಳಗಲು
ಹಾದಿ ಬೀದಿ ಹಸಗೈತಾರೆ ॥ ॥ಮದುವೆ ॥
ತಂದಾ ಮಡಿ ನೀರಿಂದ
ಅಡುಗೆಯ ಸಿದ್ಧತೆ ಬೀಗರಿಗೆ

'ಜಾಗರ' ಜಗಲೀ ಪೂಜಿಸಿ
ಚಿಗಳಿ ತಂಬಿಟ್ಟು ತಿನಿಸಿ
ಬಿಗರ ಭೋಜನವೇರ್ಪಡಿಸಿ
ಬಗೆಬಗೆಯಲಿ ಸವಿ ತುಂಬುವರು ॥ಮದುವೆ॥

ಹಾಡು ಮದುವೆಯ ಮನೆ ಚೆಂದ ಮದುವೆಯಂಗಳ ಚೆಂದ
ಮದುವೆ ಆಗು ವರ ಚೆಂದ
ಮದುವೆ ಆಗುವ ವರ ಚೆಂದ ನೊಡೋಕೆ
ಮದುವಣಗಿತ್ತಿಯ ನಾಚಿ ನಗೆ ಚೆಂದ ॥

ಸ್ವಾಮಿಬಾರೊ ಮಲ್ಲೇಶ
ಗುರುಬಾರೋ ಮರುಳೇಶ
ಶಿವ ಬಾರೊ ಸೊಗದ ಸಿರಿಬಾರೊ
ಸಗ್ಗಾದ ಸಿರಿ ಬಾ ಹಿಗ್ಗಾಗೆ ನೀ ತಾರೊ
ಮೊಗ್ಗೆ ಮಲ್ಲಿಗೆಯ ಮುಡಿ ಬಾರೊ ।

ಸಿರಿದೇವಿ ಸೀಮಗಾರಿ ಮರುದೇವಿ ಬಂಗಾರಿ
ಗಿರಿರಾಯನ ಮಗಳೆ ಗಿರಿಜೆ ಬಾರೆ ।
ಗಿರಿರಾಯನ ಮಳೆ ಗಿರಿಜಮ್ಮ ನೀ ಬಾರೆ
ಕರುಮಾಡದೊಳಗೇ ಬಿಜಮಾಡೆ ॥

ಊಟವಾದ ಮೇಲೇ
ಬಲು ನೀಟಾಗಿ ಕೂರ್ತಾರೆ
ಪೇದಯ್ಯಗಳು ವೀಳ್ಯವಕೆ ॥

ವಾಗ್ದಾನಪಡೆದು ವಧುವರರಿರಿಸಿ
ಹಾರವ ಹಾಕಿಸಿ ನಲಿಯುವರು

ಕೊಬರಿ ಬೆಲ್ಲ ಕಡಲೆ
ಸಕ್ಕರೆ ಸುರಿವರು ಬಾಯೊಳೆ
ತರುವುದು ಕೊಡುವುದು ನಿರ್ಧರ
ಮುಂದಿನ ಕಾರ್ಯವು ಭರ ಭರ
ದೈವದವರ ದಿವ್ಯಾಜ್ಞೆಯ ಮೇರೆಗೆ
ಮುಂದುವರಿಯುವುದು ಮದುವೆ ॥ ॥ಮದುವೆ॥

ಎಳೆಯರು ಗೆಳತಿಯರೆಲ್ಲಾ
ಕರಿಬಳೆ ತೊಡುವರು ಮೆಲ್ಲಽಽ
ಮಲಲಾರ ಪೂಜಿಸಿ, ಮೀಸಲನಿತ್ತು
ಕಾಣಿಕೆ ವೀಲ್ಯವ ಕೈಗಿತ್ತು
ಕೈಕೊಡುವರು ಬಳೆಗಾರನಿಗೆ ॥

ಹೆಣ್ಣಿನ ಎಡಗೈಗೇಳು
ಬಲಗೈಯಿಗೆ ಕರಿಬಳೆ ಒಂಬತ್ತು ।
ತೊಡಿಸಿಕೊಂಡ ಬಳಿಕ
ಕೊಡುವಳು ಕೈ ಬಳೆ ಪುಳಕ !
ಮದುವಣಗಿತ್ತಿಯೆ ಮುತ್ತೈದೆಯರಿಗೆ
ಹರಿಶಿಣ ಕುಂಕುಮ ಕೂಡಿ
ಹಸುರಿನ ಬಳೆಗಳ ಜೋಡಿ
ಕೊಡುವಳು ಕೊಡುವಳು ಮುದದಿಂದ
ಮುತ್ತೈದೆಯರಿಗೆ ನಲವಿಮದ ॥ಮದುವೆ ॥

ಇರುಳೆಲ್ಲಾ ಸೋಬಾನೆ..
ಕರುಳಿನ ಕರೆ ಸೋಬಾನೆ॥

ಸೋಬಾನೆ : ಸೋ ೯ ೯ ಎನ್ನೀರೆಽ
ಸೋ ಬಾನೇ ತನ್ನೀರೆಽ ॥
ಗಿರಿಜೆ ಕಲ್ಯಾಣಿ ಗುಣವಂತಿ
ಹದಿನಾರಸ್ತಿ ಹಸೆಗೇಳು ॥ಸೋ॥

ಬಣ್ಣಾವ ಉಡಿಸಿ ಹಣ್ಣಽ ಸೋಗಿಲ ತುಂಬಿ
ಪುಣ್ವಂತೆಯಾಗಿ ಬದುಕಂತ । ಅವಳ ತಾಯಿ
ಹಣ್ಣ ತುಂಬಿದಳು ಮಡಲೀಗೆ ॥ಸೋ॥

ಮುತ್ತೀನ ಕಂಬದ ಒತ್ತಿಲ್ ನಿಂತಿರೋ ಬಾಲೆ
ಇತ್ತ ಬಾರಿತ್ತ ಇದರೀಗೆ । ನಾವು ತಂದ
ಹಣ್ಣ ತುಂಬುವೆವು ಮಡಲೀಗೆ ॥ಸೋ॥

ಮಾರನೆ ದಿನ ಕಾಲೂರೆ
ಮೂಡಣದಂಚಿನ ಮೇಲೆ
ಚಿಮು ಚಿಮು ಚಿನ್ನದ ಬೆಳಕು
ಕರಿದೆ ಸರಿಸಿತು ಹೊಳೆದು ॥ಮದುವೆ ॥

ಮಧುಮಕ್ಕಳಿಗೆ ಸ್ನಾನ
ಸ್ನಾನ ಹರಿಶಿಣದೆಣ್ಣೆ ಅಭ್ಯಂಜನ ॥ಮದುವೆ॥

ಕೆಲವರು ವಧುವಿಗೆ ಹಲ ಬಗೆಯಲ್ಲಿ ।ಹಸುವಿನ ಸ್ನಾವನವಗೈಸುವರು ।
ಕಂಬಕಂಬಕೂ ನೂಲ ಸುರಗಿಯಾಸುತ್ತಿ । ಕುಂಭಗಳೆತ್ತಿ ಎರೆಯುವರು ।

ಸುರಗೀ ಸ್ನಾವನಗೈಸುವರು ॥ಮದುವೆ॥

ಮೌಹೀತೀಕರನು ಕರೆಸಿ
ಸೌಹಾರ್ದದದಲಿ ನುಡಿಸಿ
ಕಂಕಣಧಾರಣ ಕಂಕಣ ಕಟ್ಟಿಸಿ ಹರಸಿ
ಬಾಸಿಂಗಧಾರಣ  ಬಾಸಿಂಗ ಧಾರನಗೈಸುವರು ॥ಮದುವೆ॥

ಕಾಶೀ ಯಾತ್ರೆಗೆ ಬದಲು ॥ಗಂಡನು॥
ಮೆರೆ ಬಿಡುವರು ಊರ್ಯ್ಹೋರಿಗೆ
ಹನುಮನ ಗುಡಿಯಾ ಮುಂದೆ
ಹಸೆಮಣೆ ತರಿಸಿ ಇರಿಸಿ
ಕೂರಿಸಿ ವರನನು ಹಾಡನು ಹೇಳಿ
ಆಸರು ಬೇಸರು ನೀಗುವರು ॥ಮದುವೆ॥

ಸೋಬಾನೆ : ಸೋ ೯ ೯ ೯ ಎನ್ನೀರೆಽ ಸೋಬಾನೆ ತನ್ನೀ ೯ ೯ ರೆ ಽ ಽ ॥

ಹೆಣ್ಣೋರು ಬರುವಾಗ ಸಣಮಾವು ಫಲವಾದೊ
ಸಣ್ಣ ಬಣ್ಣದಕ್ಕಿ ಸಮನಾರೊ । ನಮ್ಮನೆಯ
ಹೆಣ್ಣು ಬರ ಬರ ಜಯ ಜಽಯ ।ಸೋ॥

ಎದ್ದು ಬರಹೇಳೋ ನಿದ್ದೆಗಣ್ಣೈದೇರ
ಮದ್ದಾನೆ ಗತಕೆ ನಲಿವವರ । ಮುತ್ತೈದೇರ
ಎದ್ದು ಶೋಭನಕೆ ಬರಹೇಳೋ ॥ಸೋ॥

ಉಂಗುರುಡುಕಿಯನು ನಡೆಸುವರು
ಬಂಗರದ ಹರಿವಾಣ ತರಿಸುವರು ॥

ಗಂಡಿಗೆ ಉಡುಗೆ ಹೆಣ್ಣಿಗೆ ತೊಡುಗೆ
ಉಡುಗೊರೆ ಕೊಡುವರು ಬೆಡಗಿಯರು
ಉಂಗುರ, ಬದ್ದು, ಜೊತೆ ಇಹ ಪಂಚೆ
ಕೊಕ್ಕರೆ ಬಣ್ಣದ ಅಂಗೀ । ಅದ ಸಕ್ಕರೆ ತಂಗಿ
ತಂದೀಯುವಳು ಭಾವನಿಗೆ ॥ಮದುವೆ॥

ಹೆಣ್ಣಿಗೆ ಪತ್ತಲ ಉಡಿಸಿ
ಬಿಳಿ ಮಲ್ಲಿಗೆ ಧಾವಣಿ ಹೊದಿಸಿ
ಹಣೆಗೇ ಕುಂಕುಮ ಕೆನ್ನೆಗೆ ಹರಿಶಿಣ
ಕೈಬಳೆ ಝಳಝಳ ಎನಿಸುವರು ॥ಮದುವೆ ॥

ಕುಟ್ಟಿದ ಬತ್ತದ ಹರಳನ್ನು
ಬೀರುತ ವರನನು ಕರೆಯುವರು
ಹಲವರು 'ಎಳವಾರ' ತರುತಾರೆ

ಅಂದರೆ –

ಹುಡುಗನಿಗೆ ವೇಷವ ಹಾಕ್ತಾರೆ
ಮಡಿವಾಳಿಯ ಮಗ ಮೋಜಿನ ಹೆಣ್ಣು ‌ಽ

ಅವನ
ಬಾಯಿಗೆ ಪಚ್ಚನೆ ಬಾಳೇಹಣ್ಣು
ಕೈಯೊಳು ನೇರಿಳೆ ಸೊಪ್ಪನು ಹಿಡಿದು
ಕುಡಿಯುತ ಬರುವನು ವೇಷ ಧರಿಸಿ

ವರನಿಗೆ ಕಣ್ಣಾಸರೆಯೂ
ಆಗದಿರಲಿ ಎಂದೀ ವೇಷ
ಇದುವೇ ದೃಷ್ಟಿ ನಿವಾರಕ
ಕುಣಿಯುತ ಬರುವನು ಮಂಟಪಕೆ ॥ಮದುವೆ॥

ಬಾಗಿಲ ಆರತಿ ಬೆಳಗಿ ವರ
ನಾರೀಮಣಿಯರು ತುಳುಕಿ
ಓಕಳಿ ಸೂಸಿ, ಹಿಡಿಕಾಯ್ ಒಡೆವರು
ದೃಷ್ಟಿಯ ತೆಗೆವರು ಬಳುಕಿ ॥ಮದುವೆ॥

ಮದುಮಗನಿಗೆ ಮುದಕೋರಿ
ಎದೆದುಂಬುತ ಎಲ್ಲರು ಸೇರಿ
ಧಾರೆಯ ಕಂಬದ ಬಳಿಗೆ
ಕರೆದೊಯ್ದರು ಸೇಸೆಯನಿಕ್ಕಿ ॥ಮದುವೆ॥

ಲಗ್ನ ಮುಹೂರ್ತ ಸಮೀಪಿಸಲು
ಪೌರೋಹಿತ ತಾ ಬಂದು
ವರಪೂಜೆಯ ಮಾಡಿಸುತಾ
ಧಾರೆಗೆ ಸಿದ್ಧತೆ ನಡೆಸುವನು ॥ಮದುವೆ ॥

ಹಸೆಗಂಬವೆ ನಮ್ಮ ಜನಪದರ
ಲಗ್ನಕೆ ಸಲುವಾ ಸಾಕ್ಷಿ । ಅದು
ನೈಸರ್ಗಿಕವಾದಾ ಸಾಕ್ಷಿ ।

ವೈದಿಕರಂತೆ ಅಗ್ನಿಯು ಇಲ್ಲ
ವೀರಶೈವರೊಲು ಕಳಶಗಳಿಲ್ಲ
ನಿಸರ್ಗ ದೇವತೆಯಾದಾದ
ಆ ಕಾಲ್‌ಗಂಬವೆ ಸತ್ಯಕೆ ಸಾಕ್ಷಿ ॥ಮದುವೆ॥

ಕುರುಬರು ಅಯ್ನೋರ್ ಮುಂದೆ
ಕರಿಕಂಬಳಿ ಗದ್ದುಗೆ ಹಾಕಿ
ಕುರಿ ಬಂಗಾರವ ತೆಗೆದು
ಕರಿ ಬಿಳಿ ಹೊಸೆದು ಕಂಕಣ ಕಟ್ಟಿ
ಗುರು ಸಮ್ಮುಖದಲ್ಲಿ ದಾಂಪತ್ಯ
ದೀಕ್ಷೆಯ ಪಡೆಯುವರು ॥ಮದುವೆ ॥

–ಕಂಕಣ ಕಟ್ಟುವುದು–
ಸೋಬಾನೆ ಸೋ ೀೀ ಎನ್ನೀರೇ .. ಸೋಬಾನೆ ತನ್ನೀರೆ ॥
 ಇಂದು ನಮ್ಮಾನೆ ಕಂದನಿಗೆ ಸೋಬಾನೆ
ಬಂದಯ್ಯ ಬರಿಯ ಬಸವಯ್ಯ । ನಮ್ಮನೆಯ
ಕಂದನ್ಗೆ ಕಂಕನ ಧರಿಸೀರೊ ।
ಒಂದೆಳೆ ಕರಿಯಾಳೆ ಒಂದೆಳೆ ಬಿಳಿಯಾಳೆ
ಕುರುಬರ ಮನೆಯ ಉರಿ ಎಳೇ ಮದುವಣ್ಣ
ಬಲನ ಮುಂಗೈಗೆ ಬರಬೇಕು ॥
ಎಪ್ಪತ್ತೊರ್ಷಾದ ಮುಪ್ಪಿನ ಮುತ್ತೈದೇರು
ಪಟ್ಟು ನೂಲೆಳೆದು ಹಿಡಕಂಡು । ನಮ್ಮನೆಯ
ಹರನಿಗೆ ಕಂಕಣವ ಧರಿಸ್ಯಾರೊ ॥

ಮದುವೆ ಮದುವೆ ಮದುವೆ
ಮನಸಿಗೆ ಮುದವನು ತರುವೆ ।
ಅದ್ದೂರಿಯಿಂದ ಆನಂದ ತಂದ
ಅಂದದ ಚೆಂದದ ಮದುವೆ ॥

ವಧುವರರಿಬ್ಬರ ಇದಿರಲಿ ನಿಲಿಸಿ
ಅಂತರ ಪಟವನು ಹಿಡಿಯುವರು
ಜೀರಿಗೆ ಕಂಪು ಬೆಲ್ಲದ ಸೊಂಪು
ಸೊಮ್ಮು ಸವಿಯು ನಿಮ್ಮ ಬಾಳಿನಲಿ
ಸದಾ ಕಾಲವೂ ತುಂಬಿರಲಿ
ಎಂಬ ಶುಭಕಾಮನೆ ಕೂಡಿ
ಜೀರಿಗೆ ಬೆಲ್ಲವ ಸುರಿಸುವರು ॥ಮದುವೆ॥

ಧಾರಾಕಾರದಿ ಧಾರೆಯು ನಡೆವುದು
ಆತ್ಮೀಯರುಗಳ ಸಂತೋಷ ।
ಅಭಿಮಾನಿಗಳ ಸಮಾವೇಶ ।
ತುಂಬಿದ ಹಾಲಿನ ತಂಬಿಗೆ ಹಿಡಿದು
ಎರೆವರು ವಧುವರರ ಕೈ ಮೇಲೆ
ಈ ವಧು ನಿನ್ನವಳು ನಿನ್ನಾಕೆ
ಕೈಧಾರೆ ಎರೆದು ಕೊಡುತಿಹೆವು
ನಿನ್ನ ವಸ್ತುವಿದು ನೋಡಿಕೊ ಎನುತ
ಪ್ರೀತಿಯ ಪರಿಮಳ ಚೆಲ್ಲೆನುತ ॥ಮದುವೆ॥
ಧಾರೆಯು ಮುಗಿದಾ ಮೇಲೆ
ಮಾಂಗಲ್ಯ ಧಾರಣ ಕಾರ್ಯ
ಸಂಬಂಧ ಮಾಲಿಕೆ ಹಾಕಿಸಿ
ಸೌಹಾರ್ದದ ಸೌರಭ ಬೆರೆಸಿ
ಚಿನ್ನದ ತಾಳಯ ಹೆಣ್ಣಿನ ಕೊರಳಿಗೆऽ
ಧಾರಣಗೈಸಿ ವರನಿಂದ

ಓಲಗ ಊದಿಸಿ, ಮಂತ್ರವ ಘೋಷಿಸಿ

ಒಕ್ಕೊರಲಲಿ ಶುಭ ಹಾರೈಸಿ
ಸೇಸೆಯನಿಕ್ಕುವರೊಲವಿನಲಿ ॥ಮದುವೆ ॥

ಮಾಂಗಲ್ಯಂ ತಂತು ನಾನೇನ
ಮಮಜೀವನ ಹೇತುನಾ
ಕಂಠೇ ಬದ್ನಾಮಿ ಶುಭಗೇ
ತ್ವಂ ಜೀಗೀರ್ಘಯೆ ಶರದಃಶತಃ
ಮಯಾಬಧ್ನಾಂದಾಕ್ಷಾಯಣೀ
ಹಿರಣ್ಯಾ ಸದೇಪಿ ಘೃಣ್ಯತಾಂ
ದೀಘಮಾಯು ॥

ಮಾಂಗ್ಯ ಧಾರಣೆ–ಧಾರೆ
ಸರ್ವರಲು ಸಮದಾಚರಣೆ
ಜನಪದದಿಂದ ಭಿನ್ನವು ಶಿಷ್ಟ
ಸಂಪ್ರದಾಯಗಳ ಮದುವೆಗಳು

ಧಾರೆಯ ಎರೆದ ಮೇಲೆ
ಜನಪದರಲ್ಲಿಯೇ ಬೇರೆ
ಫಲಪೂಜೆಯ ಮಂಗಳಕಾರ್ಯ
ನೆರೆದೆಲ್ಲರಿಗದು ಶುಭದಾರ್ಯ ॥ಮದುವೆ।

ತೆಂಗಿನ ಕಾಯಿಗಳೈದು
ಹೆಣ್ಣು ಗಂಡೂ ತೆಗೆದು
ಕಾರಣೆ ಮಾಡಿದ ನೆಲದಲ್ಲಿ
ಪಟ್ಟಿರಿಸಿ ಭಯಭಕ್ತಿಯಲಿ
ಓರಣವಿರಿಸಿ ಸಾರಣೆ ಸಲಿಸಿ
ಪೂಜಿಸುವರು ಅನನ್ಯ ಭಕ್ತಿಯಲಿ ॥
ಪೂಜತ ಪುಣ್ಯದ ಪವಿತ್ರ ಫಲಗಳ ।
ಸೂಚಿತ ಹಿರಿಯರಿಗೀಯುವರು
ಪಡೆದೈವರ ಪದಗಳಿಗೆರಗುವರು ॥ ॥ಮದುವೆ॥

ಶಿಷ್ಟರ ಮದುವೆಯ ವೈಶಿಷ್ಟ್ಯವಿದೆ
ಗೌರಿಪೂಜೆಯ ಕಾರ್ಯದಲಿ
ಹಸೆಮಣೆ ಬಳಿಯೆ ಗೌರಿಯ ಪೂಜಿಸಿ
ಅರ್ಚಿಸಿ ಮಾಂಗಲ್ಯಭಾಗ್ಯವ ಬೇಡಿಸಿ
ಶಾಶ್ವತ ಮುತ್ತೈದೆತನವ ಹಾರುವರು ॥ಮದುವೆ॥

ಮುತ್ತಿನ ಮುತ್ತೈದೆಯರಿಗೆ
ಎತ್ತಿದ ಬಾಗಿನ ಕೊಡಿಸಿ
ಮುತ್ತೈದೆಯಾಗಿ ನೂರ್ಕಾಲ ಬಾಳೆಂದು
ಹರಿಶಿಣ ಕುಂಕುಮ ತೊಡೆಯುವರು ॥ಮದುವೆ॥

ನಾಗವಲ್ಲಿಯ ಶಾಸ್ತ್ರದ ವೇಳೆ

ನಾಟ್ಯದ ವೈಭವ ನಡೆಸುವರು
ಅಕ್ಕಿಯ ಆನೆ ಉಪ್ಪಿನ ಆನೆ
ನಿರ್ಮಿಸಿ ನಿಲ್ಲಿಸ ವಧುವರರ
ಅದಲು ಬದಲು ಮಾಡಿ ನಡೆಸಾಡುವರು
ಹೆಸರ ಹೇಳಿಸಿ ನಲಿಸುವರು
ಮತ್ತೆ ಮತ್ತೆ ಕೇಳ್ ನಗಿಸುವರು
ಬಣ್ಣದ ಅನ್ನದ ದಿಗ್ ಬಲಿಕೊಟ್ಟು
ಸಪ್ತವರ್ಣದಾ ಹಸೆಮಣೆ ಮೇಲೆ
ಸುಪ್ತ ಜ್ಯೋತಿಯಾ ಬೆಳಗಿಪರು ॥ಮದುವೆ॥

ಹೋಮ ಹವನ – ವೈದಿಕವಿಪ್ರರು ಎಲ್ಲಾ
ಹೋಮವ ನಡೆಸುವರೆಲ್ಲ
ಸಪ್ತಪದಿ – ಸಪ್ತಪದಿಯನು ಹಾಡಿಸಿ, ನಡೆಸಿ
ಪರವಧುವನು ಸ್ವೀಕರಿಸುವರು ॥ಮದುವೆ॥
ಗಂಗೆ ಪೂಜೆ – ಗಂಗೆ ಪೂಜುವ ಮಣಿಹ
ಕಡೆಯಲಿ ನಡೆವುದು ಶಿಷ್ಟರಲಿ
ಗಂಡೂಹೆಣ್ಣು ಕೂಡಿ ಊರ ಬಾವಿಯೆಡೆ ಹೋಗಿ
ಬಾಳೆಲೆ ಮೇಲೆ ಫಳಾರವಿಟ್ಟು
ಗಂಗೆಗೆ ಎಲ್ಲವ ಸಲಿಸಿ, ತಿಳಿನೀರನು
ತುಂಬಿ ತರಿಸುವರು ॥ಮದುವೆ॥

ಭೋಜನ – ಮದುವೆಯ ಭೋಜನ ಬಲುಮೋಜು
ಎಲ್ಲೆಡೆಯೂ ಸವಿಸಜ್ಜು ।

ಹಪ್ಪಳ ಸೊಂಡಿಗೆ ಉಪ್ಪಿನಕಾಯಿ
ತುಪ್ಪದಿ ಕರೆದಿಹ ಕರ್ಜಿಕಾಯಿ
ಫೇಣಿ ಪಲಾವು, ಕೋಸಂಬರಿ ಪಲ್ಯ
ದಂರೋಟ್, ಜಿಲೇಬಿ, ಲಡ್ಡೂ ಗುಡ್ಡೆ
ಚಿರೋಟಿ ಚಕ್ಕುಲಿ, ಜಾಹಂಗೀರು
ಮಜ್ಜಿಗೆ ನೀರು ತಿಳಿಸಾರು ।

ಓ ಹೋ ಹೋ ಸಾಕೂ ಸಾಕೂ ಸಾಕೂ
ತಿನ್ನುತ ಕುಳಿತರೆ ಮತ್ತೂ ಬೇಕು
ತಿಂದರೆ ಒಡೆವುದು ಹೊಟ್ಟೆಯ ಬಂಕು ॥ ॥ಮದುವೆ॥

ಭೋಜನ ಭಾಜನ ವಧುವರರಿಗೆ ಬೇರೆ
'ಬುವ ಇಕ್ಕುವದು' ಎನುತಾರೆ
ಗಂಡು ಹೆಣ್ಣು ಜೋಡಿ
ಒಂದೇ ತಟ್ಟೆಗೆ ಜೊತೆಗೂಡಿ
ಸುಖದುಃಖಗಳ ಸಮಪಾಲೆಂದು
ಇಬ್ಬರು ಉಣುವರು ಜೊತೆಯಲ್ಲಿ ॥ಮದುವೆ॥

ದೇವರ ಕಳಿಸುವ ಕಾರ್ಯ
ಎಲ್ಲಿಲ್ಲದದ್ದೂರಿ ತೂರ್ಯ ।

ಮಡಿ ನೀರು ಹೊತ್ತು ಬರುವಳು ವಧುವು
ತನ್ನ ಕೈ ಹಿಡಿದ ಗಂಡನ ಕೂಡಿ ॥
ಊರಾಚೆ ಬಂದಮ್ಮ ಗುಡಿಮುಂದೆ
ಊರೆಲ್ಲ ಸೇರುತ್ತೆ ಜಾತ್ರೆ ।

ಶಿವ ಶಿವೆಯರವೊಲು ವಿಷ್ಣುಲಕ್ಷ್ಮಿಯರೊಲು
ರಾಧಾಕೃಷ್ಣರ ನೆನಪಿಗೆ ತರುವಾ
ವದೂವರರಿಬ್ಬರೂ ದೇವರುಗಳು
ಆ ಎಡೆಯಲ್ಲಿ ಆ ಸಂದರ್ಭದಲ್ಲಿ
ತೇರಿಲ್ಲದ ಜಾತ್ರೆಯೇ ನೆರೆಯುವರು ॥ಮದುವೆ॥

ದೀವಿಡಿ ಪಡೆಯುವ ಈ ಸಂಭ್ರಮದಲಿ
ಪಾಲುಗೊಳ್ಳುವರು ಉಭಯತರು ॥
ಹೂ ಚೆಂಡಾಟಮಾಡಿಸುವರೂ
ಸರಿ ಬೆಸ ಆಡಿಸಿ ನಲಿಸುವರು
ಹಾಲು ತುಂಬಿದಾ ತಪ್ಪಲೆಯಲ್ಲಿ
ಉಂಗುರ ಹಾಕಿಸಿ ಹಿಡಿಸುವರು
ಸರಸದ ಸೇರುವೆ ಮಾಡುವರು ॥
ಒಂದೊಂದು ಪಕ್ಷವ ಹಿಡಿಯುವರು
ಪಂಥದ ಹೂಡು ಗೆಲಿಸುವರು ॥
ಸೋತರೆ ಗೇಲೀ ಎಬ್ಬಿಸಿ ಎಲ್ಲಾ
ಗುಲ್ಲಲಿ ಮಲ್ಲಿಗೆ ಸುರಿಸುವರು ॥ಮದುವೆ॥

ಜರೆಯುವ ಹಾಡು
ಅವರೆಂತಾ ಬೀಗರೋ
ಅವರು ಕೊಳೆಯಾ ಬೀಗರೋ ॥

ಸಂಡ್ಗೆ ಗಿಂಡ್ಗೆ ಮಾಡ್ತಿದ್ದೆ ಸಂದಿಲಿ ಗೊಂದಿಲಿ ನಿಂತಿದ್ರು
ಸಂಡ್ಗೆ ಮಾಡ್ಬುಟ್ಟು ನಾವ್ ಒಳಕ್ಕೋಗುತ್ತೆ
ಸಂಡ್ಗೆ ಬಾಂಡ್ಲಿ ನೆಕ್ತಿದ್ರು ಅವರೆಂತಾ ಬೀಗರೋ ॥
ಹಪ್ಲ ಗಿಪ್ಲ ಮಾಡ್ತಿದ್ದರ  ಅಟ್ಟದ ವ್ಯಾಲ್ ಕುಂತಿದ್ರು
ಹಪ್ಳ ಮಾಡ್ಬುಟ್ರು ನಾವ್ ಒಳಕ್ಕೋಗುತ್ಲೆ
ಹಪ್ಳದ ಪುಟ್ಟಿ ನೆಕ್ತಿದ್ರು ॥ ಅವರೆಂಥ ಬೀಗರೋ ॥

ಹೆಸರು ಹೇಳುವುದು ಒಪಿನಲ್ಲಿ ಒಡಪಿಲಿ ಹೆಸರನು ಉಸುಲಿಪರು ॥
ಸೋಬಾನೆ ಹಾಡು  ಸೋಬಾನೆ ಹಾಡಂತು ಸಾಗೇ ಇರುವುದು
ಸಂಗೀತಕೆ ಇಟ್ಟ ಶ್ರುತಿಯಂತೆ

ನಾನೊಂದು ಮದುವೆಯ ಮಾಡಿಕೊಂಬೆ
ಅದರ ಆನಂದವನು ನಿಮಗೆ ಹೇಳಿಕೊಂಬೆ

ಕೋಟು ಷರಾಯ್ಗಳ ತೊಟ್ಟುಕೊಂಬೆ
ದೊಡ್ಡ ಬಟೂಟು ಬನೀನ್ಗಳ ಇಟ್ಟುಕೊಂಬೆ

ಬಲು ನೀಟಾಗುವೆ
ಬಲು ಥೇಟಾಗುವೆ
ನೀಟಾದ ಹೆಂಡರಿ ಸಂಗಡಿಗರುವೆ ॥1॥

ಹಾರ ತುರಾಯ್ಗಳ ಹಾಕಿಕೊಂಬೆ
ಬಲು ಜೋರಾಗಿ ಮೀಸೆಯ ತಿರುವಿಕೊಂಬೆ
ದೊಡ್ಡ ಪೇಟೇಲಿ ಚಿಕ್ಕಪೇಟೇಲಿ
ಅಕ್ಕಿ ಪೇಟೇಲಿ, ಅರಳೇಪೇಟೇಲಿ
ಊರೆಲ್ಲ ಗಲ್ಲಿ ಗಲ್ಲಿ ತಿರುಗಿ ಬರುವೆ ನೂರಾರು ಕನಸುಗಳನು ಕಟ್ಟಿ ತರುವೆ ॥2॥

ಸಿದ್ದೇಯ ಮಣ್ಣಿನಂಥ ಹೆಣ್ಣು ತರುವೆ
ಅವಳ ಮುದ್ದಾದ ಕೆನೆನೆ ಮೇಲೆ ಮುತ್ತನಿಡುವೆ
ಎತ್ತಾಡುವೆ । ಅವಳ ಸುತ್ತಾಡುವೆ ।
ನೆತ್ತಿ ಮೇಲೆ ಕತ್ತನಿಟ್ಟು ಹೊರಳಾಡುವೆ ॥3॥

ಒಮ್ಮೆಲೆ ಝುಮ್ಮನೆ ಮುದುಕ
ಸಿದ್ದೇಗೌಡನ ಮದುವೆಯ ಅಣಕ ।

"ಸಿದ್ದೇಗೌಡ ಸಿದ್ದೇಗೌಡ
ನಿನ್ನ ಹೆಡ್ತಿ ಹೆಸರೇಳಪ್ಪಾ'
ಅಂದರೆ ಸಾಕು ನಾಚುತ ನಲುಗುತ
ಕಷ್ಟಪಟ್ಟು ತಾ ನೆನೆನೆನೆದು
ಪಾರ್ವತಿ ಎಂಬ ಪತ್ನಿಯನು
ಉಸುರಿಸಲಾರದೆ ತಡಬಡಿಸಿ
ಬಿಕ್ಕುಬಿಕ್ಕಳಿಸಿ ಒತ್ತಾಯಕ್ಕೆ
ಉಸಿರೇ ಬಿಡುವನು ಜೋರಿನಲಿ
ನನ್ನ ಹೆಡ್ತಿ ಹೆಸರು –
'ಪಾ ರಾ ತೇ ಗೌಡರು'
ಎಂದು,
ಸಭೆಯಲ್ಲೇ ನಗೆಡಲಿನಲಿ
ತೇಲಿ ಮುಳುಗುವುದು ಆನಂದದಲಿ ॥ ॥ಮದುವೆ॥

–ಸಂವಾದ–
ಬೀಗರ ಬೀಳ್ಕೊಡುವೆಡೆಯಲ್ಲಿ
ನಡೆದೇ ನಡೆವುದು ನುಡಿಮಾಲೆ ॥
ಹಳ್ಳಿಯ ಹುಡುಗ ಅವ ಬಲು ತುಡುಗ
ಹಿಡದಾನು ಅಕ್ಕನ ಮಗಳನ್ನು
ಎಳೆದಾನು ಜನಗಲ ಎದುರುಲ್ಲೆ ॥ಮದುವೆ ॥

ತರುಣ : ಆಕ್ಕನ ಮಗಳೆ ನೀನ ನಕ್ಕಾರಿ ಸುರದಾವೆ

ಮುಕ್ಕುಳಿಸಿ ನಗುವ ಮಲ್ಲೀಗೆ
ಮುಕ್ಕುಳಿಸಿ ನಗುವಾ ಮಲ್ಲೀಗೆ ಚೆಲ್ಯಾವೆ
ತಿಂಗಳ ಬೆಳಕು ತುಳುಕ್ಯಾವೆ ॥

ತರುಣಿ : ಹಾಗಲ್ಲ ಮಾವ ನೀ ಹಾಡಾಕಡ ನಿಂತಾರೆ
ನೀರ್ಹಕ್ಕಿ ಮುಳುಗು ಎದ್ಹಾಂಗ
ನೀರ್ಹಕ್ಕಿ ಮುಳುಗು ಎದ್ಹಾಂಗ । ಮೊರಡೀಲಿ
ನವಲಿ ಜಾಗರವ ಆಡಿದ್ಹಾಂಗ ॥

ತರುಣ : ಕಣ್ಣ ಮುಂದೊಮ್ಮೆ ಹೆಣ್ಣೇ ನೀ ಸುಳಿದಾರೆ
ಬೆಣ್ಣೇಯ ಮುದ್ದೇ ತೇಲ್ಯಾವೆ । ಮುಗಿಲಲ್ಲಿ
ಬೆಳ್ಹಕ್ಕಿ ಮಾಲೆ ಬೆಳೆದಾವೆ ॥

ತರುಣಿ : ಹಾಗಲ್ಲ ಮಾವ ನೀನಾಡ್ಹಾಡಿ ಬಂದಾರೆ
ಯಾಲಕ್ಕಿ ಬಾಳೆ ತೊನೆದ್ಹಾಂಗ
ಯಾಲಕ್ಕಿ ಬಾಳೆ ತೊನೆದ್ಹಾಂಗ । ಕೊಳದಾಗ
ಬಾಳೆಯ ಮೀನು ಸುಳಿದ್ಹಾಂಗ ॥
ತರುಣ : ನೀಂಬೇಯ ಹಣ್ಣಂಥಾ ತುಂಬೀದ ಮೈಯ್ಯೋಳೆ
ತೆರೆದ ತಾವರೆಯಾ ಮುಖದೋಳೆ
ತೆರೆದ ತಾವರೆಯಾ ಮುಖದೋಳೆ । ಬಳಕುವ
ಬಳ್ಳೀಯ ತೋಳ ಬಿಗಿ ಬಾರೆ ॥

ತರುಣಿ : ಬಿರಿ ಹೀವು ಕಂಡು ಮರಿದುಂಬಿ ಬರುವಮತೆ
ಬರಬ್ಯಾಡ ಮಾವ ಸದರೀಗೆ
ಬರಬ್ಯಾಡ ಮಾವ ಸದರೀಗೆ । ಮನದಾಗೆ
ಜೇನಿನ ಗೂಡು ಜುಮ್ಮೆಂದೋ ॥

ತರುಣ : ಬೆಳ್ಳೀಯ ಚಿಕ್ಕಿಐ ಮಳ್ಳಿ ನಾ ಮುಡಿಸೂವೆ
ಇಳ್ಳೆಲ್ಲ ವೀಳ್ಯಾ ತಿನಿಸೂವೆ
ಇಳ್ಳೆಲ್ಲ ವೀಳ್ಯಾ ತಿನಿಸೂವೆ । ಕಂಪೀನ
ಶೆಲ್ಲೇಯ ಹಾಇಸ ಹೊದಿಸೂವೆ ॥

ತರುಣಿ: ಕಳ್ಳನಾಗೂ ಬ್ಯಾಡ ಸುಳ್ಳಾಕಿ ಸುಳಿಬ್ಯಾಡ
ಒಳ್ಳೇ ನಲ್ಲೇನೋ ನನ ಮಾವ
ಒಳ್ಳೇನಲ್ಲೇನೋ ನನ ಮಾವ । ದಮ್ಮಯ್ಯ
ಎಳ್ಳು ಸೂಸಲಿನಂತೆ ನುಡಿಬ್ಯಾಡ ॥

ತರುಣ : ಬಾರೆ ಬಾ ಬಾರೆ ಬನದಮ್ಮನ ತೇರೆ
ಉಡೆ ಉಟ್ಟು ಬಾರೆ ನಡೆ ಬೆಡಗೀ ।
ಉಡೆ ಉಟ್ಟು ಬಾರೆ ನಡೆ ಬೆಡಗೀ । ಮೊಗ್ಗೀನ
ಜಡೆ ಬೀಸಿ ಬಾರೆ ಸನಿಹಾಕೆ ॥

ತರುಣಿ : ಕುಡಿ ಮೀಸೆ ಮಾವ ಹಾಲುಗಲ್ಲದ ಚೆಲ್ವ

ನಡೆಸಿದೀಯೇನೋ ತಿಳಿವೊಲ್ದು
ನಡೆಸಿದೀಯೇನೋ ತಿಳಿವೊಲ್ದು । ಮನದಾಗೆ
ಹೆಗ್ದಂಗೋ ಆಗುತ್ತೆ ನುಡಲಾರೆ ॥

ತರುಣ : ಸಕು ಮಾಡೆ ಜಾಣೆ ನಿನ್ಯಾಸದ ಆಟಾವ
ಮೀಟುತ ಬಾರೆ ಕಿರುಗೆಜ್ಜೆ
ಮೀಟುತ ಬಾರೆ ಕಿರುಗೆಜ್ಜೆ । ಹೆಜ್ಜೇಯ
ಚಿಮ್ಮುತ ಬಾರೆ ಎದೆ ಮೇಲೆ ॥

ತರುಣಿ : ಬರವೊಲ್ಲೆ ಮಾವ ನನ್ನ ಉಡೆಡೆರಡಗು ಜಾರೀತು
ತೊಡರಿಕ್ಕು ತಾವೆ ಗರಿನೆರಿಗೆ
ತೊಡರಿಕ್ಕು ತಾವೆ ಗರಿನೆರಿಗೆ । ಮಾವಯ್ಯ
ಕಿರುಗೆಜ್ಜೆ ಕಿಲ ಕಿಲ ನಗುತಾವೆ ।

ತರುಣ: ನಕ್ಕರೆ ನಗಲ್ಹೇಳೆ ಥಕಥಕ ಕುಣಿಯೋಣ
ತೆಕ್ಕೇಗೇ ಬರೆ ತಡೆಯಾದೆ
ತೆಕ್ಕೇಗೆ ಬಾರೆ ತಡೆಯಾದೆ: ನನ ಬೆಡಗಿ
ಮಿಡುಕಾಡ ಬ್ಯಾಡ ನಡಿ ಒಳಗ ॥

ಮೇಳ : ಸೆರಗು ಜಾರ್‍ಯಾವೆ ಸೆಳ್ಳುಗುರು ಮೂಡ್ಯಾವೆ
ಬಾನಿsನ ಕೆಕನ್ನೆ ಎದೆಮ್ಯಾಲೆ
ಬಾನಿsನ ಕೆನ್ನೆ ಎದೆಮ್ಯಾಲೆ। ಗೀಜುಗ
ಒಳ್ಳೊಳ್ಳೆ ಹಾಡ ಹಾಡ್ಯಾವ ॥

ಮನೆ ತುಂಬಿಸಿಕೊಳ್ಳುವುದು : ಮನೆ ತುಂಬಿಸಿ ಕೊಳುವಾ ಶಾಸ್ತ್ರ
ಮನ ತುಂಬಿಸುವಂಥಾ ಶಾಸ್ತ್ರ
ಗಂಡನ ಕೈಯಲ್ಲಿ ಹೆಣ್ಣ ಕಾಲಿರಿಸಿ
ಮೊಳೆ ಬಡಿಸುವರೂ ದ್ವಾರದಲಿ ॥

ಅದು ನಡೆವುದು ಗಂಡನ ಮನೆಯಲ್ಲಿ
ಅವಳದೆಂದ ಆ ಹೊಸ್ತಿಲಲಿ
ಹೆಣ್ಣಿನ ಕೈಯಲಿ 'ತಣಿಗೆ' ಉಗ್ಗಿಸಿ
ಹೊಸ್ತಿಲ ಪೂಜಿಸ ಬಲಗಾಲೂರಿಸಿ
ಕರೆವರು ಲಕ್ಷ್ಮಿಯ ತೆರದಿ ॥ಮದುವೆ॥

ಅಣಕದ ನಾಟಕವಾಡಿಸುವ
ತೊಟ್ಟಿಲ ಶಾಸ್ತ್ರವ ಮಾಡುವರು
ಬಟ್ಟೆಯೊಳಗೆ ಕಲ್ ಗುಂಡಿರಿಸಿ
ಮಗುವೆಂದು ತೂಗಿಸಿ ನಗಿಸುವರು
ಬಾಳಿನ ಪಾಟ ಕಲಿಸುವರು ॥ಮದುವೆ॥

ಬಾಗಿಲ ಬಳಿಯಲಿ ಬಂದರೆ
ತಂಗಿಯು ಬಾಗಿಲ ತಡೆಯುವಳು

ಅಣ್ಣನವರೇ.. ಉಡುಗೊರೆ ಕೊಡಬೇಕು
ಅತ್ತಿಗೆ ನನಗೆ ಮಗಳನು ಕೊಡಬೇಕು
ನಮ್ಮ ಮಗನಿಗೆ ಕೊಡಬೇಕು ॥
ವರ್ಷ ತುಂಬಿದ ಕೂಡಲೆ ಬರುವೆ
ಕಂದಳ ಕೊಡಬೇಕು ॥ಮದುವೆ॥

ಬಾಗಿಲು ತಡೆಯುವುದು –
ಬಾಕಾಲ ತಡೆದೇನು
ಕಾಲುಂಗ್ರ ಇತ್ತೆನು
ನನಗೇನ ಕೊಡುವೆ ಹಿರಿಯಣ್ಣ ॥
ನಿನಗೇನ ಕೊಡಲೆ ಶಿವಶರಣೆ ಕುಲದವಳೆ

ಭೂಮಿ ಧಾರೆಯ ಎಲೆಯೂವೆ ॥
ಭೂಮೀನು ನಮಗುಂಟು
ಭೂ ಲೋಕ ನಮಗುಂಟು
ಭೂಮಿಧಾರೆಯ ಎರೆಯಲೇನು । ಅಣ್ಣಯ್ಯ
ತಡೆದ ಬಾಗಿಲ ಬಿಡೆ ನಾನು ॥

ಅಂಚಿತಾಳಲ್ಲಿ ಹೊಂಚಾಡಿ ಮೇಯುವ
ಕೆಂಚೆಮ್ ಕಡಸ ಒಕ್ಕೊಡುವೆ । ತಂಗ್ಯಮ್ಮ
ತಡದ ಬಾಗಿsಲ ಬಿಡು ನಮಗೆ ।
ಅಂಚಿತಾಳಲ್ಲಿ ಹೊಂಚಾಡಿ ಮೇಯುವ
ಕೆಂಚೆಮ್ಮೆ ಕಡಸು ನಮಗುಮಟು । ಅಣ್ಣಯ್ಯ
ತಡೆದ ಬಾಗಿsಲ ಬಿಡಲಾರೆ ॥

ಆನಾನೆ ಕೊಡುವೆ
ಆನೇಯ ಮರಿಕೊಡುವೆ
ಬಿಡಿಉತ್ತು ಕೊಡುವೆ ಕೊಳೀಗೆ । ತಂಗ್ಯಮ್ಮ
ತಡದ ಬಾಗಿsಲ ಬಿಡುಗೆ ನಮಗೆ ॥
ಮತ್ಯೇನು ಬೇಕವ್ವ
ಏನ್ ಕೊಟ್ರೂ ಬ್ಯಾಡೆಂಬೆ
ಒಳಮಾತು ಏನು ಗಡ ಹೇಳೆ ।
ತಂಗ್ಯಮ್ಮ
ನುಡಿದಂತೆ ನಡೆವೆ ಬಿಡುಬಾಗಿಲ ॥

ನಿಂಬೇಯ ನೆರಿಗ್ಯೋಳು
ಗೊಂಬೇಯ ಮೆಯ್ಯೋಳು
ತುಂಬು ತುರುಬೀನ ಮಗಳು । ರಂಭೇಯ
ನೀವ್ ನಮಗೆ ಕೊಡಬೇಕು ॥

ಮದುವೆಯ ದಿಬ್ಬಣ ಮದ್ದಾನೆಯಂತೆ
ಊರ ಬಾಗಿಲಿಮದ ಹೊರಟೀತು ।
ಗಮ್ಮೆನ್ನೊ ಗೂಡೆಗಾಡಿ ಸಲಾಗಿ ಹೊರಟಾವು

ಮೊದಲನೆ ಬಂಡಿಯ್ಲಲಿ ಗಂಡು ಹೆಣ್ಣು ಕುಳಿತವ್ವೆ
ಸರಸದ ಮಾತುಗಳನಾಡುತಿವೆ ॥
ಹಿಂದೆ ಮುಂದೆ ತಮಟೆ ಟಾವರ್ ಟಾಮ್ ಟಾಮ್
ಟಾಮ್ ಟಾಮ್ ಟಾಮ್ ಟಾಮ್ ಟಾಮ್ ॥ಮದುವೆ॥

ನಮ್ಮೂರು ದಾರೀಲಿ ರಂಗೋಲೆ ಬರೆದವ್ವೆ
ಹೊನ್ನು ಹೊಂಬಾಳೆ ಹುಡಿ ಚೆಲ್ಲಿ
ಹೊನ್ನು ಹೊಂಬಾಳೆ ಹುಡಿ ಚೆಲ್ಲಿ । ಮುಡಿದವ್ವೆ
ಮುಳ್ಳಿನ ಬೇಲಿ ಕುಡಿಬಾಳೆ ॥

ಬನದಮ್ಮ ಹೊಸದಾಗಿ ಹಸುರುಟ್ಟು ನಿಂತೌಳೆ
ಮೂಡsಲ ಹಸೆಯs ಮಣಿ ಏರಿ
ಮೂಡsಲ ಹಸೆಯs ಮಣಿ ಏರಿ ಕಾದೌಳೆ
ಹೆಸರ್ಹೇಳೊ ಅರಸರು ಬರಲೆಂದು ॥
ಮಾವು ಬೇವಿನ ಹೂವು ಜೋಮಾಲೆ ಬೇಕ್ಯಾವೆ
ಜೇನುಜೋಗುಳವಾ ಹಾಡ್ಯಾವೆ॥
ಜೇನಂ ಜೋಗುಳವs ಹಾಡೂವ ಹೊತ್ತಿಗೆ
ಗಿಣಿರಾಮ ಕಣಿಯs ಹೇಳ್ಯಾವೆ ॥

ಮದುವೆಯು ಬಂತು ಮುದವಾನೆ ತಂತು
ಎದೆತುಂಬಿ ಒಲವಾ ಹರಿಬಿಡ್ತು ।
ಎದೆ ತುಂಬಿ ಒಲವಾ ಹರಿಬಡ್ತು ಮನದಾಗೆ
ಏನೇನೊ ಆಸೆಳ ಆಡಿ ಇಡ್ತು !

(ಬಂಡಿ ಸಾಲು ದೂರ ದೂರ ಸಾಗಿದಂತೆ ಕಣ್ಮರೆಯಾಗುವುದು)

## ರಾಸಲೀಲೆ

****

ಪಾತ್ರವರ್ಗ
ಕೃಷ್ಣ
ರಾಧೆ
ಮೇಳ
ನರ್ತಕಿಯರು
ದನಿಗೊಡುವವರು

ರಾಸಲೀಲೆ

[ಕೇವಲ ಕೊಳಲಿನ ಮಧುರಲಾಪನ ಚಣಕಾಲ. ಅನಂತರದಲ್ಲಿ ಹಾಡು ಆರಂಭವಾಗುತ್ತದೆ. ಪ್ರಶಾಂತ ಪುಟಿದೆದ್ದ ಪಕ್ಷಿ ಕೂಜನದಂತೆ ರಾಗರಂಜಿಸಬೇಕು]
ಮೇಳ : ಮೃದು ಮಧುರಾಧರ ಚುಂಬನದಿಂಚರ
ಮುರಳಿಯ ಕೊರಲಿಂದಿಳಿಯುತಿದೆ
ಗೋಪಿಯರೆದೆಯಲಿ ತಾಪವ ತುಂಬಿಸಿ
ನಲ್ಲೇ, ನಿಲ್ಲೆಂದುಸುರುತಿದೆ
ಮೋಹನ ಮುರಳೀ ನಾದಾಮೋದಕೆ
ಯಮುನಾ ತೀರವೆ ಅರಳುತಿದೆ
ರಾಧಾ ಮಾಧವರಾಲಿಂಗನಕೆ
ಬೃಂದಾವನ ಮೈ ಮರೆಯುತಿದೆ,
ಕುಸುಮ ಕಪೋಲಕೆ ಸುಷ್ಮ ಸುಗಲ್ಲಕೆ
ಮೆಲ್ಲನೆ ಹೂದುಟಿ ಚಾಚುತಿದೆ.
ಪೀನ ಪಯೋಧರ ಭಾರಾಧಾರಕೆ
ಸುಸಿಲಿನ ಬಿಸಿಯುಸಿರಾಡಿಸಿದೆ
[ಕ್ರಮೇಣ ಕ್ರಮೇಣ ನಿಧಾನವಾಗಿ ಸ್ವರ ಇಳಿದಂತೆ ಗಂಭೀರ ವಾಣಿಯೊಂದು ಮೇಲೇಳುತ್ತದೆ]
ಓಹ್ !
ಧ್ವನಿ: ಎಂತಹ ಮಧುರ ಮಂಜುಳ ನಿನಾದ !
ಎಂತಹ ಮನಮೋಹಕ ಮುರಳಿಗಾನ !!
ಈ ನಾದ ಮಾಧುರ್ಯಕ್ಕೆ ಮನಸೋತ ಗೋಪಿಯರ ತಂಡ ಅದೆಷ್ಟು ! ಒಂದೇ, ಎರಡೇ – ಲೆಕ್ಕಕ್ಕೆ ಸಂಖ್ಯೆಯಿಲ್ಲ. ಅದೋ ಅಲ್ಲಿ – ಆ ಬೃಂದಾವನದ ವಕ್ಷಸ್ಥಲದಲ್ಲಿ ನಡೆದಿದೆ ಶ್ರೀಕೃಷ್ಣನ ರಾಸಲೀಲೆ । ಯಮುನೆಯ ತಟಿಯಲ್ಲಿ ತುಟಿದೆರೆದು ನಿಂತ ಸಹಸ್ರಾರು ಜನ ಗೋಪಿಯರು ಮುದ್ದು ಮುರಳಿ ಮೋಹನನ ರಾಸಕ್ರೀಡೆಯಲ್ಲಿ ಭಾಗಿಗಳಾಗಿದ್ದಾರೆ. ಒಬ್ಬಳ ಕೈ ಮತ್ತೊಬ್ಬಳು ಹಿಡಿದು, ವೃತ್ತಕಾರವಾಗಿ ತಿರುಗುತ್ತಾ ನರ್ತಿಸುತ್ತಿದ್ದಾರೆ. ವನವೆಲ್ಲಾ ಅಪ್ಪಾಲೆ ಆಡಿದಂತೆ ಭಾಸವಾಗುತ್ತದೆ. ಕೋಟಿ ತಾರೆಗಳ ಮಧ್ಯದಲ್ಲಿ ತಾನೇ ತಾನಾಗಿ ಶೋಭಿಸುವ ಷೋಡಶ ಕಳಾಪೂರ್ಣನಾದ ಚಂದ್ರಮನಂತೆ, ಮಧುಸೂದನನು ವೇಣು ಹಿಡಿದು ನುಡಿಸುತ್ತಾ ಒಂದು ವಿಶಿಷ್ಟ ಭಾವ ಭಂಗಿಯಲ್ಲಿ ನಿಂತಿದ್ದಾನೆ. ಅವನ ಸುತ್ತಲೂ ಗೋಪಿಯರು ನೆರೆದಿದ್ದಾಳೆ. ಅಲಂಕೃತನಾದ ಆ ಮುಕುಂದ –
[ಅತಿಶೀಘ್ರದಲ್ಲಿ ಗದ್ದಯ ಘೋಷಣೆಯನ್ನೇ ಹಿಂಬಾಲಿಸಬೇಕು ಹಾಡು..]
ಮೇಳ : ರಾಸಲೀಲೆ..
ಸು – ಹಾಸಲೀಲೆ
ವಸಂತ ಮಾಸದೊಳಗೆ ತಂದ
ಭಾಸಲೀಲೆ ॥ರಾಸಲೀಲೆ॥

ಮುದ್ದು ಮೋಹನ
ಘನಶ್ಯಾಮನ
ತೋಲ ಸೆರೆಯ ಬಂಧನ
ಅಪ್ಯಾಯನ ॥ರಾಸಲೀಲೆ॥
ನಂದ ಗೋಪನ ಚೆಲುವ ಚಿಣ್ಣನ
ಬೆಣ್ಣೆ ದೇಹದಲ್ಲಿ ಬೆರೆಯೆ
ಇದುವೆ ಸಾಧನ ॥ರಾಸಲೀಲೆ॥

ಗೆಜ್ಜೆ ನುಡಿಯು ಘಲ್ಲೆನೆ
ಎದೆಯೊಳೇನೋ ಝಲ್ಲೆನೆ
ಮನದ ಕೊನೆಗೆ ಮುಲುಕು ತಂದ

ಸುರಡಲೀಲೆ । ಇದು ರಾಸಲೀಲೆ । ॥ರಾಸಲೀಲೆ॥

ಧ್ವನಿ : ಮುಗ್ದ ಮನೋಹರಿಯರ ರಾಸಕ್ರೀಡೆಯಲ್ಲಿ ಶ್ರೀ ಹರಿಯು ಭಾಗಿಯಾಗಿದ್ದಾನೆ. ಮೋಹ ಮತ್ತೆಯರಾದ ಆ ಪ್ರಮದೆಯರೊಡನೆ ಕೈ ಕುಲುಕಿಸಿ, ಮೈ ಬೆರೆಯಿಸಿ ನರ್ತಿಸುತ್ತಿದ್ದಾನೆ ಕೃಷ್ಣ.

ಮೇಳ : ಚಂದ್ರ ಚಾರು ಕಚಾರು ಮಯೂರ ಶಿಖಂಡಕ
ಮಂಡಲ ವಲಯಿತ ಕೇಶಂ
ಪ್ರಚುರ ಪುರಂದರ ಧನುರನುರಂಜಿತ
ಮೇದುರಮಂದಿರ ಸುವೇಶಂ ॥

[ಹಾಡು ಮುಗಿದು ನರ್ತನ ದೃಶ್ಯದ ಹಿನ್ನೆಲೆಯಲ್ಲಿ]

ಧ್ವನಿ : ಗೆರೆ ಬರೆದ ಚಂದ್ರನಾಕಾರದಲ್ಲಿರುವ ನವಿಲುಗರಿಗಳಿಂದ ಅಲಂಕೃತವಾಗಿದೆ. ಅವರ ಕೇಶ ಪ್ರದೇಶ. ಸಪ್ತವರ್ಣ ಸುಶೋಭಿತವಾದ ಕಾಮನಬಿಲ್ಲಿನಿಂದ ರಾಗರಂಜಿತವಾದ ಸುಂದರ ಮೇಘದಂತೆ ಅತಿ ಮನೋಹರವಾಗಿ ಕಾಣಿಸುತ್ತಿದೆ. ಆ ಘನ ಶ್ಯಾಮನ ಸುಂದರ ಶರೀರ, ಅಂದು ಮಧು ಮಾಸ ಬೇರೆ. ಹಾಲ್ದಿಂಗಳಲ್ಲಿ ಮಿಂದು ಹಸುರಡೆಯನುಟ್ಟ ನಿಸರ್ಗದೇವತೆ. ತುಂಬು ಬಸುರಿಯಂತಿರುವ ಯಮುನೆಯೊಡನೆ ಸರಸ ಸಲ್ಲಾಪದಲ್ಲಿ ತೊಡಗಿದ್ದಾಳೆ.

[ಆಗ ತುಂಬಿ ಹರಿವ ಯಮುನೆ,
ಹಸುರಿ ಹಾಸು
– ಬೃಂದಾವನದ ದೃಶ್ಯವಿರಬೇಕು]

[ಮುಂಬರುವ ಪ್ರತಿ ಚರಣಕ್ಕೂ ಬಗೆಬಗೆಯ ರಾಗಸಂಯೋಜನೆ ತಾಳಮೇಳಗಳೊಂದಿಗೆ ನರ್ತನ–ಹಾಡು ನಿಂತರೂ ನೃತ್ಯಾಭಿನಯ ನಡೆಯುತ್ತಲೇ ಇರುತ್ತದೆ. ಆಗ ಗದ್ಯ ವಿವರಣೆ ಅವತರಿಸಬೇಕು]

ಮೇಳ : ಲಲಿತ ಲವಂಗ ಲತಾ ಪರಿಶೀಲನಾ ಕೋಮಲ ಮಲಯಸಮೀರೇ
ಮಧುಕರ ನಿಕರ ಕರಂಬಿತ ಕೋಕಿಲ ಕೂಜಿತ ಕುಂಜ ಕುಟೀರೆ ॥

ಧ್ವನಿ: ಮಲಯ ಮಾರುತನ ಸುಳಿವು ಲಲಿತವನ ಲವಂಗಲತೆಗೆ ಕಚಗುಳಿಯಿಡುತ್ತಿದೆ. ಅಲ್ಲಿನ ಕುಂಜ ಕುಟೀರಗಳು, ದುಂಬಿಗಳ ಝೇಂಕಾರ, ಕೋಗಿಲೆಗಳ ಓಂಖಾರ ಇವುಗಲಿಂದ ತುಂಬಿ ಹೋಗಿವೆ.

ಮೇಳ : ಸ್ಫೂರದತಿ ಮುಕ್ತಲತಾ ಪರಿರಂಭಣ ಮುಕುಲಿತ ಪುಲಕಿತ ಜೂತೆ ।
ಬೃಂದಾವನ ವಿಪಿನೇ ಪರಿಸರ ಪರಿಗತ ಯಮುನಾ ಜಲಪೂತೇ ॥

ಧ್ವನಿ: ಚಪಲೆಯೋರ್ವಳನ್ನು ಅಪ್ಪಿ ಮುದ್ದಿಡುವ ಪ್ರಿಯತಮನು ರೋಮಾಂಚನಗೊಂಡಂತೆ ಚಂಚಲವಾದ ಅತಿ ಮುಕ್ತಲತೆಯಿಂದಾವೃತವಾದ ಮಾವಿನ ಮರವು ತನ್ನ ಮೈ ತುಂಬ ಮೊಗ್ಗುಗಳನ್ನು ಮೂಡಿಸಿಕೊಂಡಿದೆ. ವನ್ಯ ಪ್ರದೇಶವನ್ನು ಹಮ್ಮಿಕೊಂಡು ಹರಿಯುತ್ತಿರುವ ಯಮುನೆಯ ಪುಣ್ಯ ಸಲಿಲದಲ್ಲಿ ಮಿಂದ ಬೃಂದಾವನ ಪಾವನವಾಗಿದೆ.
ಇಂತಹ ವಸುತ ಸಮಯದಲ್ಲಿ ಶ್ರೀ ಕೃಷ್ಣ ಗೋಪಿಯರ ರಾಸಕ್ರೀಡೆ
ಓಹ್ । ಅದೆಂತಹ ಮನಮೋಹಕ ದೃಶ್ಯ !
ಅದೆಂತಹ ದಿವ್ಯ ಲಾಸ್ಯ !!
ಅವರ ಬಣ್ಣನೆಗೆ ಮಾತು ಸೋತು ಹೋಗುತ್ತದೆ. ಋತುಗಳು ಬಳಲುತ್ತವೆ. ನದಿಗಳು ನಲಿಯುತ್ತವೆ, ಕೇಳಿದ ಗಿರಿಪಂಕ್ತಿ ನರ್ತಿಸಲೂ ಬಲ್ಲುದು.

[ಪಾಡು ಆರಂಭವಾಗುತ್ತದೆ. ಅದಕ್ಕೆ ಮುನ್ನ ಕೇವಲ ಗೆಜ್ಜೆಯ ಘಲ್ ಘಲ್ ನಾದ ಚಣಕಾಲ, ಕೆಲವು ಜನ ಸ್ತ್ರೀಯರು ಮೇಳದಲ್ಲಿ (ಕೋರಸ್) ಹಾಡುತ್ತಾರೆ. ಹಾಡು ಪಾದ ಪಾದಕ್ಕೂ ನಿಂತು ನಿಂತು ಗತ್ತಿನಲ್ಲಿ ಗಮಿಸುತ್ತದೆ]

ಮೇಳ : ಚಂದನ ಚರ್ಚಿತ ನೀಲಕಲೇವರ ಪೀತವಸನ ವನಮಾಲೀ ।
ಕೇಳಿ ಚಲನ್ಮಣಿ ಕುಂಡಲ ಮಂಡಿತ ಗಂಡಯುಗಸ್ಮಿರ ಸಾಲೀ ॥

ಧ್ವನಿ : ಚಂದನ ಗಂಧದಿಂದ ಲೇಪಿತವಾಗಿದೆ. ಪೀತಾಂಬರ ಧಾರಿಯಾದ
ಆ ಮೋಹನನು ವನಮಾಲೆಯನ್ನು ಧರಿಸಿ ಮಂದಹಾಸದಿಂದ
ಕೂಡಿ, ನರ್ತಿಸುವಾಗ ಕರ್ಣಕುಂಡಲಗಳು ಚಣಕಾಲ ಅವನ

ಕೆನ್ನೆಯ ಮೇಲೆ ನಿಂತು ಶೋಭಿಸುತ್ತವೆ.

ಮೇಳ : ಕಾಪಿ ವಿಲಾಸ ವಿಲೋಲ ವಿಲೋಚನ ಖೇಲನ ಜನಿತ ಮನೋಜಂ ।
ಧ್ಯಾಯತಿ ಮುಗ್ಧ ವಧೂರಧಿತಂ ಮಧುಸೂದನ ವದನ ಸರೋಜು ॥

ಧ್ವನಿ : ಚಂಚಲ ನೇತ್ರಗಳಿಂದ ದೃಷ್ಟಿ ಹರಿಸಿ ಓರ್ವ ಗೋಪಿಯಲ್ಲಿ
ಕಾಮ ಕಳೆಯೇರುವಂತೆ ಮಾಡಿದ್ದಾನೆ. ಆಗ ಆ ಚೆಲುವೆ
ಮಧುಸೂದನನ ಮುಖ ಕಮಲವನ್ನೇ ವೀಕ್ಷಿಸುತ್ತಾ, ಅವನ
ಪ್ರೇಮ ದೃಷ್ಟಿಯನ್ನು ನೆನೆನೆನೆದು ಅದರ ಸವಿಯನ್ನು
ಸವಿಯುತ್ತಾ ನರ್ತಿಸುತ್ತಿದ್ದಾಳೆ.

ಮೇಳ : ಕಾಪಿ ಕಪೋಲತಲೇ ಮಿಲಿತಾ ಲಪಿತುಂ
ಕಿಮಪಿ ಶ್ರುತಿ ಮೂಲೇ ।
ಬುರಂ ಚುಂಬ ನಿತಂಬವತೀ ದಯಿತಂ
ಪುಲಕೈರನುಕೂಲೇ ॥

ಧ್ವನಿ : ಮತ್ತೋರ್ವ ನಿತಂಬಿನಿಯು ಗುಟ್ಟು ಹೇಳುವ ನೆಪದಲ್ಲಿ ಕೃಷ್ಣನ ಕಪೋಲದ ಬಳಿ ತನ್ನ ತುಟಿ ತಂದಳು. ಸಮಯ ನೋಡಿ ಚೆನ್ನಾಗಿ ಚುಂಬಿಸಿದಳು.

ಮೇಳ : ಕರತಲ ತಾಲ ತರಲ ವಲಿಯ ವಲಿಕಲಿತ ಕಲಸ್ತ್ರನವ ಶೇ ॥
ರಾಸರಸೇ ಸಹ ನೃತ್ಯ ಪರಾ ಹರಿಣಾ ಯುವತೀ ಪ್ರಶಂಶಸೇ ॥

ಧ್ವನಿ : ಮಗುದೋರ್ವ ಚೆನ್ನೆ ಗೋಪಾಲನ ವೇಣುವಾದನಕ್ಕೆ ತಕ್ಕಂತೆ ತನ್ನ ಕೈಗಳಿಂದ ತಾಳ ಹಾಕುತ್ತಿದ್ದಾಳೆ. ತಾಳದ ಗತ್ತನ್ನು ಘಲ್ ಘಲ್ ಎನ್ನುವ ಅವಳ ಕೈ ಬಳೆಗಳೇ ಸೂಚಿಸುತ್ತಿದೆ. ಆ ಕೌಶಲ್ಯಕ್ಕೆ ಮಿಕ್ಕ ಗೋಪಿಯರು ಮುಕ್ತ ಕಂಠದಿಂದ ಪ್ರಶಂಶಿಸುತ್ತಿದ್ದಾರೆ.
ಮೇಳ : ಶ್ಲಿಷ್ಯತಿ ಕಾಮಪಿ ಚುಂಬತಿ ಕಾಮಪಿ
ಕಾಮಪಿ ರಮಯತಿ ರಾಮಾಂ।
ಪಶ್ಯತಿ ಸಸ್ಮಿತ ಚಾರುತರಾಮಪರಾ
ಮನುಗಚ್ಛತಿ ವಾಮಾಂ ॥

ಧ್ವನಿ : ರಾಸಕ್ರೀಡೆಯ ವೇಳೆಯಲ್ಲಿ ಆ ಮುಕುಂದನು ಒಬ್ಬಳನ್ನು ಆಲಂಗಿಸಿ, ಇನ್ನೊಬ್ಬಳನ್ನು ಚುಂಬಿಸಿ, ಮತ್ತೊಬ್ಬಳೊಡನೆ ರಮಿಸಿ, ಮನುದೊಬ್ಬಳನ್ನು ನಗಿಸಿ, ನಲಿಸಿ ಅ ಕುಟಿಲ ಕುಂತಳೆನ್ನೇ ಹಿಂಬಾಲಿಸಿ ಹೋಗುತ್ತಾನೆ.
ಇಷ್ಟಾದರೂ ಆ ಗೋಪಿಜಾರನಿಗೆ ರಾಧೆಯ ನೆನಪೇ ಬರಲಿಲ್ಲ. ರಾಧೆ ಅವರ ಹೃದಯೇಶ್ವರಿ, ಪ್ರೇಮಸಾಮ್ರಾಜ್ಞಿ. ಅವಳು ಎಲ್ಲ ಗೋಪಿಯರಂತಲ್ಲ–ತುಂಬು ಅಭಿಮಾನಿ, ಗರ್ವಿಷ್ಠೆ ! ಅದರಿಂದಲೇ ಅವಳು ನದಿಯೆದೆಯ ಪುಳಿನದೊಡ್ಡನು ಹಾದು ಶ್ರೀಕೃಷ್ಣನಿದ್ದೆಡೆಗೆ ಧಾವಿಸಿ ಬರಲಿಲ್ಲ. ತನ್ನ ಗೆಳತಿಯೊಬ್ಬಳ ಕೂಡ ದೌತ್ಯವನ್ನಟ್ಟಿ ಕುಟೀರದಲ್ಲಿ ಏಕಾಂಗಿಯಾಗಿ ಕುಳಿತಳು. ಅವಳ ನೆನಪಿನ ನಾಲಗೆ ಕಲ್ಪನೆಯ ಜೇನನ್ನು ಚಪ್ಪರಿಸತೊಡಗಿತು.
ಮೇಳ : ನಿಭೃತ ಗೃಹಂ ಗತಯಾ ನಿಶಿ ರಹಸಿ ನೀಲೀಯ ವಸಂತಂ ।
ಚಕಿತ ವಿಲೋಕಿತ ಸಕಲದಿಶಾ ರತಿರಭಸ ಭರೇಣ ಹಸಂತಂ ॥

ಧ್ವನಿ : (ಭಾವಪೂರ್ಣವಾಗಿ) ಏಕಾಂತಕ್ಕೆ ಪ್ರಶಸ್ತಿವಾದ ಆ ಬಳ್ಳಿಯ ಮನೆಗೆ ನಾನು ಹೋಗಿ ಸೇರುತ್ತೇನೆ. ಕುಚೇಷ್ಟೆಗಾಗಿ ಕೃಷ್ಣ ಅಲ್ಲೆಲ್ಲೋ ಮರೆಯಲ್ಲಿ ಅಡಗಿಸಿಕೊಂಡಿರುತ್ತಾನೆ. ಅವನನ್ನು ಕಾಣೆದ ದಿಕ್ಕುದಿಕ್ಕುಗಳನ್ನು

ಬೆರಗಾಗಿ ನೋಡುತ್ತ ನಿಂತ ನನ್ನನ್ನು ರತಿ ಕೇಳಿಯ ಉತ್ಸಾಹಾತಿಶಯದಿಂದ ಮೋಹನನು ನೋಡು ನಗುತ್ತಾನೆ.
(ಈ ನುಡಿಗಳ ಹಿನ್ನೆಲೆಯಲ್ಲಿ ನೃತ್ಯ ಛಾಯಾರೂಪದಲ್ಲಿ ಕಾಣಿಸುತ್ತಿರಬೇಕು)
ಮೇಳ : ಪ್ರಥಮ ಸಮಾಗಮ ಲಜ್ಜಿತಯಾಪಟುಚಾಟುಶತೈರನುಕೂಲಂ ।
ಮೃದು ಮಧುರಸ್ಮಿತ ಭಾಷಿತಯಾ ಶಿಥಿಲೀಕೃತ ಜಘನದುಕೂಲಂ ॥

ಧ್ವನಿ: ಅದು ನಮ್ಮ ಪ್ರಥಮ ಸಮಾಗಮವಾದ್ದರಿಂದ ನಾನು ಲಜ್ಜಿತಳಾಗುತ್ತೇನೆ. ಆಗ ಕೃಷ್ಣನು ನೂರಾರು ಚಟುಲ ಚಾಟು ನುಡಿಗಳಿಂದ ನನ್ನನ್ನು ತೃಪ್ತಿಪಡಿಸುತ್ತಾನೆ. ನಾನೂ ಅವನೊಡನೆ ಮೃದ ನುಡಿಗಳನ್ನೇ ನಗುನಗುತ್ತಲೆ ನುಡಿಯುತ್ತೇನೆ. ಅಷ್ಟರಲ್ಲಿ ಶ್ರೀ ಹರಿಯು ತನ್ನ ಜಘನ ಸ್ಥಲದ ದುಕೂಲವನ್ನು ಸಡಿಲಿಸುತ್ತಾನೆ.

ಮೇಳ : ಕಿಸಲಯ ಶಯನ ಸುವೇಶಿತಯಾ ಚಿರಮುರಸಿ ಮ್ಮೆ ವಶಯಾನು ॥
ಕೃತ ಪರಿರಂಭಣ ಚುಂಬನಯಾ ಪರಿರಭ್ಯ ಕೃತಾಧರ ಪಾನಂ॥
ಧ್ವನಿ : ನಾನು ಚಿಗುರಿನ ಹಾಸಿಗೆಯ ಮೇಲೆ ಮಂಡಿಸುತ್ತೇನೆ. ಮೋಹನನು ದೀರ್ಘಕಾಲ ನನ್ನನ್ನು ಆಲಂಗಿಸಿ ಪವಡಿಸುತ್ತಾನೆ. ನಾನೂ ಸಹ ಅವನನ್ನು ಅಪ್ಪಿ ಮುದ್ದಿಡುತ್ತೇನೆ. ಆಗ ಶ್ರೀ ಹರಿಯು ನನ್ನ ಅಧರಾಮೃತವನ್ನು ಸವಿಯುತ್ತಾನೆ. ಹು ಹ್ಹು ಹ ಹಾ
[ಲಜ್ಜೆ ತುಂಬಿದ ನಗು]
ಮೇಳ : ಕೋಕಿಲ ಕಲರವ ಕೂಜಿತಯಾ ಜಿತಮನಸಿಜ ತಂತ್ರವಿಚಾರಂ ।
ಶ್ಲಥ ಕುಸುಮಾಕುಲ ಕುಂತಲಯಾ ನಖಲಿಖಿನ ಘನಸ್ತನಭಾರಂ ॥

ಧ್ವನಿ : ನಾನು ಮರಿ ಕೋಗಿಲೆಯಂತೆ ಧ್ವನಿಗೈಯುತ್ತೇನೆ. ಕಾಮಶಾಸ್ತ್ರ ಪ್ರವೀಣನಾದ ಶ್ರೀ ಹರಿಯು ಸನಿಹದಲ್ಲೇ ಇರುವುದರಿಮದ ನಾನು ಮುಡಿದ ಹೂವುಗಳು ಜಾರುವುವು. ಮುಂಗುರುಳು ಅಸ್ತವ್ಯಸ್ತವಾಗುವುದು. ಆಗ ಅವನು ಘನ ಸ್ತನಗಳ ಮೇಲೆ ಉಗುರಿನ ಗಾಯಗಳನ್ನು ಮೂಡಿಸುವನು.
ಮೇಳ : ರತಿಸುಖ ಸಮಯರಸಾಲಸಯಾ ದರಮುಕುಲಿತ ನಯನ ಸರೋಜಮ ।
ನಿಸ್ಸಹ ನಿಪತಿತ ತನುಲತಯಾ ಮಧುಸೂದನ ಮುದಿತ ಮನೋಜಂ ॥

ಧ್ವನಿ : ರತಿಸುಖ ಸಮಯದ ಆನಂದದಿಂದ ನಾನು ನಿಶ್ಚೇಷ್ಟಿತಳಾಗುತ್ತೇನೆ. ಕೃಷ್ಣನೂ ಪರವಶತೆಯಿಂದ ಅರೆ ಮುಚ್ಚಿದ ಕಣ್ಣುಗಳುಳ್ಳನಾಗುತ್ತಾನೆ. ನಾನು ಅಸಮರ್ಥಳಾಗಿ ನಿದ್ರಿಸುತ್ತೇನೆ. ಆ ಸ್ಥಿತಿಯು ಮಧುಸೂದನನಲ್ಲಿ ಕಾಮ ಪ್ರಚೋದನವಾಗುವಂತೆ ಮಾಡುತ್ತದೆ.
ಹೀಗೆ ಮನಸ್ಸಿನಲ್ಲೇ ಮಂಡಿಗೆ ತಿನ್ನುತ್ತಾ ಕುಳಿತಿದ್ದ ರಾಧೆಯ ಬಳಿಗೆ ಅವಳ ಗೆಳತಿ ಓಡೋಡಿ ಬರುತ್ತಾಳೆ. ಒಸಗೆಯೊಂದನ್ನು ಉಸುರುತ್ತಾಳೆ.
ಮೇಳ : ಧೀರ ಸಮೀರೇ ಯಮುನಾತೀತೇ ವಸತಿ ವನೇ ವನಮಾಲೀ ।
ಗೋಪಿ ಪೀನ ಪಯೋಧರ ಮಧ್ನ ಚಂಚಲ ಕರಯುಗ ಶಾಲೀ ॥

ಧ್ವನಿ : ರಾಧೇ ವನಮಾಲಿಯು ಬೇರೆಲ್ಲೂ ಇಲ್ಲ, ಯಮುನಾ ನದಿಯ ತೀರ ಪ್ರದೇಶದಲ್ಲಿ ವಿಹರಿಸುತ್ತಿದ್ದಾನೆ. ಗೋಪಿಯರ ಪೀನ ಪಯೋಧರಗಳನ್ನು ಮರ್ಧಿಸಿದ ಅವರ ಹಸ್ತಗಳು ಸಂಧ್ಯಾ ಸಮೀರಣನ ಮಂದ ಗಮನದ ಜೊತೆ ಸೇರಿದ ತೊನೆಯುತ್ತಾ ಅತ್ಯಂತ ಮನೋಹರವಾಗಿ ಕಾಣಿಸುತ್ತಿವೆ. ಆದ್ದರಿಂದ ರಾಧೆ ತ್ವರೆ ಮಾಡು
ಮೇಳ : ರತಿಸುಖಸಾರೆ ಗತಮಭಿಸಾರೇ ಮದನಮನೋಹರವೇಷಂ ।
ನಕುರು ನಿತಂಬಿನಿ ಗಮನ ವಲಂಬನ ಮನುಸರತಂ ಹೃದಯೇಶಂ ॥

ಧ್ವನಿ : ಮನ್ಮಥ ಸ್ವರೂಪಿಯೂ, ರತಿ ಸುಖಸರಭೂತನೂ ಆದ
ಶ್ರೀ ಹರಿಯು ನಿನಗಾಗಿ ಸಂಕೇತ ಸ್ಥಳದಲ್ಲಿ ಕಾಯುತ್ತಿದ್ದಾನೆ.
ಆದ್ದರಿಂದ ನೀನು ತಡಮಾಡಬೇಡ ಬೇಗ ಹೋಗಿ ಅವನಲ್ಲಿ
ಸೇರಿಕೊ, ಹೂ ಸಿದ್ಧಳಾಗು.

ಸಖಿಯ ನಿರ್ದೇಶನದಂತೆ ನಡೆದುಕೊಳ್ಳುತ್ತಾಳೆ ರಾಧೆ. ನೀರು ತರುವ ನೆಪದಲ್ಲಿ ನಡುವಿಗೇರಿಸುತ್ತಾಳೆ ಕೊಡವನ್ನು, ಯಮುನೆಯ ತಡಿಯಲ್ಲಿ ಯಾಂತ್ರಿಕವಾಗಿ ಕೊಡ ತೊಳೆದು ನೀರು ತುಂಬುತ್ತಾಳೆ. ಅಷ್ಟರಲ್ಲಿ ಕೃಷ್ಣನ ಕೊಳಲು ಗಾನಗೈದು ಕರೆ ಕೊಡುತ್ತದೆ.

(ರಾಧೆ ನರ್ತಿಸುತ್ತಲೇ ಅತ್ತ ಸರಿದಾಗ ಇತ್ತ ಕೃಷ್ಣ ಕೊಳಲೂದುತ್ತಾ ಪ್ರವೇಶಿಸುವನು)

ಕೊಳಲು : ರಾಧೇ.. ಬಾರೇ.. ರಾಧೇ.. ಬಾರೇ ..
(ಕೊಳಲು ಧ್ವನಿಯಲ್ಲಿ ವಿರಹಾಲಾಪ ತುಂಬಿರಬೇಕು. ಮತ್ತೆ ಮತ್ತೆ ಅನುರಣಿತವಾದ ಆ ನಾದಕ್ಕೆ ರಾಗ ಜೋಡಿಸಿಕೊಂಡ ಹಾಡೊಂದು ಉದಯಿಸಬೇಕು. ನಿಶೆಯಗರ್ಭದಿಂದೆದ್ದ ಪ್ರಥಮ ಕಿರಣದಂತೆ)

ಮೇಳ : ದುಂಬಿಯು ಹಸಿದಿದೆ ಕಸುಮವೆ ಬಳಿ ಬಾ
ಹಸೆಮಣೆ ಏರುವೆ ಒಸಗೆಯಲಿ
ರಾಕಾ ಚಂದಿರ ಬಿಸಿಯುಸಿರೂದಲು
ದೇಹವೆ ದಹಿಸಿದೆ ತಾಪದಲಿ..

ಕೊಳಲು : ರಾಧೇ.. ಬಾರೆ.. ರಾಧೇ.. ಬಾರೇ
ಮೇಳ : ನೀನಿಲ್ಲದ ಜಗ ಶೂನ್ಯವೇ ಆಗಿದೆ
ತುಂಬು ನಿತಂಬಿನಿ ಬಳಿ ಬಾರೇ
ನನ್ನದೆಯುಸಿರಿಗೆ ನೀನೇ ಆಸರೆ
ಬೇಸರಿಸದೆ ಬಾ ಶಶಿವದನೆ

ಕೊಳಲು : ರಾಧೇ..ಬಾರೇ.. ರಾಧೇ.. ಬಾರೇ...
ಮೇಳ : ಅಭಿಸಾರಿಕೆ ಬಾ
ಬಿಂಬಾಧರೆ ಬಾ
ಚಂದ್ರ ಚಕೋರಿಯೇ ಬಳಿ ಬಾರೇ
ಚಂದ್ರ ಚಕೋರಿಯೇ ಬಳಿ ಬಾರೇ
ಚಂದ್ರ ಚಕೋರಿಯೇ ಬಳಿ ಬಾರೇ ೀ ೀ..

(ಸ್ತರ ಸ್ತರಕ್ಕೂ ಸ್ವರ ಎತ್ತರಕ್ಕೇರುತ್ತದೆ. ವಾದ್ಯ ವಿಶೇಷಗಳು ತಾರಕದಲ್ಲಿ ಧ್ವನಿಗೈಯುತ್ತವೆ. ಅಧೇ ತುರೀಯ ಸ್ತರದಲ್ಲಿ ರಾಧೆಯ ಧೈನ್ಯ ಧ್ವನಿಯೂ ಕೇಳಿ ಬರುತ್ತದೆ।
ರಾಧೆ : ಕೃಷ್ಣ.. । ಕೃಷ್ಣಾ..।
ಶ್ಲೋಕ : ತೃಷ್ಣೆ ಪೀಡಿತರಿಂಗೆ ಅಮೃತ ಸ್ವರೂಪಿ ನೀನೇ ಕೃಷ್ಣಾ
ಶಂಖ ಚಕ್ರ ಗದಾಧಾರಿ, ಮುರಾರಿ,
ಶ್ರೀವತ್ಸಲಾಂಛನನೆ,
ಅಂಬುಜೇಕ್ಷಣ ಸುಶೋಭಿತನೆ,
ಕೌಸ್ತುಭರತ್ನ, ಸುಶೋಭಿತನೆ,
ದಿವ್ಯಾಂಬರನೆ, ವಜ್ರ ಖಚಿತ ಕಿರೀಟ
ಕುಂಡಲಗಳಿಂದಲಂಕೃತನಾದ ಶ್ರೀ ಹರಿಯೆ

ಇದಿಗೋ ನಮೋ.. ನಿನಗೆ ನಮೋ
ನಿನ್ನ ಶ್ರೀ ಚರಣಕ್ಕೆ ನಮೋ ನಮಃ ॥
ಈ ರಾಧೆ ಇರವೆಲ್ಲ ನಿನ್ನ ಪದತಲದಲ್ಲಿ
ನಾನಿಲ್ಲ ನೀನೆಲ್ಲ, ನೀನಾನು ಎಲ್ಲ sss ॥

(–ಭಾವಪರವಶರಾಗಿ)
ಕೃಷ್ಣ : ರಾಧಾ..!
ರಾಧೆ : ಮಾಧವ !
ಕೃಷ್ಣ : ನಾನಿಂದು ಪರಿಪೂರ್ಣ !
ರಾಧೆ : ಅಲ್ಲಲ್ಲು ಪರಮಾತ್ಮ..
ನಿನ್ನ ಹಾಲ್ಗಡಲಲ್ಲಿ ನಾನೊಂದು ಪುಟ್ಟ ಹನಿ,
ಹನಿಗೆ ಈ ಅವನಿಯಲಿ ಅಸ್ತಿತ್ವವೆಲ್ಲಿಯದು ?
ಕಡಲು ಸೇರಲು ತಾನೆ ಕಡಲಾಗಿ ಮೊರೆಯುವುದು !

ನಿನ್ನ ಪ್ರಮಾಮೃತದ ಸಾಗರವ ಸೇರುವೆನು
ಸಾಗರವೆ ನಾನಾನಿ ಅನವರತ ಮೆರೆಯುವೆನು !

ಧನ್ಯಳಾದೆನು ದೇವ, ಧನ್ಯಳೀ ರಾಧೇ !!

(ಪುಲಗೊಂಡ ವಾದ್ಯ ವಿಶೇಷಗಳು ಕ್ಷಣಕಾಲ ಧ್ವನಿಗೈಯುವುವು..!)

ಧ್ವನಿ: ಬತ್ತಲೆಯ ಬಯಲಿಂಗ ಕತ್ತಲೆಯು ಮೆತ್ತಿಕೊಂಡಿತ್ತು. ಅಂತಹ ಕಾರಿರುಳಲ್ಲಿ ಜಗದ ಲೀಲಾ ಮುರ್ತಿಗಳಿರ್ವರೂ ಯಾರಿಗೂ ತಿಳಿಯದಿದ್ದ ಏಕಾಂತ ಸ್ಥಳದಲ್ಲಿ ಸೇರಿದರು. ಅಭಿಸರಣೆಗಾಗಿ ಬಂದವರಾದ್ದರಿಂದ ತಮಗೆ ತಾವೆ ನಾಚಿ ತಲೆಬಾಗಿದರು. ಆ ಸುಂದರ ಸಮಾಗಮ ಸಮಯದಲ್ಲಿ ಪ್ರಿಯ ಪ್ರೇಯಸಿಯರಿಬ್ಬರೂ ಏನೆಲ್ಲ ರಸಗಳನ್ನು ಅನುಭೋಗಿಸಿದರು. ಮೊದಲು ಆಲಿಂಗನ, ಅನಂತರ ಚುಂಬನ, ಅನಂತರ ನಖೋಲ್ಲೇಖ ಅನಂತರ ಸಂಭೋಗಾಭಿಲಾಷೆ, ಅನಂತರ ಕಾಮೋದ್ವೇಗ, ಅನಂತ ಸುರತಾರಂಭ, ಅನಂತರ ಆನಂದ – ಹೀಗೆ ರಾಧಾ ಮಾಧವರ ಸುರತ ವಿಲಾಸವು ಆನಂದದಲ್ಲಿ ಪರ್ಯಾವಸಾನವಾಯಿತು.

ಹೌದು, ಅವರ ಪ್ರಣಯ ಕೇವಲ ಲೌಕಿಕದ ಲೈಂಗಿತಾರ್ಥದಲ್ಲಿ ನಿಂತಿಲ್ಲ. ಅದು ಅಧ್ಯಾತ್ಮ ಪರವಾದದ್ದು. ಸಂಸಾರ ಸಂವರ್ಧನೆಗೆ ಪುರುಷ ಮತ್ತು ಪ್ರಕೃತಿಯರ ಸಮ್ಮಿಳನ ಅತ್ಯಾವಶ್ಯಕ ಎಂಬುದನ್ನು ರಾಧಾ ಕೃಷ್ಣರ ಪ್ರಣಯ ಸಂಕೇತಿಸುತ್ತದೆ. ಪ್ರತಿಮಾ ದೃಷ್ಟಿಯಲ್ಲಿ ಗುರುತಿಸಿದಾಗ ಮಾತ್ರ ಅಲ್ಲಿಯ ಕಾಮ ಪ್ರೇಮವಾಗಿ, ಪ್ರೇಮ ಪೂಜೆಯಾಗಿ, ಪೂಜೆ ಸಾಲೋಕ್ಯ, ಸಾನ್ನಿಧ್ಯ, ಸಾರೂಪ್ಯ, ಸಾಯುಜ್ಯವೆನಿಸಿ ಮುಕ್ತಿಯ ಮಹಾ ಫಲವನ್ನೀಯಬಲ್ಲುದು. ಆ ಕಾರಣ ಪರವಸ್ತುವೇ ಕೃಷ್ಣ. ಸಾಧಕನೇ ರಾಧೆ. ಲೌಕಿಕದ ಕಷ್ಟಕಾರ್ಪಣ್ಯಗಳನ್ನು ದಾಟಿ, ದೈಹಿಕ ಸುಖ ದುಃಖಗಳನ್ನು ಮರೆತು ಭಕ್ತ ಭಗವಂತನೆಡೆಗೆ ಧಾವಿಸುವ ಭಾವನೆಯೇ ಈ ರಾಸಲೀಲೆಯ ಗೂಢಾರ್ಥ ! ಹೊರಮೈ ಪ್ರಣಯದಂತೆ ಕಂಡರೂ ಅವರ ಒಳಮೈ ಪ್ರಣವವನ್ನೇ ತುಂಬಿ ಕೊಂಡಿರುವಂಥದು.

ಹೀಗೆ ಅವತಾರ ಪುರುಷ, ಪುರುಷೋತ್ತಮ – ಎಂದೆಲ್ಲ ಕರೆಸಿಕೊಂಡ ಶ್ರೀ ಕೃಷ್ಣನ ಬದುಕು ಭಾರೀ ವಲಯದಲ್ಲಿ ಒಂದು ಭವ್ಯ ಭಾವಗೀತೆ : ಸತ್ಯ, ಜ್ಞಾನ, ಪ್ರೇಮ ಇವುಗಳ ಮೂರ್ತ ಸ್ವರೂಪವಾಗಿರುವ ಆ ದಿವ್ಯ ಚೈತನ್ಯದ ಅಮರ ಸಂದೇಶವೇ ಭಾರತೀಯ ಸಂಸ್ಕೃತಿಯ ಜೀವನಾಡಿ.

ಮೇಳ ರಾಗ : ಬೃಂದಾವನ ಸಾರುಗ
ಜಯ ಜಯ ಜಯ ಜಯ ಜಯ ಜಯ ನಾಟ್ಯಾಂಜಲಿ
ಜಯ ಜಯ ಜಯಹೇ ಜಯ ಗೀತಾಂಜಲಿ ॥

ಶುಭ ಶ್ರಾವಣದಾ ಬಹುಳಾಷ್ಟಮಿಯೊಳು
ರೋಹಿಣಿ ತಾರೆಯ ಬುಧವಾಸರದೊಳು
ಸರಿ ರಾತ್ರೀಯಲೀ ಸೆರೆಮನೆಗಿಳಿದು
ಕಂಸ ಧ್ವಂಸವ ಮಾಡಿದ ಮಹಿಮಗೆ ॥1॥

ಮೋಹನ ಮುರುಳಿಯ ನಾದಮೋದಕೆ

ಪುಲಕಿತರಾದಾದ ಗೋಪಿಯರಂದದಿ
ಕವಿ ಜಯದೇವನ ಕಾವ್ಯಾಂಜಲಿಗೆ
ಮರುಳಾಗಿರುವುದು ಈ ಗೀತಾಂಜಲಿ ॥2॥

ಜಯ ಜಯ ಜಯ ಜಯ ಜಯ ಜಯ ನಾಟ್ಯಾಂಜಲಿ
ಜಯ ಜಯ ಜಯಹೇ ಜಯ ಗೀತಾಂಜಲಿ ॥
॥ ಓಂ ತತ್ ಸತ್ ॥

**ವೀರ ಭಾರತಿ**
(ಭಾರತದ ಪೌರುಷ ಪರಂಪರೆಯ ಪ್ರದರ್ಶನ)

ರಚನೆ:
ಡಾ॥ ಸಾ.ಶಿ.ಮರುಳಯ್ಯ

ಸೂಚನೆ :
ಅಭಿನಯಿಸಲಿಚ್ಛಿಸುವವರು ಗ್ರೀಕ್ ರಂಗಭೂಮಿಯಂತೆ ಸಜ್ಜುಗೊಳಿಸಬೇಕು–

(1) ಅಟ್ಟಣೆ : ಪಾತ್ರಗಳು ಬಂದು ಹೋಗುವ ಮೇಲ್ಭಾಗದ ವೇದಿಕೆ

(2) ಮಧ್ಯರಂಗ: ಮೇಳದವರು ಮತ್ತು ಸಂಗೀತಗೊಷ್ಠಿ ಕುಳಿತಿರುವ ಮತ್ತು ಕಾಲಪುರುಷ ಆಗಾಗ ಬಂದು ಹೋಗುವ ಸ್ಥಳ. ಅಟಣೆಗೀಮತ ಸ್ವಲ್ಪ ಕೆಳಮಟ್ಟದಲ್ಲಿರುತ್ತದೆ ಈ ಮಧ್ಯರಂಗ.

(3) ಪ್ರೇಕ್ಷಕವರ್ಗ : ನೋಟಕರಿಗಾಗಿ ಮೀಸಲಾದ ಸ್ಥಳ.

**ವೀರ ಭಾರತಿ**

[ಭಾರತದ ಪೌರುಷ ಪರಂಪರೆಯ ಪ್ರದರ್ಶನ]

1. ಮನ್ವಂತರ ; ವೈವಸ್ಥಶ ಮನು
2. ಗಂಡು ಗೊಡಲಿ : ಜಮದಗ್ನಿ, ಪರಶುರಾಮ ಮತ್ತು ರೇಣುಕೆ
3. ಗೀತೋಪದೇಶ: ಭಗವಾನ್ ಶ್ರೀಕೃಷ್ಣ ಮತ್ತು ಅರ್ಜುನ
4. ಗದಾಯುದ್ಧ : ಭೀಮ ಮತ್ತು ದುರ್ಯೋಧನ
5. ಬ್ರಹ್ಮತೇಜ : ಚಾಣಕ್ಯ ಮತ್ತು ಚಂದ್ರಗುಪ್ತ
6. ಪುರುಷ ಸಿಂಹ ; ಪ್ರತಾಪಸಿಂಹ ಮತ್ತು ಓರ್ವ ರಾಜದೂತ
7. ಛತ್ರಪತಿ : ಶಿವಾಜಿ, ದಾದಾಜಿಕೊಂಡದೇವ ಮತ್ತು ಜೀಜಾಬಾಯಿ
8. ಮೈಸೂರ ಹುಲಿ : ಟಿಪ್ಪು ಸುಲ್ತಾನ್
9. ಕಿತ್ತೂರ ಕೇಸರಿಣಿ : ಕಿತ್ತೂರು ರಾಣಿ ಚೆನ್ನಮ್ಮ ಮತ್ತು ಸಂಗೊಳ್ಳಿ ರಾಯಣ್ಣ
10. ವೀರಪಾಂಡ್ಯ : ಕಟ್ಟಬೊಮ್ಮ
11. ಪ್ರಥಮ ಸ್ವಾತಂತ್ರ್ಯ ಸಮರ : ಝಾನ್ಸಿರಾಣಿ ಲಕ್ಷ್ಮೀ ಬಾಯಿ
12. ಸಿಂಹವಾಣಿ : ಶ್ರೀ ಸ್ವಾಮಿ ವಿವೇಕಾನಂದರು
13. ಹುತಾತ್ಮ : ಸರದಾರ್ ಭಗತ್ ಸಿಂಗ್
14. ನೇತಾಜಿ : ಸುಭಾಷ್ ಚಂದ್ರಬೋಸ್
15. ಆಂಧ್ರಕೇಸರಿ : ಶ್ರೀ ಪ್ರಕಾಶಂ
16. ಸ್ವಾತಂತ್ರ್ಯ ಶಿಲ್ಪಿಗಳು: ಬಾಪು, ದಾಸ್, ಎನೋಬಾಜಿ, ನಾಯಕ್, ಬಸು, ಗೋಖಲೆ, ಶ್ರದ್ಧಾನಂದ, ದಾದಾಬಾಯಿ, ಮಾಲವೀಯ, ಮುಜುಮದಾರ್, ಅನಿಬೆಸೆಂಟ್, ತಿಲಕ್, ಲಜಪತರಾಯ, ಮೋತಿಲಾಲ್, ಜವಾಹರ್, ಪಟೇಲ್, ಪ್ರಸಾದ್, ನೇಲಿಸೇನಗುಪ್ತ,ಲಾಲ್ ಬಹಾದ್ದೂರ್ ಶಾಸ್ತ್ರಿ,
17. ಕರ್ಣಧಾರ : ಕಾಲಪುರುಷ

(ಕತ್ತಲಿನ ಜಾಗಕ್ಕೆ ಜ್ವಲಿಸುವ ಪಂಜು ಹಿಡಿದು ಕಾಲಪುರುಷ ನಿಧಾನವಾಗಿ ಪ್ರವೇಶಿಸುತ್ತಾನೆ)

ಕಾಲಪುರುಷ :
ಬಾ ಬೆಳಕೆ, ಬಾ !
ಸ್ವರ್ಣ ವರ್ಣಓದಯದ ಅರುಣ ಜೀರ್ಕೊಳವಿಯಲಿ
ಬೆಳ್ಪನ್ನೆ ಮುಕ್ಕುಳಿಸಿ ಬೆಳಬೆಳಗಿ ಬಾ!
ಸಪ್ತ ಸಾಗರದೆದೆಯ ಕುದಿಗ ದಿಯ ತಾಂಡವದಿ
ಲಾಸ್ಯಗೆಯ್ಯುತ ಬಾ !
ಬತ್ತಲೆಯ ಬಯಲೀಮಗೆ ಶಕ್ತಿ ಸಂಕ್ರಮಿಸುತ್ತ
ಭಾರತೀಯನ ಎದೆಗೆ ಸೊದೆ ತುಂಬು ಬಾ!
ಮನಸಣ ಮೌನದ ರುಂದ್ರ ಮರುಭೂಮಿಯೆಡೆಯೊಳಿಹ
ಸಾರ ಶೂನ್ಯವ ಸೂಸಿ
ಭರತ ಪುತ್ರನಲಿಂದು ನಿರ್ದರಯವ ಬಿತ್ತು ಬಾ !
ಧೀರ ಮಂದರದಂತೆ ಅಚಲನಾಗಲಿ ಇಂದು !
ಉತ್ತುಂಗ ಶೃಂಗದೊಲು ತನ್ನತನ ಮೆರೆಯಲಿ !
ಹರಿಹೊನಲ ನೈರ್ಮಲ್ಯ ಅವನ ಧಮನಿಯಲಿರಲಿ !!
ಅವನ ನಾಡಿಯಲೆಂದೂ ಮಿಡಿಯುತ್ತಲಿರಲಿ –
“ನಾ ಭಾರತೀಯ ನಾ ಭಾರತೀಯ”
ಓ ವಿಶ್ವ ಚೇತನಗಳೇ
ನೀವೆಲ್ಲ ಬನ್ನಿ
ಒಮ್ಮಲೇ ಬಂದಿಲ್ಲಿ
ಭಾರತೀಯರಲಿಲ್ಲೆ
ಅವಿರ್ಭವಿಸ ಬನ್ನಿ !
ಜಗದ ಸತ್ತ್ವದ ಸೆಳೆದ ಓ ಭಾರತೀಯ,
ನೀನು ಭಾರತನಪ್ಪಾ !
ಭಂಡ ಬಾಳೆಂದಿಗೂ ನಿನಗಲ್ಲ; ಅದು ಹೊಲ !
ನೀನು “ಭಾರತ!”
ಭಾ: = ಜ್ಯೋತಿಯಲ್ಲಿ, ರತ = ಆಸ್ತಿನಾದವನು !
ನೀನು ಕೀರ್ತಿಕಾಮಕಿಯಲ್ಲ, ಅರ್ಥಕಾಮಿಯಲ್ಲ,
ಮೋಕ್ಷ ಕಾಮಿಯೂ ಅಲ್ಲ,
ನೀನು ಜ್ಯೋತಿ ಕಾಮಿ !
ಜ್ಞಾನ ದಾಹ ನಿನ್ನದು !!
ನೀನು ಭಾರತ !!!

ಓ ಭಾರತ,

ಭಾರತಾಂಬೆಯ ಮನದ ಸುಮಧುರ ಸುಸ್ವಪ್ನವೇ,
ಕಣ್ತೆರೆದು ನೋಡು
ನಿನ್ನ ಸ್ಮೃತಿಪಟಲದ ಮೇಲೆ ಒಮ್ಮೆ ಮೂಡಿಸಿಕೋ..
ಏನೆಂತಹ ಭವ್ಯ ಸಂಸ್ಕರತಿ ನಿನ್ನದು.. !
ಕೆಸರಿನಲ್ಲಿ ಕಮಲವನ್ನೂ,
ಕತ್ತಲೆಯಲ್ಲಿ ಬೆಳಕನ್ನೂ,

ಮಣ್ಣಿನಲ್ಲಿ ಮಾಣಿಕ್ಯವನ್ನೂ,
ಮರಣದಲ್ಲಿ ಅಮೃತತ್ವವನ್ನೂ – ಬೆಳೆದಿದೆ
ನಿನ್ನ ಸಂಸ್ಕೃತಿಯ ವೃಕ್ಷ !
ಎದ್ದು ಬಾ ಸೋದರನೆ,
ನಿನಗೆ ಸಂಶಯಬೇಡ.. ನಾನು ಬೇರಾರು ಅಲ್ಲ..
ನಾ ನಿನ್ನ ಪ್ರಿಯ ಬಂಧು !
ಯುಗಯುಗಾಂತರಗಳು ವೀಕ್ಷಿಸಿದ ಸಾಕ್ಷಿ !
ನಾನೇ ಕಾಲಪುರುಷ !
ಭರತಖಂಡದ ರಾಷ್ಟ್ರ ಕುಂಡಲಿಸಿ ಶಕ್ತಿ !
ಸಂದೇಹಕೆಡೆ ಬೇಡ, ಅಂಜಿಕೆಯ ನುಡಿಬೇಡ,
ಮನದ ಮೈಲಿಗೆ ಹೋಗಿ, ಅಲಸ್ಯವನೆ ದೂಡಿ,
ಎದ್ದು ಬಾ ನನ್ನೊಡನೆ
ಕರೆದೊಯ್ವ ನಿನ್ನನಾ ಅಮೃತತ್ವದೆಡೆ..!

***

ದೃಶ್ಯ ಬದಲಾವಣೆ

(ಜಗದಾದಿ ಶಾಸಕ ಮನು ಗೋಚರಿಸುತ್ತಾನೆ)
ಕಾಲಪುರುಷ ಮನ್ವಂತರ
ಇದು ಮನ್ವಂತರದ ಕಾಲ !
ನೋಡಿಲ್ಲಿ ಸೋದರನೆ,
ನಿನ್ನ ನೋಟಕೆ ಬೆಳಕ ನೀಡಲಿಲ್ಲವೆ ಆತ ?..
ಅವನೆ "ಮನು!"
ಸೂರ್ಯದೇವನ ಪುತ್ರ, ಹೆಸರು ದೈವಸ್ವತ...
ಅದರಿಂದಲೇ ಇದನ್ನು ಕರೆಯುತ್ತಾರೆ.
'ವೈವಸ್ವತ ಮನ್ವಂತರ'ವೆಂದು.
ಈತ ಏಳನೆಯ ಮನು. ಇವನ ಹಿಂದೆ ಸ್ವಯಂಭೂ ಸ್ವಾರೋಚಿಷ, ಉತ್ತಮ, ತಾಮಸ, ರೈವತ, ಚಾಕ್ಷುಷರೆಂಬ ಆರು ಮಂದಿ ಆಗಿ ಹೋಗಿದ್ದಾರೆ. ಇನ್ನು ಮುಂದೆಯೂ ಏಳು ಮಂದಿ ಬರುವವರಿದ್ದಾರೆ. ಆದರೆ ಸದ್ಯದಲ್ಲಿರುವಾತ

'ಧರ್ಮಶಾಸ್ತ್ರ'ದ ಪಿತೃ ! ಜಗದಾದಿ ಶಾಸಕ,
ವೈವಸ್ವತ ಮನು!
ಅದೋ ಅವನ ರಚನೆ 'ಮನುಸ್ಮೃತಿ,
ಮಾನವ ಧರ್ಮಶಾಸ್ತ್ರ !
ಜೀವಕೋಟಿಯ ಹುಟ್ಟು, ಜೀವಕೋಟಿಯ ವೃದ್ದಿ
ಮತ್ತೆ ಲಯ !
ಎಲ್ಲದೂ ಬಿತ್ತರ !
ಮಾನವನ ಕಟ್ಟುಕಟ್ಟಳೆಯಲ್ಲಿ ಮುಗಿಲೆತ್ತರ !
ಆತ ಸಾರಿದ್ದೇನು ?

ವೈದಿಕನ ಹಿರಿಮೆಯೇ?...ಧರ್ಮ ನಿರ್ಣಯವೇ? ವಿವಾಹ, ವಿಚ್ಛೇದನ, ವಿಧವಾದಿಗಳಿಗೆ ನಿರ್ಮಿಸಿದ ಗೊತ್ತುವಳಿಯೆ? ..ವರ್ಣಾಶ್ರಮ ಧರ್ಮವೇ?.. ಇಂದ್ರಿಯ ನಿಗ್ರಹವೆ? ತಪಸ್ಸಿನ ಮಹೋನ್ನತಿಯೆ ? ಪಾತಿವ್ರತ್ಯವೇ? ಪೌರುಷವೇ? .. ಹ್ಞಾಂ..! ಹೌದು! ಪೌರುಷದ ಬಗ್ಗೆ, ನೆರೆಹೊರೆಯ ಶತ್ರುವಿನ ಬಗ್ಗೆ ಮನು ಮಹಾಶಯನಿತ್ತ ಎಚ್ಚರಿಕೆಯ ಮಾತುಗಳಾದರೂ ಏನು ?

ಕೇಳು –

ಹಿನ್ನೆಲೆ : ಶ್ಲೋಕ:–
ನೋಪೇಕ್ಷಿತವ್ಯೋ ವಿದ್ವದ್ಭಿಃ
ಶತ್ರು ರಲ್ಪೋऽಪ್ಯವಜ್ಞಯಾ !
ವಹ್ನಿರಲ್ಪೋऽಪಿ ಸಂವೃದ್ಧಃ
ಕುರುತೇ ಭಸ್ಮ ಸಾಧ್ವನಮ್ ॥

ಕಾಲಪುರುಷ:
"ಶತ್ರು ಎಷ್ಟೇ ಸಣ್ಣವನಾದರೂ, ಜ್ಞಾನಿಗಳಾದವರು ಅವನನ್ನು ಉಪೇಕ್ಷಿಸಿ ಬಿಡುವುದಿಲ್ಲ. ಏಕೆಂದರೆ ಕಿಡಿ ಚಿಕ್ಕದಾದರೂ (ವಾಯು ಮೊದಲಾದವುಗಳ ನೆರವು ಪಡೆದು ಇಡೀ ವನವನ್ನೇ ಭಸ್ಮಭೂತವನ್ನಾಗಿಸುತ್ತದೆ"
ಹೌದು ಸೋದರನೆ, ಶತ್ರುವಿನ ಬಗ್ಗೆ ನೀನು ಸದಾ ಜಾಗೃತನಾಗಿರುವುದನ್ನು ಮೊದಲು ಕಲಿ !
***

**ಗಂಡುಗೊಡಲಿ**

ಹಿನ್ನಲೆಯ ಧ್ವನಿ :
ಜೈ ಪರಶು ಧರ !
ಜಾಮದಗ್ನ್ಯಂ ಗೆಲ್ಗೆ !
ಜಯಮಕ್ಕೆ ಕ್ರಾಂತಿಗೆಂದು !
ವಿಪ್ಲವಕೆ ವಿಜಯಕ್ಕೆ !

ಕಾಲಪುರುಷ : ಓಹ್!ಏಳಿ ನನ್ನೆದೆಯರುಣ

ತರುಣ ತೇಜಸ್ವಿಗಳೇ, ಕೃತಯುಗದಲ್ಲಿ–ಕ್ಷಾತ್ರಕುಲಜಲಧಿಯನ್ನೇ ಆಪೋಷನ ತೆಗೆದ ಭಾರ್ಗವನ ಸಂದರ್ಶನಕೆ ಸಿದ್ಧರಾಗಿ! ಕಾರ್ಯವೀರ್ಯಾರ್ಜುನನ ದ್ರೋಹ ದಬ್ಬಾಳಿಕೆಗೆ ಕೆರಳಿ ಕೇಸರಿಯಾದ ಪರಶುರಾಮ !ಪೌರುಷ ಪ್ರಣಯಿ ಆತ. ರೇಣುಕಾ ಜಮದಗ್ನಿಯರ ಪ್ರೇಮ ಸಂಜಾತ ಶಿಶು, ಆದರೂ ಪಿತೃವಾಕ್ಯ ಪರಿಪಾಲನೆಗಾಗಿ, ತಾಯಿಯನ್ನೇ ತುಂಡರಿಸಿ, ನೆತ್ತರಿನ ಸವಿಯನ್ನು ತನ್ನ ಗಂಡುಗೊಡಲಿಗಾಗಿಸುತ್ತಾನೆ.

ಸಮಾಧಿಯಲ್ಲಿದ್ದ ತನ್ನ ತಂದೆ ಜಮದಗ್ನಿಯನ್ನು ಬಲಿ ತೆಗೆದುಕೊಂಡ ಕಾರ್ತವೀರ್ಯನನ್ನು ನಾಶಗೈದು,ಕ್ಷಿತ್ರಿಯ ಕುಲದ ಕುಡಿಯನ್ನೇ ಸಂಪೂರ್ಣವಾಗಿ ಇಲ್ಲಗೈಯಲು ಯತ್ನಿಸುತ್ತಾನೆ.
ಅಂದು
(ಪರಶುರಾಮನ ಪ್ರವೇಶ. ಅವನ ಮೈ ರಕ್ತ ಸಿಕ್ತವಾಗಿದೆ. ಅವನ ಕೊಡಲಿಯ ಬಾಯಿ ನೆತ್ತರನ್ನು ಕಕ್ಕುತ್ತಿದೆ, ಆರ್ಭಟಿಸುತ್ತ ಆತ ರಂಗಕ್ಕಿಳಿಯುವಾಗ ಭಯಂಕರ ಸ್ಫೋಟವೇರ್ಪಡುತ್ತದೆ)

ಪರಶುರಾಮ : ಗೆಲಮಕ್ಕೆ !
ಹ ಹ್ಹ ಹ್ಹ ಹ್ಹ ಹ್ಹಾ !
ಗೆಲಮಕ್ಕೆ ಜಗದೊಡೆಯನು
ನಿನಗೆಂದೂ ಗೆಲಮಕ್ಕೆ !

ಸತ್ತ ದಿನಗಳ ಕಂಡ ಸತ್ಯಸಾಕ್ಷಿಯು ನೀನು
ನ್ಯಾಯವನ್ಯಾಯಗಳ ತಾಲನೆಗೈದವ ನೀನು
ಧರ್ಮಕ್ಕೆ ಜಯವಿತೆ ಧರ್ಮದೇವನೆ ತಂದೆ
ಅದಕಾಗಿ ಶಿರಬಾಗಿ, ಹಿಡಿದೆತ್ತಿ ಸಾರುತಿಹೆ
ಗೆಲಮಕ್ಕೆ ! ಜಗದೊಡೆಯಾ ನಿನಗೆಂದೂ ಗೆಲಮಕ್ಕೆ !

(ರಂಗಭೂಮಿ ತುಸು ಕಾಲ ಕತ್ತಲು–ಬೆಳಕು, ಕತ್ತಲು–ಬೆಳಕು ಆಗಿ ಕೆಂಪುಛಾಯೆಯಿಂದ ಆವರಿಸಲ್ಪಡುವುದು. ಆಗ ಪರಶುರಾಮ ಬೇರೆ ಬೇರೆ ಭಂಗಿಯಲ್ಲಿ ದೆಸೆ ದೆಸೆಗಳಿಗೆ ತನ್ನ ಗಂಡುಗೊಡಲಿಯನ್ನು ತಿರುಹುತ್ತಾ, ಕೂಗುವನು. ಅವನು ಒಂದೊಂದು ಬೀಸಿಗೂ ಒಂದೊಂದು ರೀತಿಯ ಸ್ಫೋಟವಾಗಿ ಭಯೋತ್ಪಾದನೆಗೊಳಿಸುವುದು)

ರಕ್ತಾ! ಹ ಹ್ಹ ಹ್ಹ ಹ್ಹಾ ! ರಕ್ತಾ !!
ಎಲ್ಲೆಲ್ಲಿಯೂ ರಕ್ತಾ !
ಕ್ಷತ್ರ ಕುಲ ಕುನ್ನಿಗಳ ಕುಟಿಲತೆಯ ರಕ್ತಾ
ದ್ರೋಹ ದುರ್ಗದ ದುರಳ ಪಾರ್ಥಿವದ ರಕ್ತಾ,
ಧೇನುವನು ಸೆಳೆದಿಟ್ಟ ದ್ರೋಹಿಗಳ ರಕ್ತಾ
ಹೆತ್ತವಳಿಗಳುಪಿದಾ ಪಾತಿಕಿಯ ರಕ್ತಾ
ಮತ್ತೆ ತಾತನ ತಿಂದ ಭೂತುವಿನ ರಕ್ತಾ
ರಕ್ತಾ ! ಹ ಹ್ಹ ಹ್ಹ ಹ್ಹಾ ! ರಕ್ತಾ !!
ನನಗಿಂದೂ ರಕ್ತ ದಾಹ !
ನನಗಿಂದು ಪಾರ್ಥಿವದ ಕೆನ್ನೆತ್ತರನು
ಸುರಿದು ಹೀರಿ ಹಿಳಿಯುವ ದಾಹ !
ಹರಿ ! ಹರಿss !! –
ಕಾರ್ತವೀರ್ಯಾರ್ಜುನನ ಕುಕ್ಷಿಯಿಂದುಕ್ಕಿ ಬಹ
ಕೆನ್ನೀರೆ –
ನೀನದಾವಗಲೂ ಇಂತೆಯೇ ಹರಿಯುತಿರು !
ನೊರೆಗಟ್ಟಿ ಮೊರೆ ಮೊರೆದು ಎತ್ತಲುಂ ಪರಿಯುತಿರು !
ಸಿಮಿ ಸಿಮಿಸಿ ಸುತ್ತೆಲ್ಲ, ಮುತ್ತೆಲ್ಲ,
ಮುಗಿಲೆಲ್ಲ, ಸಾಗರಗಳೆಡೆಯಲ್ಲಿ
ಬಿರು ನೆಲದ ಬಾಯ್ಗೆಲ್ಲ
ಭೋರ್ಗರೆದು ಹರಿಯುತಿರು !
ಕಾರ್ತವೀರ್ಯಾಜುನನ ಕೊಳಚೆ ಕೆನ್ನಿರೇ –
ನೀನೆಂದಿಗಾಗಿರೆ ಅವಿಶ್ರಾಂತ ಶ್ರೋತ !
ನನ್ನೆದೆಗೆ ಸೊಗವದುವೆ ಶ್ರೀ ಸುಪ್ರಭಾತ !
**
ಓ ತಂದೆ ! ಜಮದಗ್ನಿ !
ಓ ಜಗದ ಜಂಗಮ ಜ್ವಾಲೆ !
ಆತ್ಮಬಲದುನ್ನತಿಯ ಅಗ್ನಿ ಗೋಪುರ ಶಕ್ತಿ !
ನಿನ್ನ ಹಾಯ್ದರಗನ್ನು ಮರಳಿ
ಹುಡುಲಿಕುಂಟೆ ?
ತಣಿ.. ನೋಡಿ ತಣಿ !
ಉಂಡು ತಣಿ.. ! ಕುಡಿದು ತಣಿ!
ತಣಿ ತಂದೆಯಾತ್ಮವೇ,
ತಿರೆಯೊಳಿನ್ನೆಂದಿಗೂ ಹಗೆಯಿಲ್ಲವೆಂದೆಂದು !
ಪೀಡೆಗಳ ಪುಟಿಕೆಯದು ಪಾಡಳಿದುದೆಂದು !
ತಣಿ, ತಂದೆಯಾತ್ಮವೇ !
ನೋಡು ತಣಿ !
ಉಂಡು ತಣಿ !
ಕುಡಿದು ತಣಿ ~
ಇದೆ ನಿನಗೆ ಶ್ರದ್ಧಾಂಜಲಿ !

ಶ್ರದ್ಧೆಯಿಂದೀಯುತಿಹ
ಶ್ರಾದ್ಧ ಭಾಷ್ಪಾಂಜಲಿ !
ಸಗ್ಗದುಪವನದಲ್ಲಿ ವಹರಿಸುವ
ಓ ಪಿತನೇ,
ರಕ್ತದೋಕುಳಿಯಲ್ಲಿ ಕ್ರೀಡಿಸಿದ
ನನಗಿದಮದು ಉಳಿದುದೊಂದೇ ಕಜ್ಜ
ಕಾರ್ತವೀರ್ಯಾಜುನನ ನೆಣಗೊಬ್ಬ
ಪರಿಪರಿದು, ದೆಸೆ ದೈವಕೆಡೆಯಿತ್ತು,
ನಿಲ್ವೆ ನಾನಚ್ಚರಿಯ ತಪದಲ್ಲಿ ನಿಚ್ಚ !
ಇದು ಸತ್ಯ.. ಇದು ಸತ್ಯ !!
ಇದೆ ಭರತವಾಕ್ಯ !
ಜೈ ಗಂಡುಗೊಡಲಿ !
(ಮತ್ತೆ ಶಬ್ದದೊಂದಿಗೆ ಮುಕ್ತಾಯ)

ಕಾಲಪುರುಷ: ಕೇಳಿದೆಯ ಭಾರತ?
ನಿನ್ನ ಎದೆಯನ್ನೊಮ್ಮೆ ಮುಟ್ಟು ನೋಡಿಕೊ !
ಅವನ ಕೆಚ್ಚಿದೆಯೇ ನಿನ್ನಲ್ಲಿ ?
ಆ ಗಂಡಾಗೊಲಿಯ ಗಂಡನಾ ಗುಂಡಿಗೆಯು ನಿನಗಿದೆಯೆ?
ಏಕಿಲ್ಲ ಭಾರತೀಯ !
ನಿನ್ನನದು ಅದೇ ಪೀಳಿಗೆ ! ಅದೇ ರಕ್ತ !!

ನಿನ್ನ ಧಮನಿ ಧಮನಿಯಲ್ಲೂ ಧುಮಂ ಧುಂಮಿಸಿ ಹರಿಯುತಿದೆ ಅವನ ಕ್ಷಾತ್ರದ ತೇಜ !..
ಇಪ್ಪತ್ತೊಂದು ಬಾರಿ ಭೂ ಪ್ರದಕ್ಷಿಣೆ ಮಾಡಿ ಕ್ಷತ್ರಿಯರ ಮೂಲೋತ್ಪಾಟನ ಮಾಡಿದ ಆ ಪರಶುರಾಮನ ಅಂಶವಾದ ನಿನ್ನಲ್ಲಿ ಅಲ್ಪರಾದ ಆ ಭ್ರಾತೃದ್ರೋಹಿ ಪಾಕಿಸ್ತಾನಿಗಳನ್ನು ಒಮ್ಮೆಲೇ ಚೆಂಡಾಡುವ ಶಕ್ತಿಯಿಲ್ಲವೇ?

ಹೇಳು ಭಾರತ ಪುತ್ರ,
ದ್ರೋಹಿ ಚೀಣೀಯರು ಹುಟ್ಟಳಿಸುವಷ್ಟು ಹರುಡು ನಿನ್ನ ಮೆಯ್ಯಲಿಲ್ಲವೇ?
ಸಾಗರವನ್ನೇ ಅಪೋಷಣಂ ಗೈದ ಅಗಸ್ತ್ಯ ನೀನು !
ನಿನಗೇಗೆ ಭೀತಿ?
ಮುನ್ನುಗ್ಗು! ಘೋರ ಘೋಷಣೆ ಮಾಡು ಜಾಮದಗ್ನ್ಯಂ ಗೆಲ್ಗೆ !

ಹಿನ್ನೆಲೆ ಧ್ವನಿ : ಜಯಕ್ಕೆ ಕ್ರಾಂತಿಗೆಂದು !
ವಿಪ್ಲವಕೆ ವಿಜಯಕ್ಕೆ !
[ಗುಡುಗು ಮಿಂಚುಗಳೊಂದಿಗೆ ದೃಶ್ಯ ಮುಗಿಯುವುದು]

**ಗೀತೋಪದೇಶ**

ಹಿನ್ನೆಲೆ : ಯದಾಯದಾಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ
ಅಭ್ಯುತ್ಥಾನ ಮಧರ್ಮಸ್ಯ ತದಾತ್ಮಾನಂ ಸ್ವಜಾಮ್ಯಹಂ

ಕಾಲಪುರುಷ: ಕೇಳಿದೆಯ ಸೋದರನೆ ಪರಮಾತ್ಮನ ಅಭಯವಾಣಿಯನ್ನು !
ಹೌದು...
ನಮಗಿಂದು ಇಷ್ಟೇ ಆಶ್ವಾಸನೆ ಸಾಲದ,

ವಿಶ್ವ ನಾಟಕ ಸೂತ್ರಧಾರಿ,
ನೀನು ಸೂತಾವತಾರಿಯಾದರೆ ಸಾಲದು.
ಧರ್ಮಕ್ಕೆ ಗ್ಲಾನಿಯುಂಟಾದಾಗ, ಅದರ ಉದ್ಧಾರ
ಕಾರ್ಯದಲ್ಲಿ ನಿರತನಾಗುವುದಾದರೆ
ಬಾ ಸ್ವಾಮಿ,
ಪುರುಷೋತ್ತಮನಾಗಿ ಬಾ !
ಗುಂಡುಗಳ ಮಳೆಗರೆದು,
ಅಣುಬಾಂಬು ಸ್ಫೋಟನಂ ಗೈಯುತ್ತ ಬಾ.
ಕೋಟಿ ಟ್ಯಾಮಕಿನ ರೂಪು,
ಶತಕೋಟಿ ಫ್ಲೇನುಗಳ ಆವಿಷ್ಕಾರ
ಅದಾಗಲೀ ನಿನ್ನ ಸಾಕ್ಷಾತ್ಕಾರ..!
– ಹೀಗೆಂದು ಬೇಡಿಕೋ ಭಾರತೀಯ
ಮೋಹಜ್ವರ  ಪೀಡಿತನಾದ ಅರ್ಜುನನ
ಬೇಡಿಕೆ ಏನು –

ಅರ್ಜುನ : ಏತಾನ್‌ನ ಹಂತುಮಿಚ್ಛಾಮಿ ಘ್ನತೋಪಿ ಮಧುಸೂದನ !
ಅಪಿ ತ್ರೈಲೋಕ್ಯ ರಾಜ್ಯಸ್ಯ ಹೇತೋಃ ಕಿಂ ನುಮಹೀಕೃತೇ ॥

ಕಾಲಪುರುಷ : ಹೇ ಮಧುಸೂದನ, ಇವರಿಂದ ನಾನು ಕೊಲ್ಲಲ್ಪಟ್ಟರೂ, ಇವರನ್ನೆಲ್ಲಾ ನಾನು ಕೊಲ್ಲಲಾರದವನಾಗಿದ್ದೇನೆ. ಇದರಿಂದ ಮೂರು ಲೋಕದ ಒಡೆತನ ಬಂದರೂ ನಾನೊಲ್ಲೆ. ಅಂದಮೇಲೆ ಈ ಭೂಮಿಯ ಮಾತಿನಿಂದೇನು ಸ್ವಾಮಿ?
–ಅದಕ್ಕೆ ಪರಮಾತ್ಮನ ಉತ್ತರ –
ಶ್ರೀ ಕೃಷ್ಣ : ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಶು ಕದಾಚನ
ಮಾಕರ್ಮಫಲ ಹೇತುರ್ಭೂರ್ಾಮತೇ ಸಮಗೋಸ್ತ್ವ ಕರ್ಮಣಿ

ಕಾಲಪುರುಷ : 'ಕರ್ಮದಲ್ಲಿ ನಿನಗೆ ಅಧಿಕಾರವಿದೆಯಾದರೂ, ಅದರ ಫಲಗಳ ಬಗ್ಗೆ ನಿನಗೆ ಇಚ್ಛೆ ಇಲ್ಲದಿರಲಿ ಅರ್ಜು, ನೀನು ಕರ್ಮಫಲಕ್ಕೆ ಕಾರಣನಾಗಬೇಡ, ಕರ್ಮತ್ಯಾಗದ ಬುದ್ಧಿ ನಿನಗೆ ಬಾರದಿರಲಿ'

ಅ ಹ ಹಾ ! ಎಂತಹ ದಿವ್ಯ ಮಂತ್ರ !!
ನಾವಿಂದು ಕರ್ಮ ಭ್ರಷ್ಟರಾಗಬಾರದಲ್ಲವೇ ?
ಸೋದರನೆ,
ಮತ್ತೆ ಕೇಳು ಆ ಪರಾತ್ಪರ ಚೇತನನಾದ
ಆ ಪರಮಾತ್ಮನ ವೀರವಾಣಿಯನ್ನು –

ಶ್ರೀ ಕೃಷ್ಣ : ಹತೋವಾ ಪ್ರಾಪಸಿ ಸ್ವರ್ಗಂ ಚಿತ್ವಾವಾ ಭೋಕ್ಷ್ಯಸೆ
ಮಹೀಂ ತಸ್ಮಾದುತ್ತಷ್ಠ ಕೌಂತೇಯ ಯುದ್ಧಾಯ ಕೃತ ನಿಶ್ಚಯಃ ॥

ಕಾಲಪುರುಷ : 'ಸತ್ತರೆ ಸ್ವರ್ಗ, ಜಯಿಸಿದರೆ ರಾಜ್ಯಭೋಗ,
ಎಲೈ ಕೌಂತೇಯನೇ, ದೃಢ ಮನಸ್ಕನಾಗಿ ಈಗ ಯುದ್ಧಕ್ಕೆ ನಿಲ್ಲು,
–ಸೋದರನೆ,
ನಮಗಿಂದು ಇದೆ ಎಚ್ಚರಿಕೆಯನ್ನೀಯುವ ಗಾರುಡಿನ
ಅವಶ್ಯಕತೆ ಇದೆಯಲ್ಲವೇ?
ಅವನದು ಕೊಳಳಲ್ಲ – ಪಾಂಚಜನ್ಯ !

ಕೋಟಿ ಕೋಟಿ ಜನತೆಯನ್ನು ಜಾಗೃತಗೊಳಿಸಿದ ಮಹಾ ಮೋಹಕ ಮಂತ್ರ !
ಇದು ನಮಗಿಂದು ಬೇಕು ಅಲ್ಲವೇ ?

***

**ಗಧಾಯುದ್ಧ**

ಹಿನ್ನೆಲೆ : ಎಲ್ಲಿ ಭೀಮ? ಎಲ್ಲಿ ?
ಆ ಮಾರಿಯೋರ್ವಳ ಗಂಡ !
ಕಗ್ಗಲ್ಲು ! ಕಸುಗಾಯಿ !
ಆ ಗೊಡ್ಡು ಬೆದರಿಕೆಯಾ ಗೂಬೆ
ಎಲ್ಲಿ...?

ಕಾಲಪುರುಷ: ಹಾಂ ..! ಹಾಂ..! ಸಾವಧಾನ ಚಕ್ರವರ್ತಿ ಸಾವಧಾನ ! ಈಗ ತಾನೆ ವೈಶಂಪಾಯನ ಕೊಳದಿಂದೆದ್ದ ನಿನಗೆ ಕಣ್ಣು ಕತ್ತಲಿಸಿದೆ. ನೋಡಿಲ್ಲಿ, ಪರಮಾತ್ಮ. ಅದೋ ಧರ್ಮಸೂನು, ಅರ್ಜುನ, ಅಶ್ವಿನೀ ಕುಮಾರರು ಚಕ್ರವರ್ತಿ ಇದೋ ಇವನೇ ನಿನಗೆ ಹೆಗಲೆಣೆ ಕಲಿಭೀಮ !

ದುರ್ಯೋಧನ : ಭೀಮಾ..! ಎಲ್ಲಿ ?
ಆ ಮಾರಿಯೋರ್ವಳ ಗಂಡ !
ಕಗ್ಗಲ್ಲು ! ಕಸುಗಾಯಿ !
ಆ ಗೊಡ್ಡು ಬೆದರಿಕೆಯಾ ಗೂಬೆ
ಎಲ್ಲಿ ?

ಕಾಲಪುರುಷ : ಹಾಂ..! ಹಾಂ..! ಸಾವಧಾನ ಚಕ್ರವರ್ತಿ ಸಾವಧಾನ ! ಈಗ ತಾನೆ ವೈಶಂಪಾಯನ ಕೊಳದಿಂದೆದ್ದ ನಿನಗೆ ಕಣ್ಣು ಕತ್ತಲಿಸಿದೆ. ನೋಡಿಲ್ಲಿ, ಪರಮಾತ್ಮ, ಅದೋ ಧರ್ಮಸೂನು, ಅರ್ಜುನ, ಅಶ್ವಿನೀ ಕುಮಾರರು ಚಕ್ರವರ್ತಿ ಇದೋ ಇವನೇ ನಿನಗೆ ಹೆಗಲೆಣೆ ಕಲಿಭೀಮ !

ದುರ್ಯೋಧನ : ಭೀಮಾ..! ಎಲ್ಲಿ?

ಭೀಮಾ : (ಗದೆಗೆ ಗದೆ ತಾಕಿಸಿ) ಇಲ್ಲಿ.. ಸುಯೋಧನಾ..
ನಿನ್ನನುಜನರುಣ ಜಲಮಂ
ಮುನ್ನಂ ತವೆ ಪಿರ್ದೋಡಂಜಿ ನೀಂ ಪುಗೆ ಕೊಳನು
ಬೆನ್ನನೆ ಬಂದಾಂ ಶೌ
ರ್ಯೋನ್ನತನೀಯಿರ್ದನಲ್ತೆ ಕೌರವ ಮಲ್ಲಂ ॥

ದುರ್ಯೋಧನ : ನಾಡಾಡಿಗಳಂತೆ ಬೇರು ಬಿಕ್ಕೆಯಂ ತಿಂದ ಏ ಕಾಡ !

ನಿನಗೇಕೋ ಈ ಪೌರುಷ ? ಆ ವಿರಾಟನ ಮನೆಯಲ್ಲಿದ್ದ ಪುಟ್ಟು ಸಟ್ಟುಗಮಂ ಬಿಸುಟ್ಟು ಗೆದೆಗೊಳ್ಳುವಷ್ಟು ಪೊಡರ್ಪು ಬಂತೇ ನಿನಗೆ?
ಭೀಮ : ಅಹುದಹುದು ಚಕ್ರವರ್ತಿ ! ಪಿರಿಯಣ್ಣನ ನನ್ನಿಗಾಗಿ ಬಾಣಸುಗಯ್ದೆಂ–ಇಂದು, ಕರುವಂಶಜ ನಿನ್ನೀ ಶರೀರ ಮಾಸದೊಳೆಮರುಳ್ಗೆ ಬಾಣಸುಗೆಯ್ವಂ !
ಧುರ್ಯೋಧನ : ಓಹೋಹೋ ! ಮಾತಿನಮಲ್ಲ ! ಎಲ್ಲಿರ್ದುದೊ ಈ ಗಂಡಗರ್ವಂ ಕೃಷ್ಣೆಯಂ ಸೆಳೆದಾಡಿದುದು ಷಂಡ !
ಭೀಮ : ಪಾಪೀ

ಚತುರಂತ ಕ್ಷಿತಿಕಾಂತೆ ಕೇಳ್ ಜಲಧಿ ಕೇಳ್ ಸಪ್ತಾರ್ಚಿ ಕೇಳ್ ತಾತಮಾರುತ ಕೆಳ್ ಮಾರುತ ಮಾರ್ಗ ಕೇಳ್ ಪಗೆವನು
ಕೋಂದೆನ್ನ ಕೋಪಾಗ್ನಿಗಾಹುತಿ ಮಾಳ್ಪೆಂ ಗಡಮೆಂದು ಪುಣ್ದೋದರಿದೆಂ ಕೌರವ್ಯ ಕೋಳಾಹಳಂ ॥
– ತಿಳಿಯಿತೇ ಈ ಪ್ರತಿಜ್ಞೆಯಲ್ಲಡಗಿದೇ ನನ್ನ ಗಂಡಗರ್ವಂ ॥
ದುರ್ಯೋಧನ : ಓಹ್ ! (ಗದೆಬೀಸಿ) ಇದು ಕಳಿಂಗನಂ ನುಂಗಿದ ದರ್ಪಕ್ಕೆ!
ಭೀಮ : (ಗದೆಯಿಂದಲೇ ಉತ್ತರಿಸಿ) ಇದು ಲಾಕ್ಷಾಗೇಹ ದಾಹಕ್ಕೆ.
ದುರ್ಯೋದನ : ಕುರು ಬಾಲರಂ ತಿಂದ ರಕ್ಕಸತನಕ್ಕೆ

ಭೀಮ : ಕೃತ್ರಿಮ ವಿಷಾನ್ನಕ್ಕೆ ! ಜೂದಿಂಗೆ

ದುರ್ಯೋಧನ : ದುಶ್ಯಾಸನನ ರಕ್ತಮಂ ಪೀರ್ದ ಪೈಶಾಚ್ಯಕ್ಕೆ !

ಭೀಮ : ಪಾಂಚಾಲೀ ಪ್ರಪಂಚಕ್ಕೆ

ದುರ್ಯೋಧನ : ಕರ್ಣಂಗೆ..
[ಭೀಮ ಬೀಳುತ್ತಾನೆ]
[ತನ್ನಲ್ಲಿಯೇ]
ಇದು ಧರ್ಮಯುದ್ದ ಪೊಯ್ದೆಂ ಬಿಳ್ದನಂ
ಇರಿಮ ಎಚ್ಚರಿಸುವೆಂ ಗದೆಯ ಗಾಳಿಯಿಂ
[ಗದೆಯಲ್ಲಿ ಗಾಳಿ ಹಾಕುವನು, ಭೀಮ ಎಚ್ಚೆತ್ತು]

ಭೀಮ : ಕೃಷ್ಣೆ..! ಕೃಷ್ಣೆ..!!
ಏನಾಯ್ತು ನನ್ನ ಊರುಭಂಗ ಪ್ರತಿಜ್ಞೆ..?

ದುರ್ಯೋಧನ : (ಗದೆಯನ್ನಿತು, ತೊಡೆ ತಟ್ಟಿಕೊಳ್ಳುತ್ತಾ)
ಭಂಗವಾಯ್ತು !

[ತುಸು ಕಾಲ ಯುದ್ದ ನಡೆದು ಸುಯೋಧನ ಬೀಳುತ್ತಾನೆ]

ಭೀಮ : (ರೌದ್ರ ರಕ್ಕಸನಂತೆ)
ಕೃಷ್ಣೇ.. ಕೌರವ ಕಾಳರಾತ್ರಿ, ಬಾ, ಬೇಗ ಬಾ,
ನೋಡು ಬಾ, ಊರು ಭಂಗಂ..! ಕಿರೀಟ ಭಂಗಂ..!!

(ಒದೆಯುತ್ತಾನೆ)

*****

**ಬ್ರಹ್ಮ ತೇಜ**

ಕಾಲಪುರುಷ : ಇದು ಭಾರತದ ಪರಂಪರೆ !
ಪೌರುಷ ಪ್ರಚೋದನೆ !
ಇದು ನಮ್ಮ ನಾಡು
ಗಂಡುಗಲಿಗಳ ಬೀಡು
ಶ್ರೀರಾಮತ್ವನವೆ ನೆಲೆಗೊಳಿಸಿ, ಯೋಜನವ ಹಾರಿದಾ
ಅಂಜನಾಸುತನ ಅಂಶ ಸಂಭೂತರು ನಾವು !

ಗಾಂಡೀವಧಾರಿಗಳು
ಪಾಸುಪತವನೆ ಪಡೆದ ಪೌರುಷ ಪ್ರಣಯಿಗಳು !

ಅಂತೆಯೇ ಶಕ್ತಿ ಎನಿಸುತ್ತಿದ್ದರೂ ಯುಕ್ತಿಯೊಂದನೆ ಹೂಡಿ ರಾಜನೀಇತಯ ಮೆರೆದ ಮಹಾಮಹಿಮ ಸಂಪನ್ನರು ನಮ್ಮ ಭಾರತದವರು.
ಅಣು ಶಕ್ತಿಯಷ್ಟೆ ಬಲಿಷ್ಟ ಅವರ ಯುಕ್ತಿ. ಅದೋ, ಜಗತ್ಪ್ರಸಿದ್ಧ 'ಅರ್ಥಶಾಸ್ತ್ರ' ದ ತಂದೆ, ಕೌಟಿಲ್ಯನೆಂಬಭಿಧಾನಿ ಮಹಾಮೇಧಾವಿ ಚಾಣಕ್ಯ! ನಂದನಿಗ್ರಹಗೈದು, ಚಂದ್ರಗುಪ್ತನನ್ನು ಸಿಂಹಾಸನದಲ್ಲಿರಿಸುವುದರ ಮೂಲಕ, ಗುಪ್ತ ಸಾಮ್ರಾಜ್ಯವನ್ನೇ ಪ್ರತಿಷ್ಠಾಪಿಸಿದ ತೇಜಸ್ವಿ !

ಅದೋ –
[ಚಾಣಕ್ಯ–ಚಂದ್ರಗುಪ್ತರ ಪ್ರವೇಶ]
ಚಂದ್ರಗುಪ್ತ ದಿನಗಳು ಬಲಿತಂತೆ ನನ್ನ ಇಷ್ಟಾರ್ಥಗಳು ಪೂರ್ಣವಾಗುತ್ತ ಬಂದವು. ನನ್ನ ಅವಮಾನಕ್ಕೆ ಕಾರಣರಾದ ಈ ಉದ್ಧತ ನಂದರನ್ನು ನರಕಕ್ಕೆ ಕಳುಹಿಸಿದ್ದಾಯಿತು. ಶರಣು ಬಂದ ನಿನ್ನನ್ನು ಸಿಂಹಾಸನದ ಮೇಲಿರಿಸಿ ಅಮಾತ್ಯ ರಾಕ್ಷಸನನ್ನು ನಿನಗೆ ಅನುವಾಗಲು ನೇಮಿಸಿದ್ದೂ ಆಯಿತು. ಮನುಷ್ಯ ಮಾತ್ರದವನು ತನ್ನ ಮಿತಿಯಲ್ಲಿ ಏನೆಲ್ಲ ಸಾಧಿಸಿ ತೋರಬಹುದೋ ಅಷ್ಟನ್ನೂ ನಿನಗಾಗಿ ಅಲ್ಲ ಧರ್ಮಕ್ಕಾಗಿ ದುಡಿದ್ದಾಯಿತು. ಇನ್ನೆಷ್ಟು ದಿನ ನಿನ್ನ ಬಳಿ ನಾನು ಇದ್ದೇನು? .. ಅದೋ ತಪೋವನವು ಆಗಲೇ ಕೈ ಬೀಸಿ ಕರೆಯುತ್ತಿದೆ! ನನಗಿನ್ನು ಅನುಮತಿಯನೀಡು ಭಾರತ ಚಕ್ರವರ್ತಿ !

ಚಂದ್ರಗುಪ್ತ : ನನ್ನಾರಾಧ್ಯ ದೈವವೇ. ಮೃತ್ತಿಕೆಯ ಪುತ್ಥಳಿ ನಾನು ! ಇದಕ್ಕೆ ಚಿನ್ಮಯತೆಯನ್ನು ದಯಪಾಲಿಸಿದಿರಿ. ಕೃಪೆ ತೋರಿ ಪೋಷಿಸಿದಿರಿ. ನಿಮ್ಮ ಕರುಣೆಯ ಕಂದನೆಂದು. ತಂದೆ, ನಿನ್ನ ಬೇಡುವುದು ಒಂದೇ. ಅದು ಕಟ್ಟಕಡೆಯ ಆಶೀರ್ವಾದ ! ಅದೇ ನನಗೆ ರಕ್ಷೆ.
[ಪಾದ ಮುಟ್ಟಿ ನಮಸ್ಕರಿಸುವನು]

ಚಾಣಕ್ಯ: ಚಂದ್ರಗುಪ್ತ, ರಾಜ್ಯವನ್ನು ಗೆಲ್ಲುವುದು ದೊಡ್ಡದಲ್ಲ, ಗೆದ್ದ ರಾಜ್ಯವನ್ನು ಉಳಿಸಿ ಬೆಳೆಸಿಕೊಳ್ಳುವುದು ದೊಡ್ಡದು. ರಾಜ್ಯವನು ಗೆದ್ದಂತೆ, ಅಲ್ಲಿನ ಜನತೆಯ ಹೃದಯವನು ಗೆಲಬೇಕು ಪ್ರೀತ್ಯಾದರಗಳಿಂದ. ಅವರಲ್ಲಿ ರಾಷ್ಟ್ರೀಯ ಭಾವನೆ, ರಾಜಸಿಂಹಾಸನದ ಬಗ್ಗೆ ಪ್ರೇಮ, ಇವನ್ನೂ ಮೂಡಿಸಿ ಬೆಳಸಬೇಕು. ಪ್ರಜಾಪಾಲಕ ಇವನ್ನೂ ಮೂಡಿಸಿ ಬೆಳೆಸಬೇಕು. ಪ್ರಜಾಪಾಲಕ ಮೊದಲು ಪ್ರಜಾಸೇವಕನಾಗಿ ದುಡಿಯಬೇಕು. ಅದು ರಾಜಲಕ್ಷಣ. ನಿನ್ನಲ್ಲಿ ಈ ಅರಿವು ಸದಾ ಜಾಗೃತವಾಗಿರಲಿ!. ಸರ್ವಶಕ್ತನಾದ ಸರ್ವೇಶ್ವರನು ನಿನಗೆ ಸಕಲ ಸನ್ಮಂಗಲವನ್ನೂ ಕರುಣಿಸಲಿ !
ಓಂ ತತ್ ಸತ್....

***************

**ರಜಪುತಾನದ ಸಿಂಹ**

ಕಾಲಪುರುಷ : ಏಳು ಭಾರತ, ಎದ್ದೇಳು –
ನಡೆ ಅತ್ತ ಆ ರಜಪುತಾನದ ರುಂದ್ರ ಮರುಭೂಮಿ
ಯಡೆಗೆ! ಮೂರ್ಖ ಮ್ಲೇಚ್ಛರ ಪದಾಘಾತಕ್ಕೆ ಸಿಕ್ಕು ನುಚ್ಚು ನೂರಾದ
ಆ ದುರ್ಗ್ ದೇಗುಲಗಳನ್ನೊಮ್ಮೆ ನೋಡು –
ಅಂದಿನಾ ಸ್ವರ್ಗ ಸುಮಧುರ ಬೀಡು
ಇಂದು ಕಾಗೆ ಗೂಗೆಯ ಗೂಡು !
ನರಿ ನಾಯಿ ಹಂದಿಗಳ ಆಟಿಕದ ನೆಲವೀಡು !
ಅದೋ ಅದೇ ಚಿತ್ತೂರು !
ಇದೇ ಕಮಲ ಮೇರು !
ಭಾರತದ ವೈಜಯಂತಿಯನು ನೆತ್ತಿಯಲ್ಲಿಟ್ಟ ಮೆರೆದ ಮಹಾಶೃಂಗ !
ಇಂದೇನೋ ಅದಕೆ ಅರಿವಿಲ್ಲದಾ ಭಂಗ !

ಏಳು ಭಾರತ ವೀರ
ಕರೆ ಇಲ್ಲಿ, ನಿನ್ನ ಕಣ್ಣಿನಲ್ಲಿರುವ ನೀರನ್ನೆಲ್ಲಾ ಕರೆ !
ಎದೆಯಳಲ ತೋಡಿಕೋ !
ಅವನೇ ಪ್ರತಾಪ !
ರಜಪುತಾನದ ಸಿಂಹ !

ಅದರಿಂದು ನೀನು ಕಾಣುತ್ತಿರುವುದು ಮಹಾರಾಣ ಪ್ರತಾಪಸಿಂಹನನ್ನಲ್ಲ, ಸೋತು, ಭೀಲರ ತಾಂಡಾಯಲ್ಲಿ ತನ್ನ ಪತ್ನಿ ಪುತ್ರರೊಂದಿಗೆ ತಲೆ ಮರೆಸಿಕೊಂಡಿರುವ ತಸ್ಕರ ರೂಪಿಯನ್ನು ! ಅದೊಂದು ದಿನ.. ಅಕ್ಬರನ ಆಸ್ಥಾನದಿಂದ ಆಗಮಿಸಿದ ರಾಜದೂತನೊಡನೆ ರಾಣ ಸಂಭಾಷಿಸಿ ಬೇಸರಗೊಂಡಿದ್ದಾನೆ. ಆಗ...

ಪ್ರತಾಪ : ಸಾಕು ಮಾಡು ರಾಜದೂತ ಸಾಕು ಮಾಡು ನಿನ್ನ ವರದಿಯನ್ನು. ಈಗಾಗಲೇ ಹತ್ತಿ ಹೊಗೆಯಾಡುತ್ತಿರುವ ಶೋಕಾಗ್ನಿಗೆ ಮತ್ತಷ್ಟು ಅಜ್ಯವನ್ನೆರೆದು ಪ್ರಜ್ವಲಿಸುಂವತೆ ಮಾಡಬೇಡ !

ದೂತ : ಆಶ್ಚರ್ಯ ! .. ಏನಿದು?.. ಕ್ರೋಧಾಗ್ನಿಯು ಪ್ರಜ್ವಲಿಸುವೆಡೆಯಲ್ಲಿ ಶೋಕಕ್ಕೆ ತೆರವಾಯಿತೇ?
ಇವೇನು ವಿಚಿತ್ರ ಮಹಾರಾಣ?

ಪ್ರತಾಪ : ವಿಚಿತ್ರವಲ್ಲ, ಎಲ್ಲವೂ ಸಚಿತ್ರವೇ ಆಗಿದೆ... ಅದಿರಲಿ, ನನ್ನನ್ನು 'ರಾಣಾ' ಎಂದು ಸಂಬೋಧಿಸುವ ನೀನಾರು?

ದೂತ : ನಾನು ನಿನ್ನ ಹಿತ ಚಿಂತಕ ರಾಣಾ ಪ್ರತಾಪ್ !

ಪ್ರತಾಪ : ಹ್ಹಾ..! ಹ್ಹಾ..!! ನೀನು ನನ್ನ ಹಿತ ಚಿಂತಕನೇ ಆಗಿರುವುದು ಸತ್ಯವಾದರೆ ನನ್ನನ್ನು ಆ ರೀತಿ 'ರಾಣಾ' 'ಮಹಾರಾಜಾ' ಎಂದು ಸಂಭೋಧಿಸಿ ಮಾತನಾಡಬೇಡ.

ದೂತ : ಎಂತಹ ಮಾತು ವೀರಾಗ್ರಣಿ..

ಪ್ರತಾಪ : ಅಲ್ಲಿಗೇ ಸಾಕು ಮಾಡು. ನಿನ್ನ ವೀರಾಗ್ರಣಿ ಮಹಾರಾಣ ಪ್ರತಾಪಸಿಂಹ ಮಡಿದು ಬಹಳ ದಿನಗಳಾದವು. ಎಂದು ಹಲ್ದೀಘಾಟಿಯಲ್ಲಿ ಮೊಗಲನಿಗೆ ಸೋತು, ಪತ್ನೀ ಪುತ್ರರೊಡನೆ ತಲೆಮರೆಸಿಕೊಂಡು ಓಡಿದನೋ ಅಂದೇ ಅವನು ಸತ್ತ !... ಈಗ ನಿನ್ನೆದುರಿನಲ್ಲಿರುವವನು ಕೇವಲ ಆ ರಾಣಾ ಪ್ರತಾಪಸಿಂಹನ ಛಾಯೆ ಅಥವ ಪ್ರೇತ ಅಷ್ಟೆ! ಭೀಲರ ತಾಂಡೆಯಲ್ಲಿ ಭಿಕಾರಿಯಾಗಿ, ಅಯ್ಯೋ !

ಧೂತ : ಸಮಾಧಾನ ಪ್ರತಾಪಸಿಂಹ.. ಏನೀ ನಿನ್ನ ಸಂಕಟ ?

ಪ್ರತಾಪ : ಒಂದೇ ಎರಡೇ, ನೂರಾರು, ಸಹಸ್ರಾರು !

ಸೋದರ ಶಕ್ತಸಿಂಹ ಮೊಗಲ್ ಆಸ್ಥಾನದಿಂದ ಹಿಂದಿರುಗಲಿಲ್ಲ. ಕನ್ನರ ತಾತನ ಆರೋಗ್ಯ ಸುಧಾರಿಸಲಿಲ್ಲ. ರಾಜಕುಮಾರಿ ರಾಜೇಶ್ವರಿಯ ದೌರ್ಭಾಗ್ಯ ಈ ಪ್ರತಾಪನ ಕೈ ಹಿಡಿದು ಕಣ್ಣೀರಲ್ಲಿ ಕೈ ತೊಳೆಯುವುದು ಮುಗಿಯಲಿಲ್ಲ. ಅಂಬೇರು ಹಾಳಾಯಿತು, ಕಮಲಮೇರು, ಉದಯಪುರಗಳು ಏನಾದುವೋ ಎಲ್ಲಕ್ಕೂ ಮಿಗಿಲಾಗಿ ಇಮದು ನಡೆದ ಒಂದು ಘಟನೆ...

ದೂತ : ಯಾವ ಘಟನೆ ?

ಪ್ರತಾಪ : ಅಯ್ಯೋ! ಹೆಳಲು ನಾಲಗೆಯೇ ಮೇಲೇಳುತ್ತಿಲ್ಲ.. ಆಗಲಿ ಹೇಳುತ್ತೇನೆ ಕೇಳು. ಈಗ ಮೂರು ದಿನದಿಂದಲೂ ನಮಗಾರಿಗೂ ಅನ್ನ ಇಲ್ಲ ಮಿತ್ರ ! ಆದರೆ ಮೊನ್ನೆ ತಂದ ಕಾಡು ನೆಲ್ಲಕ್ಕಿಯಿಂದ ಎರಡು ರೊಟ್ಟಿ ಮಾಡಿದ್ದಳು

ರಾಜೇಶ್ವರಿ. ಹಂಚಿಕೆಯಲ್ಲಿ ನನ್ನ ಕಿರಿಯ ಮಗಳು ತಾರಣಿಗೂ ಒಂದಷ್ಟು ಪಾಲು ಬಂದಿತ್ತು. ಅದರಲ್ಲಿ ಸ್ವಲ್ಪ ತಿಂದು ಮಿಕ್ಕಿದ್ದನ್ನು ಸಂಜೆಗೆಂದು ಜೋಪಡಿಯ ತಡಿಕೆಯಲ್ಲಿ ಬಚ್ಚಿಟ್ಟಿದ್ದಳಂತೆ. ದುರದೃಷ್ಟದಿಂದ ಕಾಡುಬೆಕ್ಕೊಂದು ಬಂದು ಆ ರೊಟ್ಟಿಯ ಚೂರನ್ನು ಅಪಹರಿಸಿಕೊಂಡು ಹೋಯಿತಂತೆ ! ಇದಾವುದನ್ನು ತಿಳಿಯದ ನಾನು ರೊಟ್ಟಿಗಾಗಿ ಹಂಬಲಿಸುತ್ತಿದ್ದ ಶಿಶುವನ್ನು ಬಹುವಾಗಿ ಥಳಿಸಿದೆ..! ಮಿತ್ರಾ, ಎಂತಹಾ ಪಾಪಿ ನಾನು ! ಹಸಿವೆ ಹಸಿವೆ ಎಂದು ರೊಟ್ಟಿ ಹಿಡಿದುಕೊಂಡು ಕಣ್ಣೀರು ಕರೆಯುವ ಕರುಳಕುಡಿಗೆ ಅನ್ನ ನೀಡುವ ಯೋಗ್ಯತೆ ಇಲ್ಲದಿದ್ದರೂ ಧಾರಾಳವಾಗಿ ಏಟುಗಳನ್ನು ಕೊಡಬಲ್ಲ ಈ ಪಾಪಿ ಕೈಗಳು..! ಅಯ್ಯೋ..!!

ದೂತ : ಶಿವ ಶಿವಾ! ಪ್ರಜಾಪಾಲಕ, ಕಮಲ ಮೇರುದುರ್ಗಾಧೀಶ, ರಾಜಾ ಪ್ರತಾಪಸಿಂಹನ ಕುಟುಂಬವಿಂದು ತುತ್ತು ಕೂಳಿಗಾಗಿ ಹಂಬಲಿಸುವ ದೌರ್ಭಾಗ್ಯ ಬಂತೇ !.. ಅಯ್ಯೋ ದುರ್ವಿಧಿ! ಎಂತಹಾ ದಾರುಣ ಪ್ರಸಂ.. ಇರಲಿ, ಪ್ರತಾಪ ಈಗ ನೀನು ಹೊರಟಿರುವುದಾದರೂ ಎಲ್ಲಿಗೆ?

ಪ್ರತಾಪ : ಆಗ್ರಾ ನಗರಕ್ಕೆ

ದೂತ : ಕಾರಣ ?

ಪ್ರತಾಪ : ಕಾರಣ, ಅಕ್ಬರ್ ಮಹಾಶಯನ ಸಮ್ಮುಖದಲ್ಲಿ ಶಿರಬಾಗಿ ಸೋಲೊಪ್ಪಿಕೊಂಡು ಕಪ್ಪದ ಮೂಲಕ ಸಂಧಾನವನ್ನೇರ್ಪಡಿಸುವುದಕ್ಕೆ. ಅನ್ನಕ್ಕಾಗಿ ಹಾಹಾರಕಾರಪಡುತ್ತಿರುವ ಪತ್ನೀ, ಪುತ್ರರು ಹಾಗೂ ನನ್ನ ಮಿತ್ರ ಪರಿವಾರಕ್ಕೆ ಬೇಗ ಇಷ್ಟು ಗಂಜಿಕಾಣಿಸಲಿಕ್ಕೆ, ನನ್ನೊಬ್ಬನ ಸ್ವಪ್ರತಿಷ್ಠೆಗಾಗಿ ಸ್ವಜನರನ್ನೂ, ಸ್ವದೇಶವನ್ನೂ ಗೋಳಿ ಗೂಡಾಗಿಸಲು ಎಂದಿಗೂ ನನ್ನ ಮನ ಒಪ್ಪವುದಿಲ್ಲ.
ದೂತ : ಯಾರು?.. ಯಾರು ಈ ನುಡಿಗಳನ್ನಾಡಿದವನು. ರಜಪುತಾನದ ಮಹಾರಾಣ ಪ್ರತಾಪ ಸಿಂಹನೇ? ಅಲ್ಲಾ.. ಪ್ರತಾಪ ನಿನ್ನ ಹೇಡಿತನಕ್ಕೆ ಧಿಕ್ಕಾರವಿರಲಿ ! ತೆಗೆದುಕೋ ಈ ಪತ್ರ !

ಪ್ರತಾಪ : ಪತ್ರ !.. ನನಗೆ ಪತ್ರ !1.. ಯಾರಿಂದ?

ದೂತ : ಅಕ್ಬರನ ಆಸ್ಥಾನಕವಿ ಪೃಥ್ವೀಸಿಂಹನಿಂದ !

ಪ್ರತಾಪ : ಏನೆಂಬುದಾಗಿ ?

ದೂತ : ನೀನೇ ಓದಿಕೊ

ಪ್ರತಾಪ : (ಬಿಚ್ಚಿ ಓದುವನು) ಸ್ವಸ್ತಿ ಶ್ರೀಮನ್ಮಹಾರಾಜಾಧಿರಾಜ ರಾಜಪರಮೇಶ್ವರ ಮಹಾರಾಜಾ ಪ್ರತಾಪಸಿಂಹನ ಸಮಕ್ಷಮಕ್ಕೆ –
ಹಿನ್ನಲೆ ಧ್ವನಿ: ಪೃಥ್ವೀಸಿಂಹನು ಮಾಡುವ ಅನಂತ ವಿಜ್ಞಾಪ್ತಿಗಳು –
ಅದಾಗಿ–
ಮಹಾರಾಣರೇ,

ಇಂದಿನವರೆಗೂ ರಾಜಾಸ್ತಾನ ಶ್ಮಶನವಾಗಿರಲಿಲ್ಲ. ಇಂದು ಅದಕ್ಕೆ ಅಂತಹ ದೌರ್ಭಾಗ್ಯ ಬಂದಂತಿದೆ ! ಅದರ ಕೀರ್ತಿಗೆ ರಾಹು ಹಿಡಿದಂತಿದೆ! ಶೂರ ಸಂಗ್ರಾಮ ಸಿಂಹರ ಪೌರುಷ ಪ್ರತಾಪಗಳು ಅವರ ಮಗ ಉದಯ ಸಿಂಹನಲ್ಲದಿದ್ದರೂ, ಅವರ ಮೊಮ್ಮಗ ಪ್ರತಾಪನಲ್ಲಿ ಮೊಳೆದೋರಿದ್ದು ಕಂಡು ಇಡೀ ರಜಪುತಾನವೇ ಆನಂದದ ಹೊನಲು ಹರಿಸಿದ್ದು ನಿಜ. ಆದರೆ ಇಂದು ಅದಾವ ಪ್ರಲೋಭನಕ್ಕೋ ಕಾಣೆ ಕಮಲಮೇರು ದುರ್ಗದ ಕೀರ್ತಿ ಕಳಶ ಮೊಗಲನಿಗೆ ಶಿರಬಾಗಲು ಹೊರಟಿದೆಯಂತೆ ! ಇದು ಪ್ರತಾಪನ ಸೋಲಲ್ಲ. ಇಡೀ ರಾಜಸ್ತಾನದ ಅಳಿವು ! ರಜಪೂತ ರಾಜಲಕ್ಷ್ಮಿಯ ಕುಂಕುಬ ಸೌಭಾಗ್ಯ ಇಂದಿಗೆ ಕಳಚಿಬಿತ್ತು! ಅಂಬೇರು ದುರ್ಗಾಧೀಶ ಮಾನಸಿಂಹ ತುರುಕನಿಗೆ ತಂಗಿಯನ್ನು ಕೊಟ್ಟು, ತನ್ನ ಪವಿತ್ರ ರಕ್ತನನ್ನು ಕೆಸರಿನಕುಂಡವನ್ನಾಗಿಸಿಕೊಂಡಿದ್ದಾನೆ. ಅದರಂತೆ ಅನೇಕ ರಜಪೂತ ರಮಣಿಯರು ಅಗ್ರಾನಗರದ ಜನಾಂಗಕ್ಕೇರಿ ರಜಪೂತ ರಕ್ತ ನೈಜಸ್ವರೂಪವನ್ನೇ ನಿರ್ನಾಮಗೊಳಿಸಿದ್ದಾರೆ. ಆದರೆ ತನ್ನ

ಪಾವಿತ್ರ್ಯೆಯನ್ನು ಉಳಿಸಿಕೊಂಡಿದ್ದ ಏಕೈಕ ರಜಪೂತ ರುಧಿರವೆಂದರೆ ಕಮಲಮೇರುವಿನದು. ಅದು ಇಂದು ಪ್ರತಾಪನೊಬ್ಬನಿಂದ ಕಲುಷಿತವಾಗಿ ಕೊಳಚೆಯ ಗುಂಡಿಯಾಗಿ ಹೋಗಹತ್ತಿದೆ...

ಪ್ರತಾಪ, ಹೆಚ್ಚೂ ಮಾತನಿಂದೇನು? ಇಡೀ ರಾಜಪೂತ ಸಂಕಲುವೇ ಒಬ್ಬನ ಕಡೆ ನೋಡುತ್ತಿದ. ಅಂತಹ ಪ್ರಶಸ್ತಿಗೆ ಪಾತ್ರನಾದವನು ರಾಣಾ ಪ್ರತಾಪಸಿಂಹ !.. ಆದ್ದರಿಂದ ಪ್ರತಾಪ ಇಂದು ಕೊಮಚ ಆಲೋಚಿಸಿ ನೋಡು. ನಿನ್ನನ್ನೇ ನಂಬಿರುವ ಜನತೆಗೆ ದ್ರೋಹ ಬಗೆದು ಭಂಡನಾಡಬೇಡ. ಅನ್ನನ ತಿಂದು ನೀನು ಇಂದು ಬದುಕಿದರೂ, ಕೀರ್ತಿಗೆ ಕಳಂಕ ಬಳಿದುಕೊಂಡು ಬದುಕಿಯೂ ನೀನು ಸತ ಹಾಗೆಏ.. ಆಲೋಚಿಸಿ ಹೆಜ್ಜೆ ಇಡು.

ಇತೀ ನಿನ್ನ ಹಿತಾಕಾಂಕ್ಷಿ
ಪೃಥ್ವೀಸಿಂಹ

ಪ್ರತಾಪ :

**ಛತ್ರಪತಿ**

ಹಿನ್ನೆಲೆಯ ಧ್ವನಿ : ಹರಹರ್.. ಮಹಾದೇವ್ ! ಹರ ಹರ್.. ಮಹಾದೇವ್ !!
ಕಾಲಪುರುಷ : ಸ್ವಾಗತ.. ಛತ್ರಪತಿ.. ಸುಸ್ವಾಗತ !..

ಏಳು ಗೆಳೆಯ, ದೇಶೌಈರ ಶಿವಾಜಿಯನ್ನು, ಸ್ವಾಗತಿಸೋಣ.. ಮೇಲೇಳೂ.. ನೋಡು ಎಂತಹಾ ತೇಜೋಪುಂಜ ಮುಖಮಂಡಲ ಆತನದು ! ಎಷ್ಟೇ ಆಗಲಿ ವೀರಮಾತೆ ಜೀಜಾಬಾಯಿಯ ಪುಣ್ಯಗರ್ಭ ಸಂಜಾತ ಕಿಶೋರಿಯಲ್ಲವೇ?.. ಈತ ಷಹಾಜಿ ಮತ್ತು ಜೀಜಾಬಾಯಿಯವರ ಪ್ರೇಮಫಲ. ಹುಟ್ಟಿದ್ದು ಕ್ರಿ.ಶ. 1630 ಏಪ್ರಿಲ್ ಹದಿನಾರರಂದು. ಶಿವನೇರು ದುರ್ಗಕ್ಕೆ ಅಂದು ಮೊಳೆದೋರಿತು ಕಲಿತನದ ಸೊರ್ಕು ! ಪುಣೆಯಲ್ಲಿ ತನ್ನ ಠಾಣ್ಯವನ್ನು ಪ್ರತಿಷ್ಠಾಪಿಸಿ, ಮೊಗಲರಿಗೆ ಮಣ್ಣು ಮುಕ್ಕಿಸಿದ ಧೀರ ಈತ ! ತನ್ನನ್ನು ಮೋಸಿದಂ ದಿರಿಯಲು ಬಂದ ಅಫ್ಜಲ್‌ಖಾನನ ಬಸಿರನ್ನು ವ್ಯಾಘ್ರಮುಖದಿಂದ ಬಗಿದು ಕರುಳ ಮಾಲೆ ಹಾಕಿಕೋಂಡ ಅಭಿನವ ನರಸಿಂಹಮೂರ್ತಿ ! ಷಯಿಸ್ತಾಖಾನನ ತೋಳು ಕತ್ತರಿಸಿ, ಹಣ್ಣಿನ ಬುಟ್ಟಿಯಲಿ ಅಡಗಿ ಬಂದು ಸ್ವಾತಂತ್ರ್ಯ ಸಾರಿದ ಮಹಾ ಮಾಯಾವಿ ! ಈತನಿಗಿದ್ದ ರಕ್ಷೆ ಎಂದರು. ಎರಡು–ಒಂದು ಇವರ ತಾಯಿ ಜೀಜಾಬಾಯಿ, ಮತ್ತೊಂದು ಇವನ ಗುರು ದಾದಾಜಿ ಕೊಂಡದೇವ.
ಒಂದು ದಿನ –
[ತೆರೆ ಸರಿದಾಗ]

ಶಿವಾಜಿ : ದಾದಾಜಿ, ತಾವೂ ಕೈ ಬಿಟ್ಟರೆ ನಾನು ಅನಾಥನಾಗುವುದಿಲ್ಲವೇ ದಾದಾಜೀ..?

ದಾದಾಜಿ: ಚಿಂತೆ ಬೇಡ ಶಿವಾಜೀ, ನಾನು ಸತ್ತರೆ ನೀನ ಅನಾಥನಾಗುವುದಿಲ್ಲ. ಒಂದುವೇಳೆ ನಿನ್ನಂತಹ ರಾಷ್ಟ್ರವೀರನಿಲ್ಲವಾದರೆ ದೇಶವೇ ಅನಾಥವಾಗುತ್ತದೆ. ಅಪ್ಪಾಜೀ, ಜಾಗ್ರತನಾಗು. ಈ ಮೋಹ ನಿನಗಲ್ಲ.. ಏಳು ಗಂಡುಗಲಿ, ನಾಡಿನ ನಾಡಿ ನಾಡಿಯಲ್ಲೂ ನೂತನ ಚೇತನವು ಸ್ಪಮದಿಸುವಂತೆ ಮಾಡು. ಅಂದು ನಾನು ಕಲಿಸಿ ವಿದ್ಯ ಸಾರ್ಥಕವಾದೀತು. ಶುಭಮಕ್ಕೆ...!

ಶಿವಾಜಿ: ಕೃತಾರ್ಥನಾದೆ ತಂದೆ ! ಗುರುಪಿತನೇ, ಎಂದೆಂದಿಗೂ ಈ ಶಿವಾಜಿ ತಮ್ಮ ಸಂದೇಶವನ್ನು ಶಿರದಲ್ಲಿ ಪಡೆದು ಅದಕ್ಕೆ ಸಾರ್ಥಕ್ಯಕ್ಕೆ ಶ್ರಮಿಸುತ್ತಾನೆ.

ಜೀಜಾಬಾಯಿ: ಕುಮಾರ..

ಶಿವಾಜಿ: ಅಮ್ಮಾ, ನಿನ್ನ ಕಂದನಿಗೆ ನಿನ್ನ ಆದೇಶವೇನು ತಾಯಿ?

ಜೀಜಾ : ಮಗೂ, ಶಿವಾಜಿ, ಅಸೇತು ಹಿಮಾಚಲದ ಪರ್ಯಂತವಿಉರುವ ಈ ಪುಣ್ಯಭೂಮಿ ಭಾರತದಲ್ಲಿ ಧರ್ಮದ ಉದ್ಧಾರ ಆದದ್ದು ಧರ್ಮ ವೀರರಿಂದಲ್ಲ. ಕರ್ಮವೀರರಿಂದಲ್ಲ, ರಣವೀರರಿಮದ ! ಶಿವಾಜಿ, ಎಂದಿಗು ರಣಭೂಇ ನಿನ್ನ ಪಾಲಿಗೆ ಗೋರಿಯಾಗದಿರಲಿ. ಅದು ತಾಯ ಮಡಿಲಂತೆ ಪವಿತ್ರತಾನವೆನಿಸಲಿ. ಶಿವಾಜಿ, ರಣಭೂಮಿಗೆ ಬೆನ್ನು

ತೋರಿಸಿದ್ದಾದರೆ ಭವಿಷ್ಯತೆ ಎಂಬ ವಿಮರ್ಶಕ "ಹೇಇ" ಎಂಬ ಹೆಸರನ್ನು ಅವನ ಬೆನ್ನಿನ ಮೇಲೆ ಬರೆದು ಕಳುಹಿಸುತ್ತಾನೆ. ಆದ್ದರಿಮದ ಅಂತಹ ದೌರ್ಭಾಗ್ಯ ನನ್ನ ಕಂದನಿಗಾಗದಿರಲಿ! .. ಹೋಗಿ ಬಾ ಶಿವಾಜಿ ನೀನು ನಿಜಕ್ಕೂ ಈ ಜೀಜಾಬಾಯಿಯ ಗರ್ಭ ಸಂಜಾತ ಶಿಶುವೇ ಆಗಿದ್ದರೆ ಸೋತು ಹಿಂತಿರುಗಿ ಬರಬೇಡ. ಅಂತಹ ದೀನ ಮುಖದರ್ಶನ ಮಾಡಿಸಬೇಡ. ಜೈ ಭವಾನಿ ಜೈ ಪರಮೇಶ್ವರಿ.. ಹೋಗಿ ಬಾ

ಶಿವಾಜಿ: ಧನ್ಯನಾದೆ ಮಾತಾ.. ಧನ್ಯನಾದೆ!..
ಜೈ ಭನಾನಿ ! ಜೈ ಭವಾನಿ !!
ಆಯಿತು. ತಾಯಿ ಮತ್ತು ಗುರು.. ಈ ಇಬ್ಬರ ಅನಂತರ ಆಶೀವಾದದ ವಜ್ರರಕ್ಷೆಯನ್ನು ಪಡೆದದ್ದಾಯಿತು, ಪುಂಡ ಯವನರೇ, ನಿಮ್ಮ ರುಂಡ ಮುಂಡಗಳನ್ನು ಚೆಂಡಾಡುವ ಸಮಯ ಸನ್ನಿಹಿತವಾಗಿದೆ. ಇಂದು !
ಬನ್ನಿ, ಪಾಪಿಗಳೇ ರಣಭೂಮಿಗೆ ಬನ್ನಿ.
ನಿಮ್ಮ ಕುಲದ ಕುಡಿಗೆ ಇಂದೇ ಇತಿಶ್ರೀ ಹಾಡಿಬಿಡುತ್ತೇನೆ ? ನೆನಪಿರಲಿ ಮೂರ್ಖರೇ, ಈ ಬೆಟ್ಟದ ಹುಲಿಯ ಕೈ ಚಳಕಕ್ಕೆ ಇನ್ನೂ ಮುಪ್ಪು ಬಂದಿಲ್ಲ.. ಹೆಸರೆತ್ತಿದರೆ ಸಾಕು, ನಿಮ್ಮ ಪಿಂಡಾಂಡವೆಲ್ಲಾ ನಡಗುವಂತಾಗಬೇಕು. ಅಂತೆಸಗದಿದ್ದರೆ ನಾನು ಭಾರತಾಂಬೆಗೆ ಕಂದನೇ ಅಲ್ಲ..!

ಓ ನನ್ನ ಮರಾಠಾ ಬಂಧುಗಳೇ,
ಸಂಕುಚಿತ ಬುದ್ಧಿಯ ಸೆರಗು ನಿಮಗೆ ತಟ್ಟದಿರಲಿ,
ನಿಮ್ಮ ರಾಷ್ಟ್ರ ಮಹಾ..ರಾಷ್ಟ್ರ!

ಭರತವರ್ಷದ ಕ್ಷಾತ್ರ ಹೃತ್ಕುಕ್ಷಿ ! ನೀವು ಮೆರೆಯಲಿ ಇಲ್ಲವೇ ಮಡಿಯಲಿ, ಎಲ್ಲದೂ ನಿಮ್ಮ ರಾಷ್ಟ್ರಕ್ಕಾಗಿ. ಎಲ್ಲದೂ ಭರತಮಾತೆಯ ಪ್ರಗತಿಗಾಗಿ.. ನಿಮ್ಮೆಲ್ಲರ ಅಮೋಘ ಬೆಂಬಲವಿದ್ದದ್ದಾದರೆ ಈ ಪುಂಡಯವನರ ಕುರುಹೇ ಈ ಭಾರತದಲ್ಲಿಲ್ಲದಂತಾಗಿಸುತ್ತೇನೆ. ಅಖಂಡ ಭಾರತದ ಹರಿದ್ರ ವೇದಿಕೆಯ ಮೇಲೆ ಈ ಮಹಾರಾಷ್ಟ್ರದ ಇತಿಹಾಸ ಕುಂಕುಮದ ಬೊಟ್ಟಾಗಬೇಕು. ಅಂತಾಗಿಸುತ್ತೇನೆ.
ಬನ್ನಿ.. ಭಾರತಾಂಬೆಯ ವಜ್ರ ವೈದುಷ್ಯ ಚೇತನಗಳೇ ನೆರವಾಗ ಬನಿ. ತೊರೆಯಾಗಿ ಬನ್ನಿ, ಅಶನಿಘೋಷವಗೈದು ಹಾರಾಡ ಬನ್ನಿ !
ಹರ ಹರ್..! ಮಹಾದೇವ್!..
ಹರ ಹರ್..! ಮಹಾದೇವ್!..

ಕಾಲಪುರುಷ: ನೋಡಿದೆಯಾ ಭಾರತ, ಇಂದು ದುಷ್ಟ ಚೀಣೀಯರು ನಡೆಸುತ್ತಿರುವ ಗೆರಿಲ್ಲಾ ಮಾದರಿಯ ಯುದ್ಧಕ್ಕೆ ಈತ ಜನಕ. ತಿಳಿಯತೇ.. ವೀರಕೇಸರಿ ಈತ..! ಭಾರತದ ಹೆಮ್ಮೆಯ ಕಂದ.. ಜೈ ಶಿವಾಜಿ !!!
****

**ಮೈಸೂರು ಹುಲಿ**

ಹಿನ್ನೆಲೆಯ ಧ್ವನಿ: ಅಲ್ಲಾ ಹು ಅಕ್ಬರ್.. ! ಅಲ್ಲಾ ಹು ಅಕ್ಬರ್.. !
ಕಾಲಪುರುಷ: ಬಾ ಭಾರತೀಯ, ನೋಡು ಇವನೇ 'ಮೈಸೂರು ಹುಲಿ' ಎಂದು ಖ್ಯಾತನಾದ ಟಿಪ್ಪು ಸುಲ್ತಾನ್. ಹುಟ್ಟಿನಲಿ ಮುಸಲ್ಮಾನನಾದರೂ ಭಾವನೆಯಲ್ಲಿ ಭಾರೀಯ, ಉಗ್ರ ಸ್ವಾತಂತ್ರ್ಯ ಪ್ರೇಮಿ. ಆಶಾವಾದಿಯೂ ಹೌದು ಕೇಳು –
ಟಿಪ್ಪು : ಬನ್ನಿ.. ಕುನ್ನಿಗಳೇ ಮೇಲೇರ ಬನ್ನಿ.. ಈ ಮೈಸೂರು ಹುಲಿ ನಿಮ್ಮೆಲ್ಲರನ್ನೂ ಕಬಳಿಸಲು ಕಾತರಗೊಂಡು ನಿಂತಿದೆ !
ದ್ರೋಹಿ ಬ್ರಿಟಿಷರೇ, ಅನ್ನ ತಿಂದ ಮನೆಗೇ ಕನ್ನ ಹಾಕುವ ಪಾತಕಿಗಳೇ, ನಿಮ್ಮ ದ್ರೋಹ ಬಹುದಿನ ನಡೆಯಲಾರದು. ಇಂದಲ್ಲ ನಾಳೆ, ನೀವು ಮಡಿದ ಪಾಪದ ವರದಿಯನ್ನು ಧರ್ಮದೇವತೆಯೆಂದು ಒಪ್ಪಿಸಬೇಕಾಗುವುದು !

ವಂಚಕರೇ, ಜಾಗೃತರಾಗಿರಿ, ಒತ್ತೆ ಇಟ್ಟ ಕುಮಾರರನ್ನು ಬಿಡಿ ತಂದಾಯಿತು.. ನಿಮ್ಮ ಕುಟಿಲತೆಯ ಕಾರಾಗಾರದಿಂದ ತಪ್ಪಿಸಿಕೊಂಡು ಬಂದಾಯಿತು. ಇನ್ನುಳಿದಿರುವುದು ಒಂದೇ.. ಅದು ನಿಮ್ಮ ಉಚ್ಚಾಟನೆ ಇಲ್ಲವೇ ಈ ಟಿಪ್ಪುವಿನ ಸಜೀವ ಸಮಾಧಿ !

ರಂಗಾ.. ! ಶ್ರೀರಂಗಾ, ಶೇಷಶಯನನಾಗಿ ಭೂದೇವಿ ಶ್ರೀದೇವಿಯರೊಡನೆ ಆಡುವ ಚಕ್ಕಂದ ಬಿಟ್ಟು ಇಂದೊಂದು ದಿನ ರಣಭೂಮಿಗೆ ಬಾ ಸ್ವಾಮಿ.. ನಿನ್ನ ನಲ್ಲುವರನ ವೀರೋತ್ಸಾಹದ ಹೋರಾಟವನ್ನು ಕಣ್ತುಂಬ ನೋಡಿ ಆನಂದಿಸುವೆಯಂತೆ ! ನಾನೇ ಗೆಲ್ಲುವೆನೆಂಬ ಭ್ರಮೆ ನನಗಿಲ್ಲ ರಂಗನಾಥ.. ಸೋಲು ಗೆಲುವುಗಳು ನಿನ್ನಧೀನ !.. ಆದರೆ ಪ್ರಯತ್ನ ನನ್ನದು.. ಅದನ್ನು ನೋಡಿ ಆನಂದಿಸುವೆಯಂತೆ ಬಾ ತಂದೆ..!

ಅಮ್ಮ, ಕಾವೇರಿ.. ಇದೊಂದು ದಿನ ನನ್ನನ್ನು ಮನ್ನಿಸು ತಾಯಿ, ನಿನ್ನ ಪವಿತ್ರ ಪಾತ್ರದಲ್ಲಿ ಪಾಶ್ಚಾತ್ಯ ಪಶುಗಳ ಕ್ಷತ ವಿಕ್ಷತವಾದ ದೇಹ ರಾಶಿಯನ್ನೊಟ್ಟಿ, ಅಡ್ಡಕಟ್ಟಿ ಹಾಕುತ್ತೇನೆ!.. ನಿನ್ನ ಪಾವನ ಸಲಿಲ ರಕ್ತಮಯವಾಗಿ , ನೊರೆ ತುಂಬಿಹರಿದೀತು....! ಅದಕ್ಕಾಗಿ ನಿನಗೆ ಕೆರಳು ತುಂಬದ ಇರಲಿ ತಾಯಿ..!

ಯಾ ಲ್ಲಾ ಯಾ ಖುದ ಯಾ ಪರಿವರ್ದಿಗಾರ್.. ಇದೂ ನಿನ್ನ ಲೀಲೆಯೇ ತಂದೆ?.. ಮನ್ನಿಸು.. ಈ ಟಿಪ್ಪುವಿನ ಮೇಲೆ ದಯೆ ತೋರು..

ಸೋದರರೇ, ನೀವೆಲ್ಲರೂ ಒಂದಾಗಿ ವನ್ನಿ. ಒಕ್ಕೊರಲಿನಿಂದ ಜೈಕಾರಗೈಯುತ್ತ ಬನ್ನಿ.. ನಮ್ಮಧಮನಿಯಲ್ಲಿ ಹನಿರಕ್ತವಿರುವವರೆಗೂ ತಾಯ್ನಾಡಿಗಾಗಿ ಹೋರಾಡಿ ಮಡಿಯೋಣ...

ನನ್ನ ಮುಸಲ್ಮಾನ್ ಬಾಂಧವರೇ,

ಪವಿತ್ರ ಖುರಾನಿನ ಹೇಳಿಕೆಯಂತೆ ನಡೆಯಿರಿ.. ಇದು ಭಾರತ, ನಿಮಗೆ ಜನ್ಮ ಕೊಟ್ಟ ಭೂಮಿ.. ಇದಕ್ಕೆ ನೀವು ದ್ರೋಹ ಬಗೆದರೆ ನಿಮ್ಮ ಇಸ್ಲಾಂ ಧರ್ಮಕ್ಕೇ ದ್ರೋಹ ಬಗೆದಂತೆ!.. ನಿಮ್ಮ ದೇಶ ರಕ್ಷಣೆ ನಿಮ್ ಧ್ಯೇಯವಾಗಲಿ! ನೀವು ತಾಯ್ನಾಡಿಗಾಗಿ ಹೋರಾಡಿ ಮಡಿಯಿರಿ. ನನ್ನ ದೇಶ ಬಾಂಧವರೇ, ಇದು ಟಿಪ್ಪುವಿನ ಗೆಲುವಲ್ಲ.. ನಿಮ್ಮ ಗೆಲುವು ! ಇಡೀ ಕನ್ನಡನಾಡಿನ ಅಳಿವು ಉಳಿವು !.. ಬನ್ನಿ..

(ಓದುವನು)

ಹಿನ್ನೆಲೆ ಧ್ವನಿ: ಅಲ್ಲಾ ಹು ಅಕ್ಬರ್.. ! ಅಲ್ಲಾ ಹು ಅಕ್ಬರ್.. !

**ಕಿತ್ತೂರ ಕೇಸರಿಣಿ**

ಹಿನ್ನೆಲೆ : ಜಾನಪದ ಗೀತೆ
ಕಿತ್ತೂರ ರಾಣಿ ಮುನಿದಾಳಾ । ಹೋಯ್ ।
ಕಿತ್ತೂರ ರಾಣಿ ಕೆರಳ್ಯಾಳಾ

ಕೆಂಡ ದುಂಡೆಯ ಕಣ್ಣು ಕಿಡಿಕಿಡಿಯ ಕಾರುತ್ಥ,
ಗಂಡುಗಾಸೆಯ ಹಾಕಿ ಮುಂಡಾಸು ನುಡಿಸುತ್ತಾ,
ದುಂಡು ಖಂಡೆಯವ ದೆಸೆದೆಸೆಗೆ ತಿರುಹುತ್ತಾ,

ಬಂದಾಳು ರಾಣೆ ಚೆನ್ನಮ್ಮ
ಕಿತ್ತೂರ ರಾಣಿ ಚೆನ್ನಮ್ಮ

ಕೇಸರಿಣಿ ನಮ್ಮ ಚೆನ್ನವ್ವಾ
ಬಂದಾಳು ನಮ್ಮ ಚೆನ್ನವ್ವಾ..!!

ಕಾಲಪುರುಷ: ತೇಜೋಮೂರ್ತಿ ಭಾರತ, ಇದು ಬರಿಯ ವೀರ ಪುರುಷರ ಬೀಡಲ್ಲ. ವೀರ ನಾರಿಯರ ಆಡುಂಬೊಲ ! ಕ್ಷಾತ್ರ ರಮಣಿಯರ ತೇಜೋಬಲ !!
ಬಾ ಸೋದರ.

ಕರ್ನಾಟಕದ ಇತಿಹಾಸ ಹೊತ್ತಿಗೆಯನ್ನೆತ್ತಿಕೊ. ಕಿತ್ತೂರ ಸಂಪುಟವ ತೆರೆ! ತೆರೆದೆಯಾ? ಅದು ಭಾರತದ ಇತಿಹಾಸದಲ್ಲಿ ಸುವರ್ಣ ಸಂಪುಟ !

ಸುಮಾರು ಇನ್ನೂರು ವರ್ಷಗಳ ಹಿಂದೆ–

ಇಂಗ್ಲೀಷರ ಪಾಶವೀಯತೆ ಅಖಂಡ ಭರತ ಖಂಡವನ್ನು ಕಬಳಿಸುತ್ತಾ, ಬಂದಿದ್ದ ಕಾಲದಲ್ಲಿ ಪ್ರಪ್ರಥಮವಾಗಿ ಅವರನ್ನು ಪ್ರತಿಭಟಿಸಿದ ಕೀರ್ತಿ ಕಿತ್ತೂರಿಗೆ, ಕನ್ನಡ ನಾಡಿಗೆ ಅದರಲ್ಲೂ ಕರ್ನಾಟಕದ ನಾರೀಮಣಿಯೋರ್ವಳಿಗೆ ! ಅವಳೇ ನಮ್ಮೆಲ್ಲರ ಭಾಗ್ಯದ ಬಿತ್ತು. ಪೌರುಷದ ಗೊತ್ತು. ಪ್ರೇಮದೇವತೆಯ ಮಹಾಪ್ರತೀಕ ಕಿತತೂರ ಮಹಾರಾಣಿ ಚೆನ್ನಮ್ಮ !

ಕ್ರಿ.ಶ.1782ರಿಂದ 1819 ರವರೆಗೆ ಕಿತ್ತೂರು ರತ್ನ ಸಿಂಹಾಸನವನ್ನೇರಿದ ಮಹಾರಾಜ ಮಲ್ಲಸರ್ಜನ ದ್ವಿತೀಯ ಪತ್ನಿ ಈಕೆ. ಪತಿಯ ಮರಣಾನಂತರ ರಾಜ್ಯವನ್ನು ಅನ್ಯಾಕ್ರಾಂತಗೊಳಿಸಬಾರದೆಂದು ಬ್ರಿಟಿಷರ ವಿರುದ್ದ ವೀರಾವೇಶದಿಂದ ಹೋರಾಡಿ ಮಡಿದ ವೀರಮಾತೆ !

ಅಂದು 1824ರ ಅಕ್ಟೋಬರ್ 22ರಂದು,ಬ್ರಿಟಿಷ್ ಸೇನೆ ಥ್ಯಾಕರೆಯ ನೇತೃತ್ವದಲ್ಲಿ ಕಿತ್ತೂರು ಕೋಟೆಯ ಮೇಲೆ ನುಗ್ಗಿ ಬಂತು. ರಾಣಿ ಎದೆಗುಂದಲಿಲ್ಲ. ಯೋಧರಲ್ಲಿ ಧೈರ್ಯೋತ್ಸಾಹ ತುಂಬಿ ಥ್ಯಾಕರೆಯನ್ನು ಬಲಿತೆಗೆದುಕೊಂಡಳು ! ಆದರೆ ಅವಳ ಅಂಗರಕ್ಷಕ ಬಾಳಾಸಾಹೇಬ ಪೂಂಢರಗುಂಡಿಗೆ ಬಲಿಯಾಗಬೇಕಾಯಿತು. ಓರ್ವ ಮುಸಲ್ಮಾನ್ ಯುವಕ. ತಾಯ್ನಾಡ ರಕ್ಷಣೆಗಾಗಿ, ತಾಯಿ ಚೆನ್ನಮ್ಮಾಜಿಯ ಉಳಿವಿಗಾಗಿ ತನ್ನ ಹರಣವನ್ನೇ ತೆತ್ತ ಪುಣ್ಯಪುರುಷ !

ಆದರೆ ಕುಹಕ ಕುತಂತ್ರಿಗಳ ತಂಡ ಬಹಳವಾಗಿತ್ತು ನಮ್ಮ ನಾಡಿನಲ್ಲಿ. ಟಿಪ್ಪುವಿನ ಬಳಿಯಿದ್ದ ಮೀರ್‌ಸಾದಕ್ ತಿರುಮಲರಂತೆ, ಕಟ್ಟಬೊಮ್ಮನಿನೆಡೆಯಿದ್ದ ವಿಟ್ಟಪ್ಪನಂತೆ, ಕಿತ್ತೂರಿನಲ್ಲೂ ಈ ಸ್ವಾರ್ಥ ಪಶುಗಳು ಮಲ್ಲಪ್ಪಶೆಟ್ಟಿ, ವೆಂಕಟರಾಯರೆಂಬ ಹೆಸರಿನಿದ ಭಂಡ ಬಾಳು ನಡೆಸುತ್ತಿದ್ದರು. ಅವರೇ ಬ್ರಿಟಿಷರಿಗೆ ದಾರಿ ತೋರಿ ರಾಣಿಯನ್ನು ಸೆರೆಹಿಡಿಯಲು ಸಹಾಯಕರಾದರು.

ಅದೋ ಅಲ್ಲಿ ನೋಡು, ಕನ್ನಡದ ಕುಲದೇವಿ ಭುವನೇಶ್ವರಿ ಸೆರೆ ಸಿಕ್ಕಿದ್ದಾಳೆ ಅಲ್ಲವೇ ! ಹೇಳು ಕನ್ನಡ ವೀರ ಇದನ್ನೆಲ್ಲಾ ಕಂಡು ನನ್ನ ರಕ್ತ ಕುದಿಯುವುದಿಲ್ಲವೇ ? ದುಷ್ಟ ನಾಶಕ್ಕಾಗಿ ಪಣತೊಡಬೇಕೆಂದು ಅನ್ನಿಸುವುದಿಲ್ಲವೇ? ನೀನು ನಿಜವಾದ ಭಾರತೀಯನಾದರೆ ಇಂದೇ ಪ್ರತಿಜ್ಞೆ ಮಾಡು ತಾಯ್ನಾಡ ಸೇವೆಯ ತನ್ನ ಬಆಳಿನ ಗುರಿಯೆಂದು
ಇತ್ತ ಬಾ ಸೋದರನೆ
ಇದು ಬೈಲಹೊಂಗಲದ ಕೋಟೆ ಅಲ್ಲ, ಕರ್ನಾಟಕದ ಭಾಗ್ಯಲಕ್ಷ್ಮಿಯ ಸೆರೆಮನೆ !
ಅಲ್ಲಿಗೂ ನುಸುಳಿ ಬಂದಿದ್ದಾರೆ ನೋಡು ಆ ಮೀನಿನಮರಿ ಸಂಗೊಳ್ಳಿ ರಾಯಣ್ಣ !
–ಅಂದು ಅರಮನೆಯಲ್ಲಿ–
ಸಂಗೊಳ್ಳಿ ರಾಯಣ್ಣ : [ಮಬ್ಬು ಮುಸುಕಿದ ಕೋಣೆ. ರಾಯಣ್ಣ ಮುಖ ಮುಚ್ಚಿಕೊಂಡು ಕಳ್ಳನಂತೆ ಪ್ರವೇಶಿಸಿ ಮೆಲ್ಲನುಸುರುತ್ತಾನೆ]

ತಾಯೀ.. ..
ಚೆನ್ನಮ್ಮ: [ಸರಪಳಿಯಿಂದ ಬಂಧಿತಳಾದ ರಾಣಿ ಬೆಚ್ಚಬಿದ್ದವಳಂತೆ] ಯಾರು? ಈ ವೇಳೆಯಲ್ಲಿ. ಈ ಸೆರೆಮನೆಯಲ್ಲಿ ಈ ಅಭಾಗಿನಿಯನ್ನು 'ತಾಯೀ' ಎಂದು ಸಂಬೋಧಿಸುವ ಕನ್ನಡ ಕಂದ ನೀನಾರಪ್ಪಾ?

ರಾಯಣ್ಣ : ನಾನು ತಾಯಿ ಸಂಗೊಳ್ಳಿ ರಾಯಣ್ಣ..

ಚೆನ್ನಮ್ಮ: ರಾಯಣ್ಣ !...ರಾಯಣ್ಣ, ನೀನೇಕಪ್ಪಾ ಬಂದೆ ಈ ರಾಕ್ಷಸರ ತಾಂಡೆಗೆ !

ರಾಯಣ್ಣ : ಅಮ್ಮಾ, ಹೆತ್ತ ತಾಯಿಯನ್ನು ಸೆರೆಯಲ್ಲಿಟ್ಟು ಹೇಗಮ್ಮ ಮಕ್ಕಳು ನಿಶ್ಚಿಂತರಾಗಿರಲು ಸಾಧ್ಯ.. ಹೇಳಿ ತಾಯಿ ಯಾವ ರೂಪದ ಸೇವೆ, ಯಾವಮಟ್ಟದ ತ್ಯಾಗ ನಮ್ಮಿಂದಾಗಬೇಕಾಗಿದೆ.
ಅಮ್ಮಾ, ಬಿಚ್ಚುಗತ್ತಿ ಚನ್ನಬಸಪ್ಪ, ಗಜವೀರ ಬಾಲಣ್ಣ, ಗಂಡುಗಲಿ ಗುರುಸಿದ್ಧಪ್ಪ ಇವರೆಲ್ಲರೂ ಬದುಕಿದ್ದಾರೆ ತಾಯಿ, ಹೇಳಿ ಏನಾಗಬೇಕು ಹೇಳಿ..

ಚೆನ್ನಮ್ಮ : ರಾಯಣ್ಣ ನಿಮ್ಮ ಮಾತೇ ಚೆಂದ..! ಆಗುವುದನ್ನು ಹೇಳಲು ನಾನೇನು ಆದಿಶಕ್ತಿಯೇ !.. ಇರಲಿ. ರಾಯಣ್ಣ ನಾವಾರ ಸಂಪ್ತಿಗೂ ಆಸೆಪಟ್ಟವರಲ್ಲ. ನಮ್ಮಲ್ಲಿ ದುರಾಸೆಯಿಲ್ಲ. ದುರಾಕ್ರಮಣ ಬುದ್ಧಿಯಿಲ್ಲ. ಆದರೆ ನಮ್ಮ ಮೇಲೆ ದರ್ಪ ನಡೆಸಲು ಬರುವ ಈ ದ್ರೋಹಿಗಳನ್ನು ಕಂಡರೆ ಸಹಿಸುದಾದರೂ ಹೇಗೆ ?

ರಾಯಣ್ಣ : ಅವರಿಗಿಂತಲೂ ಇವರ ದ್ರೋಹ ಸಹಿಸಲಳವಲ್ಲ ತಾಯಿ~ ನಮ್ಮವರೇ ಆಗಿದ್ದು. ಒಂದೇ ನೆಲದಲ್ಲಿ ಹುಟ್ಟಿ ಒಂದೆ ನೀರು ಕುಡಿದು, ಒಂದಾಗಿ ಬೆಳೆದು ದ್ರೋಹವನ್ನೆಣಿಸಿದ ಆ ವಂಚಕರು ಮಲ್ಲಪ್ಪ ಶೆಟ್ಟಿ, ವೆಂಕಟರಾಯರಂಥವರಿಂದಲೇ ನಮಗೆ ಹೆಚ್ಚು ಅಪಾಯ ತಾಯಿ, ನಮ್ಮ ಮದ್ದಿನಾಗಾರಕ್ಕೆ ಸಗಣಿಯ ಬಗ್ಗಡ ಹೊಯ್ಸಿ ನಮ್ಮ ಸೋಲಿಗೆ ಕಾರಣರಾದರು ಆ ದ್ರೋಹಿಗಳು..

ಚೆನ್ನಮ್ಮ: ಯಾರನ್ನು ಎಷ್ಟೆಂದು ಏನು ಪ್ರಯೋಜನ ರಾಯಣ್ಣ ! ಈಗ ನೀವು ಕರ್ತವ್ಯ ಜಾಗ್ರತರಾಗಿ. ಕಿತ್ತೂರು ಶೂನ್ಯ ಸ್ಮಶಾನವಾದರೂ ಸರಿಯೇ, ಬ್ರಿಟಿಷರ ಕೈಗತವಾಬಾರದು! ನನ್ನನ್ನೇ ರಕ್ಷಿಸಿಕೊಳ್ಳಲಾದವರಳಾದ ನಾನು ದೇಶ ರಕ್ಷಿಸಬಲ್ಲೆನೆಂಬ ಭರವಸೆ ನನಗಿಲ್ಲ ರಾಯಣ್ಣ.. ಆದರೂ ನೀವು ನನ್ನ ಆಶಾಜ್ಯೋತಿಗಳು.. ಹೋಗಿ, ಹೆದರಬೇಡಿ, ತಾಯ್ನಾಡ ಕುಡಿಗೆ ಹೂವಾಗಿ ಮೂಡಿ. ಸತತ ಹೋರಾಟವೇ ಯಜ್ಞ, ಜಯಕಾರವೇ ಮಂತ್ರ, ತ್ಯಾಗವೇ ಬಲಿದಾನ!...
ಜೈ ಭುವೇಶ್ವರಿ..! ಜೈ ಕರ್ನಾಟಕ ಮಾತೆ !!

**ವೀರಪಾಂಡ್ಯ ಕಟ್ಟಬೊಮ್ಮು**

ಹಿನ್ನೆಲೆಧ್ವನಿ: ವೀರಪಾಂಡ್ಯ ಕಟ್ಟ ಬೊಮ್ಮ.. ಜೈ ಹೋ!
ವೀರಪಾಂಡ್ಯ ಕಟ್ಟ ಬೊಮ್ಮ.. ಜೈ ಹೋ!

ಕಾಲಪುರುಷಃ "ರಾಷ್ಟ್ರ ವೀರ ಕಟ್ಟಬೊಮ್ಮುವಿನ ದೇಶಭಕ್ತಿ, ಸ್ವಾತಂತ್ರ್ಯ ಪ್ರೇಮ ನಾಡಿನ ಪ್ರತಿಯೊಬ್ಬನಿಗೂ ಸ್ಫೂರ್ತಿ ನೀಡಬೇಕು. ಪ್ರತಿಯೊಬ್ಬನಿಗೂ ಆದಶವಾಗಿರಬೇಕು. ಅವನ ಕರ್ತವ್ಯ ನಿಷ್ಠೆ, ಆತನ ಬಾಳ ಇತಿಹಾಸ ನಮ್ಮ ದೇಶದ ಎಲ್ಲ ಭಾಷೆಗಳಲ್ಲೂ ಇರಬೇಕು; ಎಲ್ಲರು ಓದಬೇಕು.." ನಮ್ಮ ರಾಷ್ಟ್ರಪತಿಗಳಾಗಿದ್ದ ದಿವಂಗತ ಬಾಬು ರಾಜೇಂದ್ರಪ್ರಸಾದ್‌ರ ಮುತ್ತಿನಂತಹ ಮಾತುಗಳು ಇವು ಭಾರತದ ನಲ್ನುಡಿರಾ.
ಆಕಾಶ ಮಳೆಗರೆಯುತ್ತದೆ. ಭೂಮಿ ಬೆಳೆ ಬೆಳೆಯುತ್ತದೆ, ದುಡಿಯುವುದಕ್ಕೆ ತಾಯ್ನಾಡ ತನಯರಾದ ನಾವಿದ್ದೇವೆ. ನಮಗೇ ಕೊಡಬೇಕು ಕೊಪ್ಪ! ಒಂದು ವೇಳೆ ನಾವು ಕಪ್ಪ ಸಲ್ಲಿಸುವುದಾದರೆ ಸೃಷ್ಟಿಕರ್ತನಾದ ಸರ್ವೇಶ್ವರನಿಗೆ ಮಾತ್ರ.. ನಿಮ್ಮಥಾ ಪರದೇಶಿಗಳಿಗಲ್ಲ..

ಕಾಲಪುರುಷ : ಭಲೇ ಬೊಮ್ಮ.. ನೀನಲ್ಲವೇ ನಿಜವಾದ ವೀರ.. ಭಲೇ ! ಅಂದು ವೀರಪಾಂಡ್ಯ ಕಟ್ಟಬೊಮ್ಮುವನ್ನು ಗಲ್ಲಿಗೇರಿಸುವ ಸಂಜೆ ಅದಕ್ಕಾಗಿ ಅಜ್ಞಪ್ತನಾದ ಬ್ರಿಟಿಷ್ ಅಧಿಕರಿ ಬ್ಯಾನರ್‌ಮನ್ ಹೇಳುತ್ತಾನೆ–

ಬ್ಯಾನರ್‌ಮನ್ : ಕಟ್ಟಬೊಮ್ಮ ಮರಣಕ್ಕೆ ಮುನ್ನ ಈ ಹೇಳುವುದು ಏನಾದರೂ ಇದೆಯೇ?

ಕಾಲಪುರುಷ: ಆಗ ಬೊಮ್ಮು ಕೊಟ್ಟ ಉತ್ತರ..

ಬೊಮ್ಮು : ಇದೆ ಹೇಳುತ್ತೇನೆ–
ಪ್ರಿಯ ಪಾಳೆಯಗಾರರ, ಮಿಂಚಿ ಹೋದದ್ದಕ್ಕೆ ಚಿಂತಿಸಿ ಫಲವಿಲ್ಲ. ಇಂದು ನನ್ನ ಸಾವಿಗಾಗಿ ಚಿಂತಿಸುತ್ತಿಲ್ಲ. ಆದರೆ ನಾನೊಂದು ಕನಸು ಕಂಡಿದ್ದೆ. ಅದು ಸ್ವತಂತ್ರ ತಮಿಳುನಾಡಿನ ಕನಸು. ಅದು ನನಸಾಗಲಿಲ್ಲವಲ್ಲಾ ಎಂಬುದೇ ನನ್ನನ್ನೀಗ ಬಾಧಿಸುತ್ತಿರುವ ವ್ಯಥೆ!

ಪ್ರಿಯ ಸೋದರರೇ,
ಈ ಕಟ್ಟ ಬೊಮ್ಮ ಸತ್ತಕೂಡಲೇ ಅವನ ಪೌರುಷವೂ ಸಾಯಬಾರದು. ಭೌತದೇಹದ ಅಳಿವು ವ್ಯಕ್ತಿತ್ವದ ನಾಶವಲ್ಲ. ಅದರ ಅಮರತ್ವ, ಅದರ ಅಜೇಯತ್ವ. ಕೇಳಿ, ವ್ಯಕ್ತಿಯ ಅಳಿವಿನಲ್ಲಿ ಅವನ ಆದರ್ಶ ಬೆರೆತಿಲ್ಲ ಅದು ಎಂದೆಂದಿಗೂ ಉಳಿದು ಬೆಳೆಯುವ ವಸ್ತು; ಬೆಳೆದು ಬೆಳಗಿಸಬಲ್ಲ ಬಎಳಕು ! ಅದು ಚಿರಂತನ ಚೈತನ್ಯಶ್ರಿ. ನಡೆವ ನಾಡಿಗನಿಗೆ ಅದೇ ದಾರಿದೀಪ ! ಆದ್ದರಿಂದ ಬಂಧುಗಳೇ, ಅಂತಹ ಆದರ್ಶ ಜ್ಯೋತಿಯೀಮದ ಎಂದಿಗೂ ನೀವು ವಿಮುಖರಾಗಬೇಡಿ.. ನಾನು ಇನ್ನೆಷ್ಟು ಜನ್ಮಗಳನ್ನೆತ್ತಿದರೂ ಇದೇ ಈ ಪಾಂಚಾಲ ಕುರುಚ್ಚಿಯ ಮಣ್ಣಿನಲ್ಲೇ ಹುಟ್ಟುತ್ತೇನೆ.. ಇದೇ ನನ್ನ ಅಂತಿಮ ಆಶಯ  ಹಾಗೂ ನನ್ನ ದೇಶ ಬಾಂಧವರೆಲ್ಲಿಗೂ ಕೊಡುವ ಕಡೆ ಸಂದೇಶ !
ಜೈ ತಮಿಳ್ ದೇವಿ !.. ಜೈ ಭಾರತ ಮಾತೆ !!

****

**ಪ್ರಥಮ ಸ್ವಾತಂತ್ರ್ಯ ಸಮರ**

ಹಿನ್ನೆಲೆ ಧ್ವನಿ : ಝಾನ್ಸಿರಾಣಿ ಲಕ್ಷ್ಮೀಬಾಯಿ ಕೀ ಜೈ ಹೋ !
ಝಾನ್ಸಿರಾಣಿ ಲಕ್ಷ್ಮೀಬಾಯಿ ಕೀ ಜೈ ಹೋ !!

ಕಾಲಪುರುಷ: ಕೇಳು ಭಾರತ ಪುತ್ರಾ, ಕೇಳು,
ಪ್ರಥಮ ಸ್ವಾತಂತ್ರ್ಯದ ಸಮರ ಭೇರಿ ಮೊಳಗುತಿದೆ ಕೇಳು !
ನಿನ್ನ ಹೃದಯ ಗಹ್ವರದಲ್ಲಿ ಮತ್ತೆಮತ್ತೆ ಪ್ರತಿಧ್ವನಿಸು
ತ್ತಿರಲಿ ಅಂದಿನಾ ಜಯ ಘೋಷ ~
ನಿನಗಾಗಲೆಂದಿಗೂ ಮಂಗಳದ ತೋಷ !

ಭರತಖಂಡದ ಇತಿಹಾಸದಲ್ಲಿ ಕ್ರಿ.ಶ.1857 ನೆಯ ವರ್ಷ ರಕ್ತಾಕ್ಷರಗಳಿಂದ ರಚಿತವಾಗಿದೆ.

ಏಕೆ ಗೊತ್ತೆ?
ಅಂದು ಹಾರಿದ ನೆತ್ತರಿನ ಸ್ಮೃತಿಗಾಗಿ!
ಭಾರತೀಯ,
ಅದನ್ನು ಹಲವು ತಿಳಿಗೇಡಿಗಳು ಸಿಪಾಯಿದಂಗೆ ಎಂದರು !
ಆದರೆ ಆಂದಾದಮ್ಮ ದಂಗೆಯಲ್ಲ ಸಮರ !
ಸ್ವಾಂತ್ರ್ಯದ ಪ್ರಥಮ ಸಮರ !

ಝಾನ್ಸಿರಾಣಿ ಲಕ್ಷ್ಮಿಬಾಯಿ, ತಾತ್ಯಾಟೋಪಿ. ನಾನಾ ಸಾಹೇಬ, ರಾವ್ ಸಾಹೇಬ–ಇವರುಗಳೇ ಆ ಸಮರ ಸೇನಾನಿಗಳು. ಇವರು ಮೊಳಗಿಸಿದ ರಣಕಹಳೆ ಕೋಟಿಕೋಟಿ ಭಾರತೀಯರ ಸುಪ್ತಚೇತನಗಳನ್ನು ಬಡಿದೆಬ್ಬಿಸಿತು. ಬ್ರಿಟಿಷರ ಹೃದಯವನ್ನು ತಲ್ಲಣಗೊಳಿಸಿತು. ಆದರೆ ದೇಶದ್ರೋಹಿಗಳ ಹಸ್ತಕ್ಷೇಪದಿಂದ ಸೋಲು ಇವರ ಭಾಗ್ಯಕ್ಕೆ ಕಟ್ಟಿಟ್ಟ ಬುತ್ತಿಯಾಯಿತು. ಸೋತರೂ, ಸತ್ತರೂ ತಮ್ಮ ಕ್ಷಾತ್ರವನ್ನು ಮಾತ್ರ ಅವರು ಮರೆಯಲಿಲ್ಲ.

ಝಾನ್ಸಿರಾಣಿ ಲಕ್ಷ್ಮೀಬಾಯಿ ಮೋರೆ ಪಂತತಾಂಬೆ ಮತ್ತು ಭಾಗೀರಥಿ ಬಾಯಿಯರ ಏಕಮಾತ್ರ ಪುತ್ರಿ! ಹೆಸರು ಮನೂಭಾಯಿತ ಎಂದು. ಚಿಕ್ಕಂದಿನಲ್ಲೇ ತಾಯಿಯನ್ನು ಕಳೆದುಕೊಂಡ ಈಕೆ ಝಾನ್ಸಿಯ ಪ್ರಭು ನೇವಾಳಕರ ಗಂಗಾಧರರಾಯನನ್ನು ಲಗ್ನವಾದಳು. ಅಮದೆ ಮನೂಬಾಯಿ ಲಕ್ಷ್ಮೀಬಾಯಿ ಆದಳು !
ಪ್ರೇಮದಾಂಪತ್ಯದ ಫಲವಾಗಿ ಒಂದು ಗಂಟು ಹುಟ್ಟಿ ಮಡಿಯಿತು! ಅದೇ ಕೊರಿನಲ್ಲಿ ಪತಿ ಗಂಗಾಧರ ರಾಯನೂ ತೀರಿಕೊಂಡ. ರಾಜ್ಯ ಅನ್ಯಕ್ರಾಂತವಾಗುವ ಸ್ಥಿತಿಗೆ ಬಂತು. ಆದರೆ ಲಕ್ಷ್ಮೀಬಯಿ ಅದಕ್ಕೆ ಆಸ್ಪದ ಕೊಡಲಿಲ್ಲ.

ದಾಮೋದರನೆಂಬ ಹಸುಳೆಯನ್ನು ದತ್ತು ಸ್ವೀಕರಿಸಿ, ಪಟ್ಟಕ್ಕೇರಿಸಿ ತಾನು ರಾಜಸೂತ್ರ ಹಿಡಿದಳು. ಆದರೆ ಬ್ರಿಟಿಷರ ವಂಚ ಬುದ್ದಿ ಅದಕ್ಕೆ ಒಪ್ಪಲಿಲ್ಲ.
ಅಷ್ಟರಲ್ಲಾಗಲೇ ಸ್ವಾತಂತ್ರ್ಯದ ಕಿಚ್ಚು ಭಾರತಾದ್ಯಂತ ಹಬ್ಬಿತ್ತು. ಕ್ರೋಧೋನ್ಮತ್ತರಾದ ಭಾರತ ವೀರರು ನೂರಾರು ಸಹಸ್ರಾರು ಬ್ರಿಟಿಷರನ್ನು ಬಲಿ ತೆಗೆದುಕೊಂಡರು. ಅಳಿದುಳಿದ ಹಲವರು ಬ್ರಿಟಿಷರು ರಾಣಿ ಲಕ್ಷ್ಮೀಬಾಯಿಯ ಔದಾರ್ಯದ ಮಡಿಲಲ್ಲಿ ರಕ್ಷಣೆ ಪಡೆದರು.

ಆದರೆ ಹಲವು ದೇಶದ್ರೋಹಿಗಳ, ಸ್ವಾರ್ಥಪಶುಗಳ ಪ್ರೇರಣೆಯಿಂದ ಇಂಗ್ಲೆಂಡ್ ಮತ್ತೆ ಯುದ್ದ ಸಾರಿತು. ಆಗ ಕಾಲ್ಪಿಯಲ್ಲಿದ್ದ ತಾತ್ಯಾಟೋಪಿ, ರಾವ್‌ಸಾಹೇಬ ಮೊದಲಾದವರು ರಾಣಿಗೆ ನೆರವು ನೀಡಿದರು. ರಾಣಿ ಯುದ್ದದ ಪೋಷಾಕು ಧರಿಸಿ ಖಡ್ಗವಿರಿದು ರಣಭೂಮಿಗೆ ಧುಮುಕಿದಳು !
ಹೊರಗಿನ ಶತ್ರುಗಳಿಗಿಂತ ಒಳಗಿನ ಮಿತ್ರ ಮುಖದ ಶತ್ರುಗಳು ಈ ಪ್ರಥಮ ಸ್ವಾತಂತ್ರ್ಯ ಸಮರದ ಸೋಲಿಗೆ ಕಾರಣರಾದರು !
ಸೋಲುವುದು ಖಂಡಿತವೆಂದು ತಿಳಿದಿದ್ದರೂ ರಾಣಿ ಎದೆಗುಂದಲಿಲ್ಲ.
ಅದೋ ನೋಡು–ಈ ಬತೇರಿಯ ತುದಿಯಲ್ಲಿ ತನ್ನ ದತ್ತುಪುತ್ರ ದಾಮೋದರನನ್ನು ಬೆನ್ನಲ್ಲಿ ಕಟ್ಟಿಕೊಂಡು ಹೋರಾಡುತ್ತಿದ್ದಾಳೆ ! ಕೇಳು..
ಝಾನ್ಸಿರಾಣಿ : ಕೆಚ್ಚೆದೆಯ ಕಟ್ಟಾಳುಗಳೆ,
ಇದು ನಿಮ್ಮ ಕಟ್ಟಕಡೆಯ ಹೋರಾಟ, ಸೋಲಾಗಲೀ, ಗೆಲುವಾಗಲೀ ಅದರ ಗೊಡವೆ ಬೇಡ. ನಿಮ್ಮೆಲ್ಲ ಸ್ವಾರ್ಥವನ್ನೂ ಬದಿಗಿಟ್ಟು ದೇಶ ರಕ್ಷಣೆಗಾಗಿ ಹೋರಾಡಿ. ಗುಂಡಿನಾ ಮಳೆಗರೆದು ಗಂಡು ಗುಡುಸಿ ಮುನ್ನುಗ್ಗಿ! ಖಡ್ಗ ಖಡ್ಗಕೆ ತಾಕಿ ಖಣಿ ಖಟಿಲು ನಾದದಲಿ ಕ್ರಾಂತಿ ಕಿಡಿ ಸೂಸಲಿ !

ನಮ್ಮ ಸಾವಿನಲ್ಲೇ ಭರತಖಂಡದ ಇತಿಹಾಸ ಮುಕ್ತಾಯವಾಗುವುದಿಲ್ಲ. ಈ ಭವ್ಯ ಭಾರತಕ್ಕೆ ಭರತ ವಾಕ್ಯ ಹೇಳುವ ಕಲಿಪುರುಷ ಇನ್ನೂ ಹುಟ್ಟಿಲ್ಲ..!
ಹೋರಾಡಿ..! ಕಡೆಯ ಉಸಿರೆಳೆಯುವವರೆಗೂ ಹೋರಾಡಿ! ಪ್ರಿಯಬಂದುಗಳೇ, ಒಂದು ವೇಳೆ ಈ ಯುದ್ಧದಲ್ಲಿ ನಾನು ಮಡಿದರೆ ಎಂದಿಗೂ ನನ್ನ ರಾಜ್ಯ. ಈ ಪಾಪಿ ಬ್ರಿಟಿಷರ ಕೈಗತವಾಗದಿರಲಿ. ಅವರ ಹಸ್ತಸ್ಪರ್ಶದಿಂದ ನನ್ನ ನಾಡನ್ನು, ಮಲಿಗೊಳಿಸುವ ಪಾಪಕಾರ್ಯವನ್ನು ಮಾತ್ರ ಮಾಡಬೇಡಿ..!ತಾಯಿ ಭಾರತಾಂತೆ ನಮಗೆ ರಕ್ಷೆ !
ಜೈ ಭವಾನಿ!..
ಕಾಲಪುರುಷ : ರಣರಂಗ ರಾಣಿಯ ಬಲಿ ಕೇಳಿತು. ಗತಪ್ರಾಣಳಾದ ರಾಣಿಯನ್ನು ಅವಳ ಆತ್ಮೀಯ ವ್ಯಕ್ತಿ ದೇಶಮುಖ ರಾಮರಾಯ ಹತ್ತಿರಲ್ಲಿದ್ದ ಗಂಗಾದಾಸನ ಗುಡಿಸಲಿಗೆ ಸಾಗಿಸಿದ. ರಾಣಿ ತನ್ನ ದತ್ತುಪುತ್ರನನ್ನು ಕಣ್ತುಂಬ ನೋಡಿ ಕಡೆಯುಸಿರೆಳೆದಳು.
ಅವಳ ಸಜೀವ ಕಥನ ನಮಗಿಂದಾಲಿ ಸ್ಫೂರ್ತಿ !
ಸಿಂಹವಾಣಿ

ಹಿನ್ನೆಲೆ ಗಿತೆ :
ಓಂ ನಮೋ ಭಗತವತೀ ಆದಿಶಕ್ತಿ
ಓಂ ಮೋ ತ್ರೈಗುಣ್ಯಾ ತೇಜಸ್ವಿನೀ
ಕಾಳಿಕಾದೇವೀ, ವಿಶ್ವಶಕ್ತಿ ಪ್ರದಾಯಿನೀ
ಭವತಾರಣಿ, ಭವ್ಯರೂಪಿಣೀಮ

ನಮೋ ನಮಃ ನಮೋ ನಮಃ ನಮೋ ನಮಃ

ಕಾಲಪುರುಷ :
ನೋಡೊ ಭಾರತ ವೀರ [ಸ್ವಾಮೀಜಿಯವರ ಆಗಮನ]
ಈತ ಉರಿಯುವ ಜ್ವಾಲೆ !
ವಿಶ್ವಾವಾಂತರಾಳದಾ ಶ್ರೇಷ್ಠತಮ ತೇಜೋರಾಶಿ !
ಕ್ರಿ.ಶ.1863ರ ಜನವರಿ 12ರಂದು ಕಲ್ಕತ್ತೆಯ್ಲಿ 'ಪುಣ್ಯ ಜೀವಿ ವಿಶ್ವನಾಥ ದತ್ತನ ಪವಿತ್ರ ಮಂದಿರಲ್ಲಿ ಭುವನೇಶ್ವರೀ ದೇವಿಯ ದಿವ್ಯ ಗರ್ಭದಿಂದುಸಿದ ಶಿಶುವೇ ಈತ !
ಅಂದು ನರೇಂದ್ರನೆಂಬಭಿಧಾನಾ ಮೂರ್ತಿ ಕೇವಲ ಭೂತಿ ! ಇಂದು ಶ್ರೀ ರಾಮಕೃಷ್ಣ ಪರಮಹಂಸರ ಮಾನಸ ಪುತ್ರ ವಿಶ್ವವಿಖ್ಯಾತ ಮಹಾಪುರುಷ ಶ್ರೀ ಸ್ವಾಮಿ ವಿವೇಕಾನಂದನೆಂಬ ಮಹದ್ವಿಭೂತಿ !!
ಈ ವೀರ ಸನ್ಯಾಸಿಯ ಸಿಂಹವಾಣಿಯನ್ನು ಕೇಳು –
ಸ್ವಾಮೀಜಿ :

ನನ್ನ ಸಂನ್ಯಾಸ ! ನನ್ನ ಆತ್ಮಕಲ್ಯಾಣ!! ನನ್ನ ಮುಕ್ತಿ !!! ಛೀ ! ಛೀ! ಸ್ವಾರ್ಥತೆಯೇ ದೂರ ಸರಿ, ಭರತಖಂಡದ ಉದ್ಧಾರಕ್ಕಾಗಿ ಕೋಟಿ ಜನ್ಮಗಳನ್ನೆತ್ತಿ ಬರುತ್ತೇನೆ. ದರಿದ್ರ ನಾರಾಯಣರ ಸೇವೆಗಾಗಿ ನನ್ನ ಜನ್ಮ ಮುಕ್ತಿಯನ್ನಾದರೂ ಈಡಾಡಲು ಸಿದ್ಧನಿದ್ದೇನೆ.
ಜಗತ್ತಿನಲ್ಲಿ ಕ್ರಿಮಿಯೊಂದು ಕಷ್ಟದಲ್ಲಿರುವವರೆಗೂ ನಾನು ಸುಖವನ್ನು ಬಯಸೆನು ! ಕೀಟವೊಂದು ಬಂದನಲ್ಲಿರುವವರೆಊ ನನಗೆ ಮುಕ್ತಿ ಬೇಡ !
ಮಾತೃದೇವೋಭವ! ಪಿತೃದೇವೋಭವ ! ಅತಿಥಿದೇವೋಭವ!
ಅಲ್ಲಾ–ಅಲ್ಲಾ–ದರಿದ್ರ ದೇವೋಭವ! ನಾನವ ಸೇವೆಗಾಗಿ ನನ್ನಾತ್ಮವನ್ನು ಧಾರೆಯರೆಯುತ್ತೇನೆ.
ಕಾಲಪುರುಷ : ಧನ್ಯ ಸ್ವಾಮೀಜಿ! ಪುಣ್ಯ ಪುರುಷರು ನೀವು !.. ಸ್ವಾಮೀಜಿ. ಕತ್ತಲೆಯಲ್ಲಿ ಕೈ ಆಡಿಸುತ್ತಿರುವ ಈ ನಿರ್ಭಾಗ್ಯ ಭಾರತಕ್ಕೆ ನಿಮ್ಮ ಸಂದೇಶವೇನು ಪೂಜ್ಯಾ
ಸ್ವಾಮೀಜಿ : ಬಂಧುಗಳೇ
ಪ್ರಸ್ತುತದಲ್ಲಿ ನಿಮಗೊಂದು ಭವಿಷ್ಯನುಡಿ ನುಡಿಯಬೇಕಾಗಿದೆ. ಇದು ಕೊಟ್ಟ ವರವೂ ಅಲ್ಲ, ಇಟ್ಟ ಶಾಪವೂ ಅಲ್ಲ. ನನ್ನ ಜನ್ಮಭೂಮಿ ಭಾರತಕ್ಕೆ ಇಂದು ನಾ ನೀಡುವ ಎಚ್ಚರಿಕೆ ಇಷ್ಟೇ –
ಭರತ ಖಂಡದ ಸೋದರ ಸೋದರಿಯರೆ,
ಈಗ ನೀವು ಯೋಚಿಸಲಾರದ ಯಾವುದೋ ಒಂದು ರೀತಿಯಲ್ಲಿ ಭಾರತಕ್ಕೆ ಸ್ವಾತಂತ್ರ್ಯ ಬರುತ್ತದೆ. ಇದು ಸತ್ಯ–ಆದರೆ ನೀವು ಅದನ್ನು ಸ್ವಾಗತಿಸಲು ಅರ್ಹರಾಗದಿದ್ದರೆ, ಅನೇಕ ತ್ಯಾಗ, ಬಲಿದಾನಗಳಿಂದ ಗಳಿಸಿ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳುವ ಯೋಗ್ಯತೆಯನ್ನು ಭಾರತೀಯರಾದ ನೀವು ಪಡೆಯದೆ ಹೋದರೆ, ಕೇವಲ ಮೂರೇ ಮೂರು ತಲೆಮಾರುಗಳಲ್ಲಿ ನಿಮ್ಮ ದೇಶ ಸ್ವಾತಂತ್ರ್ಯವನ್ನು ಕಳೆದುಕೊಳ್ಳುತ್ತೀರಿ..
ಆದ್ದರಿಂದ..
'ಉತ್ತಿಷ್ಠತ ಜಾಗ್ರತ ಪ್ರಾಪ್ಯವರಾನ್ನಿಬೋಧತ..!'
ಕಾಲಪುರುಷ : [ಮೆಲುಕು ಹಾಕುತ್ತಾ]
'ಉತ್ತಿಷ್ಠತ ಜಾಗ್ರತ ಪ್ರಾಪ್ಯವರಾನ್ನಿಬೋಧತ..!'
ಸೋದರ ಸೋದರಿಯರೇ,
ಪೂಜ್ಯ ಸ್ವಾಮೀಜಿವಯವರು ಹೇಳಿದ ಅವರ ಕಡೆಯ ನುಡಿಗಳನ್ನು ಮೆಲುಕು ಹಾಕುವ ಕಾಲಬಂದಿದೆ! ಪ್ರಸ್ತುತ ಸನ್ನಿವೇಶದಲ್ಲಿ ನಾವು ಮರೆತು ಮಲಗಿದ್ದಾದರೆ ಸತ್ತು ಶವಗಳಾಗಬೇಕಾದೀತು! ಅಲ್ಲವೇ?..ಎಚ್ಚರ ಯಾವಾಗಲೂ ಎಚ್ಚರಿಕೆ ನಿಮ್ಮ ಕೈಯಲ್ಲಿರಲಿ..! ಬುದ್ದಿ ನಿಮ್ಮ ಸ್ವಾಧೀನದಲ್ಲಿರಲಿ!
ಸ್ವಾತಂತ್ರ್ಯದ ಸಚ್ಚಿತ್ರ ಸದಾ ನಿಮ್ಮ ಕಣ್ಣೆದುರಿನಲ್ಲಿ ಮಿರುಗಲಿ; 'ಉತ್ತಿಷ್ಠತ ಜಾಗ್ರತ ಪ್ರಾಪ್ಯವರಾನ್ನಿಬೋಧತ..!' – ಎಂಬ ಶ್ರೀ ಸ್ವಾಮಿವಿವೇಕಾನಂದರ ಈ ಕರೆ ಎಂದಿಗೂ ವ್ಯರ್ಥವಾಗಿಲ್ಲ; ವ್ಯರ್ಥವಾಗುವುದೂ ಇಲ್ಲ. ಅದು ಎಂದು ವ್ಯರ್ಥವೆನಿಸುವುವುದೋ ಅಂದೇ ಭರತ ಭೂಮಿ ಭಸ್ಮವಾದಂತೆ! ಅಂದೇ ಭಾರತೀಯ ಸಂಸ್ಕೃತಿ ಮೃತವಾದಂತೆ! ಅಂದೆ ಜಗಜ್ಜೀವನದ ಧರ್ಮ ಬತ್ತಿಹೋದಂತೆ !

**ಹುತಾತ್ಮ**

ಭಗತ್‌ಸಿಂಗ್: Friends, the bomb was necessary to awaken England from her dreams. We dropped bombs on the floor of the Assembly chamber to register our protest on behalf of those who had no other menas left, to give expression to their heart-rendering agony. Our sole purpose was to make the deft to give the heedless timely warning…
…Conspiracy Cases trumpted up and incarceration of all young who cherish to vision of greater ideal cannot check the march of revolution. But timely warning if not unheaded, can helf to prvent loss of life and geneal suffering. We took it upon ourselves to provide this warnig and our duty is done…!
Frineds, blood calls for blood ! That is the path of freedom !!
ಕಾಲಪುರುಷ :

ಯಾರಿವನು ? .. ಓಹ್!..
ಇವನೊಂದು ಸಿಡಿಲ ಚಕ್ಕೆ !
ಪಂಜಾಬಿನ ಕ್ರಾಂತಿಕೇಸರಿ !
ಕ್ರಿ.ಶ. 1908ರಲ್ಲಿ ಕಿಸನ್‌ಸಿಂಗರ ಮಗನಾಗಿ ಜನಿಸಿದ ಅವತಾರ ಪುರುಷ !
ಹೆಸರು ಸರದಾರ್ ಭಗತ್ ಸಿಂಗ್!
ಸೋದರನೇ,
ಭಗತ್‌ಸಿಂಗ್‌ನ ಕಾರ್ಯಕ್ಷೇತ್ರ ಲಾಹೋರ್! 1920ರ ಅಸಹಕಾರ ಆಂಧೋಳನದಿಂದ ಇವರ ಕ್ರಾಂತಿಕಾರಕ ಜೀವನ ಆರಂಭವಾಗಿ 1926ರಲ್ಲಿ ಕೈ ಬಾಂಬು ಎಸೆದ ಕಾರಣದಿಂದಾಗಿ ಬೋಸ್ಟಲ್ ಜೈಲಿನಲ್ಲಿ ಬಂಧಿಯಾಗಿದ್ದು ಸುಮಾರು 60 ಸಾವಿರ ರೂಪಾಯಿಗಳ ಜಾಮೀನಿನ ಮೇಲೆ ಬಿಡುಗಡೆಯಾದ !
'ನವ್ ಜವಾನ್ ಭಾರತ ಸಭೆ' ಎಂಬ ನೂತನ ಸಂಸ್ಥೆಯನ್ನು ಕಟ್ಟಿದ. ಇವನಿಗೆ ಕ್ರಾಂತಿಯ ಸೇನಾನಿ ಚಂದ್ರ ಶೇಖರ ಅಜಾದ್, ಸುಖದೇವ್, ಭಗವತೀ ಚರಣೆ ಮೊದಲಾದವರ ಪೂರ್ಣ ಬೆಂಬಲವಿತ್ತು.
ದುರ್ದೈವದಿಂದ ಕ್ರಾಂತಿಕಾರಿಳಿಗೆ ವಿಪತ್ತು ಬಂತು. ಲಾಹೊರಿನ ಲಾಠೀ ಪ್ರಹಾರದ ಪರಿಣಾಮವಾಗಿ ಲಾಲಾ ಲತಪತರಾಯ್ ಮಡಿದರು! ವೀರಪುರುಷರ ನೆತ್ತರು ಕುದಿಯಿತು. ಸೈರಣೆ ಸತ್ತು ಲಾಲಾಜಿಯವರ ಮರಣಕ್ಕೆ ಕಾರಣನಾದ ಸ್ಕಾಟನಿಗೆ ಬದಲು ಸ್ಯಾಂಡಸ್ ಬಲಿಯಾದ ಈ ಕ್ರಾಂತಿಕಾರಿಗಳ ಕೈಗೆ ಸಿಕ್ಕಿ! ಪರಿಣಾಮ ಕೆಟ್ಟದ್ದಾಯಿತು. ನ್ಯಾಯಾಲಯ ತೀರ್ಪು ಕೊಟ್ಟಿತು ಗಲ್ಲಿಗೇರಿಸಿದರು.
ದಿನಾಂಕ:23.3.1931ರ ಸೋಮವಾರ ಸಂಜೆ7.33 ರಲ್ಲಿ ಸರದಾರ್ ಭರತ್ ಸಿಂಗ್, ಶಿವರಾಮ ರಾಜಗುರು ಮತ್ತು ಸುಖದೇವ್ ಇವರನ್ನು ಗಲ್ಲಿಗೇರಿಸಲಾಯಿತು.
ಅಂದು ಭಗತ್ ಸಿಂಗ್ ನುಡಿದ –
ಭಗತ್‌ಸಿಂಗ್ : ನಾನು ಸಾಯಲು ಅಂಜುವುದಿಲ್ಲ. ಸೋದರರೇ, ಆದರೆ ನನ್ನೊಂದು ಇಚ್ಛೆ..
ಕಾಲಪುರುಷ : ಏನದು ಕ್ರಾಂತಿಕೇಸರಿ ?
ಭಗತ್‌ಸಿಂಗ್ : ಬಹುಬೇಗ ಸತ್ತು. ಭರತ ಭೂಮಿಯಲ್ಲಿ ಮತ್ತೆ ಮಗುವಾಗಿ ಜನಿಸಬೇಕು. ಆದರೆ ಇಂತಲ್ಲ, ಹೊಸರಕ್ತದಿಂದ ಹೊಸ ದೇಹದಿಂದ, ಹೊಸ ಹುರುಪಿನಿಂದ ! ಅಂದು ಸ್ವಾತಂತ್ರ್ಯ ಹೋರಾಟದಲ್ಲಿ ಜಯಗಳಿಸಿ ಸ್ವತಂತ್ರ ಪುತ್ರನಾಗಬೇಕೆಂದು !
ಕಾಲಪುರುಷ : ಭಲೇ ರಾಷ್ಟ್ರಪುರುಷ ! ನೀನಲ್ಲವೇ ನಿಜವಾದ ದೇಶ ಭಕ್ತ ! ಭಲೇ ಭಗತ್‌ಸಿಂಗ್
[ಹಗ್ಗ ಕೆಳಗಿಳಿದು ಅವನ ಕೊರಳು ಬಿಗಿಯುವುಉ]
ಏಳು ಭಾರತ ಕುವರ,
ಅತ್ತ ಸಾಗು ಆ ಸಟ್ಲೇಜ್ ನದಿಯ ತೀರಲದಲಿ–ಅದೋ ನೋಡು ಅರೆಬೆಂದ ಇವರ ದೇಹಗಲೂ ನೀರಿನಲ್ಲಿ ತೇಲುತ್ತಿವೆ. ಇಷ್ಟೇ ಅಂತ್ಯ ಸಂಸ್ಕಾರ ಈ ಹುತಾತ್ಮರ ಭಗ್ನದೇಹಗಳಿಗೆ.. ಕರೆ ತಮ್ಮಾ ಕಣ್ಣೀರ ಕರೆ! ಅವರಾತ್ಮಕ್ಕೆ ಶಾಂತಿ ಸಿಗಲಿ !

ನೇತಾಜಿ
ಹಿನ್ನೆಲೆ ಧ್ವನಿ: ಇಂಕಿಲಾಬ್ ಜಿಂದಾಬಾದ್ ಇಂಕಿಲಾಬ್ ಜಿಂದಾಬಾದ್ !
ಅಜಾದ್ ಹಿಂದ್ ಜಿಂದಾಬಾದ್ ಅಜಾದ್ ಹಿಂದ್ ಜಿಂದಾಬಾದ್ !
ನೇತಜಿ ಸುಬಾಷ್ ಚಂದ್ರಬೋಸ್ ಕೀ ಜೈ !!

ನೇತಾಜೀ : ಮಿತ್ರರೇ,
ನಾವಿನ್ನು ದಾಸರಾಗಿ ಉಳಿಯಲಾರೆವು. ದಾಸ್ಯದ ಸವಿಯನ್ನು ನಾವು ಸವಿದ್ದಿದೇವೆ. ವಿದೇಶೀಯ ಆಕ್ರಮಣಕಾರರಿಂದ ಮಾತೃಭೂಮಿಯನ್ನು ಉಳಿಸುವುದಕ್ಕಾಗಿ ಜಗತ್ತಿನಲ್ಲಿಯೇ ಹೆಚ್ಚು ಬಲಿಶಾಲಿಯಾದ ಸೇನೆಯನ್ನು ಸಂಘಟಿಸುವುದು ನಿಮ್ಮ ಕರ್ತವ್ಯವಾಗಿದೆ. ಯೋಗ್ಯತೆ, ಸಾಮರ್ಥ್ಯಗಳು ಜೊತೆಯಾಗಿರುವರೆಗೂ ಭಾರತೀಯ ಯೋಧರು ಯಾರಿಗೂ ಹಿಂದಿಲ್ಲವೆಂದು ನಾನು ಜಗತ್ತಿಗೇ ತೋರಿಸಿಕೊಡುತ್ತೇನೆ. ನಮಗೆ ಯೋಗ್ಯ ಶಿಕ್ಷಣವೂ, ಸರಿಯದ ಅವಕಾಶವೂ ದೊರೆಯುತ್ತಿಲ್ಲ. ಇವೆರಡೂ ಪ್ರಾಪ್ತವಾದ ಸಂದರ್ಭಗಳಲ್ಲೆಲ್ಲಾ ಭಾರತೀಯರನ್ನು ಯಾವ ಲೋಹದಿಂದ ನಿರ್ಮಿಸಲಾಗಿದೆಯೆಂಬುದನನು ಅವರು ನಿದರ್ಶನಕ್ಕೆ ತಂದುಕೊಟ್ಟಿದ್ದಾರೆ.

ಬರೀ ಸೈನಿಕ ವಿಷಯದಲ್ಲಲ್ಲ. ರಾಜನೀತಿ, ಅರ್ಥಶಾಸ್ತ್ರ, ವಿಜ್ಞಾನ, ಆಟಮೊದಲಾದವುಗಳಲ್ಲಿ ಕೂಡ ಭಾರತೀಯರಾದ ನಾವು ಹಿಂದುಳಿದಿಲ್ಲ. ಭಾರತೀಯರು ಅರ್ಹರಿದ್ದಾರೆ ಮಾತ್ರವಲ್ಲ, ಅಧಿಕಾಧಿಕ ಅರ್ಹರಾಗಿದ್ದಾರೆ. ಪರಮಾತ್ಮನು ಅವರನ್ನು ಸೃಷ್ಟಿಸಿದ್ದೇ ಹಾಗೆ. ಜಗತ್ತಿನಿಂದ ನಾವು ಕಲಿಯುವುದು ಬಹಳವಿದೆ ಕಲಿಯಲು ಸಿದ್ಧರೂ ಇದ್ದೇವೆ. ಈ ಶಿಕ್ಷಣ ನಮ್ಮ ನೈಸರ್ಗಿಕ ಯೋಗ್ಯತೆ, ಸಾಮರ್ಥ್ಯ, ಆತ್ಮವಿಶ್ವಾಸಗಳ ತಳಹದಿಯ ಮೇಲೆ ಈ ಸೇನೆಯನ್ನು ಸಂಘಟಿಸುತ್ತೇವೆ.
ಕಡೆಯದಾಗಿ, ಮಿತ್ರರೇ ನಿಮಗಿದು ನೆನಪಿರಲಿ. ಸ್ವಾತಂತ್ರ್ಯವೆನ್ನುವುದು ಎಂದಿಗೂ ದಾನದಿಂದ ಪಡೆಯುವ ವಸ್ತುವಲ್ಲ. ಅದಕ್ಕೆ ನೆತ್ತರಿನ ಬೆಲೆಕೊಟ್ಟುಕೊಳ್ಳಬೇಕಾಗುತ್ತದೆ. ಆದ್ದರಿಂದ ರಕ್ತದಾನ ಮಾಡಬನ್ನಿ ದೇಶಸೇವೆಗೆ, ಬಂಧು ರಕ್ಷೆಗೆ !
ಜೈ ಹಿಂದ್!
ಕಾಲಪುರುಷ :
ಶಿರಬಾಗಂ ಸೋದರ ಈ ದಿವ್ಯಮೂರ್ತಿ ಸುಭಾಸನಿಗೆ ! ಕಾಲಪುರುನೀತ ! ಧನ್ಯಾತ್ಮ ! ಪುಣ್ಯ ಜೀವಿ !!
ಕ್ರಿ.ಶ.1897 ಜನವರಿ 23ರಂದು ಬಂಗಾಳದ ಕಟಕ ಎಂಬಲ್ಲಿ ಜನಿಸಿದ ಈತ ಇಂದು ನೆಲೆಯಿಲ್ಲದಾಗಿದ್ದಾನೆ. ತಂದೆ ಜಾನಕೀನಾಥ ಬಾಬುವಿನ ಪ್ರೀತಿಯ ಪುತ್ರ ಸುಭಾಸ್ ಚಂದ್ರ ಭಾರತೀಯನ ಅಕ್ಕರೆಯ ಅಣ್ಣನಾಗಿದ್ದ. ಆದರೆ ಅವನ ನೆನಪೇ ಮಾಡಿದೆ ಇಂದು  ಭಾರತದ ಮಕ್ಕಳಿಗೇ ಅಲ್ಲವೇ ?
ಅಜಾದ್ ಹಿಂದ್ ಸೇನೆ ಕಟ್ಟಿ ಅಂಡಮನ್ ನಿಕೋಬಾರ್ ಸಿಂಗಾಪೂರ್‌ಗಳಲ್ಲಿ ಠಾಣ್ಯವನ್ನೇರ್ಪಡಿಸಿ ಲೋಕದ ನಾನಾ ಜನತೆಯ ಪ್ರೀತಿ, ಗೌರವಗಳಿಗೆ ಪಾತ್ರನಾಗಿ ಪೂರ್ಣ ಬೆಂಬಲ ಪಡೆದಿದ್ದ. ಮಹಾಪುರುಷ ಇಂದು ದೇಶಾಂತರ ಗತನಾಗಿದ್ದಾನೆ. ಭರತದ ಸವ್ಯಸಾಚಿ ಇಂದು ಅದಾವ ಕಲ್ಲದಲ್ಲಡಗಿರುವನೋ ತಿಳಿಯದಾಗಿದೆ ! ಸೋದರನೇ.
ನಮ್ಮ ನಿತ್ಯದ ಬೇಡಿಕೆ ಇಷ್ಟೆ ಇರಲಿ –
"ಬರಲಿ ಎಂದಾದರೂ ಬರಲಿ–ಬಂದು
ನಮ್ಮ ನೆಚ್ಚಿನ ನೇತಾಜಿ ಸುಭಾಷ್ ಚಂದ್ರಬೋಸ್
ದರ್ಶನ ಕೊಡಲಿ" ಎಂದು
–ಜೈ ಹಿಂದ್–

ಆಂಧ್ರ ಕೇಸರಿ !
ಕಾಲಪುರುಷ :
ಬಾ ಸೋದರ, ಇದೋ ಇವರ ದರ್ಶನದ ಪಡೆ ಇವರಾರು ಗೊತ್ತೆ? ಇವರು ಆಂಧ್ರಕೇಸರಿ ಶ್ರೀ ಪ್ರಕಾಶಂ ! ಪೂಜ್ಯ ಬಾಪೂಜಿಯವರ ಆತ್ಮೀಯ ವ್ಯಕ್ತಿಗಳು. ಇವರ ನುಡಿ ಬಂದರೆ ಸಿಂಹಘರ್ಜನೆ ಇದ್ದಂತೆ. ಆದರೆ ಇಂದು ಅವರ ದಿವ್ಯ ಸಂದೇಶವನ್ನು ಮಾತ್ರ ಕೇಳು –
ಶ್ರೀಪ್ರಕಾಶಂ : ಯಾರ ಶಾಪವೋ ಅಥವಾ ಯಾರ ಪಾಪ ಫಲವೊ? ಕಾಣೆ ಭಾರತಕ್ಕಂತೂ ಇನ್ನೂ ಒಳ್ಳೆಯ ದಿನಗಳು ಬಂದಂತೆ ಕಾಣುವುದಿಲ್ಲ. ಅಂದರೆ ಕೇವಲ ಪಾಕಿಸ್ತಾನದ ಪುರಾತನ ಚೀಣೀಯರ ದುರಾಕ್ರಮಣ– ಇವುಗಳನ್ನು ಕುರಿತು ನಾನು ಹೇಳುತ್ತಿಲ್ಲ. ಆದರೆ ಧರ್ಮದ ಬುನಾದಿಯ ಮೇಲೆ ವಿಶ್ವಶಾಂತಿಯ ವಿಶಿಷ್ಟ ಧ್ವಜವನ್ನು ಎತ್ತಿ ಹಿಡಿದ ಸನುತನ ಭಾರತಕ್ಕೆ ಸತತವೂ ಪೆಟ್ಟು ತಪ್ಪಿಲ್ಲ. ಇದಕ್ಕಾಗಿ ಮರುಗುತ್ತೇನೆ. ಅಮೆರಿಕದ ಹಾಲಿನ ಪುಡಿಂದ ರಷ್ಯಾದವನ ಸಲ ರೂಪದ ಶೂಲದಿಂದ ನಮ್ಮ ಪುರುಷಾಥ್ ಸಾಧನೆಯಾಗಲಾರದು. ಅದು ಆಗುವುದು, ಓ ನನ್ನ ಪ್ರಿಯಬಂಧು, ನಿನ್ನ ಸ್ವಾಲಂಬಿತನದಿಂದ, ನಿನ್ನ ನಿಸ್ವಾರ್ಥ ಬುದ್ಧಿಯಿಂದ ನಿನ್ನಲ್ಲಿರುವ ದುರಾಸೆಯ ಮಾರಣ ಹೋಮದಿಂದ! ಬಹುಮುಖ್ಯವಾಗಿ ಇಂದು ನನ್ನ ವರ್ತಕ ಮಿತ್ರರಿಗೊಂದು ಮಾತು ತಿಳಿಸಬೇಕಾಗಿದೆ–
ನನ್ನ ಪ್ರಿಯ ವಣಿಗ್ಮಣಿಗಳೇ, ಇಂದು ಭಾರತದ ಭವಿಷ್ಯ ನಿಮ್ಮ ಕೈಯಲ್ಲಿದೆ ಎಂದು ಹೇಳಿದರೆ ನೀವು ಆಶ್ಚರ್ಯ ಪಡಬೇಕಾಗಿಲ್ಲ. ಅದು ಶತ್ರುವಿನ ಬಾಂಬು ಟ್ಯಾಂಕುಗಳ ಬೊಬ್ಬೆ ಬೆದರಿಕೆಗಳಲ್ಲಿಲ್ಲ. ಬಲಿಷ್ಠ ರಾಷ್ಟ್ರಗಳ ದರ್ಪಿಷ್ಠ ಮುಷ್ಠಿಯಲ್ಲಿಯಲ್ಲ. ಅದು ಪರಮಾತ್ಮನ ಕೈಯಲ್ಲೂ ಇಲ್ಲ. ಪರದೇಶಿಯ ಕೈಯಲ್ಲೂ ಇಲ್ಲ. ಅದು ಇರುವುದು ನಿಮ್ಮಕೈಯಲ್ಲಿ ! ನಿಮ್ಮ ವ್ಯೋದು ವೈಶಾಲ್ಯ ಹೃದಯ ವಲಯದಲ್ಲಿ! ಆದ್ದರಿಮದ, ನನ್ನ ಪ್ರಿಯವರ್ತಕ ಮಿತ್ರರೇ ನಿಮ್ಮ ಹೊಣೆಗಾರಿಕೆ ಇಂದು, ಈ ತುರ್ತು ಪರಿಸ್ಥಿತಿಯಲ್ಲಿ ಗುರುತರವಾದದದು. ಯುದ್ಧಾಗ್ನಿಯಲ್ಲಿ ನಮ್ಮ ವೀರಯೋಧರು ಮಡಿದು, ಕ್ಷಾಮ ಚಿತೆಯಲ್ಲಿ ಬಡವರೆಲ್ಲಾ ನಾಶ ಹೊಂದಿದ್ದರೆ ನಿಮ್ಮ ಭವಿಷ್ಯ ಏನಾಗಬಹುದೆಂಬುದನ್ನು ಸ್ವಲ್ಪ ಯೋಚಿಸಿ ನೋಡಿ.
ನಿಮ್ಮ ದುಡಿಮೆಯೇ ದೊಡ್ಡವಲ್ಲ. ಹೆಚ್ಚು ಲಾಭಕೋರತನದಿಂದ ದೇಶಕ್ಕಷ್ಟೇ ಅಲ್ಲ ನಿಮಗೂ. ನಿಮ್ಮ ಕುಟುಂಬ ವರ್ಗಕ್ಕೂ ಹಿತವಲ್ಲ. ಅನ್ನಕ್ಕೆ ಮಣ್ಣು ಬೆರಸಿ ಲಾಭತುರಗದ ಬೆನ್ನು ಹತ್ತಿದರೆ ನಿಮ್ಮ ಅನ್ನಕ್ಕೇ ನೀವು ವಿಷಹಾಕಿ ಕೊಂಡಂತೆ! ನಿಮ್ಮ ಮಕ್ಕಳ ಹಾಲಿಗೆ ನೀವೆ ವಿಷ ಬೆರೆಸಿದಂತೆ ! ಅಂತಹ ದ್ರೋಹ ಬುದ್ಧಿ ನಿಮಗೆ ಬರದಿರಲಿ!.. ವರ್ತಕ,

ವಕೀಲ, ಒಕ್ಕಲಿಗ, ಕಾರ್ಮಿಕ, ಕೂಲಿಗಾರ, ಅಧ್ಯಾಪಕ, ಅಧಿಕಾರಿ, ವಿದ್ಯಾರ್ಥಿ ವೈದ್ಯಕೀಯ ವ್ಯಕ್ತಿ, ಕಲಾವಿದ, ರಾಜಕಾರಿಣಿ, ತಜ್ಞ, ತಂತ್ರಜ್ಞ, ತರುಣ ತರುಣಿಯರ ತುಂಬು ಮನಸ್ಸಿನ ತಂಡ–ಒಂದೇ ಎರಡೇ. ಎಲ್ಲ ಧರ್ಮ್ದ, ಎಲ್ಲ ಕೋಮಿನ, ಎಲ್ಲ ರೂಪದ ನೆರವು ಇಂದು ಬೇಕಾಗಿದೆ ಭಾರತಕ್ಕೆ. ಆದ್ದರಿಂದ ನನ್ನ ಪ್ರಿಯ ಸೋದರ, ಸೋದರಿಯರೇ ಎಲ್ಲರಿಗೂ ಸಾಮೂಹಿಕ ಕರೆ ಕೊಡುತ್ತಿದ್ದೇನೆ ಈ ಭರತದ ಮಹತ್ವಪೂರ್ಣ ಯಜ್ಞಕ್ಕೆ ! ಬನ್ನಿ,ಮೇಲದ್ದು ಬನ್ನಿ, ನಿಮ್ಮ ನಿರ್ಮಲ ಮನಸ್ಸಿನ ನಿಶ್ಚಿತ ಬುದ್ಧಿಯನ್ನು ಮಾತ್ರ ಮರೆಯದೆ ತನ್ನಿ !

–ಜೈ ಜಗತ್–

ಕಾಲಪುರುಷ :

ಇದು ಭಾರತದ ಭವ್ಯಪರಂಪರೆ !

ಪ್ರಸ್ಫುಟಿತ ಪೌರುಷದ ದಿವ್ಯ ತೇಜೋರಾಶಿ !

ಇದೇ ಪರಂಪರೆಗೆ ಸೇರಿದ್ದು ನಿನ್ನ ಚೇತನ.

ಓ ಭಾರತೀಯ, ಲಿಂದಾದರೂ ನೀನು ಎಚ್ಚೆತ್ತುಕೋ. ಹಿಂದುವಾಗಿರು, ಮುಸಲ್ಮಾನನಾಗಿರು, ಕ್ರೈಸ್ತನಾಗಿರು, ಸಿಕ್ಕನಾಗಿರು, ಬೌದ್ಧನಾಗಿರು, ಜೈನನಾಗಿರು ನೀನು ಯಾರೆ ಆಗಿರು ಎಂದೆಂದಿಗು ನೀನ ಭಾರತೀಯನಾಗಿರು! ಎಂದೆಂದಿಗೂ ನೀನು ಹೇಳುತ್ತಿರಬೇಕು 'ನಾ ಭಾರತೀಯ, ನಾ ಭಾರತೀಯ' ಎಂದೆಂಬ ಅಮೃತೋಪಮ ಋಷಿವಾಣಿಯನ್ನು !

ಅದೋ ನೋಡು, ಭರತಮಾತೆ ತನ್ನ ಕರುಣಾಜನಕ ದೃಷ್ಟಿಯಿಂದ ನಿನ್ನೀಕ್ಷಿಸುತ್ತಿದ್ದಾಳೆ. ಅಂತೆಯೇ ಅವಳ ಸಾನ್ನಿಧ್ಯದಲ್ಲಿ ಅವಳ ಕಂದಮ್ಮಗಳು ಒಬ್ಬೊಬ್ಬದಾಗಿ ಬಂದು ಸೇರುತ್ತಿದ್ದಾರೆ. ನೋಡಿ ನಿನ್ನ ಕಣ್ಣಿನಬರ ಹಿಂಗಿಸಿಕೊ!

[ಭಾರತಾಂಬೆಯ ದರ್ಶನ, ಗಾಂಧೀಜಿ, ಸುಭಾಷ್, ನೆಹರೂ, ವಿನೋಬಾಜಿ ಮೊದಲಾದವರೆಲ್ಲೂ ಒಬ್ಬೊಬ್ಬರಾಗಿ ಬಂದು ನಿಲ್ಲುತ್ತಾರೆ.

ಓ ಭಾರತ,

ನಮ್ಮ ನಾಡಿನ ಸನಾತನತೆ ಎಂದೆಂದಿಗೂ ಅಚ್ಚಳಿಯದ ಆಸ್ತಿಯಪ್ಪಾ. ಹೆದರಬೇಡ. ನೋಡು ವಿಶ್ವಭೂಷಣ ಸಾಮ್ರಾಟ್ ಅಶೋಕ ನಿನ್ನವನು, ಶ್ರೀಹರ್ಷ ಅಕ್ಬರ್ ನಿನ್ನವರು. ಪುಲಿಕೇಶಿ ನಿನ್ನ ಅಣ್ಣ! ಅದೋ ನಿನ್ನ ಬಾಪು, ಅವರ ನೇತೃತ್ವದಲ್ಲಿ ಅಮಿತ ಸಂಖ್ಯೆಯ ಅಖಂಡ ಮೂರ್ತಿಗಳು ! ಒಬ್ಬೊಬ್ಬರ ನುಡಿಯನ್ನೂ ಕೇಳೂ, ಕೇಳಿ ನಿನ್ನ ಮನದಮಾಲಿನ್ಯವನ್ನು ನೀಗಿಕೋ –

ಬಾಪೂಜಿ: ಸೈರಣೆಗೂ ಒಂದು ಮಿತಿ ಇದೆ. ಬಂದು ಭಗಿನಿಯರೇ, ದೇಶಕ್ಕಾಗಿ ಮಾಡಿರಿ ಇಲ್ಲವೇ ಮಡಿಯಿರಿ.

ಕಾಲಪುರುಷ: ಎಂದ ರಾಷ್ಟ್ರಪಿತ ಮಹಾತಾಗಾಂಧಿ

ಚಿತ್ತರಂಜನ್‌ದಾಸ್ : ಜನತೆಯ ಒಪ್ಪಿಗೆ ಇಲ್ಲದ ಯಾವ ನಿಯಮವೂ ಕಾಯಿದೆಯಾಗದು ದಬ್ಬಾಳಿಕೆಯ ಕಾಯಿದೆಗಳನ್ನು ಎದುರಿಸುವುದು ಪ್ರತಿಯೊಬ್ಬನ ಕರ್ತವ್ಯವಾಗಿದೆ. ಭಾರತದ ಪ್ರಗತಿಯು ಸ್ವರಾಜ್ಯದಲ್ಲಿ ಅಡಗಿದೆ.

ಕಾಲಪುರುಷ: ಎಂದ ದೇಶಬಂಧು ಚಿತ್ತರಂಜನದಾಸ್.

ಶ್ರದ್ಧಾನಂದ : ಚಲಾವ್ ತೇರಿ ಗೋಲಿ !

ಕಾಲಪುರುಷ : ಎಂದು ಎದೆ ಒಡ್ಡಿದರು ಸ್ವಾಮಿ ಶ್ರದ್ಧಾನಂದ.

ವಿನೋಬಾಜಿ : ಮಾನವ ಕೋಟಿಯ ಉದ್ಧಾರವೇ ನನ್ನ ದೀಕ್ಷೆ !

ಕಾಲಪುರುಷ : ಎಂದ ವಿಶ್ವ ಸಂಚಾರಿ ವಿನೋಬಾಭಾವೆ.

ದಾದಾಬಾಯಿ : ನನ್ನ ಕೊನೆಯ ಪ್ರಾರ್ಥನೆ ಇಷ್ಟೇ. ಒಗ್ಗಟ್ಟಿನಿಂದಲೂ ದೃಢ ನಿಶ್ಚಯದಿಂದಲೂ ಮುಂದೆ ಸಾಗಿರಿ. ಐಕ್ಯದಿಂದಲೂ ಒಮ್ಮನಸ್ಸಿನಿಂದಲೂ ಕಾರ್ಯ ಪ್ರವೃತ್ತರಾಗಿರಿ. ಜಗತ್ತಿನಲ್ಲಿ ದೊಡ್ಡ ಸಾಮ್ರಾಜ್ಯವನ್ನುಳ್ಳ ಬ್ರಿಟಿಷ್ ಜನಾಂಗ

ಭಾರತದಂತಹ ಪ್ರಾಚೀನ ರಾಷ್ಟ್ರವನ್ನು ಬಂದು ಪ್ರೇಮದಿಂದ ಬರಮಾಡಿಕೊಳ್ಳುವ ಅದ್ಭುತ ದೃಶ್ಯವು ಜಗತ್ತಿನ ಕಣ್ಣಿಗೆ ಬೀಳಲು ಬಹುದೂರವಿಲ್ಲ !

ಕಾಲಪುರುಷ : ಎಂದು ಅಚಲವಾಗಿ ನಂಬಿದ್ದ ದಾದಾಬಾಯಿ ನವರೋಜಿ.

ನಾಯರ್ : ಬ್ರಿಟಿಷರಿಂದ ನಮಗೆ ಲಾಭಗಳಾಗಿರಬಹುದು. ಪರಚಕ್ರದ ಭೀತಿಯೂ  ಇರಬಹುಉದ. ಆದರೆ ಭಾರತ ರಾಷ್ಟ್ರವು ಸ್ವತಂತ್ರವಾಗಲು ಆತಂಕಗಳೇನು?
ಕಾಲಪುರುಷ :ಎಂದು ಪ್ರಶ್ನಿಸಿದ ಶಂಕರನ್ ನಾಯರ್.

ಬಸು : ಸ್ವಾರ್ಥ, ತ್ಯಾಗವಿಲ್ಲದೆ ರಾಷ್ಟ್ರದ ಏಳಿಗೆಯು ಎಂದೆಂದಿಗೂ ಸಾಧ್ಯವಿಲ್ಲ.

ಕಾಲಪುರುಷ : ಎಂದು ನಿರ್ಧಾರಂಗೈವ ಆನಮದ ಮೋಹನ ಬಸು.

ಗೋಖಲೆ : ಲಾರ್ಡ್ ಕರ್ಜನರ ಆಳ್ವಿಕೆಯನ್ನು ಹೋಲಿಸಬೇಕಾದ ಔರಂಗಜೇಬನ ಕಾಲದ ಇತಿಹಾಸವನ್ನೇ ಓದಬೇಕು. ಭಾರತವು ಬ್ರಿಟಿಷರ ವಿಲಾಸ ಭೂಮಿ ತಾವು ಆಳುವವರು ಭಾರತೀಯರು ಅಳಿಸಿಕೊಳ್ಳುವವರು ಎಂಬ ಭಾವನೆಯು ಕರ್ಜನರಿಗಿದೆ. ಇದಕ್ಕೆ ಧಿಕ್ಕಾರ !

ಕಾಲಪುರುಷ : ಎಂದು ಧಿಕ್ಕರಿಸಿದ ಗೋಪಾಲಕೃರ್ಷಣ ಗೋಖಲೆ.

ಮಾಳವೀಯ : ದೇಶದಲ್ಲಿ ವ್ಯಾಪಿಸಿದ ಬಡತನವೇ ರಾಷ್ಟ್ರದ ಅಸಂತೋಷಕ್ಕೆ ಕಾರಣ. ನಮ್ಮ ಕೋಟ್ಯಾವಧಿ ದೇಶಬಾಂಧವರು ಮೈ ಮುಚ್ಚಲು ಬಟ್ಟೆ ಇಲ್ಲದೆ ಹೊಟ್ಟೆ ತುಂಬ ಅನ್ನವಿಲ್ಲದೆ ನರಳುತ್ತಿದ್ದಾರೆ. ನಮ್ಮ ಚೈತನ್ಯದ ಪ್ರತಿಕ್ಷಣವೂ ತಾಯ್ನಾಡಿನ ಸೇವೆಗಾಗಿ ಮೀಸಲಿರಲಿ. ನಮ್ಮ ಭವಿಷ್ಯವು ನಮ್ಮ ಒಗ್ಗಟ್ಟಿನಲ್ಲಿಯೇ ಇದೆ.

ಕಾಲಪುರುಷ : ಎಂದು ಸ್ಪಷ್ಟೀಕರಿಸಿದ ಶ್ರೀಮತಿ ಅನಿಬೆಸೆಟಂರ್

ತಿಲಕ್ : ಸ್ವರಾಜ್ಯವು ನನ್ನ ಜನ್ಮಸಿದ್ಧ ಹಕ್ಕು. ಅದನ್ನು ನಾನು ದೊರಕಿಸಿಯೇ ತೀರುವೆನು !

ಕಾಲಪುರುಷ : ಎಂದು ಗರ್ಜಿಸಿದ ಬಾಲಗಂಗಾಧರ್ ತಿಲಕ್.

ಲತಪತರಾಯ್ : ರಾಷ್ಟ್ರಪೂಜೆಯೇ ನನ್ನ ಧರ್ಮ

ಕಾಲಪುರುಷ : ಎಂದ ಲಾಲಾ ಲಜಪತರಾಯ್

ಮೋತಿಲಾಲ್ : ನನಗೆ ಮರಣ ಬಂದರೂ ಸ್ವತಂತ್ರ ಭಾರತದಲ್ಲಿಯೇ ಬರಲಿ
ಕಾಲಪುರುಷ : ಎಂದು ಆಶಿಸಿದ ಮೋತಿಲಾಲ್ ನೆಹರು.

ಜವಾಹರ್ : ಆರಾಮ್ ಹರಾಮ್ ಹೈ

ಕಾಲಪುರುಷ : ಎಂದು ಟೀಕಿಸಿದ ಭಾರತರತ್ನ ಪಂಡಿತ ಜವಾಹರಲಾಲ್ ನೆಹರೂ

ಪಟೇಲ್ : ಪರದೇಶಿ ವಸ್ತುಗಳನ್ನೆಲ್ಲ ನಮ್ಮಗಡಿ ಬಿಟ್ಟು ಓಡಿಸಬೇಕು. ಯಾವ ರಾಷ್ಟ್ರದ ಆರ್ಥಿಕ ಆಡಳಿತೆಯು ಅದರ ಕೈಯಲ್ಲಿಲ್ವೋ ಅದು ಎಂದಿಗೂ ಪ್ರಗತಿಯನ್ನು ಹೊಂದಲಾರದು.

ಕಾಲಪುರುಷ : ಎಂದ ಉಕ್ಕಿನ ಮನುಷ್ಯ ಸರ್ದಾರ್ ವಲ್ಲಭಾಯಿಪಟೇಲ್
ರಾಜೇಂದ್ರಪ್ರಸಾದ್: ನಮ್ಮ ಮಾರ್ಗವು ಸೂರ್ಯಪ್ರಕಾಶದಷ್ಟು ಸ್ಪಷ್ಟವಿದೆ

ಕಾಲಪುರುಷ : ಎಂದು ಸ್ಪಷ್ಟೀಕರಿಸಿ ತಿಳಿಸಿದ ಡಾ.ಬಾಬುರಾಜೇಂದ್ರ ಪ್ರಸಾದ್
ಶ್ರೀಮತಿ ಗುಪ್ತ: ನಾವು ನಮ್ಮ ರಕ್ತದಿಂದಲೇ ಭಾರತದ ಇತಿಹಾಸವನ್ನು ಬರೆಯುತ್ತಲಿದ್ದೇವೆ.

ಕಾಲಪುರುಷ : ಎಂದ ಶ್ರೀಮತಿ ನೇಲಿ ಸೇನಗುಪ್ತ.

ಶಾಸ್ತ್ರಿ: ಈ ಭಾರತ–ಪಾಕಿಸ್ತಾನ ಯುದ್ಧದಲ್ಲಿ ನಾವು ನಮ್ಮ ಶಕ್ತಿಯನ್ನೆಲ್ಲ ವಿನಿಯೋಗಿಸಿ ಹೋರಾಡಿದೆವು. ಈಗ ಶಾಂತಿಸ್ಥಾಪನೆಗಾಗಿ ನಮ್ಮ ಶಕ್ತಿಮೀರಿ ಹೋರಾಡಬೇಕಾಗಿದೆ.

ಕಾಲಪುರುಷ : ಎಂದ ನಮ್ಮ ನೆಚ್ಚಿನ ನಾಯಕ, ಭಾರತ ಪಾಕಿಸ್ತಾನಗಳ ಸೌಹಾರ್ದಕ್ಕಾಗಿ ತಾಷ್ಕೆಂಟಿನಲ್ಲಿ ತನ್ನ ಸಾವನ್ನೇ ನೀಗಿದ ಭಾರತರತ್ನ ಲಾಲ್‌ಬಹಾದೂರ್ ಶಾಸ್ತ್ರಿ.

– ಒಬ್ಬರೇ ಇಬ್ಬರೇ... ಲೆಕ್ಕ್ಕ ಸಂಖ್ಯೆಯಿಲ್ಲ ಸೋದರನೆ !

ಇವರೆಲ್ಲ ನಿನ್ನವರು ನಿನ್ನ ಆತ್ಮೀಯ ಬಂಧುಗಳು ನಿನಗಾಗಿ, ನಿನ್ನಭ್ಯುದಯಕ್ಕಾಗಿ ತಮ್ಮನ್ನೇ ಬಲಿಗೊಟ್ಟು ಕೊಂಡ ತ್ಯಾಗಮೂರ್ತಿಗಳು.
ಅವರ ಆದರ್ಶ ನಿನ್ನ ಮುಂದಿರಲಿ
ಅವರ ತ್ಯಾಗ ರಾಷ್ಟ್ರಪ್ರೇಮ, ಸಾಹಸಾದಿ ಸದ್ಗುಣಗಳು
ನಿನಗೆ ಕೈ ದೀವಿಗೆಯಾಗಿರಲಿ !
ಎಂದೆಂದಿಗೂ ಅವರ ಆನಂತ ಆಶೀರ್ವಾಧ ನಿನಗೆ ರಕ್ಷೆಯಾಗಿರಲಿ !..
ಎಲ್ಲಿ, ಒಮ್ಮೆಲೇ ಘೋಷಿಸು ವಿಶ್ವ ಬೆಚಚುವ ರೀತಿ..
ಬೋಲೋ ಭಾರತ ಮಾತಾಕಿ ಜೈ !
ಬೋಲೋ ಭಾರತ ಮಾತಾಕಿ ಜೈ !!
ಬೋಲೋ ಭಾರತ ಮಾತಾಕಿ ಜೈ !!!

– ಅದ ನಮ್ಮ ಹೆಮ್ಮೆಯ ಪತಾಕೆ (ರಾಷ್ಟ್ರಧ್ವಜ ಹಾರುತ್ತಿದೆ)

ತ್ರಿವರ್ಣರಂಜಿತ ರಾಷ್ಟ್ರಧ್ವಜ !
ಮಣಿಯದಕೆ ..
ಮಣಿದೊಮ್ಮೆ ಹಾಡು

ರಾಷ್ಟ್ರಗೀತ –
ಜನಗಣಮನ ಅಧಿನಾಯಕ ಜಯಹೇ
ಭಾರತ ಭಾಗವಯವಿಧಾತ॥

ಪಂಜಾಬ ಸಿಂಧು ಗುಜರಾಟ ಮರಾಠ
ದ್ರಾವಿಡ ಉತ್ಕ ವಂಗ
ವಿಂದ್ಯ ಹಿಮಾಚಲ ಜಮುನಾ ಗಂಗಾ
ಉಚ್ಚಲ ಜಲಧಿತರಂಗ
ತವ ಶುಭ ನಾಮೇ ಜಾಗೇ
ತವ ಶುಭ ಆಶಿಸ ಮಾಗೇ
ಗಾಹೇ ತವ ಜಯ ಗಾಥಾ !
ಜನಗಣ ಮಂಗಳ ದಾಯಕ ಜಯಹೇ
ಭಾರತ ಭಾಗ್ಯ ವಿಧಾತ
ಜಯಹೇ ಜಯಹೇ ಜಯಹೇ

ಜಯ ಜಯ ಜಯ ಜಯಹೇ !

***

UNITED ARTISTS
SHIMOGA
PRESENT
`VEERA BHARATHI'
AT
THE ROTARY CONFERENCE
OF DISTRICT 317
ON
SUNDAY THE 26$^{TH}$ DECEMBER 1965

'VEERA BHARATHI'
Script and Voice
S.S.Marulaiah, M.A.,

Art:
OMKAR & UMAPATHY

Choreographay
OMKAR

Costumes
BARKOOR BROTHERS

Directed by:
R.SHESHADRI

PRODUCED BY
THE UNITED ARTISTS, SHIMOGA

President
M.S.NAGABHUSHANA RAO, M.A.,

Secretaries
C.S.RAMASWAMY
&
& REMANAND PAI

'VEERA BHARATHI'
What? Why ? How?
'Veera Bharathi' is a sketch in vision ad voice of the glorious tradition of India.
'Veera Bharathi' is a parade of the Grate Men who made India great.

'Veera Bharathi' is a Red record of the inspiring patriotism, deeds of valour, tales of sacrifice of the great sons of India.
'Veera Bharathi' is a tribute to the immortal souls that freed this Sacred Land of ours from bondage.
'Veera Bharathi' is a token of gratitude to our JAWANS whose invisible courage guards the Mother Land.
'Veera Bharathi' is a song sung in praise of the epich making heroes of Indian History.
'Veera Bharathi' is a timely review of the Architects of the Ageless Culture of India.
'Veera Bharathi' is a moving Tableaux that vibrates the strings of patriotism in every Indian heart.
'Veera Bharathi' is trumpet call for war that is not belligerence.
'Veera Bharathi' presents Lord Krishna who advocated war to destroy the evil.
'Veera Bharathi' is a message of nonviolence that is not cowardice.
'Veera Bharathi' presents as well a Gandhiji who preached the strength of nonviolence.
'Veera Bharathi' is the symbol of tolerance that is not weakness.
'Veera Bharathi' is reiteration with illustration of the Unity in Diversity- that is Indias.
'Veera Bharathi' speaks of a crusade not in the name of a religion but in the name of Justice.
'Veera Bharathi' stands for peace but not at the expence of Liberty.
'Veera Bharathi' stands for good neighbourlines but not at the expense of our sovereignity.
'Veera Bharathi' is a chronology of epoch's commening from MANU down to the days of Mahatma Gandhi.
'Veera Bharathi' is the story narrated by Mother Bharathi of the dear ones who stood by her honour.
'Veera Bharathi' presents the United Artists on the stage to fill your eyes and the voice of the poet to fill your ears.
Yes, 'Veera Bharathi' is the humble contribution of United Artists to the defence efforts of the Nation.

'VEERA BHARATHI'
IS A
RENDEZVOUS

WHERE YOU MEET :

1. BHARATHAMATHA
2. VAIVASHWATH MANU – The great Hindu Law giver
3. PARASHU-Bhargava son of Jamadagni
4. GEETHOPADESHA- Lord Krishna and Arjuna
5. GADDAYUDDA-Bheema & Duryodhana
6. KAUTILAY-The father of Indian Politics with Chandragupta
7. RANA PRATAP-The light of Rajasthan
8. CHATRAPATHI SHIVAJI
9. TIPPU SULTAN-The Tiger of Mysore
10. KARNATAKA KESARINI-Kittoor Chennamma
11. VEERA PANDYA-Katta Bomman
12. JHANSI RANI-Laxmibai
13. SWAMI VIVEKANANDA

14. SARDAR BHAGAT SINGH-The great Martyr
15. NETAJI SUBHAS CHANDRA BOSE
16. ANDHRA KESARI-Sri Prakasham
17. THE FATHER OF THE NATATION : Mahathama Gandhi

**ವಿಶ್ವಮಾನವ ಬಸವ**

ಪಾತ್ರವರ್ಗ
ಬಸವಣ್ಣ
ಅಕ್ಕ ನಾಗಮ್ಮ
ಚೆನ್ನ ಬಸವಣ್ಣ
ಪೂಜಾರಿ
ನಾಗರಿಕರು
ನರ್ತಕಿಯರು
ಇತ್ಯಾದಿ

ವಿಶ್ವಮಾನವ ಬಸವ

(ನೇಪಥ್ಯದಲ್ಲಿ ಭಾವಪೂರ್ಣ ವಚನ ಪ್ರವಚನ)

ಕಲ್ಯಾಣವೆಂಬ ಪ್ರಣತೆಯಲ್ಲಿ
ಭಕ್ತರಸವೆಂಬ ತೈಲವನೆರೆದು
ಆಚಾರವೆಂಬ ಬತ್ತಿಗೆ
ಬಸವಣ್ಣನೆಂಬ ಜ್ಯೋತಿಯ ಮುಟ್ಟಿಸಲು
ತೊಳಗಿ ಬೆಳಗುತ್ತಿರ್ದುದಯ್ಯಾ ಶಿವನ ಪ್ರಕಾಶ ।
ಆ ಬೆಳಗಿನೊಳಗೊಪ್ಪುತ್ತಿರ್ದರೆಯ್ಯಾ

ಅಸಂಖ್ಯಾತ ಭಕ್ತಮಹಾಗಣಗಳು
ಶಿವಭಕ್ತನಿರ್ದ ಕ್ಷೇತ್ರ
ಶಿವಭಕ್ತನಿದ್ ದೇಶ
ಪಾವನವೆಂಬುದು ಹುಸಿಯೆ ಗುಹೇಶ್ವರಾ ॥
(ಲಲಿತ ಘಂತಾನಾದದೊಡನೆ ಕ್ರಮೇಣ ಮುಗಿವುದು)

**ದೃಶ್ಯ – 1 ಅಗ್ರಹಾರ**

ನರ್ತಕಿಯರು : ಬಸವಾ ಬಾ ಬಾ
ವಸುಧೆಗೆ ನಿನ್ನಯ
ಜಸವನು ತೋರಲು ಬೇಗನೆ ಬಾ ಬ ॥ಪ॥

ಕನ್ನಡ ನುಡಿಯಿದು
ಸಣ್ಣಾಗುತ್ತಿದೆ
ಚೆನ್ನಿಗ ಬಸವನೆ ಪೊರೆಯಲು ಬಾ ಬಾ

ಕನ್ನಡ ಜನರಿಗೆ
ಕನ್ನಡ ಮಂತ್ರವ
ನಿನ್ನಯ ವಚನದಿ ಕಲಿಸಲು ಬಾ ಬಾ ॥1॥

ಅನ್ನವೆ ಹಸಿದಿದೆ
ನೀರ್ ಬಾಯಾರಿದೆ
ಗಾಳಿಯು ಬಯಸಿದೆ ಬೀಸಣಿಗೆ
ಈ ಅಭಾಸಕೆ
ದೇಶವೆ ನಲುಗಿದೆ
ಮಾನವತೆಯ ಮೇಲೆತ್ತಲು ಬಾ ಬಾ ॥2॥
(ಕೆಲಕಾಲ ನರ್ತನ)

ಮೂವರೂ : ಮನುಕುಲಕೆ ಒಳತಾಗಲಿ !
ಮನುಕುಲಕೆ ಒಳತಾಗಲಿ !!
ಮನುಕುಲಕೆ ಒಳತಾಗಲಿ !!!

ನೇಪಥ್ಯದಲ್ಲಿ : ಓಹ್ !
ಎಂತಹ ಸದ್ಭಾವನೆಯ ಉದ್ಘೋಷವಿದು !
ನೆಲದೆದೆಯ ಬದಿಯಲ್ಲಿ ಹಸಿರು ತಾನಾಗಿರಲಿ !
ಚೆಲುವಿಕೆಯ ಚೇತನದ ಚಿಲುಮೆಯೊಲು ಪುಟಿದಿದೆ
ಹನ್ನೆರಡರಬ್ದಿಯಲ್ಲಿ ಕಲ್ಯಾಣದಲ್ಲಿ
ಅದುವೆ ಬಸವ ಜ್ಯೋತಿ
ಮನುಕುಲದ ಕೀರ್ತಿ !

ಬನ್ನಿರೆಲ್ಲರು ಅಲ್ಲಿ ಆ ಬೆಳಕಿನೆಡೆಯಲ್ಲಿ
ಬವನೆಂಬಭಿಧಾನದಾ ಸ್ತಂಭದಡಿಯಲ್ಲಿ

ಹರಕೆಯನು ಸಲಿಸೋಣ
ಬೆಲೆ ಬಾಳು ಬದುಕೋಣ

ಜಯ ಜಾ ಬಸವೇಶ
ಜಯ ವಿಶ್ವತೋಷ !
[ನರ್ತಿಸುತ್ತಲೆ ನಿರ್ಗಮನ]

ದೃಶ್ಯ–2 ಬಾಗೇವಾಡಿ ಅಗ್ರಹಾರ
(ಮನೆಯ ಅಂಗಳದಲ್ಲಿ ಒಂದೆಡೆ ಅಕ್ಕನಾಗಮ್ಮ ನಿಂತಿದ್ದಾಳೆ. ಬಸವಣ್ಣನನ್ನು ಕೈ ಹಿಡಿದು ಹಾಡುತ್ತಾ ರಂಗದ ಮೇಲಕ್ಕೆ ಎಳೆದು ತರುತ್ತಾನೆ ಚೆನ್ನಬಸವಣ್ಣ)

ಚೆನ್ನಬಸವ : ಬಸವ ಮಾಮ ಬಸವ ಮಾಮ
ಕೇಳು ಬಾ ಮಾಮ
ಒಸಗೆಯೊಂದ ನೀಡುತಿಹಳು
ಅಕ್ಕ ನಾಗಮ್ಮ ॥

ಅವಳ ಕಾಗೆ ಮುಟ್ಟಿತಂತೆ
ಮೂರು ದಿವಸ ಹೊರಗೆ ಅಂತೆ
ಯಾರೂ ಮುಟ್ಟಿಕೊಡದಂತೆ
ಕೇರಿಗವಳು ದೂರವಂತೇ !

ನಾಯಿಗೆಸೆವ ಕೂಳಿನಂತೆ
ಅವಳಿಗೂಟ ಕೊಡುವರಂತೆ !
ನನಗೆ ಜನ್ಮ ಕೊಟ್ಟ ತಾಯಿ
ಮುಟ್ಟದಂಥ ವಸ್ತುವೆ ?

ಹೇಳು ಮಾಮ ಬಸವ ಮಾಮ
ಅಮ್ಮಗೇಕೆ ಈ ಗತಿ ?

ಅಕ್ಕನಾಗಮ್ಮ : ಬಸವಣ್ಣ, ನಾ ಬಹಿಷ್ಠೆಯೊ ತಮ್ಮ
ಹೇಗೆ ಹೇಳಲಿ ಹೇಳು ಈ ಚೆನ್ನಬಸವನಿಗೆ ?
ಕಾಡುವನು, ಬೇಡುವನು ಮಡಿಲ ತಾ ಬಯಸುವನು
ಹೊಲೆ ಎನಗೆ ಮೂರು ದಿನ ಮನೆ ನಿಷಿದ್ಧ

ಬಸವಣ್ಣ : ಮೌಢ್ಯಕ್ಕೆ ಮೂಡಿಹವು ಕೋಡುಗಳು ನೂರು
ಕೆಟ್ಟ ಪದ್ಧತಿಗಿಂದು ಬಲಿಯಾಗುತಿದೆ ಹೆಣ್ಣು
ಅವಳ ತೊಷಣೆಗಯ್ಯೋ ಮೊದಲಿಲ್ಲ ಕೊನೆಯಿಲ್ಲ
ನಿರಪರಾಧಿಗೆ ಶಿಕ್ಷೆ ಅಳಲ ಮಗು ಅವಳು !

ನಾಗಕ್ಕ: ನೀ ಮೆಡುವ ಚಪ್ಪಲಿಯನಿತ್ತು ಕೊಡು ತಾಯಿ
(ಕೊಡುವಳು ಬಸವಣ್ಣ ಅವುಗಳನ್ನು ಮೆಡುತ್ತಾ)

ಇವು ಬಹಿಷ್ಠೆಯು ಮೆಟ್ಟಿ ಬಿಟ್ಟ ಕೆರಗಳು ತಾನೆ?
ನಾ ಮೆಡುವೆ ಕಾಲಿನಲಿ, ಕೈಯಲ್ಲಿ ಮುಟ್ಟುವೆನು
ಇವುಗಳಿಗೆ ಮುಟ್ಟಿಲ್ಲ, ಸ್ಥಾನವೆ ಬೇಕಿಲ್ಲ !
ಮನೆ ಗೋಡೆ ಮುಟ್ಟಿದರೆ ಮನೆಯೆಲ್ಲ ಮೈಲಿಗೆಯೆ !
ಚರ್ಮದೀ ಚಪ್ಪಲಿಗು ಕಡೆಯಾದಳೇನಕ್ಕ
ಮನೆಯ ಬೆಳಗುವ ಹೆಣ್ಣು?

ಹಾಡು : (ನರ್ತಕಿಯರ ನರ್ತನ)
ಏನಿದೀ ಅಭಾಸ
ಎಂಥ ವಿಪರ್ಯಾಸ ॥ಪ॥
ಹುಟ್ಟಿದ್ದು ಹೊಲೆಯೂರು, ಬೆಳೆದದ್ದು ಹೊಲೆಗೇರಿ
ಸತ್ತಾಗ ಸೇರುವುದು ಹೊಲೆಯ ಮಡಿಲು
ಇದನೆಲ್ಲವನು ಮರೆತು ಮಾನವತೆಯನೆ ತೊರೆ
ಮೌಢ್ಯಕ್ಕೆ ಬಲಿಆಗಿ ಹೆಣ್ಣಕೊಲೆಗೈವುದಿಂದು ॥1॥

ದಿನ ಬೆಳಗು ಸೂರ್ಯನನು ಹಡೆದ ಆಗಸಕಿಲ್ಲ
ಹೊಳೆಗೆ ಹುಟ್ಟನು ಕೊಟ್ಟ ಪರ್ವತಕೆ ಹೊಲೆ ಇಲ್ಲ

ಪರಿಮಳದ ಹೂ ಕೊಡುವ ಗಿಡಕೆ ತಾ ಹೊಲೆಯಿಲ್ಲ
ಮುದವಡೆದು ಮಗುವೀವ ತಾಯಿ ಹೆಣ್ಣಿಗೆ ಹೊಲೆಯೆ? ॥2॥

ಚೆನ್ನಬಸವ : ಹಿಂದೊಂದು ದಿನ ಮಾನ ಇಂತೆಗೈದಳು ಅಮ್ಮ
ಮದುವೆ ಮಂಟಪಕೆಳೆಯೆ ಬಾರೆನೆಂದಳು ಅಮ್ಮ
ವಿಧವೆ ಅವಳಂತೆ ! ಅಮಂಗಲೆಯು ತಾನಂತೆ !
ಮದುವೆ ಮಂಟಪದೆಡೆಗೆ ಹೋಗಗೊಡರಂತೆ !

ನರ್ತಕಿಯರು : ಏನಿದೀ ಆಭಾಸ
ಎಂಥ ವಿಪರ್ಯಾಸ !
ಹೆತ್ತವಳು ಹೊತ್ತವಳು ಎದೆ ಹಾಲನೆರೆದವಳು
ತನ್ನ ನೆತ್ತರ ಬಸಿದು ಬೆಳೆಸಿದವಳೀ ತಾಯಿ
ಮುಟ್ಟಿದರೆ ಮೈಲಿಗೆಯೆ ? ನುಡಿಸಿದರೆ ಮೈಲಿಗೆಯೆ ?
ಕಲ್ಯಾಣ ಕಾರ್ಯಕ್ಕೆ ಇವಳು ಬಾಹಿರಳೆ ? ॥3॥

ಗಂಡ ಮಡಿದನು ಎಂದು ಹೆಂಡತಿಗ ದಂಡನೆಯೆ?
ಮಂಡೆ ಬೋಳಿಸಿಕೋಂಡು ಕೆಂಪು ಮಡಿಯನು ಹಿಡಿದು
ಹಿಡಿಕೂಳಿಗಾಗಿ ತಾ ಬದುಕಬೇಕೆಂಬುದಿಂದು
ಯಾವ ದೈವದ ನಿಯಮ, ಯಾವ ಮಾನವ ಧರ್ಮ ॥4॥

ಹೆಣಕೆ ಬೆಂಕಿಯ ಕೊಡಲು ಸದ್ಗತಿಯ ಸಾಧಿಸಲು
ಕುಲಪುತ್ರ ಬೇಕಂತೆ ಪಿಂಡ ಪ್ರಕ್ಷಾಳನಕೆ !
ಹೆಂಡತಿಯೋ ? ಗಂಡನಡಿ ಸೇವಿಸಲು ಸಗ್ಗಕ್ಕೆ ಹೋಗಬೇಕು
ಕೆಂಡದಲಿ ಬೆದೆ ಬೆಂದು ಕೊಂಡವನು ಹಾಯ್ದು ॥5॥

ಬಸವಣ್ಣ : ನಾಗಕ್ಕ,
ಕರುಬರಿದ್ದೂರಿಂದೆ ಕಾಡೊಳ್ಳಿತೆಂಬಂತೆ
ಅಗ್ರಹಾರವ ತೊರೆದು ಕೂಡಲಕೆ ನಡೆಯೋಣ
ನನ್ನ ಪರಮಾರಾಧ್ಯ ದೈವ ಆ ಸಂಗನನು
ಧೇನಿಸುತ, ಪೂಜಿಸುತ ದಿನಗಳನು ಕಳೆಯೋಣ !
ಸಾಕು ಈ ರಕ್ಕಸದ ಪ್ರೇಮ ಸಂಕೋಲೆ !

ನರ್ತಕಿಯರು : ಎದ್ದು ನಡೆಯಿತು ಅಂದೆ ಆ ವಿಚಾರದ ಧಾರೆ
ಕೂಡಲದ ಸಂಗಮನ ಕೂಡಿಕೊಳಲು
ಹೀನ ಕಂದಾಚಾರದವಿವೇಕಗಳ ತುಳಿದು
ಮಾನವತೆಯನು ಬೆಳಗಿ ಬದುಕ ಕೊಡಲು ॥

ಕೂಡಲದ ಮಡಲಿನಲಿ ಆ ಪ್ರೇಮ ತಾಣದಲಿ
ಮೂವರಿಗು ಕಾದಿತ್ತು, ಸುಸ್ವಾಗತ
ಕಪ್ಪಡಿಯ ಸಂಗಮನು ಅಪ್ಪಿದನು ಬಸವನನು
ಹಾಡಿದನು ಅವನೊಲುಮೆ ಭಾವಗೀತ ॥
[ಹಾಡು ಹರಿಯುವಾಗ ನರ್ತನ ನಡೆಯುವಾಗ ಅಣ್ಣ, ನಾಗಲಾಂಬಿಕೆ ಮತ್ತು ಚೆನ್ನಬಸವಣ್ಣ, ಈ ಮೂವರೂ ನಿಧಾನವಾಗಿ ನೇಪಥ್ಯದೆಡೆ ಸಾಗುವರು. ಕ್ರಮೇಣ ರಂಗದೀಪ ಮಂಕಾಗುತ್ತಾ ಹೋಗುವುದು]

----

ದೃಶ್ಯ 3 ಕಲ್ಯಾಣನಗರದ ಬೀದಿ

ದೂರದಲ್ಲೆಲ್ಲೊ ಹರೆ–ತಮಟೆಗಳ ಶಬ್ದ, ರಂಗದ ಬೆಳಕು ಬೆಳೆದಂತೆ ಕ್ರಮೇಣ ಆ ತಮಟೆ ಶಿಳ್ಳೆ ಕೇಕೆಗಳೂ ವೃದ್ಧಿಯಾಗುತ್ತಾಗ ಬರುತ್ತವೆ. ಅನಂತರ ಮಾರಿ ಹೊತ್ತವರನು, ಚಾಟಿ ಹಿಡಿದ ಪೂಜಾರಿ, ಕುರಿ ಎಳೆಯುವ ದೂತ ಮತ್ತಿತರ ಮಾರಿ ಭಕ್ತರ ಗುಂಪು ಕಾಣಿಸುತ್ತದೆ. ಅವರು ಜಾನಪದೀಯ ನರ್ತನ ಕೇಕೆಗಳೊಡನೆ ರಂಗದ ಒಂದು ಬದಿ ನಿಲ್ಲುತ್ತಾರೆ. ಮತ್ತೊಂದು ಬದಿಯಲ್ಲಿ ನರ್ತಕಿಯರು.

ಹಾಡು : ಮಾತಾಯಿ ಬರುತಾಳೆ
ಮಾತಾಯಿ ಬರುತಾಳೆ
ಮಲೆ ಮಾರಿ ಬರುತಾಳೆ, ಉರಿಮಾರಿ ಬರುತಾಳೆ
ಝುರಿಯಾಗಿ ಹೊಳೆ ಹರಿದು ಬರಮಾರಿ ಬರುತಾಳೆ ॥
("ಹಲೋ ಲಿಫ್ಯ!")
ಮಾತಾಯಿ ಬರುತಾಳೆ
ಮಾತಾಯಿ ಬರುತಾಳೆ !
ಗಂಡ ಗಂಡರನೆಲ್ಲ ದುಂಡುರುಳು ಉರುಳಿಸುವ
ಕೆಂಡದುಂಡೆಯ ಕಣ್ಣ ದುಂಡುರುಬೆ ಬರುತಾಳೆ
(ಹಲೋ ಉಲಿಫ್ಯ!)
ಮಾತಾಯಿ ಬರುತಾಳೆ
ಮಾತಾಯಿ ಬರುತಾಳೆ !

ಹೊಂಬಾಳೆ ಹಿಡಕೊಂಡು, ಭೂತಾಳೆ ಮುಡಕೊಂಡು
ಭೂತಳಕೆ ತಾಯಿ ಬರುತಾಳೆ ಬರುತಾಳೆ !

(ಹಲೋ ಉಲಿಫ್ಯ)
ಮಾತಾಯಿ ಬರುತಾಳೆ
ಮಾತಾಯಿ ಬರುತಾಳೆ !

ಬೆಟ್ಟದಟ್ಟಣೆ ಇಳಿದು ಕಟ್ಟೆಗರಿ ಬರುತಾಳೆ
ಹಟ್ಟಿಗೇರಿಯ ಮಾರಿ ಬರುತಾಳೆ ಬರುತಾಳೆ !

(ಹಲೋ.. ಉಲಿಫ್ಯ)
ಮಾತಾಯಿ ಬರುತಾಳೆ
ಮಾತಾಯಿ ಬರುತಾಳೆ !

[ಆ ಬದಿಯಲ್ಲಿ ಜಾನಪದ ಕುಣಿತ. ಈ ಬದಿಯಲ್ಲಿ ಭರತನಾಟ್ಯ ಶಾಸ್ತ್ರೀಯ ನರ್ತನ. ಈ ಎರಡೂ ನಾಲ್ಕು ಪದ್ಧತಿಗಳು ಏಕಕಾಲದಲ್ಲಿ ಸ್ಪಷ್ಟ ಗೋಚರವಾಗಬೇಕು]

ನರ್ತಕಿಯರು : ಮಡಕೆ ದೈವ, ಮೊರ ದೈವ, ಬೀದಿಯ ಕಲ್ಲು ದೈವ
ಹಣಿಗೆ ದೈವ, ಬಿಲ್ಲವಾರಿ ದೈವ ಕಾಣಿರೋ
ಕೊಲಗ ದೈವ, ಗಿಣ್ಣಿಲು ದೈವ ಕಾಣಿರೋ
ದೈವ, ದೈವವೆಂದು ಕಾಲಿಡಲಿಂಬಿಲ್ಲ

ಅರಗು ತಿಂದು ಕರಗುವ ದೈವವ
ಉರಿಯ ಕಂಡರೆ ಮುರುಟುವ ದೈವವನೆಂತು ಸರಿಯೆಂಬೆನಯ್ಯಾ ?

ಅವಸರ ಬಂದರೆ ಮಾರುವ ದೈವವನೆಂತು ಸರಿಯೆಂಬೆನಯ್ಯಾ ?
ಅಂಜಿಕೆಯಾದರೆ ಹೂಳುವ ದೈವವನೆಂತು ಸರಿಯೆಂಬೆನಯ್ಯಾ ?
[ಪೂಜಾರಿಗೆ ಅಷ್ಟರಲ್ಲಿ ಆವೇಶ ಬರುತ್ತದೆ. ಮೈದುಂಬಿ ಕುಣಿಯುತ್ತಾನೆ ಬೇವಿನ ಸೊಪ್ಪು ಹಿಡಿದು ! ನಿಂಬೆ ಹಣ್ಣು ಜಗಿಯುತ್ತಾನೆ ! ಹೊಂಬಾಳೆ ಉಗುಳುತ್ತಾನೆ ಕಣ್ಣು ಕೆಂಪಗೆ ಮಾಡಿಕೊಂಡು ಕಟಕಟ ಹಲ್ಲು ಕಡಿದ ಬೇಕು ಬೇಕು ಎಂದು ಆರ್ಭಟಿಸುವಾಗ ಪಕ್ಕದ ದೂತ ಪ್ರಶ್ನಿಸುತ್ತಾನೆ..]
ದೂತ : ಏನು ಬೇಕವ್ವಾ ?
ಪೂಜಾರಿ : ಹಾವರಾ !.. ಹಾವರಾ !!
ದೂತ : ಹಾವರಾ ?.. ಅವ್ವನಿಗೆ ಹಾವರಾ ಬೇಕೆಂತೆ ಭಕ್ತರ.. ಹಾವರ ಅಂದ್ರೆ ಬಲಿ ! ಅವ್ವನಿಗೆ ಬಲಿ ಆಗಬೇಕೆಂತೆ !
ಜನ : ಯಾರು?
ನಾಗರಿಕ : ಪೂಜಾರಿಯ ಹಿರಿಯ ಮಗ !
( ಆ ಶಬ್ದ ಕೇಳಿದ ಕೂಡಲೇ ಪೂಜಾರಿ ಹೌಹಾರಿ ಬೀಳುತ್ತಾನೆ)
ಪೂಜಾರಿ : ಅಲ್ಲ ! ಅಲ್ಲಾ! .. ನನ್ನ ಮಗನಲ್ಲ!
ನಾಗರಿಕ : ಹೌದವಾ!.. ನಿನ್ನ ಮಗನಲ್ಲ.. ಈ ಪೂಜಾರಪ್ಪನ ಮಗ!
ಪೂಜಾರಿ : ಬೇಡಾ! ಬೇಡಾ ! .. ಮರೀ ಮರೀ... ಕುರಿಮರೀ..
ನಾಗರಿಕ : ಪಾಪ !
ಪೂಜಾರಿ : ಕೋಳಿ.. ಕೋಳೀ..
ದೂತ : ಆಗಲಿ ನಮ್ಮವ್ವ ಕೋಳಿ ಕುತ್ತಿಗೆ ಮುರಿತೀನಿ, ರಕ್ತ ಹಿಂಡ್ತೀನಿ. ಈಗ ಈ ಬುಂಡೇಲಿರೋ ಘಟ ಉಕ್ಕುಸ್ತೀನಿ (ಹೆಂಡದ ಬುಂಡೆಗೆ ಈಚಲ ಗರಿ ಹಾಗಿ ತಿರುವನು).ಮರಿ.. ದಾವಣಗುರಿ ಬಲಿ ಕೊಡ್ತೀನಿ ನಮಗೆ ಒಳ್ಳೇದು ಮಾಡು.

ಬಸವಣ್ಣ : ಪೂಜಾರಿ,
ಮರನ ಗೋಟಿಗೆ ಬರ್ಪ ಕಿರುಕುಳದ ದೈವಕ್ಕೆ
ಕುರಿಯನಿಕ್ಕಿಹವೆಂದು ನಲಿನಲಿದಾಡುವರು
ಕುರಿ ಸತ್ತು ಕಾವುದೆ ಹರ ಮುಳಿದವರ ?
ಕುರಿ ಬೇಡ, ಮರಿಬೇಡ
ಬರಿಯ ಪತ್ರೆಯ ತಂದು
ಮರೆಯದೆ ಪೂಜಿಸು ನಮ್ಮ ಕೂಡಲಸಂಗಮದೇವನ ॥

ಪೂಜಾರಿ : ಹೇ ! ಹೋಗಯ್ಯೋ !
ನಾನು ದೇವರ ಕೂಟ
ಈ ಅತ್ತೀಮರದವ್ವನ ಕೂಟ ಮಾತಾಡ್ತಿದೀನಿ..
ಇವನೇನೊ ಹೇಳಾಕ್ ಬಂದ.. ಹೋಗೋಗ್..
ದೂರ ಹೋಗ್ !

ಬಸವಣ್ಣ : ಏನು ಹಾಳೀ ದೈವಂಗಳು !
ಅತ್ತಿಮರದಮ್ಮ ಕೊತ್ತಿ ಮರದಮ್ಮ !
ಇವಕಂಡು ರೋಸಿ ಹೋಗಿಹೆನು !

ನರ್ತಕಿಯರು : ಅಗಳು ಲೋಗರ ಮನೆಯ ಬಾಗಿಲ
ಕಾಯ್ದುಕೊಂಡಿಪ್ಪವು ಕೆಲವು ದೈವಂಗಳು !
ಹೋಗೆಂದರೆ ಹೋಗವು ಕೆಲವು ದೈವಂಗಳು !
ನಾಯಿಗಿಂತಲೂ ಕರಕಷ್ಟ ಕೆಲವು ದೈವಂಗು !

ಲೋಗರ ಬೇಡಿಕೊಂಡುಂಬ ಈ ದೈವಂಗಳು

ತಾವೇನ ಕೊಡುವುವು ಕೂಡಲ ಸಂಗಮದೇವ ॥

ಬಸವಣ್ಣ : ಪೂಜಾರಿ, ದಮ್ಮಯ್ಯಾ
ಮೂಕ ಪ್ರಾಣಿಯ ಕೊಲುವೆ, ಬೇಡ ಬೇಡಣ್ಣಯ್ಯ !
ದೇವಿ ನನಗೂ ತಾಯಿ, ನಿನಗೂ ತಾಯಿ
ಈ ಎಳೆಯ ಕುರಿಮರಿಗು ಎಲ್ಲರಿಗು ತಾಯಿ
ಹೆತ್ತ ತಾಯಿಯೆ ಮಗನ ತಿನಲು ಬಯಸುವೇಳೇನು?
ಹೇಳು ಪೂಜಾರಿ !
ಪೂಜಾರಿ: ಹೆಂಗೋ ! ನನಗೆ ಗೊತ್ತಿಲ್ಲ
ಅವ್ವನಿಗೆ ಹಾವಾರಾ ಕೊಡಲೇಬೇಕು
ನರ್ತಕಿಯರು ವಚನ : ಹಾಳು ಮೊರಡಿಗಳಲ್ಲಿ ಊರದಾರಿಗಳಲ್ಲಿ
ಕೆರೆ ಬಾವಿ ಹೂಗಿಡು ಮರಂಗಳಲ್ಲಿ
ಗ್ರಾಮ ಮಧ್ಯಗಳಲ್ಲಿ ಚೌಪಥ ಪಟ್ಟಣ ಪ್ರದೇಶಗಳಲ್ಲಿ
ಹಿರಿಯಾಲದ ಮರದಲ್ಲಿ ಮನೆಯಮಾಡಿ
ಕರೆವೆಮ್ಮೆಯ ಹಸುಗೂಸು ಬಸುರಿ ಬಾಣತಿ
ಕುಮಾರಿ ಕೊಡಗೂಸೆಂಬವರ ಹಿಡಿದು ತಿಂಬ
ತಿರಿದುಂಬ ಮಾರಯ್ಯ ಬೀರಯ್ಯ ಧೂಳಯ್ಯ
ಕೇತಯ್ಯಗಳೆಂಬ ನೂರು ಮಡಕೆಗೆ
ನಮ್ಮ ಕೂಡಲ ಸಂಗಮದೇವ
ಶರಣೆಂಬುದೊಮದು ದಡಿ ಸಾಲದೆ !

ನರ್ತಕಿ : 1 ಇಂತಹ ನಿರಾಡಂಬರ ಪೂಜಕನಿಕೆ, ಭಕ್ತನಿಗೆ –
ನರ್ತಕಿ : 2 ಗಂಡು ಹೆಣ್ಣೆಂಬ ಭೇದ ಗೊತ್ತಿಲ್ಲ;
ನರ್ತಕಿ : 3 ಧನಿಕ ದರಿದ್ರನೆಂಬ ತಾರತಮ್ಯ ತಿಳಿದಿಲ್ಲ
ನರ್ತಕಿ : 4 ಪಾಪಿ ಪುಣ್ಯವಂತ ಎಂಬ ಕಲ್ಪನೆ ಕೂಡ ಇಲ್ಲ
ವಚನ : ನೆಲನೊಂದೇ ಹೊಲೆಗೇರಿ–ಶಿವಾಲಯಕೆ
ಜಲ ಒಂದೇ ಶೌಚ–ಆಚಮನಕ್ಕೆ
ಕುಲ ಒಂದೆ ತನ್ನ ತಾನರಿದವಂಗೆ
ಫಲ ಒಂದೇ ತನ್ನ ತಾನರಿದವಂಗೆ
ಫಲ ಒಂದೆ ಷಡುದರುಶನ ಮುಕ್ತಿಗೆ
ನಿಲವು ಒಂದೇ, ಕೂಡಲ ಸಂಗಮದೇವಾ ನಿನ್ನ ನರಿದವಂಗೆ

[ಸನಿಹದಲ್ಲಿ ಒಂದು ಅಶ್ವತ್ಥ ಕಟ್ಟೆ, ಅದರ ಬದಿಯಲ್ಲಿ ನಾಗರಕಲ್ಲುಗಳು. ಇಬ್ಬರು ಹೆಂಗಸರು ಪೂಜಾರಿಯನ್ನು ಕಂಡು ಮುಂದೆ ಬಂದು ನಮಸ್ಕರಿಸುತ್ತಾನೆ. ಪೂಜಾರಿ ಆಶೀರ್ವದಿಸುತ್ತಾ]

ಪೂಜಾರಿ : ಧನಂ ಧಾನ್ಯಂ ಬಹುಪುತ್ರ ಲಾಭಂ
ಶತ ಸಂವತ್ಸರಂ ದೀಘಮಾಯುಃ !

(ದೂತನು ಇತ್ತ ತಿರುಗಿ "ಮಿತ ಪುತ್ರ ಲಾಭಂ" ಎನ್ನುತ್ತಾನೆ)
[ಹೀಗೆ ಹೇಳಿ ಈ ಇಬ್ಬರು ಸ್ತ್ರೀಯರನ್ನೂ ಕಾಮುಕ ದೃಷ್ಟಿಯಿಂದಲೇ ನೋಡಿ, ಕೈ ಹಿಡಿದೆತ್ತಿ ಕರೆತಂದು ನಾಗರಕಲ್ಲುಗಳಿಗೆ ಹಾಲು–ತುಪ್ಪ ಎರೆಸುತ್ತಾನೆ. ದೂತ ಮರೆಯಲ್ಲಿ "ಕಲ್ಲುಗಳಿಗೇಕೆ ಹಾಲು–ತುಪ್ಪ, ಹುತ್ತದ ಕೋವೆಗೇಕಪ್ಪಾ ಹಾಲು–ತುಪ್ಪ, ಆ ಮಕ್ಕಳ ಬಾಯಿಗೆ ಹನಿಸಬಾರದೆ?" ಎಂದು ಗೊಣಗುತ್ತಾ ಅಲ್ಲಿ ದೂರದಲ್ಲಿ ನಿಂತಿದ್ದ ಶೂದ್ರ ಮಕ್ಕಳ ಕಡೆಗೆ ಕೈ ತೋರುತ್ತಾನೆ. ಅಷ್ಟರಲ್ಲಿ –

ವಚನ : ಕಲ್ಲನಾಗರ ಕಂಡರೆ ಹಾಲನೆರೆಯೆಂಬರಯ್ಯಾ
ದಿಟದ ನಾಗರ ಕಂಡರೆ ಕೊಲ್ಲೆಂಬರಯ್ಯಾ !
ಉಂಬ ಜಂಗಮ ಬಂದರೆ ನಡೆ ನಡೆಯೆಂಬರು
ಉಣ್ಣದ ಲಿಂಗಕ್ಕೆ ಬೋನವ ಹಿಡಿಯೆಂಬರಯ್ಯಾ !
ನಮ್ಮ ಕೂಡಲ ಸಂಗದ ಶರಣರ ಕಂಡುದಾಶೀನವ ಮಾಡಿದರೆ
ಕಲ್ಲ ತಾಗಿದ ಮಿಟ್ಟೆಯಂತಿಪ್ಪರಯ್ಯಾ

**ದೃಶ್ಯ 4 ಅಣ್ಣನ ಮಾಮನೆ**
[ರಂಗವೆಲ್ಲಾ ಕತ್ತಲು. ಇದ್ದಕ್ಕಿದ್ದಂತೆ ಹೆಣ್ಣು ಗಂಡು ಕೂಗಾಟ]
ಕೋಲಾಹಲ : ಕಳ್ಳಾ ಕಳ್ಳಾ ಕಳ್ಳ ಬಂದಿದ್ದಾನೆ ಕಳ್ಳ
ಹಿಡಿಯಿರಿ.. ಹಿಡಿಯಿರಿ !
[ರಂಗ ಬೆಳಗಿದಾಗ ಅಣ್ಣ ಗಂಗಾ ಒಂದು ಬದಿಯಲ್ಲಿ ಇಬ್ಬರು ಹಿಡಿದು ತಂದಿರುವ ಕಳ್ಳ ಮತ್ತೊಂದು ಬದಿಯಲ್ಲಿ
ರಂಗದ ಮಧ್ಯದಲ್ಲಿ ನರ್ತಕಿಯರು ಅಣ್ಣನ ಬಾಡಿಗೆ ನರ್ತಕಿಯರ ನರ್ತನ]
ಹಾಡು : ಕಳ್ಳ ಬಂದನೆ ಮನೆಗೆ
ಕಳ್ಳ ಬಂದನೆ ॥ಪ॥
ಸುಳ್ಳಿನೊಂದು ಜೊಳ್ಳು ಮನೆಗೆ ॥ಅನು.ಪ॥

ಹೊಸ್ತಿಲಲ್ಲಿ ಹುಲ್ಲು ಹುಟ್ಟಿ
ಮನೆಯೊಳಗೆ ರಜತುಂಬಿ
ಒಡೆಯನಲ್ಲದೀ ಮನೆಗೆ ಕಳ್ಳ ಬಂದನೆ ॥1॥

ಉಚ್ಚ ನೀಚ ಭೇದಭಾವ
ಕೊಚ್ಚೆ ತುಂಬಿ ಹರಿಯುತಲಿರುವ
ಹುಚ್ಚರಾಳುವ ಈ ಮನೆಗೇ ಕಳ್ಳ ಬಂದನೆ ॥2॥

ರಾಜಕೀಯ ಬೇಡ ಜಾಲ । ಲಾಳಿಯಾಡಿ ಕಟ್ಟಿದಂಥ
ಜಂತೆ ಹರಿದ ಬೊಂತೆ ಮನೆಗೆ ಕಳ್ಳಬಂದನೆ ॥3॥
[ನರ್ತನ ಮುಗಿದ ಮೇಲೆ ರಂಗಭೂಮಿ ಕ್ಷಣಕಾಲ ನೀರವ. ಆ ಮೌನವರಿಯುತ್ತಾನೆ ಬಸವಣ್ಣ)
ಬಸವ : ಸಂಗಮನಾಥ, ಏನು ಲೀಲೆಯೊ ತಂದೆ !
ಇರಲಿ,
ಭೀಮಣ್ಣ, ಈ ಬಸವನಿಗೆ ಪಾಠ ಕಲಿಸಲು ಬಂದ ಗುರು ನೀನು
ಪಾಪ !
ಎಲ್ಲ ನಿನ್ನೊಡವೆ, ನನ್ನದೆಂಬುದೆ ಇಲ್ಲ
ಕೊಂಡೊಯ್ದು ನನ್ನ ಹರಸು

ಭೀಮ : ಬಸವಣ್ಣ ಕ್ಷಮಿಸಪ್ಪಾ, ಕ್ಷಮಿಸೆನ್ನ ತಂದೆ
ನಾ ಕಳ್ಳ, ಕೊಲೆಗಾರ ಬಲು ದೊಡ್ಡ ಕಳ್ಳ !

ಬಸವ : ಭೀಮಣ್ಣ,
ನೀನೆನ್ನ ಆರಾಧ್ಯದೈವ ಸ್ವರೂಪಿ !
ಸಂಗಮನಾಥನೇ ಜಂಗಮವೇಷದಲ್ಲಿ
ನನ್ನ ಮನೆಗೆ ಬಂದಿದ್ದಾನೆ ನನ್ನನೆಚ್ಚರಿಸಲ್ಕೆ !

ನೋಡು ಈ ವಸ್ತ್ರ ಈ ಒಡವೆ
ನಿನ್ನಂಥ ದುಡಿವವರ ಬೆವರ ರೂಪದ ಹೊನ್ನು
ಇದುವರೆಉ ಅಪಹರಿಸಿಕೊಂಡಿದ್ದ ನಾನು ನಿಜವಾದ ಕಳ್ಳ !
ನೀನಲ್ಲ, ಕೇಳು

ಹಾಡು : (ನರ್ತಕಿಯರ ನರ್ತನ)
ನಾವು ಕಳ್ಳರು !
ನಾವು ಭಾರೀ ಕಳ್ಳರು ॥
ಜಗದ ಕಣ್ಣಿಗೆರಚಿ ಮಣ್ಣ ಬಾಲು ಸಾಗಿಸುತ್ತಲಿರುವ
ಮೈಯ ಬೆವರು ಹರಿಸಲಿಲ್ಲ
ಕೈಯ ಕೆಸರು ಗೈಯಲಿಲ್ಲ
ಅನ್ಯರನ್ನ ದುಡಿಮೆ ತಿನುವ ॥ ॥ನಾವು ಕಳ್ಳರು॥

ಕಷ್ಟಪಟ್ಟು ದುಡಿಯುವವರ
ನಿಷ್ಠೆಯಿಮದ ನಡೆಯುವವರ
ಕುಟ್ಟಿಮೆರೆವ ಭ್ರಷ್ಟರಾವು ॥ನಾವು ಕಳ್ಳರು॥
ಇಂತಹ ಕಳ್ಳನ ಮನೆಗೊಬ್ಬ ಬಲುಗಳ್ಳ ಬುದರೆ
ಅವನು ಕೂಡಲಸಂಗನಲ್ಲದೆ ಬೇರೆ ಅಲ್ಲ
ಗಂಗಾ : ಅಹುದು ಭೀಮಣ್ಣ
ನಿನ್ನದನ್ನೂ ನಿನಗೆ ಮುಟ್ಟಿಸುತ್ತಿದ್ದೇವೆ. ಸ್ವೀಕರಿಸು ಅಗತ್ಯತೆಗೆ ಮೀರಿದ್ದು ಅಪಹರಣವಲ್ಲವೇ?

ಭೀಮ : ನಾಲಗೆಯು ಏಳದಿದೆ !
ನಿಮ್ಮ ಕಿಂಕರ ನಾನು ದಾರಿತೋರಿ

ಬಸವ: ಸತ್ಯ ಶುದ್ದ ಪವಿತ್ರ ಕಾಯಕವ ಕೈಕೊಳ್ಳೊ !
ದುಡಿಮೆಯೇ ದೇವರು, ಕಾಯಕವೇ ಕೈಲಾಸ !
ದಾಸೋಹವೇ ಶಿವಪೂಜೆ, ಶಿವಧ್ಯಾನ,
ನೀ ಬದುಕಿ ಅನ್ಯರಿಗೆ ಬದುಕುಕೊಡು ಭೀಮಣ್ಣ
ನಿನಗೊಳ್ಳಿತಾಗಲಿ ಕೂಡಲದ ಸಂಗಯ್ಯ ಒಳ್ಳಿತನೆ ಗೈಯಲಿ ॥

ಹಾಡು ಹಿನ್ನೆಲೆಯಲ್ಲಿ : (ನರ್ತಕಿಯರು ನರ್ತಿಸುವರು)
ಕಳಬೇಡ ಕೊಲಬೇಡ ಹುಸಿಯ ನುಡಿಯಲುಬೇಡ
ಮುನಿಯಬೇಡ ಅನ್ಯರಿಗ ಅಸಹ್ಯಪಡಬೇಡ
ತನ್ನ ಬಣ್ಣಿಸಬೇಡ, ಇದರಿ ಹಳಿಯಲು ಬೇಡ
ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ
ಇದೇ ನಮ್ಮ ಕೂಡಲಸಂಗಮ ದೇವರ ಒಲಿಸುವ ಪರಿ ॥

ದೃಶ್ಯ – 5 ಕೂಡಲಸಂಗಮ ಕ್ಷೇತ್ರ
[ಬಸವಣ್ಣನ ಸಂಗಮನಾಥನ ಮುಂದೆ ಕುಳಿತು ಪೂಜಿಸುತ್ತಾ ಪ್ರಾರ್ಥಿಸುತ್ತಿರುತ್ತಾರೆ. ನರ್ತಕಿಯರು ನರ್ತಿಸುತ್ತಿರುತ್ತಾರೆ]
ಬಸವಣ್ಣ : ಅಯ್ಯಾ ನೀನು ನಾದಬಿಂದು ಕಲಾತೀತನಂತೆ !
ಅಯ್ಯಾ.. ನೀ..ನು ॥

ವೇದಮಂತ್ರಕು ನಿಲುಕದನಂತೆ

ನಿಗಮಾಗಮಕೂ ಸಿಲುಕದನಂತೆ
ಧ್ಯಾನಸಮಾಧಿಗಗೋಚರನಂತೆ
ಭಕ್ತಿಯಪಾತಕೆ ಬಂಧಿತನಂತೆ ॥

ಅಣುವಿನೊಳಗಣುವಂತೆ ಘನದೊಳು ಘನವಂತೆ
ತೇಜವು ನೀನಂತೆ ತಾಮಸ ರೂಹಂತೆ ।
ಜಲದಲು ಬಯಲಲ್ಲು ಚೇತನ ಶ್ರೀಯಂತೆ
ಸಚರಾಚಲದಲೂ ಚಿನುಮಯನಂತೆ ॥

ಓಂಕಾರಮಯನಂತೆ ಝೇಂಕಾರದೊಲವಂತೆ
ನಿಷ್ಕಲ ಪರತತ್ತ್ವ ಸಾಕಾರನಂತೆ
ವಿಶ್ವೇಶ್ವರನಂತೆ ವಿಶ್ವವೆ ನೀನಂತೆ
ನಿತ್ಯ ನಿರಂಜನ ನಿರ್ಗುಣನಂತೆ ॥

ಭೂಮಿಗೆ ಬಲವಂತೆ ಆಗಸದರಹಂತೆ
ನೀರೊಳು ತಂಪಂತೆ ಗಾಳಿಗೆ ಜವವಂತೆ
ದೀಪವು ನೀನಂತೆ ದೀಪ್ತಿಯು ನೀನಂತೆ
ಭಕ್ತಜನಪ್ರಿಯಾ ಕೂಡಲಸಂಗಯ್ಯ ॥

ನರ್ತಕಿಯರು : ಸಂಗಾ...
ಶಿವಗಂಗಾ.. ಕೂಡಲಸಂಗಾ ॥
ಸಾಕುಮಾಡೋ ತಂದೆ ಲೋಕದಾಟವನಿಂದೇ
ನಾನು ಬೆದೆಬೆದೆ ಬೆಂದೆ ಸಾಕೊ ತಂದೆ ॥1॥

ಸತ್ಯಮಾತರಿಗೆಂದೂ ಕಾಲ ಬಾರದು ಸಂಗಾ
ಅನ್ಯಾಯವಾಳುವುದು ರಾಜ್ಯವನ್ನು
ಸತ್ಯಕ್ಕೆ ಬೆಲೆಯಿಲ್ಲ, ನ್ಯಾಯಕ್ಕೆ ನೆಲೆಯಿಲ್ಲ
ಧರ್ಮ ಅಜ್ಞಾತಕ್ಕೆ ವಲಸೆಹೋಯ್ತೇವ ॥2॥

ಧ್ವನಿ : ಸುಧಾರಣೆಯ ಸಂಗ್ರಾಮದಲ್ಲಿ ಅಣ್ಣ ಬಹಲ ಹೋರಾಡಿದ ಕೈಸೋಲುವವರೆಗೂ ಹೋರಾಡಿ ಜಗದಾಟ ಸಾಕೆಂದು ಬೇಡಿದ ನಿರಪರಾಧಿಗಳಾದ ಹರಳ್ಯ ಮಧುವರಸರ ವಧೆ ಆಯಿತು.ಅವರ ಮಕ್ಕಳು ಅಖಂಡ ಪ್ರೇಮಿಗಳಾಗಿದ್ದ ಕಾರಣ ಹೊಲೆಯನ ಮಗನಿಗೆ ಹಾರುವ ಮಗಳು ಕೊಡುವುದೇ? ಇದು ಜಾತಿ ಸಾಂಕರ್ಯಪರಾಧ ಘೋರ ಅಪರಾಧ1 ಆ ಪ್ರೇಮಿಗಳಿಬ್ಬರಿಗೆ ಮರಣ ದಂಡನೆ ಶಿಕ್ಷ. ಇದು ಕಂಡು ಅಣ್ಣನ ಎದೆ ಒಡೆಯಿತು. ಮಹಾಮಂತ್ರಿ ಪದವಿ ಬಿಟ್ಟ. ಬಿಜ್ಜಳನ ಸಾಮ್ರಾಜ್ಯಕ್ಕೆ ಶರಣ ಹೊಎದು ಕೃಷ್ಣಾ ಮಲಪ್ರಭೆಯರ ಸಂಗಮದೆಡೆಗೆ ನಡೆದ. ಇತ್ತ ಕಲ್ಯಾಣ ಕಟುಕರ ಕೇರಿಯಾಯಿತು. ಅಣ್ಣನ ಕನಸಿನ ಕನ್ನಡಿ ಕಲ್ಯಾಣ ಒಡೆದು ಚೂರಾಯಿತು. ಪಾತಕಿ ಮಮಚಣ್ಣ, ಕ್ರಮಿತ ಮತ್ತು ಪೆದ್ದಿಗಳೆಂಬ ಸಮಾಜಘಾತುಕರಿಂದ ಕಲ್ಯಾಣದಲ್ಲಿ ಕಗ್ಗೋಲೆ ನಡೆಯಿತು.ಜಗದೇವಮಲ್ಲ ಮತ್ತು ಬೊಮ್ಮರಸರಿಂದ ಬಿಜ್ಜಳನ ಕೊಲೆಯಾಯಿತು. ಕಲ್ಯಾಣದಲ್ಲಿ ವಿಪ್ಲವ. ಸಿಕ್ಕ ಸಿಕ್ಕವರನ್ನೆಲ್ಲ ಆನೆ ಕಾಲಿಗೆ ಹಾಕಿ ಅರೆಸಿದರು. ರಕ್ತ ಕೋಡಿವರಿಯಿತು.

ಶರಣರು ಕಂಗೆಟ್ಟರು
ಹಂಪೆ, ಉಳವಿ, ಶ್ರೀಶೈಲಗಳ ಕಡೆ ಓಡಿದರು.
ಇತ್ತ ಬಸೌಣ್ಣ ಬಯಲಾದ !

ಹಾಡು : (ನರ್ತಕಿಯರ ಅಭಿನಯ)
ಕಲ್ಯಾಣ ಕರೆಯುತಿದೆ ಕಣ್ಣೀರ ಹರಿಸುತಿದೆ !
ವಿಶ್ವಮಾನವನಿಗೆ ರಕ್ಷೆಯನೀಯದ ಪಾಪಕ್ಕಪಕ್ಕಾಗಿದೆ ॥
ದೇಹಗುಣಗಳನಳಿದು ಭಾವ ಬ್ರಹ್ಮವೆ ಆದ
ಲಿಂಗಾಂಗಿ ಶರಣರ ಕರುಳಕೊಯ್ದರು ಎಂದು ॥1॥
ವಚನ : ಅಯ್ಯೋ !
ಬಸವ ಮೆಟ್ಟಿ ಭೂಮಿ ಪಾಳು ನೆಲವಾಯ್ತೆ !
ಅವನೆದೆಯ ಹಸೆಮೇಲೆ ದೈತ್ಯತೆಯ ನರ್ತನವೆ !
ಅವನಿತ್ತ ಮಾನವತೆ, ಅವನಿತ್ತ ಮೌಲ್ಯಕತೆ
ಅನಿತ್ತ ದಯೆ, ಧರ್ಮ ಎಲ್ಲ ಹುಸಿಯಾಯ್ತೆ
ಇಂದು ಬತ್ತಲೆ ಹೊಲಸು, ಎಲ್ಲ ಭ್ರಷ್ಟಾಚಾರ
ಅಯ್ಯೋ ! ಅವನ ಹಿಂದೆಯೆ ಹೋಯ್ತೆ ಮಾನಚಾರ ।\
ಕಳೆದುಹೋಯಿತೆ ಬಸವ ಮನ್ವಂತರ !

ಹಾಡು : ಹೆಣ್ಣಿಗೆ ಕಣ್ಣಾಗಿ ದಲಿತನಿಗೆ ದಯೆಯಾಗಿ
ಹಸಿದವಗೆ ಅನ್ನವಯವಾಗಿದ್ದನಿಲ್ಲೆಂದು ॥2॥

ಹಲವರ ಕೂಗು : ಅಣ್ಣಾ.. ಅಣ್ಣಾ.. ! ಬಸವಣ್ಣಾ !!
ಬಸವಣ್ಣ ಪ್ರೇಕ್ಷಕರ ಕಡೆಗೆ ಬೆನ್ನುಮಾಡಿಕೊಂಡು ನಿಧಾನವಾಗಿ ಮುಂದಿನ ಒಂದೊಂದು ವಚನಕ್ಕೂ ಒಂದೊಂದು ಹೆಜ್ಜೆ ಇಡುತ್ತಾನೆ. ಅವನ ಹಿಂದೆ ಪ್ರಖರವಾದ Spot light ಬೆಳಗುತ್ತಿರುತ್ತದೆ. ಅವನೆದುರಿನಲ್ಲಿ ದೂರದಲ್ಲಿ, ಪ್ರೇಕ್ಷಕರಿಗೆ ಕಾಣುವಂತೆ ಮೇಲಿನಟ್ಟಣೆಯಲ್ಲಿ ಸಂಗಮನಾಥನ ದರ್ಶನ.
ವಚನ ; ಬಸವಣ್ಣ ಮನಮನವ ಬೆಳಗಿದಾ ಬೆಳಕು
ಜಗದ ಜಲಗಾರನವ ಕೊಳೆ ತೊಳೆದ ತೀರ್ಥ !
ಮಾನವನ ಹೃದಯದಲಿ ಮಹದೇನನು ಕಂಡು ಇತ್ತವನುಈ ನೆಲದ ಬದುಕಿಗರ್ಥ!
ವಾತ್ಸಲ್ಯ ವಕ್ಷದಲಿ ದೀನದಲಿತರ ತಬ್ಬಿ
ಅವರೆದೆಯೆ ಬದುವಿನಲಿ ಧೈರ್ಯ ತುಂಬಿದ ಬಂಧು !
ಸಕಲ ಜೀವಾತ್ಮರಿಗೆ ಲೇಸನೆ ಬಯಸುತ
ದಯವೆ ಧರ್ಮದ ಮೂಲವೆಂದಮೃತ ಸಿಂಧು!
ಅವನೆ ಆ ಬಸವನೆ ಆ ವಿಶ್ವಮಾನವನೆ
ಪರರ ಏಳಿಗೆಗಾಗಿ ಕರ್ಪೂರವಾದವನು!
ಕಾಯಕ ಕೈಗಿತ್ತು ಶ್ರೀಗಂಧವಾದವನು ।
ಆತ್ಮದದಧ್ಯಾತ್ಮ ಗುರು ಪರಮ ದಾಸೋಹಿ ।
ಹೆಣ್ಣುಬಾಳಿನ ಕಣ್ಣು ಎಂದು ನಿರ್ಮೋಹಿ ।
ಅವನೆ ಅಂತ್ಯೋದಯದ ಮೊದಲ ಹರಿಕಾರ
ತುಚ್ಛ ಅಸ್ಪೃಶ್ಯತೆಯ ತುಳಿದ ರಣಧೀರ
ಅವನೆ ಮೌಢ್ಯಕೆ ಕೊಡಲಿ ಪೆಟ್ಟು ಕೊಟ್ಟಾತ
ಅವನೆ ಸತ್ಯ ಅಹಿಂಸೆ ಬಿತ್ತಿ ಬೆಳೆದಾತ
ಅವನೆ ವಿಶ್ವಮಾನವ ಪ್ರೇಮಿ ವಿಶ್ವಾತ್ಮ ಬಸವಣ್ಣ
ಬಸವಣ್ಣ ಬಾಳಿ ।
ಅವನೊಲವು ಬೆಳಗಲಿ

ನರ್ತಕಿಯರು ; ಜಯವಾಗಲಿ ಜಯವಾಗಲಿ ಬಸವಣ್ಣನ ನಾಡಿಗೆ
ಜಯವಾಗಲಿ ಜಯವಾಗಲಿ ಬಸವನ ನುಡಿಜೇನಿಗೆ

* * * * *